ಗೆದ್ದಳು ಕಾವೇರಿ

ಹವಿಗನ್ನಡ ಕಾದಂಬರಿ



ಡಾ॥ ಸಬಿತಾ ಮರಕಿಣಿ

ಗೆದ್ದಲು ಕಾವೇರಿ

ಹವಿಗನ್ನಡ ಕಾದಂಬರಿ

ಡಾ॥ ಸಬಿತಾ ಮರಕಿಣಿ

ಪ್ರಕಾಶಕರು

ವಾಸವಿ ಪಬ್ಲಿಕೇಷನ್

238, 1ನೇ ಮಹಡಿ, 2ನೇ ಮುಖ್ಯರಸ್ತೆ, 9ನೇ ಕ್ರಾಸ್,
ಮಾರುತಿನಗರ, ಯಲಹಂಕ, ಬೆಂಗಳೂರು–64

"GEDDALU KAVERI" - Novel in Havigannada
(A dialect of Kannada language) Written and published
by : Dr. Sabitha Marakini

PUBLISHED BY- Vasavi Publication, No.238, 1st floor, 2nd
Main, 9th Cross, Maruti Nagar, Yelahanka, Bangalore-64

ಮೊದಲ ಮುದ್ರಣ	:	2013
ಪುಟಗಳು	:	238
ಬೆಲೆ	:	250.00
ಹಕ್ಕುಗಳು	:	ಲೇಖಕರದು
ಅಕ್ಷರ ಜೋಡಣೆ	:	ಶ್ರೀರಾಮ ಗ್ರಾಫಿಕ್ಸ್
ಬಳಸಿದ ಕಾಗದ	:	ಮ್ಯಾಪ್ಲಿಥೋ 70 ಜಿ.ಎಸ್.ಎಂ.
ಆಕಾರ	:	1/8 ಡೆಮ್ಮಿ
ಮುಖಪುಟ ಚಿತ್ರ	:	ಹರೀಶ್ ಕುಮಾರ್

ಮುದ್ರಣ : ಶ್ರೀರಾಮ ಪ್ರಿಂಟರ್ಸ್ ಮಂಡ್ಯ
9448930173

ಗೆದ್ದಳು ಕಾವೇರಿ

"ಕಾವೇರಕ್ಕ ನಿನಗೊಂದು ಶುದ್ದಿ ಹೇಳ್ಳಿದ್ದು ಹೇಳೇಕೊ" ಪಕ್ಕದ ಮನೆ ಹೇಮಾ ಕೇಳಿದಳು. ಕಾವೇರಿ ಆಗ ತಾನೇ ಎಣ್ಣೆ ಹಚ್ಚಿ ತಲೆ ಬಾಚಿ ಒಪ್ಪವಾಗಿ ಜಡೆ ಹೆಣೆದಿದ್ದಳು. ಇನ್ನೂ ಬಾಚಣಿಗೆಗೆ ಸಿಕ್ಕಿದ ಕೂದಲುಗಳನ್ನು ತೆಗೆದಾಗಿರಲಿಲ್ಲ. ಕರಿನಾಗರದಂತೆ ಮಂಡಿವರೆಗೆ ಅವಳ ಜಡೆ ತೊನೆದಾಡುತ್ತಿತ್ತು. ಅವಳು ಕರಿ ಕೂದಲಿನ ಚೆಲುವೆ, ಅವಳದ್ದು ಬಿಳಿ ಮಿಶ್ರಿತ ಕರಿಬಣ್ಣ. ಗಂಭೀರ ನಡಿಗೆ ಉಡಿಗೆ, ಎಲ್ಲಿ ಹೋದರೂ ಯಾರಿವಳು ಎಂದು ಕೇಳುವ ವ್ಯಕ್ತಿತ್ವ ಎಲ್ಲರೊಡನೆ ಬೆರೆತು ನಲಿದಾಡುವವಳು. ಎಲ್ಲರಿಗೂ ಸಹಾಯ ಹಸ್ತ ನೀಡುವವಳು. ಸ್ವಲ್ಪ ಹಠಮಾರಿ, ತಾನು ನೆನಸಿದ್ದನ್ನೇ ಮಾಡುವವಳು-ಸರಿಯೆಂದು ತೋರಿದ್ದನ್ನು ಮುಲಾಜಿಲ್ಲದೆ ಮಾಡುತ್ತಿದ್ದಳು; ಈಗ ಹೇಮ ಬಂದು ಏನು ಹೇಳುತ್ತಾಳೆ ಎಂದೇ ಅವಳ ಚಿಂತೆ, ಏನೋ ವಿಶೇಷವಿರಬೇಕು. ಇಲ್ಲದಿದ್ದರೆ ಹೇಮ ಇಷ್ಟು ಗಂಭೀರವಾಗಿ ಈ ಅವೇಳೆಯಲ್ಲಿ ಬರುತ್ತಿರಲಿಲ್ಲ. ಹೇಮಾ ಎಂಟು ವರ್ಷದ ಹುಡುಗಿಯಾದರೂ ಕಾವೇರಿಯನ್ನು ತುಂಬಾ ಹಚ್ಚಿಕೊಂಡಿದ್ದಳು. ಪಕ್ಕದ ಮನೆ ಹುಡುಗಿಯಾಗಿರದೆ ಒಡ ಹುಟ್ಟಿದ ತಂಗಿಯಂತಿದ್ದಳು. ಕಾವೇರಿಗೂ ಅವಳೆಂದರೆ ತುಂಬಾ ಪ್ರೀತಿ. ತಾನು ಎಲ್ಲಿ ಹೋಗುವುದಿದ್ದರೂ ಅವಳನ್ನು ಕರೆದುಕೊಂಡು ಹೋಗುತ್ತಿದ್ದಳು.

"ಅಂತ ಶುದ್ದಿ ಎಂತ ಇದ್ದು ಹೇಮಾ"

"ಇಲ್ಲಿ ಬಾ ನಿನ್ನ ಕೆಮಿಲೇ ಹೇಳುತ್ತೆ" ಎಂದು ಹತ್ತಿರ ಬಂದಳು ಹೇಮ ಹಾಗಾದರೆ ಏನೋ ಗಂಭೀರ ವರ್ತಮಾನವೇ ಇರಬೇಕು. ಕಾವೇರಿಗೆ ಸ್ವಲ್ಪ ಆತಂಕವಾಯಿತು.

"ಬೇಗ ಹೇಳು ಹೇಮಾ, ಸತಾಯಿಸೇಂಡು ಕೂರೇಡ"

"ಕಾವೇರಕ್ಕ ನಾಳಂಗೆ ನಿನ್ನ ತಲೆ ಕೂದಲಿನ ಕತ್ತರಿಸಿಬೋಳುಮಾಡುತ್ತವಡಾ"

– ಮೆಲ್ಲನೆ ಕಿವಿಯಲ್ಲಿ ಉಸುರಿದಳು ಹೇಮಾ : ಆರು ಹೇಳಿದ್ದು ನಿನಗೆ?" ಬೆಚ್ಚಿದಳು ಕಾವೇರಿ.

"ಇಂದು ಉದಿಯಪ್ಪಾಗ ಗೇಣಪಜ್ಜನೂದೆ, ಕೇಶಜ್ಜನೂದೆ ಪಿಸಿ ಪಿಸಿ ಮಾತಾಡ್ಕೊಂಡು ಇತ್ತಿದ್ದವು. ಅದರ ಆನು ಕೇಳ್ಸೊಂಡಿದೆ. ಅದಕ್ಕೇ ಆನು ಗಾಬರಿ ಆಗಿ ಇಲ್ಲಿ ಓಡ್ಕೊಂಡು ಬಂದೆ' ಒಂದೇ ಉಸಿರಿನಲ್ಲಿ ಹೇಳಿದಳು ಹೇಮಾ.

"ಅಲ್ಲಿ ಬೇರೆ ಆರೂ ಇತ್ತಿದ್ದವಿಲ್ಲೆಯೋ? ಎಂತಕಡಾ ಎನ್ನ ತಲೆ ಬೋಳು ಸುದು?" ಕಾವೇರಿಗೆ ಕಾತುರವಾಯಿತು.

"ಇತ್ತಿದ್ದವು. ಅಲ್ಲಿ ಎನ್ನಬ್ಬೆ, ನಿನ್ನಬ್ಬೆ, ಶಂಕರಪ್ಪಬ್ಬೆ ಎಲ್ಲ ಇತ್ತಿದ್ದವು– ನಾವೆಲ್ಲಾ ಮೊನ್ನೆ ಕಣ್ಯಾರ ಆಯನಕ್ಕೆ ಹೋಯಿದಿಲ್ಲೆಯೋ ಅಲ್ಲಿ ನೀನು ಸೇವಂತಿಗೆ ಮಾಲೆ ಸೂಡಿದ್ದು, ಕೈಗೆ ಬಳೆ ಹಾಕೊಂಡದು, ಲಾಲ್‌ಗಂಧ ಬೊಟ್ಟು ಹಾಕಿದ್ದು, ರಾಟೆ ತೊಟ್ಳಲ್ಲಿ ಕೂದ್ದು ಹೋಟ್ಲಿಂಗೆ ಹೋಗಿ ಚಾಯ ಬಿಸ್ಕೊಟು ಅಂಬಡೆ ತಿಂದದು ಎಲ್ಲದರ ವರದಿಯ ನಿನ್ನ ಅಪ್ಪಂಗೆ ಶಂಭಜ್ಜ ಬಂದು ಹೇಳಿದಡೊ ಅದಕ್ಕೆ.

ಅಷ್ಟೇ ಅಲ್ಲ ಕಾವೇರಕ್ಕ. ಈ ಮುಂಡೆಯ ಹಾಂಗೇ ಬಿಟ್ಟರೆ ನಿನ್ನ ಮಗಳು ಊರ ಸೂಳೆ ಅಪ್ಪದು ಗ್ಯಾರಂಟಿ ನೋಡಿಗೊ ಕೈ ಮೀರುವ ಮದಲೆ ಹೇಳಿದ್ದು ಮಾಡು. ಅದರ ತಲೆ ಬೋಳ್ಸಿ ಕೆಂಪು ವಸ್ತ್ರ ಸುತ್ತುಸು–ರಾಮಾಯಣವನ್ನೋ, ಮಹಾಭಾರತವನ್ನೋ ಪಾರಾಯಣ ಮಾಡ್ಸು, ಎರಡು ಹೊತ್ತು ತುಳಸಿಗೆ ನೀರು ಹಾಕಿ ಜಪತಪ ಮಾಡ್ಸು ಹೇಳಿ ಬುದ್ಧಿವಾದ ಹೇಳಿದವು "ಅದು ಹೇಳಿದ್ದು ಕೇಳುತ್ತಿಲ್ಲೆ, ಎಂಗೊ ಎಂತ ಮಾಡೇಕು! ಅದರ ನೋಡುವಾಗ ಹೊಟ್ಟೆ ಉರಿತ್ತು. ಇಷ್ಟು ಸಣ್ಣ ಪ್ರಾಯಲ್ಲೇ ಅದರ ಕರಿಮಣಿ ಭಾಗ್ಯ ಹೋತನ್ನೆ ಹೇಳಿ ಎಂತ ಮಾಡುದು" ಹೆತ್ತ ಕರುಳು ಕನಿಕರ ತೋರ್ಸೆ ಕಾವುತ್ತು ಹೇಳಿದವು ನಿನ್ನ ಅಬ್ಬೆ, ಅಪ್ಪ ಅದಕ್ಕೆ ಶಂಭಜ್ಜ.

"ನಿಂಗಳ ಕನಿಕರಕ್ಕೆ ಮಣ್ಣು ಹಾಕಿತ್ತು. ಗೆಂಡ ಸತ್ತು ಶಪುಂಡಿ ಕಳೆಕಾತೇ ಅದರ ತಲೆ ಬೋಳ್ಸಿ, ಕಾಜು ಒಡೆದಿದ್ದರೆ ನಿಂಗೊಗೆ ಈ ತಾಪತ್ರಯ ಬತ್ತಿತ್ತಿಲ್ಲೆ. ನಮ್ಮ ಸಮಾಜದಲ್ಲಿ ಒಂದು ಕ್ರಮ ರೀತಿ ರಿವಾಜು ಹೇಳಿ ಇದ್ದು. ಅದರ ಉಲ್ಲಂಘಿಸಿದರೆ ಎಂತ ಶಿಕ್ಷೆ ಹೇಳಿ ನಿಂಗೊಗೆ ಗೊಂತಿದ್ದು ನಾಳಂಗೆ ಮನೆಗೆ ಜಾತಿ ಬಹಿಷ್ಕಾರ ಹಾಕುದು–ನೋಡಿಗೊಳ್ಳಿ. ಹೀಂಗೇ ಸಲಿಗೆ ಬಿಟ್ಟರೆ, ಇದು ಆ ರೊಟ್ಟಿಂಗಾದರೂ ಹೇಳದ್ದೆ ಓಡುಗು, ಬಸರು ಬಂದರೆ ನಿಂಗಳೇ ಜವಾಬ್ದಾರಿ. ಆನು ಹೇಳುವಷ್ಟು ಹೇಳಿದ್ದೆ ಮತ್ತೆ ನಿಂಗಳ ಮರ್ಜಿ ಹೇಳಿ ಶಂಭಜ್ಜ ಶಾಲು

ಕುಡುಗಿ ಹೆಗಲಿಂಗೆ ಹಾಕಿ ಚೆರ್ಪು ಮುಚ್ಚೊಂಡು ದರಬರಾ ನಡದ ಇದರ ಕೇಳಿ ನಿನ್ನ ಅಬ್ಬೆ ಗೋಳೋ ಹೇಳಿ ಕೂಗಿತ್ತು "ಎಂತ ಮಾಡುದಪ್ಪಾ ಇದಕ್ಕೆ" ಹೇಳಿ ಕಣ್ಣೀರು 'ಬರಸಿತ್ತು' "ಮಾಡುದು ಎಂತರ? ಸಮಾಜ ಬಿಟ್ಟು ನಮ್ಮ ಹಾಂಗಿದ್ದ ಬಡವರಿಂಗೆ ಬದುಕ್ಕಲೆ ಎಡಿಗೊ–ಇನ್ನೂ ಮೂರು ಕೂಸುಗೊ ಇಲ್ಲೆಯೊ? ಅವಕ್ಕೂ ಗತಿ ಕಾಣ್ಸೇಡದೊ. ಮದಲೆಯಾ ಎಷ್ಟೊ ಕೂಸುಕೋಕ್ಕೆ ಗೆಂಡ ಸತ್ತಿತು – ಅವು ಇಂದಿಂಗೂ ತಲೆ ಬೋಳ್ಸಿ ಕೆಂಪು ವಸ್ತ್ರ ಸುತ್ತೊಂಡು ಇದ್ದವು. ಮತ್ತೆ ಇದಕ್ಕಿಂತ ವಿಶೇಷ! ನಾವೂ ಹಾಂಗೇ ಮಾಡೇಕಷ್ಟೆ!"

"ಹೇಂಗಪ್ಪಾ, ಅದರ ಹಿಡಿವದು! ತಲೆ ಬೋಳ್ಸುದು" 'ಅದೆಲ್ಲಾ ಎಂಗೊ ಮಾಡುವೆಯೊ. ನಾಳಂಗೆ ಉದಿಯಪ್ಪಗಳೇ ಕಣ್ಣ ಕೆಲಸಯ ಬಪ್ಪಲೆ ಹೇಳಿ – ನಾಲ್ಕು ಜೆನ ರಟ್ಟೆ ಹಿಡಿದು ಅದರ ಕೂರ್ಸಿದರಾತು. ಕಣ್ಣ ತಲೆ ಬೋಳ್ಸಿಯೇ ಬಿಡುಗು. ಆತಂಬಗ ಹಾಂಗೇ ಮಾಡುವೊ. ಕಣ್ಣಂಗೆ ನಾಳಂಗೆ ಉದಿಯಪ್ಪಗಳೇ ಇಲ್ಲಿಗೆ ಕಳ್ಸುವ ವ್ಯವಸ್ಥೆ ನಿಂಗಳೇ ಮಾಡಿಕ್ಕಿ ಆತೊ' ಹೇಳಿ ಕಾವೇರಿಯ ತಂದೆ ಅಪ್ಪಣ್ಣಭಟ್ಟ – ಮಾತುಕತೆ ಮುಗಿಸಿದರು.

ಇದನ್ನೆಲ್ಲಾ ಕೇಳಿದ ಕಾವೇರಿಯ ಹೊಟ್ಟೆಯಲ್ಲಿ ಬೆಂಕಿ ಬಿದ್ದ ಅನುಭವ ವಾಯಿತು. ಗಂಡ ಎನ್ನುವ ರಾಯಭಟ್ಟ – ತನ್ನ ಮದುವೆಯಾಗಿ ನಾಲ್ಕನೇ ದಿವಸಕ್ಕೆ ತೋಟದ ಕೆರೆಗೆ ಮುಖ ತೊಳೆಯಲು ಹೋಗಿ ಕಾಲು ಜಾರಿಬಿದ್ದು ಪ್ರಾಣ ಬಿಟ್ಟಿದ್ದ; ಅಂದಿನಿಂದ ತಾನು ವಿಧವೆಯಾಗಿಯೇ ಬಾಳಿದ್ದೇನೆ. ಇಂದಿಗೆ ನಾಲ್ಕು ವರ್ಷವಾಯಿತು. ತನಗೀಗ ಹದಿನೆಂಟರ ಹರಯ, ಅವಳ ಓರಗೆಯ ಹುಡುಗಿಯರೆಲ್ಲಾ ಮದುವೆಯಾಗಿ, ಒಂದೊಂದು ಮಗುವನ್ನು ಬಗಲಿನಲ್ಲಿ ಏರಿಸಿಕೊಂಡು ಬರುತ್ತಿದ್ದಾರೆ. ತಾನು ಮಾತ್ರ ಬಂಜೆಯಾಗಿ ಬಾಳು ನಡೆಸುತ್ತಿದ್ದಾಳೆ. ಒಂದು ಮಂಗಳ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳುವಂತಿಲ್ಲ– ಹೊಸ್ತಿಲ ಪೂಜೆ, ದೇವರ ಪೂಜೆ – ಯಾವುದೂ ತನ್ನ ಪಾಲಿಗೆ ಇಲ್ಲ. ಆದರೂ ಎಲ್ಲವನ್ನೂ ಸಹಿಸುತ್ತಿದ್ದಳು ಕಾವೇರಿ; ಅವಳೀಗ ಅವಳ 'ಮದುವೆ' ನೆನಪಾಯಿತು.

ಕಳಿಂಗಳ ರಾಮ ಭಟ್ಟರು ಅರುವತ್ತೆಂಟು ವರ್ಷದವರು, ನಾಲ್ಕು ಮಕ್ಕಳ ತಂದೆ, ದೊಡ್ಡ ಮಗ ಶಂಕರನಿಗೆ 19ವರ್ಷ, ಇನ್ನೊಬ್ಬ ಮಗ ಗೋವಿಂದನಿಗೆ ಹದಿನಾರು, – ಮತ್ತೆ ಮಗಳಂದಿರಾದ ಶಂಕರಿ ಪಾರ್ವತಿಯರನ್ನು ಮದುವೆ ಮಾಡಿಕೊಟ್ಟಾಗಿತ್ತು. ಅವರಿಗೆ ಇಬ್ಬಿಬ್ಬರು ಮಕ್ಕಳು, ರಾಮ ಭಟ್ಟರು ಒಬ್ಬ ಶ್ರೀಮಂತ ಕುಳ. ಇಪ್ಪತ್ತು ಖಂಡಿ ಅಡಿಕೆ, –ನೂರು ಮುಡಿ ಅಕ್ಕಿ, ಹುಟ್ಟಾವಳಿ ಮನೆಯಲ್ಲಿ ಆಳುಕಾಳು ಇದ್ದು – ಶ್ರೀಮಂತಿಕೆ ಎದ್ದು ಕಾಣುತ್ತಿತ್ತು.

ಅಪ್ಪಣ್ಣ ಭಟ್ಟರಿಗೋ ಕಿತ್ತು ತಿನ್ನುವ ಬಡತನ; ಜೊತೆಗೆ ನಾಲ್ಕು ಹೆಣ್ಣು ಮಕ್ಕಳು; ವರ್ಷದಲ್ಲಿ 10 ಮಣ ಅಡಿಕೆ ಬಂದರೆ ಬಂತು. ಇಲ್ಲದಿದ್ದರೆ ಇಲ್ಲ. ಇಷ್ಟರೊಳಗೆ ಅವರ ಸಂಸಾರ ಸಾಗಬೇಕು. ಅಲ್ಲಿ ಇಲ್ಲಿ ಮದುವೆ, ಅನುಪತ್ಯಗಳಿಗೆ - ಮೇಲಡಿಗೆಗೆ ಹೋದರೆ ಅಷ್ಟಿಷ್ಟು ಬರುತ್ತಿತ್ತು. ಹಾಗೇ ಊರ ಜಂಬರ, ದೇವಸ್ಥಾನ, ಮಠಗಳಲ್ಲಿ ಊಟ ಗೀಟ ಇದ್ದರೆ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಹೋಗಿ ಹೊಟ್ಟೆ ತುಂಬ ಉಂಡು ಬರಬೇಕು. ಇಲ್ಲದಿದ್ದರೆ ದಿನಕ್ಕೊಂದು ಊಟ ಉಂಡು ಒಂದಿಷ್ಟು ತೆಳಿ ಕುಡಿದು ಮನೆಯಲ್ಲಿ ಬಿದ್ದಿರಬೇಕು. ಇಂಥಾ ಸ್ಥಿತಿಯಲ್ಲಿದ್ದ ಅಪ್ಪಣ್ಣನ ಮೊದಲ ಮಗಳೇ ಕಾವೇರಿ. ಅವಳು ಹದಿನಾಲ್ಕನೇ ವಯಸ್ಸಿಗೇ ಮೈ ನೆರೆದು ಕೂತಳು, ಮೈಕೈ ತುಂಬಿಕೊಂಡು ಊರವರ ಕಣ್ಣಿಗೆ ಕಸವಾಗಿ ನಿಂತಳು.

"ಈ ಅಪ್ಪಣ್ಣಂಗೆ ತಲೆ ಇದ್ದೊ - ಮಗಳು ನೆರೆಕಾರೆ ಮದಲೇ ಅದರ ಮದುವೆ ಮಾಡಿ ಕೊಡೇಡದೋ' ಎಂದು ಗುಸು ಗುಸು ಸುರುವಾಯಿತು ಊರಿನಲ್ಲಿ.

"ಅಪ್ಪ - ಎಂತ ಇದ್ದು ಹೇಳಿ ಅದರ ಮದುವೆ ಮಾಡುದು? ಅವನ ಮಗಳ ಹುಡುಕ್ಕೊಂಡು ಆರುಬಕ್ಕು!"

'ಎಂತ ಇಲ್ಲದ್ದರೂ ನಾಲ್ಕು ಮನೆ ಬೇಡಿಯಾದರೂ ಕೂಸಿನ ಮದುವೆ ಮಾಡಿಕೊಡೆಕಾತು. ಇನ್ನು ಅದರ ದಾಂಟುಸಲೆ ಕಷ್ಟ ಇದ್ದು.'

ಆ ಕಾಲದಲ್ಲಿ ಹುಡುಗಿಯರನ್ನು ಮೈ ನೆರೆಯುವ ಮೊದಲೇ ಮದುವೆ ಮಾಡಿಕೊಡುವ ಪದ್ಧತಿ ಇತ್ತು. ಅದಕ್ಕಾಗಿ ಮೇಲಿನ ಇಷ್ಟೆಲ್ಲಾ ಮಾತುಗಳು. ಆದರೆ ಅಪ್ಪಣ್ಣ ಭಟ್ಟನಂತಹ ನಟ್ಟ ದರಿದ್ರನನ್ನು ಯಾರು ಕೇಳಬೇಕು? ಯಾರಿಗೆ ಮೊರೆ ಇಡಬೇಕು? ಆಗಲೇ ಅವರ ಮನೆಗೆ-ಭಾಗೀರತಿಯಂತೆ ಒಲಿದು ಬಂದವರು ಕಳಿಂಗಳ ರಾಮಭಟ್ಟರು.

ರಾಮಭಟ್ಟರ ಹೆಂಡತಿ ಸರಸಮ್ಮ - ಇದ್ದಕ್ಕಿದ್ದಂತೆ ವಾಂತಿ ಭೇದಿಯಾಗಿ ಒಂದೇ ದಿವಸಕ್ಕೆ ತೀರಿಕೊಂಡಳು. ಅತ್ತು ಕರೆದು ಮಾಡಿದ ಮಕ್ಕಳು, ಶವ ಸಂಸ್ಕಾರವನ್ನೂ ಮಾಡಿದರು. ಹೆಣ್ಣು ಮಕ್ಕಳು 'ಅಬ್ಬೆ ಎಂಗಳ ಬಿಟ್ಟಿಕ್ಕಿ ಹೋದೆಯೋ? ಎಂಗೊಗಿನ್ನು ಅಪ್ಪನ ಮನೆ ಬಾಗಿಲು ಮುಚ್ಚಿತ್ತು' ಹೇಳಿ ಬಿಕ್ಕಿ ಬಿಕ್ಕಿ ಅತ್ತರು.

ಊರಗಣ್ಯರೆಲ್ಲಾ ಸೇರಿ ರಾಮಭಟ್ಟರಿಗೆ ಒಂದು ಸಲಹೆ ಕೊಟ್ಟರು "ರಾಮಣ್ಣ, ಸರಸಕ್ಕ ಹೋತು ಹೇಳಿ ನಿಂಗೊ ಕಂಗಾಲಾಗೇಡಿ. ನಿನ್ನ ಮನೆ ನಡೆಶಲೆ ಒಂದು ಹೆಣ್ಣು ಜೀವ ಹೇಳಿ ಬೇಕು - ಮಕ್ಕೊಗೆ (ಮಾಣ್ಯಂಗೋಕ್ಕೆ) ಮದುವೆ ಮಾಡ್ಸಲೆ ಆವಿನ್ನೂ ಸಣ್ಣವು. ಹಾಂಗಾಗಿ ಶವುಂಡಿ ಮರುದಿನವೇ ನೀನು ಇನ್ನೊಂದು ಮದುವೆ ಮಾಡಿಗೋ. ನಿನಗೆ ದುಃಖ ಮರಗು. ಸಂಸಾರವೂ ನಿಂಗು"

"ಎನಗೆ ಈ ಪ್ರಾಯಲ್ಲಿ ಆರು ಕೂಸಿನ ಕೊಡುಗು?"

"ಏಕೆ ಕೊಡವು? ನೀನೆಂತ ಕುರುಡನೋ, ಕುಂಟನೋ? ನಿನ್ನ ಮೈಲಿ ಇನ್ನೂ ತ್ರಾಣ ಇದ್ದು - ಸುಟ್ಟು ತಿಂಬಷ್ಟು ಆಸ್ತಿ ಬದುಕ್ಕು ಇದ್ದು - ನೀನು 'ಹೂಂ' ಹೇಳು - ಕೂಸಿನ ಹುಡುಕ್ಕಿ ಎಂಗೊ ಕೊಡುವೆಯೋ ಎಲ್ಲಾದರೂ ಬಡವರ ಮನೇಂದ ಹುಡುಕ್ಕಿದರೆ ಆತು" ಹೇಳಿದವು.

'ನಿಂಗೊ ಹೇಳುದು ಸರಿ, - ಎನಗೆ 68 ವರ್ಷ ಆಯಿದು ಹೇಳುದರ ಮರೆಮಾಚೇಡಿ. ಎಂಥಾ ಬಡವರ ಮನೆಯ ಕೂಸಾದರೂ ಅಕ್ಕು ಆನೇ ಕರ್ಚಿ ಹಾಕಿ, ಒಡವೆ, ಒಸ್ತ್ರ ಕೊಟ್ಟು ಧಾರೆ ಎರಶಿಯೊಂಬೆ ನಿಂಗೊ ಕೂಸಿನ ಹುಡುಕ್ಕಿ'

"ಅಲ್ಲಿ ಇಲ್ಲಿ ಹುಡುಕ್ಕೋದು ಎಂತಕೆ? ನಮ್ಮ ಅಪ್ಪಣ್ಣನ ಮಗಳು ಕಾವೇರಿಯೇ ಇಲ್ಲೆಯೊ? ಅದಕ್ಕೀಕ ಹದಿನಾಲ್ಕು ವರ್ಷ - ಮೈ ನೆರೆದೇ ಎರಡು ವರ್ಷ ಆತು. ಅದರ ದಾಂಟುಸಲೆ ಅವ ಪರದಾಡುತ್ತ. ನಿನಗೆ ಹೇಳಿರೆ ಖಂಡಿತಾ ಕೊಡುಗು" ಹೇಳಿದ ಗೇಣಪ್ಪ-

"ನಿಂಗೊ ವಿಚಾರ್ಸಿಗೊಂಡು ಬನ್ನಿ"

"ವಿಚಾರ್ಸಲೆ ಎಂತದೂ ಇಲ್ಲೆ. ಅವ ದಮ್ಮಯ್ಯ ಹೇಳಿ ಕೊಡುಗು- ಇಲ್ಲದ್ದರೆ ಅದರ ಬಳ್ಳಿ ಕಟ್ಟಿ ಬಾವಿಗೇ ಹಾಕೇಕಷ್ಟ ಅವ. ಮೈನೆರೆದ ಕೂಸುಗಳ ಆರೂ ಮದುವೆ ಆವುತ್ತವಿಲ್ಲೆ"

"ಅವ ಒಪ್ಪಿದರೆ ಆನು ಖಂಡಿತಾ ಮದುವೆ ಆವುತ್ತೆ" ಹೇಳಿದ ರಾಮಭಟ್ಟ.

ಅಲ್ಲಿಂದ ಸೀದಾ ಗೇಣಪ್ಪ ಹೋದದ್ದು ಅಪ್ಪಣ್ಣಭಟ್ಟನ ಮನೆಗೆ, ಅಂದು ಅಪ್ಪಣ್ಣಭಟ್ಟ ಮನೆಯಲೇ ಇದ್ದ.

'ಎಂತ ಗಣಪತಿ ಇಲ್ಲಿಗೆ ಬಂದದು' ಹೇಳಿ ವಿಚಾರ್ಸಿದ ಅಪ್ಪಣ್ಣ.

"ಹಾಗೆಂತದೂ ಇಲ್ಲೆ ಮಾವ. ಒಂದಾರಿ ನಿನ್ನ ಕಂಡಿಕ್ಕಿ ಹೋವುತ್ತೆ ಹೇಳಿ ಬಂದೆ"

"ಆಸರಿಂಗೆ ಬೇಕೋ?"

"ಒಂದಿಷ್ಟು ನೀರು ಕೊಡು. ಆನೀಗ ಕಳಿಂಗಳಂದ ಬಂದುದು. ಅಲ್ಲಿ ರಾಮಜ್ಜನ (ಇವನಿಗೆ ಅಜ್ಜ ಆಗಬೇಕು-ಸಂಬಂಧದಲ್ಲಿ) ಮನೇಂದ ಬಂದುದು.

ಅವನ ಹೆಂಡತಿ ಮನ್ನೆ ಸತ್ತತ್ತು - ಇಂದು ಬೂದಿ ಕೂಡಿಯಲಾಆತು"

"ಎಂತಾತು ಅದಕ್ಕೆ? ಒಳ್ಳೇ ಗಟ್ಟಿ ಮುಟ್ಟು ಇತ್ತನ್ನೆ" ಆಶ್ಚರ್ಯವಾಯಿತು. ಅಪ್ಪಣ್ಣನಿಗೆ

"ಆದೆಂತದೋ ಏಕಾ ಏಕಿ ವಾಂತಿ ಭೇದಿ ಆಗಿ ಜೀವ ಬಿಟ್ಟತ್ತು"- ಡಾಕ್ಟ್ರ ಮದ್ದು, ಪಂಡಿತರ ಕಷಾಯ ವಿಭೂತಿ ಒಂದೂ ನಾಂಟಿದಿಲ್ಲೆ -

ಅದೆಲ್ಲಾ ಹೋಗಲಿ ಆನು ನಿನ್ನ ಹತ್ರಂಗೆ ಒಂದು ವಿಚಾರ ಕೇಳ್ಳೆ ಬಂದುದು ಪೀಠಿಕೆ ಹಾಕಿದ ಗಣಪ.

"ಎಂತದು ಹೇಳು?"

"ಈಗ ರಾಮಜ್ಜನ ಮನೇಲಿ ಹೆಣ್ಣು ಸಂತಾನ ಇಲ್ಲೆ - ಇದ್ದ ಎರಡು ಕೂಸುಗಳನ್ನು ಕೊಟ್ಟಾಯಿದು. ಮಾಣ್ಯಂಗೂ ಇನ್ನೂ ಕಲಿತ್ತವು. ಸಣ್ಣವು ಅದಕ್ಕೆ ಅವಂಗೆ ಒಂದು ಮರು ಮದುವೆಗೆ ಕೂಸಿನ ಹುಡುಕ್ಕೊಂಡು ಇದ್ದ. ಅಪ್ಪಪ್ಪಗ ನಿನ್ನ ಮಗಳು ಕಾವೇರಿಯ ನೆಂಪಾತು. ವಿಚಾರ್ಸೊಂಡು ಹೋಪೊ ಹೇಳಿ ಬಂದದು ಆನು" ಸಂಕ್ಷಿಪ್ತವಾಗಿ ತಿಳಿಸಿದ ಗಣಪ.

"ಎನ್ನ ಹಾಂಗಿದ್ದ ನಟ್ಟ ದರಿದ್ರನ ಮಗಳ ಮದುವೆ ಅಕ್ಕೊ ಅವ? ಧಾರೆ ಎರದು ಕೊಡುವ ತ್ರಾಣವೂ ಎನ್ನಲ್ಲಿ ಇಲ್ಲೆ" ತನ್ನ ಅಸಹಾಯಕತೆಯನ್ನು ತೋಡಿಕೊಂಡ ಅಪ್ಪಣ್ಣ.

"ನೀನು ಅದರ ಚಿಂತೆ ಮಾಡೇಡ ಮಾವ ಅವನೇ ಒಡವೆ ವಸ್ತ್ರ ಹಾಕಿ ನಿನಗೆ ಒಂದು ರೂವಿ ಕರ್ಚಲ್ಲದ್ದ ಹಾಂಗೆ ನೋಡಿಗೊಂಗು ನೀನು 'ಕೂಸಿನ ಧಾರೆ' ಎರಡು ಕೊಡೇಕು ಅಷ್ಟೆ"

"ಎಂಗಳ ಸಂಬಂಧ ಅಕ್ಕು ಹೇಳಿರೆ ಆನು ಕಾವೇರಿಯ ಕೊಡುವೆ ಎನ್ನ ಅಭ್ಯಂತರ ಇಲ್ಲೆ"

"ಇದಕ್ಕೆ ಅತ್ತೆ ಎಂತ ಹೇಳುತ್ತೊ? ಅದರನ್ನೂ ಒಂದು ಮಾತು ಕೇಳಿ ಹೇಳು'

"ಆದರೆಂತರ ಕೇಳುದು? ಅದಕ್ಕೆ ಮಾಣಿ ಹುಡುಕ್ಕುವ ತ್ರಾಣ ಇದ್ದೊ?"

"ಮತ್ತೆ ಕಾವೇರಿ ಒಪ್ಪುತ್ತೊ ಇಲ್ಲೆಯೋ"

"ಅದು ಒಪ್ಪಲೆ ಬಿಡ್ಳೆ ಇಲ್ಲೆ – ಅದರ ಹಿಂದೆ ಇನ್ನೂ ಮೂರು ಕೂಸುಗೊ ಇದ್ದವು – ಇವರೆಲ್ಲಾ ದಾಂಟುಸೇಕಾದರೆ ಎನ್ನ ಅಬ್ಬೆ ಮಲೆ ಹಾಲು ಬಾಯಿಗೆ ಬಕ್ಕು. ನೀನು ಎನ್ನ ಒಪ್ಪಿಗೆ ಇದ್ದು ಹೇಳಿ ರಾಮಣ್ಣಂಗೆ ತಿಳುಶು, – ಮತ್ತೆಲ್ಲಾ ವ್ಯವಸ್ಥೆ ಆನು ಮಾಡುವೆ" ಹೇಳಿ ಮಾತು ಕೊಟ್ಟ ಅಪ್ಪಣ್ಣ ಭಟ್ಟ. 'ಹಾಂಗರೆ ಆನು ಹೋಗಿ ಹೇಳುತ್ತೆ ಅವಂಗೆ–ಮದುವೆ ಏರ್ಪಾಡು ಮಾಡಲಿ ಅಲ್ಲದೊ' ಹೇಳಿ ಗಣಪ ಹೊರಡಲು ಅನುವಾದ "ಹಾಂಗೇ ಮಾಡಲಿ – ಎನಗೆ ಎಲ್ಲಾ ವಿಚಾರಕ್ಕೂ ನೀನು ತಿಳುಶಿಕ್ಕು" ಹೇಳಿ ಅಪ್ಪಣ್ಣನೂ ಅಲ್ಲಿಂದ ಎದ್ದು ಬಿಟ್ಟರು.

ಇನ್ನು ಹೆಂಡತಿ ಶಂಕರಿ, ಮಗಳು ಕಾವೇರಿಯನ್ನು ಒಪ್ಪಿಸಬೇಕು, ಹೆಂಡತಿ ಯನ್ನಾದರೂ ಹೆದರಿಸಬಹುದು, ಆದರೆ ಮೊಂಡು ಕಾವೇರಿಯನ್ನು ಒಪ್ಪಿಸುವುದು ಸ್ವಲ್ಪ ಕಷ್ಟವೇ ಎಂದು ಅಪ್ಪಣ್ಣನಿಗೆ ಗೊತ್ತಿತ್ತು – ಹೇಗಾದರೂ ಕಾವೇರಿಯನ್ನು ದಾಟಿಸಿದರೆ ತನ್ನ ದೊಡ್ಡದೊಂದು ಜವಾಬ್ದಾರಿ ಮುಗಿಯಿತು. ಒಂದು ತಿನ್ನುವ ಬಾಯಿ ಕಡಿಮೆಯಾಯಿತು ಎಂದು ಯೋಚಿಸಿದರು ಅಪ್ಪಣ್ಣಭಟ್ಟರು. ಮನೆಯೊಳಗೆ ಹೋಗಿ ಅಡಿಗೆ ಕೆಲಸದಲ್ಲಿದ್ದ ಮಡದಿ ಶಂಕರಮ್ಮನನ್ನು ಕರೆದರು– "ಅಪ್ಪೊ ನೀನು ಎಲ್ಲಿದ್ದೆ" ಎಂದು ಜೋರಾಗಿ ಕೂಗಿದರು.

'ಎಂತಕಪ್ಪಾ ದನಿಗೇಳಿದ್ದು– ಎನಗಿನ್ನೂ ಅಶನ ಬೇಶಿ ಆಯಿದಿಲ್ಲೆ ಈ ಹಸಿ ಸೌದಿ ಉರುಗಿ ಉರುಗಿ ಸಾಕಾಯಿದು –ಅದರ ಮಧ್ಯಲ್ಲಿ ನಿಂಗಳದ್ದೊಂದು ಕಿರಿ ಕಿರಿ' ಎಂದು ಹೇಳಿಕೊಂಡೇ ಕೈಯಲ್ಲಿ ಹಿಡಿದ ಮಸಿಯನ್ನು ಸೆರಗಿಗೆ ಒರೆಸಿಕೊಂಡು ನೀರಿಳಿಯು ಕೆಂಪು ಕಣ್ಣನ್ನು ತಿಕ್ಕಿಕೊಂಡು ಹೊರಕ್ಕೆ ಬಂದರು.

"ಹೂಂ ಎಂತದು? ಬೇಗ ಹೇಳಿ"

"ನೀನು ರಜಾ ಕೂರು"

'ಕೂಪಲೆಲ್ಲ ಎನಗೆ ಪುರುಸೊತ್ತು ಇಲ್ಲೆ. ಬೇಗ ಹೇಳಿ'

"ಗಡಿಬಿಡಿ ಮಾಡೇಡ ಶಂಕರಿ. ಆನು ಹೇಳುದರು ಕೆಮಿಕೊಟ್ಟು ಕೇಳು. ಅಡಿಗೆ ರಜಾ ನಿಧಾನ ಆದರೂ ತೊಂದರೆ ಇಲ್ಲೆ"

"ಆತು, ಎಂತದಪ್ಪಾ ಅಂತಹಾ ಗಾಢ ವಿಚಾರ? ಕೆಲಸ ಬಿಟ್ಟು ಕೇಳುವಂತದು?" ಕೂತರು ಶಂಕರಮ್ಮ.

"ಇದು ರಜಾ ಗಾಢವಿಚಾರವೇ. ಅದಕ್ಕೇ ನಿನ್ನ ಗಿವಿಗೆಳ್ದಿದ್ದು."

ಇಂದು ಉದಿಯಪ್ಪಗ ಗಣಪ್ಪ ಬಂದದು ನಿನಗೆ ಗೊಂತಿದ್ದನ್ನೆ "ಗೊಂತಿದ್ದು ಆವ ಎಂತದೋ ಪಿಸಿ ಪಿಸಿ ಮಾತಾಡ್ಯೊಂಡು ಇತ್ತಿದ್ದಲ್ಲದೋ?" "ಅದನ್ನೇ ನಿನಗೆ ಹೇಳೇಕು ಹೆಳ್ಳಿ ಮಾಡಿದ್ದು. ಕಳಿಂಗಳ ರಾಮಣ್ಣನ ಹೆಂಡತಿ ಸರಸ್ವತಿ ಸತ್ತು ಇಂದಿಗೆ ಮೂರು ದಿನ ಆತು" "ಅಪ್ಪೊ ಅದಕ್ಕೆಂತ ಆತು? ಒಳ್ಳೆ ಗಟ್ಟಿಮುಟ್ಟಿನ ಜೀವ. ಮನ್ನೆ ಮಾಪಣ್ಣನ ಮಗನ ಮದುವೆಗೆ ಬಂದಿತ್ತು. ಎಲ್ಲೋರನ್ನು ಮಾತಾಡ್ಸಿಗೊಂಡು ಇತ್ತು. ಎಂತಾತಪ್ಪಾ" ಸ್ವಲ್ಪ ಆತಂಕವೇ ಆಯತು ಶಂಕರಮ್ಮನಿಗೆ.

"ಆ ಮದುವೆಯ ಮರದಿನವೇ ಅದಕ್ಕೆ ವಾಂತಿಯೂ ಬೇಧಿಯೂ ಸುರುವಾಗಿ, ಎಷ್ಟು ಮದ್ದು ಮಾಡಿದರೂ ಗುಣ ಆಗದ್ದೆ. ಕಣ್ಣು ಗುಡ್ಡೆ ಮೇಲೆ ಹೋಗಿ, ಸತ್ತತ್ತಾಡ. ಡಾಕ್ಟ್ರುಗಳ ಹತ್ರೆ ಹೇಳಿದರೆ ಅದೆಂತದೋ ಆಪಾರ ವಿಷ ಹೇಳಿದವಾಡ"

"ವಿಷ ಆದರೆ ಎಲ್ಲೋರಿಂಗೂ ಆಗೇಡದೊ? ಆನೂ ಮಕ್ಕಳೂ ಹೋಗಿ ಅಲ್ಲಿ ಉಂಡಿದಿಲ್ಲೆಯೋ"

"ಅಲ್ಲಿ ವಿಷ ಆಗಿರ. ಮನೇಲಿಯೇ ಎಂತಾರೂ ವಿಷ ಮುಟ್ಟಿಕ್ಕು ನವಗೆಂತ ಗೊಂತು? ಆನು ಡಾಕ್ಟ್ರಕ್ಕೊ ಹೇಳಿದ್ದರ ಹೇಳಿದೆ ನಿನಗೆ ಅದಲ್ಲ ವಿಷಯ ಬೇರೇ ಇದ್ದು!"

"ಎಂತದು" ಕುತೂಹಲವಾಯಿತು ಶಂಕರಮ್ಮನಿಗೆ "ರಾಮಣ್ಣಂಗೆ ಈಗ ಇನ್ನೊಂದು ಮದುವೆ ಆಯೇಕಾಡ." ಅದೂ ಶಪುಂಡಿ ಕಳಿವಂದ ಮದಲೆ.

"ಹೇಂ ಆ ಮುದಿಯಂಗೆ ಇನ್ನೊಂದು ಮದುವೆಯೊ? ವರ್ಷ 68 ಆಯಿದು ಮಕ್ಕೊ ಬೆಳೆದು ನಿಂದಿದವು."

"ಅವನ ಮಾಣ್ಯುಂಗೊ ಸಣ್ಣವು. ಮದುವೆ ಅಪ್ಪ ಪ್ರಾಯದವು ಅಲ್ಲ. ಕೂಸುಗಳ ಕೊಟ್ಟಾಯಿದು. ಮಕ್ಕೊ ಇನ್ನು ಕಲಿತ್ತಾ ಇದ್ದವು. ಅದಕ್ಕೆ ಊರವು ಸೇರಿ ರಾಮಣ್ಣಂಗೆ ಎರಡನೇ ಮದುವೆ ಆಗು ಹೇಳಿ ಒತ್ತಾಯ ಮಾಡಿದ್ದವು."

"ಅವಂಗಾರು ಕೂಸು ಕೊಡುಗಪ್ಪಾ"

"ಕೊಡದ್ದೆಂತ ಶಂಕರಿ? ಅವಂಗೆ ಸುಟ್ಟು ತಿಂಬಷ್ಟು ಆಸ್ತಿ ಬದುಕ್ಕು ಇದ್ದು. ಏನಿಲ್ಲೆ ಹೇಳಿರೂ ಇಪ್ಪತ್ತುಖಂಡಿ ಅಡಕ್ಕೆ, 100 ಮುಡಿ ಅಕ್ಕಿ, 10 ಖಂಡಿ ಯಾಲಕ್ಕಿ ಬೆಳೆತ್ತು. ವಯಸ್ಸು ಅರುವತ್ತೆಂಟು ಆದರೂ ಗಟ್ಟಿ ಮುಟ್ಟೇ ಇದ್ದ. ಮನೇಲಿ ಆಳುಕಾಳುಗೊ ಇದ್ದವು. ಇನ್ನೆಂತ ಬೇಕು. ಅದಕ್ಕೇ ಅವಂಗೆ ನಮ್ಮ ಕಾವೇರಿಯ ಕೇಳ್ಯೊಂಡು ಗಣಪ್ಪ ಬಂದದು"

"ನಿಂಗೊ ಎಂತ ಹೇಳಿದ್ದಿ"

"ಅವ ಒಪ್ಪಿದರೆ ಧಾರೆ ಎರದುಕೊಡುತ್ತೆ ಹೇಳಿದ್ದೆ" "ಆರನ್ನೂ ಕೇಳದ್ದೆ ನಿಂಗಳೇ ಮಾತು ಮುಗುಶಿರೆ ಹೇಂಗೆ? ಕಾವೇರಿಗೆ ಈಗ ಹದಿನಾಲ್ಕು ವರ್ಷ - ಅವಂಗೆ ಅದರಪ್ಪು ದೊಡ್ಡ ಪುಳ್ಳಕ್ಕೊ ಇದ್ದವು" ಗಾಬರಿಯಾಯಿತು ಶಂಕರಮ್ಮಂಗೆ.

"ಅಲ್ಲಾ ಶಂಕರಿ, ನೀನೇ ಆಲೋಚನೆ ಮಾಡು. ನಮ್ಮ ಕಾವೇರಿ ಮೈ ನೆರೆದ ಕೂಸು. ಸಾಧಾರಣವು ಅದರ ಮದುವೆ ಅಪ್ಪಲೆ ಒಪ್ಪವು. ಇನ್ನೊಂದೆರಡು ವರ್ಷ ಕಳೆದರೆ ಅದರ ಕೈ ಕಾಲು ಕಟ್ಟಿ ಬೆಳ್ಳಕ್ಕೇ ಬಿಡೇಕು. ನವಗೆ ಬೇರೆ ದಾರಿ ಇಲ್ಲೆ. ಈಗ ಶಾರದೆಗೆ ಹನ್ನೆರಡು ತುಂಬಿತ್ತು. ಇಂದೋ ನಾಳೆಯೋ, ಅದೂ ಮೈನೆರೆದು ಕೂರುಗು. ಅವಕ್ಕೆ ಸರಿಯಾದ ಮಾಣ್ಯಂಗಳ ಹುಡುಕ್ಕುಲೆ ನವಗೆ ಯೋಗ್ಯತೆ ಇದ್ದೊ? ಕೈಗಿದ್ದರೆ ಬಾಯಿಗಿಲ್ಲೆ; ಹೇಳುವ ಸ್ಥಿತಿ ನಮ್ಮದು. ಒಂದು ಕೂಸನ್ನು ಧಾರೆ ಎರದು ಕೊಡುವ ತ್ರಾಣ ನವಗಿಲ್ಲೆ. ಅದಕ್ಕ ಕಾವೇರಿಯ ಕೊಡುತ್ತೆ ಹೇಳಿ ಮಾತು ಕೊಟ್ಟಿದೆ. ಒಂದಾದರೂ ಸುಖಲ್ಲಿ ಇರಲಿ"

"ಸುಖಕ್ಕೆ ಮಣ್ಣು ಹಾಕಿತ್ತು." ಆ ಮುದಿಯನ್ನ ಕಟ್ಟ್ಯೊಂಬಲೆ ಕಾವೇರಿ ಕೇಳೇ ಕನ್ನೆ

"ಅದರ ಕೇಳ್ಳೆ ಇಲ್ಲೆ. ಎತ್ತಿನ ಹೂಡ್ಳೆ ಬತ್ತಿಯೋ ಹೇಳಿ ಕೇಳವ ಕ್ರಮ ಇಲ್ಲೆ. ನೊಗಕ್ಕೆ ಕಟ್ಟಿ ಹೂಡುದೇ. ಹಾಂಗೇ ಕಾವೇರಿಯ ರಾಮಣ್ಣಂಗೆ ಕೊಡುದು ನಿಶ್ಚಯವೇ" ಅದರ ಮಂಕಾಡ್ಸಿ ಒಪ್ಪುಸುವ ಕೆಲಸ ನಿನ್ನದು ಅಪ್ಪಣ್ಣ ಭಟ್ಟ ಮಾತಿಗೆ ಮಂಗಳ ಹಾಡಿ ಹೊರಗೆ ನಡೆದರು.

ಈಗ ಶಂಕರಮ್ಮನ ಸರದಿ, ಕಾವೇರಿಯನ್ನು ಹೇಗಾದರೂ ಮಾಡಿ ಮದುವೆಗೆ ಒಪ್ಪಿಸಬೇಕು. ಹೇಗೆ ಎಂಬುದೇ ಸಮಸ್ಯೆ. ಅವಳು ಸಾಧಾರಣಕ್ಕೆ ಒಪ್ಪುವವಳಲ್ಲ. ತನ್ನ ಹಠವೇ ಹಠ, -ತಾನು ನೆನಸಿದ್ದನ್ನೇ ಮಾಡುವವಳು - ಇಲ್ಲದಿದ್ದರೆ ಇಲ್ಲ. ಹೇಗೂ ಅವಳನ್ನು ತಯಾರು ಮಾಡಬೇಕು. ಇಲ್ಲದಿದ್ದರೆ ಧಾರೆ ಮಂಟಪದಿಂದಲೇ ಓಡಿ ಹೋದರೂ ಹೋದಾಳು.

ಶಂಕರಮ್ಮ ಅಡಿಗೆ ಬೇಗ ಬೇಗ ಮುಗಿಸಿದಳು. ಆಗಲೇ ಕಾವೇರಿಯ ಮನ ಒಲಿಸಲು ಏನೇನು ಕಸರತ್ತು ಮಾಡಬೇಕು ಎಂದು ಆಲೋಚನೆ ಮಾಡುತ್ತಾ ಹೋದಳು. ಯಾವುದಕ್ಕೂ ಊಟ ಒಂದು ಮುಗಿಯಲಿ. ಆಮೇಲೆ ಕಾವೇರಿಯನ್ನು ಮಾತನಾಡಿಸಿದರಾಯಿತು ಎಂದು ಚಿಂತಿಸಿದಳು.

ಮಧ್ಯಾಹ್ನ ಮಕ್ಕಳಿಗೂ ಗಂಡನಿಗೂ ಎಲೆ ಹಾಕಿ, ಅನ್ನ, ಬಾಳೆಕಾಯಿ ಕೊದಿಲು, ನೀರು ಮಜ್ಜಿಗೆ ಬಳಸಿದಳು. ಉಳಿದ ಅನ್ನ, ಸಾರು ತಾನು ಹಾಕಿಕೊಂಡು ಊಟ ಮುಗುಶಿದಳು 'ಕಾವೇರಿ' ಯಾಕೋ ಸರಿಯಾಗಿ ಊಟ ಮಾಡಿದ ಹಾಗೆ ಕಾಣಲಿಲ್ಲ. ಅರ್ಧಕ್ಕರ್ಧ ಅನ್ನ ಎಲೆಯಲ್ಲಿಯೇ ಬಿಟ್ಟು, ಎಲೆ ಎತ್ತಿ ತಿಪ್ಪೆಗುಂಡಿಗೆ ಹಾಕಿದಳು. ಯಾಕೋ ಹಸುವಾಗಿಲ್ಲವೇನೋ ಅಂದ ಅಂದುಕೊಂಡರು ಶಂಕರಮ್ಮ. ಈಗಲೇ ಕಾವೇರಿಯ ಹತ್ತಿರ ಮಾತನಾಡುವುದು ಒಳ್ಳೆಯದು. ಆಮೇಲೆ ಮನೆಗೆ ಅವರೋ ಇವರೋ ಬರುತ್ತಾರೆ. ಹೇಗೂ ಅವಳಿಗೆ ತಿಳುಸಿ ಹೇಳಬೇಕಲ್ಲಾ ಎಂದು ಬೇಗನೇ ಅಡಿಗೆಯಲ್ಲಾ ಮುಚ್ಚಿಟ್ಟು, ಮುಸುರೆ ತೆಗೆದು ಗೋಮಯ ಹಾಕಿ ಎಂಜಲು ಒರಸಿದರು. ಕೈ ಒರಸಿಕೊಂಡು ಕಾವೇರಿ ಇದ್ದ ಕೋಣೆಗೆ ಬಂದರು.

"ಕಾವೇರಿ ಎಂತ ಮಾಡುತ್ತೆ; ಆನು ನಿನ್ನ ಹತ್ತಿರ ಒಂದು ವಿಷಯ ಹೇಳ್ಳಿದ್ದು" ಪೀಠಿಕೆ ಹಾಕಿದರು ಶಂಕರಮ್ಮ.

"ನೀನೂ ಎಂತ ಹೇಳ್ಳೆ ಬಂದದು ಹೇಳಿ ಎನಗೆ ಗೊಂತಿದ್ದು ಅಬ್ಬೆ ನೀನೂ ಅಪ್ಪನೂ ಮಾತಾಡಿದ್ದರ ಆನು ಬಾಗಿಲ ಸಂದಿಂದ ಕೇಳಿದ್ದೆ! ನಿಂಗೊಗೆ ತಲೆ ಸರಿ ಇದ್ದರೆ ಆ ತೊಂಡಗೆ ಎನ್ನ ಕೊಡುವ ಆಲೋಚನೆ ಮಾಡೇಡಿ. ಅವ ಮುದಿಯ – ಈಗಳೇ ನಾಲ್ಕು ಮಕ್ಕೊ ಇದ್ದವು. ಅವನ ಪುಳ್ಳಿ –ಮಗಳ ಮಗಳು ವಾಗ್ದೇವಿ ಎನ್ನ ಕ್ಲಾಸಿಲ್ಲಿಯೇ ಕಲ್ತೊಂಡು ಇದ್ದತ್ತು. ಅವನ ಮಕ್ಕೊಗೆಲ್ಲಾ ಆನು ಕಿರಿಯಬ್ಬೆ ಆವುತ್ತಿಲ್ಲೆ. ಆ ಕೂಸಿಂಗೆ ಆನು ಅಜ್ಜಿಯೂ ಆವುತ್ತಿಲ್ಲೆ"

"ಹಠ ಮಾಡೇಡ ಕಾವೇರಿ, ನಿನಗೆ ಈ ಮನೆಯ ಸ್ಥಿತಿಗತಿ ಗೊಂತಿಲ್ಲದ್ದಷ್ಟು ಹೆಡ್ಡಿ ಅಲ್ಲ ನೀನು. ನಾವು ಒಂದು ದಿನ ಸುಖದ ಕೂಳು ಕಂಡಿದ್ದಿಲ್ಲೆ. ಒಡವೆ ವಸ್ತ್ರ ಕಂಡಿದ್ದಿಲ್ಲೆ. ಹೀಂಗೆ ನರಳಿಯೇ ಇಷ್ಟರವರೆಗೆ ಬದುಕ್ಕು ಸಾಗುಸ್ಯೆಂಡು ಹೋದ್ದು"

"ಹೀಂಗೆ ನರಳಿದರೂ ಅಕ್ಕು ಅಬ್ಬೆ– ಆ ತೊಂಡನ ಕಟ್ಟ್ಯೊಂಡು ಅವನ ಹೆಂಡತ್ತಿ ಹೇಳ್ಸೊಂಡು –ಎನ್ನಂದಲೂ ದೊಡ್ಡ ಮಕ್ಕೊಗೆ ಕಿರಿಯಬ್ಬೆ ಆಗ್ಯೊಂಡು ಬದುಕ್ಕಲೆ ಎನಗೆ ಮನಸ್ಸಿಲ್ಲೆ. ಆರಿಂಗಾದರೂ ಕೂಲಿನಾಲಿ ಮಾಡುವ ಬಡವಂಗಾದರೂ ಎನ್ನ ಕೊಡಿ. ಆನು ಸುಖಲ್ಲಿ ಇಪ್ಪೆ" ಕಾವೇರಿಯ ಕಣ್ಣಿನಲ್ಲಿ ನೀರು ಸುರಿಯಿತು.

"ಕಾವೇರಿ, ನಿನ್ನ ಅವಂಗೆ ಕೊಡೇಕು ಹೇಳಿ ಎಂಗಳೂ ಆಲೋಚನೆ ಮಾಡಿದ್ದಿಲ್ಲೆಯೊ. ಆದರೆ ಸಮಯ ಸಂದರ್ಭ ಹಾಂಗೆ ಬಂತು. ಇಷ್ಟರವರೆಗೆ ನಿನ್ನ ಕೇಳ್ಯೊಂಡು ಆರೂ ಬಯಿಂದ ವಿಲ್ಲೆ – ಈಗಳೇ ನಿನಗೆ ಹದಿನೆಂಟು ದಾಂಟಿತ್ತು. ಮೈನೆರೆದು 5–6 ವರ್ಷ ಕಳುತ್ತು ಎಲ್ಲೋರ ಕಣ್ಣು ಕುತ್ತಲೆ

ಸುರುವಾಯಿದು. ಬಾಯಿಗೆ ಬಂದ ಹಾಂಗೆ ಕೇಳುತ್ತವು. ಅದರ ಕೇಳ್ಯೊಂಡು ಎಂಗೊ ಬದುಕ್ಕೇಡದೊ ನಿನ್ನ ಹಿಂದೆ ಹುಟ್ಟಿದವಕ್ಕೂ ಗತಿ ಕಾಣ್ಬೇಡದೆಂ? ಶಾರದಗೆ ಈಗಳೇ ಹದಿಮೂರು ದಾಂಟಿತ್ತು" – ಇಂದೋ ನಾಳೆಯೋ ಅದೂ ಮೈನೆರೆದು ಕೂರುಗು.

"ಇದಕ್ಕೆಲ್ಲಾ ಆನೇ ಕಾರಣ ಹೇಳುವ ಹಾಂಗೆ ಮಾತಾಡುತ್ತೆ ಅಬ್ಬೆ ನೀನು. ಮಕ್ಕಳ ಹುಟ್ಟೆಕಾರೇ ರಜಾ ಆಲೋಚನೆ ಮಾಡೇಕಾತು" ಕಾವೇರಿ ಬಿಗುವಾಗಿಯೇ ಹೇಳಿದಳು.

"ಹೇಂಗೇ ಮಗಳೇ, – ಅಂಬಾಗ ಈಗಾಣ ಹಾಂಗೆ ಕುಟುಂಬ ನಿಯಂತ್ರಣ ಹೇಳುವ ವಿದ್ಯೆ ಇತ್ತೊ? ದೇವರು ಕೊಟ್ಟಷ್ಟು ಹೆರ್ಲೇ ಬೇಕಾಗಿತ್ತು, ಮದಲೆರಡು ಕೂಸಾದ ಮತ್ತೆ ಮುಂದೊಂದು ಮಾಣಿ ಹುಟ್ಟುಗು ಹೇಳುವ ಆಶೇಲಿ ನಾಲ್ಕು ಆತಾದ. ಎಂಗುಳ ಕರ್ಮಕ್ಕೆ ನಾಲ್ಕು ಕೂಸುಗಳೇ ಆದವು. ಮತ್ತೂ ಹುಟ್ಟುತ್ತಿತ್ತವೋ ಏನೋ? ಆನೂ ಅಪ್ಪನೂ ಬೇರೆ ಬೇರೆ ಮನುಗಲೆ ಸುರು ಮಾಡಿದೆಯೊ"

– ಕಾವೇರಿಗೊ ಅಮ್ಮ ಹೇಳಿದ್ದರಲ್ಲಿ ಸತ್ಯವಿದೆ ಅನ್ನಿಸಿತ್ತು – ಅವರ ಅಸಹಾಯ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಸ್ವಲ್ಪ ಶಾಂತವಾದಳು.

"ಅಬ್ಬೆ ಈಗ ಆನು ಎಂತ ಮಾಡೇಕು ಹೆಳ್ಳಿ ನಿಂಗಳ ಅಭಿಪ್ರಾಯ" ನೇರವಾಗಿ ಕೇಳಿದಳು ಕಾವೇರಿ.

"ನೀನೇ ಆಲೋಚನೆ ಮಾಡು ಕಾವೇರಿ – ನೀನು ಒಂದಾರಿ ದಾಂಟಿದರೆ ಎಂಗಳ ತಲೆಂದ ಒಂದು ದೊಡ್ಡ ಭಾರ ಇಳುದ ಹಾಂಗೆ. ಮುಂದೆ ಶಾರದೆಯ ಬೇಗನೇ ದಾಂಟುಸಲಕ್ಕು, ಉಳುದವಕ್ಕೂ ಮದುವೆ ಅಕ್ಕು. ರಾಮಣ್ಣ ಶ್ರೀಮಂತ ಆದ ಕಾರಣ ಎಂಗೊಗೂ ರಜಾ ನೆರಳು ಸಿಕ್ಕಗು 'ಅಶ್ವತ್ಥ ಮರ'ದ ಅಡಿ ನೆರಳಿದ್ದ ಹಾಂಗೆ. ನಿನ್ನ ಕೂದಲು ಕೊಂಕದ್ದ ಹಾಂಗೆ ನೋಡ್ಯೊಂಗು. ಮನುಷ್ಯಂಗೆ ಸ್ವಭಾವ ಒಳ್ಳೆದು. ಗರ್ವ ಇಲ್ಲೆ. 'ಪಾಪ'ದವರನ್ನೂ ಮಾತಾಡಸುತ್ತ. ಅವಕ್ಕೆ ತನ್ನಿಂದಾದ ಸಹಾಯ ಮಾಡುತ್ತ. 'ದೇಹಿ' ಹೇಳಿ ಬಂದವರ ಬರಿ ಕೈಲಿ ಕಳುಸ. ಈ ವಿಷಯಲ್ಲಿ ನಿನ್ನ ಯೋಗ್ಯತೆಗೆ ಒಳ್ಳೆದೇ ಹೇಳೇಕು" ಶಂಕರಮ್ಮ ಸರಾಗವಾಗಿ ಹೇಳಿದರು.

"ಅದೆಲ್ಲಾ ಅಪ್ಪು ಅಬ್ಬೆ – ಆ ಮುದಿಯನ ಹೆಂಡತಿ ಹೆಳ್ಳಿ ಆನು ಬದುಕೇಡದೊ? ಎನ್ನಂದಲೂ ದೊಡ್ಡದ ಅವನ ಮಕ್ಕೊಗೆ ಆನು 'ಕಿರಿಯಬ್ಬೆ' ಆಗೇಡದೊ?"

"ನಿನ್ನ ಹಣೇಲಿ ಬರದಿದ್ದರೆ ನಿನಗೂ ಎರಡೂ ಪಿಂಡಂಗೊ ಹುಟ್ಟುಗು – ಎಷ್ಟೋ ಕಡೆ ಮುದುಕಂಗೋಕ್ಕೊ ಮಕ್ಕೊ ಆಯಿದವು – ಮಕ್ಕೊ ಆಗದ್ದ ಪ್ರಾಯಲ್ಲ–ಅವಂದು;"

"ಹೂಂ, ಆ ಮುದುಕ್ಕನ ಕಟ್ಯೊಂಡು ಎನಗೆ ಮಕ್ಕೊ ಅಪ್ಪದೂ ಬೇಡ"– ಮದುವೆಯೂ ಬೇಡ ಕಾವೇರಿ ಹೊರಡಲು ಅನುವಾದಳು.

"ರಜಾ ನಿಲ್ಲು ಕಾವೇರಿ – ನಿನ್ನ ಹಠ ಬಿಡು. ನಿನ್ನ ಅಪ್ಪ ಮಾತು ಕೊಟ್ಟಿದ್ದವು. ಅದರ ತಪ್ಪಲೆ ಸಾಧ್ಯ ಇಲ್ಲೆ"

"ಆರ ಕೇಳಿ ಮಾತು ಕೊಟ್ಟದು? ಒಂದು ಮಾತು ಎನ್ನ ಕೇಳ್ಳೆ ಆವುತ್ತಿಲ್ಲೆಯೋ? ಈಗ ಬಂದದರ ಅನುಭವಿಸಲಿ ಎನಗೆ ಈ ಮದುವೆ ಬೇಡ ಹೇಳಿ ಅಪ್ಪಂಗೆ ಹೇಳಿಕ್ಕು"

"ಈಗ ಆನೆಂತ ಮಾಡೇಕು ಕಾವೇರಿ? ಒಂದು ದಿಕ್ಕಿಲ್ಲಿ ನಿನ್ನ ಅಪ್ಪ– ಒಂದು ಕಡೆಲಿ ನೀನು – ಆನು ಎಡಕತ್ತರಿಲಿ ಸಿಕ್ಕಿದ ಅಡಕ್ಕೆ? ಆನೇ ಏನಾದರೂ ವಿಷ ತೆಕ್ಕೊಂಡು ಪ್ರಾಣ ಬಿಡುತ್ತೆ – ನಿಂಗಳ ಸುಧಾರ್ಸಲೆ ಎನ್ನಂದ ಎಡಿಯ" ಶಂಕರಮ್ಮನ ಕಣ್ಣಲ್ಲಿ ಧಾರಾಕಾರ ನೀರು ಸುರಿಯಿತು. ಇದನ್ನು ನೋಡಿ ಕಾವೇರಿಗೂ ಸಂಕಟವಾಯಿತು; ತನ್ನೊಬ್ಬಳಿಂದ ತಂದೆ ತಾಯಿಗೆ ಇಷ್ಟೊಂದು ತಾಪತ್ರಯವಾಗು ವುದಾದರೆ ಈ ಮದುವೆಗೆ ಒಪ್ಪಿಗೆ ಕೊಟ್ಟರೆ ಆಯಿತು. ತಂಗಿಯರಿಗಾದರೂ ದಾರಿ ಮಾಡಿ ಕೊಟ್ಟ ಹಾಗೆ ಆಗುತ್ತದೆ. –ಇದರಲ್ಲಿ ಅಮ್ಮ ಅಪ್ಪನ ಸ್ವಾರ್ಥ ಸಾಧನೆ ಇದ್ದರೂ ಅಸಹಾಯಕತೆಯ ನೆರಳಿದೆ. ಆಗಲಿ ತಾನು ಈ ಮದುವೆಗೆ ಒಪ್ಪಿಗೆ ಕೊಟ್ಟು ಬಿಡುತ್ತೇನೆ.

"ಅಬ್ಬೆ, ನೀನು ಹೀಂಗೆ ಕೂಗೇಡ. ಕಣ್ಣು ಉದ್ದಿ ಒರೆಸಿಗೊ, – ನಿಂಗೊಗೆ ಬೇಕಾಗಿ, ತಂಗೆಕ್ಕಳ ಹಿತ ಜಾನ್ಸಿ ಆನು ಈ ಮದುವೆಗೆ ಒಪ್ಪುತ್ತೆ. ದೇವರು ಎನ್ನ ಹಣೇಲಿ ಅದೇ ಬರದಿದ್ದರೆ ಆರಿಂದಲೂ ಅಳುಶಲೆಡಿಯ; ನಿಂಗೊ ಮುಂದರಿಸಿ – ಕಾವೇರಿ ಈ ಮದುವೆಗೆ ಒಪ್ಪಿದ್ದು ಹೇಳಿ ಅಪ್ಪಂಗೆ ತಿಳುಶು."

"ಶಂಕರಮ್ಮನ ದುಃಖ ಸ್ವಲ್ಪ ಕಡಿಮೆಯಾಯಿತು. ಕಾವೇರಿ ಹಠಮಾರಿ ಯಾದರೂ ಅಂತಃಕರಣವುಳ್ಳ ಹುಡುಗಿ, ಬಲಿದಾನಕ್ಕೆ ಸಿದ್ಧವಾದ ಪಶುವಿನಂತೆ ಕಂಡಳು ಆ ಮಗಳು ತಾಯಿಗೆ.

"ಮಗಳೇ ನಿನ್ನ ಹೊಂಡಕ್ಕೆ ನೂಂಕಿದ ಪಾಪ ಎಂಗೊಗೆ ನಾಟದ್ದಿರ ಎಂತ ಮಾಡುದು? ಬೇರೆ ಗತಿ ಇಲ್ಲೆನ್ನೆ" ಹೇಳಿ ಒಮ್ಮೆ ಮಗಳನ್ನು ಬಿಗಿದಪ್ಪಿ

ಕಣ್ಣೀರು ಸುರಿಸಿದಳು. ಕಾವೇರಿಯೂ ಅಮ್ಮನ ತೆಕ್ಕೆಯಲ್ಲಿಯೇ ಕಣ್ಣೀರು ಸುರಿಸಿದಳು; ಇಬ್ಬರೂ ಸಾಕಷ್ಟು ಅತ್ತ ಮೇಲೆ ಕಣ್ಣೊರಸಿಕೊಂಡರು.

" ಅಬ್ಬೆ, ಇನ್ನು ಕೂಗೇಡ – ಅಪ್ಪಂಗೆ ಹೇಳಿ ಮುಂದಿನ ವ್ಯವಸ್ಥೆ ಮಾಡಲಿ" ಹೇಳಿ ಕಾವೇರಿ ಅಲ್ಲಿಂದ ಹೊರ ನಡೆದಳು.

ಶಂಕರಮ್ಮನಿಗೆ ಎದೆ ಭಾರ ಇಳಿದಂತಾಗಿ, ಗಂಡನಿಗೆ ವರ್ತಮಾನ ತಿಳಿಸಲು ಹೊರ ನಡೆದರು. ಮನಸ್ಸಿನಲ್ಲಿಯೇ ಕಾವೇರಿಯ ಗುಣವನ್ನು ಕೊಂಡಾಡಿದರು.

ಅಪ್ಪಣ್ಣಭಟ್ಟರು ಮರುದಿವಸವೇ ಗಣಪ್ಪನಿಗೆ ವರ್ತಮಾನ ಮುಟ್ಟಿಸಿದರು. ಅಲ್ಲಿಂದ ಸಮಾಚಾರ ರಾಮಭಟ್ಟರಿಗೂ ಮುಟ್ಟಿತು. ಅವರು ವಿಳಂಬ ಮಾಡಲಿಲ್ಲ. ಶಪುಂಡಿಯ ಮರುದಿನವೇ ಲಗ್ನ ಎಂದು ನಿಶ್ಚಯಿಸಿದರು. ಹೇಗೂ ಬೊಜ್ಜಕ್ಕೆ ಬಂದ ಮಕ್ಕಳು ಮರಿಮಕ್ಕಳು ಮನೆಯಲ್ಲಿಯೇ ಇದ್ದಾರೆ. ನೆರೆಕೆರೆಯ ಹತ್ತಾರು ಮಂದಿಯನ್ನು ಕರೆದರಾಯಿತು. ಒಟ್ಟು ಐವತ್ತು ಅರವತ್ತು ಜನರ ಸಮ್ಮುಖದಲ್ಲಿ ಧಾರೆ ಎರಸಿಕೊಂಡರಾಯಿತು ಎಂದು ನಿಶ್ಚೈಸಿದರು. ಆ ಪ್ರಯುಕ್ತ ಕೇಶು ಆಚಾರಿಯನ್ನು ಮನೆಗೆ ಕರೆಯಿಸಿ ಏಳು ಎಳೆಯ ಚಕ್ರಸರ, ನಾಲ್ಕು ಚಿನ್ನದ ಬಳೆ, ಕಿವಿಗೆ ಬಿಳಿ ಹರಳಿನ ಬೆಂಡೋಲೆ ಕಾಲಿಗೆ ಬೆಳ್ಳಿಯ ಚೈನು ಮಾಡಿಕೊಡಲು ಆಜ್ಞಾಪಿಸಿದರು. ಮನೆಯ ಮಗಳಂದಿರಿಂಗೆ, ಮೊಮ್ಮಕ್ಕಳಿಗೆ ಮದುವೆ ಜೌಳಿ ತೆಗೆದುಕೊಳ್ಳಲು ಹಣ ಕೊಟ್ಟರು. – ಅದರೊಂದಿಗೆ ಮದುಮಗಳಿಗೆ ಅವಳ ತಂದೆ ತಾಯಿಗೆ ತಂಗಿಯಂದಿಂಗೂ ಬಟ್ಟೆ ತರುವಂತೆ ಹೇಳಿದರು. ರಾಮಭಟ್ಟರ ಮನೆಯ ಸ್ಮಶಾನ ಮೌನ ಕಳೆದು ಮತ್ತೊಮ್ಮೆ ಸಂಭ್ರಮದ ವಾತಾವರಣ ಕಾಣಿಸಿಕೊಂಡಿತು. ಬೊಜ್ಜಕ್ಕೆ ಹಾಕಿದ ಚಪ್ಪರವನ್ನೇ ಮತ್ತಷ್ಟು ಶೃಂಗಾರ ಮಾಡಿದರು.

ಅಪ್ಪಣ್ಣ ಭಟ್ಟ ಶಪುಂಡಿಯ ದಿನವೇ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹಾಜರಾದರು. ಎಲ್ಲೋರಿಗೂ ಸಂಭ್ರಮವಾಯಿತು. ಮಕ್ಕಳು ಮೊಮ್ಮಕ್ಕಳು ಇವರನ್ನು ವಿಚಾರಿಸಿಕೊಂಡರು. ಕಾವೇರಿಯ ಕ್ಲಾಸಿನವಳಾದ ವಾಗ್ದೇವಿ ಹತ್ತಿರ ಬಂದು "ಎಂತ ಕಾವೇರಿ ಎನ್ನ ಗುರ್ತು ಇದ್ದೊ. ನಾವು ಒಂದೇ ಕ್ಲಾಸಿಲ್ಲಿ ಕಲ್ತವಲ್ಲದೊ; ನಾಳೆಂದ ನೀನು ಎನಗೆ ಅಜ್ಜಿ ಆವುತೆನ್ನೆ" ಎಂದು ಕಿಲಿ ಕಿಲಿ ನಕ್ಕಳು ಕಾವೇರಿ ನಸುನಗು ಬೀರಿದಳು ಅಷ್ಟೆ. ಆ ಮಾತು ಅವಳ ಎದೆಯನ್ನು ಚುಚ್ಚಿತ್ತು ಆದರೂ ತೋರಿಸಲಿಲ್ಲ.

ಮರುದಿವಸವೇ ಕಾವೇರಿಗೆ ಕಲಶ ಸ್ನಾನವಾಯಿತು. ಮಂತ್ರ ಘೋಷಣೆ ಗಳೊಡನೆ ಕಂಕಣ ಕಟ್ಟಿದರು – ಹೆಂಗಸರೆಲ್ಲಾ ಸೇರಿ ಮದಿಮ್ಮಾಳ ಶೃಂಗರ ಮಾಡಿದರು. ತಲೆ ತುಂಬಾ ಮಲ್ಲಿಗೆಯ ದಂಡೆ ಜಡೆಗೆ ಜೆಡೆಗೊಂಡೆ, ಜೆಡೆ ಉದ್ದಕ್ಕೂ ಬಂಗಾರದ ತಿರುಪ್ಪಿನ ಹೂವುಗಳು, ಕುತ್ತಿಗೆಗೆ 7ಎಳೆ ಚಕ್ರ ಸರ, ಹದಿನೇಳು

ಪವನಿನ ನಾಲ್ಕು ಬಂಗಾರದ ಬಳೆ, ಕಿವಿಗೆ ಬಿಳಿಕಲ್ಲಿನ ಕುಟುಕ್ಕು, ಬೆರಳಿಂಗೆ ಒಂದು ಪಚ್ಚೆ ಕಲ್ಲಿನ ಉಂಗುರ ಉಡಲಿಕ್ಕೆ ಪಟ್ಟೆ ಸೀರೆ ರವಕ್ಕೆ, ಮೇಲೆ ಉತ್ತರಿಗೆಗೆ ಬಿಳಿ ಬೈರ್ವಾಸ- ಎಲ್ಲವನ್ನೂ ಹಾಕಿ ಶೃಂಗರಿಸಿದರು. ಮದುಮಗಳಾಗಿ ಕಾವೇರಿ ಸಾಕ್ಷಾತ್ ಲಕ್ಷ್ಮಿಯಂತೆ ಕಂಡಳು. ಕಂಡವರೆಲ್ಲಾ ಮುದಿಮ್ಮಳು ಚೆಂದವೂ ಇದ್ದು, ಲಕ್ಷಣವೂ ಇದ್ದು, ಸರಸ್ವತಿಗೆ "ಇದೇನೂ ಬಿಟ್ಟು ಕೊಡ" ಎಂಬ ಮಾತೂ ಕೇಳಿ ಬಂತು. ರಾಮಣ್ಣನ ಅದೃಷ್ಟ, ಒಳ್ಳೇದಿದ್ದು ಹೇಳಿದವರು ಕೆಲವರಾದರೆ "ಒಳ್ಳೆ ಕೂಸಿನ ಈ ಮುಡಿಯಂಗೆ ಕೊಟ್ಟು ಕೊಂದವು" ಹೇಳಿದವರು ಕೆಲವರು.

"ಕಾವೇರಿಯ ಭಾಗ್ಯವೂ ದೊಡ್ಡದೇ – ಇಲ್ಲದಿದ್ದರೆ ಕುರುಡು ಕಾಸಿಂಗೊ ಗತಿ ಇಲ್ಲದವರ ಹೊಟ್ಟೆಲಿ ಹುಟ್ಟಿದರೂ, ಅದಕ್ಕೆ ವೈಭವಲ್ಲಿ ಮೆರೆವ ಭಾಗ್ಯ ಬಂತು" ಅನ್ನುವವರಿಗೂ ಕಡಿಮೆ ಇರಲಿಲ್ಲ.

ಅಂತೂ ಅದೇ ದಿನ ಮಧ್ಯಾಹ್ನ ಹನ್ನೆರಡೂವರೆ ಗಂಟೆಗೆ ಶುಭ ಗಳಿಗೆಯಲ್ಲಿ ರಾಮಭಟ್ಟರ ಕೊರಳಿಗೆ ಕಾವೇರಿ ಮಾಲೆ ಹಾಕಿದಳು. ವಾಲಗಗೀಲಗ ಇಲ್ಲದೆ ಇದ್ದು, ಎಲ್ಲರೂ ಮದುಮಕ್ಕಳ ತಲೆಗೆ ಅಕ್ಕಿಕಾಳು ಹಾಕಿ ಆಶೀರ್ವಾದ ಮಾಡಿದರು. ಪುರೋಹಿತ ಭಟ್ಟರಾದ ಶಂಕರಭಟ್ಟರೂ, ಕೇಶವಭಟ್ಟರೂ ಮಾತ್ರ ಜೋರಾಗಿಯೇ ಹೇಳಿದರು. ಎಲ್ಲರಿಗೂ ಧಾರೆ ಗಿಂಡಿ ಮುಟ್ಟಿಸಿ. "ಕೂಸಿನ ಧಾರೆ ಎರದುಕೊಡುತ್ತೆ" ಹೇಳಿ ಸಭೆ ಸಮಸ್ತರಿಂಗೆ ತಿಳುಶಿ, ಮಾಣಿಯ ಕೈಮೇಗೆ, ಕೂಸಿನ ಕೈ ಮಡುಗಿ ಕೊಂಬು ಗಿಂಡಿಂದ ತುಳಸಿ ನೀರು ಬಿಟ್ಟು ಧಾರೆ ಎರದ, ಶಂಕರಮ್ಮ ಹಸ್ತ ಮುಚ್ಚೊಂಡು ಇತ್ತು. ಧಾರೆ ನೀರಿನೊಟ್ಟಿಂಗೆ ಅದರ ಕಣ್ಣಿಂದಲೂ ನೀರು ಕೋಡಿಯಾಗಿ ಹರುದತ್ತು. ಆದರೆ ಕಾವೇರಿ ಕೂಗಿದ್ದು ಗೀಗಿದ್ದು ಏನೂ ಇಲ್ಲೆ. ಧಾರೆ ಕಳುದ ಮೇಲೆ ಲಾಜಹೋಮವೂ ಆತು. ಎಲ್ಲೋರ ಊಟವೂ ಆತು. ಎಲ್ಲಾ ಕೂಸುಗಳೂ ಮದಿಮ್ಮಾಳ ಸುತ್ತು ಕೂದಂಡು, ಅದರ ಬಳೆಗಳ, ಕೊರಳಿನ ಸರಂಗಳ ಮುಟ್ಟಿ ಮುಟ್ಟಿ ನೋಡಿದವು: ಕಾವೇರಿಯೂ ಎಲ್ಲೋರಿಂಗೂ ತೋರ್ಸಿತ್ತ "ಇಂದಿಂಗೆ ನಾಲ್ಕು ದಿನಕ್ಕೆ ಸಟ್ಟು ಮುಡಿಯಾಡ. ಅದು ಮುಗಿಶಿಕ್ಕಿ ನಾವು ನಮ್ಮ ಮನಗೆ ಹೋಪದು. ಮರುದಿನ 'ದಿಂಡು' ಶಾಸ್ತ್ರ ಮುಗಿಶಿಕ್ಕಿ ನಿಂಗೂ ಇತ್ಲಾಗಿ ಬಪ್ಪದಡ ಹೇಳಿತ್ತು" ಶಂಕರಮ್ಮ ಮಗಳಿಂಗೆ,

"ಇನ್ನೂ ನಾಲ್ಕು ದಿನ ಇಲ್ಲಿಯೇ ಇರೇಕ್ಕೊ?" ಕಾವೇರಿಯ ಪ್ರಶ್ನೆ.

"ಹಾಂಗೆ ಹೇಳಿರೆ ಹೇಂಗೆ ಮಗಳೇ? ಇನ್ನು ಶಾಶ್ವತವಾಗಿ ನೀನು ಇಲ್ಲಿಯೇ ಇಪ್ಪದು ಅಲ್ಲದೊ? ನಿನಗೆ ಅಬ್ಬೆ ಮನೆ ಋಣ ಇಂದಿಂಗೆ ಕಡುದತ್ತು, ಕೂಸುಗಳ ಧಾರೆ ಎರದು ಕೊಟ್ಟ ಮತ್ತೆ ಅದು ಪರರ ಸೊತ್ತಾತು. ಈಗ ಎಂಗೊ ಎಲ್ಲಾ ಇಲ್ಲೆಯೊ? ನಿನ್ನ ಹಾಂಗೇ ಅಬ್ಬೆ ಅಪ್ಪನ ಬಿಟ್ಟಿಕ್ಕಿ ಬಂದವು. ಹಾಂಗೇ ನಿನಗೊ

ಗಂಡನ ಮನೆ ಒಗ್ಗಿ ಹೋಕು' ಹೇಳಿ ಮಗಳಿಗೆ ಉಪದೇಶ ಕೊಡಲು ಮರೆಯಲಿಲ್ಲ ಶಂಕರಮ್ಮ.

ಆದರೆ ಕಾವೇರಿಯ ಸ್ಥಿತಿ ಯಾರಿಗೂ ಬೇಡ. ನಾಳೆಯಿಂದ ಆ ಮುದುಕನನ್ನು ಗಂಡ ಎಂದು ಕರೆಯಬೇಕು, ಮಕ್ಕಳಿಗೆ ಕಿರಿಯಬ್ಬೆ, ಅಜ್ಜಿ ಆಗಬೇಕು- ಅದನ್ನೆಲ್ಲಾ ನೆನೆಸುವಾಗಲೇ ಅವಳಿಗೆ ಬದುಕಿನಲ್ಲಿ ತಾತ್ಸಾರ ಬಂತು" ಮುದುಕನಿಗೆ ಸಾವು ಸಮೀಪವಿದೆ – ತನಗೋ ದೂರವಿದೆ. ವೈಧವ್ಯ ತನಗೆ ಕಟ್ಟಿಟ್ಟ ಬುತ್ತಿ ಎಂಬುದನ್ನು ನೆನೆದೇ ನಲುಗಿದಳು ಕಾವೇರಿ. ಆದರೆ ಯಾರಿಗೂ ತೋರಗೊಡಿಸಲಿಲ್ಲ – ಎಲ್ಲಾ ಅನಿಸಿಕೆಗಳನ್ನು ತಾನೇ ನುಂಗಿಕೊಂಡಳು. ಈ ಬಂಧನದಿಂದ ತನಗೆ ಬಿಡುಗಡೆ ಇಲ್ಲವಲ್ಲಾ ಎಂದು ಬೇಸರಿಸಿದಳು; ಆದರೆ ವಿಧಿಯ ಕೈವಾಡ ಬೇರೆ ಆಗಿತ್ತು.

ಮದುವೆಯ ಮರುದಿನ ಬೆಳಿಗ್ಗೆ ರಾಂಭಟ್ಟ ತೋಟದ ಕೆರೆ ಹತ್ತಿರಕ್ಕೆ ಹೋದವರನ್ನು ನೋಡಿದವರು ಹಲವಾರು ಮಂದಿ, ಮರಳಿ ಬಂದದ್ದು ಯಾರೂ ನೋಡಲಿಲ್ಲ. ಸೂರ್ಯ ನೆತ್ತಿ ಮೇಲೆ ಬಂದಾಗಲೂ ಬಾರದಿದ್ದನ್ನು ನೋಡಿ, ಅಲ್ಲಿ ಇಲ್ಲಿ ಹುಡುಕಾಟ ನಡೆಯಿತು. "ಕೆರೆಯ ಹತ್ತಿರ ನೋಡಿದ್ದೇವೆ" ಎಂಬ ಸಮಾಚಾರ ಅವರಿವರ ಬಾಯಿಯಲ್ಲಿಯೂ ಬಂತು. ಮನೆಯ ಆಳುಕಾಳುಗಳು ತೋಟಕ್ಕೆ ಓಡಿಹೋದರು. "ಅಣ್ಣೇರೇ, ಅಣ್ಣೇರೇ" ಎಂದು ಕೂಗು ಹಾಕಿದರು. ಎಲ್ಲಿಂದಲೂ ಮಾರ್ದನಿ ಬರಲಿಲ್ಲ. ಕೆರೆಯ ಸಮೀಪಕ್ಕೆ ಬಂದರು. ಅದರ ಬದಿಯಲ್ಲಿ ರಾಂಭಟ್ಟನ ಒಂದು ಚಪ್ಪಲಿ ಕಂಡಿತು. ಇನ್ನೊಂದು ನೀರಿನಲ್ಲಿ ತೇಲುತ್ತಿತ್ತು. ಎದೆಯಲ್ಲಿ ಡವಡವ ಎಂದ ಆಳುಗಳು ಕೆರೆಗೆ ಇಣುಕಿ ನೋಡಿದರು. ರಾಮಭಟ್ಟ ತೇಲುತ್ತಿರುವುದನ್ನು ಕಂಡರು. ಕೂಡಲೇ ಚನಿಯ ಎಂಬ ಆಳು ನೀರಿಗೆ ಹಾರಿ, ಆ ದೇಹವನ್ನು ಎಳೆದು ದಡಕ್ಕೆ ತಂದ. ಉಸಿರಿದೆಯೋ ಎಂದು ನೋಡಿದ. ಎದೆಯ ಮೇಲೆ ಎರಡು ಮೂರು ಸಲ ಕೈಯಿಂದ ಒತ್ತಿದ–ಊಹುಂ, ಯಾವ ಆಶೆಯೂ ಉಳಿದಿಲ್ಲ. ರಾಮಣ್ಣನ ಪ್ರಾಣಪಕ್ಷಿ ಯಾವಾಗಲೋ ಹೋಗಿತ್ತು.

"ಅಣ್ಣರೇ, ಅಣ್ಣರೇ" ಹೇಳಿ ಚನಿಯ ರೋಧಿಸತೊಡಗಿದ. ಉಳಿದವರು ಮನೆಗೆ ಓಡಿಹೋಗಿ ಸಮಾಚಾರ ತಿಳಿಸಿದರು. ಜನರ ದಂಡೇ ಕೆರೆಯ ದಡಕ್ಕೆ ಬಂತು. "ಅವನ ಕೊರಳಿಂಗೆ ಒಂದು ಕೋಳಿ ಮರಿಯ ಕಟ್ಟಿ ತಲೆ ಕಡಿರಿ– ಉಸುರು ಬಕ್ಕು" ಹೇಳಿದರು ಕೆಲವರು, ಕೂಡಲೇ ಕೋಳಿ ಮರಿಯನ್ನು ಕಟ್ಟ ಕೊರಳು ಕೊಯ್ದಾಯಿತು. ಅದು ರೆಕ್ಕೆ ಬಡಿದಾಗ, ರಕ್ತ ಭಟ್ಟರ ಮುಖಕ್ಕೆ ಎರಚಿತು ಅಷ್ಟೇ. ಉಸಿರಾಡಲಿಲ್ಲ.

"ಅಕ್ಕಿ ಮುಡಿಯ ಸೊರುಗಿ – ಅದರಲ್ಲಿ ಮನುಶಿ ಕಂಬಳಿ ಹೊದುಶಿ – ಉಸಿರು ಬಕ್ಕು ಹೇಳಿದವು ಕೆಲವು ಜನ. ಅದನ್ನೂ ಮಾಡಿದರು.

"ಅವನ ಮೂಗು ಚೀಪಿದರೆ ಒಳ ಇಪ್ಪ ನೀರು ಹೆರ ಬಕ್ಕು" ಹೇಳಿದವು. ಇನ್ನಷ್ಟು ಜೆನ ಚನಿಯ ಕೂಡಲೇ ಅದನ್ನು ಮಾಡಿತ್ತು. ಆದರೆ ರಾಮಣ್ಣ ಹೋದ್ದು ಹೋದ್ದೆ- ಇತ್ತೆ ಬಪ್ಪ ಲಕ್ಷಣವೇ ಇಲ್ಲೆ" ಎಂಬುದು ಖಾತ್ರಿಯಾಯಿತು. ಅಲ್ಲಿ ನೆರೆದವರಿಗೆ "ಛೆ! ಇದೆಂತದಪ್ಪ! ನಿನ್ನೆ ಕೈಗೆ ಧಾರೆ ನೀರು – ಇಂದು ಸುಡುಗಾಡಿಂಗೆ ಹೋತು ಹೇಳಿ ಆರು ಜಾನ್ನಿದ್ದವು"

"ಆ ನಟ್ಟ ದರಿದ್ರದ್ದರ ಕೈ ಹಿಡಿವಲೆ ಆವುತ್ತಿತ್ತಿಲ್ಲೆ. ಅದೇ ತಪ್ಪಾತು."

"ಜಾತಕ ನೋಡಿಯೇ ಮದುವೆ ಆಯೇಕಾತು. ಇಲ್ಲದಿದ್ದರೆ ಹೀಂಗಾವುತ್ತಿತ್ತಿಲ್ಲೆ"

"ಶಪುಂಡಿಲ್ಲೆ, ಮರುಮದುವೆ ಆದ್ದಲ್ಲದೋ, ಅದು ಸರಸ್ವತಿ ಅಕ್ಕನ ಪ್ರೇತವೇ ಅವನ ಬಲಿ ತೆಕ್ಕೊಂಡಿಕ್ಕು" ಹೇಳಿದವು ಇನ್ನೂ ಕೆಲವು ಜೆನ.

ಅಂತೂ ರಾಮಣ್ಣನ ಹೆಣವ ತಂದು ಮನೆಯ ಬಾಗಿಲಲ್ಲಿ ದರ್ಬೆಯ ಮೇಲೆ ಮಲಗಿಸಿದರು. ಮುಂದೆ ಎಂತ ಮಾಡುದು? "ಈ ವಿಷಯವ ಪೊಲೀಸರಿಗೆ ತಿಳುಶುದು ಒಳ್ಳೇದು. ಅವು ಪಂಚನಾಮೆ ಮಾಡಿದ ಮತ್ತೆಯೇ ಮುಂದಿನ ಕಾರ್ಯ ಮಾಡೇಕಷ್ಟೇ" ಎಂದು ತೀರ್ಮಾನಿಸಿ, ಗಣಪನನ್ನೇ ಪೊಲೀಸು ಸ್ಟೇಷನ್ನಿಗೆ ಕಳುಹಿಸಿದರು. ಡಾಕ್ಟ್ರು, ಪೊಲೀಸಿನವರು ಬಂದು ಪಂಚನಾಮೆ ಮುಗಿಸಿ ಹೆಣ ಕೈ ಸೇರುವ ಹೊತ್ತಿಗೆ ಸಾಯಂಕಾಲ ಮೂರು ಗಂಟೆ ಕಳೆಯಿತು.

"ಇನ್ನೆಂತ ಮಾಡುದು? ಕೆಲಸ ಮುಂದುವರಿಸದೋ" ಹೇಳಿ ಅಲ್ಲಿ ಸೇರಿದ ಗಂಡುಸರು ಕೇಳಿಕೊಂಡರು.

"ಎಂತ ಮಾಡುದು? ಒಂದೇ ಮನೇಲಿ ಎರಡು ಹೆಣ. ಒಂದು ಮದುವೆಯೂ ಕಳದತ್ತು. ಹೀಂಗಿಪ್ಪ ಪರಿಸ್ಥಿತಿನ ಮನಗೆಂದೂ ಬಯಿಂದಿಲ್ಲೆ" ಹೇಳುವಾಗಲೇ ಎಲ್ಲರ ಮುಖದಲ್ಲಿ ಪ್ರೇತಕಳೆ ಕಂಡು ಬಂತು. ಮನೆಯಲ್ಲಿದ್ದ ಮಕ್ಕಳು, ಶಂಕರಮ್ಮ, ಉಳಿದ ಹೆಂಗಸುರು ಎಲ್ಲಾ ರೋಧಿಸತೊಡಗಿದರು.

"ಎಂಗಳ ಅಪ್ಪನ ಮನೆ ಅಳುತ್ತು ಹೇಳಿ ರಾಮಣ್ಣನ ಕೂಸು ಕೂಗಿದರೆ, ಎಂಗೊ ಗಿನ್ನು ಆರುಗತಿ ಹೇಳಿ ಮಾಣ್ಯಂಗಳೂ ಕಣ್ಣೀರು ತೆಗೆದರು.

"ಆ ದರಿದ್ರದರ ಕೈ ಹಿಡಿದ್ದೇ ತಪ್ಪಾತು. ಅದೆಂತಹ ಗಳಿಗೇಲಿ ಹುಟ್ಟಿದ್ದೋ, ಧಾರೆ ನೀರು ಕೈಯಿಂದ ಆರೇಕಾರೇ ಗಂಡನ ಮುಕ್ಕಿ ತಿಂದಿತ್ತು" ಹೇಳಿದರು ಕೆಲವು ಹೆಂಗುಸರು.

"ಅದಾತನ್ನೆ ಅದು ಸರಸ್ವತಿಯ ಪ್ರೇತ ಅಲ್ಲಿ ಹೇಳಿಯೂ ಹೇಳ್ಳೆಡಿಯ. ಅಷ್ಟು ಅನ್ಯೋನ್ಯ ಆಗಿತ್ತಿದ್ದವು, ಗಂಡ ಹೆಂಡತಿಗೂ" ಹೇಳಿದರು ಕೆಲವರು.

"ನಿಂಗೊ ಎಂತದೇ ಹೇಳಿ ಆ ಕೂಸಿನ ಕೈಗೆ ಧಾರೆ ನೀರು ಬಿದ್ದುದು ಹೊರತು-ಇನ್ನೆಂತದೂ ಇಲ್ಲೆ. ಅದು ಮುಂದಕ್ಕೆ ಬಾಳಿ ಬದುಕೇನನ್ನೆ? ಸತ್ತವ ಸತ್ತು ಸ್ವರ್ಗಕ್ಕೆ ಹೋಕು. ಇದ್ದದರ ಗತಿ ಎಂತದು?" ಹೇಳುವವರೂ ಕೆಲವರಿದ್ದರು.

ಶಂಕರಮ್ಮ, ಅಪ್ಪಣ್ಣಭಟ್ಟರಿಗೆ ದಿಕ್ಕೇ ತೋಚಲಿಲ್ಲ. ಆ ಕಡೆ ಅಳುವೂ ಬರಲಿಲ್ಲ, ನಗುವೂ ಇರಲಿಲ್ಲ. ಪೆಚ್ಚಾಗಿ ಕೂತಿದ್ದರು ಒಂದು ಕಡೆ. ಕಾವೇರಿಗೆ ಸಾಂತ್ವನ ಹೇಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಅವಳು ಮುಖದ ಮೇಲೆ ಸೆರಗು ಹೊದ್ದುಕೊಂಡು, ಕೈ ಕಣ್ಣಿಗಡ್ಡ ಹಿಡಿದು, ಗೋಡೆಗೆ ಮುಖ ಮಾಡಿ, ಮುರುಟಿ ಮಲಗಿದವಳನ್ನು ಯಾರೂ ವಿಚಾರಿಸಲಿಲ್ಲ. ಅತ್ತಿತ್ತ ಓಡಾಡುವವರು, ಒಮ್ಮೊಮ್ಮೆ ಅವಳ ಕಡೆ ಕಣ್ಣು ಹಾಯಿಸಿ ನೋಡುತ್ತಿದ್ದರು-ಒಂದೊಂದು ಕಣ್ಣಿನಲ್ಲಿ ಕನಿಕರ, ಇನ್ನೊಂದರಲ್ಲಿ ಜಿಗುಪ್ಸೆಯೂ ಕಾಣುತ್ತಿತ್ತು.

ಊರ ಹಿರಿಯರು, ಮಕ್ಕಳು, ಮೊಮ್ಮಕ್ಕಳೂ ಸೇರಿ ರಾಮಭಟ್ಟರ ದೇಹಕ್ಕೆ ಅಗ್ನಿ ಕಾರ್ಯವನ್ನು ನೆಡೆಸಿದರು. ಹಿರಿಯ ಮಗ ಶಂಕರನೇ ಅಗ್ನಿಸ್ಪರ್ಶ ಮಾಡಿದ್ದು, ಆಮೇಲೆ ಎಲ್ಲರೂ ಕೆರೆಯಲ್ಲಿ ಮುಳುಗಿ ಸ್ನಾನ ಮಾಡಿಕೊಂಡು ಮನೆ ಸೇರಿದರು. ಯಾರೊಬ್ಬರೂ ಹೆಚ್ಚಿನ ಮಾತುಕತೆ ನಡೆಸಲಿಲ್ಲ. ಮಕ್ಕಳಿಗೆ, ಹೆಂಗುಸರಿಗೆ, ಬಂದವರಿಗೆ ಪಕ್ಕದ ಮನೆಯವರು ಅನ್ನ ಸಾರು ಬೇಯಿಸಿ ಹಾಕಿದರು. ಬೆಳಗಿನಿಂದ ಉಪವಾಸ ಬಿದ್ದವಂಗೆ ಅದೇ ಪಂಚಾಮೃತವಾಯಿತು. ಗಬಗಬನೇ ತಿಂದು ಹೊಟ್ಟೆ ತಣ್ಣಗೆ ಮಾಡಿಕೊಂಡರು. ಇಷ್ಟಾಗುವಾಗ ರಾತ್ರೆ ಎಂಟು ಗಂಟೆ ಕಳೆದಿತ್ತು. ಇನ್ನು ಮುಂದಿನ ಕ್ರಮ ಹಾಗೇ ಉಳಿದಿತ್ತು. ಗಂಡಸರೆಲ್ಲಾ ಚಾವಡಿಯಲ್ಲಿ ನೆರೆದರು. ತಮ್ಮೊಳಗೇ ಗುಸುಗುಸು, ಪಿಸುಪಿಸು ಮಾತನಾಡಿ ಯಾವುದೋ ಒಂದು ನಿರ್ಣಯಕ್ಕೆ ಬಂದರು. ಈ ಸಮಾಲೋಚನೆಗೆ ಅಪ್ಪಣ್ಣ ಭಟ್ಟನನ್ನು ಕರೆಯಲಿಲ್ಲ. ಊರಿಗೆ 'ಗುರಿಕ್ಕಾರ' ಎನಿಸಿಕೊಂಡಿರುವ ಹಿರಿಯರಾದ ನರಸಿಂಹ ಭಟ್ಟರು ಮುಂದಾಳುತನ ವಹಿಸಿದರು.

"ಹಾಂಗಾರೆ ಈಗ ನಾವು ನಿರ್ಣಯ ಮಾಡಿದ್ದಕ್ಕೆ ನಿಂಗಳ ಒಪ್ಪಿಗೆಯಾ?" ರಾಮಭಟ್ಟರ ಗಂಡುಮಕ್ಕಳನ್ನು ವಿಚಾರಿಸಿದರು ನರಸಿಂಹಭಟ್ಟರು.

"ಎಂಗೊಗೆ ಎಂತದೂ ಗೊಂತಿಲ್ಲೆ ಮಾವ ಎಲ್ಲಾ ನಿಂಗೊ ಹೇಳಿದ್ದಕ್ಕೆ, ಮಾಡಿದ್ದಕ್ಕೆ ಎಂಗಳ ಒಪ್ಪಿಗೆ ಇದ್ದು" ನಿಂಗೊ ಮುಂದವರಿಶಿ-ಎಂಗೊಗೆ ಇಂತಹಾ ಪರಿಸ್ಥಿತಿ ಬಕ್ಕು ಹೇಳುವ ಕಲ್ಪನೆಯೇ ಇತ್ತಿಲ್ಲೆ-ದೇವರು ಎಂಗಳ ಕೈಬಿಟ್ಟ" ಹೇಳುವಾಗ ಶಂಕರನ ಕಣ್ಣಲ್ಲಿ ನೀರು ಬಂತು. ಒಂದ್ಸಾರಿ ಬಿಕ್ಕಿ ಬಿಕ್ಕಿ ಅತ್ತ. ಅದನ್ನು ನೋಡಿ ತಮ್ಮನೂ ಅತ್ತ.

"ನಿಂಗೊ ಕೂಗೇಡಿ ಮಕ್ಕಳೇ ಊರಿಲ್ಲಿ ಹಿರಿಯರು ಹೇಳಿ ಎಂಗಳೂ ಇದ್ದೆಯೋ. ನಿಂಗಳಕ್ಕೆ ಬಿಡೆಯೊ. ಹೆದರೇಡಿ, ಆತೋ. ಪರಿಸ್ಥಿತಿ ಬಂದರೆ ಎದುರಿಸುವ ಸಾಮರ್ಥ್ಯನ ಆ ದೇವರೇ ನಿಂಗೊಗೆ ಕೊಡುಗು. ಚಿಂತೆ ಮಾಡೇಡಿ" ಹೇಳಿ ಮಕ್ಕಳ ಸಮಾಧಾನ ಮಾಡಿದರು ಅಲ್ಲಿದ್ದವರು.

"ಅಂಬಾಗ ಅಪ್ಪಣ್ಣನನ್ನೂ, ಶಂಕರಿಯನ್ನೂ ಇಲ್ಲಿಗೆ ಬಪ್ಪಲೆ ಹೇಳುವೋ ಆಗದೋ?"

"ಅಕ್ಕು, ಇನ್ನೆಂತಕೆ ನಿಧಾನ ಮಾಡೇಕು?" ಒಕ್ಕೊರಳ ದನಿಯಾಯಿತು.

"ಗಣಪ್ಪ ನೀನು ಹೋಗಿ ಅವರ ಇಲ್ಲಿಗೆ ಕರಕ್ಕೊಂಡು ಬಾ. ಅವಕ್ಕೆ ವಿಷಯ ತಿಳುಶುವೊ"

"ಆತು ಹೋವುತ್ತೆ" ಹೇಳಿ ಗಣಪತಿ- ಅವರಿಬ್ಬರನ್ನೂ ಕೋಣೆಗೆ ಕರೆದುಕೊಂಡು ಬಂದರು. ಅವರು ಶತಾಪರಾಧಿಗಳಂತೆ ಯಾವೊಂದು ಮಾತೂ ಇಲ್ಲದೆ ತಲೆ ಕೆಳಗೆ ಹಾಕಿ ಒಬ್ಬರಿಗೊಬ್ಬರು ಸಮೀಪ ಕುಳಿತುಕೊಂಡರು.

ನರಸಿಂಹ ಭಟ್ಟರು ಅವರಿಗೆ ತಿಳಿಸಬೇಕಾದ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಿದರು.

"ಅಪ್ಪಣ್ಣ ಇಲ್ಲಿ ನಡದ್ದರ ಎಲ್ಲಾ ನಿನಗೆ ವಿವರಿಸೇಕು ಹೇಳಿ ಇಲ್ಲೆನ್ನೆ. ನೀನೂ ಎಲ್ಲಾ ವಿಷಯವನ್ನೂ ಕಣ್ಣಾರೆ ಕಂಡಿದೆ. ಕೆಟ್ಟ ಗಳಿಗೇಲಿ ಕೂಸಿಂಗೆ ಧಾರೆಯೂ ಆತು, ಕರಿಮಣಿ ಭಾಗ್ಯವೂ ಕಳುದತ್ತು. ಇದೆಲ್ಲಾ ವಿಧಿಯ ಕೈವಾಡ. ನಾವೆಂತ ಮಾಡೇಕು-ಅದೆಲ್ಲಾ ಇರಲಿ. ಇನ್ನು ಮುಂದೆ ಎಂತದು ಹೇಳಿ ನಾವೀಗ ಆಲೋಚನೆ ಮಾಡೇಕು. ಅದಕ್ಕೆ...." ಪೀಠಿಕೆ ಮಾಡಿದರು ನರಸಿಂಹಭಟ್ಟರು.

"ಈಗ ಎಂತಾದರೂ ನಿನ್ನ ಮಗಳು ಕಳಿಂಗಳ ರಾಮಣ್ಣನ ಹೆಂಡತಿ ಹೇಳಿಯೇ ಬದುಕ್ಕೆಕು-ಒಂದಾರಿ ಧಾರೆ ನೀರು ಕೈಗೆ ಬಿದ್ದವಕ್ಕೆ ಇನ್ನೊಂದು ಮದುವೆ ಅಪ್ಪ ಹಕ್ಕೂ ಇಲ್ಲೆ. ಅಪ್ಪಲೂ ಅಗ - ಅದು ನಮ್ಮ ಬ್ರಾಹ್ಮಣರ ಸಮಾಜದಲ್ಲಿ ಇಲ್ಲೆ. ಅದಕ್ಕಾಗಿ ಎಂಗೊ ಒಂದು ತೀರ್ಮಾನಕ್ಕೆ ಬಯಿಂದೆಯೊ ಕೇಳಿಗೊ."

ಅಪ್ಪಣ್ಣಭಟ್ಟ ಸ್ವಲ್ಪ ಮುಖವೆತ್ತಿ ಅವರ ತೀರ್ಮಾನ ತಿಳಿಯಲು ಕುತೂಹಲ ರಾದರು. "ನಿನ್ನ ಮಗಳಿಂಗೆ ಧಾರನಪ್ಪಾಗ ಏಳು ಎಳೆ ಚಕ್ರಸರ, ನಾಲ್ಕು ಬಳೆ, ಕಿವಿಂಗೆ ಕುಟುಕ್ಕು, ಪವನಸರ, ಗೆಜ್ಜೆಟಿಕ್ಕಿ ಎಲ್ಲಾ ಬಟ್ಟಲ್ಲಿ ಮಡುಗಿದ್ದ ರಾಮಣ್ಣ. ಆ ಪೈಕಿ ಚಕ್ರಸರ, ಬಳೆ, ಕೆಮಿ ಕುಟುಕ್ಕು, ಮದ್ದಿಮ್ಮಾಳಿಂಗೆ ಹೇಳಿಯೇ ಮಾಡ್ಸಿದ್ದು-

ಅದರೆಲ್ಲಾ ಅದಕ್ಕೆ ಮಡುಗು. ಎಂತಕಾದರೂ ಕಷ್ಟ ಕಾಲಲ್ಲಿ ಆಪತ್ತು ಧನ ಹೇಳಿ ಇರಲಿ ಮತ್ತೆ ಪವನಸರ, ಗೆಜ್ಜೆ ಟಿಕ್ಕಿ ಬಿಡಿಸಿಕೊಡು. ಅದು ಸರಸ್ವತಿದು. ಅದರೆಲ್ಲಾ ಕೂಸುಗೋಕೆ ಹಂಚಿಕೊಡುದು ಹೇಳಿ ತೀರ್ಮಾನ ಆಯಿದು. ಆದರ ಕೊರಳಿಂದ ಬಿಡಿಸಿ ಕೊಟ್ಟಿಕ್ಕು."

"ನಿಂಗೊ ಹೇಳಿದಾಂಗೆ ಕೊಡುತ್ತೆ."

"ಮತ್ತೆ ರಾಮಣ್ಣನ ಕೈಹಿಡುದ ಕಾರಣ ಅದರ ಜೀವನಾಂಶಕ್ಕೆ ವರ್ಷಕ್ಕೆ 6 ಸಾವಿರ ರೂಪಾಯಿ ಅಶನಾರ್ಥ ಹೇಳಿ ಕೊಡುದು ತೀರ್ಮಾನಿಸಿದ್ದು. ಅದರ ವರ್ಷ ವರ್ಷವೂ ಅದರ ಹೆಸರಿನಲ್ಲಿ ಖಾತೆ ತೆಗೆದರೆ, ಮಕ್ಕೊ ಮಾಡುಗು. ಇದಕ್ಕೆ ನಿನ್ನ ಒಪ್ಪಿಗೆಯೋ?"

"ನಿಂಗೊ ಹೇರಿಗೆ ಹೇಳಿದರೂ ಆನು ಕೇಳುತ್ತೆ. ಅಪ್ಪಣ್ಣ ಒಪ್ಪಿಗೆ ಸೂಚಿಸಿದರು."

"ಮತ್ತೆ ಕಾವೇರಿಯ ನಿಂಗೊ ಹೋಪಾಗಳೇ ಕರಕ್ಕೊಂಡು ಹೋಗಿ, ಇಲ್ಲಿ ಇಪ್ಪದು ಬೇಡ. ಬೆಳೆದು ನಿಂದ ಮಾಣ್ಯಂಗೊ ಮಾಂತ್ರ ಇಪ್ಪದು. ನಾಳಂಗೆ ಅದಕ್ಕೂ ಕೆಟ್ಟ ಹೆಸರು. ಮಾಣ್ಯಂಗೋಕೂ ಕೆಟ್ಟದು".

"ಆತು, ಎನ್ನ ಮಗಳ ಆನು ಕರಕ್ಕೊಂಡು ಹೋವುತ್ತೆ."

"ಹಾಂಗೆ ಹೇಳಿ ಈ ಮನೆಗೆ ಕಾಲು ಮಡುಗಲಾಗ ಹೇಳಿ ಇಲ್ಲೆ. ಮಾಸಿಗಕ್ಕೆ ತಿದ್ದಿಗೆ ವರ್ಷಾಂತಿಕಕ್ಕೆ ಹೇಳಿ ಕರಕೊಂಡು ಬಾ. ಅದಕ್ಕೂ ದೇಹಶುದ್ಧಿ ಆಯೇಕನ್ನೆ."

"ಆತು."

"ನಿಂಗೊ ಇಂದೇ ಹೋವುತ್ತಿರೋ?"

"ಎಂಗೋ ಇಂದೇ ಹೋವುತ್ತೆಯೊ – ಬೊಜ್ಜಕ್ಕಪ್ಪಾಗ, ಬತ್ತೆಯೋ?"

"ಆತು, ಹಾಂಗೇ ಮಾಡಿ" ಹೇಳಿದ ನರಸಿಂಹ ಭಟ್ಟ.

ಶಂಕರಮ್ಮ ಮೂಲೆಯಲ್ಲಿ ಮುದುಡಿ ಮಲಗಿದ ಮಗಳನ್ನು ಎಬ್ಬಿಸಿದರು.

"ಏಳು ಮಗಳೇ, ನಾವಿನ್ನು ಮನೆಗೆ ಹೋಪೊ" ಹೇಳಿದ ಕೂಡಲೇ ಕಾವೇರಿ ಎದ್ದು ನಿಂತಳು. ಹೊರಡಲು ತಯಾರಾದಳು. ಶಂಕರಮ್ಮ, ಅಪ್ಪಣ್ಣಭಟ್ಟರು

ನಾಲ್ಕು ಮಕ್ಕಳನ್ನು ಕರೆದುಕೊಂಡು ಪೆಂಚ್ಚು ಮುಖ ಮಾಡಿಕೊಂಡು ಮನೆಯ ಅಂಗಳಕ್ಕಿಳಿದು ಮನೆಯ ದಾರಿ ಹಿಡಿದರು.

"ಅಬ್ಬಾ, ಎಂತ ಅಂತರಾಷ್ಟ್ರ ಶನಿ ಬಂತಪ್ಪಾ ಮನೆಗೆ. ಎಲ್ಲಾ ಮುಕ್ಕಿ ತಿಂದಿಕ್ಕಿ ಹೋತು. ಪೀಡೆ ತೊಲಗಿತ್ತು" ಹೇಳುವ ಮಾತುಗಳನ್ನು ಕಾವೇರಿ ಒಬ್ಬಳೇ ಕೇಳ್ಸಿಕೊಂಡದ್ದು. ಅಂತೂ ಇಂತೂ ಎರಡು ಮೈಲಿ ನಡೆದು ಮನೆಗೆ ತಲುಪಿದರು. ಎಲ್ಲರೂ ಮನೆಯ ಜಗಲಿಯಲ್ಲಿ 'ಉಸ್ಸಪ್ಪಾ' ಎಂದು ಕುಳಿತರು.

"ಶಂಕರಿ ಮದಲು ನೀನು ಒಳಹೋಗಿ, ಆ ಕಾವೇರಿಗಿಷ್ಟು ಲಿಂಬೆಹೊಳಿ ಪಾನಕ ಮಾಡಿಕೊಡು, ಉದಿಂದ ಇಷ್ಟರವರೆಗೆ ಅಶನ ನೀರಿಲ್ಲದೆ ಬಿದ್ದಿದು. ಎಂಗೊಗೆಲ್ಲಾ ಬರೇ ನೀರು ತಂದು ಕೊಡು" ಹೇಳಿದ ಅಪ್ಪಣ್ಣ.

"ಲಿಂಬೆಕಾಯಿ ಇದ್ದೊ ಮನೇಲಿ?" ಮರುಪ್ರಶ್ನೆ ಹಾಕಿದರು ಶಂಕರಮ್ಮ.

"ಹೂಂ. ನಮ್ಮ ಮನೇಲಿ ಅದೂ ಇಲ್ಲೆ ಹೇಳುದು ನೆಂಪೇ ಬಯಿಂದಿಲ್ಲೆ. ನೀನು ಬರೇ ಶಕ್ಕರೆಯ ನಾಲ್ಕು ಚಮಚ ಹಾಕಿ ಒಂದು ಚಿಟಕಿ ಉಪ್ಪನ್ನೂ ಹಾಕಿ, ಒಂದು ಲೋಟ ನೀರು ಮಾಡಿ ಅದಕ್ಕೆ ಕುಡುಶು. ರಜಾ ಹೊಟ್ಟೆ ತಣ್ಣಂಗೆ ಅಕ್ಕು. ಮತ್ತೆ ಹೆಜ್ಜಿಗೆ ಮಡುಗು – ಎಲ್ಲೋರಿಂಗೂ ಹಶು ಆಯದು. ಎಂತಾದರೂ ಮನುಷ್ಯನ ಹೊಟ್ಟೆ ಕೇಳುತ್ತೊ?"

"ಆತು, ಈಗಳೇ ಅದಕ್ಕೆ ಮಾಡಿಕೊಡುತ್ತೆ" ಹೇಳಿ ಶಂಕರಮ್ಮ ಎದಿಕ್ಕಿ ಒಳಹೋಗಿ, ಸಕ್ಕರೆ ಪಾನಕ ಮಾಡಿ ಮಗಳ ಹತ್ತಿರಕ್ಕೆ ಹೋಗಿ, ಒಳಕೋಣೆಯಲ್ಲಿ ಮಲಗಿದ್ದ ಕಾವೇರಿಯ ಮುಸುಕು ಸರಿಸಿ, "ಕಾವೇರಿ ಏಳು. ರಜಾ ಶಕ್ಕರೆ ನೀರು ಕುಡಿ" ಹೇಳಿ ಎಬ್ಬಿಸಿದರು. ಕಾವೇರಿಯ ಮುಸುಕು ಸರಿಸಿದ ಶಂಕರಮ್ಮನಿಗೆ ಆಶ್ಚರ್ಯವೇ ಕಾದಿತ್ತು. ಅವಳ ಕಣ್ಣಿನಲ್ಲಿ ನೀರು ಹರಿದಿರಲಿಲ್ಲ. ದುಃಖವೂ ಉಮ್ಮಳಿಸಲಿಲ್ಲ. ತಾಯಿ ಹೇಳಿದ ಕೂಡಲೇ ಪಾನಕವನ್ನು ಗಟಗಟ ಕುಡಿದೇಬಿಟ್ಟಳು ಕಾವೇರಿ.

"ಇನ್ನು ಅದರೆಲ್ಲಾ ಜಾನ್ಸಿ ಕೊರಗೇಡ ಕಾವೇರಿ. ನಮ್ಮ ಋಣ ಅಷ್ಟೇ ಇತ್ತು ಹೇಳಿ ನಾವು ಸಮಾಧಾನ ಮಾಡ್ಯೋಳೇಕು ಅಷ್ಟೆ" ಅಮ್ಮನಾಗಿ ಮಗಳಿಗೆ ಸಾಂತ್ವನ ಹೇಳಿದರು ಶಂಕರಮ್ಮ.

"ಅಬ್ಬೆ – ನಿನಗೆ ಆನು ಕೂಗಿದ ಹಾಂಗೆ ಕಂಡತ್ತೊ? ಆನು ನಿಜವಾಗಿ ಕೂಗಿದ್ದಿಲ್ಲೆ. ನಿಜ ಹೇಳೇಕು ಹೇಳಿದರೆ–ಮನಸ್ಸಿಲ್ಲೇ ರಜಾ ಸಂತೋಷವೇ ಆತು. ದೇವರೇ ಎನ್ನ ಕಷ್ಟ ಪರಿಹಾರ ಮಾಡಿದ ಹೇಳಿ ಜಾನ್ಸಿದೆ. ಎನಗೆ ಆ ತೊಂಡನ

ಹೆಂಡತಿ ಆಗಿ ಬದುಕ್ಕುವೆ ಆಶೆಯೇ ಇತ್ತಿಲ್ಲೆ. 'ಧಾರೆ' ಅಪ್ಪಗಳೂ ಅವನ ಎನ್ನ ಗಂಡ ಹೇಳಿ ಮನಸ್ಸಿಲ್ಲಿ ಜಾನ್ನಿದ್ದಿಲ್ಲೆ. ಹೇಂಗಪ್ಪಾ ಮುಂದೆ ಬದುಕ್ಕುದು ಹೇಳುವ ಚಿಂತೆಯೇ ಎನ್ನ ಕಾಡಿತ್ತು. ಅದಕ್ಕೆ ದೇವರೇ ದಾರಿ ತೋರ್ಸಿದ" ಒಂದೇ ಉಸಿರಿಗೆ ಕಾವೇರಿ ನುಡಿದಳು. ಶಂಕರಮ್ಮ ಈ ರೀತಿಯ ಉತ್ತರ ಮಗಳಿಂದ ನಿರೀಕ್ಷಿಸಿರಲಿಲ್ಲ.

"ಕಾವೇರಿ ನಿನಗೆ ನಿನ್ನ ಮುಂದಾಣ ಪರಿಸ್ಥಿತಿಯ ಅರುವು ಇದ್ದಿದ್ದರೆ ನೀನು ಹೀಂಗೆ ಮಾತಾಡುತ್ತಿದ್ದಿಲ್ಲೆ."

"ಎಲ್ಲಾ ಅರ್ಥ ಆಯಿದು ಅಬ್ಬೆ. ಮುಂದೆ 'ಮುಂಡೆ' ಆಗಿ ಬದುಕ್ಕೇಕು ಹೇಳಿ ಅಲ್ಲದೋ ನಿನ್ನ ಸಂಕಟ."

"ಅಪ್ಪು ನಿನಗೆ ಇನ್ನೊಂದು ಮದುವೆ ಹೇಳಿ ಇಲ್ಲೆ. ಮಕ್ಕೊ ಮರಿಗೊ ಇಲ್ಲೆ. ಸಾವನ್ನಾರ 'ಮುಂಡೆ' ಆಗಿಯೇ ಬದುಕ್ಕೇಕು. ಮೋರಗೆ ಬೊಟ್ಟು, ಜೆಡೆಗೆ ಹೂಗು, ಕೈಗೆ ರುಜು ಹಾಕಲೆಡಿಯ".

"ಏಕೆಡಿಯ. ಮುದುಕ್ಕನ ಕೈಹಿಡುದ ತಪ್ಪಿಂಗೆ ಎನಗೆ ಇಷ್ಟೆಲ್ಲಾ ಶಿಕ್ಷೆಯೋ? ಅವ ಎನಗೆ ಎಂದು ಗೆಂಡ ಆಯಿದ ಇನ್ನೂ 'ದಿಂಡು' ಕಳಿವನ್ನ ಮೊದಲೆ ಗೊಟಕ್ಕಾದ. ಹಾಂಗಾಗಿ ಆನು ಹೇಂಗೆ ಮುಂಡೆ ಆದ್ದು? ಆವುತ್ತಿಲ್ಲೆ."

"ಕಾವೇರಿ ನಿನಗೆ ನಿನ್ನದೇ ಕಾನೂನುಗೊ. ಅದೆಲ್ಲಾ ನಮ್ಮ ಸಮಾಜಲ್ಲಿ ನಡೆಯ. ಸಮಾಜಕ್ಕೆ ಒಂದು ರೀತಿ ರಿವಾಜು ಹೇಳಿ ಇದ್ದು. ಅದರ ಮೀರಲಾಗ- ಇಷ್ಟರವರೆಗೆ ಆರೂ ಮೀರಿದ್ದವೂ ಇಲ್ಲೆ. ನಾಳಂಗೆ ಎಲ್ಲೋರಿಂಗೂ ಉತ್ತರ ಎಂಗೊ ಕೊಡೇಕು. ನಿನ್ನ ಮೂರು ಜೆನ ತಂಗೆಕ್ಕೋಗೆ ಮದುವೆ ಆಯೇಕು. ಎಂಗೊ ನಾಲ್ಕು ಜೆನರ ಎದುರು ತಲೆ ಎತ್ತಿ ನೆಡೇಕು" ಇಷ್ಟು ಹೇಳಬೇಕಾದರೆ ಶಂಕರಮ್ಮನಿಗೆ ಸಾಕಾಯಿತು.

"ಯಾವ ಗಳಿಗೇಲಿ ನಿನ್ನ ಆನು ಹೆತ್ತನೋ? ದೇವರೇ ಅಂಬಗಳೇ ನಿನ್ನ ಕೊರಳು ಹಿಸುಕಿ ಕೊಂದಿದ್ದರೆ ಈ ತಾಪತ್ರಯ ಎಂಗೊಗೆ ಬತ್ತಿತ್ತಿಲ್ಲೆ."

"ಹಾಂಗೆ ಮಾಡೇಕಾತು ಅಬ್ಬೆ. ಎನಗೂ ಈ ಭೂಮಿಲಿ ನರಕ್ಕ ಬಪ್ಪದು ತಪ್ಪುತ್ತಿತ್ತು" ಕಾವೇರಿಯೂ ಅಷ್ಟೇ ಖಾರವಾಗಿ ಹೇಳಿದಳು.

"ನಿನ್ನ ಹತ್ತರ ವಾದಿಸುವ ತ್ರಾಣ ಎನಗೆ ಇಲ್ಲೆ ಮಗಳೆ, ಆ ಮೂರು ಜೆನ ತಂಗೆಕ್ಕಳ ಮೋರೆ ನೋಡಿಯಾದರೂ ಆಲೋಚನೆ ಮಾಡು. ಅವರನ್ನಾದರೂ ಒಂದು ದಾರಿಗೆ ಮುಟ್ಟುಸು. ನಿನ್ನ ಕಾಲು ಬೇಕಾದರೆ ಹಿಡಿತ್ತೆ" ಶಂಕರಮ್ಮನ ಅಸಹಾಯಕತೆ ಎದ್ದು ಕಂಡಿತು.

"ಅಷ್ಟೇ ಅಲ್ಲದೋ. ಅವಕ್ಕೆ ಬೇಕಾಗಿ ಆನು ನಿಂಗೊ ಹೇಳಿದ್ದರ ಕೇಳುತ್ತೆ. ಕೈಂದ ಕಾಜು, ಮೋರೆಂದ ಬೊಟ್ಟು, ಕಳಚುತ್ತೆ ಹೂಗೊ ಮುಡುತ್ತಿಲ್ಲೆ ಆತೊ, ಆದರೆ ತಲೆ ಬೋಳ್ಸಿ ಕೆಂಪು ಒಸ್ತ್ರ ಸುತ್ತುತ್ತಿಲ್ಲೆ."

"ಈಗ ಗೆಂಡ ಸತ್ತ ಕೆಲವು ಕೂಸುಗೊ ತಲೆ ಬೋಳ್ಸುತ್ತವಿಲ್ಲೆ- ನೀನು ಹೇಳಿದಷ್ಟಾದರೂ ಮಾಡು."

"ಇದಾ ಈಗಳೇ ಕಾಜುಗಳ ಕಳಚ್ಚುತ್ತೆ, ಬೊಟ್ಟಿನ ಅಳಶುತ್ತೆ" ಹೇಳಿ ಕಾಜುಕಳುಚ್ಚಿ ಬೊಟ್ಟು ಅಳಿಸಿಬಿಟ್ಟಳು ಕಾವೇರಿ. ಶಂಕರಮ್ಮ ಮಗಳ ಮುಂದೆ ಚಿಕ್ಕವಾದರು. ಕಾವೇರಿಗೆ ಎಲ್ಲವೂ ಅರ್ಥವಾಗಿದೆಯೆಂದೂ, ಎಲ್ಲದಕ್ಕೂ ಸಜ್ಜಾಗಿದ್ದಾಳೆಂದು ಅವರು ಅರ್ಥ ಮಾಡಿಕೊಂಡರು. ಒಂದು ರೀತಿಯಲ್ಲಿ ಅವರು ಸಮಾಧಾನಪಟ್ಟರು. ಕಾವೇರಿ ತಲೆ ಇಲ್ಲದ ಹುಡುಗಿಯಲ್ಲವೆಂಬುದು ಅವರಿಗೆ ಅರ್ಥವಾಯಿತು. ಹೊರಗೆ ಹೋಗಿ ಸಂಕ್ಷಿಪ್ತವಾಗಿ ಗಂಡನಿಗೆ ತಿಳಿಸಿದರು. ಅಡಿಗೆ ಮನೆಗೆ ಹೋಗಿ ಒಂದಿಷ್ಟು ಗಂಜಿ ಬೇಯಿಸಿ, ಉಪ್ಪು, ಉಪ್ಪಿನಕಾಯಿಯಲ್ಲಿ ಎಲ್ಲರೂ ಊಟ ಮುಗಿಸಿದರು. ಕಾವೇರಿಯೂ ಹಂತಿಯಲ್ಲಿ ಕೂತು ಊಟ ಮುಗಿಸಿದಳು.

ಮರುದಿನದಿಂದ ಕಾವೇರಿ ಹಣೆಯಲ್ಲಿ ಬೊಟ್ಟು ಇಲ್ಲದೆ, ಕೈಯಲ್ಲಿ ಕಾಜಿಲ್ಲದೆ, ಜಡೆಯಲ್ಲಿ ಹೂವಿಲ್ಲದೆ, ಬದುಕು ಸಾಗಿಸತೊಡಗಿದಳು.

"ಇಂದು ರಾಮಣ್ಣನ ಬೊಜ್ಜ. ನಿಂಗೊ ಎಲ್ಲೋರು ಬರೇಕಾಡ" ಹೇಳಿ ಆ ಕಡೆಯಿಂದ ವರ್ತಮಾನ ತಂದರು ಗೆಣಪ್ಪ.

"ಅಪ್ಪಾ, ಆನು ಬೊಜ್ಜಕ್ಕೂ ಬತ್ತಿಲ್ಲೆ, ಶಪುಂಡಿಗೂ ಬತ್ತಿಲ್ಲೆ. ನಿಂಗೊ ಬೇಕಾರೆ ಹೋಗಿ" ಹೇಳಿತ್ತು ಕಾವೇರಿ.

"ನೀನು ಬಾರದ್ದೆ ಎಂಗೊ ಎಂತಕೆ ಹೋಯೇಕು?"

"ಅದು ನಿಂಗಳ ಮರ್ಜಿ. ಆನು ಹೋವುತ್ತಿಲ್ಲೆ" ಹೇಳಿತ್ತು ಕಾವೇರಿ.

"ಮಾವ, ಕಾವೇರಿಯ ಬಲವಂತ ಮಾಡೇಡಿ, ಎಷ್ಟಾದರೂ ಸಣ್ಣ ಕೂಸು. ಎಲ್ಲಾ ತಡಕ್ಕೊಂಬ ತ್ರಾಣ ಬೇಡದೊ?" ಗಣಪ್ಪನೇ ಹೇಳಿದ.

"ಅಕ್ಕು ಹೇಳಿ, ಆದರೆ ಎಂಗಳೂ ಬತ್ತಿಲ್ಲೆಯೋ? ಎಲ್ಲಾ ನಿಂಗಳೇ ಮುಂದುವರಿಸಿ. ಆನು ಇನು ಯಾವಗಾದರೂ ಬಪ್ಪೆ."

"ಆತಂಬಗ–ನಿಂಗಳ ಪರಿಸ್ಥಿತಿಯ ಎಲ್ಲೋರೂ ಅರ್ಥ ಮಾಡುಗು–ಹೆಚ್ಚು ಅಭ್ಯಂತರ ಆರದ್ದು ಬಾರ ನೋಡುವೊ" ಹೇಳಿ ಬಂದ ಗಣಪ್ಪ ಹಾಗೆಯೇ ಹೊರಟುಹೋದ. ಅಪ್ಪಣ್ಣಭಟ್ಟರಿಗೂ ಸ್ವಲ್ಪ ಸಮಾಧಾನವಾಯಿತು.

ಮುಂದೊಂದು ದಿನ ಅಪ್ಪಣ್ಣಭಟ್ಟರು, ಮಗಳನ್ನು ಕರೆದುಕೊಂಡು ಬೇಂಕಿಗೆ ಹೋದರು. ಒಂದೆರಡು ಅನುಪತ್ಯಕ್ಕೆ ಹೋದವರಿಗೆ ದಕ್ಷಿಣೆಯಾಗಿ ಸಿಕ್ಕಿದ್ದ 20 ರೂ.ವನ್ನು ಕಾವೇರಿಯ ಹೆಸರಿಗೆ ಹಾಕಿ, ಕೆನರಾ ಬೇಂಕಿನಲ್ಲಿ ಒಂದು ಖಾತೆಯನ್ನೂ ತೆಗೆದರು; ಅಲ್ಲಿಂದ ಪಾಸುಬುಕ್ಕು, ಚೆಕ್ಕು ಬುಕ್ಕು ಹಿಡಿದುಕೊಂಡು ಕಳಿಂಗಳಕ್ಕೆ ಹೋದರು.

"ಬನ್ನಿ ಅಜ್ಜ" ಎಂದೇ ಹಿರಿಯ ಮಗ ಶಂಕರ ಸ್ವಾಗತಿಸಿದ. ಅಪ್ಪಣ್ಣಭಟ್ಟರು ತಾನು ಬಂದ ಉದ್ದೇಶವನ್ನು ತಿಳಿಸಿದರು; ಶಂಕರ ಕೂಡಲೇ ಒಳಗೆ ಹೋಗಿ 8000 ರೂಪಾಯಿ ನಗದು ತಂದು ಅವರ ಕೈಯ್ಯಲ್ಲಿಟ್ಟ.

"ಅಜ್ಜ– ಈ ವರ್ಷದ್ದರ ನಿಂಗೊಗೆ ನಗದಿಯೇ ಕೊಡುತ್ತೆ. ಮುಂದಿನ ವರ್ಷಂದ ಆ ಖಾತೆ ನಂಬರಿಂಗೆ ಬೇಂಕಿಂಗೆ ಕಟ್ಟುತ್ತೆ ಆಗದೋ?"

"ಅಕ್ಕು, ತೊಂದರೆ ಇಲ್ಲೆ" ಹೇಳಿದರು ಅಪ್ಪಣ್ಣ.

"ಹೇಳಿದ ಹಾಂಗೆ ಅಜ್ಜ ಕಿರಿಯಬ್ಬೆಗೆ ಸುತ್ತು ಸಿದ್ದ ಮಂಗಳ ಚೌಳಿ, ಹೇಳಿರೆ ಪಟ್ಟೆ ಸೀರೆ, ರವಕ್ಕೆ, ಉತ್ತರೀಯವನ್ನೂ ನಿಂಗೊ ಆರು ಒಪ್ಪುತ್ತವಿಲ್ಲೆ. ಎಂಗೊಗೆ ಬೇಡ ಆ ಸೀರೆ ರವಕ್ಕೆ. ಅದರ ಅದಕ್ಕೇ ಕೊಟ್ಟಿಕ್ಕಿ ಹೇಳಿದವು. ಹಾಂಗಾಗಿ ಅದರ ನಿಂಗೊ ತೆಕ್ಕೊಂಡು ಹೋಗಿ" ಎಂದು ಗೋಪಾಲ ಚೀಲದಲ್ಲಿ ತುಂಬಿಸಿಟ್ಟ ಬಟ್ಟೆಗಳನ್ನು ಹಾಗೆಯೇ ಎತ್ತಿಕೊಟ್ಟ.

"ಆತು ಅದರ ಆನು ತೆಕ್ಕೊಂಡು ಹೋವುತ್ತೆ. ಆ ನಂಬಗ ಬತ್ತೆ ಮಾಣಿ ಆತೋ" ಹೇಳಿ ಹೊರಟುನಿಂತರು ಅಪ್ಪಣ್ಣ.

"ಆತಂಬಾಗ, ಬನ್ನಿ ಅಂಬಾಗಂಬಾಗ. ಕಿರಿಯಬ್ಬೆ ಹೇಂಗಿದ್ದು?" ಎಂದು ವಿಚಾರಿಸಿಕೊಂಡ ಶಂಕರ.

"ತಕ್ಕಮಟ್ಟಿಂಗೆ ಉಷಾರಿಲ್ಲೆ ಇದ್ದು" ಹೇಳಿಕ್ಕಿ ಅಪ್ಪಣ್ಣ ಮನೆಕಡೆಗೆ ಮುಖ ಮಾಡಿ ನಡೆದರು.

ಅಪ್ಪಣ್ಣ ಮರುದಿನವೇ ಮಗಳ ಖಾತೆಗೆ ಹಣ ಜಮಾ ಮಾಡಿದರು. ರಶೀದಿಯನ್ನು ಪಡೆದು ಕಾವೇರಿಯ ಕೈಗೂ ಕೊಟ್ಟರು.

"ಮಾಣಿಯ ಗುಣ ಒಳ್ಳೇದಿದ್ದು. ಪ್ರೀತಿಲಿ ಮಾತಾಡ್ಸಿದ. ಕಿರಿಯಬ್ಬೆ ಹೇಂಗಿದ್ದು ಹೇಳಿಯೂ ಕೇಳಿದ" ಎಂದರು ಅಪ್ಪಣ್ಣ.

"ಎಂತಾದರೂ ಅಬ್ಬೆಪ್ಪನ ಗುಣ ಮಕ್ಕೊಗೆ ಬಾರದ್ದೆ ಇಕ್ಕೊ. ನಮ್ಮ ಕಾವೇರಿಗೆ ಅಲ್ಲಿ ಇಪ್ಪ ಋಣ ಇತ್ತಿಲ್ಲೆ ಅಷ್ಟೆ" ಹಲುಬಿದರು ಶಂಕರಮ್ಮ.

"ನಿಂಗೊ ಆ ಮುದಿಯಂಗೆ ಕೊಡುವ ಬದಲು ಮಗಂಗೇ ಕೊಡೇಕಾತು. ಅಂಬಾಗ ಎನ್ನ ಋಣ ಸರಿ ಆವುತ್ತಿತ್ತು". ಹೇಳಿದಳು ಕಾವೇರಿ.

ತಂದೆ ತಾಯಿ ಮುಖ ಮುಖ ನೋಡಿಕೊಂಡು ಸುಮ್ಮನಾದರು ಅಷ್ಟೆ.

ಅಪ್ಪಣ್ಣ ಭಟ್ಟರಿಗೆ ಮುಳುಗುವವನಿಗೆ ಹುಲ್ಲುಕಡ್ಡಿ ಆಧಾರವಾದ ಹಾಗಾಯಿತು; ಅವರ ಲೆಕ್ಕಾಚಾರವೂ ಸರಿಯಾಯಿತು. ಕಾವೇರಿಯ ಲಗ್ನವಾಗಿ ಮರುವರ್ಷವೇ ಶಾರದೆಯನ್ನು ಕೇಳಿಕೊಂಡು ಹೈಸ್ಕೂಲ್ ಮಾಸ್ಟರ ಆಗಿದ್ದ ವರನೊಬ್ಬ ಬಂದ. ವಯಸ್ಸೂ ಚಿಕ್ಕದೇ.

"ಹೇಂಗೆ ಮದುವೆ ಮಾಡಿಕೊಡುದೋ"

"ಕೊಡದ್ದೆ ಎಂತ ಮಾಡುತ್ತಿ ಅಪ್ಪ. ಆದಷ್ಟು ಬೇಗ ಮದುವೆ ಮಾಡ್ತಿ. ಕಟ್ಟು ಕಟ್ಟಳೆ ಕರ್ಚು ಮಾಡಿ ಮನೆಯ ಮುಂದೆ ಧಾರೆ ಎರೆದು ಕೊಡುತ್ತೆ ಹೇಳಿ ಒಪ್ಪಿದರೆ ಒಳ್ಳೆದು ಅಲ್ಲದೊ. ಇನ್ನು ಇಬ್ಬರಿಂಗೆ ಆಯೇಕನ್ನೆ"

"ಅದಕ್ಕೆ ಪೈಸೆ ಬೇಡದೊ"

"ನಿಂಗೊ ಚಿಂತೆ ಮಾಡೇಡಿ ಬೇಂಕಿಂದ ಎರಡು ಸಾವಿರ ತೆಕ್ಕೊಳ್ಳಿ ಆನು ಕೈಯ್ಯ ಒಂದು ಜೊತೆ ಚಿನ್ನದ ಬಳೆ ಕೊಡುತ್ತೆ. ಅದರಿಂದ ರಜಾ ಚಿನ್ನವನ್ನು ಮದುವೆಯ ಕರ್ಚನ್ನು ಸುಧಾರ್ಸಿ" ಹೇಳಿತ್ತು ಕಾವೇರಿ. ಮಗಳು ಒಪ್ಪಿದ ಮೇಲೆ ಅಪ್ಪಣ್ಣ ಭಟ್ಟ ಹೆಚ್ಚು ವಿಳಂಬ ಮಾಡಲಿಲ್ಲ. ಒಂದು ಒಳ್ಳೆ ಮುಹೂರ್ತವಿಟ್ಟು ಬಂಧು ಬಳಗದವರಿಗೆ ಆಮಂತ್ರಣ ಕೊಟ್ಟು ಮದುವೆ ಏರ್ಪಾಡು ಮಾಡಿದರು. ಹುಡುಗನ ಕಡೆಯಿಂದ 10 ಜನ ದಿಬ್ಬಾಣದಲ್ಲಿ ಬಂದರು; ಹುಡುಗಿಯ ಸೋದರತ್ತೆ ಗಂಗಮ್ಮನೂ ಅವರ ಮಗಳು ದೇವಕ್ಕಿಯೂ ದಿಬ್ಬಾಣ ಎದುರುಗೊಳ್ಳಲು ಹೋದರು.

"ಕಾವೇರಿ ದಿಬ್ಬಾಣ ಬಪ್ಪಾಗ ನೀನು ಎದುರು ನಿಲ್ಲೇಡ. ಎಲ್ಲಾರು ಒಳಹೋಗಿ ಕೂರು ಆತೊ" ಹೇಳಿದರು ಶಂಕರಮ್ಮ.

"ಕಾವೇರಿಯ ಕಣ್ಣಿನಲ್ಲಿ ನೀರಾಡಿತು, ಮದುವೆಯ ಖರ್ಚಿಗೆ ತನ್ನ ಹಣ, ಒಡವೆ ಅಪಥ್ಯವಾಗಲಿಲ್ಲ. ನಾನು ನೋಡಿದರೆ 'ಅಪಶಕುನ' ಎಂಬುದನ್ನು ತನ್ನ ಹಡೆದ ತಾಯಿಯೇ ಹೇಳಿದ್ದು. ಅವಳ ಮನಸ್ಸಿಗೆ ತುಂಬಾ ನೋವನ್ನು ಕೊಟ್ಟಿತು. ಮದುವೆ ಚತುರ್ಥಿ ಎಲ್ಲವೂ ಒಂದೇ ದಿವಸದಲ್ಲಿ ಮುಗುಶಿ,–ನಾಲ್ಕನೇ ದಿವಸಕ್ಕೆ 'ಸಟ್ಟು ಮುಡಿ' ಇಟ್ಟುಕೊಂಡರು. ಗಂಡಿನ ಮನೆಯಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಮದುಮಗಳಿಗೆ ಸೌಟು ಹಿಡಿದು ಬಡಿಸಲು ಕರಿಸಲಾಗುತ್ತದೆ. ಆ ದಿವಸ ಅವಳು ಮಂಟಪದಲ್ಲಿ ಕುಳಿತ ನಾಲ್ಕೈದು ಬ್ರಾಹ್ಮಣರಿಗೆ ಸೌಟಿನಲ್ಲಿ ಅನ್ನ, ಸಾರು, ಪಾಯಸ ಬಳುಸಬೇಕು. ಕಜ್ಜಾಯ ಬಳುಸಬೇಕು. ಹವೀಕರಲ್ಲಿ ಇದೊಂದು ವಿಶೇಷ ಕಾರ್ಯಕ್ರಮ. ಅಂದಿನಿಂದ ಆ ಹುಡುಗಿ ಆ ಮನೆಯ ಸದಸ್ಯಳಾಗಿಯೇ ಇರುತ್ತಾಳೆ. ಈ ಸಮಾಜದಲ್ಲಿ ಅತ್ತೆ–ಸೊಸೆ–ಇಬ್ಬರೂ ವರದಕ್ಷಿಣ ತಾರದೆ ಬರುವವರಾದ ಕಾರಣ– ಅತ್ತೆಯ ಕಾಟ ಸೊಸೆಗಾಗಲೀ, ಸೊಸೆಯ ಕಾಟ ಅತ್ತೆಗಾಗಲೀ ಇರುವುದಿಲ್ಲ. ಹೆಚ್ಚಿನ ಮನೆಗಳಲ್ಲಿ ಸೊಸೆ ಮಗಳಂತೆ ಇರುತ್ತಾಳೆ. ಒಂದೊಂದೇ ಮನೆಯ ವ್ಯವಹಾರ ಕಲಿತುಕೊಳ್ಳುತ್ತಾಳೆ. ತಾಯಿ ಮನೆಯ ನೆನಪು ಮರುಕಳಿಸಿದರೂ ಕ್ರಮೇಣ ಮರೆತು ಗಂಡನ ಮನೆಯಲ್ಲಿ ಹೊಂದಿಕೊಳ್ಳುತ್ತಾಳೆ. ಶಾರದೆಯೂ ಇದಕ್ಕೆ ಹೊರತಾಗಲಿಲ್ಲ. ಮತ್ತೆ ಮಾವ ಗಂಡನ ಪ್ರೀತಿಯಲ್ಲಿ ತವರನ್ನು ಮರೆಯತೊಡಗಿದಳು. ಮದುವೆಯಾಗಿ ಎರಡು ತಿಂಗಳಿಗೇ ಮೈ ನೆರೆದಳು. ಅವಳ 'ದಿಂಡಿ'ನ ಶಾಸ್ತ್ರವೂ ಮುಗಿಯಿತು. ವರ್ಷದೊಳಗೆ ಬಸರಿಯಾಗಿ ಶ್ರೀಮಂತವೂ ಮುಗಿದು ತಾಯಿ ಮನೆಗೆ ಬಂದಳು ಶಾರದೆ.

ಕಾವೇರಿ ತಂಗಿಯನ್ನು ಕಣ್ಣು ತುಂಬ ನೋಡಿದಳು. ಶಾರದೆ ಮೈ ಕೈ ತುಂಬಿಕೊಂಡು, ಚೆನ್ನಾಗಿ ಕಾಣುತ್ತಿದ್ದಳು. "ಶಾರದೆ ನಿನಗೆ ಎಂತಾರೂ ತಿಂಬ ಆಶೆ ಇದ್ದರೆ ಹುಗ್ಗುಸೇಡ ಹೇಳು. ಮಾಡಿಕೊಡುವೆ" ಹೇಳಿದಳು ಕಾವೇರಿ.

"ಎನಗೆ ಹಲಸಿನ ಹಣ್ಣಿನ ಪಾಯಸ ತಿನ್ನೇಕು ಹೇಳಿ ಇದ್ದು ಅಕ್ಕ" ಹೇಳಿದಳು ಶಾರದೆ.

"ನಾಳಂಗೆ ಮಾಡುವೊ ಆನು ನಾಳಂಗೇ ಹಲಸಿನ ಹಣ್ಣು ತರುಸಿ ಮಡುಗುತ್ತೆ" ಹೆಳ್ಳಿ ಕಾವೇರಿ ಅಪ್ಪನಿಗೆ ಹೇಳಿ ಹಲಸಿನ ಹಣ್ಣು ತರಿಸಿದಳು. ತಾಯಿ ಮಕ್ಕಳು ಸೇರಿ ತೊಳೆ ತೆಗೆದು ಸಣ್ಣ ಹೆಚ್ಚಿ, ಬೆಲ್ಲ, ತೆಂಗಿನಕಾಯಿ ರಸ ಹಾಕಿ ಪಾಯಸವೂ ಮಾಡಿದರು. ಶಾರದೆ ಹೊಟ್ಟೆ ತುಂಬುವಷ್ಟೂ ಕುಡಿದಳು; ತೃಪ್ತಿಯಲ್ಲಿ ತೇಗಿದಳು.

"ಇನ್ನು ನಿನ್ನ ಮಾಣಿಗೆ ಕೆಮಿಸೋರ" ಹೇಳಿದರು ಶಂಕರಮ್ಮ "ಇನ್ನೆಂತಾರೂ ತಿನ್ನೇಕಾರೆ ಕೇಳು ಶಾರದೆ" ಎಂದರು. ಅವಳಮ್ಮ ದಿನಕ್ಕೊಂದರಂತೆ, ಒಂದೊಂದೇ

ತಿಂಡಿಯನ್ನು ಮಾಡಿಕೊಟ್ಟರು. ಇದಕ್ಕೆಲ್ಲಾ ಕಾವೇರಿ ತನ್ನ ಅಶನಾರ್ಥದಿಂದ ಧಾರಾಳ ಕರ್ಚು ಮಾಡಿದಳು. ಮನೆಯಲ್ಲಿಯೂ ಸ್ವಲ್ಪ ಸಂತೋಷ ನೆಮ್ಮದಿ ಕಂಡು ಬಂತು.

ಅವಳ ಗಂಡ ರಘುರಾಮ ಆಗಾಗ ಬಂದು ಹೆಂಡತಿಯನ್ನು ವಿಚಾರ್ಸಿ ಹೋಗುತ್ತಿದ್ದ. ಕೈಯಲ್ಲಿ ಅಷ್ಟಿಷ್ಟು ಕಾಸು, ಮಲ್ಲಿಗೆ ಹೂವು ತಂದುಕೊಡುತ್ತಿದ್ದ. ಇವರೆಲ್ಲರ ಪ್ರೀತಿಯಲ್ಲೇ ಮುಳುಗೆದ್ದ ಶಾರದೆ, ಒಂಭತ್ತನೇ ತಿಂಗಳನ್ನು ದಾಟಿದಳು. ಈವತ್ತೋ ನಾಳೆಯೋ ಹೆರಿಗೆಗೆ ಕಾಯುವ ಸಮಯವೂ ಬಂತು; ಇದ್ದಕ್ಕಿದ್ದ ಹಾಗೆ ಸೊಂಟದಲ್ಲಿ ನೋವು ಕಾಣಿಸಿಕೊಂಡಿತು ಶಾರದೆಗೆ; ಅಮ್ಮನಿಗೆ ಹೇಳಿದಳು. ಅಮ್ಮ ಕಾಳಜೀರಿಗೆ ಕಷಾಯ ಮಾಡಿ ಕುಡಿಸಿದಳು. ಸುಳ್ಳು ನೋವಾದರೆ ಈ ಕಷಾಯದಿಂದ ನೋವು ಕಡಿಮೆಯಾಗುತ್ತದೆ. ನಿಜ ನೋವಾದರೆ ಜಾಸ್ತಿಯಾಗುತ್ತದೆ. ಇದು ನಾಲ್ಕು ಹೆರಿಗೆಯಾದ ಶಂಕರಮ್ಮನ ಅನುಭವ. ಮಗಳಿಗೆ ನೋವು ಶಮನವಾಗಲಿಲ್ಲ, ತಾಸಿಗೊಮ್ಮೆ ಹೊಟ್ಟೆಯಲ್ಲಿ ಸೊಂಟದಲ್ಲಿ ನೋವು ಕಾಣಿಸಿಕೊಂಡಿತು.

"ನಿಂಗೊ ಒಂದಾರಿ ಹಟ್ಟಿಗದ್ದೆಗೆ ಹೋಗಿ ಓಡಾರ್ತಿ ಸಂಕುವ ಬಪ್ಪಲೆ ಹೇಳಿ – ಶಾರದೆಗೆ ಬೇನೆ ಸುರುವಾಯಿದು. ಹೇಳಿ ಗಂಡನಿಗೆ ಸಮಾಚಾರ ಮುಟ್ಟಿಸಿದಳು ಶಂಕರಮ್ಮ. ಮಗಳ ಹೆರಿಗೆಗಾಗಿ ಒಲೆಯಲ್ಲಿ ಬಿಸಿ ನೀರಿಗೆ ಇಟ್ಟಳು. ಇದ್ದಬದ್ದ ಚಿಂದಿ ಬಟ್ಟೆಗಳನ್ನು ಆರಿಸಿ ಇಟ್ಟಳು. ಮಗಳಿಗೆ ಹಚ್ಚಲಿಕ್ಕೆ ಎಂದು ಎಣ್ಣೆ ತಯಾರು ಮಾಡಿಟ್ಟಳು. ಅಷ್ಟರಲ್ಲಿ ಓಡಾರ್ತಿ ಸಂಕಮ್ಮ ಅಪ್ಪಣ್ಣ ಭಟ್ಟರೊಂದಿಗೆ ಬಂದು ಬಿಟ್ಟಳು.

ಆ ಊರಿನಲ್ಲಿ ಹೆರಿಗೆ ಮಾಡಿಸುವುದರಲ್ಲಿ ಓಡಾರ್ತಿ ಸಂಕಮ್ಮ ಎತ್ತಿದ ಕೈ. ಏನೂ ವಿದ್ಯೆ ಇಲ್ಲದಿದ್ದರೂ, ಅವಳ ಅಜ್ಜಿಯೊಟ್ಟಿಗೆ ಹೋಗಿ ಹೋಗಿ 'ಹೆರಿಗೆ' ಮಾಡುವುದನ್ನು ಕರಗತ ಮಾಡಿಕೊಂಡಿದ್ದಳು. ಅವಳ ಅಜ್ಜಿಗೆ ಕಣ್ಣು ಕಾಣದಾದ ಮೇಲೆ ಸಂಕಮ್ಮನೇ ಊರಿನ ಹೆರಿಗೆಗಳನ್ನೇ ಮಾಡಿಸುತ್ತಿದ್ದಳು. ತನ್ನಿಂದ ಆಗುವುದಾದರೆ ಆಗತ್ತದೆಯೆಂದೂ, ಆಗದಿದ್ದರೆ ಆಗುವುದಿಲ್ಲವೆಂದೂ ಖಡಾಖಂಡಿತ ಹೇಳುತ್ತಿದ್ದಳು. ಅವಳ ಈ ಗುಣವೇ ಅವಳನ್ನು ಜನಪ್ರಿಯವಾಗಿ ಮಾಡಿತ್ತು. ಎಂತಹಾ ಬಡವರ ಮನೆಗೆ ಕರೆದರೂ ಹೋಗುತ್ತಿದ್ದಳು. ಕೈಗೆ ಕಾಸೊಂದು ಕೊಡದಿದ್ದರೂ ಬೇಸರವಿಲ್ಲದೆ 'ಹೆರಿಗೆ' ಮಾಡಿಸಿಯೇ ಬರುತ್ತಿದ್ದಳು; ಕೆಲವು ಕಡೆ ಕಡು ಬಡವರಾಗಿದ್ದರೆ ತಾನೇ ಚಾಪುಡಿ, ಬೆಲ್ಲ ತೆಗೆದುಕೊಂಡು ಹೋಗಿ, ಬಿಸಿ ಬಿಸಿ 'ಚಾಯ' ಕುಡಿಸಿದ ಸಂದರ್ಭಗಳೂ ಇಲ್ಲದಿಲ್ಲ, ಕಾಸು ಕೊಡದಿದ್ದರೆ ಯಾಕೆ ಹೋಗುತ್ತಿ ಸಂಕಮ್ಮ ಎಂದು ಯಾರಾದೂ ಕೇಳಿದರೆ ಇದೊಂದು ಪುಣ್ಯದ ಕೆಲಸ ಎಂದು ಮಾಡುತ್ತೇನೆ, ನನ್ನಿಂದ ಇನ್ನೇನು ಸಹಾಯ ಮಾಡಲಿಕ್ಕಾಗುತ್ತದೆ, ಅಷ್ಟಾದರೂ ನನ್ನ ಕೈಯಿಂದ ಮಾಡಲಾಗುತ್ತದಲ್ಲಾ ಎಂದು ಸಂತೋಷವಾಗುತ್ತದೆ. ಹೆರಿಗೆ

ಆದ ಮೇಲೆ ಆ ತಾಯಿ ಮುಖದಲ್ಲಿ ಕಾಣುವ ಕೃತಜ್ಞತೆ, ನೋಡಿ ಸಂತೋಷ ಪಡುತ್ತೇನೆ, ಅದರಿಂದ ತೃಪ್ತಿಯೂ ಪಡುತ್ತೇನೆ ಎನ್ನುತ್ತಾಳೆ ಅವಿದ್ಯಾವಂತೆ ಸಂಕಮ್ಮ.

ಆಸ್ಪತ್ರೆಗಳ ಹೆಸರೆತ್ತಿದರೇ ನಡಗುವ ಬಡ ಕುಟುಂಬಗಳಿಗೆ ಸಂಕಮ್ಮನ ಸೇವೆ ಅಪೂರ್ವವಾದದ್ದು. ಹೆಸರೆತ್ತಿದರೇ–ಮಗು ಅಡ್ಡ ಬಿದ್ದಿದೆ–ಉದ್ದ ಬಿದ್ದಿದೆ, ತಾಯಿಗೆ ಅಪಾಯ ಮಗುವಿಗೆ ಅಪಾಯ ಎಂದು ಬಡವರು, ಶ್ರೀಮಂತರೆಂಬ ಬೇಧಬಾವವಿಲ್ಲದೆ, ದೊಡ್ಡ ದೊಡ್ಡ ಹೆರಿಗೆ ಆಸ್ಪತ್ರೆಗಳ ಶ್ರೀಮಂತ ವೈದ್ಯೆಯರ ಬೆದರು ಮಾತುಗಳಿಂದ ಅಂಜಿಸಿ ಅವರು ಹೇಳಿದಷ್ಟು ಹಣ ಸುರಿದು 'ಆಪರೇಷನ್'ಗೆ ಸಜ್ಜಾಗುತ್ತಿವೆ ಜನ, ರೋಗಿಗಳನ್ನು ಕೊಳ್ಳೆ ಹೊಡೆಯುವ ಈ ವಿದ್ಯಾವಂತ ಮಹಿಳಾ ವೈದ್ಯೆಯರಿಂದ ಸಂಕಮ್ಮನೇ ವಾಸಿ ಅನ್ನುತ್ತಾರೆ ಜನ.

ಅಂತೂ ಸಂಕಮ್ಮ ಬಂದವಳು ಶಾರದೆಯ ಹೊಟ್ಟೆಗೆ ಕೈಯಿಟ್ಟು ನೋಡಿದಳು, ಹೊಕ್ಕುಳಿಗೆ ಎಣ್ಣೆ ಬಿಟ್ಟು ನೀವಿದಳು.

'ಹೆರಿಗೆ ಏನೂ ಕಷ್ಟಕರವಾಗಲಿಕ್ಕಿಲ್ಲ. ಅಕ್ಕಾ – ಇನ್ನೊಂದು ತಾಸಿನಲ್ಲಿ ಹೆರುತ್ತಾಳೆ ಎಂಬುದನ್ನು ತಿಳಿಸಿದಳು. ಶಂಕರಮ್ಮನಿಗೆ ಸಮಾಧಾನವಾಯಿತು. ಸಂಕಮ್ಮ ಇದ್ದದ್ದನ್ನು ಇದ್ದ ಹಾಗೇ ಹೇಳುವವಳು.

"ಅಕ್ಕಾ ನೀವೊಂದು 'ಮುಡಿಪು" ಹರಕೆ ಹೇಳಿ– ಶಾರದೆಯ ಹೆರಿಗೆ ಸುಸೂತ್ರವಾಗಲಿ ಎಂದು ದೇವರ ಮುಂದೆ ದೀಪವೂ ಹಚ್ಚಿಡಿ"

"ಆಯಿತು ಸಂಕಮ್ಮ ಶಾರದೆಯ ಹೆರಿಗೆ ಸರಿಯಾದರೆ ಕಾನದ ದೇವರಿಂಗೆ ಹಣ್ಣುಕಾಯಿ ಒಡೆತ್ತೆ, ಮುಜುಂಗರೆ ಪಾರ್ಥಸಾರಥಿ ದೇವಸ್ಥಾನಕ್ಕೆ ಬಾಣಂತಿ ಹಿಳ್ಳೆಯನ್ನು ಕರಕ್ಕೊಂಡು ಹೋಗಿ, ಪಡಿಯಕ್ಕಿ ಕೊಟ್ಟು, ಉಣ್ಣಿಸಿ ಕರಕ್ಕೊಂಡು ಬತ್ತೆ" ಹೇಳಿ ಹರಕೆಯನ್ನು ಹೊತ್ತುಕೊಂಡರು ಶಂಕರಮ್ಮ.

ಸಂಕಮ್ಮ ಹೇಳಿದಷ್ಟೇ ಸಮಯದಲ್ಲಿ ಮಗುವಿನ 'ಕೆರೇಂ ಕೆರೇಂ' ಸಪ್ಪಳವೂ ಕೇಳಿ ಬಂತು. ಎಲ್ಲರ ಮುಖದಲ್ಲಿಯೂ ಆತಂಕದ ಕಳೆ ಮಾಯವಾಗಿ, ಸಂತಸದ ರೇಖೆ ಮೂಡಿತು.

"ಎಂತ ಮಗು?" ಹೇಳಿ ಶಂಕರಮ್ಮ ಕೇಳಿದಳು.

"ಗಂಡು" ಅಂದಳು ಸಂಕಮ್ಮ. ಶಾರದೆಗೂ ಬೇನೆ ಎಲ್ಲಾ ಮಾಯವಾಯಿತು. ಮಗುವಿನ ಮುಖ ನೋಡಿದ್ದೇ ತಾಯ್ತನದ ಕಳೆ ಮುಖದಲ್ಲಿ ನಲಿದಾಡಿತು. ಅರ್ಧ ಗಂಟೆಯಲ್ಲಿ ಮಗುವಿನ ಸ್ನಾನ, ಮಾಡ್ಸಿ ಮುಗಿಸಿದಳು ಸಂಕಮ್ಮ, ಶಾರದೆಯ 'ಕಸು' ಬಿದ್ದ ಕೂಡಲೇ ಅದನ್ನೆಲ್ಲಾ ತೆಗೆದು ಸ್ವಚ್ಚ ಮಾಡಿದಳು. "ಶಾರದೆಗೇ ಈಗ

ಸ್ನಾನ ಮಾಡಿಸುವುದು ಬೇಡ ಅಕ್ಕ. ಒಂದೆರಡು ಗಂಟೆ ಹಾಗೆಯೇ ಮಲಗಿಕೊಳ್ಳಲಿ, ಎದ್ದು ಓಡಾಡಿದರೆ ಕೆಲವರಿಗೆ ಮೈಯಿಂದ ರಕ್ತ ಭಳಾ ಸೋರುತ್ತದೆ. ಮತ್ತೆ ಸಾಯಂಕಾಲ ಬಂದು ಸ್ನಾನ ಮಾಡಿಸುತ್ತೇನೆ" ಎಂದಳು ಸಂಕಮ್ಮ.

"ಅಯಿತು ಹಾಗೆಯೇ ಮಾಡು; ನೀನು ಸ್ನಾನ ಮಾಡುವುದಿದ್ದರೆ ಮಾಡು ಆಗಲೇ ಕೊಟ್ಟಿಗೆಯಲ್ಲಿ ಬಿಸಿ ನೀರು ಕಾಯಿಸಿ ಇಟ್ಟಿದ್ದೇನೆ" ಎಂದರು ಶಂಕರಮ್ಮ.

"ನಾನು ಮಿಂದು ಬರುತ್ತೇನೆ. ಶಾರದೆಯ ಹಳೇ ಸೀರೆ ಇದ್ದರೆ ಒಂದು ಬಿಸಾಕಿ" ಎಂದಳು; ಕೊಡುತ್ತೇನೆ ಎಂದು ತನ್ನ ಹಳೆ ಸೀರೆಯೊಂದನ್ನು ಕೊಟ್ಟರು ಶಂಕರಮ್ಮ. ಸಂಕಮ್ಮ ಸ್ನಾನ ಮುಗಿಸಿ ಬಂದು ಶಂಕರಮ್ಮ ಮಾಡಿಟ್ಟ ಬಿಸಿ ಬಿಸಿ ಚಹಾ ಕುಡಿದಳು. ಮೇಲಿಷ್ಟು ಎಲೆ ಅಡಿಕೆ ಹಾಕಿಕೊಂಡಳು;

"ನಾನು ಶಾರದೆಯ ಬಟ್ಟೆಬರೆ ಎಲ್ಲಾ ಒಗೆದು ಆರಿಸಿದ್ದೇನೆ. ಸಾಯಂಕಾಲ ಬಂದು ಅವಳಿಗೆ ನೀರು ಹಾಕುತ್ತೇನೆ. ಹೇಳಿದ ಹಾಗೆ ಹೊಸ ಮಡಿಕೆ ಇದ್ದರೆ ಕೊಡಿ – ಅದರಲ್ಲಿ 'ಕಸು' ಹಾಕಿ ತೆಂಗಿನ ಮರದಡಿ ಹೂಳಿ ಮನೆಗೆ ಹೋಗುತ್ತೇನೆ"

"ಇಗೋ ಒಂದು ಮಡಿಕೆ ಇದೆ" ಎಂದು ತಂದುಕೊಟ್ಟರು ಶಂಕರಮ್ಮ– ಅದರಲ್ಲಿ 'ಕಸು'ವನ್ನು ಹಾಕಿ, ಮರದ ಬುಡದಲ್ಲಿ ಹುಗಿದು ಹೋದಳು ಸಂಕಮ್ಮ.

ಆ ದಿನವೇ ಅಳಿಯನ ಮನೆಗೆ ಸಕ್ಕರೆ ಕಾಯಿ ತೆಗೆದುಕೊಂಡು ಹೋದರು ಅಪ್ಪಣ್ಣಭಟ್ಟರು. ಅವರ ಮುಖ ನೋಡಿದ್ದೇ ಮನೆಯವರಿಗೆಲ್ಲಾ ಕಾತುರ,– ಅಪ್ಪಣ್ಣ ಭಟ್ಟರ ಮುಂದೆ ಹರಿವಾಣ ತಂದಿಟ್ಟರು – ಅದರಲ್ಲಿ ಸಕ್ಕರೆ, ತೆಂಗಿನಕಾಯಿ ಕಂಡು ಎಲ್ಲೋರಿಂಗೂ ಸಂತೋಷವಾಯಿತು. ಹುಟ್ಟಿದ್ದು 'ಗಂಡು' ಮಗುವೆಂದು ತಿಳಿಯಿತು."

"ಶಾರದೆ ಇಂದು ಉದಿಯಪ್ಪಾಗ ಐದು ಗಂಟೆ ಆರು ನಿಮಿಷಕ್ಕೆ ಹೆತ್ತದು" ಹೇಳಿದರು ಅಪ್ಪಣ್ಣ ಭಟ್ಟರು.

"ಹೆರಿಗೆ ಕಷ್ಟ ಆಯಿದಿಲ್ಲೆನ್ನೆ, ಕೂಸೂ ಬಾಣಂತಿಯು ಸೌಖ್ಯಲ್ಲಿ ಇದ್ದವನ್ನೆ"

"ಏನೂ ತೊಂದರೆ ಆಯಿದಿಲ್ಲೆ. ಇಬ್ರೂ ಸೌಖ್ಯಲ್ಲಿದ್ದವು"

"ಮಾವ, ನಿಂಗೊ ಶಾರದೆಗೆ ಮಗುವಿಂಗೆ ಎಂತಾದರೂ ಮದ್ದು ಬೇಕಾದರೆ ತರುಸಿ ಕೊಟ್ಟಿಕ್ಕಿ ಆತೊ" ಎಂದು ರಘುರಾಮ ಮಾವನ ಹತ್ತಿರ ನೂರು ರೂಪಾಯಿ ತಂದುಕೊಟ್ಟ.

"ದಶಮೂಲ ಅರಿಷ್ಟ ಸೌಭಾಗ್ಯ ಶುಂಠಿ ತರುಸಿ ಕೊಡಿ" ಬಾಣಂತಿಯಕ್ಕೊಗೆ ಒಳ್ಳೆದು" ಹೆಳ್ಳಿ ಎಂದು ರಘುರಾಮನ ಅಬ್ಬೆ ಶಂಕರಿ ಹೇಳಿತ್ತು. ಅವರಿಗೆ ರಘುರಾಮ ಒಬ್ಬನೇ ಮಗ. ಹುಡುಗಿ ಶ್ರೀ ಗೌರಿಯನ್ನು ಕೊಟ್ಟಾಗಿದೆ.

"ಆತಕ್ಕ– ಮದ್ದುಗಳ ತಂದು ಕುಡುಶುತ್ತೆ 'ಶುದ್ಧ' ಗುರುವಾರ ಆವುತ್ತು ಅಂದು ನಿಂಗೊ ಎಲ್ಲಾ ಬತ್ತಿರನ್ನೆ"

"ಆತು, ಇನ್ನೊಂದಾರಿ ನಿಂಗೊ ಇಷ್ಟು ದೂರ ನೆಡಕ್ಕಂಡು ಬರೇಡಿ. ಎಂಗಳೆ ಬಪ್ಪೆಯೊ ಆತೊ" ಹೇಳಿದರು ಗಂಡ ಹೆಂಡತಿ ಇಬ್ಬರೂ. ರಘುರಾಮನ ತಂದೆ ಕೇಶವಣ್ಣ ಆ ದಿನ ಮನೆಯಲ್ಲಿಯೇ ಇದ್ದರು. ಪೋಸ್ಟ್ ಆಫೀಸಿನಲ್ಲಿ ಪೋಸ್ಟ್ ಮಾಸ್ತರರಾಗಿ ಕೆಲಸ ಮಾಡುತ್ತಾರೆ.

ಶುದ್ಧದ ದಿವಸ ಶಾರದೆಯ ಗಂಡನ ಮನೆಯಿಂದ ಗಂಡ ಮಾವ ಅತ್ತೆ ಬಂದರು; ಶಂಕರಮ್ಮನ ತಮ್ಮ ಗೋವಿಂದ; ಅವನ ಹೆಂಡತಿ ಗೌರಿಯೂ ಬಂದರು. ಮೊದಲು ಗೋವಿಂದ ಸ್ನಾನ ಮಾಡಿ ಮನೆಗೆ ಪಂಚಗವ್ಯ ಪ್ರೋಕ್ಷಣೆ ಮಾಡಿ ಬಾವಿಗೆ ಪ್ರೋಕ್ಷಿಸಿದ. ಆಮೇಲೆ ಬಾಣಂತಿ ಮಗು, ಮನೆಯವರೆಲ್ಲಾ ಸ್ನಾನ ಮಾಡಿದ್ದರು. ಶುದ್ಧ ಮಾಡಲಿಕ್ಕೆಂದೇ ಕುಲಪುರೋಹಿತರಾದ ಶಂಕರ ಭಟ್ಟರು ಬಂದರು – ಮಂತ್ರ ಹೇಳುತ್ತ ರಘುರಾಮ ಶಾರದೆ ಶಿಶುವಿನ ಮೇಲೆ ದರ್ಭೆ ಕುಚ್ಚಿನಿಂದ ಪಂಚಗವ್ಯ ನೀರನ್ನು ಚುಮುಕಿಸಿದರು.

"ಕಾವೇರಿ ನೀನು ಅತ್ತಿತ್ತೆ ಹೆಚ್ಚು ಓಡಾಡಬೇಡ, ಅಡಿಗೆ ಕಡದು ಕೊಡುದೋ, ತರಕಾರಿ ಹಚ್ಚಿ ಕೊಡುದೋ ಮಾಡು ಆತೋ" ಹೇಳಿದರು ಶಂಕರಮ್ಮ ಸೂಕ್ಷ್ಮವಾಗಿ.

"ಆತಬ್ಬೆ, ಆನು ಎಲ್ಲಿಗೂ ಬತ್ತಿಲ್ಲೆ. ಹೆದರೇಡ" ಹೇಳಿದಳು ಕಾವೇರಿ. ತಾಯಿಯ ಇಂಗಿತ ಏನು ಎಂಬುದನ್ನು ಆಗಲೇ ಅರ್ಥ ಮಾಡಿಕೊಂಡಿದ್ದಳು ಕಾವೇರಿ. 'ಪುಣ್ಯಾರ್ಚನೆ ಕಳುದ ಮೇಲೆ ಎಲ್ಲರ ಊಟ ಹಂತಿಗೆ ಕಾವೇರಿ ಬಂದಿರಲಿಲ್ಲ.

"ನಿಂಗಳ ಮಗಳು ಕಾವೇರಿ ಮನೇಲಿ ಇಲ್ಲೆಯೋ" ಎಂದು ರಘುರಾಮನ ತಾಯಿ ವಿಚಾರಿಸಿದರು.

"ಇದ್ದು ಅದು ಜೆಂಬಾರಪ್ಪಾಗ ಎಲ್ಲಿಯೂ ಹೆರಬತ್ತಿಲ್ಲೆ" ಹೇಳಿದರು ಶಂಕರಮ್ಮ.

"ಅಯ್ಯೋ ಪಾಪವೇ ಇಷ್ಟು ಸಣ್ಣ ವಯಸ್ಸಿಂಗೇ ಗೆಂಡ ಸತ್ತು ಮೂಲೆ ಸೇರಿತ್ತು ಹೇಳಿ ಕೇಳಿಯೇ ಎನಗೆ ಸಂಕಟ ಆತು" ಎಂದರು ರಘುರಾಮನ ತಾಯಿ.

"ಎಂತ ಮಾಡುದು ಅತ್ತಿಗೆ? ಅದು ಭೂಮಿಲಿ ಪಡಕ್ಕೊಂಡು ಬಂದದೇ ಅಷ್ಟು"

"ಅವ ಸತ್ತವ ಹೋದ, ಪುಣ್ಯಾದಿಗ – ಆದರೆ ಇದರ ಸಂಕಟವ ನೋಡುದು ಆರು? ಎಂಥಾ ವೈರಿಗೋಕೂ ಈ ಸ್ಥಿತಿ ಬಪ್ಪಲಾಗ" ಹೇಳಿ ಕಣ್ಣು ಒರೆಸಿದಳು ರಘುರಾಮನ ತಾಯಿ.

ಶಂಕರಮ್ಮನಿಗೂ ಸಂಕಟವಾಗದಿಲ್ಲ. ಕಾವೇರಿಯೂ ಹಡೆದಿದ್ದರೆ ಇನ್ನೊಂದು ಮಗು ಮನೆ ತುಂಬಾ ಓಡಾಡುತ್ತಿತ್ತು; ಅವಳೂ ಮನೆಯಲ್ಲಿ ಉತ್ಸಾಹದ ಬುಗರಿಯಾಗುತ್ತಿದ್ದಳು ಎಂಬ ಕೊರಗು ಅವರನ್ನೂ ಕಾಡುತ್ತಿತ್ತು. ಆದರೆ ಸಮಾಜದಲ್ಲಿ ವಿಧವೆಯ ಸ್ಥಾನವೇ ಬೇರೆ. ಎಲ್ಲಿ ಬೀಗರು 'ಅಪಶಕುನ'ವೆಂದು ಹೀಗಳೆಯುತ್ತಾರೋ ಎಂಬ ಭಯದಿಂದ, ಮಗಳನ್ನು ಹೊರಬಾರದಂತೆ ನೋಡಿಕೊಂಡಾರು ಅಷ್ಟೇ;

ಅಂತೂ 'ಪುಣ್ಯಾರ್ಚನೆ'ಗೆ ಬಂದವರು ಅಂದೇ ಸಾಯಂಕಾಲ ಊರಿಗೆ ಹೋದರು, ಬಂದವರು ಮಗುವಿನ ಕೈಯಲ್ಲಿ ಎರಡೋ ಐದೋ ಕೊಟ್ಟು ಹೋದರು. ಶಾರದೆ ಅದನ್ನೆಲ್ಲಾ ಒಟ್ಟು ಮಾಡಿದಾಗ ಹದಿನೈದು ರೂಪಾಯಿಗಳಾಯಿತು. "ಇದಾ ಅಬ್ಬೆ, ಇದರ ಮಾಣಿಗೊಂದು 'ಗೋಪು' ಮಾಡ್ಸಿ ಹಾಕು. ಮೇಲೆ ಎಷ್ಟಾವುತ್ತೋ ಅದರ ಆನು ಕೊಡುತ್ತೆ" ಎಂದು ಹಣವನ್ನು ತಾಯಿಯ ಕೈಯಲ್ಲಿ ಕೊಟ್ಟಳು ಶಾರದೆ"

ಎಲ್ಲರೂ ಹೋದ ಮೇಲೆ ಕಾವೇರಿ ಅಡಿಗೆ ಮನೆಯಿಂದ ಹೊರಗೆ ಬಂದಳು ಅವಳು ಅಲ್ಲಿಯೇ ಊಟ ಮುಗಿಸಿದ್ದಳು.

"ಅಬ್ಬೆಗೆ ಎನ್ನಂದಾಗಿ ಎಂತದೂ ಅಪಚಾರ ಆಯದಿಲ್ಲೆನ್ನೆ" ಎಂದೊಮ್ಮೆ ಕುಕ್ಕಲು ಮರೆಯಲಿಲ್ಲ ಕಾವೇರಿ.

"ಕಾವೇರಿ ನೀನೆನ್ನ ಹೀಂಗೆ ಕುತ್ತಿ ಕುತ್ತಿ ಕೊಲ್ಲೇಡ! ಆನೆಂತ ಮಾಡೇಕು ಹೇಳು. ನಾವು ಬಡವರು ಶ್ರೀಮಂತರಲ್ಲ. ಹೆಚ್ಚು ಕಾನೂನು ಕಟ್ಟೆ ಇಪ್ಪದು ಬಡವರಿಂಗೆ, ಶ್ರೀಮಂತಂಗೊಳ ಕೆಣಕ್ಕಲೆ ಹೆಚ್ಚಿನವು ಬಾರವು, ಬಂದರೂ ಅವು ಗಣ್ಯ ಮಾಡವು. ನವಗೆ ಊರು ಬಿಟ್ಟು ಹೋಪಲೆಡಿಯನ್ನೆ. ಇಲ್ಲೆ ಬದುಕಿ ಬಾಳೇಕನ್ನೆ" ಹೇಳಿ ತನ್ನ ಅಸಹಾಯಕತೆಯನ್ನು ವಿವರಿಸಿದರು.

“ಆತಬ್ಬೆ, ಎನ್ನಂದಾಗಿ ನಿನಗೂ ಅಪ್ಪಂಗೂ ತೊಂದರೆ ಆಗದ ಹಾಂಗೆ ಆನು ನೋಡ್ಯೆಳ್ತೆ ಚಿಂತೆ ಮಾಡೇಡ. ಒಂದಾರಿ ತಂಗೆಕ್ಕಳ ಮದುವೆ ಎಲ್ಲಾ ಮುಗಿಯಲಿ” ಹೇಳಿದಳು ಕಾವೇರಿ. ಕಾವೇರಿಗೆ ತನ್ನ ಜಾಗವೆಲ್ಲಿ ಎಂದು ಸೂಕ್ಷ್ಮವಾಗಿ ಅರ್ಥವಾಗಿತ್ತು. ಆ ಪರಿಧಿಯೊಳಗೇ ಇದ್ದುಕೊಂಡಳು. ಶಾರದೆಯ ಮಗುವನ್ನು ಎತ್ತಿಕೊಳ್ಳುವುದಾಗಲೀ ಮುದ್ದಾಡುವುದಾಗಲೀ ಮಾಡಲಿಲ್ಲ. ದೂರದಲ್ಲಿಯೇ ಉಳಿದುಕೊಂಡಳು. ಶಾರದೆ ಎರಡು ತಿಂಗಳು ಬಾಣಂತನ ಮುಗುಸಿ ಗಂಡನ ಮನೆಗೆ ಹೊರಟು ನಿಂತಳು. “ಅಬ್ಬೆ– ಮಾಣಿಯ ಕೊರಳಿಂಗೆ ಒಂದು ಪವನದ ಚೈನು ಮಾಡ್ಸಿ ಹಾಕು. ಅದಕ್ಕೆ ಎನ್ನ ಚಕ್ರಸರದ ಒಂದೆಳೆ ತೆಗೆಯಲಿ; ಹಾಂಗೇ ಕಳುಸುದು ಬೇಡ” ಎಂದಳು ಕಾವೇರಿ.

“ನಿನ್ನ ಚಿನ್ನವನ್ನೇ ಕರಗಿಸಿದರೆ ಹೇಂಗೆ ಮಗಳೇ ನಿನಗೊಂದು ಆಧಾರವಾಗಲಿ ಹೇಳಿ ಅಲ್ಲದೋ ಅದರೆಲ್ಲಾ ನಿನಗೆ ಕೊಟ್ಟದು.”

“ಎನಗೆ ಅದೆಲ್ಲಾ ಎಂತದೂ ಬೇಡ ಅಬ್ಬೆ – ಅದರೆಲ್ಲಾ ತಂಗೆಕ್ಕೊ ಕೊಟ್ಟರಾತು ಹೇಳಿಯೇ ಆನು ಮನಸ್ಸಿಲ್ಲಿ ಗ್ರೇಶಿದ್ದೆ. ಎನಗೆ ಕೈಗೆ ಎರಡು ಬಳೆ ಇದ್ದರೆ ಸಾಕು. ಎಲ್ಲಾ ಶೃಂಗಾರ ಮುಗುತ್ತು ಎನ್ನದು” ಹೇಳಿದಳು ಕಾವೇರಿ. ಮಗಳ ಸ್ಥಿತಿಗೆ ಶಂಕರಮ್ಮ ಮರುಗದಿರಲಿಲ್ಲ.

‘ಆತಂಬಾಗ ನೀನು ಹೇಳುವ ಹಾಂಗೆ ಮಾಣಿಗೆ ಒಂದು ಪವನಿನ ಚೈನು ಮಾಡ್ಸಿ ಕೊಡುತ್ತೆ” ಎಂದು ಅಂದೇ ಕೇಶಪ್ಪ ಆಚಾರಿ ಬಳಿಗೆ ಹೋಗಿ ಚಕ್ರಸರ ಮುರುಸಿ ರೇಡಿಯೋ ಚೈನು ಎಂಬ ಡಿಸೈನ್ ಮಾಡಲು ಕೊಟ್ಟರು. ಮೂರೇ ದಿವಸದಲ್ಲಿ ಫಳಫಳ ಹೊಳೆಯುವ ಚೈನು ತಯಾರಾಯಿತು. ಅದನ್ನು ಮಗನ ಕುತ್ತಿಗೆಗೆ ಹಾಕಿ, ಸೊಂಟಕ್ಕೆ ಬೆಳ್ಳಿಯ ಗೋಪು ಹಾಕಿ ತಾಯಿಗೆ, ತಂದೆಗೆ ನಮಸ್ಕರಿಸಿದಳು ಶಾರದೆ. “ಅಬ್ಬೆ ಅಕ್ಕ ಎಲ್ಲಿದ್ದು. ಅದಕ್ಕೂ ಒಂದು ಹೊಡಾಡಿಕ್ಕಿಯೇ ಹೋವುತ್ತೆ. ಅದು ಒಂದಾರಿಯೂ ಇತ್ತೆ ಬಯಿಂದಿಲ್ಲೆ” ಶಾರದೆಯ ಕಣ್ಣಾಲಿ ತುಂಬಿತ್ತು.

“ಅಕ್ಕ, ಎನ್ನ ಮದುವೆ ಮಾಡ್ಸಿದ್ದು” ಎಂಗೊಗೆ ಬೇಕಾಗಿ ಅದರ ಬದುಕನ್ನೇ ಬಲಿ ಕೊಟ್ಟತ್ತು. ಅದಕ್ಕೆ ಮಾಂತ್ರ ಎಂತದೂ ಇಲ್ಲದ್ದಾತು” ರೋಧಿಸಿದಳು ಶಾರದೆ.

“ನೀನು ಕೊಗ್ರ್ಯೊಂಡು ಹೋಗೇಡ ಶಾರದೆ. ಮಾಣಿಯ ಕರಕ್ಕೊಂಡು ಸಂತೋಷಲ್ಲಿಯೇ ಹೋಗು. ನಿನ್ನ ಗಂಡನ ಮನೆಗೆ” ಹೇಳಿದರು ಶಂಕರಮ್ಮ

“ಇಲ್ಲೆಬ್ಬೆ ಆನು ಅಕ್ಕನ ಕಾಲು ಹಿಡುದಿಕ್ಕಿಯೇ ಹೋಪದು. ಎನಗೆ ಎಂತಾದರೂ ಆಗಲಿ” ಅಕ್ಕಾ, ಅಕ್ಕಾ ಹೇಳಿ ಒಳಹೋಗಿ ಅಕ್ಕನನ್ನು ಹುಡುಕಿದಳು

ಶಾರದೆ. ಕಾವೇರಿ ಅಡಿಗೆ ಮನೆಯಲ್ಲಿ ಒಲೆಯ ಮುಂದೆ ಕುಳಿತು, ಸೌದೆ ದಬ್ಬುತ್ತಿದ್ದಳು ಒಲೆಯಲ್ಲಿ ಅನ್ನಕ್ಕೆ ಇಟ್ಟಿದ್ದಳು.

"ಆನು ಹೋಯ್ಕೊಂಡು ಬತ್ತೆ ಅಕ್ಕ. ಎನಗೆ ಆಶೀರ್ವಾಧ ಕೊಡು" ಎಂದು ಅಕ್ಕನನ್ನೊಮ್ಮೆ ಬಿಗಿದಪ್ಪಿದಳು ಶಾರದೆ. ಕಾವೇರಿಗೂ ದುಃಖ ಉಮ್ಮಳಿಸಿ ಬಂತು. ತಂಗಿಯನ್ನು ಸಾಂತ್ವನ ಮಾಡಿದಳು.

"ಕೂಗೇಡ ಶಾರದೆ. ನೀನು ಸುಖಲ್ಲಿ ಬದುಕ್ಕು. ಎನ್ನ ಆಶೀರ್ವಾದ ನಿನಗೆ ಎಂದೂ ಇದ್ದು."

"ನಿನ್ನ ನೆರಳಿಂದಾಗಿಯೇ ಎನಗೆ ಬಾಳು ಸಿಕ್ಕಿದ್ದು ಹೇಳುದರ ಆನು ಮರೆಯೆ ಕಾವೇರಕ್ಕಾ" - ಇಲ್ಲದಿದ್ದರೂ ಆನೂ ಇನ್ನೊಂದು ತೊಂಡನನ್ನೋ ಕುರುಡನನ್ನೋ - ಕುಂಟನನ್ನೋ ಕೈ ಹಿಡಿಯೇ ಕಾವುತ್ತಿತ್ತು. ನಿನ್ನಿಂದಾಗಿಯೇ ಎಂಗಳ ಬದುಕ್ಕು ಒಳ್ಳೆದಾದ್ದು. ಅಬ್ಬೆ ಅಪ್ಪಂಗೆ ಏವ ತ್ರಾಣವೂ ಇಲ್ಲೆ" ಹೇಳಿದಳು ಶಾರದೆ.

"ಶಾರದೆ ನವಗೆ ಬೇರೆಂತ ದಾರಿ ಇದ್ದು ಹೇಳು? ನಿಂಗೊ ಆದರೂ ಸುಖಲ್ಲಿರಿ. ಅದೇ ಎನಗೆ ಸಂತೋಷ. ನಿಂಗೊಗೆ ಬೇಕಾಗಿ ಆನೆಂತಾ ಬೇಕಾದರೂ ಮಾಡುವೆ, ಎನ್ನ ಬದುಕ್ಕು ಹೋದರೆ ಹೋಗಲಿ ಚಿಂತೆ ಮಾಡೇಡ. ನೀನು ಸುಖವಾಗಿ ಗೆಂಡನ ಮನೇಲಿ ಸಂಸಾರ ಮಾಡು. ಅಬ್ಬೆ ಅಪ್ಪನ ಹೆಸರು ಹೇಳ್ತುವ ಹಾಂಗೆ ಮಾಡೇಡ"

"ಇಲ್ಲೆ ಅಕ್ಕಾ- ಆನು ಅಲ್ಲಿ ಮರ್ಯಾದೆಲಿ ಬದುಕುತ್ತೆ- ಗೆಂಡ ಅತ್ತೆ ಮಾವ ಹೇಳಿದ ಹಾಂಗೆ ಕೇಳಿಗೊಂಡು ಒಳ್ಳೆ ಸೊಸೆ ಹೇಳ್ಸಗೊಂಡು ಹೆತ್ತ ಮನೆಗೆ ಹೆಸರು ತತ್ತೆ. ನಿನ್ನ ಆಶೀರ್ವಾದ ಎನಗೆ ಸದಾ ಇರ್ಲಿ" ಎಂದು ಅಕ್ಕನ ಎರಡೂ ಕಾಲು ಮುಟ್ಟಿ ನಮಸ್ಕಾರ ಮಾಡಿದಳು ಶಾರದೆ. ಅವಳದ್ದು ಬರೀ ಮಾತಾಗಿರದ್ದೆ ಅಂತಃಕರಣದಿಂದ ಬಂದ ಶಬ್ದಗಳೆಂದು ಅರ್ಥ ಮಾಡಿಕೊಂಡಳು ಕಾವೇರಿ.

ಶಾರದೆ ಹಡೆದೆದ್ದು ಹೋದ ಮೇಲೆ ಒಂದು ದಿವಸ ಶಂಕರಮ್ಮ ಗಂಡನಿಗೆ ಪೀಠಿಕೆ ಹಾಕಿದರು.

"ಇನ್ನು ಮೆಲ್ಲಾಂಗೆ ಸರಸ್ವತಿಯ ದಾಂಟುಸಲೆ ನೋಡಿ ಶಾರದೇಂದ ಎರಡು ವರ್ಷಕ್ಕೆ ಸಣ್ಣ ಅಷ್ಟೆ. ಅದಕ್ಕು ವರ್ಷ ಹದಿಮೂರು ಕಳಿಗಿನ್ನು"

"ಆತು ನೋಡುವೊ ನೀನು ಹೇಳುವಾಗ ನೆಂಪಾತು. ಶಂಭು ಮನಗೆ ಮನ್ನೆ ಆರೋ ಸಾಗರದ ಕಡೆಯವಡಾ. ಕೊಡುವ ಕೂಸುಗೊ ಇದ್ದವೋ ಹೇಳಿ

ಕೇಳ್ಕೊಂಡು ಬಯಿಂದವಡಾ" ಅವನ ಮಗಳು ಮಾಲತಿಯ ಕೊಡುದೋ ಹೇಳಿ ಅವಂಗಿಪ್ಪದು ಅದೊಂದು ಕೂಸು ಮಾಂತ್ರ. ಬೇರೆ ಮಕ್ಕೊ ಇಲ್ಲೆ ಆನು ಅಷ್ಟು ದೂರಕ್ಕೆ ಮಗಳ ಕೊಡುತ್ತಿಲ್ಲೆ ಹೇಳಿದಾಡ"

"ಅವೀಗ ಎಲ್ಲಿದ್ದವು ವಿಚಾರಿಸಿ ನಾವು ಕೊಡುವೊ-ಅವು ಬಡವರ ಮನೇಂದಲೂ ಕೂಸುಗಳ ತೆಕ್ಕೊಂಡು ಹೋವುತ್ತವು. ಇದೊಂದರ ದಾಂಟಿಸಿದರೆ ಮತ್ತೆ ಉಳುದ್ದು ನೇವಕ್ಕಿ ಮಾಂತ್ರ - ಇನ್ನೊಂದೆರಡು ವರ್ಷ ಕಳುದ ಮೇಲೆ ಕೊಟ್ಟರೂ ಸಾಕು" ಈ ಸಂವಾದಗಳು ಕಳೆದ ಮರು ದಿವಸವೇ ಅಪ್ಪಣ್ಣಭಟ್ಟರು ಸಾಗರದ ಕುಳ ಎಲ್ಲಿದೆ ಎಂದು ವಿಚಾರಿಸಿ, ಅವರಲ್ಲಿದ್ದವರಿಗೆ ಹೋಗಿ, ತನ್ನ ಮಗಳೊಬ್ಬಳು ವಿವಾಹವಾಗಲಿಕ್ಕಿದ್ದಾಳೆಂದು ತಾವು ಮನೆಗೆ ಬಂದು ಕನ್ಯೆಯನ್ನು ನೋಡಿ ಹೋಗಬೇಕೆಂದೂ ಬೇಡಿಕೊಂಡರು.

"ಕೂಸಿನ ನೋಡ್ಳೆ, ದಿನ ಮೂರ್ತ ಬೇಡನ್ನ-ಎಂಗೋ ಈಗಳೇ ನಿಂಗಳ ಒಟ್ಟಿಂಗೆ ನೋಡುವ ಶಾಸ್ತ್ರ ಮಾಡುತ್ತೆಯೊ ಅಕ್ಕರೆ ಮಾಣಿಯಿಕರಕ್ಕೊಂಡು ಬತ್ತೆಯೊ" ಹೇಳಿ ಕೂಡಲೇ ಅಪ್ಪಣ್ಣ ಭಟ್ಟರೊಡನೆ ಹೊರಟು ನಿಂತರು. "ಆತು ಬನ್ನಿ" ಎಂದು ಭಟ್ಟರು ಮನೆಗೆ ಕರೆದುಕೊಂಡೇ ಬಂದರು. ಅವರು ಮನೆಗೆ ಬರುವುದಕ್ಕೂ ಸರಸ್ವತಿ ಕೊಡ ತುಂಬಿ ನೀರು ತರುವುದಕ್ಕೂ ಸರಿ ಹೋಯಿತು. ಬಂದವರು ಅವಳನ್ನು ಎವೆ ಇಕ್ಕದೆ ನೋಡಿದರು. ನಿತ್ಯ ಉಡುಪಿನಲ್ಲಿದ್ದರೂ ಸರಸ್ವತಿ ಲಕ್ಷಣವಾಗಿಯೇ ಇದ್ದಾಳೆ ಎಂದುಕೊಂಡರು.

"ರಜಾ ಕಾಲು ತೊಳವ ನೀರು ಕೊಡು ಮಗಳೇ" ಎಂದರು ಭಟ್ಟರು.

"ಹಾಂಗೇ ಚಾವಡಿಗೆ ಹಸೆ ಹಾಕಿ ಕುಡಿವಲೆ ಬೆಲ್ಲ-ನೀರು ಮಡುಗು" ಹೇಳಿದರು, ಸರಸ್ವತಿ ಎಲ್ಲವನ್ನೂ ಸಿದ್ಧ ಮಾಡಿದಳು.

ಭಟ್ಟರು ಒಳಗೆ ಹೋಗಿ ಹೆಂಡತಿಗೆ ಸಮಾಚಾರವನ್ನು ತಿಳಿಸಿ, ಹೊರಗೆ ಕರೆದುಕೊಂಡು ಬಂದರು. ಬಂದವರಿಗೆ ನಮಸ್ಕರಿಸಿದರು ಶಂಕರಮ್ಮ. "ಎಂಗೊ ನಿಂಗಳ ಕೂಸಿನ ನೋಡ್ಳೆ ಬಂದವು. ಸಾಗರದ ಕಡೆಯವು".

"ನಿಂಗೊ ಕೂಸಿನ ಹುಡುಕ್ಕುತ್ತಿ ಹೇಳುವ ಸಮಾಚಾರ ಎಂಗೊಗೆ ಗೊಂತಾಯಿದು, ಹಾಂಗಾಗಿ ಆನೇ ಇವರ ನಿಂಗಳಲ್ಲಿಗೆ ಕಳುಸಿದ್ದು. ಎಂಗೊಗೆ ಇಪ್ಪದು ನಾಲ್ಕು ಕೂಸುಗೊ ಮಾಂತ್ರ"

"ಆರೋ ಹೇಳಿದವು ಹಾಂಗೆ. ನಿಂಗೊ ದಿನಿಗೇಳದಿದ್ದರೂ ಎಂಗೊ ಇಲ್ಲಿಗೆ ಬರೇಕು ಹೇಳಿ ಆಲೋಚನೆ ಮಾಡ್ಕೊಂಡು ಇತ್ತಿದ್ದೆಯೊ. ನಾಲ್ಕೈದು

ಕೂಸುಗಳ ನೋಡಿದೆಯೊ ಯಾವುದೂ ಸರಿಗಟ್ಟು ಆಯಿದಿಲ್ಲೆ. ನಾಳಂಗೆ ಎಂಗೊಗೆ ಊರಿಂಗೆ ಹೋಯೇಕು. ಎಂತ ಮಾಡುದು ಹೇಳಿ ಆಲೋಚನೆ ಮಾಡ್ಕೊಂಡು ಇತ್ತಿದೆಯೊ"

"ನಿಂಗೊಗೆ ನೀರು ತಂದು ಕೊಟ್ಟತ್ರಲ್ಲದೋ ಅದೇ ಎಂಗಳ ಮಗಳು ಸರಸ್ವತಿ, ಆಗ ಹದಿಮೂರು ನಡೆತ್ತು."

"ಎಂಗಳ ಮಾಣಿಗೆ ಸರಿ ಅಕ್ಕು. ಅವಂಗೀಗ 21ನೇ ವರ್ಷ. ಅವಂಗೆ ಎಸ್‌ಎಸ್‌ಎಲ್‌ಸಿ ಪಾಸಾಯಿದು. ಮುಂದೆ ಕಲಿವಲೆ ಅವಂಗೆ ಮನಸ್ಸಿತ್ತು. ಇವನೇ ಹೆರಿಮಗ ಆದ ಕಾರಣ ಅಪ್ಪಂಗೆ ಮನೆ ವ್ಯವಹಾರ ನೋಡ್ಲೆ ಮಗ ಮನೇಲಿ ಇರಲಿ ಹೇಳಿಕಂಡತ್ತು. ಇವನ ಹಿಂದೆ ಇಬ್ರು ಮಾಣ್ಯೆಂಗೊ. ಅಖೇರಿ ಮಾಣದ್ದು ಕೂಸು. ಇನ್ನೂ 5 ವರ್ಷದ್ದು. ವರ್ಷಕ್ಕೆ 420 ಖಂಡಿ ಅದಕ್ಕೆ ಆವುತ್ತು. ಸ್ವಂತ ಮನೆ ಇದ್ದು ಬಾಕಿ ಎಲ್ಲಾ ಅನುಕೂಲ ಇದ್ದು ಸಂಕ್ಷಿಪ್ತವಾಗಿ ತಿಳಿಸಿದರು. ಸಾಗರಭಟ್ಟರು "ಎಂಗೊಗೆ ಎಂತದೂ ಇಲ್ಲೆ. 10 ಮಣೆ ಅಡಕ್ಕೆಯೂ ಈ ಮುಳಿ ಮನೆಯೂ ಮಾಂತ್ರ ಇಪ್ಪದು."

ಎಂಗೊಗೆ ಅದು ಮುಖ್ಯ ಅಲ್ಲ. ಕೂಸು ಒಳ್ಳೆದಿದ್ದು ಕುಲಗೋತ್ರ ಸರಿಯಾಯೇಕು. ಮಾಣಿಯ ಅಪ್ಪಂಗೆ ಜಾತಕ ನೋಡುವ ಪದ್ಧತಿ ಇದ್ದು. ನಿಂಗೊ ಜಾತಕ ಕೊಟ್ಟರೆ ಆನದರ ಅವಕ್ಕೆ ಕೊಡುವೆ. ಆವುತ್ತೊ ಇಲ್ಲೆಯೋ ಹೇಳಿ 8 ದಿನಂದೊಳ ತಿಳುಶುವೆ. ನಿಂಗಳ ಮನೆಯ ಎಡ್ರೆಸ್ ಕೊಡಿ."

"ಆತು ಕೊಡುತ್ತೆ" ಹೇಳಿ ಅಪ್ಪಣ್ಣಭಟ್ಟರು ಮಗಳ ಜಾತಕವನ್ನು ಮನೆಯ ಎಡ್ರೆಸ್ಸನ್ನೂ ತಂದುಕೊಟ್ಟರು.

"ಒಂದು ರಜಾ ಕಾಫಿ ಕುಡುದು ಹೋಗಿ" ಹೇಳಿ ಶಂಕರಮ್ಮ ಬಿಸಿಬಿಸಿ ಕಾಫಿ ಮಾಡಿ ತಂದುಕೊಟ್ಟರು.

"ಮಾಣಿ ಕಡೆವಕ್ಕೆ ನಿಂಗೊ ಎಂತಾಯೇಕು?" ಹೇಳಿಯೂ ಕೇಳಿದರು.

"ಎಂಗೊಗೆ ಅವು ಹತ್ರಾಣ ಸಂಬಂಧಿಕರಲ್ಲ. ಅವರ ನೆರೆಕೆರೆಯವು. ಹೀಂಗೆ ಮದುವೆಗೆ ಕೂಸಿನ ಹುಡುಕ್ಕುದಿದ್ದರೆ, ದಾರಿ ಕರ್ಚಿಗೆ ಕೊಟ್ಟು ದಿನಕ್ಕಿಷ್ಟು ಹೇಳಿ ಕೊಡುತ್ತವು. ಅವಕ್ಕೆಲ್ಲಾ ಹೀಂಗೆ ವಾರಕಟ್ಟೆ ತಿಂಗಳುಕಟ್ಟೆ ಇಪ್ಪಲೆ ಆವುತ್ತಿಲ್ಲೆ; ಸುಮಾರು ಕೂಸು ಅಕ್ಕು ಹೇಳಿ ಆದರೆ ಅವು ಬಂದು ನೋಡಿಕ್ಕಿ ಹೋವುತ್ತವು. ಕೂಸಿನ ಕಡೆಯವರನ್ನೂ ಅತ್ಲಾಗಿ ದಿನಿಗೇಳುತ್ತವು. ನಿಶ್ಚಿತಾರ್ಥವ ಅಲ್ಲಿಯೇ ಮಾಡುತ್ತವು" ಹೇಳಿದರು ಭಟ್ಟರು.

"ಆತಂಬಾಗ, ನಿಂಗೊ ಯಾವುದಕ್ಕೂ ಕಾಗದ ಹಾಕಿ. ಆಗದಿದ್ದರೆ ಎಂಗೊ ಮುಂದೆ ಮಾಣ್ಯಂಗಳ ಹುಡುಕ್ಕೇಕನ್ನೆ!"

"ಎಂಗಳ ಕಾಗದ ಬಂದ ಮತ್ತೆ ಹಿಂಗೊ ಮುಂದುವರಿಸಿ ಆಗದೋ?"

"ಅಕ್ಕು-ಒಂದೆರಡು ವಾರಲ್ಲಿ ತಿಳಿಶಿಕ್ಕಿ" ಹೇಳಿದರು ಅಪ್ಪಣ್ಣಭಟ್ಟರು. ಸಾಗರದ ಭಟ್ಟರು ಎದ್ದು "ಹಾಂಗಾರೆ ಎಂಗೊ ಬತ್ತೆಯೋ" ಹೇಳಿ ದಾರಿ ಹಿಡಿದರು. ಅಪ್ಪಣ್ಣಭಟ್ಟರು ಸ್ವಲ್ಪ ದೂರ ಅವರ ಹಿಂದೆ ನಡೆದು ಮರಳಿ ಮನೆಗೆ ಬಂದರು.

"ಅವರ ಮರ್ಜಿ ನೋಡಿದರೆ- ಅವಕ್ಕೆ ಕೂಸು 'ಕುಶಿ' ಆದ ಹಾಂಗೆ ಕಾಣುತ್ತು. ಮತ್ತೆ ದೇವರ ಇಚ್ಛೆ" ಹೇಳಿ ಶಂಕರಮ್ಮ ಒಳನಡೆದರು. ಇಷ್ಟೆಲ್ಲಾಗುವಾಗ ಕಾವೇರಿ ಮನೆಯಲ್ಲಿಯೇ ಇದ್ದಳು. ಎಲ್ಲವನ್ನೂ ಕೇಳಿಸಿಕೊಂಡಿದ್ದಳು.

"ಆದರೆ ಮದುವೆ ಮಾಡಿಕೊಡುವೊ ಅಬ್ಬೆ. ಎಂತಕ್ಕೂ ಅಪ್ಪ ಹೋಗಿ ಮಾಣಿಯ ಅವರ ಅಬ್ಬೆ ಅಪ್ಪನ ಆಸ್ತಿಯ ಎಲ್ಲಾ ನೋಡ್ಕೊಂಡು ಬರಲಿ. ಅಂತುಗೊಂತು ಇಲದ್ದವಕ್ಕೆ ಪ್ಪಕ್ಕನೆ ಕೂಸಿನ ಕೊಡುತ್ತೆ ಹೇಳಿ ಬಾಷೆಕೊ ಬೇಡ - ಎನ್ನ ಮದುವೆ ಮಾಡಿದ್ದೇ ಸಾಕು ಎಂಗೊ" ಎಂಬ ಎಚ್ಚರವನ್ನೂ ಕೊಟ್ಟಳು ಕಾವೇರಿ.

"ಇಲ್ಲೆ ಮಗಳೇ ಎಲ್ಲಾ ವಿಚಾರ್ಸದ್ದೆ ಸರಸ್ವತಿಯ ಕೊಡುತ್ತಿಲ್ಲೆ, ನಿನ್ನ ಕೊರಳು ಕೊಯ್ದ ಪಾಪವೇ ಸಾಕು ಎಂಗೊಗೆ" ತಾಯಿಯೂ ದನಿಗೂಡಿಸಿದಳು.

ಸರಿಯಾಗಿ ಎಂಟು ದಿವಸಕ್ಕೆ ಸಾಗರದಿಂದ ಪತ್ರ ಬಂತು. ಹುಡುಗಿಯ ಜಾತಕ ಹುಡುಗನ ಜಾತಕದೊಡನೆ ಹೊಂದಾಣಿಕೆಯಾಗುತ್ತದೆಂದೂ, ಹುಡುಗಿಯನ್ನು ನೋಡಲು ಹುಡುಗನ ಸೋದರಮಾವ ಮತ್ತು ತಾಯಿಯು ಬರಬೇಕೆಂದಿದ್ದಾರೆಂದೂ, ಯಾವಾಗ ಬರಬೇಕು ಎಂಬುದನ್ನು ತಿಳಿಸಬೇಕೆಂದೂ ಪತ್ರದಲ್ಲಿ ಬರೆದಿದ್ದರು. ಎಲ್ಲರಿಗೂ ತುಂಬಾ ಸಂತೋಷವಾಯಿತು. ಮುಂದಿನ ಶುಕ್ರವಾರ ಅಂದರೆ ಈವತ್ತಿಗೆ ಎಂಟು ದಿವಸಕ್ಕೆ ಬಂದರೆ ಅನುಕೂಲವೆಂದೂ ಮಾರುತ್ತರ ಬರೆದು ಟಪಾಲಿಗೆ ಹಾಕಿ ಬಂದರು ಅಪ್ಪಣ್ಣಭಟ್ಟರು.

ಶಂಕರಮ್ಮನಿಗೂ ತಲೆಭಾರ ಕಡೆಮೆಯಾದ ಹಾಗೆ ಆಯಿತು. ಕಾವೇರಿಗೂ ಸಮಾಚಾರ ಮುಟ್ಟಿಸಿದರು. "ಎಲ್ಲಾ ಸರಿ ಇದ್ದರೆ ಕೊಡ್ಳಕ್ಕು ಅಬ್ಬೆ" ಎಂದಳು.

ಸಾಗರದಿಂದ ಹುಡುಗನ ತಂದೆ, ಸೋದರಮಾವ, ಅವನ ತಾಯಿ ಬಂದು ಸರಸ್ವತಿಯನ್ನು ನೋಡಿದರು. ಅವರೆಲ್ಲರಿಗೂ ಕನ್ಯೆ ಇಷ್ಟವಾದಳು. ಆ ದಿವಸ ಶಂಕರಮ್ಮ ಮೇಲಾರ, ತಾಳು, ಹೆಸರುಬೇಳೆ ಪಾಯಸವನ್ನೂ ಮಾಡಿದ್ದರು. ಬಡಿಸಲು

ಸರಸ್ವತಿಯನ್ನು ಕರೆದಿದ್ದರು. ಹುಡಿಗಿಗೆ ಮನೆಕೆಲಸದಲ್ಲಿ ಮಾಹಿತಿ ಇದೆ ಎಂಬುದನ್ನು ಹುಡುಗನ ತಾಯಿಗೆ ಅರ್ಥವಾಯಿತು. ಆದರು ಶಂಕರಮ್ಮನನ್ನೊಮ್ಮೆ ವಿಚಾರಿಸಿದರು.

"ಕೂಸಿಂಗೆ ಅಡಿಗೆ ಕೆಲಸ ಎಲ್ಲಾ ಬತ್ತೊ ಅಕ್ಕಾ, ದನಗಳ ಕರವಲೆ ಅರಡಿತ್ತೊ?"

"ಅದಕ್ಕೆ ಹೆಚ್ಚು ಅಡಿಗೆ ಮಾಡಿ ಹೇಳಿ ಗೊಂತಿಲ್ಲೆ. ಅದರಂದ ದೊಡ್ಡವು ಇಬ್ರು ಇತ್ತಿದ್ದವನ್ನೆ. ಮನೆ ಉಡುಗುದು, ಪಾತ್ರ ತೊಳವದು, ನೀರು ತಪ್ಪುದರ ಮಾಡುತ್ತು. ಆನು ಹೆರಗೆ ಆದಿಪ್ಪಾಗ ಮೂರು ದಿನ ಬೇಯಿಸಿ ಹಾಕುತ್ತು, ಎಂಗಳಲ್ಲಿ ದನ ಎಮ್ಮೆ ಇಲ್ಲದ್ದ ಕಾರಣ ಅದಕ್ಕೆ ಕರವಲೆ ಅಭ್ಯಾಸ ಇಲ್ಲೆ" ಇದ್ದದ್ದನ್ನು ಇದ್ದಂತೆ ಹೇಳಿದರು ಶಂಕರಮ್ಮ.

"ಮುಂದಕ್ಕೆ ಒಂದೊಂದನ್ನೇ ಕಲಿಗು. ನಾವೆಲ್ಲಾ ಅದರೆಲ್ಲಾ ಮದಲೇ ಕಲ್ತಿತ್ತೋ. ಎನಗೆ ಮದುವೆ ಅಪ್ಪಾಗ ಒಂಭತ್ತೇ ವರ್ಷ ಆದ್ದು. ತಲೆಗೆ ಮೀಶಲೆ ಅತ್ತೆಯೇ ಬರೇಕಾತು. ಅವು ಅತ್ತೆ ಹೇಳಿರೆ ಎನ್ನ ಕಾಸಾ ಸೋದರತ್ತೆ. ಅವರ ಮಗಂಗೇ ಎನ್ನ ಕೊಟ್ಟದು. ಹಾಂಗಾಗಿ ಎನ್ನ ಕೊಂಡಾಟಲ್ಲಿ ನೋಡಿದ್ದವು. ಹುಡುಗನ ತಾಯಿ ಗಂಗಮ್ಮ ಆತ್ಮೀಯವಾಗಿ ನುಡಿದರು.

"ಆತೋ ನಿಂಗಳ ಮಾತುಕತೆ. ಎಂತ ಹೇಳಿ ಆತು?" ಎಂದು ಒಳಗೆ ಬಂದರು ಹುಡುಗನ ತಂದೆ ಕೇಶವ ಹೆಗ್ಡೆಯವರು.

"ಇನ್ನು ನಿಂಗೊ ಮುಂದುವರುಶಲಕ್ಕು ಎನಗೆ ಒಪ್ಪಿಗೆ ಆಯಿದು" ಎಂದರು ಗಂಗಮ್ಮ.

"ಹಾಂಗಾರೆ ಅಪ್ಪಣ್ಣಭಟ್ಟನೂ ಕೂಸಿನ ಸೋದರಮಾವನೂ ಮುಂದಿನ ಮಂಗಳವಾರವೋ, ಶುಕ್ರವಾರವೋ ನಮಲ್ಲಿಗೆ ಬರಲಿ ಆಗದೋ"?

"ಅಕ್ಕು, ಅವೂದೆ ಒಂದಾರಿ ನಮ್ಮ ಮನೆಗೆ ಬಂದು ಹೋಗಲಿ. ಎಲ್ಲಾ ಸರಿಗಟ್ಟಾದರೆ ಅಂದೇ 'ಬದ್ಧ' ಮಾದಿ ಮುಗುಶಿರೆ ಆತು. ಎಷ್ಟು ಸರ್ತಿ ಅತ್ಲಾಗಿ, ಇತ್ಲಾಗಿ ಓಡಾಡುಲೆ ಹತ್ರಾಣ ಊರುಗೊ ಅಲ್ಲನ್ನೆ"

"ಆತು ಹಾಂಗೇ ಮಾಡುವೊ" ಹೇಳಿ ಹೆಗಡೆಯವರು ಅಪ್ಪಣ್ಣಭಟ್ಟರಿಗೆ ತಿಳಿಸಿದರು.

"ಎಂಗೊ ಹೇಳಿರೆ ಆನು, ಗೋವಿಂದನೂ ಮುಂದಿನ ಶುಕ್ರವಾರ ಅತ್ಲಾಗಿ ಬತ್ತೆಯೊ. ಆದರೆ ಎಂಗೊಗೆ ನಿಂಗಳ ಮನೆಗೆ ಬಪ್ಪದಾರಿ ಗೊಂತಾಯೆಕನ್ನೆ.

ಅತ್ಲಾಗಿ ಆನು ಒಂದು ಸರ್ತಿಯೂ ಬಯಿಂದಿಲ್ಲೆ" ಸ್ವಲ್ಪ ಆತಂಕದಲ್ಲಿಯೇ ನುಡಿದರು ಭಟ್ಟರು.

"ನಿಂಗೊ ಮಂಗಳೂರಿಂಗೆ ಬಂದು ಅಲ್ಲಿಂದ ಸೀದಾ ಶಿವಮೊಗ್ಗಕ್ಕೆ ಹೋಗಿ. ಅಲ್ಲಿಗೆ ಆನಾಗಲೀ, ಇವ ಆಗಲೀ ಬತ್ತೆಯೋ ನಿಂಗಳ ಕರಕ್ಕೊಂಡು ಮನೆಗೆ ಹೋಪೆಯೊ. ಶಿವಮೊಗ್ಗಂದ ಹೆಚ್ಚುಕಮ್ಮಿ ಆರು ಮೈಲಾವುತ್ತು ಎಂಗಳ ಊರಿಂಗೆ".

"ಹೇಳಿದ ಹಾಂಗೆ ಊರಿನ ಹೆಸರೆಂತ?"

"ಕುಂಡಿಗೆ ಸರ ಹೇಳಿ."

"ಒಳ್ಳೆ ಹೆಸರು. ನೆಂಪು ಮಾಡಿಕ್ಕೊಂಬಲೆ. ಅಲ್ಲಿ ಬಾಳೆ ಕುಂಡಿಗೆ ತುಂಬಾ ಬಿಡುತ್ತಾಯಿಕ್ಕು" ಸ್ವಲ್ಪ ಹಾಸ್ಯಮಿಶ್ರಿತ ದನಿಯಲ್ಲಿ ನುಡಿದರು ಅಪ್ಪಣ್ಣ.

"ಹಾಂಗೆಂತದೂ ಇಲ್ಲೆ. ಅಲ್ಲಿ ಅಡುಕ್ಕೆ ತೋಟವೇ ಹೆಚ್ಚಿಪ್ಪುದು. ಬಾಳೆ ತುಂಬಾ ಕಮ್ಮಿ. ಮುದಲಿಂಗೆ ಇದ್ದಿಪ್ಪಲೂ ಸಾಕು."

"ಅದೆಲ್ಲಾ ಸುಮ್ಮನೆ. ಹೆಸರು ಇದ್ದ ಕೂಡಲೇ ಆ ವಸ್ತು ಅಲ್ಲಿ ಇರೇಕು ಹೇಳಿ ಇಲ್ಲೆ. ನಾವು ಮೈಸೂರು ಪಾಕು ಹೇಳುತ್ತಿಲ್ಲೆಯೋ ಹಾಂಗೆ-ಅಲ್ಲೆಲ್ಲಿದ್ದು ಮೈಸೂರು? ಮೈಸೂರಿಂಗೂ ಅದಕ್ಕೂ ಎಂತ ಸಂಬಂಧ ಇದ್ದು ಅಲ್ಲದೊ" ಹೇಳಿದವನು ಇವರ ಸಂಭಾಷಣೆಯನ್ನು ಕೇಳಿಕೊಂಡ ಗೋವಿಂದ.

"ಅದು ಹಾಂಗೆಪ್ಪ. ಒಂದಕ್ಕೊಂದು ಅರ್ಥ ಸಂಬಂಧ ಇಲ್ಲೆ. ಆತು ಅಂಬಾಗ ನಾವು ಹೆರಡುವನೊ?" ಹೇಳಿ ಎಲ್ಲರೂ ಹೊರಟುನಿಂತರು.

"ಅಕ್ಕಂಬಾಗ ಬತ್ತೆಯೋ" ಹೇಳಿ ನಡೆದರು.

ಮುಂದಿನ ಶುಕ್ರವಾರ ಹೇಳಿದ ಹಾಗೆ ಅಪ್ಪಣ್ಣಭಟ್ಟರೂ, ಗೋವಿಂದನೂ ಸಾಗರದ ಕಡೆ ಹೊರಟರು. ಶಿವಮೊಗ್ಗದ ಬಸ್ಸನ್ನೇರಿ ಅಲ್ಲಿ ಇಳಿದು ಬಸ್‌ಸ್ಟೇಂಡಿಗೆ ಹೋಗಿ ಕುಳಿತುಕೊಳ್ಳಬೇಕಾದರೆ ಕೇಶವ ಹೆಗಡೆ ಮತ್ತು ಅವರ ಭಾವ ಮೈದುನ ಇದಿರಾದರು. ಅಲ್ಲಿ ಹೆಚ್ಚು ಕಾಯಬೇಕಾಗಿ ಬರಲಿಲ್ಲ. ಇವರನ್ನು ಕರೆದೊಯ್ಯಲು ಅವರು ಜೀಪು ತಂದಿದ್ದರು. ಇಬ್ಬರನ್ನೂ ಜೀಪಿನಲ್ಲಿ ಕೂರಿಸಿದರು. ಕೇಶವ ಹೆಗಡೆಯವರೇ ಜೀಪು ನಡೆಸುತ್ತಿದ್ದರು. ಅದು ಸ್ವಲ್ಪ ಕಾಡುಗುಡ್ಡದ ದಾರಿ, ಕಲ್ಲುಮಣ್ಣಿನ ಪ್ರದೇಶ. ಎಲ್ಲೋ ಅಲ್ಲೊಂದು ಇಲ್ಲೊಂದು ಕಾಣಬರುವ ಹಂಚಿನ ಮನೆಗಳು- ಕಾಡಿನ ಮಧ್ಯದಿಂದ ಕೇಳಿ ಬರುವ ಜೀರುಂಡೆ ಧ್ವನಿ, ಕುಕ್ಕುಸುಡು ಹಕ್ಕಿಯ ಸ್ವರ, ಬಿಟ್ಟರೆ ಜುಳುಜುಳು ಹರಿಯುವ ಕಿರು ತೊರೆಗಳ ನಾದ ರಸ್ತೆಯುದ್ದಕ್ಕೂ ಜನ

ಸಂಚಾರ ತುಂಬಾ ಕಡಿಮೆ. ಎಲ್ಲೋ ಅಲ್ಲೊಂದು ಇಲ್ಲೊಂದು 'ಚಾ'ದ ಪುಟ್ಟ ಸೋಗೆ ಅಂಗಡಿಗಳು. ಅಲ್ಲಿಯೇ ಬೀಡಿ, ಸಿಗರೇಟು, ಬೆಂಕಿಪೆಟ್ಟಿಗೆ ಇತ್ಯಾದಿ ಸಾಮಾಗ್ರಿಗಳು. ಅಲ್ಲಿ ಕಾಣಬರುವ ನಾಲ್ಕಾರು ಜನರನ್ನು ಬಿಟ್ಟರೆ ಇನ್ನಾರನ್ನೂ ಕಾಣಲಾಗುವುದಿಲ್ಲ.

ಯಾವುದನ್ನೂ ಪ್ರಶ್ನಿಸದೆ ಮೌನವಾಗಿಯೇ ಸಾಗಿದರು. ಮುಂದೊಂದು ಗಳಿಗೆಯಲ್ಲಿ ಜೀಪು ಮನೆಯ ಮುಂದೆ ನಿಂತಿತು. ಎಲ್ಲಗೂ ಜೀಪಿನಿಂದ ಇಳಿದರು.

"ಇದಾ ಗಂಗೆ, ಅಪ್ಪಣ್ಣನ ಅವನ ಭಾವನ ಕರಕ್ಕೊಂಡು ಬಂದೆ. ಕಾಲು ತೊಳವಲೆ ನೀರೂ ಆಸರಿಂಗೂ ಕೊಡು" ಎಂದು ಕೇಶವ ಹೆಗಡೆಯವರು ಒಳಗೆ ಹೋದರು.

ಗಂಗಮ್ಮ ಎರಡು ತಂಬಿಗೆ ನೀರು ಕೊಟ್ಟು "ಕಾಲು ತೊಳಕ್ಕೊಳ್ಳಿ" ಎಂದು ಹೇಳಿ ಒಳಕ್ಕೆ ಹೋದರು. ಬರುವಾಗ ಒಂದು ಕೈ ಒರೆಸುವ ಬಟ್ಟೆಯನ್ನೂ, ಬೆಲ್ಲ ನೀರನ್ನೂ ತಂದರು.

"ಇದಾ, ನಿಂಗೊಗೆ ಕೈ ಒರಸಲೆ ವಸ್ತ್ರ–ಆಸರಿಂಗೆ ಕುಡಿರಿ" ಎಂದು ಉಪಚರಿಸಿದರು. ಕೈಕಾಲು ಮುಖ ತೊಳೆದುಕೊಂಡು ಗಂಗಮ್ಮ ತಂದಿತ್ತ ಬೆಲ್ಲ ಬಾಯಿಗೆ ಹಾಕಿಕೊಂಡು ನೀರು ಕುಡಿದರು. ಒಂದೊಂದು ಚೆಂಬು ನೀರೂ ಖಾಲಿ ಮಾಡಿದರು.

"ನಿಂಗೊಗೆ ಬಪ್ಪಲೆ ಕಷ್ಟ ಆಯಿದಿಲ್ಲೆನ್ನೆ?"

"ಇಲ್ಲೆ ರಜವೂ ಕಷ್ಟ ಆಯಿದಿಲ್ಲೆ. ಮಂಗಳೂರಿಲ್ಲಿ ಬಸ್ಸು ಇಳುದ ಕೂಡಲೇ ಶಿವಮೊಗ್ಗದ ಬಸ್ಸು ಬಂತು. ಎಂಗೊ ಇಳಿವಾಗಲೇ ನಿಂಗಳ ಜೀಪು ಬಂತು. ಏನೂ ಕಷ್ಟ ಆಯಿದಿಲ್ಲೆ."

"ನಿಂಗೊ ಇನ್ನು ಬೇಕಾರೆ ರಜಾ ಅಡ್ಡ ಆಗಿ, ಈಗಳೇ ಗಂಟೆ ಹನ್ನೆರಡಾತು, ರಜಾ ಒರಗಕ್ಕಿ. ಮೀವಲೆ ಹೋಗಿ, ಬೆಶಿನೀರ ಕೊಟ್ಟಗೇಲಿ, ಹಂಡೆಲಿ ಬೆಶಿನೀರು ಇದ್ದು, ಅಲ್ಲಿಯೇ ಮೈ ಒರಸುವ ವಸ್ತ್ರವನ್ನೂ ಮಡುಗಿದ್ದೆ. ಆನು ಅಡಿಗೆ ಆಗಳೇ ಮಾಡಿ ಮಡುಗಿದ್ದೆ. ಉಂಡಿಕ್ಕಿ ಒಂದು ಗಳಿಗೆ ಒರಗಿ, ಆಯಾಸ ಕಮ್ಮಿ ಆಕ್ಕು" ಉಪಚರಿಸಿದಳು ಗಂಗಮ್ಮ.

"ಎಂಗೊಗೆ ಹಾಂಗೆಂತ ಬಚ್ಚಿದಿಲ್ಲೆ. ನೆಡಕ್ಕೊಂಡು ಬಂದದಲ್ಲನ್ನೆ" ಹೇಳಿದರು ಅಪ್ಪಣ್ಣಭಟ್ಟರು.

ಸಮಯಕ್ಕೆ ಸರಿಯಾಗಿ ಎಲ್ಲರೂ ಸ್ನಾನಮಾಡಿ, ಅರಿಗ್ಗೆ ಜಪ ಮುಗಿಸಿ ಊಟಕ್ಕೆ ಕುಳಿತರು. ಸೌತೆಕಾಯಿ ಮೇಲಾರ, ತೊಂಡೆಕಾಯಿ ತಾಳು, ಹೆಸರುಬೇಳೆ ಪಾಯಸ ಮಾಡಿದ್ದರು. ಮೇಲಿಷ್ಟು ಹಲಸಿನಕಾಯಿ ಹಪ್ಪಳವನ್ನು ಕರಿದು ಕೊಟ್ಟಿದ್ದರು. ಅಪ್ಪೆ ಮಿಡಿ ಉಪ್ಪಿನಕಾಯಿ, ಗಟ್ಟಿ ಮೊಸರನ್ನು ಬಳಸಿದರು ಗಂಗಮ್ಮ. ಇಬ್ಬರೂ ಹೊಟ್ಟೆ ತುಂಬಾ ಊಟ ಮಾಡಿದರು. ಅವರಿಗಾಗಿ ಚಾವಡಿಯಲ್ಲಿ ಚಾಪೆ ಹಾಸಿ ದಿಂಬು ಇಟ್ಟಿದ್ದರು. ಇಬ್ಬರೂ ಮಲಗಿ ಒಂದು ಗಂಟೆ ವಿಶ್ರಾಂತಿ ತೆಗೆದುಕೊಂಡರು. ಏಳುವಾಗಲೇ ಬಿಸಿಬಿಸಿ, ಘಮಘಮ ಎನ್ನುವ ಕಾಫಿಯನ್ನು ಗಿಂಡಿ ತುಂಬಾ ತಂದುಕೊಟ್ಟರು ಗಂಗಮ್ಮ, ಇಬ್ಬರೂ ಮುಖ ತೊಳೆದುಕೊಂಡು ಕಾಫಿ ಕುಡಿದರು.

"ಎಂಗೊ ಇನ್ನು ಹೆರಡುತ್ತಿಯೊ ಆಗದೋ?" ಎಂದರು ಮಲಗಿದ ಚಾಪೆಯನ್ನು ಮಡಚಿ ದಿಂಬನ್ನು ಅದರ ಮೇಲಿಟ್ಟು.

"ನಿಂಗೊಗೆ ಎಂಗಳ ತೋಟ ಗೀಟ ನೋಡೇಡದೋ" ಇಂದು ಇದ್ದು ನಾಳಂಗೆ ಹೋಪಲಕ್ಕು ನಿಂಗೊಗೆ" ಹೇಳಿದರು ಕೇಶವ ಹೆಗಡೆಯವರು.

"ಎಂಗೊ ಅದರೆಲ್ಲಾ ಮತ್ತೆ ಬಂದಿಪ್ಪಾಗ ನೋಡುವೆಯೊ ಎಂಗೊಗೆ ಮುಖ್ಯ ಮನುಷ್ಯರು ಹೇಂಗಿದ್ದವು ಹೇಳಿ ತಿಳಿಯೇಕಾದ್ದು. ಆ ಮಟ್ಟಂಗೆ ಎಂಗಳ ಕೂಸು ಪುಣ್ಯವಂತೆ. ನಿಂಗೊ ಮೂರ್ತ. ದಿನ ಎಲ್ಲಾ ನಿಶ್ಚಯ ಮಾಡಿ ಎಂಗೊಗೆ ತಿಳುಶಿ."

"ಅದೆಲ್ಲಾ ಎಂಗೊ ಮಾಡುಪಿಯೋ ನಿಂಗೊಗೆ ಅಲ್ಲಿ ಅನುಕೂಲ ಇಲ್ಲದಿದ್ದರೆ ಇಲ್ಲಿಯೇ ಮದುವೆ ಮುಗುಶಲಕ್ಕು. ಎಂಗಳಿಂದಾಗಿ ನಿಂಗೊಗೆ ತೊಂದರೆ ಅಪ್ಪಲ ಎಡಿಯ."

"ತೊಂದರೆ ಎಂತದೂ ಆಗ. ಸಣ್ಣ ಮಟ್ಟಂಗೆ ಮನೆ ಎದುರವೇ ಧಾರೆ ಎರದು ಕೊಡುವೆ."

"ಹಾಂಗಾರೆ ಹಾಂಗೆ ವಾಾಡಿ. ಸಟ್ಟು ಮುಂಡಿ ಎಂಗೊ ಇಲ್ಲಿ ಮಾಡುವೆಯೊ?"

"ಆತಂಬಾಗ ಎಂಗೊ ಬತ್ತೆಯೋ. ನಿಂಗೊ ಮೂರ್ತ ನೋಡಿ ಎಂಗೊಗೆ ಕಾಗದ ಹಾಕಿ" ಹೇಳಿ ಇಬ್ಬರೂ ಜಗಲಿ ಮೆಟ್ಟಿಲು ಇಳಿದರು.

ನಿಂಗೊಗೆ ಶಿವಮೊಗ್ಗದವರೆಗೆ ಜೀಪು ಕಳುಸುತ್ತೆ. ಈಗ ಎಂಗಳ ಡ್ರೈವರ್ ಬಕ್ಕು. ನಿಂಗಳ ಬಿಡ್ಳೆ ಎನಗೆ ರಜಾ ತೋಟದ ಕೆಲಸ ಇದ್ದು" ಹೇಳಿ ಡ್ರೈವರ್ ಚೆನ್ನಪ್ಪನನ್ನು ಕರೆದು,

"ಶಿವಮೊಗ್ಗದಲ್ಲಿ ಬಸ್ ಸ್ಟೇಂಡಿನಲ್ಲಿ ಇವರನ್ನು ಬಿಟ್ಟು ಬಾ" ಎಂದ ಹೇಳಿ ಕಳುಹಿಸಿದರು.

ಅಪ್ಪಣ್ಣಭಟ್ಟರಿಗೂ, ಗೋವಿಂದನಿಗೂ ಎಲ್ಲಿಲ್ಲದ ಆನಂದವಾಗಿತ್ತು.

"ನಮ್ಮ ಸರಸ್ವತಿಯ ನಶೀಬು ಒಳ್ಳೇದೇ ಹೇಳೇಕು. ಮಾಣಿಯೂ ಯೋಗ್ಯ ಇದ್ದ. ಅತ್ತೆ ಮಾವನೂ ಒಳ್ಳೇವು. ಧಾರಾಳ ಧಾರೆ ಎರದುಕೊಡ್ಳಕ್ಕು. ಕೂಸು ಸುಖಲ್ಲಿ ಇಕ್ಕು."

"ಅದೇ ಅಲ್ಲದೊ ನಮಗೆ ಬೇಕಾದ್ದು. ರಜಾ ದೂರ ಹೇಳುದರ ಬಿಟ್ಟರೆ ಬೇರೆಂತದೂ ಕೊರತ್ತೆ ಇಲ್ಲೆ."

"ಅತಿಥಿ ಸತ್ಕಾರಕ್ಕೆ ಸಾಗರದವರ ಕೈಲಿ ಕಲಿಯೇಕು. ಅವಕ್ಕೆ ಬಡವರು, ಶ್ರೀಮಂತರು ಹೇಳುವ ಭೇದಭಾವ ಇಲ್ಲೆ. ಹಾಂಕಾರ ಇಪ್ಪುದು ನಮ್ಮ ಕಡೆಯವಕ್ಕೆ. ಬಡವರ ಸಸಾರ ಮಾಡ್ಳೆ ಅವರಂದ ಮೇಲಾಣವು ಆರೂ ಇಲ್ಲೆ."

ಅಪ್ಪಣ್ಣಭಟ್ಟರು ಜೀವನಪೂರ್ತಿ ಅನುಭವಿಸಿದ ನೋವನ್ನೊಮ್ಮೆ ಕಕ್ಕಿದರು.

"ಅದಪ್ಪು ಭಾವ. ನಮ್ಮತ್ಲಾಗಿ ಸೊಕ್ಕು ರಜಾ ಹೆಚ್ಚೆ" ಹೇಳಿದ ಗೋವಿಂದನೂ.

"ಹಾಂಗಿಪ್ಪ ಗಟ್ಟಿ ಮೊಸರು, ಗಟ್ಟಿ ಹಾಲಿನ ಕಾಫಿಯ ಜೀವಮಾನಲ್ಲಿ ಕಂಡಿದೇ ಇಲ್ಲೆ. ನೀರು ಮಜ್ಜಿಗೆ ಕಣ್ಣಕಾಟ ಕುಡುದೇ ಅಭ್ಯಾಸ" ಅಪ್ಪಣ್ಣಭಟ್ಟರಿಗೆ ಇನ್ನೂ ಹೇಳಲಿಕ್ಕಿತ್ತು.

"ಅದೆಲ್ಲಾ ಕಳುದ ಕತೆ. ಇನ್ನು ನಿಂಗೊಗೆ ಗಟ್ಟಿ ಮಸರು ತಿನ್ನೆಕಾರೆ ಸರಸ್ವತಿಯ ಮನಗೆ ಹೋದರೆ ಆತು" ಹೇಳಿ ಗೋವಿಂದ ತಮಾಷೆ ಮಾಡಿದ.

"ನಿನನೆ ತಮಾಷೆ ಆವುತ್ತು ಗೋವಿಂದ. ಆನೆಷ್ಟು ಅವಮಾನ ಸಹಿಸಿದ್ದೆ ಹೇಳಿ ಆ ದೇವರಿಂಗೇ ಗೊತ್ತು."

"ಸುಮ್ಮನೆ ತಮಾಷೆ ಮಾಡಿದ್ದು ಭಾವ, ಬೇಜಾರು ಮಾಡೇಡ."

ಇನ್ನು ನಿಂಗೊಗೆ ಹೆಚ್ಚು ಕಷ್ಟ ಆಗ. ಇನ್ನೊಂದು ಕೂಸು ದೇವಕ್ಕಿ ಮಾಂತ್ರ ಅಲ್ಲದೊ ನಿಂಗೊಗೆ?"

"ಕಾವೇರಿಯ ಆ ತೊಂಡಂಗೆ ಕೊಡ್ಳೆ ಅಮಸರ ಮಾಡಿದೆ. ಅದಕ್ಕೊ ಹುಡುಕ್ಕಿದ್ದರೆ ಒಳ್ಳೆ ಮನೆ ಸಿಕ್ಕುತ್ತಿತ್ತು. ಅದರಿಂದಾಗಿಯೇ ಎಂಗೊ ಈಗ ಹೊಟ್ಟೆ ತುಂಬ ತಿಂಬದು. ರಜಾ ಮರ್ಯಾದೇಲಿ ಜೀವನ ಸಾಗುಸುದು."

ಅದರೆಲ್ಲಾ ಈಗ ಚಾನ್ಸೆಂಡು ಕೊರಗೇಡಿ ಭಾವ. ಅದೆಲ್ಲಾ ಮುಗುದ ಕಥೆ, ಇನ್ನು ಎಂಥ ಮಾಡ್ಳು ಆವುತ್ತಿಲ್ಲೆನ್ನೆ."

"ಅಪ್ಪು ಆದರೂ ಒಂದೊಂದಾರಿ ನೆಂಪೌವುತ್ತು."

ಇಷ್ಟಾಗುವಾಗ ಶಿವಮೊಗ್ಗ ಬಸ್‌ನಿಲ್ದಾಣ ಬಂತು. ಡ್ರೈವರು ಚೆನ್ನಣ್ಣ ಅವರನ್ನು ಅಲ್ಲಿಗೆ ಬಿಟ್ಟು ತಾನಿನ್ನು ಹೋಗುತ್ತೇನೆ ಎಂದು ಅವರನ್ನು ಬೀಳ್ಕೊಟ್ಟ. ಅಲ್ಲಿಂದ ಮಂಗಳೂರು ಕಡೆಗೆ ಹೊರಟು, ತನ್ನೂರಿಗೆ ಪ್ರಯಾಣ ಬೆಳೆಸಿ, ಸಂಜೆ ಒಂಭತ್ತರೊಳಗೆ ಮನೆ ತಲುಪಿದರು. ಅವರು ಕೈ ಕಾಲು ತೊಳೆದು ಬರುವಾಗ ಊಟಕ್ಕೆ ಅಣಿ ಮಾಡಿದಳು ಶಂಕರಮ್ಮ. ಮನಸ್ಸಿನಲ್ಲಿ ಕಾತರವಿದ್ದರೂ "ಯಾವುದಕ್ಕೂ ಹಸಿದ ಹೊಟ್ಟೆ ತಣ್ಣಗಾಗಲಿ ಮತ್ತೆ ಸಮಾಚಾರ ಕೇಳಿಕೊಂಡರಾಯಿತು" ಎಂದು ಭಾವಿಸಿದರು. ಇಬ್ಬರೂ ಅನ್ನ ಸಾರು, ಉಪ್ಪಿನಕಾಯಿ, ಮಜ್ಜಿಗೆಯಲ್ಲಿ ಊಟ ಮುಗಿಸಿ ಎದ್ದರು. ಶಂಕರಮ್ಮನೂ ಮುಸುರೆ ತೆಗೆದು ಹೊರಗೆ ಚಾವಡಿಗೆ ಬಂದರು.

"ಎಂತಾತು ಹೋದ ಕಾರ್ಯ? ಹಣ್ಣೊ ಕಾಯಿಯೊ?"

"ಹಣ್ಣೇ ಆತು. ದೊಡ್ಡ ದೈತ್ಯ ಮನೆ. ಆಳುಕಾಳುಗೊ ಇದ್ದವು. ಜೆನಂಗೊ ಒಳ್ಳೆವು. ಆ ಮನೆ ರಜಾ ಕಾಡೊಳ ಆವುತ್ತು. ಅತ್ಲಾಗಿ ಇತ್ಲಾಗಿ ಹೋಪಲೆ ಮನೇಲಿ ಜೀಪು ಮಡಿಕ್ಕೊಂಡಿದ್ದವು. ಹಟ್ಟೀಲಿ ಹಶು, ಕರು, ಎಮ್ಮೆ, ತುಂಬ್ಕೊಂಡು ಇದ್ದು. ಎಂಗೊಗೆ ಒಳ್ಳೆ ಉಪಚಾರ ಮಾಡಿದ್ದವು. ಇನ್ನು ಬದ್ಧ ಹೇಳಿ ಬೇರೆ ಮಡುಗುದು ಬೇಡ. ಮೂರ್ತ ದಿನ ನೋಡಿ ಮದುವೆಗೆ ತಯಾರು ಮಾಡಿ ಹೇಳಿಯೂ ಹೇಳಿದವು.

"ಮಾಣಿ ಹೇಂಗಿದ್ದ?"

"ಅವ ಎಂಗೊ ಹೋಪಗ ಇತ್ತಿದ್ದ. ಒಳ್ಳೇ ಮಾಣಿ. ಲಕ್ಷಣ ಇದ್ದ. ನಮ್ಮ ಸರಸ್ವತಿಗೆ ಜೋಡಿ ಸರಿ ಆವುತ್ತು" ಹೇಳಿದವ ಗೋವಿಂದ, ಶಂಕರಮ್ಮನಿಗೆ ಹೊಟ್ಟೆ ತಣ್ಣಗಾಯಿತು. ಮಗಳು ಎಲ್ಲಾದರೂ ಸುಖವಾಗಿರಲಿ ಎಂದು ಬಯಸುತ್ತಿತ್ತು ಹೆತ್ತ ಕರುಳು. ಇವರ ಮಾತುಗಳನ್ನೆಲ್ಲಾ ಕಾವೇರಿ ಕೇಳಿಸಿಕೊಂಡಿದ್ದಳು.

"ಮದುವೆ ಬೇಕಾದರೆ ಎಂಗಳಲ್ಲಿಯೇ ಆಗಲಿ ಹೇಳಿಯೂ ಹೇಳಿದವು" ಎಂದರು ಅಪ್ಪಣಭಟ್ಟರು ಕಾವೇರಿಯನ್ನು ನೋಡಿ.

"ಬೇಡ ಅಪ್ಪ, ಮನೇಲಿಯೇ ಧಾರೆ ಎರೆದು ಕೊಡಿ. ಎಷ್ಟಾವುತ್ತೊ ಅಷ್ಟರಲ್ಲಿ ಸುಧಾರಿಸಿ ಕೊಡುವೊ."

"ಆನೂ ಹಾಂಗೆ ಹೇಳಿಕ್ಕೆ ಬಯಿಂದೆ. ಆವುದೆ ಅದಕ್ಕೆ ಒಪ್ಪಿದ್ದವು."

"ನಿಂಗೊ ಒಂದಾರಿ ಶಾರದೆಯ ಮನೆಗೆ ಹೋಗಿ ರಘುರಾಮಂಗೂ ಸಮಾಚಾರ ತಿಳುಶಿ."

"ಆತು, ನಾಳಂಗೇ ಹೋಪುತ್ತೆ. ಅವು ಆದಷ್ಟು ಬೇಗ ಮದುವೆ ಮಾಡ್ಸುವ ಸಂಭ್ರಮಲ್ಲಿ ಇದ್ದವು" ಹೇಳಿದ ಮೇಲೆ ಎಲ್ಲರೂ ಮಲಗಲು ಸಿದ್ಧರಾದರು. ಬಹುಬೇಗನೇ ಎಲ್ಲರಿಗೂ ಗಾಢವಾದ ಸುಖನಿದ್ರೆಯಾಯಿತು.

ಬೆಳಗಾದೊಡನೆ ಅಪ್ಪಣ್ಣಭಟ್ಟರು ನಿತ್ಯವಿಧಿಗಳನ್ನು ಪೂರೈಸಿ ಶಾರದೆಯ ಮನೆಗೆ ಹೊರಟರು.

"ಇಂದು ಶನಿವಾರ, ರಘುರಾಮ ಮನೇಲಿಯೇ ಇಕ್ಕು, ಕಸ್ತಲಾಯೇಕಾರೆ ಬತ್ತೆ" ಎಂದು ಹೊರನೆಡೆದರು.

ಅವರು ಹೇಳಿದಂತೆ ರಘುರಾಮ ಮನೆಯಲ್ಲಿಯೇ ಇದ್ದ. ಮಗನನ್ನು ಕೈಯಲ್ಲಿ ಎತ್ತಿಕೊಂಡು ಆಚೀಚೆ ತಿರುಗುತ್ತಿದ್ದ. ಮಗುವಿಗೀಗ ಆರು ತಿಂಗಳು. ಮುಖ ನೋಡಿ ನಗುವುದು, ಹಾಹಿಂ ಅನ್ನುವುದನ್ನೂ ನೋಡಿ ಸಂತೋಷ ಪಡುತ್ತಿದ್ದಳು ಶಾರದೆ ಮನೆಕೆಲಸದಲ್ಲಿ ತಲ್ಲೀನಳಾಗಿದ್ದಳು. ಅವಳ ಅತ್ತೆ ತರಕಾರಿ ಹೆಚ್ಚುತ್ತಿದ್ದರು. ಮಾವ ಸಮೀಪವೆಲ್ಲೂ ಇರಲಿಲ್ಲ.

ಅಪ್ಪಣ್ಣಭಟ್ಟರು ಬರುವುದನ್ನು ನೋಡಿದ ರಘುರಾಮ "ಶಾರದೆ ಇಲ್ಲಿ ಬಾ, ನಿನ್ನ ಅಪ್ಪ ಬತ್ತಾ ಇದ್ದವು ನೋಡು" ಎಂದು ಕರೆದ. ಶಾರದೆ ಒಳಗಿಂದ ಓಡಿಯೇ ಬಂದಳು. ಅಚಾನಕ್ಕಾಗಿ ಬಂದ ತಂದೆಯನ್ನು ನೋಡಿ ಸಂತೋಷವೇ ಆಯಿತು. ಆತಂಕವೂ ತೋರಿತು.

ಒಳಗೆ ಹೋಗಿ ತಂದೆಗೆ ಕಾಲು ತೊಳೆಯಲು ನೀರು ತಂದಿಕ್ಕಿ ಆಸರಿಗೆ ಬೆಲ್ಲ ನೀರು ಕೊಟ್ಟಳು.

"ಅಪ್ಪ ಎಂತಕೆ ಇದ್ದಕ್ಕೆ ಇದ್ದ ಹಾಂಗೆ ಬಂದದು? ಅಬ್ಬೆ ಅಕ್ಕ ಸೌಖ್ಯವೋ?" ಎಂದು ವಿಚಾರಿಸಿದಳು. ಅಷ್ಟೊತ್ತಿಗೆ ರಘುರಾಮನೂ ಅಲ್ಲಿಗೆ ಬಂದ.

ಅಪ್ಪಣ್ಣಭಟ್ಟರು "ಎನಗೆ ಅರ್ಜೆಂಟಾಗಿ ಇತ್ಲಾಗಿ ಬರೇಕಾತು, ನಿನ್ನ ತಂಗೆ ಸರಸ್ವತಿಯ ಕೇಳ್ಕೊಂಡು ಸಾಗರದ ಕಡೇಂದ ಬಂದಿತ್ತಿದ್ದವು. ಕೂಸೂ ಮಾಣಿಯ ಜಾತಕ ಹೊಂದಾಣಿಕೆ ಆಯಿದು. ಆನೂ ನಿನ್ನ ಗೋವಿಂದ ಮಾವನೂ ಅವರಲ್ಲಿಗೆ

ಹೋಗಿ ಬಯಿಂದೆಯೊ. ಅವಕ್ಕೆ ಆದಷ್ಟು ಬೇಗ ಮದುವೆ ಮುಗುಶೇಕು ಹೇಳಿ ಇದ್ದು. ಅದಕ್ಕೆ ನಿಂಗೊಗೂ ವರ್ತಮಾನವ ಮುಟ್ಟುಸುವೊ ಹೇಳಿ ಬಂದೆ."

"ಮಾಣಿ-ಮನೆತನ ಸರಿಯಾಗಿದ್ದರೆ ಕೊಡಿ" ಹೇಳಿದವ ರಘುರಾಮ.

"ಮಾಣಿ ಯೋಗ್ಯ ಇದ್ದ. ಮನೆ, ಮನೆತನ ಸರಿಯಾಗಿದ್ದು, ನಿನ್ನಷ್ಟು ಕಲ್ತವ ಅಲ್ಲ. ಅವಂಗೆ ಮೆಟ್ರಿಕ್ ಆಯಿದು. ಮನೇಲಿ ತೋಟ, ವ್ಯವಹಾರ ನೋಡ್ಕೊಂಡು ಇದ್ದ."

"ಅವು ಎಷ್ಟು ಜೆನ ಮಕ್ಕೊ" ಶಾರದೆ ಕೇಳಿದಳು.

"ಮೂರು ಮಾಣ್ಯಂಗಳೂ ಒಂದು ಕೂಸು. ಕೂಸು ಸಣ್ಣದು. ವರ್ಷಕ್ಕೆ ನಲ್ವತ್ತು ಖಂಡಿ ಅಡಕ್ಕೆ ಬತ್ತಾಡ. ಅತ್ತಿತ್ತ ಹೋಪಲೆ ಮನೇಲಿ ಜೀಪು ಮಡಿಕ್ಕೊಂಡಿದ್ದವು."

"ಹಾಂಗಾರೆ ದೊಡ್ಡ ಕುಳವೇ, ಸರಸ್ವತಿಯ ನಶೀಬು ಒಳ್ಳೇದು."

"ಹಾಂಗೆ ಹೇಳೇಕಷ್ಟೇ" ಅಪ್ಪಣ್ಣಭಟ್ಟರು ರಘುರಾಮನ ಕಡೆಗೆ ತಿರುಗಿ

"ರಘುರಾಮ, ಎನಗೆ ಗಂಡುಹುಳ ಇಲ್ಲೆ ಹೇಳಿ ನಿನಗೆ ಗೊಂತಿದ್ದು. ಮದುವೆ ಜೆಂಬರಂಗಳಲ್ಲಿ ಹೆಚ್ಚು ಓಡಾಡಿ ಅನುಭವವೂ ಇಲ್ಲೆ. ಹಾಂಗಾಗಿ ನೀನೇ ಎನ್ನ ಮಗನ ಜಾಗೇಲಿ ನಿಂದು ಎಲ್ಲಾ ಸುಧಾರ್ಸುವ ಧೈರ್ಯ ಕೊಡೇಕು."

"ನಿಂಗೊ ಚಿಂತೆ ಮಾಡೇಡಿ ಮಾವ. ಆನು ನಿಂಗೊಗೆ ಎಲ್ಲಾ ವ್ಯವಸ್ಥೆ ಮಾಡಿಕೊಡುವೆ. ಬೇಕಾದರೆ ಮದುವೆಗೆ ಎಂಟು ದಿನ ಮೊದಲೇ ಶಾರದೆಯನ್ನು ಕಳುಸಿಕೊಡುವೆ. ಮದುವೆ ಕರ್ಚಿಗೆ ತೊಂದರೆ ಇದ್ದರೆ ಹೇಳಿ ಆನು ಪೈಸದ ವ್ಯವಸ್ಥೆಯನ್ನೂ ಮಾಡುವೆ" ರಘುರಾಮ ಮಾವನಿಗೆ ಭರವಸೆ ಕೊಟ್ಟ.

"ನಿನ್ನ ಹಾಂಗಿಪ್ಪ ಅಳಿಯ ಸಿಕ್ಕಿಗ್ದು ಎನ್ನ ಪುಣ್ಯ. ಹಾಂಗಾರೆ ಮದುವೆಗೆ ಮೂರ್ತ ಎತ್ತುದೆಯೋ?"

"ಎತ್ತಿ ಮಾವ. ಮದುವೆ ಚೆಂದಕೆ ನಡೆವ ಹಾಂಗೆ ಆನು ನೋಡಿಕೊಂಬೆ. ನಿಂಗೊ ಚಿಂತೆ ಮಾಡೇಡಿ."

"ಅಣ್ಣ ಯಾವಾಗ ಬಂದದು? ಎನಗೆ ಗೊಂತೇ ಆಯಿದಿಲ್ಲೆ" ಎಂದು ಹೊರಬಂದರು ರಘುರಾಮನ ತಾಯಿ.

"ರಜಾ ಹೊತ್ತಾತು ಅಷ್ಟೆ" ಹೇಳಿದರು ಅಪ್ಪಣ್ಣಭಟ್ಟರು ಹಾಗೇ

"ಎಂಗಳ ಸರಸ್ವತಿಯ ಕೇಳ್ಕೊಂಡು ಸಾಗರ ಕಡೇವು ಬಯಿಂದವು. ಅವಕ್ಕೆ ಕೂಸು ಅಕ್ಕು ಹೇಳಿ ಆಯಿದು. ಅದಕ್ಕೆ ರಘುರಾಮಂಗೂ ಒಂದು ಮಾತು ಹೇಳಿ ಹೋಪೊ ಹೇಳಿ ಬಂದದು" ತಾನು ಬಂದ ಉದ್ದೇಶ ತಿಳಿಸಿದರು ಭಟ್ಟರು.

"ನಿಂಗೊಗೆ ಸರಿ ಆವುತ್ತು ಹೇಳಿ ಆದರೆ ಮುಂದುವರಿಶಿ. ಎಂಗೊ ಎಲ್ಲೋರೂ ನಿಂಗಳ ಬೆನ್ನಿಂಗೆ ಇದ್ದೆಯೊ. ಹೆದರೇಡಿ".

"ಅದನ್ನೇ ಕೇಳ್ಳೆ ಬಂದದು ಅತ್ತಿಗೆ ಆನು. ಆನು ಒಬ್ಬಂಟಿಗ, ಎನ್ನ ಕೈ ಹಿಡಿವವು ಆರೂ ಇಲ್ಲೆನ್ನೆ. ಇದು ನಿಂಗೊಗೆ ಗೊಂತಿದ್ದ ವಿಷಯ"

"ಚಿಂತೆ ಮಾಡೇಡಿ ಅಣ್ಣ, ರಘುರಾಮನ ಕೂಸಿನ ಯಾವಾಗ ಬೇಕಾದರೂ ಕಳುಹಿಸಿ ಕೊಡ್ಳಕ್ಕು ನಿಂಗೊಗೆ ಎಂತ ಸಹಾಯ ಬೇಕೋ ಕೇಳೋಳಿ ದಾಕ್ಷಿಣ್ಯ ಮಾಡೇಡಿ"

"ನಿಂಗೊ ಇಷ್ಟು ಧೈರ್ಯ ಕೊಟ್ಟ ಮೇಗೆ ಎನಗೆ ಚಿಂತೆ ಇಲ್ಲೆ ಆನು ಮದುವೆಗೆ ಜೋಯಿಸನ ಹತ್ರೆ ಮೂರ್ತ ಕೇಳ್ಕೊಂಡು ಹೋವುತ್ತೆ. ಅವಕ್ಕೆ ಆದಷ್ಟು ಬೇಗನೆ ತಿಳುಶೇಕಾಡ"– ಆನೆಂಬಗ ಹೆರಡೇಕೊ?"

"ಎಲ್ಲಿಗೆ ಹೋಪದು. ಮಿಂದಿಕ್ಕಿ ಬನ್ನಿ. ಮಧ್ಯಾಹ್ನ ಉಂಡಿಕ್ಕಿಯೇ ಹೋಪಲಕ್ಕು. ಅಡಿಗೆ ಬೇಗ ಮುಗಿಶುತ್ತೆ ಆತೊ" ಹೇಳಿದರು ನಾಗಮ್ಮ. ಅವರ ಮಾತನ್ನು ಮೀರುವ ಮನಸ್ಸಾಗಲಿಲ್ಲ ಅಪ್ಪಣ್ಣಭಟ್ಟರಿಗೆ – ಸ್ನಾನ ಮಾಡಿ, ಊಟ ಮಾಡಿಯೇ ಅಲ್ಲಿಂದ ಹೊರಟರು. ಸೀದಾ ರಾಮಜೋಯಿಸರ ಹತ್ತಿರ ಹೋಗಿ ಮಗಳ ಜಾತಕ, ಅಳಿಯನ ಜಾತಕವನ್ನು ತೋರಿಸಿ, ಲಗ್ನ, ಮುಹೂರ್ತ ತಿಳಿಸಬೇಕೆಂದು ಕೇಳಿಕೊಂಡರು. ಜೋಯಿಸರು ಗುಣಿಸಿ, ಭಾಗಿಸಿ ನೋಡಿ ಹೇಳಿದರು.

"ಈ ತಿಂಗಳು ನಿಂಗೊಗೆ ಮೂರ್ತ ಇಲ್ಲೆ. ಬಪ್ಪ ತಿಂಗಳ ಎಂಟನೇ ತಾರೀಖಿನ ಮತ್ತೆ ಒಳ್ಳೆ ಮೂರ್ತ ಇದ್ದು. ಆ ತಿಂಗಳ ಶುಕ್ರವಾರ, ಸೋಮವಾರ ಎರಡು ದಿನವೂ ಶುಭ ಮುಹೂರ್ತ ಇದ್ದು. ಶುಕ್ರವಾರ ಆದರೆ ಹಗಲು ಹೊತ್ತು ಹನ್ನೆರಡೂ ಇಪ್ಪತ್ತೈದಕ್ಕೆ ಮೂರ್ತ, ಸೋಮವಾರ ಆದರೆ ಇರುಳು 9 ಗಂಟೆಗೆ ಆವುತ್ತು. ಎರಡೂ ಮುಹೂರ್ತ ಒಳ್ಳೆದಿದ್ದು. ನಿಂಗೊಗೆ ಯಾವುದು ಅನುಕೂಲವೋ ಆ ದಿನ ಮಡಿಕ್ಕೊಳ್ಳಿ" ಹೇಳಿದರು ಜೋಯಿಸರು. ಜೋಯಿಸರಿಗೆ ಇಪ್ಪತ್ತು ರೂಪಾಯಿ ದಕ್ಷಿಣೆ ಕೊಟ್ಟು ನಮಸ್ಕಾರ ಮಾಡಿ ಹೊರಬಿದ್ದರು ಅಪ್ಪಣ್ಣ.

ಸೀದಾ ಮನೆಗೆ ಬಂದು ನಡೆದುದೆಲ್ಲವನ್ನೂ ಹೆಂಡತಿಗೂ ಮಗಳಿಗೂ ತಿಳಿಸಿದರು.

"ಶಾರದೆಯ ಗಂಡ ನಮಗೆ ಸ್ವಂತ ಮಗ ಇದ್ದ ಹಾಂಗೆ. ತಾನು ಕಲ್ತವ ಹೇಳುವ ಹಮ್ಮು ಹಾಂಕಾರ ರಜವೂ ಇಲ್ಲದ್ದವ"

"ಅವರ ಅಬ್ಬೆ ಅಪ್ಪನೂ ಹಾಂಗೇ ಇದ್ದವು. ಶಂಕರಿ ಆಲದ ಮರದ ಬುಡಲ್ಲಿ ಆಲದ ಸಸಿಯೇ ಹುಟ್ಟುದು, ಕಾಸರ್ಕನ ಮರದ ಕೆಳ ಕಾಸರ್ಕನ ಸೆಸಿ ಹುಟ್ಟುದು."

"ಅಪ್ಪಾ, ಭಾವಂದ ಹೆಚ್ಚು ಪೈಸೆ ತೆಕ್ಕೋಳೆಡಿ, ಬೇಂಕಿಂದಲೂ ರಜಾ ತೆಕ್ಕೊಳ್ಳಿ. ಹಾಂಗೇ ಎನ್ನ ಚಕ್ರಸರದ ಎರಡೆಳೆ ಮುರುಶಿ ಸರಸ್ವತಿಗೆ ಒಂದು ಚೈನು, ಮಾಣಿಗೊಂದು ಉಂಗುರವೂ ಮಾಡ್ಸಿಕೊಡಿ" ಅಂದಳು ಕಾವೇರಿ.

"ನಿನ್ನದರ ಎಲ್ಲಾ ಎಂಗೊ ಮುಡ್ಚಿ ತಿಂದರೆ ನಿನಗೆ ಮುಂದಕ್ಕೆ ಎಂತದೂ ಬೇಡದೋ ಮಗಳೇ?"

"ಎನ್ನದು ಹೇಂಗಾದರೂ ಆವುತ್ತು ಅಪ್ಪ, ಎನಗೆ ಇನ್ನೆಂತಪ್ಪಲಿದ್ದೂ ಸಾವನ್ನಾರ ಬದಕ್ಕೇಕು ಅಷ್ಟೇ. ತಂಗೆಕ್ಕೋ ಆದರೂ ಸುಖಲ್ಲಿ ಇರಲಿ. ಅದರ ನೋಡಿ ಆನು ಸಂತೋಷಪಡುತ್ತೆ. ನಿಂಗೊ ಆನು ಹೇಳಿದ ಹಾಂಗೆ ಮಾಡಿ, ಬೇರೆ ಆಲೋಚನೆ ಮಾಡೇಡಿ" ಕಾವೇರಿಯ ಮಾತಿಗೆ ಜವಾಬು ಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಅಪ್ಪಣ್ಣಭಟ್ಟರು.

ಮುಂದಿನ ತಿಂಗಳ 8ನೇ ತಾರೀಖು ಶುಕ್ರವಾರ ದಿವಸವೇ ಒಳ್ಳೇ ಮುಹೂರ್ತವಿದೆಯೆಂದು ಸಾಗರಕ್ಕೊಂದು ಪತ್ರ ಬರೆದರು. ಅದರಲ್ಲಿ ಅವರಿಗೆ ಆ ಮುಹೂರ್ತ ಅನುಕೂಲವಾಗಿದೆಯೇ ಎಂದು ತಿಳಿಸಲೂ ಬರೆದರು. ಮರು ಟಪಾಲಿನಲ್ಲಿ ಆ ಮುಹೂರ್ತ ತಮಗೆ ಒಪ್ಪಿಗೆ ಎಂದು ತಿಳಿಸಿದರು.

ಮರು ಆದಿತ್ಯವಾರ ರಘುರಾಮನಿಗೆ ರಜಾ ಇದ್ದ ಕಾರಣ ತಾನೇ ಮಾವನ ಮನೆಗೆ ಬಂದು ಸಮಾಚಾರ ತಿಳಿದುಕೊಂಡ. "ಮುಂದಿನ ಶುಕ್ರವಾರ ಮದುವೆ ಎಂದರೆ ಇನ್ನು ಹದಿನೆಂಟೇ ದಿನ ಉಳುದ್ದು. ಆನು ನಾಲ್ಕು ದಿನ ಮದಲೇ ಬಂದು, ಸಾಮಾನು ತರ್ಸಿ ಹಾಕುಸುತ್ತೆ, ಹಾಂಗೇ ಮದಿಮ್ಮಾಳಿಂಗೆ ತರೇಕಾದ ಚೌಳಿ, ಮಾಣಿಗೆ ಕೊಡೇಕಾದ ಉಡುಗೊರೆ, ಎಲ್ಲ ತರ್ಸಿಕೊಡುತ್ತೆ. ಮನೆ ಮುಂದಾಣ ಚಪ್ಪರದ ವ್ಯವಸ್ಥೆ ಎಲ್ಲಾ ಮಾಡ್ಸಿಕೊಡುವೆ ಆತೋ" ಎಂದು ಭರವಸೆ ಕೊಟ್ಟು "ಅಡಿಗೆಯವಕ್ಕೆ ಈಗಳೇ ಹೇಳೇಕು, ಒಟ್ಟು ನೂರೈವತ್ತು ಜೆನಕ್ಕೆ ಹೇಳೇಕು."

ಅಷ್ಟು ಜೆನಕ್ಕೆ ಹೇಳಿ ಮಾಡ್ಗೊಂಬಲೆ ನಮಗೆಡಿಗೊ."

"ಮಾವ, ಹೆಚ್ಚುಕಮ್ಮಿ ಇದ್ದರೆ ಆನು ನೋಡ್ಕೊಂಬೆ. ನಿಂಗೊ ಹೆದರೇಡಿ. ರಜಾ ದೊಡ್ಡಕೇ ಜಂಬ್ರವ ಮಾಡುವೊ. ಸಾಗರದವು ಶ್ರೀಮಂತ ಕುಳ. ಮತ್ತೆಂತ ವರದಕ್ಷಿಣೆ ಕೊಡ್ಳೆ ಇಲ್ಲೆನ್ನೆ ನವಗೆ."

"ವರದಕ್ಷಿಣೆ ಹೇಳಿರೆ ಎಂತದು ರಘುರಾಮ?" ಹವೀಕನಾಗಿ ಹುಟ್ಟಿದ ಅಪ್ಪಣ್ಣಭಟ್ಟರಿಗೆ ಆ ಶಬ್ದವೇ ಹೊಸದು.

"ನಿಂಗೊಗೆ ಗೊಂತಿರೆ ಮಾವ, ನಮ್ಮ ಜಾತಿಲಿ ವರದಕ್ಷಿಣೆ ಹೇಳುವ ಶಬ್ದವೇ ಇಲ್ಲೆ. ಕೂಸು ಮಾಣಿ, ಬುಡ ಕುಲ, ಗೋತ್ರ ನೋಡಿದರೆ ಆತು. ಆದರೆ ಬೇರೆ ಜಾತಿಲಿ ಹಾಂಗಲ್ಲ. ಕೂಸಿನ ಕೊಡುವಾಗ ಇಂತಿಷ್ಟು ಚಿನ್ನ, ಬೆಳ್ಳಿ ಪಾತ್ರೆ-ಪಗಡೆ, ಪೈಸೆ ಹೇಳಿ ಕೊಡೇಕು. ಅದನ್ನೇ ವರದಕ್ಷಿಣೆ ಹೇಳುದು."

"ಅಂಬಾಗ ಅವಕ್ಕೆ ಕೂಸು ಹೇಂಗಿದ್ದರೂ ಆವುತ್ತಾಯಿಕ್ಕು - ಮತ್ತೆ ಪಾಪದ ವರ ಕೂಸುಗೋಕ್ಕೆ ಗತಿಯೆಂತದು? ನೀನು ಹೇಳುವ ಪ್ರಕಾರ ಬಡವರ ಕೂಸುಗಳ ಬಡವರಿಂಗೇ ಕೊಡೇಕಷ್ಟೇ."

ಅಪ್ಪು ಮಾವ, ಈ ವರದಕ್ಷಿಣೆ ಕೊಡ್ಳೆ ಶಕ್ತಿ ಇಲ್ಲದ್ದವು ಹಾಂಗೇ ಮಾಡೇಕಷ್ಟೆ. ಎಷ್ಟೋ ಕಡೆ ಮನೆ ಮಾರಿದವೂ ಇದ್ದವು. ಆಸ್ತಿ ಗೆದ್ದೆ ಮಾರಿ ಪಾಪರು ಆದವೂ ಇದ್ದವು. ಅದಕ್ಕೆ ಗಾದೆಯೇ ಇಲ್ಲೆಯೋ "ಅಳಿಯ ಮನೆ ತೊಳೆಯ ಹೇಳಿ" ಕೂಸಿನ ಕಡೆಯವು ಸಾಕಷ್ಟು ವರದಕ್ಷಿಣೆ ಕೊಡದಿದ್ದರೆ ಅವಕ್ಕೆ ಗಂಡನ ಮನೇಲಿ ಅತ್ತೆ, ಗಂಡ ಎಲ್ಲಾ ಕಿರುಕುಳ ಕೊಡುತ್ತವು. ಎಷ್ಟೋ ಇದರ ಉಪದ್ರ ತಾಳದ್ದೆ ಕೂಸುಗಳೇ ಚಿಮಣಿ ಎಣ್ಣೆ ಮೈಗೆ ಸುರುದೋ, ವಿಷ ತಿಂದೋ ಸಾಯುತ್ತವು. ಇಲ್ಲದಿದ್ದರೆ ಗಂಡ, ಅತ್ತೆ ಮಾವ ಸೇರಿ ಕೂಸುಗಳನ್ನೆ ಕೊಲ್ಲುತ್ತವು. ಹೀಂಗಿಪ್ಪ ವರ್ತಮಾನ ದಿನಕ್ಕೊಂದಾದರೂ ಪೇಪರಲ್ಲಿ ಬತ್ತಿಲ್ಲಿಯೋ?"

"ಅಪ್ಪೊ! ಎನಗೆ ಈ ಸಮಾಚಾರವೇ ಗೊಂತಿಲ್ಲೆ. ಆನು ಪೇಪರು ತರುಸತ್ತೂ ಇಲ್ಲೆ. ಓದುತ್ತೂ ಇಲ್ಲೆ. ನಮ್ಮಲ್ಲಿ ಹಾಂಗಿಪ್ಪ ಪದ್ಧತಿಯೇ ಇಲ್ಲೆನ್ನೆ! ಹಾಂಗಾದ ಕಾರಣ ಎಂಕಾ ಬಡವರ ಕೂಸಾದರೂ, ಶ್ರೀಮಂತರ ಮನೆಗೆ ಹೋವುತ್ತು. ಶ್ರೀಮಂತರ ಮಗಳಕ್ಕಳನ್ನೂ ಬಡವರಿಂಗೆ ಕೊಡುತ್ತವು ಅಲ್ಲದೋ."

"ಅಪ್ಪು ಮಾವ, ಅದೃಷ್ಟಲಿ ನಮ್ಮ ಜಾತಿಯವು ತುಂಬಾ ಒಳ್ಳೆವು. ನಮಗೆ ಕೂಸು ಹುಟ್ಟಿದರೆ ಚಿಂತೆ ಇಲ್ಲೆ. ಮಾಣಿ ಹೇಳಿ ಹೆಚ್ಚಿನ ಸಂಭ್ರಮವೂ ಇಲ್ಲೆ. ನಿಂಗೊಗೆ ಗೊಂತಿರ. ಇನ್ನು ಬೇರೆ ಕಡೆ ಕೂಸು ಹುಟ್ಟಿದ ಕೂಡ್ಳೆ ಕೊರಳು

ಪೆಜಂಕುತ್ತವು. ಇಲ್ಲದಿದ್ದರೆ ಕಳ್ಳೀಹಾಲನ್ನೋ, ಭತ್ತದ ಕಾಳನ್ನೋ ಅದರ ಬಾಯಿಗೆ ಹಾಕಿ ಸಾಯುವ ಹಾಂಗೆ ಮಾಡುತ್ತವು. ಇಲ್ಲದಿದ್ದರೆ ಬಸುರಿ ಆದಿಪ್ಪಗಳೇ ಎಕ್ಸ್‌ರೇ ತೆಗೆಶಿ ಕೂಸು ಹೇಳಿ ಆದರೆ ಗರ್ಭ ತೆಗೆಶುತ್ತವು"

"ಎನಗೆ ಇದೆಲ್ಲಾ ಗೊಂತೇ ಇಲ್ಲೆ ರಘುರಾಮ. ಕೇಳಿಯೇ ಗಾಬ್ರಿ ಆವುತ್ತು. ಆದರೆ ನಮ್ಮ ಪೈಕಿಯವು ಆರೂ ಹೀಂಗೆ ಮಾಡಿದ್ದರ ಕೇಳಿದ್ದಿಲ್ಲೆ ಆನು."

"ನಿಂಗೊ ಕೇಳ್ಳೆ ಹವೀಕರ ಬಿಟ್ಟು ಬೇರೆ ಸಮಾಜವ ನೋಡಿದ್ದೀರೋ? ನಮ್ಮಲ್ಲಿ ಹಾಗೆಂತದೂ ಇಲ್ಲೆನ್ನೆ. ನವಗೆ ಸಂಬಂಧವೇ ಮುಖ್ಯ."

"ಅದಪ್ಪಪ್ಪಾ ಎಂಗಳ ಪುಣ್ಯ ಇಲ್ಲದಿದ್ದರೆ ನಾಲ್ಕು ಕೂಸುಗಳೇ ಆದ ಎನ್ನ ಹಾಂಗಿದ್ದವು ಅವರ ವಿಷ ಕೊಟ್ಟೇ ಕೊಲ್ಲೆಕಾತು–ಇಲ್ಲದಿದ್ದರೆ ಕೈಕಾಲು ಕಟ್ಟಿ ಬೆಳ್ಳಕ್ಕೆ ಬಿಡೇಕೌತು ಅಲ್ಲದೋ?"

ಯಾಕೋ ಮಾತು ಸ್ವಲ್ಪ ದೀರ್ಘವೇ ಆಯಿತು. ಅಪ್ಪಣ್ಣಭಟ್ಟರಿಗೆ ಮನೆಗೆ ಹೋಗಲು ಅವಸರವಾಯಿತು.

"ಮಾವ – ನಿಂಗೊ ಎರಡು ಆಳುಗಳ ಬಪ್ಪಲೆ ಹೇಳಿ ಜಾಲನ್ನೂ ಮನೆಯ ಸುತ್ತನ್ನು ರಜಾ ಸ್ವಚ್ಛ ಮಾಡ್ಸಿ, ರಜಾ ಮಣ್ಣು ಕೆದರಿ, ಹೊಳು ಶಿಕ್ಕಿ. ಆನು ಮುಂದಿನವಾರ ಬಂದು ಚೆಪ್ಪರ ಹಾಕುವ ವ್ಯವಸ್ಥೆ ಮಾಡುವೆ ಆಗದೋ"

"ಅಕ್ಕು ಇನ್ನು ಒಂದೊಂದೇ ಸುರು ಮಾಡುವಾಗ ಕೆಲಸ ಮುಗೀಗು." ಹೇಳಿದ ಅಪ್ಪಣ್ಣಭಟ್ಟ.

"ಅತ್ತೆ ಆನು ಉಂಬಲೆ ಇರುತ್ತಿಲ್ಲೆ, ಮನೆಗೆ ಹೋವುತ್ತೆ. ಶಾರದೆಯೂ ಕಾದಂಡು ಇಕ್ಕು. ಆದಿತ್ಯವಾರವೊಂದೇ ಎಂಗೊ ಒಟ್ಟಿಂಗೆ ಕೂದು ಉಂಬದು. ಮನೆ ಒಳಗೆ ಹೋಗಿ ಅತ್ತೆಗೆ ಹೇಳಿ ರಘುರಾಮ ಹೊರಡಲು ಅನುವಾದ.

"ಹಾಂಗಾರೆ ಒಂದಿಷ್ಟು ಕಾಫಿ ಆದರೂ ಕುಡುದು ಹೋಗು" ಹೇಳಿದರು ಶಂಕರಮ್ಮ, ಒಲೆ ಮೇಲೆ ಕಾಫಿಗಿಟ್ಟು, ಅಳಿಯನಿಗೆ ಕೊಟ್ಟರು.

"ಮಾಣಿ ಉಷಾರಿದ್ದನ್ನೆ" ಎಂದೂ ವಿಚಾರಿಸಿದರು.

"ಓ ಉಷಾರಿಯೋ ಇದ್ದ. ಈಗ ಕೈಂದ ಕೆಳಬಿಡ್ಳೆ ಬಿಡುತ್ತ ಇಲ್ಲೆ. ರಜಾ ಹರಕ್ಕೊಂಡು ಹೋಪಲೆ ಸುರುಮಾಡಿದ್ದ. ಲೂಟಿಯೂ ಸುರುವಾಯಿದು."

"ಮಕ್ಕೊ ರಜಾ ಲೂಟಿ ಮಾಡಿದರೇ ಚೆಂದ" ಮೊಮ್ಮಗನನ್ನು ಕೊಂಡಾಡಿದರು ಶಂಕರಮ್ಮ.

"ಆತಂಬಗ ಆನು ಹೋವುತ್ತೆ ಅತ್ತೆ, ಮತ್ತೆ ಬಪ್ಪವಾರಲ್ಲಿ ಬತ್ತೆ" ಹೇಳಿ, ಮನೆ ಕಡೆಗೆ ನಡೆದ. ರಘುರಾಮ ಹೊಸದೊಂದು ಹೋಂಡಾ-ಮೋಟಾರು ಬೈಕು ತೆಗೆದುಕೊಂಡಿದ್ದ. ದಿನಾಲೂ ಶಾಲೆಗೆ ಹೋಗಲಿಕ್ಕೂ ಆಯಿತು. ಶಾರದೆ ಮಗುವನ್ನೂ ಅಡ್ಡಾಡಿಸಲಕ್ಕೂ ಆಯಿತು, ಎಂಬ ಉದ್ದೇಶದಿಂದ.

ರಘುರಾಮ ಹೇಳಿದಂತೆ ಶಾರದೆ ಅಡಿಗೆ ಮುಗಿಸಿ ಸ್ನಾನ ಮಾಡಿ ಗಂಡನ ಹಾದಿ ನೋಡುತ್ತಾ ಕುಳಿತ್ತಿದ್ದಳು. ಗಂಡ ಬಂದ ಕೂಡಲೇ ಊಟಕ್ಕೆ ಅಣಿ ಮಾಡಿದಳು. ಇಬ್ಬರೂ ಕುಳಿತು ಊಟ ಮಾಡುವಾಗ ರಘುರಾಮನೆಂದ

"ಶಾರದೆ ಆನು ನಿನ್ನ ಅಪ್ಪನ ಮನೆಗೆ ಹೋಗಿ ರಜಾ ವ್ಯವಸ್ಥೆ ಮಾಡಿಕ್ಕಿ ಬಯಿಂದೆ, ಮುಂದಾಣ ವಾರವೂ ಹೋಗಿ ರಜಾ ಮಾಡುತ್ತೆ" ಹೇಳಿದ.

"ಶಾರದೆ-ತಂಗೆಯ ಮದುವೆಗೆ ಹೇಳಿ ನಿನಗೆ ಸೀರೆ ಬೇಕಾದರೆ ಹೇಳು ತಂದು ಕೊಡುವೆ ಆತೊ"

"ಅದಕ್ಕೆ ಜವುಳಿ ತಪ್ಪಾಗ ಎನಗೂ ಒಂದು ಪಟ್ಟೆ ಸೀರೆ ತನ್ನಿ, ಅತ್ತಗೂ ಒಂದು ತರೇಕು. ಅವಕ್ಕೂ ಇಲ್ಲೆ. ಮಾಣಿಗೂ ಒಂದು ಹೊಸ ಅಂಗಿ ಬೇಕು."

"ಅಂಬಾಗ ಎನಗೂ ಅಪ್ಪಂಗೂ ಬೇಡದೋ? ಎಂಗೊ ಎಂತ ಪಾಪ ಮಾಡಿದ್ದೆಯೊ? ಕೆಣಕಿದ ರಘುರಾಮ.

"ನಿಂಗೊಗೆ ಬೇಡ ಹೇಳಿ ಆನು ಹೇಳಿದ್ದನೋ? ಬೇಕಾದ್ದರ ಹೊಲಿಸಿ ಕೊಳ್ಳಿ"

"ಸುಮ್ಮನೇ ಹೇಳಿದ್ದು ಮಾರಾಯ್ತಿ. ಎಲ್ಲೋರಿಂಗೂ ತೆಕ್ಕೊಂಬೊ. ನಿನಗೆ ಏವ ಬಣ್ಣ, ಅಬ್ಬೆಗೆ ಎಂತ ಬಣ್ಣದ್ದು ಬೇಕು ಹೇಳಿ ಕೇಳಿಕ್ಕು ಆತೊ?

"ಇಂದೇ ಕೇಳುತ್ತೆ" ಹೇಳಿದಳು ಶಾರದೆ. ಅವಳಿಗೆ ತುಂಬಾ ಸಂತೋಷ ವಾಯಿತ್ತು. ಅವಳ ಮದುವೆಯಲ್ಲಿಯೂ ರೇಶ್ಮೆ ಸೀರೆ ತರಲಿಲ್ಲ. ಮಗ್ಗದ ಸೀರೆ ತಂದಿದ್ದರು; ಅದರಲ್ಲಿಯೇ ತೃಪ್ತಿಪಟ್ಟಿದ್ದಳು ಶಾರದೆ. ಮುಂದೊಂದು ದಿನ ತಾನು ರೇಶ್ಮೆ ಸೀರೆ ಉಡಬಹುದು ಎಂಬ ಕಲ್ಪನೆಯೂ ಅವಳಿಗೆ ಇರಲಿಲ್ಲ; ಅದುಟ್ಟು ಮದುವೆ ಮನೆಯಲ್ಲಿ ಓಡಾಡುವ ಕಲ್ಪನೆಯಲ್ಲಿಯೇ ತೇಲಿದಳು; ಉತ್ಸಾಹದಿಂದಲೇ ಮನೆ ಕೆಲಸ ಮುಗಿಸಿ, ಅತ್ತೆ ಬಳಿಗೆ ಓಡಿದಳು.

"ಅತ್ತೆ ನವಗೆ ಮದುವೆಗೆ ವಸ್ತ್ರ ತತ್ತವಡ. ಎನಗೂ, ನಿಂಗೊಗೂ ಪಟ್ಟೆ ಸೀರೆಡ. ನಿಂಗೊಗೆ ಏವ ಬಣ್ಣದ್ದಾಯೇಕು ಹೇಳೇಕಾಡ: "ಎನಗೆ ಪಟ್ಟೆ ಎಂತಕೆ

ಶಾರದೆ? ಅದರ ಪೆಟ್ಟಿಗೇಲಿಯೇ ಮಡುಗೇಕಷ್ಟೆ" ಆನೆಲ್ಲಿ ಹೆಚ್ಚಿಗೆ ಜೆಂಬಾರಕ್ಕೆ ಹೋವುತ್ತಿಲ್ಲೆನ್ನೆ–ಎನಗೆ ನೆಡಕ್ಕೊಂಡೂ ಹೋಪಲೂ ಆವುತ್ತಿಲ್ಲೆ. ಎನಗೆ ಮಗ್ಗದ್ದು ಸಾಕು. ನೀನು ಪಟ್ಟೆ ಸೀರೆ ತಕ್ಕೊ. ತಂಗೆಯ ಮದುವೆ ಅಲ್ಲದೊ? ಮುಂದೆ ಜೆಂಬಾರಂಗೋಕ್ಕು ಸುತ್ತ ಲಾವುತ್ತು."

"ಹಾಂಗೆ ಹೇಳಿರೆ ಹೇಂಗತ್ತೆ. ನಿಂಗೊಗೆ ಬೇಡದಿದ್ದರೆ ಎನಗೂ ಬೇಡ. ಎನಗೂ ಮಗ್ಗದ ಸೀರೆಯೇ ಸಾಕು. ನಿಂಗೊ ತೆಕ್ಕೊಂಡರೇ ಆನು ತೆಕ್ಕೊಯಿದು." ಸ್ವಲ್ಪ ಮುನಿಸು ತೋರಿಸಿದಳು ಶಾರದೆ. "ಅದಾ ಪಿಸುರು ಬಂತದಾ ನಿನಗೆ ಆತಪ್ಪಾ. ನಿನಗೆ ಬೇಕಾಗಿ ಆನೂ ಒಂದು ಪಟ್ಟೆ ಸೀರೆಯನ್ನೇ ತೆಕ್ಕೊಳ್ತೆ. ಮುಂದೆ ಆನಲ್ಲದಿದ್ದರೆ ನಿನಗಾದರೂ ಸುತ್ತಲಕ್ಕು, ಎರಡೂ ಬೇರೆ ಬೇರೆ ಬಣ್ಣ ಇರಲಿ

"ಆನು ಗುಲಾಬಿ ಕಲರು ತೆಕ್ಕೊಳ್ತೆ. ನಿಂಗೊಗೆ ನೀಲಿ ರಂಗಿದ್ದು ಅಕ್ಕೊ".

"ಅಕ್ಕು, ನಿನಗೆ ಯಾವುದು ಚೆಂದ ಕಾಣುತ್ತೋ ಆ ರಂಗಿದ್ದು ಆತೋ?"

"ಸೀರೆ ಎನಗಲ್ಲಾ ಅತ್ತೆ ನಿಂಗೊಗೆ"

"ಆತು ಎನಗೇ ನೀಲಿರಂಗು ತೆಗವಲೆ ಹೇಳು" ಚರ್ಚೆ ಬೇಡ. ಶಾರದೆಗೆ ಸಮಾಧಾನವಾಯಿತು. ಗಂಡ ಬರುವ ದಾರಿಯನ್ನೇ ಕಾದುಕೊಂಡಿದ್ದು – ಪಟ್ಟೆ ಸೀರೆಗಳ ಬಣ್ಣಗಳನ್ನು ತಿಳಿಸಿ, ಯಾವಾಗ ತರುತ್ತೀರಿ ಎಂದೂ ವಿಚಾರಿಸಿಕೊಂಡಳು.

"ಅಮಸರ ಮಾಡೇಡ ಶಾರಧೆ, ಮದುವೆಗೆ ಜೌಳಿ ತಪ್ಪಾಗ ನಮ್ಮದೂ ತಪ್ಪದು ಆತೋ" ಎಂದ ರಘುರಾಮ. ಶಾರದೆ ಅಷ್ಟಕ್ಕೆ ಸುಮ್ಮನಾದಳು. ಮದುವೆಯಾದ ಮೇಲೆ ತಾನು ಹೆಂಡತಿಗೆ ಏನೊಂದೂ ತಂದುಕೊಟ್ಟಿರಲಿಲ್ಲ ರಘುರಾಮ, ಶಾರದೆಯೂ ಬಟ್ಟೆ ಬರೆಗಾಗಲೀ ಬಂಗಾರಕ್ಕಾಗಿ ತನ್ನನ್ನು ಕಾಡಿರಲಿಲ್ಲ. ಇದ್ದದ್ದರಲ್ಲಿ ತೃಪ್ತಿ ಪಟ್ಟು, ಜೀವನಕ್ಕೆ ಹೊಂದಿಕೊಂಡವಳು; ನಗುತ್ತಾ ನಗುತ್ತ ಕಷ್ಟ ಸುಖದಲ್ಲಿ ಭಾಗಿಯಾದವಳು; ಏನೇ ಆಗಲಿ ತಂಗಿಯ ಮದುವೆಯ ನೆವನದಲ್ಲಿಯಾದರೂ ಅವಳಿಗೆ ಒಂದಿಷ್ಟು ಬಂಗಾರವನ್ನೂ ಮಾಡಿಸಿಕೊಡಬೇಕು ಎಂದು ಆಲೋಚಿಸುತ್ತಿದ್ದ ರಘುರಾಮ, ಆ ಕುರಿತು ತನ್ನ ತಾಯಿಯ ಸಲಹೆಯನ್ನು ಕೇಳಿದ."

'ಅಬ್ಬೆ – ಎನಗೆ ಪ್ರೊಡೆಂಟ್ ಫಂಡಿಂದ ರಜಾ ಸಾಲ ಸಿಕ್ಕುಗು. ಅದರಲ್ಲಿ ಒಂದೆರಡು ಸಾವಿರ ಮಾವಂಗೆ ಕೊಡೇಕು ಹೇಳಿದ್ದು ಮತ್ತೆ ಐದು ಸಾವಿರ ಉಳಿತ್ತು. ಅದರಂದ ಶಾರದೆಗೂ, ನಿನಗೊ ರಜಾ ಚಿನ್ನ ಮಾಡ್ಸುವನೋ ಹೇಳಿ ಇದ್ದೆ. ನೀನೆಂತ ಹೇಳುತ್ತೆ?"

"ಮಗಾ, -ನೀನು ಚಿನ್ನ ಮಾಡುಸುತ್ತರೆ ಶಾರದೆಗೆ ಮಾಂತ್ರ ಮಾಡ್ಸು. ಸಣ್ಣಪ್ರಾಯದ್ದು. ಆರೆಳೆ ಚಕ್ರಸರ ಮಾಡ್ಸು. ಚೆಂದ ಕಾಣುತ್ತು. ಎನಗೆಂತಕೆ ಮುದಿಕೊರಡಿಂಗೆ; ಎನಗೆ ಚಿನ್ನ ಬೇಕು ಹೇಳುವ ಆಶೆಯೂ ಇಲ್ಲೆ. ಆಶೆ ಇಪ್ಪಾಗ ನಿನ್ನ ಅಪ್ಪಂಗೆ ಮಾಡ್ಸಿಕೊಳ್ಳೊ ಆಯಿದಿಲ್ಲೆ. ಎನಗೆ ಬೇಡ ಮಗಾ. ಶಾರದೆಗೆ ಇರಳಿ, ನಾಡ್ದು ತಂಗೆಯ ಮದುವೆಗೆ ಹಾಯ್ಕೊಂಡು ಹೋಗಲಿ".

"ಆತಬ್ಬೆ, ನೀನು ಹೇಳಿದ ಹಾಂಗೆ ಮಾಡುತ್ತೆ. ಚಕ್ರಸರ ಆದರೆ ಇಬ್ರಿಂಗೂ ಹಾಕಲಕ್ಕು. ಮುಂದಿನ ವಾರವೇ ಮಾಡ್ಸಲೇ ಹಾಕುತ್ತೆ" ಹೇಳಿದ ಮಗ.

ಬಾಗಿಲ ಸಂದಿನಿಂದ ತಾಯಿ ಮಗನ ಸಂವಾದ ಕೇಳಿದ ಶಾರದೆಗೆ ಖುಷಿಯೋ ಖುಷಿ, ಪಟ್ಟೆ ಸೀರೆ ಉಟ್ಟುಕೊಂಡು-ಚಕ್ರಸರ ಹಾಕಿಕೊಂಡು,- ಮದುವೆಯಲ್ಲಿ ಚೆನ್ನಾಗಿ ಓಡಾಡಲೇಕು-ಮದುಮಕ್ಕಳಿಗೆ 'ಆರತಿ' ಎತ್ತಲು ತಾನೇ ಹೋಗಬೇಕು ಎಂಬ ಕಲ್ಪನೆಯಲ್ಲಿಯೇ ತೇಲಾಡಿದಳು ಶಾರದೆ- ತನ್ನ ಗಂಡ ಎಷ್ಟು ಒಳ್ಳೆಯವರು, ಅವರನ್ನು ಪಡೆಯಲು ತಾನೆಷ್ಟು ಪುಣ್ಯವಂತೆ-ಬಂಗಾರದ ಚೈನು ಬಿಡು. ಒಂದು ಸಂತೆಯಿಂದ ತರುವ ಕಂಠಿಯನ್ನು ತರಲು ಯೋಗ್ಯತಿಗೆ ಇರಲಿಲ್ಲ. ತನ್ನ ತವರಿನಲ್ಲಿ, ಅದಕ್ಕಾಗಿ ಎಷ್ಟೋ ಹಂಬಲಿಸಿದ್ದಳು ಶಾರದೆ;

ಲಗ್ನದ ಸಿದ್ಧತೆ ಭರದಿಂದ ಸಾಗುತ್ತಿತ್ತು. ರಘುರಾಮ ಅತ್ತಿಂದಿತ್ತ ಬಹಳ ಓಡಾಡುತ್ತಿದ್ದ. ಅಂಗಡಿ ಸಾಮಾನು, ಬಟ್ಟೆಬರೆ ಎಲ್ಲಾ ಖರೀದಿಯಾಗಿತ್ತು. ಮದುವೆಗೆ ಊಟಕ್ಕೆ ಬೇಕಾಗುವ ಬಾಳೆ ಎಲೆ-ಹಣ್ಣಡಕೆ, ತೆಂಗಿನಕಾಯಿ, ಇತ್ಯಾದಿಗಳನ್ನು ಅವರ ತಂದೆ ಕಳುಹಿಸಿಕೊಟ್ಟಿದ್ದರು; ಚಪ್ಪರಕ್ಕೆ ಬೇಕಾದ ಹೆಣೆದ ಮಡಲು, ಅಡಿಕೆ ಮರದ ತುಂಡುಗಳನ್ನು ಕಳುಹಿಸಿ ಕೊಟ್ಟಿದ್ದರು. ಮದುವೆ ಜೌಳಿ ತರುವಾಗ ರಘುರಾಮ ತನ್ನ ಅತ್ತೆ ಮಾವ ದೇವಕ್ಕಿಗೂ ಬಟ್ಟೆ ತರಲು ಮರೆಯಲಿಲ್ಲ, ಹಾಗೇ ಕಾವೇರಿಗೂ ಒಂಬು ಸಾದಾ ಸೀರೆಯನ್ನು ತಂದಿದ್ದ. ತಾನು ಅತ್ತಿಗೆಯೊಡನೆ ಹೆಚ್ಚು ಮಾತನಾಡದಿದ್ದರೂ ಅವಳ ದುರ್ಗತಿಯನ್ನ ನೆನೆದು ಎಷ್ಟೋ ಬಾರಿ ಮರುಗಿದ್ದ, ತನ್ನ ಸಹಾನುಭೂತಿಯನ್ನು ಎಷ್ಟೋ ಬಾರಿ ಹೆಂಡತಿಯೊಡನೆ ಹೇಳಿಕೊಂಡಿದ್ದ. ಎಲ್ಲರೂ ಮದುವೆಯ ಸಂಭ್ರಮದಲ್ಲಿ ಮೆರೆದರು.

ಹೇಳಿದ ದಿವಸಕ್ಕೆ ಲಗ್ನ ಸುಮೂರ್ತದಲ್ಲಿಯೇ ಜರುಗಿತು. ಇವರು ಕರೆದಷ್ಟು ಜೆನ ಬಂದಿದ್ದರು; ಮದುಮಗಳಿಗೆ ಹುಡುಗನ ಕಡೆಯಿಂದ ಚಕ್ರಸರ, ನಾಲ್ಕು ಬಳೆ, ಪಟ್ಟೆಸೀರೆ, ರವಕೆ ಉತ್ತರೀಯ 'ಬಟ್ಟಲಿ'ನಲ್ಲಿ ಇಟ್ಟರು. ಹವೀಕರಲ್ಲಿ ಹೆಣ್ಣಿನ ತಾಯಿ ತಂದೆ ಕನ್ಯಾದಾನ ಮಾಡುತ್ತಾರೆ; ಗಂಡಿನ ಕಡೆಯವರು ಅವಳನ್ನು ಸಾಲಂಕಾರ ಗೊಳಿಸುತ್ತಾರೆ. ಇತರ ಜಾತಿಗಳಲ್ಲಿ ಸಾಲಂಕೃತ ಕನ್ಯಾದಾನ ಪದ್ಧತಿ ಇದೆ-ಕನ್ಯೆಗೆ ಬೇಕಾದ ಬಟ್ಟೆಬರೆ, ಬಂಗಾರ-ಹೆಣ್ಣಿನ ಕಡೆಯವರೇ ಕೊಡಬೇಕು. ವರನಿಗೂ

ಕೊಡಬೇಕು. ವರ ತನ್ನ ಬಟ್ಟೆಯನ್ನು ತಾನೇ ತಂದುಕೊಳ್ಳುತ್ತಾನೆ-ಇದೊಂದು ಅಪರೂಪ ಪದ್ಧತಿ, ಈಗಲೂ ಹೆಚ್ಚು ಕಡಿಮೆ ಹಾಗೆಯೇ ಇದೆ.

ಮದುವೆಯಲ್ಲಿ ಶಾರದೆ, ಅಲಂಕಾರ ಮಾಡಿಕೊಂಡು ಸಾಕಷ್ಟು ಓಡಾಡಿದಳು. ಅಕ್ಕನೊಂದಿಗೆ ಕೊನೆಯ ತಂಗಿ ದೇವಕ್ಕಿಯೂ ಸೀರೆ ಕಟ್ಟಿಕೊಂಡು ದಿಬ್ಬಣಗರಿಗೆ ಅರಸಿನ ಕುಂಕುಮ ಕೊಡುವುದು-ಪನ್ನೀರು ತಳಿಯುವುದು ಮಲ್ಲಿಗೆ ಹೂ ಹಂಚುವುದೂ ಎಲ್ಲವನ್ನೂ ಉತ್ಸಾಹದಲ್ಲಿಯೇ ಮಾಡುತ್ತಿದ್ದಳು. ದೇವಕಿಗೆ ವರ್ಷ ಹನ್ನೆರಡಾದರೂ ಸ್ವಲ್ಪ ವಯಸ್ಸಿಗೆ ಮೀರಿದ ಬೆಳವಣಿಗೆಯಿತ್ತು. ಹಾಗೇ ಚುರುಕುತನವೂ ಇತ್ತು. ಮದಿಮ್ಮಾಳ ತಂಗೆ ನೋಡುವ ಹಾಂಗೆ ಇದ್ದು. ತಕ್ಕೊಂಡು ಹೋಪವಕ್ಕೆ ಒಳ್ಳೆ ಕೂಸು ಎನಿಸಿಕೊಂಡಳು ದೇವಕ್ಕಿ.

"ಕಾವೇರಿಯ ಮದುವೆ ಆದ್ದೇ ಆದ್ದು ಅಪ್ಪಣ್ಣಂಗೆ ಶುಕ್ರ ದೆಶೆ ಸುರುವಾತು; ಈಗ ಅವವೊಂದು ಗಟ್ಟಿ ಕುಳವೇ ಆದ. ಎಷ್ಟು ದರ್ಬಾರಿನಲ್ಲಿ ಮದುವೆ ಕಳುಶಿದ ನೋಡಿ".

"ಈಗ ಅವ ಅತ್ಲಾಗಿ ಇತ್ಲಾಗಿ ಪರಿವಾರ ಕಟ್ಯೊಂಡು ಪುಕ್ಕಟೆ ಕೂಳಿಂಗೆ ಹೋವುತ್ತಾ ಇಲ್ಲೆ. ಹಾಂಗೆ ಅಡಿಗಗೆ ಹೋಪದೂ ಬಿಟ್ಟಿದಾಂಡ"

"ಅವ ಈಗ ಎಂತಕೆ ಅದೆಲ್ಲಾ ಮಾಡೇಕು. ಮನೇಲಿ ಕೂದು ತಿಂಬಷ್ಟು ಅನುಕೂಲ ಇದ್ದು ಈಗ" ಇನ್ನೊಬ್ಬ ಪಿಸುದನಿ.

"ಕಾವೇರಿ ಅಶನಾರ್ಥ ಹೇಳಿಯೇ ಅವಂಗೆ ವರ್ಷಕ್ಕೆ ಎಂಟು ಸಾವಿರ ಬತ್ತಡ ಮತ್ತೆ ಅದರ ಮೈಮೇಲೆ ಹಾಕಿದ ಬಂಗಾರವನ್ನು ಪೂರ್ತಿ ಕೊಟ್ಟಿದ್ದವಾಡ. ಇನ್ನೆಂತಾಯೇಕು ಅವಂಗೆ-ಅದಕ್ಕೆ ಈಗ ಅಡಿಗ್ಗೆಗಿಡಿಗ್ಗೆ ಹೋಪತಿ ಮೈ ಬಗ್ಗುತ್ತಿಲ್ಲೆ ಆಯಿಕ್ಕು."

"ಅಂತೂ ಕಾವೇರಿಯ ನಶೀಬು ಹಾಳಾದರೂ, ಅಪ್ಪಣ್ಣನ ನಶೀಬು ಒಳ್ಳೆದಾತು. ಅವ ಮೇಲೆ ಬಿದ್ದ"

"ಮತ್ತೆ ಶಾರದೆಯ ಗೆಂಡನೂ ಒಳ್ಳೆ ಮಾಣಿ, ವಿದ್ಯಾವಂತ ಬೇಕಾದಷ್ಟು ಅಡಕ್ಕೆಯೂ ಬೆಳೆತ್ತು. ಹಾಂಗೆ ಹೈಸ್ಕೂಲಲ್ಲಿ ಮಾಸ್ಟ್ರ ಕೆಲಸವೂ ಇದ್ದು; ಅತ್ತೆ ಮಾವನ ಅಬ್ಬೆ ಅಪ್ಪನ ಹಾಂಗೇ ನೋಡುತ್ತಾಡ. ಈ ಮದುವೆಯ ವ್ಯವಸ್ಥೆ ಎಲ್ಲಾ ಅವನೇ ನೋಡಿಕೊಂಡದಾಡ"

"ಇಲ್ಲದಿದ್ದರೆ ಆ ಪೆದ್ದ ಅಪ್ಪಣ್ಣಂಗೆ ಇಷ್ಟೆಲ್ಲಾ ಮಾಡ್ಳೆ ಆವುತ್ತಿತ್ತೋ, ಈಗಾಣ ಸಂಬಂಧವೂ ಅದಂದ ಬಲ ಆದ್ದೇ ಸಿಕ್ಕಿದ್ದು; ಇವು ಇನ್ನೂ ಶ್ರೀಮಂತರಾಡ,

ಬೇಕಾದಷ್ಟು ಅಡಕ್ಕೆ, ಬಾಳೆ ಇದ್ದವು. ಎರಡು ಮಾಡಿ ಮನೆ, ಹಂಚಿನ ಮನೆ, ಆಳುಕಾಳು, ಅತ್ತಿತ್ತ ಹೋಪಲೆ ಜೀಪು ಎಲ್ಲಾ ಇದ್ದಾಡ"

"ಮಗಳು ಮುಂಡೆ ಆದರೂ ಚಿಂತೆ ಇಲ್ಲೆ. ಅಪ್ಪಣ್ಣ ಚಿಗುರಿದ ದಾ-ಹೇಳಿದ ಹಾಂಗೆ ಕಾವೇರಿಯ ಎಲ್ಲಿಯೂ ಕಾಣುತ್ತಿಲ್ಲೆ."

"ಅದು ಹೀಂಗಿಪ್ಪ ಜೆಂಬಾರಲ್ಲಿ ಎಲ್ಲಿಯೂ ಕಾಂಬಲೆ ಸಿಕ್ಕ. ನಿತ್ಯಲ್ಲಿ ಕೂಡಾ ಅದು ಹೆರಬಪ್ಪಶ್ರಮ ಇಲ್ಲೆ" ಹೇಳಿದವರು ಕೆಲವರು "ಎಷ್ಟಾದರೂ ಅಪ್ಪಣ್ಣನ ಕೂಸುಗೊ ಒಳ್ಳೇವು. ಒಂದರಿಂದ ಒಂದು ಬಲ. ಮನೆ ಕೆಲಸದಲ್ಲಿಯೂ ಉಷಾರಿದ್ದವು. ಕೊಂಡು ಹೋಪದಕ್ಕೆ ಯಾವ ಕೊರತ್ತೆಯೂ ಇಲ್ಲೆ."

"ಹಾಂಗಾಗಿ ಅಲ್ಲದೋ, ಅವನ ಕೂಸುಗಳ ಬೇಗ ಬೇಗ ಹೆರಕ್ಕೆಂಡು ಹೋದ್ದು; ಎಷ್ಟೋ ಶ್ರೀಮಂತರ ಕೂಸುಗೊ ಹಾಂಗೇ ಇದ್ದವು. "ಮುಂಡಾಸುದಾಯೆಸ ಬರ್ಪುಜ್ಯೆ-ಮುಟ್ಟಾಳೆ ತಾಯೆಗೆ ಕೊರುಪ್ಪುಜ್ಯೆ" ಹೇಳಿ ಆಯಿದು ಅವರ ಸ್ಥಿತಿ. "ಅದೆಲ್ಲಾ ಅವರ್ಥವರ ನಶೀಬು. ಇನ್ನೊಂದರ ಬಾಂಚಿಸಿದರೆ ಅಪ್ಪಣ್ಣ ಗೆದ್ದ."

"ಅದರ ದಾಂಟುಸಲೆ ಅಪ್ಪಣ್ಣಂಗೆ ರಜವೂ ಕಷ್ಟ ಆಗಪ್ಪಾ ಸಣ್ಣ ಕೂಸು ದೊಡ್ಡವರಿಂದ ಚೆಂದವೂ ಇದ್ದು ಉಪಾರಿಯೂ ಇದ್ದು – ಆರೂ ಅದರ ತೆಕ್ಕೊಂಡು ಹೋಕು. ಹೇಂಗೂ ಇಬ್ಬರು ಅಳಿಯಂದಿರೂ ಗಟ್ಟಿಕುಳವೇ ಅಪ್ಪಣ್ಣಂದು ಅದಕ್ಕೆ ಮಾಣಿಯ ಅವೇ ನೋಡುಗು; ಅಪ್ಪಣ್ಣ ಹೇಂಗೋ ಬಚಾವಾದ."

"ಒಂದು ಮಗಳ ಬಲಿಕೊಟ್ಟು ಅಪ್ಪಣ್ಣ ಮೂರು ಮದುವೆಯ ಮಾಡಿದ ಹೇಳುವ ಗಾದೆಯೇ ಅಕ್ಕು ಮುಂದಕ್ಕೆ" ಹೆ!ಹೆ! ಎಂದು ನಗಾಡಿದರು ಮತ್ತೊಬ್ಬರು. ಹೀಗೆ ಒಬ್ಬೊಬ್ಬರ ಬಾಯಲ್ಲಿ ಒಂದೊಂದು ಮಾತು ನುಸಿಳಿತು ಮದುವೆಯಲ್ಲಿ ಗಡದ್ದಾಗಿ ತಿಂದ ಮೇಲೆ ಆ ಮಾತುಗಳೆಲ್ಲಾ ಹೊರಟಿತ್ತು.

ಮದುವೆ ಬೀಗರೆಲ್ಲಾ 'ಸಾಗರಕ್ಕೆ ಅದೇ ದಿವಸ ಮರಳಿ ಹೋದರು. ಮದಿಮ್ಮಾಯ ಮಾತ್ರ 'ಅತ್ತೆ' ಮನೆಯಲ್ಲಿ ಉಳಿದ, ನಾಲ್ಕನೇ ದಿವಸದ ಚತುರ್ಥಿ ಮುಗಿಸಿ, ಆರನೇ ದಿವಸದ ಸಟ್ಟು ಮುಡಿ ಕಳೆದು 'ಹುಡುಗಿ' ಕಡೆಯವರೊಂದಿಗೆ ಸಾಗರಕ್ಕೆ ಹೋಗಬೇಕು, ಐದು ದಿವಸವೂ ಅವನು ಅತ್ತೆ ಮನೆಯಲ್ಲಿಯೇ ಇರಬೇಕು.

ಸಟ್ಟು ಮುಡಿಗೆ ಅಪ್ಪಣ್ಣ ಹತ್ತಿರ ಸಂಬಂಧಿಕರಿಗೆ ಮಾತ್ರ ಹೇಳಿಕೆ ಕೊಟ್ಟಿದ್ದರು, ಶಾರದೆ, ರಘುರಾಮ, ನೆರೆಕೆರೆಯವರು ನಾಲ್ಕು ಜೆನ, ಕಾವೇರಿ ಬಿಟ್ಟು, ಅಪ್ಪಣ್ಣನ ಸಂಸಾರ. ಇವರೆಲ್ಲರಿಗೂ ಹೋಗಿ ಬರಲು ರಘುರಾಮ ಒಂದು ಮೆಟಾಡರ್

ವಾಹನವನ್ನೇ ಹೇಳಿದ್ದ. ಒಟ್ಟು ಹನ್ನೆರಡು ಜನ ಸರಿಯಾಗಿ ಕೂತುಕೊಂಡು ಹೋಗಬಹುದಾದ ವಾಹನ.

ಸಟ್ಟು ಮುಡಿಯೂ ಗಡದ್ದಾಗಿ ನಡೆಯಿತು–ಬೀಗರ ಕಡೆಯವರೂ ಇನ್ನೂರು ಜನ ಆಗಬಹುದು, ಹೋಳಿಗೆ, ಲಾಡು ತುಪ್ಪ, ನಾಲ್ಕು ಪಲ್ಯ, ಸಾರು ಶೊದಿಲು, ಮೇಲಾರ, ಹೆಸರುಬೇಳೆ ಪಾಯಸ, ಉಣ್ಣುವಾಗ ಅನೇಕ ಚೂರ್ಣಿಕೆಗಳನ್ನು ಹಾಡಿದರು. ಬ್ರಾಹ್ಮಣರು, ಕೆಲವರು ಶಾಸ್ತ್ರೀಯ ಸಂಗೀತವನ್ನು ಹಾಡಿದರು. 'ಹರಿಭೋಜನ ಕಾಲೇ ಹರಹರ ಮಹದೇವ' ಎನ್ನುವ ಮಾಣಿಗಳ ದೊಡ್ಡವರ ಧನಿ ಚಪ್ಪರದಿಂದಲೂ ಹೊರಕೇಳತ್ತಿತ್ತು ಊಟವಾದವರಿಗೆ ಅಡಿಕೆ ವೀಳ್ಯದೆಲೆ ಸಿದ್ಧ ಮಾಡಿಟ್ಟರು.

ಎಲ್ಲರ ಊಟವಾದ ಮೇಲೆ, ಚಪ್ಪರದಲ್ಲಿ ಜಾಪೆ, ಜಂಬುಖಾನ ಎದುರು ಬದುರಾಗಿ ಹಾಸಿದರು. ಮಂಟಪದಲ್ಲಿ ಎರಡು ಮಣೆ ಹಾಕಿ ಮೇಲ್ಹಾಸನ ಹಾಕಿ –ಮದುಮಕ್ಕಳನ್ನು ಕೂರಿಸಿದರು. ಮದುಮಗಳ ಕಡೆಯ ಹೆಂಗಸರಿಗೆ ಅವರ ಹಿಂದುಗಡೆ ಜಮಾಖಾನ ಹಾಸಿ ಕೂರಿಸಿದರು. ಭಟ್ಟರು ಮಂತ್ರ ಘೋಷಣೆ ಸುರು ಮಾಡಿದರು. ಅಪ್ಪಣ್ಣಭಟ್ಟರಿಗೆ ಮಗಳನ್ನು ತೊಡೆಯ ಮೇಲೆ ಕೂರಿಸಿಕೊಳ್ಳುವಂತೆ ಹೇಳಿದರು – ಆಮೇಲೆ ಮದುಮಗಳ ಕೈಯನ್ನು ಮದುಮಗನ ಕೈಯಲ್ಲಿಟ್ಟು ಮದುಮಗನಿಗೆ ಈ ರೀತಿ ಉಚ್ಚರಿಸಲು ಹೇಳಿದರು.

'ಕಾಯೇಚ, ಕಾಮೇಚ, ಧರ್ಮೇಚ ನಾತಿ ಚರಾಮಿ" ಎಂದು ರಾಮಚಂದ್ರ ಅವುಗಳನ್ನು ಸ್ವಚ್ಛವಾಗಿ ನುಡಿದ.

ಕಾರ್ಯೇಶು ಮಂತ್ರಿ, ಕರಣೇಶು ಮಾತಾ, ಶಯನೇಶು ವೇಶ್ಯಾಕುಲ ಮದ್ಧರಂತಿ' ಎಂಬ ಉಪದೇಶವನ್ನು ಹುಡುಗಿಗೆ ಹೇಳಿದರು.

ಆಮೇಲೆ ಜೋಡಿಯನ್ನು ಹಾಗೆಯೇ ಮುಂದಕ್ಕೆ ಹೋಗಿ, ಸಭಿಕರಲ್ಲಿ ಹಿರಿಯರೆಲ್ಲರಿಗೆ ಕೈ ಮುಟ್ಟಿಸಿ, ಕೊನೆಯಲ್ಲಿ ಅವರ ಕೈಗಳನ್ನು ಭೂಮಿಗೆ ಮುಟ್ಟಿಸಿ – ಅಂದರೆ ಭೂಮಿ ತಾಯಿಯ ಸಾಕ್ಷಿಯೊ 'ಕನ್ಯಾದಾನ ಮಾಡಿದರು. ಆ ವೇಳೆ ಹೆಣ್ಣು ಒಪ್ಪಿಸಿಕೊಡುವ ಸಂದರ್ಭ– ಹುಡುಗಿಯನ್ನು ಸಂಪೂರ್ಣವಾಗಿ ಗಂಡನಿಗೆ – ಒಪ್ಪಿಸುವುದು, ಇನ್ನು ತವರು ಮನೆಯವರಿಗೆ ಯಾವ ಅಧಿಕಾರವೂ ಉಳಿದಿರು ವುದಿಲ್ಲ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಆಗುವ ಗಳಿಗೆ, ಹೆಂಗಳೆಯ ಕಣ್ಣಲ್ಲಿ ಎಲ್ಲಾ ನೀರಾಡಿತು, ಶಂಕರಮ್ಮ, ಅಪ್ಪಣ್ಣರ ಕಣ್ಣಲ್ಲೂ ನೀರು ಉದುರಿತು. ಎಲ್ಲರೂ ಮದುಮಕ್ಕಳಿಗೆ ಮಂತ್ರಾಕ್ಷತೆ ಹಾಕಿ ಹರಸಿದರು. ಕೆಲವರು ಉಡುಗೊರೆಗಳನ್ನು

ಕೊಟ್ಟರು. ಮದುವೆ ಮಕ್ಕಳು ಜೋಡಿಯಾಗಿ ದೇವರ ಮನೆಗೆ ಹೋಗಿ ನಮಸ್ಕರಿಸಿ, ಹಿರಿಯರೆಲ್ಲರಿಗೂ 'ಹೊಡಾಡಿದರು' – ಎಲ್ಲರೂ ಆಶೀರ್ವಾದ ಮಾಡಿದರು.

ಎಲ್ಲರಿಗೂ ಕಾಫಿ, ಪಾನಕ ಕೊಟ್ಟರು, – ದಿಬ್ಬಣಿಗರು ಮನೆಯ ಕಡೆಗೆ ಹೊರಟರು – ಮದುಮಕ್ಕಳ ಸಹಿತ ಊರ ದಾರಿ ಹಿಡಿದರು. ಪಯಣ ಮೌನವಾಗಿ ಸಾಗಿತ್ತು. ಮನೆಗೆ ಮುಟ್ಟುವಾಗ ರಾತ್ರಿ ಎಂಟಾಗಿತ್ತು.

"ಇನ್ನುನ ಮನೇಲಿ ಒಡಾಡ್ಶೈ ಸರಸ್ವತಿಯು ಇಲ್ಲದ ಹಾಂಗಾತು" ಎಂದು ಕಾವೇರಿ ಮುಂದೆ ಕಣ್ಣೀರು ಇಳಿಸಿದಳು. ಶಂಕರಮ್ಮ ಕೂಗೇಡ ಅಬ್ಬೆ – ಒಳ್ಳೇದೇ ಆತು, ಎಂತ ಎನ್ನ ಹಾಂಗೆ ನಿನ್ನ ಕಣ್ಣೆದುರೇ ಇರೇಕು ಹೇಳಿಯೋ ನಿನ್ನ ಆಸೆ!"

"ಹಾಂಗೆ ಹೇಳೇಡ ಕಾವೇರಿ, ಎನ್ನ ವೈರಿಗೂ ನಿನ್ನ ಸ್ಥಿತಿ ಬಪ್ಪಲಾಗ ಹೇಳಿ ಆ ದೇವರ ಬೇಡ್ಯೋಳ್ತೆ ಹೆತ್ತ ಕರುಳು ಕಿತ್ತು ಹೋಪಾಗ ಬೇನೆ ಆವುತ್ತು. ಎನ್ನ ಬೇನೆಯ ಇನ್ನಾರ ಮುಂದೆ ಹೇಳೇಕು ಮಗಳೇ. ಅದಕ್ಕೊ ನಿನ್ನ ಹತ್ತರೇ ಹೇಳ್ಕೊಂಡು ಎದೆ ಹಗುರ ಮಾಡ್ಕೊಂಡದು."

"ಇರಳಿ ಅಬ್ಬೆ, ಒಂದು ಎಂಟು ದಿನ ಬಣ ಬಣ ಅಕ್ಕು, ಮತ್ತೆಲ್ಲಾ ಸರಿ ಅಕ್ಕು. ಹೆಚ್ಚು ಚಿಂತೆ ಮಾಡೇಡ ಆತೊ.

"ಸಟ್ಟು ಮುಡಿ ಎಲ್ಲಾ ಹೇಂಗಾತು."

"ಭಾರೀ ಗೌಜಿಲಿ ಆತು. ಸರಸ್ವತಿಗೆ ಯಾವ ತೊಂದರೆಯೂ ಇಲ್ಲೆ' ಸುಖಲ್ಲಿ ಇಪ್ಪಲಕ್ಕು. ಅತ್ತೆ ಮಾವ, ಎಲ್ಲೋರೂ ಒಳ್ಳೆವು "ನವಗೆ ಅಷ್ಟೇ ಸಾಕು ಅಬ್ಬೆ" ಆನು ಆಶನ ಸಾರು ಮಾಡಿ ಮಡುಗಿದ್ದೆ ಎಲ್ಲೋರೂ ಎದ್ದು ಉಂಡು ಮನುಗಿ" ಹೇಳಿದಳು ಕಾವೇರಿ. ಅವಳಿಗೆ ಅಮ್ಮನೊಡನೆ ಹೆಚ್ಚು ಮಾತು ಬೆಳೆಸಲು ಇಷ್ಟವಿರಲಿಲ್ಲ.

ಎಲ್ಲರೂ ಊಟಕ್ಕೆ ಕುಳಿತರು, ನೆರೆಕೆರೆಯವರು ಅವರವರ ಮನೆಗೆ ಹೋದರು. ಶಾರದೆ ರಘುರಾಮ, ರಾಮಚಂದ್ರ ಸರಸ್ವತಿ, – ಅಪ್ಪಣ್ಣಭಟ್ಟ, ದೇವಕ್ಕಿ, ಇಷ್ಟು ಜೆನವೂ ಒಂದೇ ಸಾಲಿನಲ್ಲಿ ಕುಳಿತರು. ಕಾವೇರಿಯೂ ಶಂಕರಮ್ಮನೂ ಎಲ್ಲರಿಗೂ ಬಳಸಿದರು, ಅನ್ನ ಸಾರು –ಉಪ್ಪಿನಕಾಯಿ ಮಜ್ಜಿಗೆಯಲ್ಲಿ ಊಟ ಮುಗಿಯಿತು; ಎಲ್ಲರಿಗೂ ಆಯಾಸವಾದ ಕಾರಣ ಮಲಗಿ ನಿದ್ರೆ ಹೋದರು;

ರಾಮಚಂದ್ರನಿಗೆ ಕಾವೇರಿಯ ಮುಖ ಹೊಸದು, ಅದೇ ಮನೆಯಲ್ಲಿ ಐದು ದಿನವಿದ್ದರೂ ಒಮ್ಮೆಯೂ ಅವಳ ಮುಖ ನೋಡಿರಲಿಲ್ಲ ಆಕೆ ಯಾರೆಂದು

ಸರಸ್ವತಿಯನ್ನು ವಿಚಾರಿಸಿಕೊಂಡ. ಅವಳು ಇವರ ಹಿರಿಯಕ್ಕನೆಂದೂ ಮದುವೆಯಾಗಿ ನಾಲ್ಕು ದಿವಸಕ್ಕೇ ವಿಧವೆಯಾದವಳೆಂದೂ ಸಂಕ್ಷಿಪ್ತವಾಗಿ ತಿಳಿಸಿದಳು ಸರಸ್ವತಿ.

ರಘುರಾಮ ಶಾರದೆ ಮರುದಿವಸ ಕಾಫಿ, ತಿಂಡಿಯಾದ ಕೂಡಲೇ ಎಂಗೊ ಹೋವುತ್ತೆಯೊ ಮನಗೆ–ಸರಸ್ವತಿಯನ್ನು ರಾಮಚಂದ್ರನನ್ನೂ ನಾಳಂಗೆ ಎಂಗಳ ಮನೆಗೆ ಊಟಕ್ಕೆ ದಿನಿಗೇಳಿದ್ದೆ. ಮಧ್ಯಾಹ್ನಕ್ಕೆ ಬರಲಿ. ಅವರೊಟ್ಟಿಂಗೆ ನಿಂಗಳೂ ಎಲ್ಲೋರು ಬನ್ನಿ ಆತೊ" ಹೇಳಿ ಹೊರಟರು.

ಮರುದಿವಸ ಮಧ್ಯಾಹ್ನ ರಘುರಾಮನಿಗೆ ಮನೆಗೆ ಎಲ್ಲರೂ ಹೋದರು. ಕಾವೇರಿ ಹೋಗಲಿಲ್ಲ, ಊಟಕ್ಕೆ ಅನ್ನಸಾರು ಹಪ್ಪಳ, ಮೇಲಾರ, ಹೆಸರುಬೇಳೆ ಫಾಯಸ ಮಾಡಿದ್ದರು. ಊಟವಾದ ಮೇಲೆ ಒಂದು ಗಂಟೆ ವಿಶ್ರಾಂತಿ ತೆಕ್ಕೊಂಡು ಅಲ್ಲಿಂದ ಬಂದವರು ಮರಳಿದರು; ರಘುರಾಮ ಅರ್ಧ ದಾರಿವರೆಗೂ ರಾಮಚಂದ್ರನೊಡನೆ–ಸಲುಗೆಯಲ್ಲಿ ಮಾತನಾಡಿಕೊಂಡು ಬಂದ.

"ಅಕ್ಕು ಅಂಬಾಗ, ಆನು ಮನೆಗೆ ಹೋವುತ್ತೆ ಆಗದೋ? ಹೇಳಿ ಅವರನ್ನು ಬೀಳ್ಕೊಟ್ಟ.

"ನಾಳಂಗೆ ಗೋವಿಂದನಲ್ಲಿಗೆ ಹೋಯೇಕು, ಕೂಸಿನ ಅಜ್ಜನ ಮನೆಗೆ, ಅಜ್ಜ ಅಜ್ಜಿ ಇಲ್ಲದಿದ್ದರೂ, ಮನಗೆ ಬರೇಕು ಹೇಳಿ ಹೇಳಿದ್ದ. ಮಧ್ಯಾಹ್ನ ಅವರಲ್ಲಿ ಊಟ. ಮದುಮಕ್ಕಳ ಜೋಡಿ ಬಿಡುಸುದು ಅಲ್ಲಿಯೇ ಅಲ್ಲದೋ; ಅಷ್ಟರವರೆಗೂ ಅವು ಮೇಲ್ಹಾಸನ ಹಾಕಿ ಕೂರೇಕು ಹೇಳಿ ಲೆಕ್ಕ. ಈಗ ಅದೆಲ್ಲಾ ಕ್ರಮ ಹಳತ್ತಾತು."

"ನಿಂಗೊ ಹೇಳಿದ್ದರೆ ಆನು ಎಂಗಳ ಮನೇಲಿಯೂ ಹಾಂಗೆಯೇ ಮಾಡುತ್ತಿತ್ತೆನ್ನೆ ಮಾವ, ಅವು ಇಬ್ರೂ ಒಟ್ಟಿಂಗೆ ಕೂದಿದ್ದರೆ ಚೆಂದ ಕಾಣುತ್ತಿತ್ತು. ಅಳಿಯ ಮಗಳ ಜೋಡಿ ಚೆಂದ ಆಯಿದು. ಕಣ್ಣು ಹಾಕುಗು ಹಾಂಗಿದ್ದು."

"ಅದೆಲ್ಲಾ ನಿಂಗಳಂದ, ಹೇಳಿರೆ ಕಾವೇರಿಯೂ, ನೀನು ಕೊಟ್ಟ ಧೈರ್ಯಂದ ಸಹಾಯಂದ – ನಿಂಗೊ ಎನ್ನ ಹೊಂಡಂದ ಎತ್ತಿದಿ ಅಲ್ಲದೊ" ಹೇಳಿದರು ಅಪ್ಪಣ್ಣಭಟ್ಟರು.

"ಹಾಂ ಹೇಳಿದ ಹಾಂಗೆ ಮಾವ ನಿಂಗಳ ಹತ್ತರೆ ಹೇಳ್ಳೆ ಮರದು ಹೋಯಿದು. ಮದುವೇಲಿ ದೇವಕ್ಕಿ ಓಡಾಡ್ಕೊಂಡು ಇದ್ದರ ಕಂಡು ನಮ್ಮ ರಾಮಚಂದ್ರನ ಕಿರಿಯಬ್ಬೆಗೆ ತುಂಬಾ ಕುಶಿ ಆಯಿದಾಡ. ಆ ಕೂಸಿನ ಎನ್ನ ಮಗ ಸುಬ್ಬಣ್ಣಂಗೆ ಕೊಡುಗೋ ಹೇಳಿ ಶಾರದೆಯ ಹತ್ರೆ ಕೇಳಿದ್ದಾಡ. ಹಾಂಗೇ ಅದು ಇದು ಮಾತಾಡುವಾಗ ರಾಮಚಂದ್ರನೂ ಹೇಳಿದ. ಎನ್ನ ಕಿರಿಯಬ್ಬಗೆ ದೇವಕ್ಕಿ

ತುಂಬಾ ಇಷ್ಟ ಆಯಿದು. ಅದಕ್ಕಿಪ್ಪದು ಒಬ್ಬನೇ ಮಗ. ಬೇಕಾದಷ್ಟು ಬದುಕ್ಕು ಇದ್ದು. ನಾಲ್ಕು ಸುತ್ತಿನ ಮನೆ, ಐವತ್ತು ಖಂಡಿ ಅಡಕ್ಕೆ ಇದ್ದು, ಅವಂಗೆ ಬಿ.ಎ ಆಯಿದು".

"ಒಂದು ಮದುವೆ ಮುಗುಶಿ ಇನ್ನೂ ಉಸುರು ತೆಗದ್ದಿಲ್ಲೆ. ಮದಲೇ ಇನ್ನೊಂದು ಮದುವೆ ಹೇಂಗೆ ಮಾಡ್ಲಿ– ಅದರ ಮುಂದಿನ ವರ್ಷ ಕೊಟ್ಟರಾತು. ರಜಾ ಸುಧಾರ್ಸಿಯೋಳ್ತೆ."

"ಮಾವ, ನಿಂಗೊಗೆ ಎಂತ ಅಂತಹ ಹೊರೆ ಆದ್ದು. ಒಳ್ಳೆ ಕುಳ ಬಂದಿಪ್ಪಾಗ ಕೂಸಿನ ದಾಂಟುಸದು ಸರಿ ಅಲ್ಲದೋ? ಹೇಂಗಾದರೂ ಕೊಡ್ಲಿಪ್ಪ ಕೂಸನ್ನೆ. ಮಾಣಿಯೂ ಅದರ ನೋಡಿದ್ದಡ".

"ಎನಗೆ ಅಕ್ಕು ಆ ಕೂಸು. ನೀನು ಅವರ ವಿಚಾರ್ಸುತ್ತರೆ ವಿಚಾರ್ಸಿಗೊ" ಹೇಳಿಯೂ ಹೇಳಿದ್ದಾಡ" ನಿಂಗೊ ಹೂಂ ಹೇಳಿ ಮೇಲಾಣದ್ದೆಲ್ಲಾ ಆನು ನೋಡ್ಯೊಂಬೆ.

"ಮಾಣಿ ಕೆಲಸಲ್ಲಿ ಇದ್ದನೋ"

"ಕೆಲಸ ಮಾಡುತ್ತಿಲ್ಲೆ ಹೇಳಿದ. ಅವಂಗೆ ಮನೇಲಿ ಹುಗಿವಷ್ಟು ಆಸ್ತಿ ಇದ್ದು, ಕೆಲಸವೂ ಸಿಕ್ಕುಗು. 'ಆರೋ ಪಾಪದವಕ್ಕೆ ಸಿಕ್ಕೆಕಾದರ ಆನೆಂತಕೆ ಕಬಳಿಸೇಕು. ಆನು ಕೆಲಸಕ್ಕೆ ಹೋವುತ್ತಿಲ್ಲೆ ಹೇಳಿದ. ಹಾಂಗೆ ಅವ ತುಂಬಾ ಉಷಾರಿದ್ದ. ಕತೆ, ಕಾದಂಬರಿ, ಕವನ– ಹೇಳಿ ಸುಮಾರು ಪುಸ್ತಕ ಬರದ್ದ. ಊರಿಲ್ಲಿ ಎರಡು ಮೂರು ನಾಟಕ ಬರದು ಆಡ್ಸಿದ್ದ.

"ಅವಂಗೀಗ ಎಷ್ಟು ವರ್ಷ"

"ಇಪ್ಪತ್ತೆರಡೋ ಇಪ್ಪತ್ತಮೂರು ಅಷ್ಟೆ."

"ದೇವಕ್ಕಿಗೆ ಈಗ ಹನ್ನೆರಡು ತುಂಬಿ – ಹದಿಮೂರು"

"ಜೋಡಿ ಸರಿ ಆವುತ್ತು ಮಾವ – ಅವಕ್ಕೆ ಹತ್ತು ವರ್ಷ ವ್ಯತ್ಯಾಸ ಆವುತ್ತು ತೊಂದರೆ ಇಲ್ಲ.

"ಅವಕ್ಕೆ ಜಾತಕ ಗೀತಕ ನೋಡೇಡವೋ"

"ಅವಕ್ಕೆ ಅದೆಂತದೂ ಬೇಡಾಡ. ಅವಂಗೆ ಅದರಲ್ಲೆಲ್ಲಾ ನಂಬಿಕೆ ಇಲ್ಲೆ. ಎಷ್ಟೋ ಕಡೆ ಜಾತಕ ನೋಡಿ ಮದುವೆ ಆದಲ್ಲೂ ಹೆಚ್ಚು ಕಮ್ಮಿ ಆಯಿದು. ಎನಗೆ

ಮುಖ್ಯ ಕೂಸಿನ ನೋಡೇಕಾದ್ದು. ಅವರ ಬಳಗದ ನೋಡೇಕಾದು - ಎರಡೂ ಎನಗೆ ಇಷ್ಟ ಆಯಿದು ಹೇಳಿದ್ದ ಅವ."

"ನಿನ್ನ ಅಭಿಪ್ರಾಯದಲ್ಲಿ ದೇವಕ್ಕಿಯನ್ನೂ ಈ ವರ್ಷವೇ ದಾಂಟುಸುದು ಒಳ್ಳೆದು ಹೇಳಿಯೇ? ಎನಗೆಂತದೂ ಅರ್ಥ ಆವುತ್ತಿಲ್ಲೆ"

"ಎನ್ನ ಕೇಳಿರೆ ಅದೇ ಒಳ್ಳೆದು ಹೇಳಿ ಕಾಣುತ್ತು. ನಿಂಗಲ ಭಾರವೂ ಇಳಿತ್ತು. ಕೂಸಿಂಗೂ ಒಳ್ಳೆಮನೆ ಸಿಕ್ಕುತ್ತು. ಶಾರದನೂ ಮಾಣಿ ಕುಶಿ ಆಯಿದು ಅವನ ಅಬ್ಬೆ, ಅಪ್ಪನ ಎಲ್ಲಾ ಮಾತಾಡ್ಸಿಕ್ಕಿ ಬಯಿಂದು ಎಲ್ಲೋರು ಒಳ್ಳೆವು. ದೇವಕ್ಕಿಯ ಕೊಂಡು ಹೋವುತ್ತರೆ ಧಾರಾಳ ಕೊಡ್ಲಕ್ಕು ಹೇಳಿ ಹೇಳಿತ್ತು."

"ಆನೆಂತ ಮಾಡೇಕು ರಘುರಾಮ ನೀನೇ ಹೇಳು. ಎನಗೆಂತದೂ ಅರಡಿತ್ತಿಲ್ಲೆ"

"ಒಂದು ಒಳ್ಳೆ ಮೂರ್ತ ನೋಡಿ ಕೂಸಿನ ಧಾರೆ ಎರದು ಕೊಡುದು ಇದರಲ್ಲಿ ಮೀನ ಮೇಷ ಎಣುಶುಲೆ ಎಂತದಿದ್ದು?"

"ಹೇಂಗೆ ಮಾಡುದು ಹೇಳಿಯೇ ಎನಗೆ ಅರಡಿತ್ತಿಲ್ಲೆ"

"ಸರಸ್ವತಿಯ ಕೊಟ್ಟ ಹಾಂಗೆ ಕೊಡುದು. ಹೇಂಗಾರು ಮದುವೆಗೆ ಕರ್ಚು ಇದ್ದು ನಿಂಗೊಗೆ ವ್ಯವಸ್ಥೆ ಎಲ್ಲಾ ಆನು ನೋಡ್ಯೊಂಬೆ."

"ಎಲ್ಲಾ ನಿನ್ನ ತಲೆ ಮೇಗೆ ಹಾಕಿದರೆ ಹೇಂಗ ರಘುರಾಮ" ಸಂಕೋಚವಾಯಿತು ಅಪ್ಪಣ್ಣಭಟ್ಟರಿಗೆ.

"ಈಗ ಒಂದಾರಿ ಆನು ಹೆಗಲು ಕೊಡುತ್ತೆ. ನಿಂಗಳ ಭಾರ ಇಳಿಯಲಿ. ಮುಂದೆ ಲೆಕ್ಕಾಚಾರ ಮಾಡುವೊ. ನಿಂಗೊ ನಿಧಾನಲ್ಲಿ ಎನಗೆ ಕೊಟ್ಟರಾತು. ಚಿಂತೆ ಮಾಡೇಡಿ".

"ಇಷ್ಟು ಧೈರ್ಯ ಹೇಳುವವು ಎನಗೆ ಮದಲು ಇದ್ದರೆ-ಎನ್ನ ಕಾವೇರಿಗೂ ಈ ಗತಿ ಬತ್ತಿತ್ತಿಲ್ಲೆ" ಮರುಗಿದರು ಅಪ್ಪಣ್ಣ "ಅದೆಲ್ಲಾ ಆದ ಕತೆ ಅಲ್ಲದೋ ಮಾವ. ಮುಂದಾಣವಕ್ಕೆ ಹಾಂಗೆ ಆಗದ್ದ ಹಾಂಗೆ ನೋಡ್ಕೊಂಡರೆ ಆತು.

"ನೀನು ಧೈರ್ಯಕೊಟ್ಟರೆ ಆನು ಕಾರ್ಯ ಮುಂದುವರ್ಸುತ್ತೆ" ಹೇಳಿದವರು ಅಪ್ಪಣ್ಣಭಟ್ಟರು, ಅಲ್ಲಿಂದ ಅಳಿಯ ಮಾವ ಬೇರೆ ಬೇರೆ ದಾರಿ ಹಿಡಿದರು.

ಈ ಸಂಗತಿಯನ್ನು ಶಂಕರಮ್ಮನಿಗೂ, ಕಾವೇರಿಗೂ ತಿಳಿಸಿದರು. ಅಪ್ಪಣ್ಣ ಭಟ್ಟರು, ಇಬ್ಬರಿಗೂ ಸಂತೋಷವಾಯಿತು; ಅಳಿಯ ರಘುರಾಮ ಹೇಳಿದ್ದೇ ಸರಿ

ಎಂದುಕೊಂಡರು; "ದೇವಕ್ಕಿಗೂ ಒಳ್ಳೆ ಮನೆ ಸಿಕ್ಕಿತಲ್ಲಾ. ಆದಷ್ಟು ಬೇಗ ಲಗ್ನ ಮಾಡಿಕೊಡಿ" ಎಂದಳು ಕಾವೇರಿ.

ಈ ವಿಷಯವನ್ನೂ ರಾಮಚಂದ್ರನಿಗೂ ತಿಳಿಸಿ, ಅವರ ಅಭಿಪ್ರಾಯವನ್ನು ಆದಷ್ಟು ಬೇಗನೇ ತಿಳಿಸಬೇಕು ಎಂದರು ಅತ್ತೆ ಮಾವ. ಅತ್ತಕಡೆ ಹೋದ ರಾಮಚಂದ್ರ ಚಿಕ್ಕಮ್ಮನ ಮನೆಗೆ ಹೋಗಿ ವಿಚಾರ್ಸಿಕೊಂಡು ಬಂದು ಮಾವನಿಗೆ ಪತ್ರವನ್ನು ಬರೆದ. ಮೂರು ತಿಂಗಳಲ್ಲಿಯೇ ಮದುವೆಗೆ ಸಿದ್ಧ ಮಾಡಬೇಕೆಂದೂ, ಅಂತಹ ಅದ್ದೂರಿ ಮದುವೆ ಬೇಡವೆಂದೂ, ಲಗ್ನದ ಕ್ರಿಯಾಭಾಗಕ್ಕೆ ಪ್ರಾಧಾನ್ಯ ಕೊಡಬೇಕೆಂದೂ ಅವರಿಂದ ಪತ್ರ ಬಂತು. ಕನ್ಯೆ ನೋಡಲು ಅವರು ಪ್ರತ್ಯೇಕವಾಗಿ ಬರುವುದಿಲ್ಲವೆಂದೂ, ಬೇಕಿದ್ದರೆ ವರನ ಮನೆ, ಆಸ್ತಿಪಾಸ್ತಿ ನೋಡಲು ತಾವೊಮ್ಮೆ ಬಂದು ಹೋಗಬಹುದೆಂದೂ ಪತ್ರ ಬರೆದಿದ್ದರು.

"ಆನಂತರ ಅವರ ಆಸ್ತಿ ಸಂಪತ್ತು ನೋಡ್ಯೆ ಹೋಪತು? ಎನಗೆಂತ ಯೋಗ್ಯತೆ ಇದ್ದು ತುತ್ತು ಕೂಳಿಂಗೂ ಗೆತಿ ಇಲ್ಲದ್ದವ ಆನು" ಎಂದವರು ಅಪ್ಪಣ್ಣಭಟ್ಟರು.

ತಮಗೆ ಹುಡುಗ, ತಂದೆ, ತಾಯಿ ಎಲ್ಲರೂ ಇಷ್ಟವಾಗಿದ್ದಾರೆ ಎಂದೂ, ತಾವು ಮಗಳನ್ನು ಕೊಡಲು ಸಿದ್ಧವಾಗಿರುವೆನೆಂದೂ, ಮೂರ್ತ ಸಮಯ ತಿಳಿಸಿದರೆ ಲಗ್ನಕ್ಕೆ ತಯಾರಿ ನೆಡೆಸುವುದಾಗಿಯೂ ಮರುಪತ್ರ ಬರೆದರು ಭಟ್ಟರು.

ಮತ್ತೊಮ್ಮೆ ಅಪ್ಪಣ್ಣಭಟ್ಟರ ಮನೆಯಲ್ಲಿ ವಿವಾಹ ಸಂಭ್ರಮವೆದ್ದಿತು. ಅವರು ತಿಳಿಸಿದ ಎಲ್ಲಾ ವ್ಯವಸ್ಥೆಯೂ ಆಗಬೇಕು ಎಂಬ ಗೊಂದಲದಲ್ಲಿ ಬಿದ್ದರು ಭಟ್ಟರು. ಹಾಗೇ ಮಗಳು ಕಾವೇರಿಯ ಮುಂದೆ, ಶಂಕರಮ್ಮನ ಮುಂದೆ ಹೇಳಿಯೂ ಬಿಟ್ಟರು.

"ಅಪ್ಪಾ ನಿಂಗೊ ಎಂತಕೆ ಗಡಿಬಿಡಿ ಆವುತ್ತಿ? ಈ ಮದುವೆ ಕಳುದರೆ ನಿಂಗಳ ಹೆಗಲ ಭಾರ ಎಲ್ಲಾ ಇಳುದತ್ತು! ಹೀಂಗೆ ಕೈಯೊಡ್ಡಿ ಕೂಸಿನ ಕೇಳುವಾಗ ಕೊಡುತ್ತಿಲ್ಲೆ ಹೇಳುದು ತಪ್ಪು. ನಿಂಗೊ ಪೈಸಗೆ ಚಿಂತೆ ಮಾಡೇಡಿ. ಎನ್ನ ಪೈಸೆಂದಲೇ ತೆಕ್ಕೊಳ್ಳಿ, ಚಿನ್ನವನ್ನೂ ಮಾಡ್ಸೋಳಿ" ಹೇಳಿದಳು ಕಾವೇರಿ.

"ಈ ನಟ್ಟದರಿದ್ರರ ಹೊಟ್ಟೆಯಲ್ಲಿ ಹುಟ್ಟಿ ಆವುತ್ತಿತ್ತಿಲ್ಲೆ ಕೂಸುಗೊ. ಎಲ್ಲದಕ್ಕೂ ಬೇಡೇಕಾದ ಸ್ಥಿತಿ ಎಂಗಳದ್ದು" ಎಂದರು ಶಂಕರಮ್ಮ.

"ನೀನು ಹಾಂಗೆಲ್ಲಾ ಜಾನ್ಬೇಡ ಅಬ್ಬೆ. ಆನು ನಿನಗೆ ಪರಕೀಯಳಲ್ಲ. ನಿನ್ನ ಹೊಟ್ಟೆಲಿ ಹುಟ್ಟಿದ ಮಗಳೇ."

ಯಾವುದಕ್ಕೂ ಹೆಚ್ಚಿನ ಮಾತುಕತೆಗೆ ಆಸ್ಪದ ಇಲ್ಲದ ಹಾಗೆ ದೇವಕ್ಕಿಯ ಮದುವೆ ಸರಳರೀತಿಯಲ್ಲಿಯೇ ನಡೆಯಿತು. ಸಟ್ಟುಮುಡಿಗೆ ಸರಸ್ವತಿಯ ಮನೆಗೆ ಹೇಳಿದ ಹಾಗೆ ನಾಲ್ಕು ಜೆನ ನೆರೆಹೊರೆಯವರನ್ನು ಕರೆದುಕೊಂಡು ಹೋದರು. 'ಸಟ್ಟುಮುಡಿ' ಗದ್ದಲ, ಗೌಜಿಯಲ್ಲಿಯ ಜರುಗಿತು. ನಾಲ್ಕು ಜೆನ ನೆರೆಹೊರೆಯವರನ್ನು ಬಂದ ಮರುದಿನ ಊರವರೆಲ್ಲಾ ಸುತ್ತುಗಟ್ಟಿ ವಿಚಾರಿಸಿಕೊಂಡರು.

"ಎಂತ ತಿಮ್ಮಣ್ಣ, ಸಟ್ಟುಮುಡಿ ಗೌಜಿಯೋ? ಹೇಂಗಿದ್ದು ಊರು, ಮನೆ?"

"ಅಯ್ಯೋ, ಅದರ ಎಂತರ ಹೇಳುದು? ಎಂಗೊ ತಪ್ಪಿ ಕುಬೇರನ ಮನೆಗೆ ಹೋದ್ದೊ ಹೇಳಿ ಅನುಮಾನ ಬಂತು"

"ಹೇಳಿರೆ?"

"ಆ ವೈಭವ ವರ್ಣಿಸಲೆ ಎನ್ನಂದ ಸಾಧ್ಯ ಇಲ್ಲೆಪ್ಪಾ, ನೀನೇ ಹೇಳು ಕೇಶವಾ."

"ಆನು ಹೇಳುತ್ತೆ. ಅಲ್ಲಿ ಹೋದವಕ್ಕೆ, ಬಂದವಕ್ಕೆಲ್ಲಾ ಬೆಳ್ಳಿಗಿಂಡಿಲೇ ಕಾಫಿ ಕೊಟ್ಟದು."

"ಕನಿಷ್ಟ ಹೇಳಿರೆ ನೂರು ಗಿಂಡಿಗಳ ಆನೇ ಲೆಕ್ಕ ಮಾಡಿದ್ದೆ."

ಅಲ್ಲದೋ, ಹೆಚ್ಚುಕಮ್ಮಿ ಇನ್ನೂರು ಗಿಂಡಿಗೊ ಇತ್ತು" ತಿಮ್ಮಪ್ಪ ಹೇಳಿದ.

"ಹಂದರಲ್ಲಿ ಕೂದವಕ್ಕೆ ಉಂಬಲೆ ಬೆಳ್ಳಿ ಬಟ್ಲಗೊ" ಕೇಶವ ಹೇಳಿದ.

"ಇನ್ನು ಮದಿಮ್ಮಾಳ ಕೊರಳು ಮುರಿವಷ್ಟು ಬಂಗಾರ ಹಾಕಿದ್ದವು."

"ಎಂತೆಲ್ಲಾ ಹಾಕಿದ್ದವು?" ಒಬ್ಬಳು ಮಹಿಳಾಮಣಿಯ ಕಾತುರ.

"ಆರೆಳೆ ಚಕ್ರಸರ, ನಾಲ್ಕು ನಾಲ್ಕು ಬಳೆ, ಕೆಮಿಗೆ ಕುಡುಕ್ಕು ಲೋಲಾಕು, ಮದಿಮ್ಮಾಳಿಂಗೆ ಹೇಳಿಯೇ ಮಾಡ್ಸಿದ್ದವು. ಇನ್ನು ಮನೇಲಿದ್ದ ಹಿರಿಯರ ನಗ ಹೇಳಿ, ಪವನ ಸರ, ಗೆಜ್ಜೆ ಟಕ್ಕಿ ಬೋರೆ ಮಣಿಸರ, ಕಜಿಪ್ಪು ಸರ, ಅಡ್ಡಿಗೆ ಸರ.."

"ಅಬ್ಬಾ.. ಇಷ್ಟೆಲ್ಲಾ ಹೊತ್ತಂಬಲೆ ಕೂಸಿಂಗೆ ಎಡ್ತತೊ?"

"ಇನ್ನೂ ಇದ್ದು. ಸೊಂಟಕ್ಕೆ ಬಂಗಾರದ ಪಟ್ಟಿ, ಬೈತ್ತಲೆಗೆ ಬಂಗಾರದ ಬಾಸಿಂಗ."

"ಅಂಬಾಗ ನೀನು ಹೇಳಿದ್ದು ಸರಿಯೇ. ಕುಬೇರನ ಮನೆಯೇ ಅದಿಕ್ಕು."

"ಇನ್ನೂ ಊಟಕ್ಕೆ ಎಷ್ಟು ಬಗೆ ಇತ್ತು ಹೇಳಿ ಆರೂ ಕೇಳೇಡಿ. ಎಂಗೊಗೆ ಉಸಿರುಕಟ್ಟುನು, ಅಷ್ಟು ಮಾಡಿದ್ದವು. ಎಂಗೊ ಜೀವಮಾನಲ್ಲಿ ಇಷ್ಟು ವೈಭವದ ಮನೆಯನ್ನೂ ಕಂಡಿಲ್ಲೆಯೋ, ಹೀಂಗಿಪ್ಪ ಊಟವನ್ನು ಉಂಡಿದಿಲ್ಲೆಯೋ"

"ಒಟ್ಟಾರೆ ಅಪ್ಪಣ್ಣನ ಕೂಸುಗಳ ನಶೀಬು ಒಳ್ಳೇದು. ಒಂದರಿಂದ ಒಂದರ ಮನೆ ಬಲ ಇಪ್ಪದೇ ಸಿಕ್ಕಿತ್ತು" ಇಲ್ಲಿಗೆ ಅವರ ಮಾತುಗಳು ಮುಕ್ತಾಯವಾದುವು. ದಿನಗಳು ಉರುಳುತ್ತಾ ಹೋದುವು.

ಈಗ ಮನೆಯಲ್ಲಿ ಉಳಿದವಳು ಎಂದರೆ ಕಾವೇರಿಯೊಬ್ಬಳೇ. ಅವಳಲ್ಲಿ ಏಕಾಂಕಿತನ ಮೂಡಿತ್ತು. ಇಷ್ಟು ದಿವಸ ತಂಗಿಯರ ಒಡನಾಟದಲ್ಲಿ ದಿನದೂಡಿದಳು. ಅವರದೊಂದು ವ್ಯವಸ್ಥೆಯಾಗಲಿ ಎಂದು ಸುಮ್ಮನಿದ್ದಳು. ತಾನಿನ್ನು ತನ್ನ ಜೀವನದ ಬಗ್ಗೆ ಯೋಚಿಸಬೇಕು. ಮುಂದಿನ ಬದುಕನ್ನು ರೂಪಿಸಬೇಕು. ಇನ್ನು ಈ ಸಮಾಜಕ್ಕೆ ಹೆದರಿಕೊಂಡು ಬದುಕಬೇಕಾಗಿಲ್ಲ. ನನಗಿಷ್ಟ ಬಂದ ಹಾಗೆ ನಾನು ಬದುಕಬೇಕು ಎಂಬ ನಿರ್ಧಾರಕ್ಕೆ ಬಂದಳು.

"ಅಪ್ಪಾ ನಾಳಿಂದ ಆನು 'ನಾಯಿಕಾಪು' ಶಾಲೆಯ ಲೈಬ್ರೆರಿಗೆ ಹೋವುತ್ತೆ. ಒಂದೆರಡು ಪುಸ್ತಕ ತಂದು ಓದಲೆ ಸುರುಮಾಡುತ್ತೆ, ಎನಗೆ ಹೊತ್ತೇ ಹೋವುತ್ತಿಲ್ಲೆ" ಎಂದಳು.

"ಅಲ್ಲೆಲ್ಲೂ ಹೋಗೇಡ ಮಗಳೇ. ನಿನಗೆ ಆನು ರಾಮಾಯಣವನ್ನೋ ಮಹಾಭಾರತ ಪುಸ್ತಕವನ್ನೋ ತಂದುಕೊಡುವೆ. ಹಾಂಗೆ ಹತ್ರಾಣ 'ಪದ್ಮನಾಭ ದೇವರ ದೇವಸ್ಥಾನ' ಮನೆ ಹತ್ತರ ಇದ್ದು ದಿನಾ ಹೋಗಿ, ಸುತ್ತು ಹಾಕಿ ಹೋಡಾಡಿಕ್ಕಿ ಬಾ."

"ಅದೆಲ್ಲಾ ಎನಗೆಂತಕೆ ಅಪ್ಪಾ?"

"ಎಂತಕೆ ಹೇಳಿರೆ ನಿನ್ನ ಮನಸ್ಸು ದೇವರ ಕಡೆಂಗೆ ತಿರುಗೇಕು ಹೇಳಿ, ಮನಸ್ಸಿನಲ್ಲಿ ಭಕ್ತಿ, ವೈರಾಗ್ಯ ಮೂಡೇಕು ಹೇಳಿ."

"ಆನು ರಾಮಾಯಣವ ಓದುತ್ತೂ ಇಲ್ಲೆ, ಮಹಾಭಾರತವ ಕೇಳುತ್ತೂ ಇಲ್ಲೆ. ದೇವಸ್ಥಾನಕ್ಕೆ ಸುತ್ತು ಬಪ್ಪಲೂ ಇಲ್ಲೆ" ನಿಶ್ಚಯವಾಗಿ ಹೇಳಿದಳು.

"ಇಷ್ಟರವರೆಗೆ ನಿನ್ನದು ಯಾವ ತರ್ಕವೂ ಇತ್ತಿಲ್ಲೆ. ಈಗೆಂತಕೆ ಮತ್ತೆ ಸುರುಮಾಡಿದೆ ಕಾವೇರಿ?"

"ಇಷ್ಟು ದಿನವೂ ಎನಗೆ ತಂಗೆಕ್ಕೊ ಕೊಡಿಗೆ ಮುಟ್ಟಿ ಹೇಳುವ ಆಶೆ ಇತ್ತು. ಅದೆಲ್ಲಾ ನೆರವೇರಿತ್ತು. ಇನ್ನೀಗ ಆನು ಎನ್ನ ಬಗ್ಗೆ ಚಿಂತೆ ಮಾಡ್ಲೆ ಸುರು ಮಾಡುತ್ತೆ."

"ಆಲೋಚನೆ ಮಾಡ್ಲೆ ಎಂತ ಇದ್ದು ನಿನಗೆ? ಎಲ್ಲಾ ಮುಗುದ್ದನ್ನೆ."

"ಎಲ್ಲಿ ಮುಗುದ್ದು., ಇನ್ನು ಸುರುವಾಯೇಕಷ್ಟೇ. ನಿಂಗೋ ಎಲ್ಲಾ ಸೇರಿ ಎನ್ನ ತಲೆ ಬೋಳ್ಸುಲೆ ಹೆರಚಿದಿರಡಾ!"

"ಆರು ಹೇಳಿದ್ದು ನಿನಗೆ" ಅಪ್ಪಣ್ಣಭಟ್ಟರಿಗೆ ಗಾಬ್ರಿಯಾಯಿತು.

"ಆರೇ ಹೇಳ್ಳಿ ಅಪ್ಪೋ ಹೇಳಿ ಹೇಳಿಕ್ಕಿ".

"ಅಪ್ಪು ಊರವೆಲ್ಲಾ ಸೇರಿ ಆ ನಿರ್ಧಾರಕ್ಕೆ ಬಂದವು. ಎನಗೆ ಎಂತಮಾಡ್ಲೂ ಸಾಧ್ಯ ಇಲ್ಲೆ" ತನ್ನ ನಿಸ್ಸಹಾಯಕತೆಯನ್ನು ತಿಳಿಸಿದರು ಅಪ್ಪಣ್ಣಭಟ್ಟರು.

"ಅಪ್ಪಾ ಇಲ್ಲಿ ಕೇಳಿ. ಆನು ತಲೆ ಬೋಳುಸಲೂ ಬಿಡೆ, ಕೆಂಪು ಸೀರೆ ಸುತ್ತುಸಲೂ ಬಿಡೆ. ಕೆಲಸಕ್ಕೆ ಬಾರದ್ದ ರಾಮಾಯಣ, ಮಹಾಭಾರತ ಓದ್ಯೊಂಡೂ ಕೂರೆ. ಇದು ಮಾತ್ರ ಗ್ಯಾರಂಟಿ" ಕಾವೇರಿ ತನ್ನ ನಿಶ್ಚಯವನ್ನು ಧೈರ್ಯವಾಗಿ ತಿಳಿಸಿದಳು.

"ಹಾಂಗಾರೆ ಎಂಗೊ ಊರಿಲ್ಲಿ ತಲೆ ಎತ್ತಿ ಹೇಂಗೆ ನಡೆಯಲಿ ಮಗಳೇ?"

"ಹೇಂಗೆ ಬೇಕಾದರೂ ನಡೆಯಿ, ಆನು ಮಾಂತ್ರ ಯಾವುದಕ್ಕೂ ಬಗ್ಗುತ್ತಿಲ್ಲೆ. ಇಷ್ಟಕ್ಕೂ ಆನು ಮಾಡಿದ ಅಕ್ಷಮ್ಯ ಅಪರಾಧ ಎಂತಡಾ? ಒಂದಾರಿ ಹೂಗು ಸೂಡಿ, ಆಯಿನಲ್ಲಿ ಸುತ್ತಾಡಿದ್ದಕ್ಕೆ ಇಷ್ಟೆಲ್ಲಾ ಶಿಕ್ಷೆಯೋ?" ನೇರವಾಗಿ ಕೇಳಿದಳು ಕಾವೇರಿ.

ಹಾಗಾದರೆ ಕಾವೇರಿಗೆ ಎಲ್ಲಾ ಸಮಾಚಾರವೂ ಗೊತ್ತಿದೆ ಎಂದಾಯಿತು.

"ಅವಕ್ಕೆ ಬುದ್ಧಿ ಇಲ್ಲೆ ಹೇಳಿ ನಿಂಗೊಗೂ ಬುದ್ಧಿ ಇಲ್ಲೆಯೋ? ಎನ್ನ ತಲೆ ಬೋಳುಸಲೆ ಅವಕ್ಕೆ ಎಂತ ಅಧಿಕಾರ ಇದ್ದು? ಎನ್ನ ಆ ತೊಂಡಂಗೆ ಮದುವೆ ಮಾಡೇಡಿ ಹೇಳುವ ಅಧಿಕಾರ ಅವಕ್ಕಿಪ್ಪಾಗ ಅದರ ಉಪಯೋಗಿಸಿದ್ದವಿಲ್ಲ. ನಾಲ್ಕು ಮಕ್ಕಳ ಅಪ್ಪ ಹೆಂಡತಿ ಸತ್ತ ಕೂಡ್ಲೆ ಮದುವೆ ಅಪ್ಪ ಹಕ್ಕು ಕೊಟ್ಟಿದವು. ಗೆಂಡ ಹೇಳಿರೆ ಎಂತದು ಹೇಳಿ ಎನಗೆ ಅರ್ಥ ಅಪ್ಪ ಮದಲೇ ಎನಗೆ ಮುಂಡೆ ಪಟ್ಟ ಕಟ್ಟಿದವು. ಎನಗೆ ಇನ್ನೊಂದು ಮದುವೆ ಆಪ್ಪ ಹಕ್ಕು ಕೊಟ್ಟಿದವಿಲ್ಲೆ. ಮುದುಕ್ಕ ಸತ್ತ ಕೂಡ್ಲೆ ಎನ್ನ ಆಶೆ, ಆಕಾಂಕ್ಷೆ ಎಲ್ಲಾ ಸಾಯುತ್ತೋ?"

ಅಪ್ಪಣ್ಣಭಟ್ಟರಿಗೆ ಮಗಳಿಗೆ ಸಾಂತ್ವನ ಹೇಳಲು ತಿಳಿಯಲಿಲ್ಲ. ವಿಷಯ ಗಂಭೀರಕ್ಕೆ ಹೋದ ಕಾರಣ ಒಳಗೆ ಹೋಗಿ ಶಂಕರಮ್ಮನನ್ನೂ ಕರೆದುಕೊಂಡು ಬಂದರು. ಎಲ್ಲಾ ಸಮಾಚಾರವನ್ನೂ ತಿಳಿಸಿದರು.

"ನಮ್ಮ ಸಮಾಜದ ಕ್ರಮವೇ ಹಾಂಗಲ್ಲದೋ ಮಗಳೇ. ಅದರ ತಪ್ಪಿ ನವಗೆ ನೆಡವಲೆ ಆವುತ್ತೋ? ಹೋದ ದಾರಿಲೇ ನಾವು ಹೋಯೋಕಲ್ಲದೋ?"

"ಆನು ಹೋವುತ್ತಿಲ್ಲೆ ಅಬ್ಬೆ. ಎಂತ ಬೇಕಾರೂ ಆಗಲಿ. ಆನೊಂದು ಹೊಸದಾರಿಯನ್ನೇ ಹುಡುಕುತ್ತೆ."

"ಅದೆಂತ ದಾರಿಯಪ್ಪ ನಿನ್ನದು?" ಶಂಕರಮ್ಮನ ದನಿ.

"ಹೇಂಗೂ ಆನು ನಾಲ್ಕನೇ ಕ್ಲಾಸಿನವರೆಗೆ ಕಲ್ತಿದೆ. ಮುಂದಕ್ಕೆ ಓದಿ ಮೆಟ್ರಿಕ್ ಪರೀಕ್ಷೆಗೆ ಕಟ್ಟುತ್ತೆ. ಮುಂದೆ ಯಾವದಾದರೂ ಉದ್ಯೋಗಕ್ಕೆ ಸೇರುತ್ತೆ. ಹೀಗೆ ಕೊಳವ ಆಲೋಚನೆ ಎನಗಿಲ್ಲೆ".

"ಕಲಿವಲೆ ಸುಮ್ಮನೆ ಆವುತ್ತೋ ಮಗಳೆ" ನೀನು ಓದುದರ ಬಿಟ್ಟು ಎಷ್ಟು ವರ್ಷ ಆತು ಇನ್ನೆಡಿಗೋ ನಿನೇಕೆ?"

"ಎಡಿಗು ಅಬ್ಬೆ. ಕಷ್ಟಪಟ್ರೆ ಸೈಂಗೋಲೂ ನುಂಗಲೆಡಿಗು ಹೇಳುವ ಗಾದೆ ಇಲ್ಲೆಯೋ. ಹಾಂಗೆ ಕಷ್ಟಪಟ್ಟು ಓದುತ್ತೆ."

"ಓದಿ ಎಂತ ಮಾಡೇಕ್ಕು ಹೇಳಿ ನಿನ್ನ ಆಶೆ?"

"ಆಸ್ಪತ್ರೆಲಿ ನರ್ಸ್ ಆಯೇಕು ಹೇಳಿದ್ದು. ಅಲ್ಲಿ ಪಾಪದ ರೋಗಿಗಳ ಸೇವೆ ಮಾಡಿ ಆದರೂ ಜೀವನ ಸಾರ್ಥಕ ಮಾಡೇಕು ಹೇಳಿ ಆಲೋಚನೆ ಮಾಡಿದ್ದೆ. ಮತ್ತೆ ಅವೆಲ್ಲಾ ಹೇಳಿದ ಹಾಂಗೆ ಆನು ಆರೊಟ್ಟಿಂಗೂ ಓಡಿಹೋಪ ಅಂದಾಜಿಲ್ಲೆ. ಊರ ಸೂಳೆಯೂ ಆವುತ್ತಿಲ್ಲೆ." ಕಾವೇರಿಗೆ ಎಲ್ಲಾ ತಿಳಿದಿದೆ ಎಂಬುದು ಖಚಿತವಾಯಿತು ಶಂಕರಮ್ಮನಿಗೂ.

"ಇಲ್ಲೆ, ನೀನು ಹಾಂಗೆಲ್ಲಾ ಮಾಡೆ ಹೇಳಿ ಎಂಗೊಗೆ ಗೊಂತಿದ್ದು."

"ಅದಕ್ಕಲ್ಲದೊ ನಿಂಗೊ ಎನ್ನ ತಲೆ ಬೋಳುಸಲೆ ತಯಾರಾದ್ದು" ಕುಕ್ಕಿದಳು ಕಾವೇರಿ.

"ತಪ್ಪಾತು ಮಗಳೇ. ಎಂಗೊ ಅವರ ಮುಂದೆ ಸೋತೆಯೊ ಬೇರೆ ದಾರಿ ಇದ್ದು ಹೇಳುವ ಕಲ್ಪನೆಯೇ ಎಂಗೊಗೇ ಇತ್ತಿಲ್ಲೆ".

"ಆನು ನಾಳಂಗೆ ಉದಿಯಪ್ಪಾಗಳೇ ಊರು ಬಿಡುತ್ತೆ. ಇಲ್ಲಿದ್ದರೆ ನಿಂಗೊಗೂ ಕಷ್ಟ, ಎನಗೂ ಕಷ್ಟ. ಅಪ್ಪಾ ನಿಂಗೊ ಇಂದೇ ರಘುರಾಮ ಭಾವನ ಒಂದಾರಿ ಇಲ್ಲಿಗೆ ಬಪ್ಪಲೆ ಹೇಳಿ. ಆನು ಅವಂಗೆ ಎಲ್ಲಾ ವಿಷಯ ಹೇಳುತ್ತೆ. ಎನ್ನ ಒಂದಾರಿ ಕೊಡೆಯಾಲವರೆಗೆ ಕರಕ್ಕೊಂಡು ಹೋಪ ವ್ಯವಸ್ಥೆ ಮಾಡ್ಲಿ. ಅಲ್ಲಿ ದೊಡ್ಡ ಸರಕಾರಿ ಆಸ್ಪತ್ರೆ ಇದ್ದು. ಅಲ್ಲಿ ಸೇರಿಕೆ ಮಾಡ್ಸಿ, ಆನು ಮುಂದೆ ಕಲ್ತು ಮೇಲೆ ಬಪ್ಪೆ. ಎಡಿಯದಿದ್ದರೆ ಬಾವಿಗೋ ಕೆರೆಗೋ ಹಾರಿ ಪ್ರಾಣ ಬಿಡುವೆ, ಎನ್ನಿಂದಾಗಿ ನಿಂಗೊಗೆ ತೊಂದರೆ ಆಗದ್ದ ಹಾಂಗೆ ನೋಡಿಗೊಂಬೆ."

"ಹಾಂಗೆಲ್ಲಾ ಹೇಳಿ ಎನ್ನ ಹೊಟ್ಟೆ ಉರುಶೇಡ ಮಗಳೇ" ಶಂಕರಮ್ಮನಿಗೆ ದುಃಖ ತಡೆಯಲಾಗಲಿಲ್ಲ. ಸೀರೆ ಸೆರಗನ್ನು ಕಣ್ಣಿಗೊತ್ತಿ ಬಿಕ್ಕಿಬಿಕ್ಕಿ ಅತ್ತಳು.

"ಇದರಲ್ಲಿ ಕೂಗಲೆ ಎಂತ ಇದ್ದು ಅಬ್ಬೆ ಕೂಗೇಡ. ಆನು ಹೇಂಗಾದರೂ ಕಲ್ತಿಕ್ಕಿ ಬಪ್ಪೆ ಆತೋ" ಎಂದು ತಾಯಿಯ ಕಣ್ಣೀರು ಒರಸಿದಳು ಕಾವೇರಿ.

ಅಪ್ಪಣ್ಣನೂ. ಶಂಕರಮ್ಮನೂ ಮಾತಿಲ್ಲದ ಮೂಕರಾದರು. ಸ್ವಲ್ಪ ಸಮಯ. ಆಮೇಲೆ ಅಪ್ಪಣ್ಣಭಟ್ಟರು ಎದ್ದು ಅಂಗಳಕ್ಕೆ ಇಳಿದು,

"ಶಂಕರಿ, ಇಂದು ರಘುರಾಮಂಗೆ ರಜೆ ಇದ್ದು, ಆನು ಅವಂಗೆ ಸಂಗತಿ ತಿಳುಶಿ ಎಡಿಗಾರೆ ಕರಕ್ಕೊಂಡೇ ಬತ್ತೆ" ಹೇಳಿ ಹೊರಟುಹೋದರು. ರಘುರಾಮನಿಗೆ ವಿಷಯವನ್ನು ವಿವರವಾಗಿ ತಿಳಿಸಿ, ಕಾವೇರಿಯ ಉದ್ದೇಶವನ್ನು ತಿಳಿಸಿದರು.

"ಮಾವ, ಆನು ಈಗಳೇ ನಿಂಗಳ ಒಟ್ಟಿಂಗೆ ಹೆರಡುತ್ತೆ, ಅತ್ತಿಗೆಯ ಭೇಟಿಯಾಗಿ ಎಲ್ಲಾ ಸಮಾಚಾರಕ್ಕೂ ಮಾತಾಡುತ್ತೆ" ಹೇಳಿ ಒಳಗೆ ಹೋಗಿ ಆಗಿಂದಾಗ ಬಟ್ಟೆ ಬದಲಾಯಿಸಿಕೊಂಡು ಬಂದ.

"ಶಾರದೆ, ಆನು ರಜಾ ನಿನ್ನ ಅಪ್ಪನ ಮನೆ ಕಡೆಂಗೆ ಹೋಗಿಕ್ಕಿ ಬತ್ತೆ. ಬಂದ ಮತ್ತೆ ಏನು ಎಂತದು ಹೇಳಿ ತಿಳುಶುತ್ತೆ ಆತೊ?" ಅಂದವನೇ ಮಾವನನ್ನು ಹಿಂದುಗಡೆ ಕೂರ್ಸಿ ಬೈಕ್ ಸ್ಟಾರ್ಟ್ ಮಾಡಿದ. ಅರ್ಧಗಂಟೆಯಲ್ಲಿ ಮನೆ ಸೇರಿದರು. ಕಾವೇರಿ ಜಗಲಿಯಲ್ಲಿಯೇ ಕುಳಿತಿದ್ದಳು. ಶಂಕರಮ್ಮನೂ ಎದುರುಗಡೆಯೇ ಇದ್ದರು. ರಘುರಾಮನನ್ನು ಕಂಡು "ಆಸರಿಂಗೆ ಬೇಕೋ" ಎಂದು ಕೇಳಲು ಮರೆಯಲಿಲ್ಲ ಕಾವೇರಿ.

"ಬೇಡ, ಈಗ ಮನೇಲಿ ಕುಡುದಿಕ್ಕಿ ಬಂದುದು. ಎಂತಕೋ ಎನ್ನ ಅರ್ಜೆಂಟು ಬಪ್ಪಲೆ ಹೇಳಿದ್ದಿರಾಡ?" ಎಂದು ಪೀಠಿಕೆ ಹಾಕಿದ ರಘುರಾಮ.

"ಅಪ್ಪು ಭಾವ, ಆನೇ ನಿನ್ನ ಕರಕ್ಕೊಂಡು ಬಪ್ಪಲೆ ಹೇಳಿದ್ದು. ಎನ್ನ ಅಪ್ಪಂಗೆ, ಎಂಥದೂ ಅರ್ಥ ಆವುತ್ತಿಲ್ಲೆ. ಕೋಲೆ ಬಸವ ಹಾಂಗಿದ್ದವು. ನಿನಗಾದರೂ ಅರ್ಥ ಅಕ್ಕು ಹೇಳಿ ಬಪ್ಪಲೆ ಹೇಳಿದ್ದು. ಇವೆಲ್ಲಾ ಒಟ್ಟು ಸೇರಿ ಎನ್ನ ತಲೆ ಬೋಳ್ಸಿ, ಕೆಂಪು ಸೀರೆ ಸುತ್ತುಸಲೆ ತಯಾರಾಯಿದವು. ಎನಗೆ ಅದು ಸರ್ವಥಾ ಇಷ್ಟ ಇಲ್ಲೆ. ಆನು ಮುಂದಕ್ಕೆ ಕಲ್ತಾದರೂ ಮೇಲೆ ಬರೇಕು ಹೇಳಿ ಆಲೋಚನೆ ಮಾಡಿದ್ದೆ. ಅದಕ್ಕೆ ಎನಗೆ ನಿನ್ನ ಸಹಾಯ ಬೇಕು."

"ಅತ್ತಿಗೆ ಎನ್ನಿಂದ ಎಂತ ಸಹಾಯ ಬೇಕೋ ಅದರ ಆನು ಮಾಡುವೆ. ಇವಕ್ಕೆ ಏಕಾಏಕಿ ನಿನ್ನ ತಲೆ ಬೋಳ್ಸೇಕು ಹೇಳಿ ಹೇಂಗೆ ಕಂಡತ್ತು? ಇಷ್ಟು ವರ್ಷ ಸುಮ್ಮನೆ ಕೂದವಕ್ಕೆ ಈಗೆಂತಾತು?"

"ಅದೆಲ್ಲಾ ಹೊಟ್ಟೆ ಉರಿ. ಆನೊಂದಾರಿ ಕಣ್ಯಾರೆ ಆಯಿನಕ್ಕೆ ಹೋದಿಪ್ಪಾಗ ಒಂದು ಸೇವಂತಿಗೆ ಮಾಲೆಯ ಸೂಡಿದ್ದೆ, ಕೈಗೆ ಕಾಜನ್ನೂ ಹಾಕಿಕೊಂಡಿದೆ. ರಾಟೆ ತೊಟ್ಳಲ್ಲೂ ಕೊಯಿದೆ, ಎನಗೆ ಆಶೆ ತಡವಲೆಡಿತ್ತಿಲ್ಲೆ. ಎಲ್ಲೋರ ಹಾಂಗೆ ಒಂದು ದಿನ ಆದರೂ ಬದುಕುದು ಹೇಳಿ ಕಂಡತ್ತು. ಆ ತೊಂಡನ ಒಟ್ಟಿಂಗೆ ಆನು ಒಂದಾರಿಯೂ ಸಂಸಾರ ಮಾಡಿದ್ದಿಲ್ಲೆ– ಆನೆಂತಕೆ ಮುಂಡೆ ಆಯೇಕು ಹೇಳಿ ಕಂಡತ್ತು. ಅದಕ್ಕೆ ಹಾಂಗೆ ಮಾಡಿದೆ" ಕಾವೇರಿ ಕಣ್ಣಿನಲ್ಲಿ ನೀರು ಉದುರಿತ್ತು.

"ನೀನು ಕೂಗೇಡ ಅತ್ತಿಗೆ. ಎನಗೆ ನೀನು ಹೇಳುದರಲ್ಲಿ ಅರ್ಥ ಇದ್ದು ಹೇಳಿ ಕಾಣುತ್ತು. ಎನಗೋ ಸರಿ ಹೇಳಿ ಕಾಣುತ್ತು. ಸತ್ತವ ಹೋದ. ಇದ್ದವಕ್ಕೆ ಬದುಕ್ಕುಲೆ ಒಂದು ವ್ಯವಸ್ಥೆ ಇಲ್ಲೆ ನಮ್ಮ ಸಮಾಜಲ್ಲಿ."

"ಅದಕ್ಕೆ ಆನೊಂದು ದಾರಿ ಕಂಡುಹಿಡಿತ್ತೆ. ಎನ್ನ ಹಾಂಗಿಪ್ಪ ನೂರಾರು ಅಸಹಾಯಕ ಕೂಸುಗೊಕ್ಕೂ ಒಂದು ಹೊಸ ದಾರಿ ಆವುತ್ತು, ಹೋದ ದಾರಿಲೇ ಹೋದರೆ – ಇದೆಲ್ಲಾ ಆಗದ್ದ ಕೆಲಸ."

"ಎನ್ನಂದ ಎಂತ ಸಹಾಯ ಬೇಕು ಅತ್ತಿಗೆ ಹೇಳು" ಉತ್ಸಾಹದಿಂದ ಕೇಳಿದ ರಘುರಾಮ.

"ಆನು ನಾಳಂಗೆ ಉದಿಯಪ್ಪಾಣ ಬಸ್ಸಿಂಗೆ ಇಲ್ಲಿಂದ ಹೆರಟು ಮಂಗಳೂರು ಬಸ್ಸು ಹಿಡಿತ್ತೆ. ನೀನು ಅದೇ ಬಸ್ಸಿಲ್ಲಿ ಬಾ. ಮಂಗಳೂರಲ್ಲಿ ಇಳುದು ಸರ್ಕಾರಿ ಆಸ್ಪತ್ರೆಗೆ ಹೋಗಿ, ಅಲ್ಲಿ ಎಂಗಳ ಹಾಂಗಿದ್ದವಕ್ಕೆ ಎಂತಾದರೂ ಕೆಲಸ ಸಿಕ್ಕುಗೋ ಹೇಳಿ ವಿಚಾರ್ಸುವೊ – ಎಂಗಳ ಮನೆ ಹತ್ರಂಗೆ ಬಸ್ಸು ಉದಿಯಪ್ಪಾಗ ಐದು ಗಂಟೆಗೇ ಬತ್ತು. ಇನ್ನೂ ಬಸ್ಸಿನ ಲೈಟು ಹಾಕಂಡೆ ಇರುತ್ತು – ಹಾಂಗಾಗಿ ಊರಗೆಂಡಗಣಂಗೊಕ್ಕೆ ಗೊಂತಾಯೇಕಾರೆ ಮದಲೆ ಇಲ್ಲಿಂದ ರಟ್ಟೆಕು"

"ಆತು, ಆನು ಅದೇ ಬಸ್ಸಿಲ್ಲಿ ಬತ್ತೆ, ಮಂಗಳೂರಿಲ್ಲಿ ಮತ್ತೆ ಭೇಟಿ ಆದರಾತು"

"ಇಷ್ಟು ಬೇಗ ಎಲ್ಲಾ ವ್ಯವಸ್ಥೆ ಆದರೆ ಹೇಂಗೆ ಮಗಳೆ - ಎಂಗಳ ಅನಾಥ ಮಾಡಿಕ್ಕಿ ಹೋವುತ್ತೆಯೋ? ನೀನಾದರೂ ಮನೇಲಿ ಇದ್ದೆನ್ನೆ ಹೇಳುವ ಸಮಾಧಾನ ಇತ್ತು ಎಂಗೊಗೆ?" ಗಂಡ ಹೆಂಡತಿ ಇಬ್ಬರೂ ಗೋಗರೆದರು.

"ನಿಂಗೊ ಹೆದರೇಡಿ; ಆನು ನಿಂಗೊಗೆ ವ್ಯವಸ್ಥೆ ಮಾಡಿಕ್ಕಿಯೇ ಹೋಪದು. ಇಂದೇ ಕಣ್ಯಾರಕ್ಕೆ ಹೋಗಿ ಎನ್ನ ಬೇಂಕಿಲ್ಲಿ ಇಪ್ಪ ಪೈಸೆಯ ನಿಂಗಳ ಹೆಸರಿಂಗೆ ಮಾಡ್ಸಿಕ್ಕಿಯೇ ಹೋವುತ್ತೆ."

"ಅದು ಹೆಚ್ಚು ಕಷ್ಟ ಇಲ್ಲೆ ಅತ್ತಿಗೆ, ನಿನ್ನ ಮದಲಾಣ ಖಾತೆಗೇ -ಮಾವನ ಹೆಸರನ್ನು ಸೇರಿಸಿದರೆ ಸಾಕು - ಅವಕ್ಕೆ ಪೈಸೆ ತೆಕ್ಕೊಂಬಲಕ್ಕು.

"ಹಾಂಗಾರೆ ಹಾಂಗೇ ಮಾಡುವೊ"

"ನೀನು ಮಾವನೂ ಬೇಂಕಿಂಗೆ ಹೋಗಿ ಆ ವ್ಯವಸ್ಥೆ ಮಾಡಿ ಆನು ಮನಗೆ ಹೋಗಿ, ಶಾರದೆಗೆ ಸಮಾಚಾರವ ಸೂಕ್ಷ್ಮಲ್ಲಿ ಹೇಳಿ ಉದಿಯಪ್ಪಾಣ ಬಸ್ಸಿಂಗೆ ಬತ್ತೆ ಆಗದೋ"

ಅಪ್ಪಣ್ಣನೂ ಹೊರಟು ನಿಂತರು. ತಂದೆ ಮಗಳು ಬೇಂಕಿಗೆ ನಡೆದರು. ಅಲ್ಲಿ ಬೇಂಕು ಮೆನೇಜರನ್ನು ಕಂಡು ಮಾತನಾಡಿ, ತನ್ನ ಖಾತೆಗೆ ತಂದೆಯ ಹೆಸರನ್ನೂ ನೊಂದಾಯಿಸಿದಳು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮೆನೇಜರು ಮಾಡಿ, 'ಪಾಸು' ಪುಸ್ತಕವನ್ನು ಕೊಟ್ಟರು; ಇಬ್ಬರೂ ಮನೆಯ ಕಡೆಗೆ ಬಂದರು. "ಅಪ್ಪ, ನಿಂಗೊ ಈ ಪುಸ್ತಕದ ಒಂದೊಂದು ಕಾಗದಕ್ಕೆ ದಸ್ಕತ್ತು ಹಾಕಿ, ರಘುರಾಮ ಭಾವನ ಕೈಲಿ ಕೊಟ್ಟರೆ ಸಾಕು. ಭಾವನೇ ನಿಂಗೊಗೆ ತಿಂಗಳ ತಿಂಗಳ ಖರ್ಚಿಗೆ ಪೈಸೆ ತಂದು ಕೊಡುಗು. ತಿಂಗಳಿಂಗೆ ಎರಡು ಸಾವಿರ ರೂಪಾಯಿ ತೆಕ್ಕೊಳ್ಳಿ. ಇನ್ನೂ ಅದರಲ್ಲಿ ಇಪ್ಪತ್ತು ಸಾವಿರ ರೂಪಾಯಿ ಜಮಾ ಇದ್ದು. ಹೆದರೇಡಿ" ಧೈರ್ಯ ತುಂಬಿದಳು ಕಾವೇರಿ. ಮನೆ ಮುಟ್ಟುವಾಗ ಮಧ್ಯಾಹ್ನ ಎರಡು ಗಂಟೆಯಾಯಿತು. ಇಬ್ಬರೂ ಊಟ ಮಾಡಿ ಎದ್ದರು, ಮನೆಯಲ್ಲಿ ಮೌನ ವಾತಾವರಣ ಕಾವೇರಿಯೇ ಮಾತು ತೆಗೆದಳು.

"ಅಬ್ಬೆ, ಈ ತಿಂಗಳ ಮನೆ ಸಾಮಾನು ಎಂತೆಲ್ಲಾ ಬೇಕು ಹೇಳು, ಒಂದು ತಿಂಗಳಿಂಗಪ್ಪಷ್ಟು ಇಂದೇ ತೆಗೆಶಿ ಕೊಡುತ್ತೆ"

“ಅಂಬಾಗ ನೀನು ನಾಳಂಗೇ ಹೆರಡುದು ಹೇಳಿ ನಿಗಂಟು ಮಾಡಿದೆಯೋ ಕಾವೇರಿ! ಎಂಗಳೊಟ್ಟಿಂಗೆ ಆರೂ ಇಲ್ಲದ್ದೆ ಅನಾಥರ ಹಾಂಗೆ ಬದುಕ್ಕೇಕೋ” ಶಂಕರಮ್ಮನ ಕಣ್ಣೀರು ಸುರುವಾಯಿತು.

“ನಾಳಂಗೇ ಹೆರಡುತ್ತೆ. ಇಲ್ಲದಿದ್ದರೆ ನಿಂಗೊ ಎನ್ನ ತಲೆಬೋಳುಸುದು ಗೇರಂಟಿ. ಹಾಂಗೆ ಆಗಿ ನಿನ್ನ ಒಟ್ಟಿಂಗೆ ಇಪ್ಪೆ ಹೇಳಿ ಕನಸಿಲ್ಲಿಯೂ ಜಾನ್ಸೆಡಿ. ಅವು ಹೇಳಿದ್ದಕ್ಕೆಲ್ಲಾ ‘ಹೂಂ’ ಹೇಳುವ ಕೋಲೇ ಬಸವ ಆನಲ್ಲ, ಸಾಕು ನಿಂಗೊ ತಲೆ ಆಡ್ಸಿದ್ದು. ಅವು ಹಿಡುದ್ದು ಎನ್ನ ನಿಂಗಳಲ್ಲ. ಆ ಅಪರಾವತಾರ ತಾಳ್ಕೊಂಡು ಆನಿಲ್ಲಿ ಇರುತ್ತಿಲ್ಲೆ. ಇದು ಖಂಡಿತ ನೋಡುವೋ ದೇವರು ಎನಗೂ ಒಂದು ದಾರಿ ತೋರ್ಸುಗು” ಕಾವೇರಿಯ ಧ್ವನಿಯಲ್ಲಿ ನಿಶ್ಚಿತತೆ ಇತ್ತು. ಶಂಕರಮ್ಮನಿಗೂ ಮಗಳ ಮನಸ್ಸನ್ನು ಒಲಿಸಲು ಸಾಧ್ಯವಿಲ್ಲವೆಂದು ತೋರಿತು.

“ಹೌದು. ತಾನು ಮುತ್ತೈದೆಯಾಗಿದ್ದು ಎಳೆ ವಯಸ್ಸಿನ ತನ್ನ ಮಗಳು ವಿಧವೆಯಾಗಿ ತನ್ನೆದುರೇ ಓಡಾಡುತ್ತಿರುವುದನ್ನು ಗ್ರಹಿಸಿಯೇ ಭಯಪಟ್ಟಿದ್ದರು, ಸಂಕಟ ಪಟ್ಟಿದ್ದರು.

“ಅವಳ ಹಣೆಯಲ್ಲಿ ಏನೇನು ಬರೆದಿದೆಯೋ ಹಾಗೆಯೇ ಆಗಲಿ” ಎಂದು ಮನಸ್ಸು ಹಗುರ ಮಾಡಿಕೊಂಡು ಅಲ್ಲಿಂದ ಎದ್ದು ಹೋದರು. ಕಾವೇರಿ ಮನೆಗೆ ತಿಂಗಳಿಗೆ ಬೇಕಾದ ಸಾಮಾನುಗಳನ್ನೆಲ್ಲಾ ತರಿಸಿ ಹಾಕಿದಳು.

ತಾನು ಉಟ್ಟ ಬಟ್ಟೆಯಲ್ಲದೆ ಇನ್ನೊಂದೆರಡು ಸೀರೆ, ರವಕೆ, ಹಾಸಲಿಕ್ಕೆ ಹೊದಿಯಲಿಕ್ಕೆಂದು ಎರಡು ಬಟ್ಟೆಗಳನ್ನು ಒಂದು ಚೀಲದಲ್ಲಿ ತುಂಬಿಸಿಕೊಂಡಳು. ತನ್ನ ಕೈಯಲ್ಲಿದ್ದ ಎರಡು ಬಂಗಾರದ ಬಳೆಗಳನ್ನು ತಾಯಿಗೆ ಕೊಟ್ಟಳು; ಉಳಿದ ಎರಡೆಳೆ ಚಕ್ರಸರವನ್ನೂ ಕೊಟ್ಟಳು.

“ಅಬ್ಬೆ, ಇದರ ನೀನು ಮಡಿಕ್ಕೊ.”

“ಎನಗೆ ಬೇಡ ಮಗಳೇ, ಅದರೆಲ್ಲಾ ನೀನೇ ಮಡಿಕ್ಕೊ”

“ಆನು ಯಾವುದನ್ನೂ ಮಡಿಕ್ಕೊಳ್ತಿಲ್ಲೆ, ಅದೆಲ್ಲಾ ಇದ್ದರೆ ಎನಗೆ ಹಿಂದಾಣದ್ದೆಲ್ಲಾ ನೆಂಪಾವುತ್ತು. ಆನು ಆ ಬದುಕ್ಕನ್ನೇ ಮರವಲೆ ಹೆರಟಿದೆ; ಅದೆಲ್ಲಾ ನಿನ್ನ ಹತ್ರೆ ಇರಲಿ. ನಿನಗೆ ಎಂತಾಕ್ಕಾದರೂ ಆಪತ್ತು ಬಂದರೆ ಬೇಕಕ್ಕು ಮಡಿಕ್ಕೊ” ಶಂಕರಮ್ಮನ ಮುಖ ಕಂದಿಹೋಯಿತು. ಅವರಿಗೆ ಮಗಳೊಡನೆ ವಾದ ಮಾಡಲು ಆಗಲಿಲ್ಲ. ಎಲ್ಲದರಲ್ಲಿಯೂ ಕಾವೇರಿ ಜಯಿಸುತ್ತಾಳೆ ಎಂದು ಅವರಿಗೆ ಗೊತ್ತಾಯಿತು.

ಕಾವೇರಿ ನೇರ ತಂದೆ ಇದ್ದಲ್ಲಿ ಹೋದಳು.

"ಅಪ್ಪ ನಾಳಂಗೆ ಎನ್ನ ಒಟ್ಟಿಂಗೆ ಕೊಡೆಯಲಕ್ಕೆ ನಿಂಗಳೂ ಬನ್ನಿ"

"ಆನೆಂತಕೆ ಮಗಳೇ. ನಿನ್ನ ಒಟ್ಟಿಂಗೆ ರಘುರಾಮ ಬತ್ತೆ ಹೇಳಿಪ್ಪಲ್ಲದೋ ಅವ ಎಲ್ಲಾ ವ್ಯವಸ್ಥೆಯನ್ನು ನಿನಗೆ ಮಾಡಿಕೊಡುಗು."

"ಅವು ಮಾಡುಗು ಹೇಳಿ ಎನಗೆ ಗೊಂತಿದ್ದಪ್ಪಾ. ಆದರೂ ನಿಂಗಳೂ ಬನ್ನಿ" ಹಠ ಹಿಡಿದಳು ಕಾವೇರಿ.

"ಆನು ಬೇಕಾದರೆ ಬಪ್ಪೆ, ಆದರೆ ಎನಗೆ ಎಂತಮಾಡ್ಲೂ ಗೊಂತಿಲ್ಲೆ, ಅರಡಿಯ ಹೇಳಿ ನಿನಗೂ ಗೊಂತಿದ್ದಲ್ಲದೋ"

"ಗೊಂತಿದ್ದಪ್ಪಾ ಆದರೂ ನೀನು ಎನ್ನೊಟ್ಟಿಂಗೆ ಬಾ. ಇಲ್ಲದಿದ್ದರೆ ನಾಳಂಗೆ ಅಪ್ಪಣ್ಣನ ಮಗಳು ಆರೊಟ್ಟಿಂಗೋ ಹೇಳದ್ದೆ ಓಡಿದ್ದಾಡ ಹೇಳಿ ಊರಿಡೀ ಡಂಗುರ ಸಾರ್ಸುಗು ಈ ಜೆನಂಗೊ. ಇಲ್ಲದಿದ್ದರೆ ಅಪ್ಪಣ್ಣನ ಮಗಳು ಅದರ ತಂಗೆ ಗೆಂಡನೊಟ್ಟಿಂಗೆ ಊರೂರು ತಿರುಗುತ್ತಾಡ ಹೇಳಿಯೂ ವದಂತಿ ಹುಟ್ಟುಸುಗು ನೀನೂ ಬಂದರೆ ಅವರ ಬಾಯಿಗೆಲ್ಲಾ ಬೀಗ ಹಾಕಲಕ್ಕು ಅದಕ್ಕೆ"

ಅಪ್ಪಣ್ಣಭಟ್ಟರಿಗೂ ಮಗಳ ಮಾತು ಸರಿ ಅನಿಸಿತು.

"ಆತಂಬಾಗ ಆನೂ ಬತ್ತೆ" ಎಂದು ಹೊರಡಲು ಅನುವಾದರು.

ಮರುದಿನ ಬೆಳಿಗ್ಗೆ ಐದರ ಬಸ್ಸಿಗೆ ತಂದೆ ಮಗಳಿಬ್ಬರೂ ಬಸ್ಸು ಏರಿದರು. ರಘುರಾಮ ಅದೇ ಬಸ್ಸಿನಲ್ಲಿ ಇದ್ದದ್ದನ್ನು ನೋಡಿ ಸಮಾಧಾನ ಪಟ್ಟರು. ಏಳುಗಂಟೆಗೆ ಸರಿಯಾಗಿ ಬಸ್ಸು ಹಂಪನಕಟ್ಟೆಗೆ ಬಂದು ಮುಟ್ಟಿತು. ಎಲ್ಲರೂ ಬಸ್ಸಿನಿಂದ ಇಳಿದರು; "ಮಾವ ನಿಂಗಳೂ ಬತ್ತಿ ಹೇಳಿ ಎನಗೆ ಗೊಂತಿತ್ತಿಲ್ಲೆ" ಎಂದ ರಘುರಾಮ.

"ಕಾವೇರಿ ಬಾ ಹೇಳಿ ಒತ್ತಾಯ ಮಾಡಿತ್ತು. ಹಾಂಗಾಗಿ ಆನೂ ಹೆರಟಿಕ್ಕಿ ಬಂದಿ" ಅಂದರು ಅಪ್ಪಣ್ಣ.

"ಈಗ ನಾವು ಮದಾಲು ಇಲ್ಲೇ ಹತ್ರೆ ಇಪ್ಪ ಹೋಟ್ಲಿಂಗ ಹೋಗಿ ಕಾಫಿ ತಿಂಡಿ ಮಾಡುವೊ"

"ಇಲ್ಲಿ ಹೋಟ್ಲೆಲ್ಲಿದ್ದು. ಎನಗೆ ಇಷ್ಟರವರೆಗೆ ಹೋಟ್ಲಿಂಗೆ ಹೋಗಿಯೇ ಗೊಂತಿಲ್ಲೆ."

"ಅದಕ್ಕೇ ಹೋಪೊ ಹೇಳಿದ್ದು. ಇಲ್ಲೇ ಹತ್ರೆ ಸರಕಾರಿ ಆಸ್ಪತ್ರೆಯ ಎದುರೇ ಶ್ರೀ ಕೃಷ್ಣಭವನ ಹೇಳುವ ಹೋಟ್ಲಿದ್ದು. ಅಲ್ಲಿ ಮಸಾಲೆದೋಸೆ ಹೇಳಿ ಸಿಕ್ಕಿತ್ತು. ಲಾಯಿಕಿರ್ತು"

"ಎನಗೆ ಮಸಳೆ ದೋಸೆ ಹೇಳಿರೂ ಗೊಂತಿಲ್ಲೆ"

"ಮಸಳೆ ಅಲ್ಲ ಮಾವ, ಮಸಾಲೆ ದೋಸೆ ಹೇಳಿ. ದೋಸೆಗೆ ತುಪ್ಪ ಹಾಕಿ ಒಳ್ಳೆ ಕುರುಕುರು ಅಪ್ಪನ್ನಾರ ಕಾಸಿ, ಅದರ ಒಳ ಬಟಾಟೆ, ನೀರುಳ್ಳಿ ಹಾಕಿದ ತಾಳಿನ ಮಡುಗುತ್ತವು. ಒಂದಾರಿಗೆ ಒಂದೇ ದೋಸೆ ಸಾಕಾವುತ್ತವು. ಹೊಟ್ಟೆ ತುಂಬಾ ಆವುತ್ತು" ಮಾವನಿಗೆ ವಿವರಣೆ ನೀಡುತ್ತಾ ಬಂದ ರಘುರಾಮ. ಅಷ್ಟರಲ್ಲಿ ಹೊಟೇಲು ಸಮೀಪ ಬಂದರು. ಮೂವರೂ ಕುರ್ಚಿ ಎಳೆದು ಬಂದು ಮೇಜಿನ ಹತ್ತರೆ ಕುಳಿತರು. ಅಲ್ಲೇ ಹತ್ತಿರದಲ್ಲಿ ಕೈಮುಖ ತೊಳೆಯುವ ವ್ಯವಸ್ಥೆ ಇತ್ತು. ಎದುರುಗಡೆ ಕನ್ನಡಿಯೂ ಇತ್ತು. ನಿಂಗೊ ಮೋರೆ ತೊಳಕ್ಕೋಳಿ' ಎಂದ ರಘುರಾಮ. ಅಲ್ಲೇ ಹತ್ತಿರದಲ್ಲಿದ್ದ 'ಗಂಡಸರಿಗೆ' ಎಂದು ಬರೆದಲ್ಲಿಗೆ ಹೋಗಿ ಬಾಗಿಲು ಹಾಕಿಕೊಂಡ. ಇನ್ನೊಂದು ಕಡೆಯಲ್ಲಿ 'ಹೆಂಗಸರಿಗೆ' ಎನ್ನುವ ಬೋರ್ಡು ನೋಡಿದಳು ಕಾವೇರಿ. ಅವಳಿಗೂ ಅದೇನೆಂದು ಅರ್ಥವಾಗಲಿಲ್ಲ. ರಘುರಾಮ ಹೊರಗೆ ಬಂದವನೇ,

"ಮಾವ ನಿಂಗೊ ಆನೀಗ ಹೋಗಿ ಬಯಿಂದಿಲ್ಲೆಯೋ 'ಗಂಡುಸರಿಗೆ' ಹೇಳುವಲ್ಲಿಗೆ ಹೋಗಿ. ಒಳ ನೀರೂ ಇದ್ದು. ಅಲ್ಲಿ ಉಚ್ಚು ಹೊಯ್ವಲಕ್ಕು ಬೇಕಾದರೆ ಹೇಲ್ಲೂ ಅಕ್ಕು"

"ಅದರ ಒಳವೆಯೋ?" ಅಪ್ಪಣ್ಣ ಕಕ್ಕಾಬಿಕ್ಕಿಯಾದರು.

"ಆನೂ ಬತ್ತೆ ನಿಂಗಳೊಟ್ಟಿಂಗೆ ತೋರ್ಸುತ್ತೆ ಹೇಳಿ ರಘುರಾಮ ಮಾವನ ಹಿಂದೆ ಹೋಗಿ ವಿವರಿಸಿ ಬಂದ. ಎಲ್ಲೋ ತೋಡ ಬದಿಯಲ್ಲಿ, ಗಿಡಗಂಟೆಗಳ ಮಧ್ಯದಲ್ಲಿ ಕುಳಿತು ಮಲಮೂತ್ರ ಮಾಡಿದ ಅಪ್ಪಣ್ಣಭಟ್ಟರಿಗೆ ಎಲ್ಲಾ ಹೊಸದು. ರಘುರಾಮನ ವಿವರಣೆಯನ್ನು ಕೇಳಿದ ಕಾವೇರಿಗೆ ಎಲ್ಲವೂ ಅರ್ಥವಾಯಿತು. ಸದ್ದಿಲ್ಲದೆ 'ಹೆಂಗುಸರಿಗೆ' ಎಂದು ಬರೆದಿದ್ದಲ್ಲಿಗೆ ಹೋಗಿ ಎಲ್ಲಾ ಪೂರೈಸಿದಳು.

ಮೇಜಿನ ಮೇಲೆ ಬಂದು ಕುಳಿತು ಹೋಟೇಲು ಮಾಣಿಯನ್ನು ಕರೆದು ಮೂರು ಮಸಾಲೆ ದೋಸೆಗೆ ಹೇಳಿದ ರಘುರಾಮ. ಮಾಣಿ ಬಿಸಿಬಿಸಿ ದೋಸೆಗಳನ್ನು ತೆಗೆದುಕೊಂಡು ಬಂದ. ಮೂವರಿಗೂ ಹಸಿವೆ ಚೆನ್ನಾಗಿತ್ತು. ಮಾತಿಲ್ಲದೆ ತಿಂದು ಮುಗಿಸಿದರು.

"ಇನ್ನೊಂದೊಂದು ಹೇಳಲಿಯೋ ಮಾವ" ಎಂದ ರಘುರಾಮ.

"ಬೇಡವ್ವ ಒಂದೇ ಸಾಕಾತು"

"ಹಾಂಗಾರೆ ಆನು ಕಾಫಿಗೆ ಹೇಳುತ್ತೆ" ಹೇಳಿ ಮೂರು ಕಾಫಿಗೆ ಹೇಳಿದ. ಘಮಘಮ ಎನ್ನುವ ಬಿಸಿಬಿಸಿ ಕಾಫಿ ಬಂತು. ಮೂವರೂ ಕುಡಿದರು. ಹೊಟ್ಟೆ ತಣ್ಣಗಾಯಿತು.

"ಮಾವ ಇನ್ನು ನಾವು ಆಸ್ಪತ್ರೆಯ ಕಡೆಗೆ ಹೋಪ. ಅದರ ಡಿಎಂಓ ಎನಗೆ ಪರಿಚಯ ಇದ್ದು, ಒಳ್ಳೆ ಮನುಷ್ಯ. ಅವನ ಹತ್ತರೆ ನಾವು ಬಂದ ಉದ್ದೇಶವ ಮಾತಾಡುವೊ. ಮದಲೆ ಆನು ಅವಂಗೆ ಅತ್ತಿಗೆ ವಿಷಯ ವಿವರಾಗಿ ಮಾತಾಡುತ್ತೆ. ನಿಂಗೊ ಅಂಬಾಗ ಅವನ ಕೋಣೆಂದ ಹೆರ ಬೆಂಚಿರುತ್ತು. ಅದರಲ್ಲಿ ಕೂದೋಳಿ. ಆನು ದಿನಿಗೇಳಿದ ಮತ್ತೆ ಒಳ ಬಂದರೆ ಸಾಕು ಆತೋ" ಎಂದು ವಿವರಿಸಿದ ರಘುರಾಮ.

'ವೆನ್‌ಲೋಕ್' ಆಸ್ಪತ್ರೆಯೆಂದರೆ ದೊಡ್ಡ ಹೆಸರಿನ ದೊಡ್ಡ ಆಸ್ಪತ್ರೆ. ಮೂರು ಅಂತಸ್ತಿನ ಕಟ್ಟಡ, ಅಲ್ಲಿ ಒಳರೋಗಿಗಳಾಗಿಯೂ, ಹೊರ ರೋಗಿಗಳಾಗಿಯೂ ಬರುತ್ತಾರೆ ಸುತ್ತಮುತ್ತಲಿನ ಜನ. ಅನೇಕ ಡಾಕ್ಟ್ರುಗಳು, ನರ್ಸುಗಳು ಅತ್ತಿಂದಿತ್ತ ಓಡಾಡುತ್ತಿರುತ್ತಾರೆ. ಎಲ್ಲಾ ಕಡೆ ನಿಶ್ಯಬ್ದ. ಅಲ್ಲೊಮ್ಮೆ ಇಲ್ಲೊಮ್ಮೆ ರೋಗಿಗಳು ಮುಲುಗುವುದು ಕೇಳಿಬರುತ್ತಿತ್ತು.

ರಘುರಾಮ ಅತ್ತಿಗೆ ಮಾವನನ್ನು ಕರೆದುಕೊಂಡು ಎರಡನೇ ಮಹಡಿಯ ಮೂರನೇ ಕೋಣೆಯ ಹತ್ತಿರಕ್ಕೆ ಹೋದ. ಹೊರಗಿದ್ದ ಬೆಂಚಿನಲ್ಲಿ ಅವರಿಬ್ಬರನ್ನೂ ಕುಳಿತುಕೊಳ್ಳಲು ಸಂಜ್ಞೆ ಮಾಡಿದ. ಅವರಲ್ಲಿ ಕುಳಿತರು.

ರಘುರಾಮ ಮೆಲ್ಲಗೆ ಮುಚ್ಚಿದ ಬಾಗಿಲಿಗೆ ಸಪ್ಪಳ ಮಾಡಿದ.

"ಯಸ್. ಕಮಿನ್" ಎಂದರು ಒಳಗಿಂದ.

ರಘುರಾಮ ಒಳನಡೆದ.

"ನಮಸ್ಕಾರ ಸಾರ್" ಎಂದ.

"ಹೋ ರಘುರಾಮ ಭಟ್ಟರೋ! ಏನಿಲ್ಲಿ? ಯಾರಾದರೂ ರೋಗಿಯನ್ನು ಕರೆದುಕೊಂಡು ಬಂದಿದ್ದೀರಾ?" ಎಂದು ಸಲಿಗೆಯಲ್ಲಿಯೇ ಮಾತನಾಡಿಸಿದರು.

"ಇಲ್ಲ ಸಾರ್, ನನಗೆ ನಿಮ್ಮಿಂದ ಒಂದು ಉಪಕಾರವಾಗಬೇಕಿತ್ತು. ಅದಕ್ಕೆ ಬಂದಿದ್ದೇನೆ."

"ನನ್ನಿಂದ ಏನಾಗಬೇಕು ನಿಮಗೆ ಹೇಳಿ."

ರಘುರಾಮನನ್ನು ಡಿ.ಎಂ.ಓ.ಗೆ ಚೆನ್ನಾಗಿ ಪರಿಚಯವಿತ್ತು. ಎಷ್ಟೋ ಸಲ ಅವರಲ್ಲಿಗೆ ತನ್ನೂರಿಂದ ರೋಗಿಗಳನ್ನು ಕರೆದುಕೊಂಡು ಹೋಗಿದ್ದ. ತನ್ನ ಶಾಲೆಯ ವರ್ಧಂತಿ ಉತ್ಸವಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಕರೆದಿದ್ದ. ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅವರ ಕೈಯಿಂದಲೇ ಬಹುಮಾನಗಳನ್ನು ಕೊಡಿಸಿದ್ದ. ಶಾಲಾ ಮುಖ್ಯೋಪಾಧ್ಯಾಯರೂ, ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ರಘುರಾಮ ನಂತಹ ಉಪಾಧ್ಯಾಯರುಗಳೇ ಕಾರಣವೆಂದು ತಮ್ಮ ವರದಿಯಲ್ಲಿಯೇ ವಾಚಿಸಿದ್ದರು. ಶಾಲಾ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿನಿಯರಿಗೆ ರಘುರಾಮ ಮೇಷ್ಟ್ರು ಅಚ್ಚುಮೆಚ್ಚಿನವ ರಾಗಿದ್ದರು.

ರಘುರಾಮ ಸೂಕ್ಷ್ಮವಾಗಿ ತನ್ನ ಅತ್ತಿಗೆ ಕಾವೇರಿಯ ವೃತ್ತಾಂತವನ್ನು ವಿವರಿಸಿದ. ಅವಳಿಗೆ ಮುಂದಿನ ಹೆಜ್ಜೆ ಇಡಲು ಸಹಾಯ ಮಾಡಬೇಕೆಂದೂ ಕೋರಿಕೊಂಡ.

ಕಾವೇರಿಯ ಸ್ಥಿತಿಯನ್ನು ಕೇಳಿ ಅವರೂ ಮರುಗಿದರು.

“ಹೀಗಿರುವ ಅನಿಷ್ಟ ಪದ್ಧತಿಗಳು ನಮ್ಮಲ್ಲೂ ಇವೆ ಮೇಷ್ಟ್ರೆ. ನನ್ನ ಬಳಗದಲ್ಲಿಯೇ ಅನೇಕ ಹೆಂಗಸರಿಗೆ ಹೀಗಾಗಿದೆ. ಆದರೆ ಅವರಿಗೆ ನಾನೇನು ಮಾಡಲಾಗಲಿಲ್ಲ. ಎಷ್ಟೋ ಜನರಿಗೆ ನೀವು ಮುಂದಕ್ಕೆ ಓದಿ, ಬೇಕಾದ ಸಹಾಯ ನಾನು ಮಾಡುತ್ತೇನೆ ಎಂದೆ. ಆದರೆ ಅವರಿಗೆ ಯಾರಿಗೂ ಆ ಧೈರ್ಯವಿದ್ದಿಲ್ಲ. ಯಾರೂ ಮುಂದಕ್ಕೆ ಬರಲಿಲ್ಲ; ಆದರೆ ಕಾವೇರಿ ಮುಂದೆ ಕಲಿಯಬೇಕೆಂದಿದ್ದಾಳಲ್ಲಾ ಅದನ್ನು ತಿಳಿದು ಸಂತೋಷವಾಯಿತು. ಏನು ಮಾಡಬೇಕೆಂದಿದ್ದಾಳೆ?”

“ಅವಳು ಕಲ್ತತ್ತು ಬರೇ ನಾಲ್ಕನೇ ಕ್ಲಾಸು. ಮುಂದಕ್ಕೆ ಓದಿ ಆಸ್ಪತ್ರೆಯಲ್ಲಿ ನರ್ಸ್ ಆಗಬೇಕೆಂದಿದ್ದಾರೆ”

“ನಾಲ್ಕನೇ ಕ್ಲಾಸು ಓದಿದವರಿಗೆ ನರ್ಸ್ ಆಗಲಿಕ್ಕೆ ಬರುವುದಿಲ್ಲ. ಕನಿಷ್ಠ ಎಸ್‌ಎಸ್‌ಎಲ್‌ಸಿ ಯಾದರೂ ಆಗಬೇಕು.”

“ಅವರಿಗೆ ಅದು ಗೊತ್ತಿದೆ. ಪ್ರೈವೇಟಾಗಿ ಒಂದೊಂದೇ ಪರೀಕ್ಷೆ ಕಟ್ಟುತ್ತೇನೆ ಎನ್ನುತ್ತಾರೆ.”

“ಅವರಿಗೆ ಈಗ ಎಷ್ಟು ವಯಸ್ಸು?”

“ಇಪ್ಪತ್ತೆರಡು ಇರಬೇಕು”.

"ಹಾಗಾದರೆ ನೀವು ಅವರನ್ನು ಇಲ್ಲಿ ಸೇರಿಸಬೇಡಿ. ಸೀದಾ ಕಾಶಿಗೆ ಹೋಗಿ. ಅಲ್ಲಿ ನನ್ನ ಸ್ನೇಹಿತರೊಬ್ಬರು ಸರಕಾರಿ ಆಸ್ಪತ್ರೆಯಲ್ಲಿ ಆರ್.ಎಂ.ಓ ಆಗಿದ್ದಾರೆ. ಅವರು ನಮ್ಮೂರಿನವರೇ"

"ಯಾರು ಸಾರ್?"

"ಕೇಶವಭಟ್ಟ ಅಂತ ಅವರ ಹೆಸರು; ನಿಮ್ಮೂರಿಗೆ ಸಮೀಪದ ಸೇಡಿಗುಮ್ಮೆ ಯವರು. ಅವರು ಮಂಗಳೂರಿನಲ್ಲಿ ಇಂಟರ್‌ಮೀಡಿಯಟು ಓದುವಾಗ ನನ್ನೊಟ್ಟಿಗೆ ಇದ್ದವರು. ಆಮೇಲೆ ಕಾಶಿಗೆ ಹೋಗಿ ಅಲ್ಲಿಯೇ ವೈದ್ಯಕೀಯ ಪರೀಕ್ಷೆ ಕಟ್ಟಿ, ಸರಕಾರಿ ಆಸ್ಪತ್ರೆಯಲ್ಲಿ ಕೆಲವು ಸಮಯ ಡಾಕ್ಟರಾಗಿ ದುಡಿದು, ಅಲ್ಲಿಯೇ ಎಂ.ಎಸ್ ಕಟ್ಟಿ ಪಾಸಾದರು. ತುಂಬಾ ಒಳ್ಳೆಯವರು. ನಿಮಗೆ ಅವರಿಂದ ಸಹಾಯವಾಗಬಹುದು."

"ನೀವು ಹೇಳುವಾಗ ನನಗೂ ಜ್ಞಾಪಕ ಬಂತು ಸಾರ್, ಅವರು ಸೇಡಿಗುಮ್ಮೆ ಶಂಕರಭಟ್ಟರ ಮಗ. ಒಬ್ಬನೇ ಮಗ. ಶಂಕರಭಟ್ಟರು ಪೌರೋಹಿತ್ಯ ಮಾಡುವವರು. ಮಗನೂ ಮುಂದಕ್ಕೆ ಪುರೋಹಿತನಾಗಬೇಕೆಂದು, ಮಂತ್ರಾಭ್ಯಾಸ ಮಾಡಿಸಿದ್ದರು. ಹಾಗೆಯೇ ಶಾಲೆಗೂ ಕಳುಹಿಸಿದ್ದರು. ಇಂಟರ್‌ಮೀಡಿಯಟ್ ಆದೊಡನೆ ತಾನು ಪೌರೋಹಿತ್ಯ ಮಾಡುವುದಿಲ್ಲವೆಂದೂ, ಡಾಕ್ಟರಾಗಬೇಕೆಂದೂ ತಂದೆಗೆ ತಿಳಿಸಿದರು. ಇದನ್ನು ಕೇಳಿ ಶಂಕರಭಟ್ಟರಿಗೆ ಸಿಟ್ಟು ನೆತ್ತಿಗೇರಿತು.

"ಏನು ಪೌರೋಹಿತ್ಯ ಬಿಟ್ಟು ಡಾಕ್ಟರಾಗುತ್ತಿಯಾ? ಶವಸಂಸ್ಕಾರಕ್ಕೆ ಮಂತ್ರ ಹೇಳಬೇಕಾದ ನೀನು ಶವ ಕೊಯ್ಯುತ್ತೇನೆ ಎಂದು ಹೇಳುತ್ತೀಯಾ ನೀನು ಡಾಕ್ಟ್ರ ಕಲಿಯುವುದು ಬೇಡ. ನಮ್ಮ ಕುಲಕಸುಬು ಮಂತ್ರವನ್ನೇ ಕಲಿ" ಎಂದರು ಅವರಪ್ಪ.

"ನನಗೆ ಯಾವುದು ಇಷ್ಟವೋ ಅದನ್ನೇ ಮಾಡುತ್ತೇನೆ ಅಪ್ಪಾ. ನಾನು ಡಾಕ್ಟ್ರೇ ಆಗುವುದು; ಜುಟ್ಟು ಕಟ್ಟಿಕೊಂಡು, ಗಂಟೆ ಕಟ್ಟೆ, ಮಂತ್ರ ಹೇಳಿ, ಅಕ್ಕಿ, ತೆಂಗಿನಕಾಯಿ ಮೂಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವುದಿಲ್ಲ" ಎಂದು ಸ್ವಚ್ಛ ಹೇಳಿದರು.

"ನೀನು ಡಾಕ್ಟ್ರಾದರೆ ಹೊಲೆಮಾದಿಗರಿಗೆ ಸರಿ– ನನ್ನ ಮನೆಯೊಳಗೆ ಇರುವುದೂ ಬೇಡ– ನೀನು ಮುಂದೆ ಮನೆಗೆ ಬರುವುದೂ ಬೇಡ" ಎಂದು ಖಡಾಕಂಡಿತವಾಗಿ ಹೇಳಿದರು ಶಂಕರಭಟ್ಟರು.

"ಆಯಿತು ನಾನು ಮನೆಗೆ ಬರುವುದಿಲ್ಲ" ಎಂದ ಕೇಶವ.

“ನೀನು ಇಂದಿನಿಂದಲೇ ಜನಿವಾರ ತೆಗೆದು ಹಾಕು” ಎಂದರು ಅಪ್ಪ ಆಯಿತು ಈಗಲೇ ತೆಗೆದುಬಿಡುತ್ತೇನೆ ಎಂದು ಅವರ ಮುಂದೆ ಜನಿವಾರವನ್ನು ಕಿತ್ತೆಸೆದ ಕೇಶವ.

“ನಿನಗೆ ಕಲಿಯಲಿಕ್ಕೆ ನಾನು ಒಂದು ಪೈಸೆಯನ್ನು ಕೊಡಲಿಕ್ಕಿಲ್ಲ ಎಂದರು ಅಪ್ಪ.”

“ಎನಗೆ ನಿನ್ನ ಹಣ ಬೇಡ, ನಾನು ಕಾಶಿಗೆ ಹೋಗಿ, ಅಲ್ಲಿ ಕಲಿಯುತ್ತೇನೆ. ಅಲ್ಲೇ ದುಡಿದು ಸಂಪಾದಿಸುತ್ತೇನೆ” ಎಂದು ಮನೆಯಿಂದ ಹೊರಟು ಹೋಗಿದ್ದಾನೆ. ಅಲ್ಲಿ ಕಲ್ತೇ ಅವನು ಡಾಕ್ಟ್ರು ಆಗಿದ್ದು. ಮುಂದೆ ಆರ್.ಎಮ್.ಓ ಆಗಿದ್ದು.’

ನೀವು ಕಾವೇರಿಯನ್ನು ಕಾಶಿಗೆ ಕರೆದುಕೊಂಡು ಹೋಗಿ ನಾನು ನಿಮಗೊಂದು ಪತ್ರವನ್ನೂ ಕೊಡುತ್ತೇನೆ. ನೀವೂ ನಿಮ್ಮ ವಿಷಯವನ್ನು ತಿಳಿಸಿರಿ ನಿಮಗೆ ದೇವರು ಒಳ್ಳೆದು ಮಾಡಲಿ” ಎಂದು ಹೇಳಿ ಒಂದು ಪತ್ರ ಬರೆದು ರಘುರಾಮನಿಗೆ ಲಕೋಟೆಯಲ್ಲಿ ಹಾಕಿಕೊಟ್ಟರು.

“ಹೇಳಿದ ಹಾಗೆ ನಿಮ್ಮ ಅತ್ತಿಗೆ ಇಲ್ಲಿಗೆ ಬಂದಿದ್ದಾರೋ.”

“ಬಂದಿದ್ದಾರೆ ಸಾರ್. ಇಲ್ಲೇ ಹೊರಗೆ ಬೆಂಚಿಯಲ್ಲಿ ಕುಳಿತಿದ್ದಾರೆ”

“ಹಾಗಾದರೆ ಅವರನ್ನು ಒಳಗೆ ಕರೆದುಬಿಡಿ”

“ಆಯಿತು ಸಾರ್” ಎಂದವನೇ ಹೊರಗೆ ಹೋಗಿ ಕಾವೇರಿಯನ್ನು ಒಳಗೆ ಕರೆದುಕೊಂಡು ಬಂದ ರಘುರಾಮ. ‘ಕಾವೇರಿ’ ನಮಸ್ಕಾರ ಮಾಡಿದಳು, ಕೂತುಕೊಳ್ಳಿ ಎಂದರು ಡಿ.ಎಮ್.ಓ.

“ನನಗೆ ನಿಮ್ಮ ಸಮಾಚಾರವೆಲ್ಲಾ ಗೊತ್ತಾಯಿತು. ಧೈರ್ಯವಾಗಿರಿ. ನಿಮ್ಮ ಸಾಧನೆಗೆ ಯೋಗ್ಯವಾದ ಸ್ಥಳ ಇದಲ್ಲ. ನೇರವಾಗಿ ಕಾಶಿಗೆ ಹೋಗಿರಿ. ಅಲ್ಲಿ ನಿಮಗೆ ಎಲ್ಲಾ ಅನುಕೂಲ ಸಿಕ್ಕುತ್ತದೆ. ಎಲ್ಲಾ ವ್ಯವಸ್ಥೆ ಮಾಡಿದ್ದೇನೆ” ಎಂದು ತಿಳಿಸಿದರು.

‘ನೀವಿನ್ನು ಹೋಗಬಹುದು’ ಎಂದು ಹೇಳಿ ಡಿ.ಎಮ್.ಓ ಅಲ್ಲಿಂದ ಎದ್ದು ಹೋದರು.

ಕಾವೇರಿ ಕಂಗಾಲಾದಳು. ಅವಳಿಗೊಂದು ಅರ್ಥವಾಗಲಿಲ್ಲ. ಮೌನವಾಗಿ ಆಸ್ಪತ್ರೆಯ ಮೆಟ್ಟಲಿಳಿದಳು ರಘುರಾಮನೇ ಮಾತನಾಡಿದ.

"ಅತ್ತಿಗೆ ನಿನಗೆ ಕಲ್ತುಗೊಂಡು ಕೆಲಸ ಮಾಡುವ ವ್ಯವಸ್ಥೆ ಇಲ್ಲಿ ಇಲ್ಲೆಡಾ. ಅದು ಕಾಶಿಲಿ ಮಾಂತ್ರ ಇಪ್ಪದಾಡ. ಹೇಂಗೆ ಮುಂದಕ್ಕೆ ಹೋಪದೋ? ಅಲ್ಲ ಮನೆಗೆ ವಾಪಾಸು ಹೋಪದೋ"?

"ವಾಪಾಸು ಮನೆಗೆ ಹೋಪದು? ಖಂಡಿತಾ ಆನು ಒತ್ತಿಲ್ಲೆ."

"ಏಕಾಏಕಿ ಕಾಶಿಗೆ ಹೋಪ ವ್ಯವಸ್ಥೆ ಆಯೇಕನ್ನೆ" ರಘುರಾಮನಿಗೆ ಆತಂಕವಾಯಿತು.

"ಭಾವ ಅಪ್ಪ ವಾಪಾಸ್ಸು ಮನೆಗೆ ಹೋಗಲಿ, ನೀನು ಎನ್ನ ಕರಕ್ಕೊಂಡು ಕಾಶಿಗೆ ಹೋಪೆಯೋ"?

"ಹೋಪಲಕ್ಕು ಅತ್ತಿಗೆ- ಹೆಚ್ಚು ಕಮ್ಮಿ ಎಂಟು ದಿನ ಶಾಲೆಗೆ ರಜೆ ಹಾಕೇಕಾವುತ್ತು. ಅದಾದರೂ ಆನು ಇಲ್ಲಿಂದಲೇ ಪತ್ರ ಬರದು ಹಾಕುವೆ ತೊಂದರೆ ಇಲ್ಲೆ. ಕಾಶಿಗೆ ಹೋಪಲೆ- ಬಪ್ಪಲೆ ಪೈಸೆ ವ್ಯವಸ್ಥೆ ಆಯೇಕನ್ನೆ."

"ಭಾವ. ಎನ್ನ ಕೈಲಿ ಒಂದು ಸಾವಿರ ಇದ್ದು. ಇದಾ ಕೊರಳಿಲ್ಲಿ ಒಂದೆಳೆ ಸರವೂ ಇದ್ದು. ಹೇಂಗಾರೂ ಮಾಡ್ಳುಕ್ಕು."

"ಕಾಶಿಗೆ ಹೋಪ ರೈಲು ಎಷ್ಟು ಗಂಟೆಗಡಾ?"

"ಇಂದು ಹೊತ್ತೋಪಾಗ 5 ಗಂಟೆಗೆ ಹೆರಡುತ್ತಾಡ."

"ಅಂಬಾಗ ಅಪ್ಪನ ನೀನು ಊರಿಂಗೆ ಹೋಪ ಬಸ್ಸಿಂಗೆ ಬತ್ತುಸಿ ಬಿಡು. ಇಲ್ಲದಿದ್ದರೆ ಏವದಾದರೂ ಬಸ್ಸಿಲ್ಲಿ ಹತ್ತಿ ಕೂರುಗು; ಎಲ್ಯಾದರೂ ಇಳಿಗು. ಆನು ಈ ಆಸ್ಪತ್ರೆಯ ಗೇಟಿನ ಹತ್ರೆ ಕೂರುತ್ತೆ.

ನೀನು ಬಂದ ಮತ್ತೆ ಒಟ್ಟಿಂಗೆ ರೈಲ್ವೆ ಸ್ಟೇಶನ್ನಿಂಗೆ ಹೋಪೊ" ಆಗದೋ?"

"ಅಕ್ಕು, ಮಾವಂಗೆ ಇನ್ನೊಂದಾರಿ ಕಾಫಿ ಕುಡುಂಗಿ, ಬಸ್ಸಿಂಗೆ ಹತ್ತುಸಿಕ್ಕಿ ಬತ್ತೆ" ಹೇಳಿ ರಘುರಾಮ ಹೊರಟ.

ಅಪ್ಪಣ್ಣಭಟ್ಟರಿಗೆ ತಾನು ಎಲ್ಲಿದ್ದೇನೆ. ಏನು ಮಾಡುತ್ತೇನೆ ಎಂಬುದೇ ಅರ್ಥವಾಗಿಲ್ಲ. ಅಳಿಯ ಹೇಳಿದ ಹಾಗೇ ಕೇಳಿದರು. ಅವರನ್ನು ಹೋಟೇಲಿಗೆ ಕರೆದುಕೊಂಡು ಹೋಗಿ ಒಂದೆರಡು ಇಡ್ಲಿ ತಿನ್ನಿಸಿ ಊರ ಬಸ್ಸಿಗೆ ಹತ್ತಿಸಿದ ರಘುರಾಮ.

"ಮಾವ ನಿಂಗೊ ಚಿಂತೆ ಮಾಡೇಡಿ. ಆನು ಅತ್ತಿಗೆಯ ಕಾಶಿಗೆ ಕರಕ್ಕೊಂಡು ಹೋಗಿ, ಅಲ್ಲಿ ಆ ಡಾಕ್ತ್ರ ಭೇಟಿ ಆಗಿ ಒಂದು ವ್ಯವಸ್ಥೆ ಮಾಡಿಕ್ಕಿ ಬತ್ತೆ. ಎನಗೆ ಒಂದೆರಡು ದಿನ ಹೆಚ್ಚು ಕಮ್ಮಿ ಆದರೂ ತೊಂದರೆ ಇಲ್ಲೆ. ನಿಂಗೊ ಒಂದಾರಿ ಎಂಗಳ ಮನೆ ಹತ್ರಂಗೆ ಹೋಗಿ ಎನ್ನ ಅಬ್ಬೆಗೆ ಅಪ್ಪಂಗೂ, ಶಾರದೆಗೂ ಸಮಾಚಾರ ತಿಳಿಶಿಕ್ಕಿ. ಇಲ್ಲದಿದ್ದರೆ ಅವು ಗಾಬ್ರಿ ಅಕ್ಕು."

"ಆತು ರಘುರಾಮ, ಆನು ನಿಂಗಳ ಒಟ್ಟಿಂಗೆ ಬಂದರೂ ಎನಗೆ ಎಂತ ಮಾಡ್ಲೂ ಅರಡಿಯ. ಆನು ನಾಲ್ಕು ಅಕ್ಷರ ಕಲ್ತಿದೂ ಇಲ್ಲೆ. ನಾಲ್ಕೂರು ಸುತ್ತಿದ್ದೂ ಇಲ್ಲೆ. ಎಲ್ಲಾ ಭಾರ ನಿನ್ನ ತಲೆ ಮೇಲೆ ಬಿದ್ದತ್ತದ.

"ಹಾಂಗೆಂತದೂ ಇಲ್ಲೆ ಮಾವ. ನಿಂಗೊ ಬೇ ಾರ ಮಾಡ್ಯೊಳ್ಳೇಡಿ" ಆತೊ ಆನಂಬಾಗ ಬತ್ತೆ" ಹೇಳಿ ರಘುರಾಮ ಮಾವನನ್ನು ಬೀಳ್ಕೊಟ್ಟ. ಅಲ್ಲಿಂದ ನೇರ ಹೊಟೇಲಿಗೆ ಬಂದು, ಹತ್ತಾರು ಇಡ್ಲಿಗಳನ್ನು ಕಟ್ಟಿಸಿಕೊಂಡು, ಆಸ್ಪತ್ರೆಯ ಗೇಟಿನ ಕಡೆಗೆ ಬಂದ ಅವನನ್ನು ಕಂಡೊಡನೆ ಕಾವೇರಿ ಎದ್ದು ನಿಂತಳು.

"ನಾವಿನ್ನು ರೈಲ್ವೆ ಸ್ಟೇಶನಿಂಗೆ ಹೋಪೊ" ಎಂದು ಹೇಳಿ ನಿಲ್ದಾಣದ ಕಡೆಗೆ ನಡೆದರು; ಕಾವೇರಿಯನ್ನು ಹೆಂಗುಸರು ಕುಳಿತುಕೊಳ್ಳುವ ವಿಶ್ರಾಂತಿ ಕೋಣೆಗೆ ಕರೆದುಕೊಂಡು ಹೋಗಿ ಬಿಟ್ಟು

"ಅತ್ತಿಗೆ ನೀನು ಇಲ್ಲಿ ಕೂರು. ಇದರ ಒಳದಿಕೆ ಮೀವಲೆ ವ್ಯವಸ್ಥೆ ಇದ್ದು, ಹಾಂಗೇ ಶೌಚಾಲಯವೂ ಇದ್ದು, ಮೀಯೆಕಾರೆ ಮಿಂದಂಡು, ಒಸ್ತ್ರ ಬೇಕಾದರೆ ಉಡಲು ಮಾಡಿಗೊ. ಇನ್ನು ರೈಲು ಹೆರಡೇಕಾರೆ ಎರಡು ಗಂಟೆ ಸಮಯ ಇದ್ದು. ಇದಾ, ಇದರಲ್ಲಿ ಇಡ್ಲಿ ಚಟ್ನಿ ಇದ್ದು ತಿಂದುಗೊ ಮತ್ತೆ ರೈಲಿಲ್ಲೂ ಅದು ಇದು ಹೇಳಿ ಸಿಕ್ಕುತ್ತು; ಕಾಫಿ ಚಾವೂ ಸಿಕ್ಕುತ್ತು; ಇಲ್ಲಿಂದ ಎರಡೂವರೆ ದಿನದ ಪಯಣ ನವಗೆ. ಆನು ಹತ್ರಾಣ ಕೋಣೇಲಿ ಮಿಂದು ಗಿಂತು ಮಾಡಿಕ್ಕಿ, ಟಿಕೇಟು ತೆಕ್ಕೊಂಡೇ ಬಂದು ದಿನಿಗೇಳುತ್ತೆ ಆತೊ" ಹೇಳಿ, ಅಲ್ಲಿಂದ ಹೊರಗೆ ಹೋದ, ಕಾವೇರಿಗೂ ಸಾಕಾಗಿತ್ತು. ಅಲ್ಲಿ ತನ್ನಂತೆ ಇಬ್ಬರು ಮೂವರು ಮಹಿಳೆಯರು ಕುಳಿತಿದ್ದರು; ಎಲ್ಲರೂ ಸ್ನಾನ ಮಾಡಿ ಬಟ್ಟೆ ಒಣಗಲಿಕ್ಕೆ ಹರವಿದ್ದರು. ಕಾವೇರಿಯೂ ಬಚ್ಚಲ ಮನೆಗೆ ಹೋಗಿ ಸ್ನಾನ ಮಾಡಿದಳು; ಉಟ್ಟ ಬಟ್ಟೆಯನ್ನೇ ಮತ್ತೆ ಉಟ್ಟುಕೊಂಡಳು. ಶೌಚಾಲಯಕ್ಕೂ ಹೋಗಿ ಬಂದಳು. ರಘುರಾಮ ತಂದುಕೊಟ್ಟ ಇಡ್ಲಿ ಚಟ್ನಿಯನ್ನು ತಿಂದು ನೀರು ಕುಡಿದಳು. ಹೊಟ್ಟೆ ತಣ್ಣಗಾಯಿತು. ಅಲ್ಲೇ ಬೆಂಚಿನಲ್ಲಿ ಸ್ವಲ್ಪ ಮಲಗಿಕೊಂಡಳು.

"ಸಮಯಕ್ಕೆ ಸರಿಯಾಗಿ ರಘುರಾಮ ಬಂದು ಕಾವೇರಿಯನ್ನು ಕರೆದುಕೊಂಡು ಕಾಶಿಗೆ ಹೊರಡುವ 'ಎಕ್ಸ್‌ಪ್ರೆಸ್' ಗಾಡಿಯಲ್ಲಿ ಕುಳಿತುಕೊಂಡರು; ಗಾಡಿ ಸಿಳ್ಳೆಯೊಂದಿಗೆ ಹೊರಡಲು ಅನುವಾಯಿತು. ಮೊದಲು ನಿಧಾನಗತಿಯಲ್ಲೇ ಸಾಗಿದ ಗಾಡಿ, ಬರಬರುತ್ತಾ ವೇಗವನ್ನು ಹೆಚ್ಚಿಸಿಕೊಂಡು ಓಡತೊಡಗಿತು. ಕಾವೇರಿಗಿದು ಹೊಸ ಅನುಭವ. ಅವಳೆಂದೂ ರೈಲನ್ನು ನೋಡಿರಲಿಲ್ಲ. ಪಯಣಿಸಿರಲಿಲ್ಲ. ಊರು ಬಿಟ್ಟು ಇನ್ನೊಂದೂರಿಗೆ ಹೋದವಳಲ್ಲ, ಹೋಗಲಿಕ್ಕೆ ಅವಳಿಗೆ ಹಣ ಬೇಕಿತ್ತಲ್ಲಾ? ಕರೆದುಕೊಂಡು ಹೋಗುವವರೂ ಇರಬೇಕಲ್ಲಾ – ಎರಡೂ ಇಲ್ಲದವಳು ಕಾವೇರಿ; ತನ್ನ ಹಣೆಯಲ್ಲಿ ಏನೇನು ಬರೆದಿದೆಯೋ ಅದೆಲ್ಲಾ ಆಗಲಿ ಎಂದು ಧೈರ್ಯವಾಗಿ ಕುಳಿತಿದ್ದಳು ಕಾವೇರಿ; ಅವಲ ತಲೆಯಲ್ಲಿಯೂ ಹಿಂದಿನ ಬದುಕಿನ ಒಂದೊಂದೇ ಚಿತ್ರಗಳು ಮೂಡಿಕೊಂಡು ಮಾಯವಾಗುತ್ತಿತ್ತು. ಮಾತಿಲ್ಲದೆ ಮೌನವಾಗಿ ಕೂತಿದ್ದ ಕಾವೇರಿಯನ್ನು ರಘುರಾಮನೇ ವಿಚಾರಿಸಿದ.

"ಅತ್ತಿಗೆ ಎಂತ ಆಲೋಚನೆ ಮಾಡುತ್ತಾ ಇದ್ದೆ?"

"ಹೀಂಗೆ ಎಂತೆಂತದೋ ಆಲೋಚನೆ ಬತ್ತು. ಆನು ದಡ ಮುಟ್ಟುತ್ತೆನೋ ಇಲ್ಲೆಯೋ ಹೇಳುವ ಅನುಮಾನವೂ ಆವುತ್ತು. ಅದನ್ನೇ ಯೋಚಿಸುತ್ತಾ ಇದ್ದೆ."

"ನೀನು ಚಿಂತೆ ಮಾಡೇಡ. ಧೈರ್ಯಲ್ಲಿ ಇರು. ಹೇಂಗಾರೂ ಆನು ನಿನಗೆ ವ್ಯವಸ್ಥೆ ಮಾಡಿಕೊಟ್ಟೇ ಬಪ್ಪೆ."

"ಎನ್ನಂದಾಗಿ ನಿನಗೆ ತೊಂದರೆ ಆತು" ಭಾವ.

"ಹಾಗೆಂತದೂ ಇಲ್ಲೆ ಅತ್ತಿಗೆ; ನಿನಗೆ ಸಹಾಯ ಮಾಡ್ಲೆ ಎನಗೆ ಖುಷಿ ಆವುತ್ತು. ನಿನ್ನ ಬದುಕ್ಕಿನ ಜಾನ್ಸಿ ಆನು ತುಂಬಾ ಮರುಗಿದ್ದೆ. ಅನ್ಯಾಯವಾಗಿ ಒಂದು ಕೂಸಿನ ಬದುಕ್ಕು ಹಾಳಾಗಿ ಹೋತನ್ನೆ ಹೇಳಿ ತುಂಬಾ ಸಂಕಟ ಆತು.

"ಎನಗೆ ಬೇಕಾಗಿ ಮರುಗಿದವು ಆರೂ ಇಲ್ಲೆ ಭಾವ. ಎಲ್ಲೋರೂ ಎನ್ನ ಮೂಲೆಗೆ ಒತ್ತಿದವೇ ಎನ್ನ ಅಬ್ಬೆ, ಅಪ್ಪಂಗೂ ಆನು ಹೊರೆ ಆಗಿನಿಂದೆ"

"ಇದು ಅವರ ತಪ್ಪಲ್ಲ ಅತ್ತಿಗೆ – ನಮ್ಮ ಸಮಾಜಕ್ಕೆ ಹೆದರಿದವು ಅಷ್ಟೆ ಆ ಸುತ್ತಿಂದ ಹೆರಬಪ್ಪ ತ್ರಾಣ ಅವಕ್ಕಿತ್ತಿಲ್ಲೆ ಅಷ್ಟೆ – ನೀನೇ ಹೆರ ಬಂದದು ಒಳ್ಳೆದಾತು; ನೀನು ಹಠ ಹಿಡುದು ಕಲ್ತು ಮುಂದೆ ಬಂದರೆ, ಅದೊಂದು ದಾರಿ ಅಕ್ಕು."

"ಆನು ಖಂಡಿತಾ ಸಾಧಿಸುವೆ ಭಾವ. ನಿನ್ನ ಹಾಂಗಿದ್ದವರ ಸಹಾಯ ಬೆಂಬಲ ಎನಗೆ ಇದ್ದರೆ ಸಾಧಿಸಿ ತೋರುಸುವೆ"

"ನಿನಗೆಂತ ಸಹಾಯ ಬೇಕೋ ಅದರ ಆನು ಕೊಡುವೆ; ನೀನು ಒಂದಾರಿ ಕಲ್ತಿಕ್ಕಿ ಬಾ. ಎಲ್ಲೋರ ಹಾಂಗೆ ಬದುಕ್ಕಲೆ ನಿನಗೆ ಹಕ್ಕಿದ್ದು ಹೇಳುದರ ಸಾಬೀತು ಮಾಡು."

"ಎಷ್ಟು ಕಷ್ಟ ಆದರೂ ಆನು ಕಲ್ತಿಕ್ಕೇ ಬತ್ತೆ" ನಿನಗೆ ಅನುಮಾನವೇ ಬೇಡ.

"ಖಂಡಿತಾ ನೀನು ಗುರಿ ಮುಟ್ಟುವೆ ಹೇಳುವ ಧೈರ್ಯ ಎನಗಿದ್ದು ಅತ್ತಿಗೆ" ರೈಲು ಅಲ್ಲಲ್ಲಿ ನಿಲ್ಲುತ್ತಾ ಸಾಗುತ್ತಿತ್ತು. ಆಗಾಗ ಚಾ, ಕಾಫಿ ಮಾರುವವರ ಧ್ವನಿ ಕೇಳುತ್ತಿತ್ತು. ರಘುರಾಮ, ಅತ್ತಿಗೆಗೆ ತನಗೆ ಚಾ, ಕಾಫಿ ತೆಗೆದುಕೊಂಡ, ರೈಲಿನಲ್ಲಿ ಮಾರಿಕೊಂಡು ಬರುತ್ತಿದ್ದ ಬಾಳೆಹಣ್ಣು, ಪೇರಳೆಹಣ್ಣು, ಕಿತ್ತಲೆ ಹಣ್ಣುಗಳನ್ನು ಆಗಾಗ ಕೊಂಡುಕೊಳ್ಳುತ್ತಿದ್ದ.

"ಪ್ರಯಾಣ ಮಾಡುವಾಗ ನಾವು ಹೊಟ್ಟೆಗಟ್ಟಿ ಮಾಡೋಳ್ಳೇಕು ಇಲ್ಲದಿದ್ದರೆ ಆಯಾಸ ಅಕ್ಕು. ಮುಂದಕ್ಕೆ ಹೋದ ಹಾಂಗೆ ನವಗೆ ಅಶನ ಸಿಕ. ಇತ್ಲಾಗಿ ಸಿಕ್ಕುದು ಬರೇ ಪೂರಿ, ಚಪಾತಿ ಮಾಂತ್ರ ನವಗೆ ಅದೆಲ್ಲಾ ಅಭ್ಯಾಸ ಇಲ್ಲೆನ್ನೆ – ಅದಕ್ಕೆ ಆನು ಹೆಚ್ಚು ಹಣ್ಣುಗಳನ್ನೇ ತೆಕ್ಕೊಂಬುದು ಇನ್ನೊಂದು ರಜಾ ಮುಂದಕ್ಕೆ ಹೋದರೆ ಕಿತ್ತಳೆ ಹಣ್ಣು, ಬಾಳೆಹಣ್ಣು ಧಾರಾಳ ಸಿಕ್ಕುತ್ತು. ಹೆಚ್ಚು ರೇಟೂ ಇರುತ್ತಿಲ್ಲೆ."

"ಅದು ಒಳ್ಳೆದೇ, ಹೊಟ್ಟೆ ಕೆಡ್ಡೆ ಇಲ್ಲೆ" ಎಂದಳು ಕಾವೇರಿ. ಮತ್ತೊಂದು ಸ್ಟೇಶನಿನಲ್ಲಿ ರಘುರಾಮ ಕೆಳಗೆ ಇಳಿದು. ಒಂದು ಬ್ರೆಡ್ – 2,3 ಬಿಸ್ಕೆತ್ತು ಕಟ್ಟುಗಳನ್ನು ಹಿಡಿದುಕೊಂಡು ಬಂದ.

"ಇಂದು ಇರುಳಾಣ ಊಟ ನಾವು ಇದರಲ್ಲಿಯೇ ಮುಗುಶೇಕು ಕಾವೇರಿಗೂ ಬ್ರೆಡ್, ಬಿಸ್ಕಟ್ ಕೊಟ್ಟು, ಚಾ ಮಾರಿಕೊಂಡು ಬಂದ ಹುಡುಗನ ಕೈಯಿಂದ ಎರಡು ಚಾ ತೆಗೆದುಕೊಂಡು ಬಂದ ಇಬ್ಬರೂ ಬ್ರೆಡ್ಡನ್ನೂ ಚಾದಲ್ಲಿ ಮುಳುಗಿಸಿ ತಿಂದುಕೊಂಡರು. ತಲಾ ಎರಡೆರಡು ಬಾಳೆಹಣ್ಣು ತಿಂದರು.

"ಇಲ್ಲಿ ರೈಲು ಅರ್ಧಗಂಟೆ ನಿಲ್ಲುತ್ತು. ಕೆಳ ಹೋಗಿ ಸ್ಟೇಶನ್‌ಲ್ಲಿ ಕುಡಿವ ನೀರೂ ಸಿಕ್ಕುತ್ತು. ಕುಡುದಿಕ್ಕಿ ಬಪ್ಪೊ" ಹೇಳಿ ಕಾವೇರಿಯನ್ನು ರೈಲಿನಿಂದ ಕೆಳಗಿಳಿಸಿ, ಕರೆದುಕೊಂಡು ಹೋಗಿ ನೀರು ಕುಡಿಸಿ ಬಂದನು ರಘುರಾಮ.

"ಹೊಟ್ಟೆ ತಣ್ಣಂಗಾತದ, ಎನ್ನ ಒಟ್ಟಿಂಗೆ ಅಪ್ಪ ಬಂದಿದ್ದರೆ ಕಾಶಿವರಗೂ ಉಪವಾಸವೇ ಸಾಯಕಾತು. ರೈಲಲ್ಲಿ ಇಷ್ಟೆಲ್ಲಾ ವ್ಯವಸ್ಥೆ ಇದ್ದು ಹೇಳಿಯೇ ಎನಗೆ ಕಲ್ಪನೆ ಇಲ್ಲೆ. ಇದೆಲ್ಲಾ ನಿನಗೆ ಗೊಂತಾದ್ದು ಹೇಂಗೆ?" ಕಾವೇರಿಗೆ ಆಶ್ಚರ್ಯವಾಯಿತು.

"ಅದಕ್ಕೆ ಮನೆ ಬಿಟ್ಟು ಹೆರ ಹೋಯೇಕು ಹೇಳುದು. ಆನು ಕಲಿವಾಗ ಇಲ್ಲಿಯೇ ಮಂಗಳೂರಿಲ್ಲಿ ಹಾಸ್ಟೆಲಲ್ಲಿ ಇದ್ದಿದ್ದೆ; ಅಂಬಾಗಂಬಾಗ ಬೇರೆ ಬೇರೆ ಜಾಗಕ್ಕೆ ಟೂರು ಹೇಳಿ ಹೋಗ್ಯಂಡು ಇತ್ತಿದ್ದೆಯೋ, ಆ ಸಮಯಲ್ಲಿ ಒಂದಾರಿ ಡೆಲ್ಲಿಗೆ, ಕಾಶ್ಮೀರಕ್ಕೆ, ಕಾಶಿಗೆ ಎಲ್ಲಾ ಹೋಗಿ ಬಯಿಂದೆ. ಎಂಗೊ ಐದಾರು ಜೆನ ಒಟ್ಟಾಗಿ ಹೋಪ ಕಾರಣ ಏನೂ ತೊಂದರೆ ಆಯ್ಕೊಂಡು ಇತ್ತಿಲ್ಲೆ."

"ನೀನಿದ್ದಿದ್ದು ಬ್ರಾಹ್ಮಣರ ಹಾಸ್ಟೆಲೊ?"

"ಅಲ್ಲಿ ಎಲ್ಲಾ ಜಾತಿಯವೂ ಇದ್ದಿದ್ದವು. ಎಲ್ಲಾ ಭಾಷೆಯವೂ, ಊರಿನವೂ ಇದ್ದಿದ್ದವು. ಹಾಂಗಾಗಿ ಎಂಗೊಗೆ ಎಷ್ಟೋ ಜೆನರ ಪರಿಚಯ ಆತು. ಎಲ್ಲೋರು ಒಟ್ಟಿಂಗೆ ಒಂದೇ ಹಂತಿಲಿ ಉಂಬದು – ತಿಂಬದು. ಮನಗುದು ಇತ್ತು. ಹಾಂಗಾಗಿ, ಎಲ್ಲಿ ಹೋದರೂ ಒಟ್ಟ ಆದರೂ ಪರಿಚಯದವು ಸಿಕ್ಕಿಯೇ ಸಿಕ್ಕುತ್ತವು" ನವಗೆ ಬೇಕಾದ ಕೆಲಸ ಮಾಡ್ಯೊಂಬಲಾವುತ್ತು" ಕಸ್ತಲೆ ಆಗ್ಯೊಂಡು ಬಂತು; ನೀನು ಕೂದಲ್ಲಿಂದ ಮೇಲಾಣ ಮಂಚ ನಮ್ಮದು. ಅದರ ಕೆಳ ಇಳುಶಿಕೊಡುತ್ತೆ – ನೀನು ಅದರಲ್ಲಿ ಮನಿಕ್ಕೊ, ತಲೆಯ ಗೋಡೆ ಕಡೆಗೆ ಹಾಕಿ ನಿನ್ನ ವಸ್ತ್ರವ ಚೀಲವ ತಲೆ ಅಡಿಲಿ ಮಡಿಕ್ಕೊಂಡು ಮನಿಕ್ಕೊ. ಆನಿಲ್ಲಿ ಕೆಳಾಣ ಸೀಟಿಲ್ಲಿ ಮನಿಗೋಳೊ" ಎಂದು ಅತ್ತಿಗೆಗೆ ಮಲಗುವ ವ್ಯವಸ್ಥೆ ಮಾಡಿಕೊಟ್ಟು ತಾನು ಕೆಳಗಿನ ಸೀಟಿನಲ್ಲಿ ಮಲಗಿಕೊಂಡ. ಇಬ್ಬರಿಗೂ ಚೆನ್ನಾಗಿ ನಿದ್ದೆ ಬಂತು. ಅವರು ಕಣ್ಣು ತೆರೆಯುವಾಗ ಮುಂಬೈ ದಾದರ ತಲುಪಿದ್ದರು.

"ಅತ್ತಿಗೆ ಇಲ್ಲಿ ನಾವು ಕೆಳಂಗೆ ಇಳಿವೊ. ರೈಲು ಹೆರಡೇಕಾರೆ ಇನ್ನೂ ಆರು ಗಂಟೆ ಸಮಯ ಇದ್ದು; ಇಲ್ಲಿ ಮೋರೆ ತೊಳವಲೆ ಮೀವಲೆ ವ್ಯವಸ್ಥೆ ಇದ್ದು. ಮದಾಲು ಮೋರೆ ತೊಳಕ್ಕೊಂಡು ಕಾಫಿ ಕುಡಿವೊ. ಮೀವದು ಎಲ್ಲಾ ಮತ್ತೆ ಮಾಡಿದರಾತು" ಎಂದು ಹೇಳಿ ಹತ್ತಿರದ ಕೇಂಟಿನಿಗೆ ಹೋದರು.

ಅಲ್ಲಿ ಪೂರಿ ಸಾಗು, ವಡೆ ಮಾತ್ರ ಇತ್ತು. ಎರಡೆರಡು ಪೂರಿ ತೆಗೆದುಕೊಂಡರು, ಜೊತೆಯಲ್ಲಿ ಕಾಫಿಯೂ ಸಿಕ್ಕಿತ್ತು; ಹೊಟ್ಟೆ ತುಂಬಿತು. ಇಬ್ಬರೂ ಹೊರಬಂದರು.

"ಅತ್ತಿಗೆ, ನೀನು ಸ್ಟೇಶನಲ್ಲಿಪ್ಪ ಹೆಮ್ಮಕ್ಕಳ ಕೋಣೆಗೆ ಹೋಗು, ಆನು ರಜಾ ಹೆರ ಹೋಗಿ ಬತ್ತೆ." "ಹೇಳಿದವನಿಗೆ ಒಂದೆರಡು ತಾಸು ಹಿಡಿಯಿತು ಬರುವಾಗ ಹೋಟೋಲೊಂದರಿಂದ ನಾಲ್ಕು ಬಿಸಿ ದೋಸೆಗಳನ್ನು ತೆಗೆದುಕೊಂಡು ಬಂದ. ಹಾಗೇ ಇನ್ನೊಂದು ಕಟ್ಟು ಹಿಡುಕ್ಕೊಂಡು ಬಂದ. ಅಷ್ಟರೊಳಗೆ ಕಾವೇರಿ ಸ್ನಾನ ಮಾಡಿ, ಬಟ್ಟೆ ಬದಲಾಯಿಸಿದ್ದಳು. ತಾನುಟ್ಟ ಬಟ್ಟೆಯನ್ನು ಒಗೆದು ಒಣ ಹಾಕಿದ್ದಳು.

"ಅದೆಂತ ಎರಡೆರಡು ಕಟ್ಟು ಕೈಲಿ" ಕೇಳಿದಳು ಕಾವೇರಿ.

"ಈ ಕಟ್ಟಲ್ಲಿ ಇಪ್ಪದು ನವಗೆ ಮಧ್ಯಾಹ್ನಕ್ಕೆ ಹೊಟ್ಟೆಗೆ – ಇನ್ನೊಂದರಲ್ಲಿಪ್ಪದು ಎನಗೆ ಮೈ ಬಟ್ಟೆಗೆ" ಹೇಳಿ ಕಟ್ಟನ್ನು ಬಿಚ್ಚಿ ತೋರಿಸಿದ ರಘುರಾಮ. ಅದರಲ್ಲಿ ಒಂದು ಧೋತಿ, 2 ಶರ್ಟ್‌ಗಳು ಇದ್ದವು; ಹಾಗೇ ಮೈಗೆ ಹಾಕುವ ಸಾಬೂನು, ಬಟ್ಟೆ ಸಾಬೂನು, ಹಲ್ಲುಪುಡಿ, ತಲೆ ಬಾಚುವ ಹಣಿಗೆ, ಮೈ ಒರೆಸಿಕೊಳ್ಳುವ ಬಟ್ಟೆ ಇತ್ಯಾದಿಗಳನ್ನು ಕೊಂಡುಕೊಂಡಿದ್ದ.

"ಅತ್ತಿಗೆ ಆನು ಹೆರಟ ಮೈಲಿ ಹಾಂಗೇ ಬಂದವ ಅಲ್ಲದೋ ಮಾತಲೆ ಹೇಳಿ ಎಂತದೂ ತಯಿಂದಿಲ್ಲೆ. ಹೇಂಗೂ ಬೇಕಾವುತ್ತನ್ನೆ ಹೇಳಿ ಇದರೆಲ್ಲಾ ತಂದೆ"

"ನಿನ್ನ ಕೈಲಿ ಇನ್ನೂ ಒಂದು ಕಟ್ಟು ಕಾಣುತ್ತು"

"ಅದು ನಿನಗಿಪ್ಪದು. ಅದರಲ್ಲಿ ಕುಂಕುಮ, ಮೇಣದ ಕರಡಿಗೆ ಒಂದು ಕನ್ನಾಟಿ, ಹಣಿಗೆ ಇದ್ದು ಇಲ್ಲಿಂದ ಮತ್ತೆ ನೀನು ಮೋರೆಗೆ ಬೊಟ್ಟು ಹಾಕಿಗೊ, ಹೇಳ್ಳೆ ಆರೂ ಇಲ್ಲೆ "ಆತೊ" "ಆತು ಭಾವ ನೀನು ಹೇಳಿದ ಹಾಂಗೆ ಮಾಡುತ್ತೆ. ಎನಗೂ ಮೋರೆಗೆ ಬೊಟ್ಟು ಹಾಕೇಕು ಹೇಳಿ ಇದ್ದು" ತನ್ನ ಆಸೆಗಳನ್ನು ಬಯಲು ಮಾಡಿದಳು ಕಾವೇರಿ. ಹಣೆಗೊಂದು ಕುಂಕುಮದ ಬೊಟ್ಟನ್ನು ಹಾಕಿಕೊಂಡಳು. ತಲೆ ಬಾಚಿ ಜಡೆ ಹೆಣೆದುಕೊಂಡಳು. ಅವಳ ಮುಖದಲ್ಲಿ ಹೊಸ ಕಳೆ ಮೂಡಿತು.

"ಅತ್ತಿಗೆ ನಿನ್ನ ಮೋರೆ ಈಗ ಲಕ್ಷಣ ಕಾಣುತ್ತು". ರಘುರಾಮನಿಗೆ ಸಂತೋಷವಾಯಿತು.

"ಭಾವ ಎನಗೆ ಮಂಗಳೂರು ಆಸ್ಪತ್ರೇಲಿ ಕೆಲಸ ಸಿಕ್ಕದ್ದು ಒಳ್ಳೆದೇ ಆತು."

"ಎಂತಕೇ?"

"ಅಲ್ಲಿಗೆ ಮದ್ದಿಂಗೆ ಹೇಳಿ ನಮ್ಮೂರಿಂದ ಬಪ್ಪವು ಹೋಪವು ತುಂಬಾ ಜೆನ ಇವು ಎನ್ನ ಭೇಟಿ ಆಗದ್ದೆ ಇರವು. ಊರಿಂಗೆ ಹೋಗಿ ಬಾಯಿಗೆ ಬಂದದರ ಹೇಳದ್ದಯೊ ಇರವು. ಅದಕ್ಕೆ ದೇವರು ಮಾಡುದು ಎಲ್ಲವೂ ಒಳ್ಳೆದಕ್ಕೆ ಹೇಳಿ ಜಾನ್ಸಿದ್ದೆ ಆನು."

ಒಂದು ಲೆಕ್ಕಲ್ಲಿ ನೀನು ಹೇಳುದು ಸರಿ ಅತ್ತಿಗೆ; ದೂರ ಇದ್ದಷ್ಟು ಒಳ್ಳೆದು. ನಿನಗೆ ಎಲ್ಲಾ ಮರದು ಹೊಸ ಜೀವನಕ್ಕೆ ಅನುಕೂಲ ಅಕ್ಕು. ನೋಡುವೊ ದೇವರಿದ್ದ. ಎಲ್ಲಾ ಸರಿ ಅಕ್ಕು".

ಇಬ್ಬರೂ ಸಮಯಕ್ಕೆ ಸರಿಯಾಗಿ ಕಾಶಿಗೆ ಹೋಗುವ ರೈಲು ಗಾಡಿಯನ್ನೇರಿ ತಮ್ಮ ತಮ್ಮ ಸೀಟುಗಳಲ್ಲಿ ಕುಳಿತರು; ಅಲ್ಲಿಂದ ಮುಂದೆ ಎರಡು ರಾತ್ರಿ ರೈಲಿನಲ್ಲಿ ಕಳೆದು ಮರುದಿವಸ ಮುಂಜಾನೆ 8 ಗಂಟೆಗೆ ಕಾಶಿಗೆ ತಲುಪಿದರು, ಅಲ್ಲಿಯೂ ಸ್ಟೇಶನಿನಲ್ಲಿ ಪ್ರಯಾಣಿಕರಿಗೆ ಬೇಕಾದ ಅನುಕೂಲವಿತ್ತು. ಕಾವೇರಿ ಹೆಂಗುಸರ ವಿಶ್ರಾಂತಿ ಕೋಣೆಗೂ, ರಘುರಾಮ ಪುರುಷರ ವಿಶ್ರಾಂತಿ ಕೋಣೆಗೂ ತೆರಳಿದರು. ಇಬ್ಬರೂ ಸ್ನಾನ, ತಿಂಡಿ ಮುಗಿಸಿದರು.

"ಅತ್ತಿಗೆ ಆನು ಇಲ್ಲಿಂದ ಸರಕಾರಿ ಆಸ್ಪತ್ರೆ ಎಷ್ಟು ದೂರ ಇದ್ದು? ಹೋಪ ವ್ಯವಸ್ಥೆ ಎಲ್ಲಾ ವಿಚಾರ್ಸೆಂಡು ಬತ್ತೆ" ನೀನು ಇಲ್ಲಿಯೇ ಇರು ಹೇಳಿ ಹೊರನಡೆದ.

ಕಾವೇರಿ, ವಿಶ್ರಾಂತಿ ರೂಮಿನ ಒಳಗೆ ನುಗ್ಗುವ ಮಹಿಳೆಯರನ್ನೇ ನೋಡುತ್ತಾ ಕುಳಿತಳು. ಹೆಚ್ಚಿನವರು ಮುದುಕಿಯರು, ಯುವತಿಯರು ಎಲ್ಲರೂ ಪೈಜಾಮ ಕುರ್ತಾ ಧರಿಸಿದವರು. ಯಾರೊಬ್ಬರ ಹಣೆಯಲ್ಲೂ ಬೊಟ್ಟು ಇರಲಿಲ್ಲ. ಅವರ ಭಾಷೆಯೇ ಬೇರೆ. ತನಗೇನೊಂದೂ ಅರ್ಥವಾಗುತ್ತಿಲ್ಲ.

"ಆಪ್ ಕೋ ಕಹಾಂ ಜಾನಾ ಹೈ? ಅಂತ ಒಬ್ಬಳು ಕೇಳಿಕಿಗಳು. ತನಗೇನೆಂದೂ ಅರ್ಥವಾಗಿಲ್ಲ. ಅವರಲ್ಲಿ ಯಾರೊಬ್ಬರೂ ಕನ್ನಡ ಮಾತನಾಡುವವರಿರಲಿಲ್ಲ. ಹಾಗಾದರೆ ತಾನಿಲ್ಲಿ ಬದುಕುವುದಾದರೂ ಹೇಗೆ ಈ ಸಂಗತಿ ತನಗೆ ತಿಳಿದಿಲ್ಲವಲ್ಲಾ" ಎಂಬ ಯೋಚನೆ ಬಂತು. ಹೇಗಿದ್ದರೂ ಆಸ್ಪತ್ರೆಗೆ ತಲುಪಿದರೆ ಅಲ್ಲಿ ಯಾರಾದರೂ ಸಿಗಬಹುದು ಎಂಬ ಆಶೆಯೂ ಚಿಗುರಿತು.

ಹೊರಗೆ ಹೋದ ರಘುರಾಮ ಗಂಟೆಯೊಳಗೆ ಮರಳಿ ಬಂದ "ಅತ್ತಿಗೆ ಆಸ್ಪತ್ರೆ ಇಲ್ಲಿಂದು ಸುಮಾರು ಮೂರು ಮೈಲು ದೂರ ಇದ್ದು ಅಲ್ಲಿಗೆ ಹೋಪಲೆ ಇಲ್ಲಿಂದ ಬಸ್ಸುಗಳೂ ಇದ್ದು. ನಾವು ಹೆರಡುವೊ ಬಸ್ಸಿಂಗೆ ಹೋಪೊ"

"ಆತು" ಎಂದು ಸ್ಟೇಶನಿಗೆ ಸಮೀಪವೇ ಇದ್ದ ಸಿಟಿ ಬಸ್ಸಿನಲ್ಲಿ ಹತ್ತಿ "ಕೋನ್ ದವಾಖಾನೆ ದವಾಖಾನೆ ಎಂದಾಗ ಆಸ್ಪತ್ರೆಯ ಮುಂದುಗಡೆ ಇಳಿದರು. ಇಬ್ಬರೂ ಒಳ ಹೊಕ್ಕರು ರಘುರಾಮ ತನ್ನ ಕೈಯಲ್ಲಿದ್ದ ಪತ್ರವನ್ನು ಹಿಡಿದುಕೊಂಡು, ಆಸ್ಪತ್ರೆಯ ಸಿಬ್ಬಂದಿಯೊಬ್ಬರೊಡನೆ ಏನೇನೋ ಮಾತನಾಡಿದ. ಅವನು ತೋರಿಸಿದ ದಾರಿಯಲ್ಲಿಯೇ ಮುಂದಕ್ಕೆ ಹೋಗಿ ಕೋಣೆಯೊಂದರ ಹೊರಗಡೆಯಲ್ಲಿ ನಿಂತು ಬಾಗಿಲು ಸಪ್ಪಳ ಮಾಡಿದ. ಒಳಗಿಂದ ನರ್ಸೊಬ್ಬಳು ಹೊರಗೆ ಬಂದಳು. ಅವಳ ಕೈಯ್ಯಲ್ಲಿ ಪತ್ರವನ್ನು ಕೊಟ್ಟ. ಹತ್ತು ನಿಮಿಷದಲ್ಲಿ ಒಳಗಿದ್ದ ಡಾಕ್ಟ್ರು ಹೊರಗೆ ಬಂದರು.

"ನಿಂಗೊ ಇಂದು ಬಪ್ಪಿ ಹೇಳಿ ಎನಗೆ ಮಂಗಳೂರಿಂದ ಡಿ.ಎಂ.ಓ ಟೆಲಿಗ್ರಾಮ್ ಕಳಿಸಿದ್ದ. ಹಾಂಗಾಗಿ ನಿಂಗಳ ದಾರಿ ನೋಡ್ಯೋಡು ಇದ್ದೆ, ಒಳ ಬನ್ನಿ" ಹೇಳಿ ಆತ್ಮೀಯವಾಗಿ ಬರಮಾಡಿಕೊಂಡರು ಡಾಕ್ಟರ್ ಕೇಶವ.

"ರೈಲಲ್ಲಿ ಎಂತಾರೂ ತೊಂದರೆ ಆತೊ?"

"ತೊಂದರೆ ಎಂತದೂ ಆಯಿದಿಲ್ಲೆ. ಆನು ಮದಲೆ ಒಂದಾರಿ ಕಾಶಿಗೆ ಬಂದು ಹೋಗಿತ್ತಿದ್ದೆ" ರಘುರಾಮ ತಿಳಿಸಿದ.

"ಇಲ್ಲಿ ನಮ್ಮೂರಿಂದ ಬಪ್ಪವಕ್ಕೆ ಭಾಷೆದೇ ತೊಡಕು. ಇಲ್ಲಿ ಹಿಂದಿ, ಇಂಗ್ಲಿಷ್ ಬಿಟ್ಟರೆ ಬೇರೆ ಭಾಷೆ ಇಲ್ಲನ್ನೆ. ನಮ್ಮೂರಿನ ಕನ್ನಡ ತುಳು, ಮಲ್ಯಾಳ ಯಾವ ಭಾಷೆಯೂ ಇಲ್ಲಿ ಉಪಯೋಗ ಆವುತ್ತಿಲ್ಲೆ. ಎನಗೆ ರಜಾ ರಜಾ ಹಿಂದಿ ಬತ್ತು. ಹಾಂಗೇ ಇಂಗ್ಲೀಷು ಬತ್ತನೆ ಹಾಂಗಾಗಿ ಸುಧಾರ್ಸಲೆ ಆವುತ್ತು"

"ನಿಂಗೊ ಕಾಫಿ ಕುಡಿತ್ತೀರೋ ಚಾಯವೋ"

"ಎಂತದೂ ಬೇಡ. ಈಗ ಸ್ಟೇಷನ್ನಿಲ್ಲೇ ಕಾಫಿ ಕುಡುಡಿಕ್ಕಿ ಬಯಿಂದೆಯೋ"

"ಹಾಂಗಾರೆ ಬಂದ ಸಮಾಚಾರ ಹೇಳಿ- ಮಂಗಳೂರಿಂದ ಡಿ.ಎಂ.ಓ ನಿಂಗಳ ವಿಷಯವ ರಜಾ ವಿವರಿಸಿ ಬರದ್ದ. ಕಾವೇರಿ ಹೇಳಿರೆ ಇದೆಯೋ?" ಕಾವೇರಿ ಕಡೆಗೆ ನೋಡಿ ಹೇಳಿದರು ಡಾಕ್ಟ್ರು.

"ಅಪ್ಪು. ಅದಕ್ಕಾಗಿಯೇ ಆನು ಇಲ್ಲಿಗೆ ಬಂದದು. ಮುಂದೆಯೊ. ಎಂಗೊಗೆ ನಿರಾಶೆ ಆಗದ್ದ ಹಾಂಗೆ ನೋಡ್ಯೋಳಿ"

"ನಿಂಗಳ ಹೆಸರೇ ಕೇಳಿದ್ದಿಲ್ಲೆ ಆನು"

"ರಘುರಾಮ ಹೇಳಿ, ಬಿ.ಎ. ಬಿ.ಎಡ್. ಆಗಿ ಹೈಸ್ಕೂಲು ಮಾಷ್ಟ್ರು ಆಯಿದೆ. ಮಾಷ್ಟ್ರಾಗಿಯೇ 8ವರ್ಷ ಆತು. ಕಾವೇರಿಯ ತಂಗೆಯ ಕೊಟ್ಟದು ಎನಗೆ. ಕಾವೇರಿಗೆ ಅಣ್ಣ ತಮ್ಮಂದ್ರು ಆರೂ ಇಲ್ಲೆ. ಅವು ನಾಲ್ಕು ಜೆನ ಕೂಸುಗಳೇ. ಅಬ್ಬೆ ಅಪ್ಪ ಕಡು ಬಡವರು, ಅವಿದ್ಯಾವಂತರು, ಮನೆಯಿಂದ ಹೆರ ಹೋಗಿ ಗೊಂತಿಲ್ಲೆ. ಇದರ ತಂಗೆಕ್ಕಳ ಎಲ್ಲಾ ಮದುವೆ ಆಗಿ ಸುಖಲ್ಲಿ ಇದ್ದವು. ಇದು ಮಾಂತ್ರ ಬಾಲವಿಧವೆ ಆತು. ಅದಕ್ಕೊಂದು ದಾರಿ ತೋರುಸೇಕು ಹೇಳಿ ಇಲ್ಲಿಗೆ ಕರಕ್ಕೊಂಡು ಬಂದೆ. ನಿರಾಶೆ ಆಗದ್ದ ಹಾಂಗೆ ನೋಡ್ಕೊಳಿ" ರಘುರಾಮ ಬೇಕಾದುದಕ್ಕಿಂತ ಹೆಚ್ಚೇ ಹೇಳಿ ಮುಗಿಸಿದ.

"ಆತು, ಗೊಂತಾತು ಎನಗೆ. ಎಂತಾರೂ ವ್ಯವಸ್ಥೆ ಮಾಡುವೊ. ಈಗ ಸದ್ಯಕ್ಕೆ ಕಾವೇರಿ 'ದಾಯಿ' ಆಗಿ ಆಸ್ಪತ್ರೆಲಿ ಕೆಲಸಕ್ಕೆ ಸೇರಲಿ. ನಾಲ್ಕನೇ ಕ್ಲಾಸು ಕಲ್ತವಕ್ಕೆ ಅದೇ ಕೆಲಸ ಸಿಕ್ಕುದು ಉದಿಯಪ್ಪಾಗ 6 ಗಂಟೆಂದ ಮಧ್ಯಾಹ್ನ 1 ಗಂಟೆ ವರೆಗೆ ಆಸ್ಪತ್ರೆಲಿ ಕೆಲಸ ಮಾಡೇಕು. ರೋಗಿಗಳ ಬೆಡ್‌ಪಾನ್ ತೆಗದು ತೊಳವದು, ವಾರ್ಡ್ ಉಡುಗಿ, ಉದ್ದಿ ಮಾಡುದು ಎಲ್ಲಾ ಕನಿಷ್ಠ ಕೆಲಸವೇ, ಮಾಡ್ಲೆಡಿಗೊ" ಕಾವೇರಿ ಕಡೆಗೆ ತಿರುಗಿದರು ಡಾಕ್ಟ್ರು.

"ಯಾವ ಕೆಲಸ ಆದರೂ ಮಾಡುವೆ. ಎನಗೆ ಮುಂದೆ ಕಲಿವ ಅನುಕೂಲವ ನಿಂಗಳೇ ಮಾಡಿಕೊಡೇಕು."

'ಮಧ್ಯಾಹ್ನ ಮೇಗೆ ನಿನಗೆ ಬಿಡುವು ಇರ್ತು. ಇಲ್ಲಿ ಮುಂದಿನ ವಿದ್ಯಾಭ್ಯಾಸ ಎಲ್ಲಾ ಹಿಂದಿ ಭಾಷೆಲಿ ಆಯೇಕು. ಸುರುವಿಲ್ಲಿ ರಜಾ ಕಷ್ಟ ಆಕ್ಕು. ಆದರೆ ಪ್ರಯತ್ನಪಟ್ಟರೆ 6 ತಿಂಗಳಲ್ಲಿ 8ನೇ ಕ್ಲಾಸಿನ ಪರೀಕ್ಷೆ ಕಟ್ಟಕ್ಕು. ನಿನಗೆ ಕಲುಶಲೆ ಮಾಸ್ಟ್ರ, ಪುಸ್ತಕದ ವ್ಯವಸ್ಥೆ ಆನು ಮಾಡಿಕೊಡುವೆ."

"ನಿಂಗೊ ಧೈರ್ಯ ಕೊಟ್ಟರೆ ಆನು ಹೇಂಗಾದರೂ ಕಲಿವೆ."

ಕಾವೇರಿ ಯಾವುದಕ್ಕೂ ಅಂಜಿದ ಹಾಗೆ ಕಾಣಲಿಲ್ಲ. ಸ್ಥಿರತೆ ಇತ್ತು ಅವಳ ಮಾತಿನಲ್ಲಿ. ಡಾಕ್ಟ್ರಿಗೂ ಖುಷಿಯಾಯಿತು. "ಹಾಗಾದರೆ ಎನ್ನ ಒಟ್ಟಿಂಗೆ ಆಸ್ಪತ್ರೆ ಒಳಂಗೆ ಬನ್ನಿ" ಎಂದು ಅವರ ಜೊತೆ ಅವರಿಬ್ಬರನ್ನೂ ಕರೆದುಕೊಂಡು ಹೋದರು. ಅಲ್ಲಿ ಗಂಡಸರ ವಾರ್ಡ್, ಹೆಂಗಸರ ವಾರ್ಡ್, ಮಕ್ಕಳ ವಾರ್ಡ್ ಮೂರೂ ವಿಭಾಗಗಳಿಗೂ ಕರೆದುಕೊಂಡು ಹೋಗಿ ತೋರಿಸಿದರು.

ಮಂಗಳೂರು ವೆನ್‌ಲಾಕ್ ಆಸ್ಪತ್ರೆಗೂ ಈ ಆಸ್ಪತ್ರೆಗೂ ಅಜಗಜಾಂತರ. ಎರಡೂ ಸರಕಾರಿ ಆಸ್ಪತ್ರೆಗಳೇ. ಆದರೆ ಮಂಗಳೂರು ಆಸ್ಪತ್ರೆ ಶಿಸ್ತುಬದ್ಧವಾಗಿತ್ತು. ನೈರ್ಮಲ್ಯಕ್ಕೆ ಹೆಚ್ಚು ಪ್ರಾಧಾನ್ಯವಿತ್ತು. ಅಲ್ಲಿಯ ಜನವೂ ಶುಚಿತ್ವಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದರು. ನರ್ಸ್‌ಗಳು, ಆಯಾಗಳು ತಮ್ಮ ತಮ್ಮ ಕೆಲಸಗಳನ್ನು ಕ್ರಮಬದ್ಧವಾಗಿ ಮಾಡುತ್ತಿದ್ದರು. ಕಾಶಿ ಆಸ್ಪತ್ರೆ ಅನ್ನುವುದಕ್ಕಿಂತ ಜನರ ದೊಡ್ಡಿ ಅನ್ನಬಹುದೇನೋ. ಶುಚಿತ್ವ ಎಂದರೆ ಹೆಸರನ್ನೇ ಕೇಳರಿಯದ ರೋಗಿಗಳು, ಡಾಕ್ಟ್ರ ಬಂದರಷ್ಟೇ ಜೀವ ತಳೆದು ಓಡಾಡುವ ಸಿಬ್ಬಂದಿ – ಕೊಳಕು ಬಟ್ಟೆ, ಏನೋ ದುರ್ನಾತ – ಇವನ್ನೆಲ್ಲಾ ನೋಡಿ ಹೊಟ್ಟೆ ತೊಳೆಸಿ ಬಂತು ಕಾವೇರಿಗೆ. ಆಸ್ಪತ್ರೆಯ ಒಳಹೊರಗೂ ಸುತ್ತಾಡಿದ ಮೇಲೆ ಡಾಕ್ಟ್ರ ಅವರನ್ನು ಪುನಃ ಕರೆದು ತನ್ನ ಕೊಠಡಿಗೆ ಕರೆದುಕೊಂಡು ಬಂದರು.

"ಕಾವೇರಿ ಈಗ ಹೇಂಗೆ ಕಾಣುತ್ತು. ಈ ಆಸ್ಪತ್ರೇಲಿ ನಿನಗೆ ಕೆಲಸ ಮಾಡ್ಲೆ ಎಡಿಗೋ? ನಾಲ್ಕನೇ ತರಗತಿ ಓದಿದವಕ್ಕೆ ಇಲ್ಲಿ ಸಿಕ್ಕುದು ದಾಯಿ ಕೆಲಸ ಹೇಳಿರೆ

ರೋಗಿಗಳ ಹಾಸಿಗೆಯ ವಸ್ತ್ರಂಗಳ ಬದಲಿಸಿ ಬೇರೆ ಹಾಸೇಕು, ಅವು ಮಾಡಿದ ಮಲ ವಿಸರ್ಜನೆಯ ತೆಕ್ಕೊಂಡು ಹೋಗಿ ಪಾಯಿಖಾನೆಗೆ ಹಾಕಿ ಬೆಡ್‌ಪಾನ್‌ಗಳ ತೊಳೆದು, ಮಡುಗುದು, ವಾರ್ಡ್ ಉಡುಗಿ ಉದ್ದೇದು – ಎಲ್ಲಾ ಅವರ ಕೆಲಸ. ಅವರ ಮೇಲೆ ನರ್ಸ್‌ಗೊ ಇರ್ತವು. ಅವು ಹೇಳಿದ ಎಲ್ಲಾ ಕೆಲಸವನ್ನೂ ಮಾಡೇಕು. ಇಲ್ಲಿಯೆ ಜೆನಂಗೊ ರೋಗಿಗೊ ಹೇಂಗೆ ಹೇಳಿ ನಿನಗೆ ಗೊಂತಾಯಿಕ್ಕು. ಈಗ ಇಲ್ಲಿ ಹಿಂದಿ ಬಿಟ್ಟರೆ ಜೆನಂಗೋಕೆ ಬೇರೆ ಭಾಷೆ ಬತ್ತಿಲ್ಲೆ. ಈಗ ಸರಿಯಾಗಿ ಆಲೋಚನೆ ಮಾಡಿ ಕಸ್ತಲೆ ಆಯೇಕಾರೆ ನಿನ್ನ ನಿರ್ಧಾರ ಹೇಳು."

"ಎನ್ನ ನಿರ್ಧಾರ ಹೇಳ್ಳೆ ಕಸ್ತಲೆವರೆಗೆ ಕಾಯೇಕು ಹೇಳಿ ಇಲ್ಲೆ. ಆನು ಎಷ್ಟು ಕಷ್ಟ ಆದರೂ ಇಲ್ಲಿಂದ ಕಲ್ತಿಕ್ಕಿಯೇ ಹೋಪದು. ಎನಗೆ ಭಾಷೆದು ಮಾಂತ್ರ ರಜಾ ತಾಪತ್ರಯ. ಅದರ ಒಂದೆರಡು ತಿಂಗಳಲ್ಲಿ ಆನು ಹೇಂಗಾದರೂ ಮಾಡಿ ಕಲಿವೆ. ಕಾವೇರಿ ತನ್ನ ನಿರ್ಧಾರವನ್ನು ತಿಳಿಸಿದಳು.

"ನಿನಗೆ ಮಾಷ್ಟ್ರು ಕೆಲಸ ಇಷ್ಟ ಇಲ್ಲೆಯೋ? ಅದೂ ಕಲಿವಲಕ್ಕು ಬೇಕಾದರೆ"

ಎನಗೆ ಬೇರೆ ಯಾವದೂ ಕಲಿವ ಉತ್ಸಾಹ ಇಲ್ಲೆ. ಆನು ಕಲ್ತು ನರ್ಸ್ ಆವುತ್ತೆ. ಎನ್ನಂದಾದಷ್ಟು ಬಡ ರೋಗಿಗಳ ಸೇವೆ ಮಾಡುತ್ತೆ"

ಕಾವೇರಿಯ ನಿರ್ಧಾರ ನೋಡಿ ಡಾಕ್ಟ್ರು ದಂಗಾದರು.

"ಹಾಂಗಾರೆ ರಘುರಾಮ. ನೀನು ಬಂದ ಕೆಲಸ ಆತು. ನಾಳೆಂದ ಕಾವೇರಿ ವಾರ್ಡ್ ಕೆಲಸಕ್ಕೆ ಸೇರಲಕ್ಕು. ಅದಕ್ಕೆ ತಿಂಗಳಿಗೆ ನೂರೈವತ್ತು ರೂಪಾಯಿ ಸಂಬಳವೂ ಒಕ್ಕು. ಅದರ ಕರ್ಚಿಗೆ ಸಾಕು. ಮತ್ತೆ ಇಪ್ಪಲೆ ಒಂದು ವ್ಯವಸ್ಥೆ ಆಯೇಕನ್ನೆ"

"ಅದಾಯೇಕು, ಹೇಂಗೆ ಮಾಡುದು"

"ನಿಂಗೊ ಎನ್ನ ಒಟ್ಟಿಂಗೆ ಬನ್ನಿ. ಇದೇ ಆಸ್ಪತ್ರೇಲಿ ಒಂದು ಕೋಣೆ ಇದ್ದು. ಅದಕ್ಕೆ ಹೆರಾಂದ ಬಾಗಿಲು ಇದ್ದು, ಒಳಾಣ ಕೋಣೆಲಿ ಆಸ್ಪತ್ರೆಯ ಬೇಡದ್ದ ಸಾಮಾನು ತುಂಬುದು. ಹೋಪ ದಾರಿಲಿ ಎಡಿಗಾರೆ ಇಪ್ಪಲಕ್ಕು" ಎಂದು ಅವರನ್ನು ಅಲ್ಲಿಗೆ ಕರೆದುಕೊಂಡು ಹೋದರು, ಕೋಣೆಗೆ ಹೋಗುವ ದಾರಿ ಸ್ವಲ್ಪ ದೊಡ್ಡದೇ ಇದೆ. ಹತ್ತು ಅಡಿ ಉದ್ದ, ಎಂಟು ಅಡಿ ಅಗಲವಿದೆ. ಭದ್ರವಾದ ಬಾಗಿಲೂ ಇದೆ.

"ನಿನಗೆ ಇಲ್ಲಿ ಇಪ್ಪಲೆ ಎಡಿಗೋ?"

"ಎಡಿಗು"

"ನಿನಗೆ ಮೀವಲೆ, ಒಸ್ತ್ರ ಒಗವಲೆ ಬಾಕಿದ್ದಕ್ಕೆಲ್ಲಾ ಆಸ್ಪತ್ರೆಲಿ ಅನುಕೂಲ ಇದ್ದು, ಇಲ್ಲಿ ಚಳಿ ಹೆಚ್ಚು. ಆಸ್ಪತ್ರೇಂದ ಎರಡು ರಗ್ಗುಗಳ ಕೊಡುಸುತ್ತೆ" ಆಮೇಲ ರಘುರಾಮನಿಗೆ ಹೇಳಿದರು.

"ನೀನು ಕಾವೇರಿಗೆ ಒಂದು ಸ್ಟೌವನ್ನೂ ಒಂದೆರಡು ಪಾತ್ರೆಯನ್ನೂ ತಂದು ಕೊಟ್ಟಿಕ್ಕು. ಇಲ್ಲಿಯೇ ಅಡಿಗೆ ಮಾಡ್ಳಕ್ಕು. ಒಂದು ಮೂರು ತಿಂಗಳು ಸುಧಾರ್ಸಲಿ ಮತ್ತೆ ಬೇರೆಂತಾದರೂ ವ್ಯವಸ್ಥೆ ಮಾಡುವೊ. ಹೇಂಗೂ ಇಲ್ಲಿ ಆನಿದ್ದೆನ್ನೆ. ಎಂತಾರೂ ಬೇಕಾದರೆ ಕೇಳಿ ದಾಕ್ಷಿಣ್ಯ ಮಾಡುದು ಬೇಡ."

"ಹಾಂಗಾರೆ ಆನು ಇಂದೇ ವಾಪಾಸು ಊರಿಗೆ ಹೆರಡುತ್ತೆ. ಅತ್ತಿಗ್ಗೆ ಬೇಕಾದರೆಲ್ಲಾ ತೆಗೆದುಕೊಟ್ಟಿಕ್ಕಿ ಇರುಳಾಣ ಎಂಟು ಗಂಟೆ ರೈಲಿಂಗೆ ಹೋವುತ್ತೆ ಆಗದೋ"

"ಅಕ್ಕು ತೊಂದರೆ ಇಲ್ಲೆ" ಕಾವೇರಿಗೆ ಬೇಕಾದರೆ ಇನ್ನೋಂದಾರಿ ಕೇಳಿಗೊ" ಆನಂಬಾಗ ಎನ್ನ ಕೆಲಸಕ್ಕೆ ಹೋಯೇಕೋ" ಎಂದು ಡಾಕ್ಟ್ರ ಕೇಶವ ಮುನ್ನಡೆದರು.

"ಅತ್ತಿಗೆ ನಿನಗೆ ಈ ನರಕಲ್ಲಿ ಇಪ್ಪಲೆ ಎಡಿಗೋ. ಇಲ್ಲದಿದ್ದರೆ ಎನ್ನೊಟ್ಟಿಂಗೆ ವಾಪಾಸು ಬಾ. ಆನು ಬೇರೆ ಎಂತಾದರೂ ವ್ಯವಸ್ಥೆ ಮಾಡುವೆ" ಖಿನ್ನವಾಗಿ ನುಡಿದ ರಘುರಾಮ.

"ಭಾವ, ಅಲ್ಲಿ ನರಳುದರಿಂದ ಎನಗೆ ಇಲ್ಲಿ ನರಳುದೇ ಉತ್ತಮ ಹೇಳಿ ಕಾಣುತ್ತು. ಅಲ್ಲಿ ಎನ್ನ ಸಾವನ್ನಾರವೂ ಆರದು ತಿಂಗು ಬೇಡಂಗೆಟ್ಟದರ ಹೇಳಿ ಎನ್ನ ಕಣ್ಣೀರಲ್ಲಿ ಮುಳುಗುಸು. ಎಂತಾದರೂ ಅಲ್ಲಿಯ ಜೀವನಕ್ಕೆ ಆನು ಒಗ್ಗೆ. ಹೇಂಗಾರು ಮಾಡಿ ಕಲ್ತಿಕ್ಕಿಯೇ ಬತ್ತೆ"

"ನಿನಗೆ ಭಾಷೆ ಗೊಂತಿಲ್ಲೆ, ಕೆಲಸ ಗೊಂತಿಲ್ಲೆ"

"ಭಾವ ಭಾಷೆಯ ಕೆಲಸವ ಮನುಷ್ಯರು ಹುಟ್ಟಿದ ಮತ್ತೆಯೇ ಕಲಿವದಲ್ಲದೋ, ಸುರುವಿಲ್ಲಿ ರಜಾ ಕಷ್ಟ ಅಕ್ಕು, ಅಷ್ಟೆ"

"ಅತ್ತಿಗೆ, ನಿನ್ನಷ್ಟು ಧೈರ್ಯ ಎನಗಿಲ್ಲೆ. ನಿನಗೆ ಹೇಳುವ ಸಾಹಸವನ್ನೂ ಆನು ಮಾಡುತ್ತಿಲ್ಲೆ. ಎನ್ನ ನಿನ್ನ ತಂಗೆಯ ಗೆಂಡ ಹೇಳಿ ನೋಡೇಡ. ಒಡ ಹುಟ್ಟಿದ ಅಣ್ಣ ಹೇಳಿ ತಿಳುಕ್ಕೊ. ನಿನಗೆ ಇಲ್ಲಿ ಎಂತ ಕಷ್ಟ ಬಂದರೂ ಎನಗೊಂದು ಕಾಗದ ಹಾಕು. ಆನು ಬಂದು ವ್ಯವಸ್ಥೆ ಮಾಡುವೆ, ದಾಕ್ಷಿಣ್ಯ ಮಾಡೇಡ"

"ಆತು ಭಾವ, ನೀನು ಹೆಚ್ಚು ಚಿಂತೆ ಮಾಡದ್ದೆ ಹೋಗು, ಮನೇಲಿ ಎಲ್ಲೋರಿಂಗೂ ಇಲ್ಲಿ ಎಲ್ಲಾ ವ್ಯವಸ್ಥೆ ಇದ್ದು ಹೇಳಿ ಹೇಳಿಕ್ಕು"

"ನಿನಗೆ ಈಗ ಸದ್ಯ ಎಂತೆಲ್ಲಾ ಸಾಮಾನು ಬೇಕು ಹೇಳು. ಆನು ತಂದು ಕೊಟ್ಟಿಕ್ಕಿ ಹೋವುತ್ತೆ."

"ಒಂದು ಮೈಗೆ ಹಾಕುವ ಸಾಬೂನು, ಒಂದು ವಸ್ತ್ರಕ್ಕೆ ಹಾಕುದು, ರಜಾ ನೀರುಳ್ಳಿ, ಸಾಸವೆ, ಮೆಣಸಿನ ಹೊಡಿ, ಉಪ್ಪು ರಜಾ ಎಣ್ಣೆ ಅಕ್ಕಿ–2 ಸೇರು ಇಷ್ಟು ತಂದು ಕೊಟ್ಟಿಕ್ಕಿ ಹೋಗು, 8 ದಿನ ಆದರೆ ಎನಗೂ ರಜಾ ಗುರ್ತ ಅಕ್ಕು ಆನು ತರ್ಸಿಕೊಂಬೆ"

"ಆತು ಅತ್ತಿಗೆ, ಹಾಂಗೆ ಮಧ್ಯಾಹ್ನಕ್ಕೆ ತಿಂಬಲೆ ಎಂತಾದರೂ ತೆಕ್ಕೊಂಡು ಬತ್ತೆ" ಎಂದು ರಘುರಾಮ ಹೊರಗೆ ನಡೆದ.

ಕಾವೇರಿ ದಾರಿಯಲ್ಲಿದ್ದ ಕಸ ಗುಡಿಸಿ ಮೂಲೆಗೆ ಸೇರಿಸಿದಳು. ಎಷ್ಟೋ ದಿನಗಳಿಂದ ಬಿದ್ದ ಕಸಕಡ್ಡಿಗಳು, ಎರಡೆರಡು ಬಾರಿ ಗುಡಿಸಿದರೂ ಹೊರಗೆ ಹೋಗುವುದಿಲ್ಲ ಎನ್ನುವಷ್ಟು ರಾಶಿಯಾಯಿತು. ಅಲ್ಲೇ ಇದ್ದ ಹಳೇ ಪೇಪರಿನಲ್ಲಿ ತುಂಬಿಸಿಟ್ಟಳು; ಹಾಗೇ ತಾನು ಹೋದ ವಾರ್ಡಿನತ್ತ ಹೋಗಿ ಒಬ್ಬಳು ದಾಯಿಗೆ ಕೇಳಿದಳು "ನೀರು" ಅವಳು 'ಕ್ಯಾ' ಅಂದಳು ಅಲ್ಲೇ ಸಮೀಪದಲ್ಲಿದ್ದ ನಲ್ಲಿ ತಿರುಗಿಸಿ ತೋರಿಸಿದಳು ಕಾವೇರಿ "ಪಾನೀ" ಬರ್ತನ್ ಲಾವೊ" ಎಂದಳು ದಾಯಿ. ಕಾವೇರಿಗೆ ಅರ್ಥವಾಗಲಿಲ್ಲ. ಹಾಗೇ ಮರಳಿದಳು. ನೀರಡಿಕೆಯಲ್ಲಿ ಬಾಯಿ ಒಣಗಿ ಹೋಗಿತ್ತು. ಸೀದಾ ಡಾಕ್ಟ್ರ ರೂಮಿಗೆ ಹೋದಳು.

"ಎನಗೆ ಕುಡಿವಲೆ ರಜಾ ನೀರು ಬೇಕಾತು"

"ಇದಾ ಇಲ್ಲಿಯೇ ಎನ್ನ ರೂಮಿಲ್ಲಿ ಇದ್ದು ಎಂದು ಅಲ್ಲಿ ಪಾತ್ರೆಯಲ್ಲಿ ತುಂಬಿಟ್ಟು ನೀರಿನಿಂದ ಒಂದು ತಂಬಿಗೆ ನೀರು ತೆಗೆದುಕೊಟ್ಟರು. ಅಷ್ಟನ್ನೂ ಕಾವೇರಿ ಕುಡಿದಳು. ಅವಳ ನೀರಡಿಕೆ ಇಂಗಿತು. ನಿನಗೆ ಅಲ್ಲಿಗೆ ನೀರು ಬೇಕೋ."

"ಬೇಕು, ವಾರ್ಡಿಲ್ಲಿ ಒಂದು ದಾಯಿ ಹತ್ರೆ ಹೋಗಿ ಕೇಳಿದೆ. ಅದಕ್ಕೆ ಎನ್ನ ಭಾಷೆ ಅರ್ಥ ಆತಿಲ್ಲೆ."

"ಈಗ ಸದ್ಯ ಇಲ್ಲಿಂದಲೇ ಒಂದು ಕೊಡ ನೀರು, ಚೆಂಬುದೇ ತೆಕ್ಕೊಂಡು ಹೋಗು, ಎನ್ನ ರೂಮಿಲ್ಲಿ ಯಾವಾಗಲೂ ನೀರು' ಇರುತ್ತು.

"ಆತು ಡಾಕ್ಟ್ರೆ" ಎಂದು ಕಾವೇರಿ ಅಲ್ಲಿಂದಲೇ ಕೊಡ ನೀರನ್ನೂ, ಒಂದು ಚೆಂಬನ್ನು ತೆಕ್ಕೊಂಡು ಹೋದಳು. ಅಷ್ಟರಲ್ಲಿ ಹೊರಗೆ ಹೋಗಿದ್ದ ರಘುರಾಮ ಅವಳು ಹೇಳಿದ ಸಾಮಾನುಗಳನ್ನೂ, ಸ್ವಲ್ಪ ತರಕಾರಿಗಳನ್ನೂ ತಂದುಕೊಟ್ಟ.

"ಅತ್ತಿಗೆ ನಿನಗೆ ಬರೇ ಅಶನ ಉಂಬ ಚಿಂತೆ ಮಾಂತ್ರ ಇತ್ತು. ಅದರೊಟ್ಟಿಂಗೆ ಬೆಂದಿ ಬೇಕು ಹೇಳಿ ತಲಗೆ ಬಯಿಂದಿಲ್ಲೆಯೋ? ಉಪ್ಪು ಹುಳಿ ಎಂತದೂ ಬೇಕಾತಿಲ್ಲೆಯೋ? ಕಾಫಿ ಹೊಡಿ, ಶಕ್ಕರೆ ಬೇಡದೋ?"

"ಬೇಕಿತ್ತು, ಎಲ್ಲಾ ಹೇಳ್ಳೆ ರಜಾ ದಾಕ್ಷಿಣ್ಯ ಆತು ಹಾಂಗಾಗಿ"

"ಅದಾ ಆನು ಹೇಳಿದ್ದೆಂತ, ಎನ್ನ ನೀನು ಸ್ವಂತ ಅಣ್ಣ ಹೇಳಿ ಜಾನ್ಸಿಗೋ ಹೇಳಿ ಅಲ್ಲದೋ? ನೀನು ಹಾಂಗೆ ಜಾನ್ಸಿದಿಲ್ಲೆ ಹೇಳಿ ಅರ್ಥ" ರಘುರಾಮನ ಮಾತಿನಲ್ಲಿ ಮುನಿಸಿತ್ತು.

"ಭಾವ, ನೀನು ಬೇಜಾರ ಮಾಡೇಡ, ಕೋಪವೂ ಮಾಡೇಡ. ಎನಗೆ ಬೇಕಾಗಿ ನೀನು ಎಷ್ಟು ಕರ್ಚು ಮಾಡಿದ್ದೆ. ನೀನು ಪೈಸೆಯೂ ತೆಕ್ಕೊಳ್ಳಿಲ್ಲೆ. ಅದೂ ಅಲ್ಲದ್ದೆ ನೀನು ಏಕಾಏಕಿ ಹೊರಟುಬಂದುದು. ಪೈಸೆ ಇರ್ತೊ ಇಲ್ಲೆದೋ ಹೇಳಿ ಅವಮಾನವೂ ಆತು. ಹಾಂಗಾಗಿ ಹೇಳಿದ್ದಿಲ್ಲೆ. ಎನ್ನ ಕ್ಷಮಿಸು ಆತೋ? ಎನ್ನ ಒಂದು ಮನುಷ್ಯ ಜಾತಿ ಹೇಳಿ ನೋಡಿದವು ಆರು ಇಲ್ಲೆ. ನೀನೊಬ್ಬನೇ ಎನ್ನ ಆದರಿಸಿದವ" ಕಾವೇರಿಯ ಕಣ್ಣಿನಲ್ಲಿ ನೀರೊರಸಿತು.

"ನೀನು ಕೂಗೇಡ ಅತ್ತಿಗೆ; ಕಣ್ಣು ಒರಸಿಗೊ, ನೀನು ಮೇಲೆ ಬಪ್ಪದರ ಎನಗೆ ನೋಡೇಕು ಹೇಳುವ ಆಶೆ ಇದ್ದು - ಎನ್ನಂದ ಎಡಿಗಾದ ಸಹಾಯ ಮಾಡುವೆ ಆತೊ?"

ಆ ದಿನ ಮಧ್ಯಾಹ್ನಕ್ಕೆ ಕಾವೇರಿ ಹೊಸ ಪಾತ್ರೆಗಳಲ್ಲಿ ಅಡಿಗೆ ಮಾಡಿದಳು. ಗಂಜಿ, ಬದನೆಕಾಯಿ ಪಲ್ಯ ಮಾಡಿದ್ದಳು. ಉಣ್ಣುವುದು ಹೇಗೆ ಎಂಬ ಯೋಚನೆ ಬಂತು. ಮೆಲ್ಲ ಡಾಕ್ಟ್ರ ಕೋಣೆಯ ಕದ ಬಡಿದಳು. 'ಯಸ್ ಕಮ್ ಇನ್' ಎಂದು ಡಾಕ್ಟ್ರು ಬಾಗಿಲು ತೆರೆದರು.

"ಎನಗೆ ಎರಡು ಬಟ್ಲೂ, ಗ್ಲಾಸೂ ಇದ್ದರೆ ಕೊಡಿ, ಆನು ತಂದ ಮತ್ತೆ ವಾಪಾಸು ತಂದುಕೊಡುವೆ"

"ಇದ್ದು ಕೊಡುತ್ತೆ" ಎಂದು ಒಳಗೆ ಹೋಗಿ ತಂದುಕೊಟ್ಟರು.

ಇಬ್ಬರೂ ತಟ್ಟೆಯಲ್ಲಿ ಗಂಜಿ. ಪಲ್ಯ ಹಾಕಿಕೊಂಡು ಊಟ ಮುಗಿಸಿದರು. ಅನ್ನ ಕಾಣದೆ ಮೂರು ದಿನವಾಗಿದ್ದಕ್ಕೆ ಏನೋ ಇಬ್ಬರಿಗೂ ಊಟ ತೃಪ್ತಿ ಕೊಟ್ಟಿತು.

"ಅತ್ತಿಗೆ, ನೀನು ರಗ್ಗು ಹಾಸ್ಕೊಂಡು ರಜಾ ಮನಿಕ್ಕೊ. ಆನೊಂದಾರಿ ದೇವಸ್ಥಾನದ ಹತ್ರಂಗೆ ಹೋಯ್ಕೊಂಡು ಬತ್ತೆ, ಕಾಶಿಗೆ ಬಂದುದೇ ವಿಶ್ವೇಶ್ವರನ ದರ್ಶನ ಮಾಡದಿದ್ದರೆ ಹೇಂಗೆ? ಹಾಂಗೇ 5-6 ಕಾಶೀ ತೀರ್ಥವನ್ನು ಊರಿಗೆ ತೆಕ್ಕೊಂಡು ಹೋಗಿ ನಮ್ಮ ನೆಂಟರಿಂಗೆಲ್ಲಾ ಕೊಡೆಕ್ಕು" ಎಂದವನೇ ಊರು ಸುತ್ತಲು ಹೊರ ನಡೆದ. ಕಾವೇರಿ ಬಾಗಿಲು ಭದ್ರ ಮಾಡಿ, ಬಟ್ಟೆಯೊಂದನ್ನು ಹಾಸಿ, ಅಡ್ಡಾದಳು. ಅವಳಿಗೆ ನಿದ್ರೆ ಸರಿಯಾಗಿ ಬಂತು.

ದೇವಸ್ಥಾನಕ್ಕೆ ಹೋದ ರಘುರಾಮ, ಗಂಗಾಜಲ ತುಂಬಿದ ತಾಮ್ರದ ಚಿಕ್ಕ ಚಿಕ್ಕ ಬಿಂದಿಗೆಗಳನ್ನು, ಗಂಧಪ್ರಸಾದವನ್ನು ತೆಗೆದುಕೊಂಡು ಬಂದಿದ್ದ. ಆಗಲೇ ಸಾಯಂಕಾಲ ಗಂಟೆ ಆರು ಹೊಡೆದಿತ್ತು.

"ಅತ್ತಿಗೆ ಇನ್ನು ಆನು ಇಲ್ಲಿಂದ ಹೆರಡುತ್ತೆ, ರೈಲಿಪ್ಪದು 8 ಗಂಟೆಗೆ. ಇನ್ನು ಟಿಕೇಟು ತೆಕ್ಕೊಂಡು ಎಲ್ಲಾ ಅಪ್ಪಾಗ ಹೊತ್ತು ಸರಿ ಆವುತ್ತು."

"ಆತು ಭಾವ. ಎನ್ನ ಬಗ್ಗೆ ಹೆಚ್ಚು ಚಿಂತೆ ಮಾಡೇಡ. ಹೇಂಗೂ ಇಲ್ಲೊಬ್ಬ ನಮ್ಮೂರಿನ ಡಾಕ್ಟ್ರು ಸಿಕ್ಕಿದ್ದನ್ನೆ. ಮುಳುಗುವಂಗೆ ಹುಲ್ಲುಕಡ್ಡಿ ಸಿಕ್ಕಿದ ಹಾಂಗೆ. ಹೇಂಗೂ ಆನಿಲ್ಲಿ ಬಚಾವಪ್ಪೆ, ನೀನು ನಿಶ್ಚಿಂತೆಲಿ ಊರಿಂಗೆ ಹೋಗು. ಅಬ್ಬೆಗೂ, ಅಪ್ಪಂಗೂ. ಶಾರದೆಗೂ ಎನಗಿಲ್ಲಿ ಯಾವ ತೊಂದರೆಯೂ ಇಲ್ಲೆ ಹೇಳಿಕ್ಕು. ಆನು ಮಾಡೇಕಾದ ಕೆಲಸದ ವಿವರ ಆರಿಂಗೂ ಹೇಳೇಡ. ಹೇಲು ಬಳಿಯೇಕಾರೆ ಇದಕ್ಕೆ ಕಾಶಿಗೆ ಹೋಯೇಕಾತೋ? ಈ ಕೆಲಸ ನಮ್ಮೂರಿಲ್ಲಿಯೇ ಸಿಕ್ಕುತಿತ್ತು ಹೇಳಿ ಹಂಗುಸುಗು. ಅದು ಟ್ರೈನಿಂಗಿಂಗೆ ಸೇರಿದ್ದು ಹೇಳಿ ಅಷ್ಟು ಹೇಳಿದರೆ ಸಾಕು"

"ಅದೆಲ್ಲಾ ಆನು ಹೇಳೆ ಅತ್ತಿಗೆ. ಅವಕ್ಕೆಂತ ಹೇಳೇಕು ಹೇಳಿ ಎನಗೆ ಗೊಂತಿದ್ದು. ಆತಂಬಾಗ ಆನು ಹೆರಡುತ್ತೆ" ಎಂದು ರಘುರಾಮ ಹೊರಟ.

ಹೊರಡುವಾಗ "ಅತ್ತಿಗೆ ಇದರ ನೀನು ಮಡಿಕ್ಕೊ. ಇನ್ನು ತಿಂಗಳಾದ ಮತ್ತೆ ನಿನಗೆ ಸಂಬಳ ಬಪ್ಪುದು. ಅಲ್ಲಿವರೆಗೆ ಕರ್ಚಿಗಾತು" ಎಂದು ಹೇಳಿ ತನ್ನಲ್ಲುಳಿದ ಐದುನೂರು ರೂಪಾಯಿಗಳನ್ನು ಕಾವೇರಿಯ ಅಂಗೈ ಮೇಲೆ ಇಟ್ಟು ತುರುಕಿದ.

"ಛೇ ಇದೆಲ್ಲಾ ಎಂತಕೆ ಭಾವ. ಎನ್ನ ಕೈಲಿ ಪೈಸೆ ಇದ್ದು. ಆನು ಬಪ್ಪಾಗ ಒಂದು ಸಾವಿರ ರೂಪಾಯಿ ತೆಕ್ಕೊಂಡು ಬಯಿಂದೆ. ಅದು ಹಾಂಗೇ ಇದ್ದು. ಎಲ್ಲಾ ಕರ್ಚಿಯನ್ನೂ ನೀನೇ ನೋಡಿಗೊಂಡದು. ಆನೊ ಅಂಬಾಗಂಬಾಗ ಕೇಳ್ಳೆ

ಹೋಯಿದಿಲ್ಲೆ. ಎಲ್ಲಾ ಕಡೇಂಗೆ ಕೊಟ್ಟರಾತು ಹೇಳಿ ಗ್ರಹಿಸಿದ್ದೆ. ಈಗ ಈ ಪೈಸೆ ಬೇರೆ ಕೊಡುತ್ತಾ ಇದ್ದೆ. ಎನಗೆ ಬೇಡ ಭಾವ. ಎನಗೆ ನೀನು ಮಾಡಿದ ಸಹಾಯವೇ ಸಾಕು. ಸಾವನ್ನಾರವೂ ಮರೆಯೆ"

"ಅತ್ತಿಗೆ, ಮನುಷ್ಯಂಗೆ ಪೈಸೆ ಬೇಕು. ಪೈಸೆ ಇಲ್ಲದ್ದವರ ಮೂಸಿಯೂ ನೋಡವು ಜೆನಂಗೊ. ನಿನಗೆ ಎಂತಾರೂ ಆಪತ್ತು ಬಂದರಾತು. ಇನ್ನೂ ಎಷ್ಟೆಷ್ಟೋ ಸಾಮಾನು ಬೇಕಕ್ಕು. ಹಾಂಗಾಗಿ ಪೈಸೆಯ ಮಡಿಕ್ಕೊ. ಆನು ಊರಿಂಗೆ ಹೋಪಲೆ ತಕ್ಕ ಕರ್ಚಿಗೆ ಮಡಿಕ್ಕೊಳ್ತೆ ಉಳುದ್ದರ ನಿನಗೆ ಕೊಡೇಕು ಹೇಳಿಯೇ ತಂದದು".

ಕಾವೇರಿಯ ಬಾಯಲ್ಲಿ ಮುಂದು ಮಾತು ಹೊರಡಲಿಲ್ಲ.

"ನೀನು ಚಿಂತೆ ಮಾಡೇಡ ಅತ್ತಿಗೆ. ನಿನಗೆ ಎನ್ನ ಹಂಗು ಬೇಡ ಅಲ್ಲದೋ, ಹಾಂಗಾರೆ ಬೇಗ ಕಲ್ತು, ಒಳ್ಳೇ ಕೆಲಸಕ್ಕೆ ಸೇರು ಅಂಬಾಗ ಎನ್ನ ಪೈಸೆಯ ಮರುಪಾವತಿ ಮಾಡು. ಅಲ್ಲಿವರೆಗೆ ಆನು ಪೈಸೆಗೆ ಪೈಸೆ ಲೆಕ್ಕ ಹಾಕ್ಕೊಂಡು ಇರ್ತೆ ಆತೊ" ರಘುರಾಮ ಒಮ್ಮೆ ನಗಾಡಿದ. ಕಾವೇರಿಗೂ ಮನಸ್ಸು ಹಗುರವಾಯಿತು. ಮುಗುಳುನಗುತ್ತ, ಭಾವನ ಹಿಂದೆ ಸ್ವಲ್ಪ ದೂರ ಹೋಗಿ ಕಳುಹಿಸಿಕೊಟ್ಟಳು.

ಮಂಗಳೂರಿನಿಂದ ಅಪ್ಪಣ್ಣಭಟ್ಟರು ನೇರವಾಗಿ ತಮ್ಮ ಮನೆ ಸೇರಿದರು. ನಡೆದ ಸಮಾಚಾರವನ್ನು ಶಂಕರಮ್ಮನಿಗೆ ತಿಳಿಸಿದರು. ಅಷ್ಟರೊಳಗೆ ಅಲ್ಲಿಗೆ ಕೇಶವಭಟ್ಟರೂ, ಗಣಪತಿಭಟ್ಟರೂ. ಇನ್ನಿಬ್ಬರು ನೆರೆಹೊರೆಯ ಬ್ರಾಹ್ಮಣರೂ ಬಂದರು. ಅವರ ಮುಖಚರ್ಯೆಯಲ್ಲಿ ಕಾತರವಿತ್ತು.

"ಎಂತ ಅಪ್ಪಣ್ಣ, ನಿನ್ನೆ ಕೊಡೆಯಾಲಕ್ಕೆ ಮಗಳನ್ನೂ. ಅಳಿಯನನ್ನೂ ಕಟ್ಟೊಂಡು ಆಸ್ಪತ್ರೆಗೆ ಹೋಯಿದಿರಾಡಾ?" ಕೇಳಿದವರು ಕೇಶವಭಟ್ಟರು.

"ಅಪ್ಪು ಹೋಯಿದಿಯೊ. ನಿಂಗೊಗೆ ಆರು ಹೇಳಿದ್ದು?" ಆಶ್ಚರ್ಯದಲ್ಲಿ ಕೇಳಿದರು ಅಪ್ಪಣ್ಣಭಟ್ಟರು.

"ಎಂತ ಕದ್ದುಮುಚ್ಚಿ ಓಡಿದರೆ ಆರಿಂಗೂ ಗೊಂತಾಗ ಹೇಳಿ ಜಾನ್ಸಿದೆಯೊ? ಎಂಗೊಗೆ ಹಿತ್ಲಮನೆ ಶಂಭಟ್ಟ ಹೇಳಿದ. ಅವ ಅದೇ ಆಸ್ಪತ್ರೆಲಿ ಇತ್ತಿದ್ದಾಡ. ನಿಂಗಳ ಕಂಡು ದಿನಿಗೇಳಿದಾಂಡ. ನಿಂಗೊ ಕೇಳದ್ದ ಹಾಂಗೆ ಮಾಡಿ ಅಲ್ಲಿಂದ ದಾರಿ ಬಿಟ್ಟಿರಾಡ!"

"ಆನು ಅವನ ನೋಡಿದ್ದಿಲ್ಲೆ. ದಿನಿಗೇಳಿದ್ದೂ ಕೇಳಿದ್ದಿಲ್ಲೆ"

"ನಿನಗೆ ಹೇಂಗೆ ಕೇಳುದು. ಅದು ಸರಿ, ಹೋದ ಕೆಲಸ ಎಂತಾತು?"

“ಆಯಿದಿಲ್ಲೆ”

“ಮತ್ತೆ”

“ಇಲ್ಲಿ ಆಗ ನಿಂಗೊ. ಮುಂದಕ್ಕೆ ಕಾಶಿ ಹೋಗಿ ಅಲ್ಲಿ ಅಕ್ಕು ಹೇಳಿದವು”

ಅಪ್ಪಣ್ಣನಿಗೆ ಅವರ ಕೊಂಕುನುಡಿ ಅರ್ಥವಾಗಲಿಲ್ಲ. ಇದ್ದದ್ದನ್ನು ಇದ್ದಂತೆ ಹೇಳಿದರು.

“ಅಂಬಾಗ ಈಗ ಕಾವೇರಿ ಎಲ್ಲಿದ್ದು? ಅಳಿಯ ಎಲ್ಲಿದ್ದ?”

“ಅವು ಇಬ್ರೂ ಕಾಶಿಗೆ ಹೆರಟವು. ಎನ್ನ ಊರಿಂಗೆ ಬಸ್ಸು ಹತ್ತಿಸಿ ಬಿಟ್ಟವು.”

“ಅದೊ ಕತೆ, ನಿನಗೆ ಎಲ್ಲಾ ಗೊಂತಪ್ಪಲಾಗ ಹೇಳಿ ಆದಿಕ್ಕು”

“ಎನಗೆ ಎಲ್ಲಾ ಗೊಂತಿದ್ದು” ಗಣಪತಿಭಟ್ಟರು ಬಾಯಿ ತೆರೆದರು.

“ಹೇಳಿರೆ, ಕಾವೇರಿಗೆ ಮೂರು ತಿಂಗಳು ಆದ್ದು, ಪಿಂಕುಸಲೆ ಆಸ್ಪತ್ರೆಗೆ ಕರಕ್ಕೊಂಡು ಹೋದ್ದು. ಎಲ್ಲಾ ಗೊಂತಿದ್ದಂಡೇ ಮಾಡಿದ ಕೆಲಸ ಅಲ್ಲದೊ?”

ಈಗ ಅಪ್ಪಣ್ಣಭಟ್ಟರಿಗೆ ಜ್ಞಾನೋದಯವಾಯಿತು.

“ಅದಕ್ಕಲ್ಲ, ಕಾವೇರಿಗೆ ಎಂತದೋ ಟ್ರೈನಿಂಗ್ ಮಾಡ್ಸಲೆ”

“ಅದಕ್ಕೆಂತರ ಟ್ರೈನಿಂಗು? ಅದೇ ಕೊಡುಗು ಟ್ರೈನಿಂಗು. ಅಷ್ಟು ಬೆಳೆದು ಹೋಯಿದದು. ಆರ ಗಣ್ಯವೂ ಇಲ್ಲೆ. ಇಷ್ಟಕ್ಕೂ ಅಲ್ಲಿ ಮದ್ದು ಕೊಡುದು, ಕತ್ತರುಸುದು. ಕ್ಯೊವದು ನಿನಗೆ ಎಲ್ಲೋರ ಕಣ್ಣಿಂಗೆ ಮಣ್ಣು ಎರಚ್ಚಲೆಡಿಯ ಆತೊ” ಗಣಪತಿಭಟ್ಟರ ದನಿ ಏರಿತ್ತು. “ಅದಷ್ಟೆ, ಅದಷ್ಟೆ” ಎಂದು ದನಿಗೂಡಿಸಿದರು ಜೊತೆಯಲ್ಲಿ ಬಂದವರು.

“ಎನಗೆಂತದೂ ಗೊಂತಿಲ್ಲೆ” ಸೋತು ನುಡಿದರು ಅಪ್ಪಣ್ಣಭಟ್ಟರು.

“ಹೂಂ, ಹಾಂಗೆ ಬಾ ದಾರಿಗೆ, ಇಲ್ಲದ್ದರ ಎಲ್ಲಾ ಸೃಷ್ಟಿಸಿ ಪಾರಪ್ಪಲಕ್ಕು ಹೇಳಿ ಜಾನ್ವೇಡ” ಎಂದವರು ಕೇಶವಭಟ್ಟರು.

ಇವರ ಎಲ್ಲಾ ವಾದ ವಿವಾದಗಳನ್ನು ಒಳಗಿನಿಂದ ಆಲಿಸುತ್ತಿದ್ದ ಶಂಕರಮ್ಮನಿಗೆ ದುಃಖ ತಡೆಯಲಾಗಲಿಲ್ಲ. ಕೂಸು ಸತ್ತರೂ ಹೇಲು ವಾಸನೆ ಹೋಗಿಲ್ಲ ಎಂಬಂತೆ ಕಾವೇರಿ ಇಲ್ಲದಿದ್ದರೂ ಇವರ ನಾಲಿಗೆಗೆ ಕಡಿವಾಣ ಬೀಳಲಿಲ್ಲವಲ್ಲಾ ಎಂದು ಸಿಟ್ಟೂ ಬಂತು. ಕೂಡಲೇ ಹೊರಗೆ ಬಂದರು.

"ನಿಂಗೊ ಎಲ್ಲಾ ವಿಚಾರವ ರಘುರಾಮ ಬಂದ ಮತ್ತೆ ಬಂದು ವಿಚಾರ್ಸಿ. ಅವ ನಾಡ್ತಿಂಗೆ ಇಲ್ಲಿಗೆ ಎತ್ತುಗು. ಸುಮ್ಮನೇ ಇವರ ಜೀವ ಎಂತಕೆ ತಿಂತಿ? ಅಷ್ಟರವರೆಗೆ ತಡಕ್ಕೊಳಿ. ಈಗ ಒಂದಾರಿ ನಿಂಗಳ ನಿಂಗಳ ಮನೆಗೆ ಹೋಗಿ ರಘುರಾಮ ಬಂದ ಕೂಡ್ಲೆ ಆನು ಹೇಳಿ ಕಳ್ಳುತ್ತೆ; ನಿಂಗೊ ಬಂದು ವಿವರ ತಿಳುಕ್ಕೊಂಡು ಹೋಗಿ" ಎಂದು ಸ್ವಲ್ಪ ಸಿಟ್ಟಿನಲ್ಲಿಯೇ ಹೇಳಿದರು ಶಂಕರಮ್ಮ, ಗಂಡನ ಕಡೆ ತಿರುಗಿ,

"ನಿಂಗೊ ಒಳ ನಡೇಯಿ" ಎಂದು ಅಪ್ಪಣ್ಣಭಟ್ಟರನ್ನು ಮನೆ ಒಳಗೆ ಕರೆದು, ಮಾತಿಗೆ ಮಂಗಲ ಹಾಡಿದರು.

"ಆಗಲಿ ಆವ ಬಂದಮತ್ತೇ ವಿಚಾರ್ಸುವೊ. ಹೀಂಗಿಪ್ಪ ವಿಷಯಂಗಳ ಸುಮ್ಮನೇ ಬಿಡ್ಳಾಗ. ಬಿಟ್ರೆ ಇನ್ನು ಮುಂದಾಣ ಕೂಸುಗಳೂ ಹಾಂಗೇ ಮಾಡುಗು. ಇದೆಲ್ಲಾ ಚಿಗುರಿಲ್ಲಿಯೇ ಚೂಂಟೇಕು. ಮರ ಅಪ್ಪಲೇ ಬಿಡ್ಳಾಗ" ಎನ್ನುತ್ತಾ ಎಲ್ಲರೂ ಎದ್ದು ಹೋದರು.

ರಘುರಾಮ ಕಾಶಿಯಿಂದ ಮರಳಿ ಬಂದು ಅತ್ತೆ ಮಾವನಿಗೆ ಅಲ್ಲಿಯ ಸಮಾಚಾರಗಳನ್ನೆಲ್ಲಾ ತಿಳಿಸಿದ. ಅಲ್ಲಿ ಡಾಕ್ಟರು ಕೇಶವ ಇದ್ದ ಕಾರಣ, ಕಾವೇರಿಗೆ ಯಾವ ತೊಂದರೆಯೂ ಇಲ್ಲ. ಅವಳು ಗುರಿ ಮುಟ್ಟುತ್ತಾಳೆ ಎಂದೂ ತಿಳಿಸಿದ. ಎಲ್ಲಾ ವಿಷಯ ತಿಳಿದ ಮೇಲೆ ಶಂಕರಮ್ಮ ಹೇಳಿದರು.

"ರಘುರಾಮ, ನೀನು ನಿನ್ನ ಮನೆಗೆ ಹೋಯೇಕಾರೆ ಮದಲೆ ಒಂದಾರಿ ಆ ಕೇಶವಜ್ಜಂಗೂ, ಗೆಣಪಜ್ಜಂಗೂ ವಿವರವಾಗಿ ವಿಷಯ ತಿಳಿಶಿಕ್ಕಿಯೇ ಹೋಗು, ಇನ್ನು ಅವರ ಬಾಯಿಗೆ ಬೀಗ ಬಿದ್ದಿದಿಲ್ಲೆ. ಬೇಡಂಗಟ್ಟೆ ಹೇಳ್ಯಂಡೇ ಇದ್ದವು. ಅವು ನಿನ್ನ ಮಾವನ ಹಿಡುದು ಅರೆತ್ತವು" ಎಂದು ನಡೆದ ಸಮಾಚಾರವನ್ನೆಲ್ಲಾ ತಿಳಿಸಿದರು.

"ಹಾಂಗಾರೆ ಅವರ ಈಗಳೇ ಬಪ್ಪಲೆ ಹೇಳಿ. ಆನು ಅವರ ಹತ್ತರೆ ಮಾತಾಡಿಕ್ಕಿಯೇ ಹೋವುತ್ತೆ"

"ನಿಂಗೊ ಹೋಗಿ ಅವರ ಬಪ್ಪಲೆ ಹೇಳಿ" ಎಂದು ಗಂಡನಿಗೆ ಹೇಳಿದರು ಶಂಕರಮ್ಮ. ಅಪ್ಪಣ್ಣಭಟ್ಟರು ಎದ್ದು ಹೋಗಿ ಕರೆದುಕೊಂಡು ಬಂದರು. ಎಲ್ಲರ ಮುಖದಲ್ಲಿಯೂ ಪ್ರಶ್ನಾರ್ಥಕ ಛಾಯೆ ಇತ್ತು. ಬಂದವರು ಛಾವಡಿಯಲ್ಲಿ ಕೂತರು.

"ಎಂತ ರಘುರಾಮ ಎಂಗಳ ಕರಕ್ಕೊಂಡು ಬಪ್ಪಲೆ ಹೇಳಿದ್ದೇಡ" ದನಿ ತೆಗೆದರು ಕೇಶವಭಟ್ಟರು.

"ಅಪ್ಪು ಆನೇ ಹೇಳಿ ಕಳಿಸಿದ್ದು. ಒಂದಾರಿ ನಿಂಗೊಗೆ ಎಲ್ಲಾ ವರ್ತಮಾನ ಮುಟ್ಟಿಸಿಕ್ಕಿಯೇ ಹೋಯೇಕು ಹೇಳಿ ಕಂಡತ್ತು."

"ಹೇಳು ಅಂಬಾಗ ನೀನೆಂತ ಹೇಳುತ್ತೆ ಹೇಳಿ ಕೇಳ್ತೆಯೊ?" ರಘುರಾಮನೂ ಯಾವುದೋ ಸುಳ್ಳು ಹೇಳಬಹುದು ಎಂಬ ಶಂಕೆ ಇತ್ತು ಅವರ ಮಾತಿನಲ್ಲಿ.

"ಎಂಗೊ ಮಂಗಳೂರಿಂಗೆ ಆಸ್ಪತ್ರೆಗೆ ಹೋದ್ದು ಅಪ್ಪು. ಆದರೆ ನಿಂಗೊ ತಿಳುದ ಹಾಂಗೆ ಅತ್ತಿಗೆಯ ಗರ್ಭ ಪೀಂಕು ಸಲ್ಲಲ್ಲ. ಅದಕ್ಕೆ ಆಸ್ಪತ್ರೆಲಿಯ ಏವದಾದರೂ ಟ್ರೈನಿಂಗು ಇದ್ದೊ ಹೇಳಿ ವಿಚಾರ್ಸಲೆ. ಈಗ ಸಧ್ಯ ನಾಲ್ಕನೇ ಕ್ಲಾಸು ಕಲ್ತವಕ್ಕೆ ಅಲ್ಲಿ ಯಾವ ಟ್ರೈನಿಂಗೂ ಇಲ್ಲೆ ಹೇಳಿ ಅಲ್ಲಿಯ ಡಿ.ಎಂ.ಓ ಹೇಳಿದ. ಹಾಂಗಿಪ್ಪ ಟ್ರೈನಿಂಗು ಕಾಶಿಲಿ ಇದ್ದು ಹೇಳಿಯೂ ಅಲ್ಲಿ ನಮ್ಮೂರಿನ ಡಾಕ್ಟರೊಬ್ಬ ಆರ್.ಎಂ.ಓ ಆಗಿ ಇದ್ದ ಹೇಳಿಯೂ, ಅತ್ತಿಗೆಗೆ ಕೆಲಸ ಮಾಡ್ಕೊಡೇ ಮುಂದೆ ಕಲಿವ ಅನುಕೂಲವೂ ಇದ್ದು ಹೇಳಿ" ವಿವವರಾಗಿ ತಿಳಿಸಿದ. "ನಿಂಗೊ ಹೇಳಿದವ ಹಾಂಗೆ ಅತ್ತಿಗ್ಗೆ ಮೂರು ತಿಂಗಳಾದ್ದಲ್ಲ – ಎನಗೂ ಅತ್ತಿಗೆಗೂ ಯಾವ ಅನೈತಿಕ ಸಂಬಂಧವೂ ಇಲ್ಲೆ. ಅದೆನ್ನ ತಂಗೆ ಸಮಾನ ಅರ್ಥ ಮಾಡ್ಕೊಳ್ಳಿ. ಎಳೆ ಪ್ರಾಯಲ್ಲಿ 'ಗೆಂಡ' ಹೇಳಿರೆ ಎಂತದು ಹೇಳುವ ಮದಲೇ ಅದರ ಕುಂಕುಮ ಅಳುದು ಹೋತು. ಅದರ ನಾವು ಅರ್ಥ ಮಾಡಿಕೊಳ್ಳೇಕು. ಇದರಿಂದ ಅದರ ಮನಸ್ಸಿಂಗೆ ಎಂತ ಪರಿಣಾಮ ಅಕ್ಕು ಹೇಳಿ ಆಲೋಚನೆ ಮಾಡೇಕು. ಅದು ಬಿಟ್ಟು ಇಲ್ಲಸಲ್ಲದ್ದ ಅಪವಾದ ಹೊರಿಸಿ ಅವಕ್ಕೆ ನರಕಯಾತನೆ ಕೊಡ್ಳಾಗ."

"ಹೇಳಿರೆ ಕಾವೇರಿಗೆ ಮಾಂತ್ರ ಗೆಂಡ ಸತ್ತದ್ದಲ್ಲ. ಹಾಂಗಿಪ್ಪವು ಎಷ್ಟೊ ಜೆನ ಇತ್ತಿದ್ದವು. ಅವು ಶಾಸ್ತ್ರ ಪ್ರಕಾರ ವಿಧವೆಗೊ ಆಗಿಯೇ ಬದುಕಿದ್ದವು."

"ಯಾವ ಶಾಸ್ತ್ರ ಪ್ರಕಾರ ಅದು? ಸಂಸಾರ ಮಾಡಿ, ನಾಲ್ಕು ನಾಲ್ಕು ಮಕ್ಕಳ ಹೆತ್ತು ಆದವಕ್ಕು. ಇವಕ್ಕೂ ಕಾನೂನು ಒಂದೆಯೋ" ಪ್ರಶ್ನಿಸಿದ ರಘುರಾಮ.

"ಎಲ್ಲಾ ಕಡೇಲಿ ಒಂದೇ ಕಾನೂನು ಮಾಡೇಡಿ. ರಜಾ ಸಹಾನುಭೂತಿಯನ್ನೂ ತೋರ್ಸಿ."

"ಎಲ್ಯಾರು ಅಂಥಾ ಪ್ರಸಂಗ ಇದ್ದೊ. ಇದು ಹೊಸ ವಿಷಯ ಎಂಗೊಗೆ."

"ಅಪ್ಪು. ಇದು ನಿಂಗೊಗೆ ಹೊಸ ವಿಷಯವೇ. ನಿಂಗೊ ಹತ್ತು ಜೆನ ಹಿರಿಯರು ಸೇರಿಕೊಂಡು ಹೀಂಗಿಪ್ಪ ಕೂಸುಗೊಕ್ಕೆ ಹೊಸ ದಾರಿ ಹುಡುಕ್ಕಿ ಕೊಡೇಕು. ಇಲ್ಲದಿದ್ದರೆ ಅವೇ ಹೋಪಾಗ ಅವಕ್ಕೆ ಅಡ್ಡಿ ಮಾಡ್ಳಾಗ. ಬೇಡಂಗೆಟ್ಟೆ ಹೇಳಿ ಅವರ ಬದುಕ್ಕು ಹಾಳು ಮಾಡ್ಳಾಗ. ಅವಕ್ಕೆ ಆಶೀರ್ವಾದ ಮಾಡೇಕಾದ

ನಿಂಗೊ ಬಾಯಿಗೆ ಬಂದ ಹಾಂಗೆಲ್ಲಾ ಹೇಳಿ ತಿರುಗಲಾಗ. ನಿಂಗೊ ಹಿರಿಯವು ಎಡಿಗಾರೆ ದಾರಿ ತೋರ್ಸಿ. ಇಲ್ಲದಿದ್ದರೆ ರಜಾ ಸಮಯ ಸುಮ್ಮನೆ ಕೂರಿ. ಮುಂದೆ ಎಂತಾವುತ್ತು ಎಂತ ಮಾಡುತ್ತಿ ಹೇಳಿ ಕಾದು ನೋಡಿ. ಈಗ ಹೇಂಗಾದರೂ ಅತ್ತಿಗೆ ನಿಂಗಳ ಕಣ್ಣ ಮುಂದೆ ಇಲ್ಲೆನ್ನೆ. ಅದರ ಶುದ್ಧಿ ಇಂದಿನಿಂದಲೇ ಬಿಟ್ಟಿಕ್ಕಿ. ಅತ್ತೆ ಮಾವನ ನೆಮ್ಮದಿ ಆಗಿ ಬದುಕ್ಕಲೆ ಬಿಟ್ಟಿಕ್ಕಿ" ರಘುರಾಮನ ಮಾತು ಸ್ವಲ್ಪ ದೀರ್ಘವೇ ಆಯಿತು.

ಯಾರೊಬ್ಬರ ಬಾಯಿಂದಲೂ ಯಾವ ಮಾತೂ ಹೊರಡಲಿಲ್ಲ. ಎಲ್ಲರೂ ಎದ್ದು ಮನೆಯ ದಾರಿ ಹಿಡಿದರು. ಯಾರಿಂದಲೂ ಮರುಪ್ರಶ್ನೆ ಬಾರದಂತೆ ರಘುರಾಮ ಬಂಧಿಸಿದ್ದ.

"ಅತ್ತೆ ಆನಿನ್ನು ಮನೆಗೆ ಹೋವುತ್ತೆ. ಇನ್ನು ಅವು ನಿಂಗಳ ಶುದ್ಧಿಗೆ ಬಂದರೆ ತಿಳುಶಿ. ಇನ್ನೊಂದಾರಿ ಒಗೆತ್ತಿ. ನಿಂಗೊ ಹೆದರೇಡಿ" ಎಂದು ರಘುರಾಮ ತನ್ನ ಮನೆಯ ಕಡೆಗೆ ನಡೆದ.

ಇಲ್ಲಿ ಅಪ್ಪಣ್ಣಭಟ್ಟರಿಗೂ ಶಂಕರಮ್ಮನಿಗೂ ಸಮಾಧಾನವಾಯಿತು. ಮಗನಿಲ್ಲವೆಂಬ ಜಾಗವನ್ನು ರಘುರಾಮ ಸಂಪೂರ್ಣ ತುಂಬಿದ್ದ.

"ಕೇಶವಣ್ಣಾ, ನಾವು ಸುಮ್ಮನೇ ಬೈಗಳು ತಿಂಬಲೆ ಬಂದ ಹಾಂಗೆ ಆತು" ದಾರಿಯಲ್ಲಿ ಗಣಪತಿಭಟ್ಟರು ಮೌನ ಮುರಿದರು.

"ಹಾಂಗೇ ಆತದ" ದನಿಯಲ್ಲಿ ಸೋಲು ಎದ್ದು ಕಾಣುತ್ತಿತ್ತು.

"ಅಲ್ಲಾ ಕಾವೇರಿಗೆ ಮೂರು ತಿಂಗಳು ಆಯಿದು ಹೇಳಿ ನಿನಗೆ ಆರು ಹೇಳಿದ್ದು?"

"ಆರೂ ಹೇಳಿದ್ದಲ್ಲ ಏಕಾಏಕಿ ಕೂಸಿನ ಕಟ್ಟ್ಯೊಂಡು ಆಸ್ಪತ್ರೆಗೆ ಹೋಯೇಕಾರೆ ಅದೇ ಕಾರಣ ಇಕ್ಕು ಹೇಳಿ ಜಾನ್ಸಿದೆ ಅಷ್ಟೆ. ಅದು ಉಲ್ಟಾ ಎನ್ನ ಮೇಲೆ ತಿರುಗಿತ್ತಾದ"

"ಸುಮ್ಮನೇ ಮೋರೆಗೆ ಉಗುಶಿಕೊಂಡ ಹಾಂಗೆ ಆತು ಅಲ್ಲದೋ?"

"ಅಪ್ಪು. ಆ ಮಾಣಿ ಇಷ್ಟು ಜೋರಿಕ್ಕು. ಹೇಳಿ ಆನು ಜಾನ್ಸಿದಿಲ್ಲೆ. ನೋಡುವಾಗ ಬಾಯಿಗೆ ಬೆರಳು ಹಾಕಿದರೆ ಕಚ್ಚಲೆ ಅರಡಿಯದ್ದವನ ಹಾಂಗೆ ಇದ್ದ."

"ಅ°ವ ಬೆರಳಲ್ಲ, ಇಡೀ ಕೈಯನ್ನೇ ನುಂಗುಗು. ನವಗೆಂತಕೆ ಅವರ ಗೊಡವೆ?"

"ಅದಷ್ಟೇ ಹೇಳುವೊ. ಆದರೂ ಅವನ ಮಾತಿನಲ್ಲಿ ಸತ್ಯ ಇದ್ದು ಹೇಳಿ ಕಂಡತ್ತು ಎನಗೆ"

"ಸತ್ಯ ಎಂತರ ಕಂಡದು ನಿನಗೆ?"

"ಅಲ್ಲಾ ಕಾವೇರಿ ಒಂದು ದಿನವೂ ಗೆಂಡನೊಟ್ಟಿಗೆ ಬದುಕಿದ್ದಿಲ್ಲೆ. ಹಾಂಗಾಗಿ ಅದು 'ಮುಂಡೆ' ಹೇಂಗಾತು ಹೇಳುದರ ನಾವು ಆಲೋಚನೆ ಮಾಡೇಕಾತು"

"ಎಂತಾ ನೀನೂ ಸೇರಿದೆಯೊ ಅವರ ಕಡೇಂಗೆ? ಗೆದ್ದ ಎತ್ತಿಂಗೆ ಮೂರು ಬೀಲ ಹೇಳಿ ಆತದ ನಿನ್ನ ಕತೆ"

"ಇಲ್ಲೆ ಕೇಶವಣ್ಣಾ, ಆನು ನಿನ್ನ ಕಡೇಯೇ. ಆದರೂ ಈ ವಿಷಯಲ್ಲಿ ರಜಾ ನಾವೂ ಆಲೋಚನೆ ಮಾಡೇಕಾತು ಹೇಳಿ ಕಂಡತ್ತು. ಹೀಂಗೆ ದುಡುಕ್ಕಿಲ್ಲಿ ಅದರ ತಲೆ ಬೋಳುಸುವ ನಿರ್ಧಾರ ಮಾಡ್ಲಾವುತ್ತಿಲ್ಲೆ ಹೇಳಿ ಕಂಡತ್ತು"

"ಇದಾ ಗೆಣಪ್ಪ, ಇದರಿಂದ ಮದಲೆ ನಮ್ಮ ಸಮಾಜಲ್ಲಿ ಬೇರೆ ಕ್ರಮ ಹೇಳಿ ಇದ್ದತ್ತೋ? ಇದು ತಲತಲಾಂತರಂದ ಬಂದ ಪದ್ಧತಿ. ಅದರ ಅಳುಶಲೆ ನಮಗೆಡಿಗೊ. ಅದರ ಅನುಸರಿಸೇಗಾದ್ದು ಬ್ರಾಹ್ಮಣರಾದ ನಮ್ಮ ಕರ್ತವ್ಯ ಅಲ್ಲದೋ? ಅದರನ್ನೇ ಹೇಳಿದ್ದು ಆನು. ಇದು ಆನು ಸೃಷ್ಟಿಸಿದ ಪದ್ಧತಿ ಅಲ್ಲ ಗೊಂತ್ತಾತೋ" ಸ್ವಲ್ಪ ಅಸಮಾಧಾನವೂ ಇತ್ತು ನುಡಿಯಲ್ಲಿ.

"ನಾವು ಈ ಸಂಗತಿ ಇಲ್ಲಿಗೇ ಬಿಡುವ ಕೇಶವಣ್ಣಾ. ನವಗೆಂತಕೆ ಇದೆಲ್ಲಾ? ಎಲ್ಲಾ ಅವೇ ನೋಡ್ಯೊಳ್ಳಿ. ಸುಮ್ಮನೇ ನಾವೆಂತಕೆ ಹೇಲಿಂಗೆ ಕೈ ಹಾಕಿ ಮೋರೆಗೆ ಮೆತ್ತಿಗೊಳ್ಳೇಕು?"

"ಅದಪ್ಪು ಗೆಣಪ್ಪ. ಎನಗೂ ಹಾಂಗೆ ಕಾಣುತ್ತು. ನಾವು ನಮ್ಮಷ್ಟಕ್ಕೆ ಇಪ್ಪೊ. ಮುಂದೆ ನೋಡುವೊ. ಎಂತೆಲ್ಲಾ ನಡೆತ್ತು ಹೇಳಿ".

"ಅವನ ಮಾತು ಕೇಳಿರೆ ಅದು ದಡ ಮುಟ್ಟುಗೊ ಹೇಳಿ ಕಾಣುತ್ತು. ರಘುರಾಮ ಕಲ್ತವ, ನಾಲ್ಕೂರು ತಿರುಗಿದವ, ಪ್ರಪಂಚ ಜ್ಞಾನ ಇದ್ದವ, ನವಗೆ ಊರು ಜಾತಿ ಬಿಟ್ಟರೆ ಇನ್ನೆಂತದು ಗೊಂತಿದ್ದು ಹೇಳು"

"ನೀನು ಹೇಳಿದ್ದು ಸರಿ ಗೆಣಪ್ಪ. ನಾವಿನ್ನು ಆ ಶುದ್ಧಿಗೆ ಹೋಪದು ಬೇಡ" ಕೇಶವಭಟ್ಟರೂ ಮಾತಿಗೆ ಮುಕ್ತಾಯ ಹೇಳಿದರು.

"ನಾವಿನ್ನು ಆರ ಮುಂದೆಯೂ ಎಂತದೂ ಹೇಳುದು ಬೇಡ. ಆರತಿ ಎತ್ತಿಸಿಗೊಂಬದೂ ಬೇಡ" ಎಂಬ ತೀರ್ಮಾನಕ್ಕೂ ಬಂದರು.

ರಘುರಾಮ ಮನೆಗೆ ಹೋದವನು ಸ್ನಾನ ಮಾಡಿ ಬಟ್ಟೆಬರೆ ಬದಲಾಯಿಸಿ ಕೊಂಡ. ಶಾರದೆ ಊಟಕ್ಕೆ ಸಿದ್ಧ ಮಾಡಿದ್ದಳು. ಊಟ ಮಾಡುವಾಗ. ಅವನ ತಂದೆ ಕೇಳಿದರು.

"ಮಾಣಿ ಏಳೆಂಟು ದಿನ ರಜೆ ಹಾಕಿ, ನೀನು ಕಾಶಿಗೆ ಹೋದ್ದು ಎಂತಕೆ?"

"ಆನು ಒಬ್ಬನೇ ಹೋದ್ದಲ್ಲ ಅಪ್ಪ, ಎನ್ನ ಒಟ್ಟಿಂಗೆ ಕಾವೇರಿ ಅತ್ತಿಗೆಯನ್ನೂ ಕರಕ್ಕೊಂಡು ಹೋಯಿಂದೆ. ಅದರ ಅಲ್ಲಿ ಆಸ್ಪತ್ರೆಲಿ ಟ್ರೈನಿಂಗಿಂಗೆ ಸೇರ್ಸಿಕ್ಕಿ ಬಯಿಂದೆ"

"ಎಂತಕೆ ಇಲ್ಲಿ ಮಂಗಳೂರು ಆಸ್ಪತ್ರೆಲಿ ಇತ್ತಿಲ್ಲೆಯೋ? ಅಷ್ಟು ದೂರ ಹೋಯೇಕಾತೊ?"

"ಮಂಗಳೂರು ಆಸ್ಪತ್ರೆಗೂ ಹೋಗಿ ಡಿ.ಎಂ.ಓ ವ ಭೇಟಿಯಾಗಿ ಎಲ್ಲಾ ವಿಚಾರ್ಸಿದ್ದೆ. ಅವನೇ ನಿಂಗೊ ಕಾಶಿಗೆ ಹೋದರೆ ಅಲ್ಲಿ ಕೆಲಸಕ್ಕು ಹೇಳಿ ಕಾಗದ ಕೊಟ್ಟು ಕಳುಸಿದ. ಅಲ್ಲಿ ನಮ್ಮೂರಿನ ಡಾಕ್ಟ್ರು ಒಬ್ಬ ಸಿಕ್ಕಿದ. ಅ°ವ ಆರ್.ಎಂ.ಓ ಆಗಿದ್ದ. ಅಲ್ಲಿ ಅತ್ತಿಗೆಗೆ ಕಲ್ತೊಂಡು ಇಪ್ಪಗಳೇ ಮುಂದೆ ಪ್ರೈವೇಟಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆ ಕಟ್ಟೊ ಅನುಕೂಲ ಇದ್ದು."

"ಹಾಂಗೊ. ಇಲ್ಲಿ ಎಂತೆಂತದೋ ಬೇಡಂಗಟೆಟ ಹೇಳ್ಕೊಂಡು ಇತ್ತಿದ್ದವು. ಅದಕ್ಕೆ ನಿನ್ನನ್ನೇ ವಿಚಾರ್ಸುವೋ ಹೇಳಿ ಕೇಳಿದ್ದು. ಬೇಜಾರ ಮಾಡೇಡ"

"ನಿಂಗೊ ಅವು ಹೇಳಿದ್ದಾರ ನಂಬಿದಿರೋ ಅಪ್ಪ?"

"ಇಲ್ಲೆ ಮಗಾ, ಎಂತಕೂ ಮಾಣಿ ಬಂದ ಮೇಲೆ ವಿಚಾರ್ಸುತ್ತೆ, ನಿನ್ನ ಮೇಗೆ ಭರವಸೆ ಎನಗಿದ್ದು. ಅಪ ಇಷ್ಟರವರೆಗೆ ಯಾವ ಕೆಟ್ಟ ಕೆಲಸವೂ ಮಾಡಿದ್ದ ಇಲ್ಲೆ. ನಿಂಗೊ ಬಂದ ದಾರಿಗೆ ಹೋಪಲಕ್ಕು ಹೇಳಿ ಕಳುಸಿದ್ದೆ."

"ಒಳ್ಳೇದಾತು ಅಪ್ಪ. ನಿಂಗೊ ಅವರ ಮಾತಿಂಗೆ ತಲೆ ಆಡಿಸಿದ್ದಿರಿಲ್ಲನೆ ಅಷ್ಟೇ ಸಾಕು"

ರಘುರಾಮನಿಗೆ ಹೆಚ್ಚಿನ ಮಾತು ಬೇಕಾಗಿರಲಿಲ್ಲ. ಪ್ರಯಾಣದ ಆಯಾಸವಿತ್ತು. ತನ್ನ ರೂಮಿಗೆ ಹೋಗಿ ಚಾಪೆ, ದಿಂಬಿಟ್ಟುಕೊಂಡು ಮಲಗಿ ನಿದ್ದೆ ಮಾಡಿದ. ಒಂದೆರಡು ತಾಸು ಸುಖ ನಿದ್ರೆಯಾಯಿತು. ಎದ್ದವನಿಗೆ ಶಾರದೆ ಬಿಸಿ ಬಿಸಿ ಕಾಫಿ ತಂದಿಟ್ಟಳು;

"ಅಕ್ಕ ಅಲ್ಲಿ ಒಂದೇ ಆವುತ್ತನ್ನೆ" ಶಾರದೆ ಮೆಲ್ಲನೆ ಕೇಳಿದಳು. ಅವಳು ಮಾವನಿಗೆ ಹೇಳಿದ ಸಮಾಚಾರಗಳನ್ನು ಚಾಚೂ ತಪ್ಪದೆ ಕೇಳಿಸಿಕೊಂಡಿದ್ದಳು.

"ಅಪ್ಪು ಎಂತ ಮಾಡುದು? ಅದು ಕಲಿಯದ್ದೆ ಬಾರೆ ಹೇಳಿ ಹಠ ಹಿಡುದುತ್ತು. ಎನಗೆ ಬೇರೆ ದಾರಿ ಇತ್ತಿಲ್ಲೆ."

"ಅದು ಕಲಿಯದ್ದೆ ಬಾರಲೂ ಬಾರ. ಸಣ್ಣದಿಪ್ಪಾಗಳೇ ಅದು ಹಠಮಾರಿ ಎಂಗಳ ಹಾಂಗಲ್ಲ."

"ಅಪ್ಪು ಶಾರದೆ, ಹಾಂಗಿಪ್ಪ ಹಠ ಇದ್ದರೇ ಮೇಲೆ ಬಪ್ಪಲಕ್ಕಷ್ಟೇ. ನೋಡು. ದೇವರು ಎತ್ತಿಸಿದರೆ ಅದು ಕಲ್ತಿಕ್ಕಿಯೇ ಬತ್ತೋ ಇಲ್ಲೆಯೋ ಹೇಳಿ" ರಘುರಾಮನಿಗೆ ಭರವಸೆ ಇತ್ತು.

"ಖಂಡಿತವಾಗಿಯೂ ಅದು ಕಲ್ತಿಕ್ಕೇ ಬಕ್ಕಷ್ಟೆ. ಎನಗೂ ನಂಬಿಕೆ ಇದ್ದು; ಆದರೆ ಎಷ್ಟು ಕಷ್ಟ ಪಡೇಕಾವುತ್ತೋ ಎಂತದೋ ಹೇಳಿ ಬೇಜಾರವೂ ಆವುತ್ತು. ಎಂಗಳೆಲ್ಲಾ ದಡಕ್ಕೆ ಮುಟ್ಟಿಸಿದ್ದು ಅದೇ. ಅದಕ್ಕೆ ಮಾಂತ್ರ ಯಾವ ಸುಖವೂ ಇಲ್ಲದ್ದಾತು. ದೇವರು ಅದಕ್ಕೆ ಹೇಳ್ಯೆಡೆಯದಷ್ಟು ಅನ್ಯಾಯ ಮಾಡಿದ" ಶಾರದೆಗೆ ಕಣ್ಣಿನಲ್ಲಿ ನೀರು ಬಂತು.

"ನೀನು ಕೂಗೇಡ ಶಾರದೆ. ಆನು ತಿಳುದ ಮಟ್ಟಿಂಗೆ ಅದೂ ಮುಂದಕ್ಕೆ ನಿಂಗಳಂದಲೂ ಹೆಚ್ಚು ಸುಖ ಪಡುಗು; ದೇವರು ಎಂತದೋ ಉದ್ದೇಶದಿಂದ ಅದರ ಬದುಕ್ಕು ಹಾಂಗೆ ಮಾಡಿದ್ದ. ದೇವರ ನಂಬಿದರೆ ನಾವು ನಿಶ್ಚಿಂತೆಲಿ ಇರೇಕು. ನಾವು ಎಂತ ಮಾಡ್ಳೆ ಸಾಧ್ಯವೋ ಅದರ ಮಾಡೇಕು!" ಚಿಕ್ಕ ಉಪದೇಶ ಕೊಟ್ಟ ಶಾರದೆಗೆ "ನಿಂಗೊ ಹೇಳಿದ್ದು ಸರಿ. ಹಾಂಗೇ ಕಾವೇರಿ ಅಕ್ಕಂಗೆ ಮುಂದೆ ಆದರೂ ಸುಖ ಸಿಕ್ಕಲಿ ಹೇಳಿ ಆನು ದೇವರ ಬೇಡ್ಕೋಳ್ತೆ"

"ಅದೆಲ್ಲಾ ಅಪ್ಪು ಶಾರದೆ, ಎಂಗೊ ಹೋದಿಪ್ಪಾಗ ಊರವೆಲ್ಲಾ ಬೇಡಂಗಟ್ಟಿ ಹೇಳುವಾಗ ನಿನಗೆ ಎನ್ನ ಮೇಗೆ ಕೋಪ ಅನುಮಾನ ಬಯಿಂದಿಲ್ಲೆಯೋ?

"ಎಂತಕೆ? ಎನಗೆ ನಿಂಗಳನ್ನೂ ಗೊಂತಿದ್ದು – ಎನ್ನ ಅಕ್ಕನನ್ನೂ ಗೊಂತಿದ್ದು. ಹಾಂಗಾಗಿ ಆರು ಹೇಳಿದ್ದನ್ನು ನಂಬಿದ್ದೂ ಇಲ್ಲೆ. ತಲೆ ಬೆಶಿ ಮಾಡಿದ್ದೂ ಇಲ್ಲೆ".

ಅವಳ ಮಾತು ಕೇಳಿ ರಘುರಾಮನಿಗೆ ಎದೆ ತುಂಬಿತು. ತನ್ನನ್ನು ಪೂರ್ತಿ ಅರ್ಥ ಮಾಡಿಕೊಂಡು ಬಾಳುತ್ತಿರುವ ಮಡದಿಯ ಮೇಲೆ ಅಭಿಮಾನ ಉಕ್ಕಿತು.

"ನಿಂಗಳ ಅಬ್ಬೆ ಮಾಂತ್ರ ಬೇಜಾರ ಮಾಡಿದವು. ಕೂಗ್ಯೊಂಡೂ ಇತ್ತಿದ್ದವು"

"ಎಂತಗೆ"

"ನಿಂಗಲ ಮೇಲೆ ಇಲ್ಲದ್ದ ಅಪವಾದವ ಹಾಕಿದ್ದವದಾ. ಅದರ ಕೇಳಿ ಅವಕ್ಕೆ ದುಃಖ ಬಂತು" ಎನ್ನ ಮಾಣಿ ಒಬ್ಬರ ಹತ್ರೆ ಛೀ ಹೇಳಿಸಿಕೊಂಡವ ಅಲ್ಲ. ಇವರ ಬಾಯಿಗೆ ಬಿದ್ದನ್ನೇ" ಹೇಳಿ ಅವಕ್ಕೆ ಸಂಕಟ ಆತು. "ಇವಂಗೆಂತಕೆ ಬೇಕಾತಪ್ಪ. ಕಾವೇರಿಯ ಕಾಶಿಗೆ ಕರಕ್ಕೊಂಡು ಹೋಪ ಜವಾಬ್ದಾರಿ? ಹೇಳಿಯೂ ಹೇಳಿದವು. ಅದರ ಕೇಳಿ ನಿಂಗಳ ಅಪ್ಪಂಗೆ ಕೋಪ ಬಂತು.

"ಅಲ್ಲಾ ಗಂಗೆ, ಅವಕ್ಕೆ ಬುದ್ಧಿ ಇಲ್ಲೆ ಹೇಳಿ ನಿನ್ನ ತಲೆಯೂ ತಿರುಗಿತ್ತೋ? ಅಪ್ಪಣ್ಣ ಭಾವಂಗೆ ಆಸರಗೆ ಬೇರೆ ಆರೂ ಇಲ್ಲೆ ಹೇಳಿ ನಿನಗೆ ಗೊಂತಿಲ್ಲೆಯೊ? ಅವಂಗಿದ್ದದು ನಾಲ್ಕು ಸೂರುಗೂ ಮಾಂತ್ರ ಅಲ್ಲದೋ? ಇವು ಬಾಯಿ ತೊರಿಕ್ಕೆಗೆ ಬೇಡಂಗಟ್ಟೆ ಹೇಳಿದವು. ಅದರ ನೀನು ನಂಬುತ್ತಿಯೋ ಮಾಣಿಯ ನೀನು ಹೆತ್ತು ಸಾಂಕಿದೋಳು. ಅವನ ಗುಣ ನಡತೆ ನಿನಗೆ ಗೊಂತಿಲ್ಲೆಯೋ?

"ಮಾಣಿಯ ಗುಣ ಎನಗೆ ಗೊಂತಿದ್ದಪ್ಪ; ಇಷ್ಟರವರೆಗೆ ಅವಂಗೆ ಹೆಸರು ಮಡುಗಿದವು ಆರೂ ಇಲ್ಲೆ"

"ಹೂಂ ಅಷ್ಟು ಗೊಂತಿದ್ದರೆ ಸಾಕು ನಿನಗೆ. ಸುಮ್ಮನೇ ರಾಗೆ ಎಳೆಡ. ಅವ ಬಂದ ಮತ್ತೆ ಎಲ್ಲಾ ಸಂಗತಿಗಳ ಹೇಳುಗು. ಈಗ ರಜಾ ಬಾಯಿ ಮುಚ್ಚಿ ಕೂರು" ಹೇಳಿ ಮಾವ ಬೈದವು. ಮತ್ತೆ ಅತ್ತ್ಯೋರಿಂಗೂ ಅಪ್ಪು ಹೇಳಿ ಕಂಡತ್ತಾಯಿಕ್ಕು. "ಎನ್ನ ಮಗನ ಮೇಗೆ ಇಲ್ಲದ್ದ ಅಪವಾದ ಹೇಳಿದವರ ಬಾಯಿಗೆ ಮಣ್ಣು ಬೀಳಲಿ ಹೇಳಿ ಶಾಪವೂ ಕೊಟ್ಟವು."

"ಅದೆಲ್ಲಾ ಮಾಮೂಲು ಶಾರದೆ. ರಜಾ ದಿನ ಎಂತಾರೂ ಬೊಗುಳೆಂಡು ಇಕ್ಕು. ಬಾಯಿ ಬಚ್ಚುವಾಗ ನಿಲ್ಲುಸುಗು. ಹಾಂಗಿಪ್ಪಾಗ ನಾವು ಅದಕ್ಕೆಲ್ಲಾ ಕೆಮಿಕೊಡ್ಳಾಗ. ನಾವು ಮಾಡೇಕಾದ ಕೆಲಸವ ಮಾಡ್ಕೊಂಡು ಹೋಯೇಕು ಅಷ್ಟೆ;

"ಆನು ಅದರೆಲ್ಲಾ ಕೆಮಿಗೆ ಹಾಯ್ಕೊಂಡಿದ್ದೇ ಇಲ್ಲೆ" ನುಡಿದಳು ಶಾರದೆ.

"ಎನ್ನ ಶಾರದೆ ಎನ್ನ ಅಬ್ಬೆಂದಲೂ ಗಟ್ಟಿಗಿತ್ತಿ" ಅಲ್ಲದೋ?

"ನಿಂಗೊ ಹಾಂಗೆಲ್ಲಾ ಹೊಗಳಿ ಎನ್ನ ಅಟ್ಟಕ್ಕೇರ್ಸೆಡಿ. ಆತು ಆ ನಿನ್ನು ಒಳ ಹೋವುತ್ತೆ. ಅತ್ತೆ ನೆಟ್ಟಿಕಾಯಿ ಎಲ್ಲಾ ಕೊಯಿದು ಮಡುಗಿಕ್ಕು. ಆನು ಇರುಳಾಣ ಅಡಿಗ್ಗೆ ತಯಾರು ಮಾಡುತ್ತೆ ನಿಂಗೊಗೆ ಕಾಫಿಯೋ ಚಾಯಾವೋ ಬೇಕೋ?

"ನೀನು ಮಾಡಿಕೊಟ್ಟರೆ ಕುಡಿವೆ"

"ಹಾಂಗಾರೆ ನಿಂಗೊಗೆಲ್ಲಾ ಆಸರಿಂಗೆ ಮಾಡಿಕೊಟ್ಟಿಕ್ಕಿಯೇ ಆನು ಅಡಿಗೆ ಸುರು ಮಾಡುತ್ತೆ"

ಕಾವೇರಿ ಕಾಶಿಯಲ್ಲ ಒಬ್ಬಂಟಿಗಳಾದಳು; ಮನೆಯ ವಾತಾವರಣದಿಂದ ಹೊರಬಿದ್ದಾಗಿತ್ತು. ಇನ್ನು ತಾನು ಮುಂದೇನು ಮಾಡಬೇಕು ಎನ್ನುವ ಯೋಚನೆ ಯಾಯಿತು. ಮೊದಲು ತಾನು ಕೆಲಸ ಕಲಿಯಬೇಕು, ಜೊತೆಯಲ್ಲಿ ಭಾಷೆಯನ್ನೂ ಕಲಿಯಬೇಕು, ತಾನೆಂದೂ ಕಂಡರಿಯದ ಊರು, ಜನ, ಭಾಷೆ, ಜೊತೆಗೆ ಎಂದೂ ಮಾಡದ್ದ ಕೆಲಸ–ಮುಂದೆ ಮುಂದುವರಿಸಬೇಕಾದ ವಿದ್ಯಾಭ್ಯಾಸ–ಎಲ್ಲವನ್ನೂ ನೆನಸಿ, ತಲೆಗೆ ಬೆಂಕಿ ಹಚ್ಚಿದ ಹಾಗೆ ಆಯಿತು ಆದರೆ ತಾನು ಎಲ್ಲವನ್ನೂ ಸಾಧಿಸುತ್ತೇನೆ ಎಂದು ಛಲ ತೊಟ್ಟವಳು. ಹೆದರಿದರೆ ಹೇಗೆ ಎಂದು ತನ್ನನ್ನೇ ಸಮಾಧಾನ ಮಾಡಿಕೊಂಡಳು. ರಾತ್ರಿಗಿಷ್ಟು ಅನ್ನ ಮಾಡಿ ಮಧ್ಯಾಹ್ನದ ಪಲ್ಯದೊಡನೆ ಊಟ ಮುಗಿಸಿದಳು. ಹೊಟ್ಟೆ ತುಂಬಾ ನೀರು ಕುಡಿದು ರಗ್ಗು ಹಾಸಿ ಮಲಗಿ ನಿದ್ರೆ ಹೋದಳು.

ಮರುದಿನ ಬೆಳಿಗ್ಗೆ 6 ಗಂಟೆಗೆ ಆಸ್ಪತ್ರೆ ಕಡೆಗೆ ಹೋದಳು. ಅಲ್ಲಿ ಇತರ ದಾಯಿಗಳು ಮಾಡುವ ಕೆಲಸ ಕಾರ್ಯಗಳನ್ನು ನೋಡಿದಳು – ವಾರ್ಡಿನಲ್ಲಿ ಬಿದ್ದ ಕಸ ಗುಡಿಸಿ, ಒರೆಸುವುದಕ್ಕೆ ಯಾವ ಭಾಷೆಯೂ ಬೇಡವೆಂದು ಕಸಬರಿಕೆ ತೆಗೆದುಕೊಂಡು ಕಸ ಗುಡಿಸಿದಳು. ಒಂದು ಬಾಲ್ದಿ ತೆಗೆದುಕೊಂಡು ನೀರು ತೆಗೆದುಕೊಂಡಳು. ಇದನ್ನು ನೋಡಿದ ಇನ್ನೊಬ್ಬಳು ದಾಯಿ ಬಂದು 'ಡೆಟ್ಟಾಲ್' ನೀರಿಗೆ ಹಾಕಿದಳು. ಕಾವೇರಿಗೆ ಭಾಷೆ ಬರುವುದಿಲ್ಲವೆಂದೂ, ಅವಳು ನಿಮ್ಮೊಡನೆ ಕೆಲಸ ಮಾಡಲು ಬಂದಿರುವಳೆಂದೂ, ನೀವೆಲ್ಲಾ ಅವಳಿಗೆ ಸಹಾಯ ಮಾಡಬೇಕೆಂದೂ ಆರ್.ಎಮ್.ಓ ಎಲ್ಲಾ ದಾಯಿಗಳಿಗೆ, ನರ್ಸ್‌ಗಳಿಗೆ ತಿಳಿಸಿದ್ದ ಕಾರಣ – ಒಬ್ಬೊಬ್ಬರು ಒಂದೊಂದು ಸಹಾಯ ಮಾಡಿದ್ದರು. ನೆಲ ಒರಸಿದ ಮೇಲೆ ದಾಯಿ ಒಬ್ಬಳು ರೋಗಿಯ ಹಾಸಿಗೆ ಬಟ್ಟೆ ಬದಲಾಯಿಸುವುದನ್ನು ಹೇಳಿದಳು, ಮತ್ತೊಬ್ಬಳು ಮಲಮೂತ್ರ ವಿಸರ್ಜನೆಯಾದ 'ಬೆಡ್‌ಪಾನ್' ಗಳನ್ನು ಪಾಯಖಾನೆಗೆ ಒಯ್ದು, ಹೇಗೆ ಸ್ವಚ್ಛ ಮಾಡಬೇಕೆಂದೂ ತೋರಿಸಿದಳು. ಕಾವೇರಿ ತಾನುಟ್ಟ ಬಟ್ಟೆಯಲ್ಲಿಯೇ ವಾರ್ಡಿಗೆ ಬಂದದು ತಿಳಿದು 'ಕಪಡಾ' ಎಂದು ತಾನುಟ್ಟ ಬಟ್ಟೆಯನ್ನು ತೋರಿಸಿದಳು, ಕಾವೇರಿ ತನ್ನ ಎರಡೂ ಕೈಗಳನ್ನು ತಿರುಗಿಸಿ ಇಲ್ಲ ಎಂಬ ಸಂಜ್ಞೆ ಮಾಡಿದಳು. ಅವಳು 'ಅಚ್ಛಾ' ಎಂದು ಒಬ್ಬರು ನರ್ಸ್ ಹತ್ತಿರ ಹೋಗಿ ಬೀಗದ ಕೈ ತೆಗೆದುಕೊಂಡು ಎರಡು ಜೊತೆ ಸೀರೆ, ರವಕೆಗಳನ್ನು ತೆಗೆದು ತಂದುಕೊಟ್ಟಳು. ಬಿಳಿ ಮೈಯ್ಯ, ನೀಲಿ ದಡಿಯ ದೊರಗು ಸೀರೆಗಳು ನೀಲಿ ವರ್ಣದ ರವಕೆಗಳು, ಇಷ್ಟಾಗುವಾಗ ಮಧ್ಯಾಹ್ನ ಗಂಟೆ ಒಂದಾಗಿತ್ತು. ಕಾವೇರಿಯ ಆ ದಿನದ ಡ್ಯೂಟಿ ಮುಗಿದು ಹೋಗಿತ್ತು.

ಕಾವೇರಿಗೆ ನೆನಸಿದಷ್ಟು ಆಸ್ಪತ್ರೆಯ ಕೆಲಸ ಕಷ್ಟವಾಗಲಿಲ್ಲ. ಹೇಗೂ ಈ ಕೆಲಸಗಳನ್ನು ತಾನು ಕಲಿಯಬಹುದು. ಭಾಷೆಯ ತೊಡಕನ್ನು ನಿವಾರಿಸಿಕೊಳ್ಳಬೇಕು.

ಬಲು ಬೇಗ ಸಂಭಾಷಣೆಗಳನ್ನು ಕಲಿತುಕೊಳ್ಳಬೇಕು ಎಂದು ನಿಶ್ಚೈಸಿದಳು; ಮಧ್ಯಾಹ್ನ ಸ್ನಾನ ಮಾಡಿ, ಗಂಜಿ, ಈರುಳ್ಳಿ ಗೊಜ್ಜು ಮಾಡಿ ಊಟ ಮುಗಿಸಿದಳು. ಮನೆ ಗುಡಿಸಿ ಒರಸಿಕೊಂಡಳು; ಇನ್ನೇನು ಒಂದಿಷ್ಟು ಅಡ್ಡಾಗಬೇಕು ಎನ್ನುವಷ್ಟರಲ್ಲಿ ಆಸ್ಪತ್ರೆಯ ಜವಾನನೊಬ್ಬ ಬಂದು ಕಟ್ಟಿಂದ. ಬಾಗಿಲು ಬಡಿದ "ಕಾವೇರಿ ಬಾಗಿಲು ತೆರೆದು ನೋಡಿದಾಗ ಅವನ ಕೈಯಲ್ಲಿ ದೊಡ್ಡದೊಂದು ಕಟ್ಟು ಇತ್ತು ಏನು ಎಂದು ಕೈ ಸಂಜ್ಞೆ ಮಾಡಿದಳು.

"ಡಾಕ್ಟರ್ ಸಾಬ್ ಆಪಕೋ ದೇ ವೋ ಬೋಲೆ" ಎಂದ. ಕಾವೇರಿಗೆ ಏನೊಂದು ಅರ್ಥವಾಗಲಿಲ್ಲ. ಡಾಕ್ಟ್ರ ಅಂದದ್ದೊಂದು ಮಾತ್ರ ತಿಳಿಯಿತು. ಕಟ್ಟು ತೆಗೆದುಕೊಂಡ ಕೂಡಲೇ ಜವಾನ ಹೋದ. ಕಾವೇರಿ ಬಿಚ್ಚಿ ನೋಡಿದಳು. ಅದರಲ್ಲಿ ಎಂಟನೇ ತರಗತಿಗೆ ಬೇಕಾದ ಪುಸ್ತಕಗಳು ನೋಟು ಬುಕ್ಕುಗಳು, ಪೆನ್ಸಿಲು, ರಬ್ಬರು ಇತ್ಯಾದಿಗಳಿದ್ದವು. ಕಾವೇರಿಗೆ ಅರ್ಥವಾಯಿತು. ತನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಡಾಕ್ಟರು ಕೇಶವ ಖರೀದಿಸಿದ ಪುಸ್ತಕಗಳು; ಎಲ್ಲವೂ ಹಿಂದಿ ಭಾಷೆಯಲ್ಲಿತ್ತು. ಒಂದು ಮಾತ್ರ ಇಂಗ್ಲೀಷ್ ಪುಸ್ತಕ – ತನಗಿವೆಲ್ಲಾ ಹೊಸ ಭಾಷೆಗಳು. ಭಾಷೆಯೇ ಗೊತ್ತಿಲ್ಲದ ಮೇಲೆ ತಾನು ಇವುಗಳನ್ನು ಕಲಿಯುವುದಾದರೂ ಹೇಗೆ? ಕಾವೇರಿಯ ತಲೆ ಬಿಸಿಯಾಯಿತು. ಈ ಕುರಿತು ಡಾಕ್ಟರನ್ನೇ ಸಲಹೆ ಕೇಳಬೇಕು' ಎಂದು ಅವರು ರೂಮಿಗೆ ಬರುವ ಸಮಯ ಕಾದು ಕುಳಿತಳು; ಡಾಕ್ಟ್ರ 3 ಗಂಟೆಗೆ ರೂಮಿಗೆ ಬಂದರು. "ಎಂತ ಕಾವೇರಿ ಇಲ್ಲಿ ನಿಂದದು? ನಿನಗೆ ಪರೀಕ್ಷೆ ಕಟ್ಟೆ ಬೇಕಾದ ಪುಸ್ತಕಂಗಳ ಕಳುಸಿ ಕೊಟ್ಟಿದೆ ಸಿಕ್ಕಿತ್ತಿಲ್ಲೆಯೋ 'ಅದರ ಕೇಳ್ಳೆ ಆನು ಬಂದದು. ಎನಗೆ ಭಾಷೆಯ ಗಂಧ ಗಾಳಿಯೂ ಇಲ್ಲೆ. ಅಷ್ಟು ಪುಸ್ತಕಂಗಳ ಓದಿ ಆನು ಪರೀಕ್ಷೆ ಕಟ್ಳೆ ಇದ್ದೊ?

"ನಿನಗೆ ಟ್ಯೂಷನ್ ಕೊಟ್ಟೆ ಒಬ್ಬ ಮಾಸ್ಟ್ರಂಗೂ ಹೇಳಿದ್ದೆ. ಅವ ನಾಳಂಗೆ ಹೊತ್ತೋಪಾಗ ಬಕ್ಕು" ಅವು ಒಳ್ಳೆ ಮಾಸ್ಟ್ರ"

"ಎನಗೆ ಸದ್ಯಕ್ಕೆ ಈ ಪುಸ್ತಕಂಗಳ ಓದಲೆ ಎಡಿಯ" – ಮದಲು ಹಿಂದಿ ಅಕ್ಷರವನ್ನೂ ಭಾಷೆಯನ್ನೂ ಕಲ್ತೋಳ್ತೆ"

"ಹೋ ಅದೆನ್ನ ತಲಗೆ ಹೊಕ್ಕಿದ್ದೆ ಇಲ್ಲೆ. ಹೇಂಗೆ ಕಲಿವೆ;

'ದಿನಕ್ಕೆ ಮೂರು ನಾಲ್ಕು ಅಕ್ಷರವ ಕಲಿತ್ತೆ, ಮತ್ತೆ ಶಬ್ದಂಗಳ ಕಲಿತ್ತೆ. ಅದಾದ ಮತ್ತೆ ಒಂದನೇದು, ಎರಡನೇದು, ಮೂರನೇದು ಪುಸ್ತಕ ತರ್ಸಿಕೊಡಿ. ಅದರ ಕಲ್ತಿರೆ ಎನಗೆ ಮುಂದೆ ಓದಲೂ ಬರವಲೂ ಅಕ್ಕು. ಭಾಷೆ ಹೆಂಗಾರೂ ರೋಗಿಗಳ ಹತ್ರೆ ದಾಯಿಗಳ ಹತ್ರೆ ಮಾತಾಡಿ ಕಲಿವಲಕ್ಕು."

“ಎನಗೆ ಅದು ತಲಗೇ ಬಯಿಂದಿಲ್ಲೆ, ನೀನು ಹೇಳುದು ಸರಿ. ಹಾಂಗಾರೆ ನಾಳಂಗೆ ನಿನಗೆ ಒಂದನೇ ಕ್ಲಾಸಿನ ಪುಸ್ತಕವನ್ನೂ ಸ್ಲೇಟನ್ನೂ ತಂದು ಕೊಡುತ್ತೆ ಆತೊ”

“ನಾಳಂಗೆ ಎನಗೆ ಪುಸ್ತಕ ಬೇಡ. ಮದಾಲು ಆನು ಅಕ್ಷರಂಗಳ ಕಲ್ತೋಳ್ತೆ. ಅದೇ ಒಂದು ತಿಂಗಳಕ್ಕು. ಮತ್ತೆ ಪುಸ್ತಕ ಹಿಡುದರಾತು.”

“ಅದಪ್ಪು ಕಾವೇರಿ– ನಿನ್ನ ತಲೆ ಓಡಿದಷ್ಟು ಎನ್ನ ತಲೆ ಓಡಿದ್ದಿಲ್ಲೆ ಅಲ್ಲದೋ?

“ಹಾಂಗಾರೆ ನಾಳೆಂದ ಮಾಷ್ಟ್ರಂಗೆ ಈ ವಿಷಯ ತಿಳುಶಿಕ್ಕಿ”

“ಅಕ್ಷರ ಕಲಿವಲೆ ಮಾಷ್ಟ್ರಂತಕೆ – ಆನೇ ನಿನಗೆ ದಿನಕ್ಕೆ ನಾಲ್ಕು ನಾಲ್ಕು ಅಕ್ಷರವ ಬರದು ಕೊಟ್ಟರೆ ಆಗದೋ”

“ಆಗದ್ದಿಲ್ಲೆ, ಆದರೆ ನಿಂಗೊಗೆ ಎಂತಕೆ ತೊಂದರೆ ಹೇಳಿ” ನಿಂಗಳ ಕೆಲಸವೇ ಬೇಕಾದಷ್ಟಿದ್ದು, ಅದರ ಮಧ್ಯೆ ಎನ್ನ ಕಿರಿಕಿರಿ ಎಂತಕೆ ಹೇಳಿ” ಕಾವೇರಿ ಸಂಕೋಚದಿಂದ ಹೇಳಿದಳು.

“ಕಾವೇರಿ, ಎನಗೆಂಥಾ ಅಂಥಾ ಕೆಲಸ ಇದ್ದು? ರಜಾ ಆಸ್ಪತ್ರೆಯ ಮೇಲ್ತನಿಖೆ ನೋಡ್ಯಂಬದು, ಕೆಲವು ಕಾಗದ ಪತ್ರಂಗಳ ಜೋಪಾನ ಮಾಡುದು, ಅರ್ಜೆಂಟಾದರೆ ರೋಗಿಗಳ ಸೂಕ್ತ ಚಿಕಿತ್ಸೆ ಕೊಡೇಕು ಅಷ್ಟೆ. ಎಷ್ಟೋ ಸರ್ತಿ ಸುಮ್ಮನೆ ಕೂದೊಂಡು ಬೇಜಾರು ಆವುತ್ತು; ಆನೇ ಅಕ್ಷರಂಗಳ ಹೇಳಿಕೊಡುವೆ. ನಿನ್ನ ಸ್ಲೇಟಲ್ಲಿ ಒಂದು ಹೋಡೇಲಿ ಇಂಗ್ಲೀಷು ಬರದು ಮಡಗುತ್ತೆ. ನೀನು ತಿದ್ದಿಗೊ”

“ಎನಗೆ ತಿದ್ದೇಕು ಹೇಳಿ ಇಲ್ಲೆ ಡಾಕ್ಟ್ರೆ. ನಿಂಗೊ ಬರದ್ದರ ಕೆಳವೇ ಆನು ಮೂರು ನಾಲ್ಕು ಸರ್ತಿ ಬರತ್ತೆ. ಅಂಬಾಗ ಬಕ್ಕು ಎನಗೆ. ಹೇಂಗೂ ಆನು ನಾಲ್ಕನೇ ಕ್ಲಾಸಿನವರೆಗೆ ಕಲ್ತಿದೆನೇ” “ಅಪ್ಪಲ್ಲದೋ? ಹಾಂಗೇ ಮಾಡು, ಬೇಗನೇ ಕಲ್ತು ಮುಗುಶಲಕ್ಕು”

“ಇದರ ಕೇಳ್ಳೆ ಹೇಳ್ಳಯೇ ಆನು ನಿಂಗೊ ಬಪ್ಪದರ ಕಾದಂಡು ನಿಂದದು ನಿಂಗೊಗೆ ಉಪದ್ರ ಆತೋ ಎಂತದೊ?”

“ಹಾಂಗೆನಿಲ್ಲೆ ಕಾವೇರಿ, ನಿನಗೇ ತೊಂದರೆ ಆದಿಕ್ಕು ಅಷ್ಟೆ. ನೀನು ದಿನಾ ಅಕ್ಷರಂಗಳ ಕಲ್ತು ಮಡುಗು. ಹೊತ್ತೋಪಾಗ ಐದು ಗಂಟೆಂದ ಮತ್ತೆ ಎನಗೆ

ಪುರುಸೊತ್ತು ಇರುತ್ತು. ನೀನು ಹಿಂದಾಣ ಅಕ್ಷರಂಗಳ ಬರದು ತೋರಿಸಿದರೆ ಆನು ಮುಂದಾಣದ್ದರ ಬರದು ಕೊಡುವೆ ಆತೊ?"

"ಹಿಂದಾಣದ್ದರ ಕಲಿಯದಿದ್ದರೆ–ಚಡಿ ಇದ್ದೊ?" ಕಾವೇರಿ ಮೆಲ್ಲ ಕೆಣಕಿದಳು.

"ಅಬ್ಬಾ ನೀನು ಜೋರಿದ್ದೆ. ಕಲಿಯದಿದ್ದರೆ ಚಡಿಯೂ ಇದ್ದು" ನಸುನಕ್ಕರು ಡಾಕ್ಟರು ಕೇಶವ. ಕಾವೇರಿ ಬುದ್ಧಿವಂತಳೆಂದೂ ಅವರಿಗೆ ಅರ್ಥವಾಯಿತು. ಅವಳ ವಿನೋದವೂ ಅವರಿಗೆ ಇಷ್ಟವಾಯಿತು.

ಕಾವೇರಿಯ ದಿನಚರಿ ಎಂದಿನಂತೆ ನಡೆದಿತ್ತು. ಸಮಯ ದೊರೆತಾಗಲೆಲ್ಲಾ, ಜೊತೆಯಲ್ಲಿದ್ದ ಆಯಾಗಳೊಡನೆ ಬೇರೆ ಬೇರೆ ವಸ್ತುಗಳನ್ನು ತೋರಿಸಿ 'ಯೆ ಕ್ಯಾ ಓ ಕ್ಯಾ' ಎಂದು ವಿಚಾರಿಸಲು ತೊಡಗಿದಳು. ಹಿಂದಿಯಲ್ಲದೆ ಬೇರೆ ಭಾಷೆಗಳೇ ಇಲ್ಲದ್ದರಿಂದ ರೋಗಿಗಳೊಡನೆ, ದಾಯಿಗಳೊಡನೆ, ನರ್ಸ್‌ಗಳೊಡನೆ, ಅರ್ಧಂಬರ್ಧ ಹಿಂದಿ ಮಾತುಗಳನ್ನು ತಿಂಗಳೊಳಗೆ ಕಲಿತುಕೊಂಡಳು; ಜೊತೆ ದಾಯಿಯೊಡನೆ ಹೊರಗೆ ಹೋಗಿ ತನಗೆ ಬೇಕಾದ ತರಕಾರಿ ಸಾಮಾನುಗಳನ್ನೂ ತರಲು ಕಲಿತಳು. ಎಲ್ಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ಮುಗಿಸಿ, ಡಾಕ್ಟರುಗಳ, ನರ್ಸ್‌ಗಳ ಆಜ್ಞೆಗಳನ್ನು ವಿಧೇಯವಾಗಿ ನೆರವೇರಿಸುತ್ತಿದ್ದುದರಿಂದ ಬಲು ಬೇಗನೇ ಆಸ್ಪತ್ರೆಯಲ್ಲಿ ಅಚ್ಚುಮೆಚ್ಚಿನವಳಾದಳು.

ಡಾಕ್ಟರ್ ಕೇಶವರಿಗಂತೂ ಕಾವೇರಿಯ ಸ್ಮರಣಶಕ್ತಿ ಕುಶಾಗ್ರತೆಗೆ ದಂಗಾಗಿ ಹೋಗಿದ್ದರು. ಬಲುಬೇಗನೇ ಅವಳ ಅಕ್ಷರ ಕಲಿಯುವಿಕೆಯು ಮುಗಿದು ಹೋಗಿತ್ತು. ತಿಂಗಳೊಳಗೆ ಒತ್ತಾಕ್ಷರ. ದೀರ್ಘಾಕ್ಷರ ಎಲ್ಲವನ್ನೂ ಕಲಿತಳು.

"ಇನ್ನು ಒಂದನೇ ಕ್ಲಾಸಿನ ಪುಸ್ತಕ ಹಿಡಿವದೊ" ಕೇಳಿದರು ಡಾಕ್ಟ್ರು.

"ನಿಂಗೊ ಎರಡು ಪುಸ್ತಕ ತನ್ನಿ. ಒಂದನೇದು ಎರಡನೇಯದ್ದೂ ಈ ತಿಂಗಳು ಎರಡೂ ಮುಗುಶುತ್ತೆ."

"ಆತು ಇಂದು ಕಸ್ತಲಪ್ಪಾಗ ತರ್ಸಿ ಮಡುಗುತ್ತೆ"

"ನಿಂಗೋ ಎನಗೆ ಗೊಂತಿಲ್ಲದ ಶಬ್ದಂಗಳ ಕೆಳಂಗೆ ಕನ್ನಡಲ್ಲಿ ಬರದು ಮಡುಗಿ – ಆನು ಅದರ ನೋಡಿಕೊಳ್ತೊಂಬೆ"

"ಅಂಬಾಗ ಎನ್ನ ಮಾಷ್ಟ್ರ ಕೆಲಸವೂ ಹೋತೋ" ತಮಾಶೆ ಮಾಡಿದರು ಡಾಕ್ಟ್ರು.

"ಹಾಂಗಲ್ಲ ಆನು ನಿಂಗೊಗೆ ಹೆಚ್ಚು ತೊಂದರೆ ಕೊಡುದು ಎಂತಕೆ ಹೇಳಿ ಕಂಡತ್ತು ಅದಕ್ಕೆ"

"ಇದಲ್ಲಿ ತೊಂದರೆ ಎಂತದೂ ಇಲ್ಲೆ ಕಾವೇರಿ. ಎನಗೆ ಸಂತೋಷವೂ ಖುಷಿಯೂ ಆವುತ್ತು. ಒಂದು ನೀನು ನಮ್ಮೂರಿಂದ ಬಯಿಂದೆ, ಎನ್ನ ಜಾತಿದೇ ಹೇಳುವ ಸಂತೋಷ. ಇನ್ನೊಂದು ನಮ್ಮ ಭಾಷೆಯ ಮಾತಾಡದ್ದೆ ಹತ್ತು ವರ್ಷ ಆತು. ನಿನ್ನ ಹತ್ರಾದರೂ ಮಾತಾಡ್ಲೆ ಆವುತ್ತನ್ನೆ. ಹೇಳಿ, ನಿನ್ನ ಚುರುಕುತನ ನೋಡಿ, ನಿನಗೆ ಹೇಳಿಕೊಡ್ಲೆ ಉತ್ಸಾಹವೂ ಆವುತ್ತು. ಹೊತ್ತೂ ಹೋವುತ್ತು."

"ಹಾಂಗಾರೆ ಎನಗೆ ನಿಂಗಳೇ ಹೇಳಿ ಕೊಡಿ ಎನಗೂ ಆರೋ ಒಬ್ಬ ಎನ್ನ ವಿಚಾರ್ಸಲೆ ಇದ್ದವು ಹೇಳಿ ಆತು."

"ಹಾಂಗಾರೆ ಒಂದು ಮಾಡು. ನಾಳೆಂದ ನೀನು ಎನ್ನ ವಿಚಾರ್ಸಿಗೊ. ಆನು ನಿನ್ನ ವಿಚಾರ್ಸುತ್ತೆ" ಡಾಕ್ಟರು ಹೇಳಿದ್ದು ಏನು ಎಂದು ಕಾವೇರಿಗೆ ಅರ್ಥವಾಗಲಿಲ್ಲ.

"ನಿಂಗೊ ಹೇಳಿದ್ದು ಎಂತದು ಹೇಳಿ ಎನಗೆ ಗೊಂತಾಯದಿಲ್ಲೆ."

"ಹೇಳುತ್ತೆ ಕೇಳು. ಎನಗೆ ಇಲ್ಯಾಣ ಅಡಿಗೆ ಊಟ ಸೇರುತ್ತಿಲ್ಲೆ. ಎನ್ನ ಹತ್ರೆ ಅಡಿಗ್ಗೆ ಬೇಕಾದ ಎಲ್ಲಾ ಸಾಮಾನು ಸರಂಜಾಮು ಇದ್ದರೂ ಬೇಶಿ ಉಂಬಲೆ ಉದಾಸೀನ ಆವುತ್ತು. ಅದಕ್ಕೆ ಹೆರಾಂದ ಊಟ ತರುಸುತ್ತೆ. ಎಷ್ಟೋ ಸರ್ತಿ ಉಣ್ಣದ್ದೆಯೂ ಮನುಗುತ್ತೆ"

"ಅರ್ಥ ಆತು ಎನಗೆ, ಆನು ಅಡಿಗೆ ಮಾಡುವಾಗ ರಜಾ ಹೆಚ್ಚು ಮಾಡುತ್ತೆ. ನಿಂಗೊಗೂ ಆವುತ್ತು. ಎಷ್ಟೋ ಸರ್ತಿ ನಿಂಗಳ ರೂಮಿನ ಎದುರು ಊಟದ ಡಬ್ಬಿ ಚೆಲ್ಲೊಂಡು ಇತ್ತು. ಆನೇ ಕೇಳೇಕು ಹೇಳಿ ಮಾಡಿತ್ತಿದ್ದೆ."

"ಅಪ್ಪು ಕಾವೇರಿ, ಒಂದೊಂದಾರಿ ಎನಗೆ ಉಣ್ಣೇಕು ಹೇಳಿಯೇ ಕಾಣುತ್ತಿಲ್ಲೆ. ಊರ ನೆಂಪಾವುತ್ತು" ಖಿನ್ನತೆ ಇತ್ತು ಅವರ ಮಾತಿನಲ್ಲಿ

"ನಿಂಗೊ ಇಲ್ಲೆಗೆ ಬಂದ ಮೇಲೆ ಊರಿಂಗೆ ಹೋಯಿದೇ ಇಲ್ಲಿರೋ?"

"ಇಲ್ಲೆ ಕಾವೇರಿ, ಇತ್ಲಾಗಿ ಬಂದು ಹನ್ನೆರಡು ವರ್ಷ ಆತು, ಅಬ್ಬೆಯ, ಅಪ್ಪನ ನೆಂಪಾವುತ್ತು"

"ಮತ್ತೆ ಹೋಗಿ ಬಪ್ಪಲಾವುತಿತ್ತಿಲ್ಲೆಯೋ"

"ಆನೂ ನಿನ್ನ ಹಾಂಗೆ ಹಠಮಾರಿ, ಅದಕ್ಕೆ ಹಠಲ್ಲಿ ಹೋಯಿದಿಲ್ಲೆ."

ಇನ್ನೊಮ್ಮೆ ವಿಷದವಾಗಿ ವಿಷಯ ತಿಳಿದುಕೊಂಡರಾಯಿತು" ಎಂದು ಕಾವೇರಿ ಮಾತನ್ನು ಅಲ್ಲಿಗೇ ಮೊಟಕುಗೊಳಿಸಿದಳು.

"ಹಾಂಗಾರೆ ನಾಳೆಂದ ಆನು ನಿಂಗೊಗೂ ಅಡಿಗೆ ಮಾಡಿ ಕಳುಸುತ್ತೆ ಆತೊ"

"ನೀನೂ ಮಾಡಿ ಕಳುಸೇಡ. ಎನ್ನ ಮನೇಲಿಯೇ ಅಡಿಗೆ ಮಾಡಿ, ನಿನ್ನ ಮನೆಗೆ ತೆಕ್ಕೊಂಡು ಹೋಗು."

"ಆತು ಹಾಂಗೇ ಮಾಡುತ್ತೆ. ನಾಳೆಂದ ನಿಂಗೊ ಊಟ ತರುಸುದು ಬೇಡ" ಎಂದು ಹೇಳಿ ಕಾವೇರಿ ತನ್ನ ಕೋಣೆಗೆ ಬಂದಳು; ತಾನು ಒಬ್ಬಳೇ ಇರುವ ಕಾರಣ ಕಾವೇರಿಗೆ ಅಡಿಗೆ ಮಾಡಲು ವಿಶೇಷ ಆಸ್ತೆ ಎಂದಿರಲಿಲ್ಲ. ಯಾವುದನ್ನೋ ಬೇಯಿಸಿ, ತಿಂದರಾಯಿತು ಎಂದುಕೊಂಡಿದ್ದಳು. ಈಗ ಅವಳಿಗೆ ಅಡಿಗೆ ಚೆನ್ನಾಗಿ ಮಾಡಬೇಕು – ಡಾಕ್ಟ್ರಗೂ ಕೊಡಬೇಕು ಎಂದು ಕಲ್ಪಿಸಿಕೊಂಡಳು; ದಿನೇ ದಿನೇ ಅವಳ ಜೀವನದಲ್ಲಿ ಉತ್ಸಾಹ ಎದ್ದು ಕಾಣುತ್ತಿತ್ತು. ಅದಕ್ಕೆ ಸರಿಯಾಗಿ ಡಾಕ್ಟ್ರ ಕೊಡುವ ಪ್ರೋತ್ಸಾಹವೂ ಸೇರಿಕೊಂಡಿತ್ತು. ಎರಡು ತಿಂಗಳೊಳಗೆ ನಾಲ್ಕು ತರಗತಿಗಳ ಪುಸ್ತಕಗಳನ್ನು ಓದಿ ಮುಗಿಸಿದಳು ಕಾವೇರಿ, ಅದನ್ನೆಲ್ಲಾ ಬರೆಯಲೂ ಕಲಿತಳು.

"ಇನ್ನು ಮುಂದಿನ ತಿಂಗಳಿಂದ, ಪರೀಕ್ಷೆಯ ಪುಸ್ತಕಗಳನ್ನು ಓದಲು ಕಲಿಯಬೇಕು ಬೇಕಿದ್ದಲ್ಲಿ ಡಾಕ್ಟ್ರನ್ನೂ ಕೇಳಿಕೊಳ್ಳಬೇಕು" ಎಂದು ತೀರ್ಮಾನಿಸಿದಳು.

ಕಾವೇರಿ ಬಿಡುವಿನ ವೇಳೆಯಲ್ಲಿ 8ನೇ ತರಗತಿಯ ಪುಸ್ತಕಗಳ ಗಂಟನ್ನು ಬಿಚ್ಚಿ ನೋಡಿದಳು. ಒಂದೊಂದೇ ಪುಸ್ತಕಗಳನ್ನು ತೆರೆದು ಕಣ್ಣಾಡಿಸಿದಳು; ಹಿಂದಿ, ಇಂಗ್ಲೀಷ್, ಭೂಗೋಳ; ವಿಜ್ಞಾನ, ಗಣಿತ ಎಲ್ಲವನ್ನೂ ಪರಿಶೀಲಿಸಿದಾಗ ಅವಳಿಗೆ ಕಷ್ಟವಾಗಬಹುದೆಂದು ತೋರಿದ್ದು ಎರಡೇ ಪುಸ್ತಕಗಳು. ಇಂಗ್ಲೀಷ್ ಮತ್ತು ಗಣಿತ. ಇನ್ನು ನಾಲ್ಕು ತಿಂಗಳುಗಳಲ್ಲಿ ತಾನು ಪರೀಕ್ಷೆ ಕಟ್ಟಬೇಕು. ಏನಿಲ್ಲವೆಂದರೂ ದಿನಕ್ಕೆ 4 ಗಂಟೆಗಳ ಅಭ್ಯಾಸ ಬೇಕು" ಎಂದು ಯೋಚಿಸಿದಳು. ಆ ಕುರಿತು ಡಾಕ್ಟ್ರ ಸಲಹೆಯನ್ನು ಪಡೆಯಬೇಕೆಂದುಕೊಂಡಳು. ಆ ದಿನ ಡಾಕ್ಟ್ರ ಊಟ ಮಾಡಿ ಕೈ ತೊಳೆಯುವಾಗ ಕೇಳಿದಳು.

ಡಾಕ್ಟ್ರೇ ಆನಿನ್ನು ಎಂಟನೇ ಕ್ಲಾಸಿನ ಪಾಠಂಗಳ ಓದಲೆ ಸುರು ಮಾಡುತ್ತೆ ಆಗದೋ? ಇನ್ನು ಪರೀಕ್ಷೆಗೆ ಇಪ್ಪದು ನಾಲ್ಕು ತಿಂಗಳು ಮಾತ್ರ ಅಲ್ಲದೋ"

“ಅಪ್ಪು ಆದರೆ ನಿನಗೆ ಅಷ್ಟು ಬೇಗ ಕಲ್ತವಲೆಡಿಗೋ, ಎಡಿಯದಿದ್ದರೆ ಮುಂದಾಣ ಪರೀಕ್ಷೆ ಕಟ್ಟಿದರೆ ಆತು.”

“ಅದಾಗ – ಆನು ಹೇಂಗಾರೂ ಮಾಡಿ ಈಗಾಣ ಪರೀಕ್ಷೆಗೆ ಕೂರುತ್ತೆ ಮತ್ತೆ ಎಸ್.ಎಸ್.ಎಲ್.ಸಿ. ಕಟ್ಟೆಕಾರೆ ಹೆಚ್ಚು ಓದಲೆ ಇರುತ್ತನ್ನೇ. ಹಾಂಗಾಗಿ ಇದರ ಬೇಗ ಮುಗುಶುತ್ತೆ.

“ನಿನಗೆ ಎಡಿಗಾರೆ ಮುಗುಶಿಗೋ”

“ಎಡಿಗು ಆದರೆ”

“ಆದರೆ ಎಂತದು?”

“ಗಣಿತವೂ, ಇಂಗ್ಲೀಷ್ ರಜಾ ಕಷ್ಟ ಕಾಣುತ್ತು”

“ಬಾಕಿದ್ದೆಲ್ಲಾ ಸುಲಭವೋ?”

“ಆನೊಂದಾರಿ ಎಲ್ಲದರ ಮೇಲೂ ಕಣ್ಣಾಡ್ಸಿ ನೋಡಿದೆ, ಬಾಕಿದ್ದ ಪಾಠಂಗೊ ಕಷ್ಟ ಹೇಳಿ ಕಂಡತ್ತಿಲ್ಲೆ.”

“ಹಾಂಗಾರೆ ನೀನು ಪುಸ್ತಕದ ಗಂಟು ಬಿಚ್ಚಿದ್ದೆ ಅಲ್ಲದೋ”

“ಅಪ್ಪು ನೋಡುವೋ ಹೇಳಿ ಕಂಡತ್ತು. ಹಾಂಗಾಗಿ ಬಿಚ್ಚಿದ್ದೆ”

“ಕಾವೇರಿ, ನೀನು ಎಕ್ಸ್‌ಪ್ರೆಸ್ ರೈಲು ಇದ್ದ ಹಾಂಗೆ. ಎಲ್ಲಾ ಬೇಗ ಆಯೇಕು ಅಲ್ಲದೋ?”

“ಅಪ್ಪು ಡಾಕ್ಟ್ರೆ ಎನಗೆ ಒಂದಾರಿ ಕಲ್ತು ಮುಗುಶೇಕು ಹೇಳಿ ಆಯಿದು. ಎನಗೆ ವಯಸ್ಸು ಆವುತ್ತಾ ಇದ್ದನ್ನೆ.

“ಆತು ಕಾವೇರಿ, ನಾಳೆಂದ ನೀನು ಓದಲೆ ಸುರು ಮಾಡು ಆತೊ”

ಡಾಕ್ಟ್ರು ಹೊರಡಲು ಸಿದ್ಧರಾದರು.

“ಆದರೆ ಡಾಕ್ಟ್ರೆ..” ಕಾವೇರಿ ತಡೆದಳು

“ಎನಗೆ ಲೆಕ್ಕ, ಇಂಗ್ಲೀಷ್ ಹೇಳಿ ಕೊಡೇಕನ್ನೆ”

"ಓ ಅದೋ ಚಿಂತೆ? ಅದರ ಆನು ಹೇಳಿ ಕೊಡುವೆ. ಸಾಕನ್ನೆ ಅಲ್ಲ ಬೇರೆ ಮಾಷ್ಟ್ರಿಂಗೆ ಹೇಳೇಕೋ?"

"ಇಲ್ಲಿಯೇ ಮಾಷ್ಟ್ರಪ್ಪಾಗ ಬೇರೆ ಮಾಷ್ಟ್ರ ಎಂತಕೆ"

" ಈ ಮಾಷ್ಟ್ರಂಗೂ ಫೀಸು ಕೊಡೇಕಾವುತ್ತು" ಸುಮ್ಮನಾಗ

"ಆತು ಎಷ್ಟಾವುತ್ತು ಹೇಳಿ, ಎನಗೆ ಪಾಠಂಗಳ ಅರ್ಥ ಅಪ್ಪ ಹಾಂಗೆ ಹೇಳಿ ಕೊಟ್ಟರೆ ಮಾಂತ್ರ ಫೀಸು ಕೊಡುದು"

"ಅಬ್ಬಾ, ನೀನು ಬರೇ ಪಾಪ ಅಲ್ಲ. ಜೋರಿದ್ದೆ. ನಿನ್ನ ಹತ್ರೆ ಡಬ್ಬಲ್ ಫೀಸ್ ವಸೂಲು ಮಾಡೇಕಾವುತ್ತು. ಆತು, ನಾಳೆಂದ ಅದೆರಡು ಪಾಠಂಗಳ ಆನು ಹೇಳಿಕೊಡುತ್ತೆ ಉಳುದುದರ ನೀನೇ ಕಲ್ತುಗೋ. ಅರ್ಥ ಆಗದಲ್ಲಿ ಕೇಳಿಗೋ ಆತೊ" ಡಾಕ್ಟರು ಆಸ್ಪತ್ರೆಯ ಕೆಲಸಕ್ಕೆ ಹೊರಟು ಹೋದರು.

ಕಾವೇರಿಯ ಓದು ನಿರ್ವಿಘ್ನವಾಗಿ ಸಾಗಿತು. ಸಮಯ ಸಿಕ್ಕಿದಾಗಲೆಲ್ಲಾ ಓದಿನಲ್ಲಿ ತಲ್ಲೀನಳಾದಳು. ಡಾಕ್ಟ್ರು ಗಣಿತ, ಇಂಗ್ಲೀಷ್‌ನ ಜವಾಬ್ದಾರಿ ಹೊತ್ತುಕೊಂಡರು. ನಾಲ್ಕು ತಿಂಗಳು ಸತತ ಪ್ರಯತ್ನಪಟ್ಟಿದ್ದಕ್ಕೆ ತಕ್ಕ ಫಲಿತಾಂಶವೂ ಬಂತು. ಕಾವೇರಿ 8ನೇ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಳು. ಅವಳಿಗಿಂತಲೂ ಡಾಕ್ಟ್ರು ಕೇಶವರಿಗೆ ಅತಿ ಸಂತೋಷವಾಯಿತು. ರೂಮಿಗೆ ಬರುವಾಗಲೇ ಸಿಹಿ ಕಟ್ಟಿಸಿಕೊಂಡು ಬಂದಿದ್ದರು.

"ಕಾವೇರಿ ಇದಾ ಬಾಯಿ ತೆಗೆ"

"ಎಂತಕೆ?"

"ಎಂತಕೆ ಹೇಳಿ ಮತ್ತೆ ಹೇಳುವೆ"

ಕಾವೇರಿ ಬಾಯಿ ತೆರೆದಳು. ಡಾಕ್ಟ್ರು ಅವಳ ಬಾಯಿಗೆ ಫೇಡಾ ತುಂಡನ್ನು ತುರುಕಿದರು.

"ಕಾವೇರಿ, ನೀನು ಪರೀಕ್ಷೆಲಿ ಪಾಸಾಯಿದೆ. ಅದಕ್ಕೆ ಈ ಖುಷಿ"

"ಹಾಂಗಾರೆ ನಿಂಗೊ ತಿನ್ನೇಕಾದವು. ಆನಲ್ಲ ಮದಾಲು ನಿಂಗೊ ತಿನ್ನಿ ಹೇಳಿ ಕಾವೇರಿಯೂ ಡಾಕ್ಟ್ರ ಬಾಯಿಗೆ ಸಿಹಿ ತುರುಕಿದಳು. ಮತ್ತೊಮ್ಮೆ ಹಾಕಲು ಹೋದಳು.

"ಸಾಕು ಕಾವೇರಿ, ಎನಗಪ್ಪು ತಿಂಬಲೆಡಿಯ ಎಂದು ಬಾಯಿಗೆ ಕೈ ಅಡ್ಡ ಹಿಡಿದರು ಡಾ॥ ಕೇಶವ; ಕೈಯನ್ನು ಸರಿಸಿ, ಸಿಹಿ ತುರುಕಿಯೇ ಬಿಟ್ಟಳು ಕಾವೇರಿ.

ಕಾವೇರಿಗೆ ತುಂಬಾ ಖುಷಿಯಾಯಿತು. ಧೈರ್ಯವೂ ಬಂತು. ಇನ್ನು ಮುಂದಿನ ಓದನ್ನು ಆದಷ್ಟು ಬೇಗನೇ ಪ್ರಾರಂಭಿಸಬೇಕು, ಎಂದು ಯೋಚಿಸಿದಳು. ಹಾಗೆಯೇ ಆ ದಿನ ಡಾಕ್ಟ್ರು ಊಟಕ್ಕೆ ಬಂದಾಗ,

"ಡಾಕ್ಟ್ರೇ ಇನ್ನು ಆನು ಮುಂದಾಣ ಪರೀಕ್ಷೆಯ ತಯಾರಿ ನಡೆಶುತ್ತೆ. ಎನಗೆ ನಿಂಗೊ ಮದಾಲು ಒಂಭತ್ತನೇ ಕ್ಲಾಸಿನ ಪುಸ್ತಕಂಗಳ ತಂದು ಕೊಡಿ" ಎಂದಳು.

"ಕಾವೇರಿ, ನೀನು ಪರೀಕ್ಷೆ ಕಟ್ಟೆಕ್ಕಾದ್ದು ಹತ್ತನೇ ಕ್ಲಾಸಿಂದು ಒಂಭತ್ತನೇ ಕ್ಲಾಸಿಂದಲ್ಲ ಗೊಂತಿದ್ದೊ?"

"ಗೊಂತಿದ್ದು. ಆದರೆ ಒಂಭತ್ತನೇ ಕ್ಲಾಸಿಂದರ ಓದ್ಯೊಂಡರೆ ಹತ್ತನೇ ಕ್ಲಾಸಿನ ಪಾಠಂಗೊ ಸುಲಭ ಅಕ್ಕಲ್ಲದೋ?

"ಹೂಂ ನೀನು ಉಷಾರಿದ್ದೆ. ಆನು ಇಂದೇ ಅದರ ತರ್ಸಿಕೊಡುತ್ತೆ"

"ನಿಂಗೊ ಎನಗೆ ರಜಾ ರಜಾ ಲೆಕ್ಖಂಗಳ, ಹೇಳಿಕೊಟ್ಟರೆ ಸಾಕು.

"ಎಂತಕೆ ಇಂಗ್ಲೀಷ್ ಬೇಡದೋ"

"ಬೇಕು, ಕೆಲವು ಕಷ್ಟ ಶಬ್ದಂಗಳ ಹೇಳಿಕೊಟ್ಟರೆ ಸಾಕು. ಅದರಿಂದ ಆನು ಕಲ್ತುಕೊಂಬೆ."

"ಎಂತಕೆ ಆನು ಪೂರಾ ಹೇಳಿಕೊಟ್ಟರೆ ಆಗದೋ? ನೀನು ಸಂಬಳ ಕೊಡೇಡಪ್ಪಾ, ಹಾಂಗೇ ಹೇಳಿಕೊಡುವೆ"

"ನಿಂಗೊಗೆ ಸಂಬಳ ಕೊಡುವ ಯೋಗ್ಯತಿಗೆ ಎನಗಿದ್ದೊ?"

ಕಾವೇರಿಗೆ ಈಗ ಡಾಕ್ಟ್ರ ಹತ್ತಿರ ಸಲುಗೆ ಹೆಚ್ಚಾಗಿತ್ತು. ಹಾಗೆಯೇ ಆತ್ಮೀಯತೆಯೂ ಬೆಳೆದಿತ್ತು. ಅವರನ್ನು ತನ್ನ ಬಳಗದಲ್ಲಿಯೇ ಒಬ್ಬರೆಂದು ಪರಿಗಣಿಸಿದ್ದಳು. ಅವರ ಕೋಣೆಯನ್ನು ಒಪ್ಪ ಓರಣವಾಗಿಡುವುದು, ಬಟ್ಟೆ ಬರೆಗಳನ್ನು ದೋಭಿಗೆ ಕೊಡುವುದು, ದಿನಕ್ಕೆರೆಡೆರಡು ಬಗೆ ಪಲ್ಯ ಸಾರು ಮಾಡುವುದು, ಅವಳಿಗೆ ರೂಢಿಯಾಗಿ ಹೋಗಿತ್ತು.

ಡಾಕ್ಟ್ರಗೂ ಕಾವೇರಿಗೆ ಆದಷ್ಟು ನೆರವು ನೀಡಬೇಕೆಂಬ ಉತ್ಸಾಹವೂ ಹೆಚ್ಚುತ್ತಿತ್ತು. ಅಂದೇ ಒಂಭತ್ತನೇ ಕ್ಲಾಸಿನ ಪುಸ್ತಕಗಳು ಮನೆಗೆ ಬಂತು - ಮರುದಿನದಿಂದ ಕಾವೇರಿ ಅವುಗಳ ಮೇಲೆ ಕಣ್ಣಾಡಿಸಿದಳು; "ಹೆಚ್ಚು ಕಷ್ಟವಾಗಲಿಕ್ಕಿಲ್ಲ. ತಾನೇ ಓದಿಕೊಳ್ಳಬಹುದು. ಆದರೆ ಇಂಗ್ಲೀಷ್, ಗಣಿತಕ್ಕೆ ನೆರವು ಬೇಕೇ ಬೇಕು ಅನ್ನಿಸಿತು.

"ಡಾಕ್ಟ್ರೇ ನಿಂಗೊ ಹೇಳಿದ ಹಾಂಗೆ ಗಣಿತ ಇಂಗ್ಲೀಷ್ ನಿಂಗಳೇ ಹೇಳಿ ಕೊಡೇಕಷ್ಟ" ಕಷ್ಟವೇ ಇದ್ದು

"ಎನಗೆ ಗೊಂತಿದ್ದು ನೀನು ದಾರಿಗೆ ಬಪ್ಪೆ ಹೇಳಿ. ನಿನಗೆ ಆನು ಹೇಳಿ ಕೊಟ್ಟರೆ ಎಂತ ಅಶುದ್ಧ ಆವುತ್ತೊ? ಎಂತಕೆ ಸೆಡವು ತೋರ್ಸಿದೆ. ಆನಿನ್ನು ಹೇಳಿಕೊಡೆ" ಕಾವೇರಿಯ ಮುಖ ಚಿಕ್ಕದಾಯಿತು. ಮೌನವಾಗಿ ಅಲ್ಲಿಂದ ಹೊರ ಬಂದಳು. ತನ್ನ ರೂಮಿಗೆ ಬಂದು ಉಕ್ಕಿ ಬಂದ ಕಣ್ಣೀರನ್ನು ಒರೆಸಿದಳು:

ಕಾವೇರಿ ಖಿನ್ನಳಾದದ್ದು ಡಾಕ್ಟ್ರಗೆ ಗೊತ್ತಾಯಿತು. ಅವಳ ಹಿಂದೆಯೇ ಅವಳ ರೂಮಿಗೆ ಬಂದು ಬಾಗಿಲು ಬಡಿದರು.

"ಕಾವೇರಿ ಬಾಗಿಲು ತೆಗೆ" ಬಾಗಿಲು ತೆಗೆದಳು ಕಾವೇರಿ. "ಎಂತಕೆ ಕಣ್ಣೊ ಕೆಂಪಾಯಿದು? ಅಷ್ಟು ಹೇಳಿದ್ದಕ್ಕೆ ಇಷ್ಟು ದುಃಖವೋ? ಆನು ತಮಾಷೆಗೆ ಹೇಳಿದ್ದು ಮಾರಾಯ್ತಿ? ಅದರ ನೀನು ತಪ್ಪು ಗ್ರಹಿಸಿದೆ ಅಲ್ಲದೋ? ನಿನಗೆ ಹೇಳಿ ಕೊಡುದು ಹೇಳಿರೆ ಎನಗೆ ಎಷ್ಟು ಖುಷಿ ಆವುತ್ತು ಹೇಳಿ ನಿನಗೆ ಗೊಂತಿಲ್ಲೆ ಇಂದೇ ಪಾಠಂಗಳ ಸುರುಮಾಡುವೊ ಆತೋ" ಹೋಗು ಕಣ್ಣೊರೆಸಿ, ಮೋರೆ ತೊಳಕ್ಕು, ನೋಡ್ಲೆಡಿತ್ತಿಲ್ಲೆ ಎನಗೆ" ಎಂದು ಅವಳ ಬೆನ್ನು ತಟ್ಟಿ ಬಾಗಿಲು ಮುಂದೆ ಮಾಡಿ ತಾನು ಆಸ್ಪತ್ರೆ ಕಡೆಗೆ ನಡೆದರು.

ಕಾವೇರಿಗೆ ಮನಸ್ಸು ಹಗುರವಾಯಿತು. ಹಾಗೆಯೇ ಡಾಕ್ಟ್ರ ಕೇಶವ ಎಷ್ಟು ಒಳ್ಳೆಯವರು. ತಾನೆಷ್ಟು ಪುಣ್ಯ ಮಾಡಿದ್ದೇನೆ ಅವರ ಆಸರೆ ಇದ್ದರೆ ತನಗಾವ ಕಷ್ಟವೂ ಬರಲಿಕ್ಕಿಲ್ಲ. ಮುಂದೊಂದು ದಿನ ತಾನು ನರ್ಸ್ ಆಗಿ ಆಸ್ಪತ್ರೆಯಲ್ಲಿ ಓಡಾಡುವ ದಿನ ಬಂದೇ ಬರುತ್ತದೆ ಎಂಬುದು ಖಾತ್ರಿಯಾಯಿತು, ಕಾವೇರಿ ಉತ್ಸಾಹದ ಚಿಗರೆಯಾದಳು.

ಆಸ್ಪತ್ರೆಯ ಕೆಲಸಗಳನ್ನು ಇನ್ನೂ ಆಸ್ತೆಯಿಂದ ಮಾಡತೊಡಗಿದಳು; ಅವಳ ವಾರ್ಡಿನ ಚಿತ್ರವೇ ಬದಲಾಯಿತು, ರೋಗಿಗಳ ಹಾಸಿಗೆ ಹಾಸು, ಬಟ್ಟೆಬರೆಯಿಂದ ಹಿಡಿದು ಪ್ರತಿಯೊಂದರಲ್ಲೂ ಅವಳ ಮುದ್ರೆ ಇತ್ತು, ಕಾವೇರಿ ಎಲ್ಲರಿಗೂ ಬೇಕಾದವಳಾದಳು. ಇವಳನ್ನು ನೋಡಿ ಇತರ ದಾಯಿಗಳಲ್ಲೂ ಸುಧಾರಣೆ ಕಂಡಿತು.

ಅವರ ವಾರ್ಡುಗಳ ಚಿತ್ರವೂ ಬದಲಾವಣೆ ಕಂಡಿತು. ರೋಗಿಗಳನ್ನು ಬೈಯ್ಯುವ, ಹೆದರಿಸುವ ಸಂಸ್ಕಾರ ಆಸ್ಪತ್ರೆಯಿಂದ ಮಾಯವಾಗತೊಡಗಿತು.

ಕಾವೇರಿ ತನ್ನ ದಿನಚರಿಗಳನ್ನು ಸ್ವಲ್ಪ ಬದಲಾಯಿಸಿ ಕೊಂಡಳು. ಬೆಳಿಗ್ಗೆ 5 ಗಂಟೆಗೆ ಎದ್ದು ಒಂದು ಗಂಟೆ ಕಾಲ ಪಾಠಗಳನ್ನು ಓದುವುದು, ಆಮೇಲೆ ಆಸ್ಪತ್ರೆಯ ಕೆಲಸಕ್ಕೆ ಹೋಗುವುದು, ಮಧ್ಯಾಹ್ನ ಮನೆಗೆ ಬಂದು ಸ್ನಾನ ಮಾಡಿ ಅಡಿಗೆ ಮಾಡಿ ಊಟ ಮಾಡುವುದು, ಆಮೇಲೆ ಒಂದರ್ಧ ಗಂಟೆ ವಿಶ್ರಾಂತಿ ತೆಗೆದುಕೊಳ್ಳುವುದು, ಪುನಃ ಓದಿಗೆ ತೊಡಗುವುದು-ಹೀಗೆ ನಡೆದಿತ್ತು ದಿನಚರಿ, ಕೆಲವೊಮ್ಮೆ ರಾತ್ರೆಯೂ ಓದಿಗೆ ಕುಳಿತುಕೊಳ್ಳುತ್ತಿದ್ದಳು. ಇದನ್ನು ನೋಡಿದ ಡಾಕ್ಟ್ರ ಕೇಳಿದರು "ಎಂತ ಕಾವೇರಿ, ನಿನಗೆ ರಜಾವೂ ಪುರುಸೊತ್ತು ಸಿಕ್ಕುತ್ತಿಲ್ಲೆಯೋ! ಬೇಕಾದರೆ ಎನ್ನ ಅಡಿಗೆಯ ಆನೇ ಮಾಡುವೆ. ನೀನು ಹೀಂಗೆ ಕಷ್ಟ ಪಡುದರ ನೋಡ್ಳೆ ಎಡಿತ್ತಿಲ್ಲೆ, ಮನುಷ್ಯಂಗೆ ಕೆಲಸ ಎಷ್ಟು ಮುಖ್ಯವೋ ವಿಶ್ರಾಂತಿಯೂ ಅಷ್ಟೇ ಮುಖ್ಯ ಹೀಂಗೆ ಕಲ್ತರೆ ನಿನ್ನ ತಲಗೆ ಹತ್ರೇ ಕನ್ನೆ!

"ನಿಂಗೊ ಆನು ಕಲ್ತ ಪಾಠಂಗಳಲ್ಲಿ ಎಲ್ಲಿ ಬೇಕಾದರೂ ಪ್ರಶ್ನೆ ಕೇಳಿ ಆನು ಉತ್ತರ ಕೊಡುತ್ತನೋ ಇಲ್ಲಿಯೇ ಹೇಳಿ ನೋಡಿ; ಮತ್ತೆ ನಿಂಗೊಗೆ ಹೇಳಿ ಆನು ಬೇರೆ ಅಡಿಗೆ ಮಾಡೂದು ಬೇಡ-ಚೆಲ್ಲಾ ಪಿಲ್ಲಿ ಪಾತ್ರಂಗಳ ಹರಗುದೂ ಬೇಡ. ಮುಲಾಜಿಲ್ಲದೆ ಕಾವೇರಿ ಉತ್ತರಿಸಿದಳು.

"ಓಹೋ, ನೀನೇ ಒತ್ತೆರೆಲಿ ಮಡುಗುದು, ಎನಗೆಂತದೂ ಅರಡಿತ್ತಿಲ್ಲೆ ಹೇಳಿ ಅಲ್ಲದೋ ನಿನ್ನ ಅಭಿಪ್ರಾಯ, ನಾಳೆಂದ ನೋಡು. ಆನೇ ಅಡಿಗೆ ಮಾಡಿ ನಿನಗೆ ಬಳಸುತ್ತೆ ನೋಡಿಗೋ" "ಹಾಂ ನಿಂಗೊ ಅಡಿಗೆ ಮಾಡುದೂ ಬೇಡ, ಅನು ಉಂಟದೂ ಬೇಡ, ಆನೇ ಬೇಶಿ ಹಾಕುತ್ತೆ, ಈಗ ಒಂದಾರಿ ನಿಂಗಳ ಮನೆ ಹಿಡಿತಕ್ಕೆ ಬಯಿಂದು. ಇನ್ನೊಂದಾರಿ ಒತ್ತರೆ ಮಾಡ್ಳೆ ಎನಗೆಡಿಯಪ್ಪ" ನಿಂಗೊ ಡಾಕ್ಟ್ರಕ್ಕೊ ಬೇರೆವಕ್ಕೆ ಮಾಂತ್ರ ಸ್ವಚ್ಛತೆಯ ಪಾಠ ಹೇಳುದು, ಸ್ವಂತಕ್ಕೆ ಇಲ್ಲೆ, ಮೂರು ಮೂರು ದಿನ ಒಗೆಯದ್ದ ಒಸ್ತ್ರಂಗೊ, ಒರಸದ್ದ ನೆಲ, ಬದಲಸದ್ದ ಹಾಸುದು, ಹೊದವರು-ಅದರ ನೋಡಿಯೇ ಹೇಳೇಕು-ಅದು ಡಾಕ್ಟ್ರ ಮನೆ ಹೇಳಿ"

"ಕಾವೇರಿ ನಿನಗೆ ಸಲಿಗೆ ರಜಾ ಹೆಚ್ಚಾಯಿತು. ಇನ್ನು ಹೆಚ್ಚೆನ್ನ ಕೆಣಕ್ಕಲೆ ಬರೇಡ ಎನಗೂ ಕೋಪ ಬಕ್ಕು"

"ನಿಂಗಳ ಕೋಪ ಹೇಂಗಿರ್ತು ಹೇಳಿ ಒಂದಾರಿ ನೋಡೇಕು ಆನು"

ಕಾವೇರಿ ಕೆಣಕುತ್ತಾ ಹೋದಳು. ಡಾಕ್ಟ್ರೇ ಸುಮ್ಮನಾಗಬೇಕಾಯಿತು. "ಆನು ಹೇಳಿದ್ದು ಎಂತಕೆ ಹೇಳಿರೆ ನಿನಗೀಗ ಕೆಲಸ ತುಂಬಾ ಆವುತ್ತು ರಜಾದರು ಕಮ್ಮಿ ಮಾಡೇಕು ಹೇಳಿ ಕಂಡತ್ತು ಎನಗೆ ಅದಕ್ಕೆ ಇಷ್ಟೆಲ್ಲಾ ಮಾತಾಡು"

"ಎನಗೆ ಇಲ್ಲ್ಯಾಣ ಕೆಲಸ ಎಂತದೂ ಕಷ್ಟ ಕಾಣುತ್ತಿಲ್ಲೆ. ಆನು ಬೆಶಿಲಲ್ಲಿ ಸೊಪ್ಪು ಸೌದಗೆ ಹೋದೋಳು, ತೋಟಕ್ಕೆ ಗೊಬ್ಬರ ಹೊತ್ತೋಳು, ರಟ್ಟೆ ಮುರಿವಷ್ಟು ಬೇಸಗೇಲಿ ನೀರು ಸಸಿಗೋಕೆ ಚೇಪಿದ್ದೆ–ಅದಕ್ಕೆ ಹೋಲಿಸಿದರೆ ಇದೆಂತದೂ ಅಲ್ಲ. ನಿಂಗೊ ಹೆಚ್ಚು ತಲೆ ಬೆಶಿ ಮಾಡ್ಕೊಳ್ಳೇಡಿ ಆತೋ!" ಸಮಾಧಾನ ಪಡಿಸಿದಳು ಕಾವೇರಿ.

"ಆತು ಹಾಂಗಾರೆ, ಒಂಭತ್ತನೇ ಕ್ಲಾಸಿನ ಪುಸ್ತಕಂಗಳ ಬೇಗ ಬೇಗ ಓದಿ ಮುಗುಶು. ಅದೆಂತ ನಿನ್ನ ಪರೀಕ್ಷೆಗೆ ಬತ್ತಿಲ್ಲೆನ್ನೆ ನೀನು ಹತ್ತನೇ ಕ್ಲಾಸಿನದ್ದರ ಬೇಗ ಸುರ್ ಮಾಡೇಕು. ಇಲ್ಲಿದಿದ್ದರೆ ನಿನಗೆ ಈ ವರ್ಷಾಣ ಪರೀಕ್ಷೆ ಕಟ್ಲೆಡಿಯ. ಮತ್ತೆ ಮುಂದಾಣ ವರ್ಷವೇ ಆತು. ಇನ್ನಿಪ್ಪದು ಬರೇ ಆರು ತಿಂಗಳು" ಎಚ್ಚರಿಸಿದರು ಡಾಕ್ಟ್ರ.

"ಆತು, ಆದರ ಈ ತಿಂಗಳೊಳ ಓದಿ ಮುಗುಶುತ್ತೆ. ಬೇಗ ಎಸ್‌ಎಸ್‌ಎಲ್‌ಸಿ ಪರೀಕ್ಷೆದರ ಕಲಿತ್ತೆ" ಕಾವೇರಿಯೂ ಕಾತರ ತೋರಿಸಿದಳು.

ಅದರಂತೆ ಕಾವೇರಿ ಪುಸ್ತಕಗಳ ಮೇಲೆಲ್ಲಾ ಕಣ್ಣಾಡಿಸಿದಳು. ಲೆಕ್ಕ, ಇಂಗ್ಲೀಷ್‌ಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಳು. ತಿಂಗಳ ಅಖೈರಿಗೆ ಅವುಗಳನ್ನೆಲ್ಲಾ ಗಂಟು ಕಟ್ಟಿ ಬದಿಗಿರಿಸಿ, 10ನೇ ತರಗತಿಯ ಪುಸ್ತಕ ಓದಲು ಪ್ರಾರಂಭಿಸಿದಳು.

ಡಾಕ್ಟ್ರ ಅವಳಿಗಾಗಿ, ಪ್ರಶ್ನೋತ್ತರ ಪುಸ್ತಕಗಳನ್ನು ತಂದುಕೊಟ್ಟರು.

"ಕಾವೇರಿ, ಹೆಚ್ಚು ಕಮ್ಮಿ ಪರೀಕ್ಷೆಗೆ ಯಾವ ಯಾವ ಪ್ರಶ್ನೆ ಕೇಳುಗು ಹೇಳುವ ಮಾಹಿತಿ ನಿನಗೆ ಈ ಪುಸ್ತಕದಿಂದ ಸಿಕ್ಕುತ್ತು. ಪಾಠಂಗಳ ಓದಿದ ಮೇಲೆ ಆ ಪಾಠಕ್ಕೆ ಸಂಬಂಧಪಟ್ಟ ಪ್ರಶ್ನೆಗೊ ಎಂತೆಲ್ಲಾ ಇದ್ದು ಹೇಳಿ ಇದರಲ್ಲಿ ನೋಡಿ ಕಲ್ತುಗೋ ಆತೋ" ಎಂದರು.

"ಒಳ್ಳೆದಾತು ಎನಗೆ–ನಿಂಗೊಗೆ ಎಷ್ಟು ಉತ್ಸಾಹ ಇದ್ದು ಹೇಳಿ ಎನಗೀಗ ಗೊಂತಾತು. ಎನಗೆಂತ ಹೇಳೇಕು ಅರಡಿತ್ತಿಲ್ಲೆ"

"ನೀನೆಂತದೂ ಹೇಳೇಡ. ಪರೀಕ್ಷೆ ಕಟ್ಟು ಪಾಸಾಗು ಅದೇ ಸಾಕು" ಎಂದವರೇ ಡಾಕ್ಟ್ರ ತಮ್ಮ ಡ್ಯೂಟಿಗೆ ನಡೆದರು. ಇಷ್ಟು ಪ್ರೋತ್ಸಾಹ ಬದುಕಿನಲ್ಲಿ ತನಗಾದರೂ ಕೊಡುತ್ತಿದ್ದರೆ ತಾನೆಂದೋ ಓದು ಮುಗುಸಿ, ದಡ ಮುಟ್ಟುತ್ತಿದ್ದೆ.

ಆದರೆ ತನ್ನನ್ನು ಎಲ್ಲರೂ ಹಿಸುಕಿ ಹಾಕಿದವರೆ, ಮೊಳಕೆಯೊಡೆಯಲು ಯಾರೂ ಬಿಟ್ಟಿಲ್ಲ. ತನ್ನ ಜೀವನಕ್ಕೆ ಆಧಾರವಾಗಿ ನಿಂತವರು ಇಬ್ಬರೇ. ರಘುರಾಮ ಭಾವ ಹಾಗೂ ಕೇಶವ ಡಾಕ್ಟ್ರು. ಅವರ ಋಣವನ್ನು ತೀರಿಸಲು ತನ್ನ ಜನ್ಮ ಸಾಕಾಗಲಿಕ್ಕಿಲ್ಲ ಎಂದು ಇಬ್ಬರನ್ನೂ ಸ್ಮರಿಸಿದಳು ಕಾವೇರಿ.

ಕಾವೇರಿಯ ಓದು ನಿರ್ವಿಘ್ನವಾಗಿ ನಡೆಯಿತು. ಪರೀಕ್ಷೆ ಸಮೀಪಿಸುತ್ತಿದ್ದಂತೆ ದಿನಕ್ಕೆ ಮತ್ತೆರಡು ಗಂಟೆ ಓದನ್ನು ಹೆಚ್ಚಿಸಿಕೊಂಡಳು; ಅರ್ಥವಾಗದ್ದಲ್ಲಿ ಡಾಕ್ಟ್ರ ಕೇಶವನಲ್ಲಿ ವಿವರಣೆ ಹೇಳಿಕೊಂಡಳು; ಅವಳ ಪರೀಕ್ಷೆ 6 ದಿವಸ ನಡೆಯಿತು. ಆ ಸಮಯದಲ್ಲಿ ಕಾವೇರಿ ಅಡಿಗೆ ಮಾಡುವುದು ಬೇಡವೆಂದೂ, ತಾನೇ ಬೇಯಿಸಿ ಹಾಕುತ್ತೇನೆಂದು ಡಾಕ್ಟ್ರು ಹಠ ಹಿಡಿದರು, ಹಾಗೇಯೇ ಮಾಡಿದರು. ಆಸ್ಪತ್ರೆಯ ಕೆಲಸಕ್ಕೆ 10 ದಿನಗಳ ರಜೆಯನ್ನೂ ಕೊಟ್ಟರು. ಕಾವೇರಿ, ಪರೀಕ್ಷೆ ಬರೆದು ಬಂದಳು.

"ಹೇಂಗಿತ್ತು ಪರೀಕ್ಷೆ"

"ಬಾಕಿ ಎಲ್ಲಾ ತೊಂದರೆ ಇಲ್ಲೆ, ಲೆಕ್ಕ ಮಾಂತ್ರ ರಜಾ ಕಷ್ಟ ಇತ್ತು- ಪಾಸಕ್ಕು" ಅಂದಳು ಕಾವೇರಿ.

ತಿಂಗಳೊಳಗೆ ಕಾವೇರಿಯ ಪರೀಕ್ಷೆ ಫಲಿತಾಂಶವೂ ಬಂತು, ಅವಳು ಉತ್ತಮ ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಳು. ಹೆಚ್ಚಿನ ಪಾಠಗಳಲ್ಲಿ 70% ಮಾರ್ಕುಗಳನ್ನು ಪಡೆದಿದ್ದಳು. ಲೆಕ್ಕದಲ್ಲಿ ಮಾತ್ರ 60ಅಂಕಗಳು, ಹಿರಿ ಹಿರಿ ಹಿಗ್ಗಿದರು ಡಾಕ್ಟ್ರು. ಕಾವೇರಿಯನ್ನೆತ್ತಿ ತಿರುಗಿಸಬೇಕು ಅಂದುಕೊಂಡರು, ಆದರೂ ತಾಳ್ಮೆ ತಪ್ಪಲಿಲ್ಲ, ತಾನು ಅತಿ ಪ್ರೀತಿ ತೋರಿದರೆ ಕಾವೇರಿ ಅಪಾರ್ಥ ಕಲ್ಪಿಸಬಹುದು ಎಂಬ ಭಯವಾಯಿತು. ಅವಳ ಗಂಭೀರ ನಡೆನುಡಿಗಳು ಅದಕ್ಕೆ ಕಡಿವಾಣ ಹಾಕಿತ್ತು;

"ಕಾವೇರಿ ಇದಾ ನಿನ್ನ ಪರೀಕ್ಷೆಯ ಫಲಿತಾಂಶ ಬಯಿಂದು ನೋಡು" ಎಂದು ಹೇಳಿ ಅವಳ ಮಾರ್ಕ್ಸ್ ಕಾರ್ಡನ್ನು ಅವಳಿಗೆ ಕೊಟ್ಟು, ಅವಳ ಮುಖ ಭಾವವನ್ನೇ ಕಾದಿದ್ದರು ಡಾಕ್ಟ್ರು; ಕಾವೇರಿ ಒಮ್ಮೆ ಮಾರ್ಕುಗಳನ್ನೆಲ್ಲಾ ನೋಡಿದ – "ಹಾಂ, ಆನು ಹೇಳಿದ ಹಾಂಗೆ ಆತು. ಲೆಕ್ಕಲ್ಲಿ ಕಮ್ಮಿ ಬಂತಾದ" ಎಂದು ಉದ್ಗರಿಸಿದಳು.

"ಎಂತಾತು ಬಾಕಿ ಪಾಠಲ್ಲಿ, ನಿನಗೆ ಒಳ್ಳೆ ಮಾರ್ಕುಗೊ ಬಯಿಂದು. ಎನಗೆ ತುಂಬಾ ಖುಷಿ ಆತು ಕಾವೇರಿ. ಅದೂ ನೀನು ನಿನ್ನಷ್ಟಕ್ಕೆ ಓದಿದ್ದು, ಇನ್ನು ಶಾಲಗೆ ಹೋಗಿ ಕಲ್ತಿದ್ದರೆ ಇನ್ನೂ ಹೆಚ್ಚು ಮಾರ್ಕು ಬತ್ತಿತ್ತು"

"ಒಟ್ಟಲ್ಲಿ ಪಾಸಾದೆನೆ, ಎನಗೆ ಅಷ್ಟೇ ಸಾಕು. ಎಲ್ಲಿ ಡುಮ್ಕಿ ಹೊಡೆತ್ತನೋ ಹೇಳಿ ಹೆದರಿಕೆ ಆತು!"

"ನೀನು ಪಾಸಪ್ಪೆ ಹೇಳುವ ಧೈರ್ಯ ಎನಗಿತ್ತು. ಹಾಂಗೇ ಒಳ್ಳೆ ಮಾರ್ಕುಗಳ ತೆಗೆದೆನ್ನೆ ಇನ್ನೂ ಸಂತೋಷ; ನಿನಗೆ ಎಂತಾದರೂ ಬಹುಮಾನ ತಂದು ಕೊಡೇಕು ಹೇಳಿ ಇದ್ದು. ಎಂತಕ್ಕು?

"ಹಾಂಗಾರೆ ನರ್ಸ್‌ಗಳ ತರಬೇತಿ ಎಂದು ಸುರುವಾವುತ್ತು, ಅದಕ್ಕೆ ಸಂಬಂಧಪಟ್ಟ ವ್ಯವಹಾರ ಎಲ್ಲಾ ಮಾಡಿ; ಅದೇ ಎನಗೆ ದೊಡ್ಡ ಬಹುಮಾನ!" ಉತ್ತರಿಸಿದಳು ಕಾವೇರಿ.

"ನಿನಗೆ ಓದುದು ಬಿಟ್ಟರೆ ಬೇರೆಂತದೂ ತಲೆಗೆ ಬತ್ತಿಲ್ಲೆಯೋ ಕಾವೇರಿ? ಈಗ ಪರೀಕ್ಷೆಯ ಫಲಿತಾಂಶ ಬಂತಷ್ಟೆ; ಇನ್ನು ಒಂದು ತಿಂಗಳು ಹಾಯಾಗಿರು. ಮತ್ತೆ ಮುಂದಾಣ ಓದಿ ಆಲೋಚನೆ ಮಾಡು. ಇಲ್ಲದಿದ್ದರೆ "ಓದಿಕೆಟ್ಟ ಕೋಚು ಭಟ್ಟ' ಹೇಳುವ ಹಾಂಗಕ್ಕು, ಮರುಳು ಹಿಡಿಗು ಆತೋ" ಡಾಕ್ಟ್ರ ಸ್ವಲ್ಪ ಗಂಭೀರವಾಗಿ ಹೇಳಿದರು.

"ಬೇಜಾರ ಮಾಡೇಡಿ ಡಾಕ್ಟ್ರೆ–ಎನ್ನ ಪರಿಸ್ಥಿತಿಯ ರಜಾ ಅರ್ಥ ಮಾಡ್ಕೊಳಿ. ಆದಷ್ಟು ಬೇಗ ಕಲಿವದರ ಮುಗುಶಿ ಸ್ವತಂತ್ರ ಬದುಕ್ಕುವ ಆಶೆ ಎನಗೆ, ಎನಗೂ ವಯಸ್ಸು ಅವುತ್ತಾ ಇದ್ದು–ಒಂದಾರಿ ನೆಲೆ ಕಾಣೇಕು ಹೇಳ್ಳಿ ಆವುತ್ತು" ಅದಕ್ಕೆ ಇಷ್ಟು ಅಮಸರ".

"ಕಾವೇರಿ ಆನೊಂದು ಮಾತು ಹೇಳುತ್ತೆ. ರಜಾ ನಿಧಾನವಾಗಿ ಆಲೋಚನೆ ಮಾಡು"

"ಹೇಳಿ ಡಾಕ್ಟ್ರೆ ನಿಂಗೊ ಎಂತ ಹೇಳಿದರೂ ಆನು ಕೇಳುವೆ. ನಿಂಗೊ ಎನ್ನ ಉದ್ಧಾರ ಬಯಸುವವು ಹೇಳಿ ಎನಗೊಂದೋ ಅರ್ಥ ಆಯಿದು. ಎಂತದು ಹೇಳಿ"

"ಕಾವೇರಿ ನೀನು ಮುಂದೆ ನರ್ಸ್ ಟ್ರೈನಿಂಗು ಮಾಡುದು ಬೇಡ. ಇನ್ನೊಂದೆರಡು ವರ್ಷ ಕಾಲೇಜಿಂಗೆ ಹೋಗಿ ಇಂಟರ್ ಮೀಡಿಯೇಟ್ ಪರೀಕ್ಷೆ ಕಟ್ಟು"

"ಅದೆಂತಕ್ಕೆ?"

"ನಿನಗೆ ನರ್ಸ್ ಆಯೇಕು ಹೇಳಿ ಹಠ ಎಂತಕೆ?"

“ನಾಲ್ಕು ಜೆನಕ್ಕೆ ಬದುಕ್ಕು ಉಪಕಾರ ಆಯೇಕು ಹೇಳಿ-ರೋಗಿಗಳ ಸೇವೆ ಮಾಡಿ ಜನ್ಮ ಸಾರ್ಥಕ ಮಾಡೇಕು ಹೆಳ್ಳಿ ಎನ್ನ ಹಾಂಗಿದ್ದವಕ್ಕೆ ಇನ್ನೆಂತ ಮಾಡ್ಳೆ ಸಾಧ್ಯ ಇದ್ದು?

“ಓ ಅಷ್ಟೆಯೋ, ಒಟ್ಟಾರೆ ನಿನಗೆ ಇನ್ನೊಬ್ಬರಿಗೆ ಸಹಾಯ ಮಾಡೇಕು ಹೇಳಿ ಅಲ್ಲದೋ? ಅದಕ್ಕೆ ನೀನು ನರ್ಸೇ ಆಯೇಕು ಹೇಳಿ ಇಲ್ಲೆ. ಮುಂದೆ ಡಾಕ್ಟ್ರು ಆಪ್ಪಲಕ್ಕು. ನರ್ಸಿಂದಲೂ ಹೆಚ್ಚು ಸೇವೆ ಡಾಕ್ಟ್ರಾಗಿಯೂ ಮಾಡ್ಳಕ್ಕು”

“ಎಂತ ಡಾಕ್ಟ್ರೆ, ಎನ್ನ ದಾರಿ ತಪ್ಪುಸಲೆ ನೋಡುತ್ತಿ? ಆನು ಡಾಕ್ಟ್ರಪ್ಪದೋ”

“ಅಪ್ಪು ಕಾವೇರಿ. ನೀನು ಡಾಕ್ಟ್ರೇ ಕಲಿಯೇಕು ಹೇಳಿ ಎನ್ನ ಆಶೆ. ಅದಕ್ಕೆ ಬೇಕಾದ ಎಲ್ಲಾ ಸಹಾಯವ ಆನು ಮಾಡುವೆ” ಮಾತನ್ನು ಮುಂದುವರಿಸಿದರು.

“ನೀನು ಹಾಂಗಿದ್ದವು ಡಾಕ್ಟ್ರಾದರೆ ಸಮಾಜಕ್ಕೆ ಹೆಚ್ಚಿನ ಸೇವೆ ಸಲ್ಲುಸಲ್ಲಕ್ಕು ನಿನಗೂ ಹೆಚ್ಚಿನ ಗೌರವ ಪ್ರತಿಷ್ಠೆ ಸಮಾಜಲ್ಲಿ ಒಕ್ಕು. ನರ್ಸ್‌ಗೋಕ್ಕೆ ಸಮಾಜಲ್ಲಿ ಹೆಚ್ಚಿನ ಸ್ಥಾನಮಾನ ಇಲ್ಲೆ. ಅವು ಎಷ್ಟಿದ್ದರೂ ಆಸ್ಪತ್ರೆಯ ಬಳವೇ ಹೆರಕೇಳುವುವು ಇಲ್ಲೆ. ಹಾಂಗಿಪ್ಪ ಜಾಗೆ ನಿನಗೆ ಬೇಡ. ನೀನು ಡಾಕ್ಟ್ರ ಕೆಲಸವನ್ನೇ ಕಲಿ” ಡಾಕ್ಟ್ರು ಅಪ್ಪಣೆ ಕೊಟ್ಟಂತಾಯಿತು ಕಾವೇರಿಗೆ”

“ಆನು ಕಾಲೇಜಿಂಗೆ ಹೋಗಿ ಇನ್ನೆರಡು ವರ್ಷ ಕಲಿಯೇಕು. ಮತ್ತೆ ಐದು ವರ್ಷ ಡಾಕ್ಟ್ರು ಕೆಲಸ ಕಲಿಯೇಕು. ಒಟ್ಟು ಏಳು ವರ್ಷ ಆವುತ್ತು”

“ಎಂತಾತು, ಹೇಂಗರೂ ಮುಂದೆ ನಿನಗೆ ಬದುಕ್ಕು ಇದನ್ನೆ ಅದರಲ್ಲಿ ಏಳು ವರ್ಷ ಕಳುದ ಹಾಂಗಾತು ಅಷ್ಟೆ!”

“ನಿಂಗೊ ಸುಲಭಲ್ಲಿ ಹೇಳುತ್ತಿ. ಎನಗೀಗ ಇಪ್ಪತ್ತೆರಡು ವರ್ಷ ಕಲ್ತಪ್ಪಾಗ ಇಪ್ಪತ್ತೊಂಬತ್ತು ಆವುತ್ತು. ಅದೂ ಅಲ್ಲದ್ದೆ ಕಲಿವಲೆ ಪೈಸೆ ಬೇಡದೋ? ಕಾಲೇಜಿಂಗೆ ಸೇರಿದರೆ ಆಸ್ಪತ್ರೆಲಿ ಸಿಕ್ಕುವ ಸಂಬಳವೂ ಇಲ್ಲೆ” ಆತಂಕವಿತ್ತು ಅವಲ ಧ್ವನಿಯಲ್ಲಿ”

“ಮತ್ತೆ ನಿನಗೆ ಕಳಿಂಗಳದ್ದು ಅಶನಾರ್ಥ ಬತ್ತಿಲ್ಲೆಯೋ? ಅದರ ಉಪಯೋಗಿಸದರಾತು” ಈ ಮಾತು ಕೇಳಿ ಉರಿದೆದ್ದಳು ಕಾವೇರಿ.

“ಡಾಕ್ಟ್ರೇ-ಆ ಕಳಿಂಗಳದ ಶುದ್ಧಿ ಹೇಳಿ ಎನ್ನ ನೋಯಿಸೇಡಿ. ಆ ಅಶನಾರ್ಥವ ತಿಂಬಲಾಗ, ಹೇಳುವ ಹಡಲ್ಲಿಯೇ ಆನು ಕಲಿವಲೇ ಹೆರಟದು. ಎನಗೂ ಆ ಮನೆಗೂ ಯಾವ ಸಂಬಂಧವೂ ಇಪ್ಪಲೆಡಿಯ ಹೇಳುವ ಉದ್ದೇಶ ಎನ್ನದು. ಎನ್ನ ಬದುಕ್ಕಿನ ಮಾರಣ ಹೋಮ ಆದ್ದು. ಆ ಮನೇಂದಲೇ ಈಗಳೂ

ಅಲ್ಲಿಂದ ಅಶನಾರ್ಥ ಬತ್ತು. ಅದರ ಎನ್ನ ಅಬ್ಬೆ ಅಪ್ಪ ತಿನ್ನಲಿ ಹೇಳಿಯೇ ಬಿಟ್ಟಕ್ಕಿ ಬಯಂದೆ. ಮತ್ತೆ ಅವಕ್ಕೆ ಕೈ ಒಡ್ಡೆಕೋ ಆನು" ಎಂತಾದರೂ ಆನು ಅವರ ಕೂಳಿಂಗೆ ಬೀಳೆ" ಅವಳ ಸ್ವಾಭಿಮಾನದ ಅರ್ಥವಾಯಿಗೆ ಡಾಕ್ಟ್ರಿಗೆ.

"ನಿನಗೆ ಬೇಡದ್ದರೆ ಬೇಡ ಕಾವೇರಿ. ನಿನಗೆ ಕರ್ಚಿಗೆ ಪೈಸೆಯ ಕಲಿವ ಅನುಕೂಲಗೆ ಎಲ್ಲಾ ಆನು ಮಾಡಿಕೊಡುವೆ ಹೆದರೇಡ. ಹೇಂಗಾರೂ ಕಲ್ತು ಒಂದು ಒಳ್ಳೆ ಡಾಕ್ಟ್ರಾಗು"

"ನಿಂಗೊ ಎನಗೆ ಎಂತ ಹೇಳಿ ಸಹಾಯ ಮಾಡುತ್ತಿ? ಎನ್ನ ಬಂಧುವೂ ಅಲ್ಲ ಬಳಗವೂ ಅಲ್ಲ?

"ಎನ್ನ ನೀನು ಬಂಧು ಹೇಳಿಯೇ ತಿಳುಕ್ಕೊ. ಎನಗೆ ಇಲ್ಲಿ ಬೇಕಾದವು ಆರೂ ಇಲ್ಲೆ. ಆನು ಊರಿಂದ ಪೈಸೆ ಕಳುಸೇಕಾದ ಅವಶ್ಯಕತೆಯೂ ಇಲ್ಲೆ. ಅಲ್ಲಿ ಅಬ್ಬೆಪ್ಪಂಗೆ ಉಂಬಲೆ ತಿಂಬಲೆ ಬೇಕಾದಷ್ಟಿದ್ದು. ಸ್ವಂತ ಮನೆ ಇದ್ದು, ಹತ್ತು ಖಂಡಿ ಅಡಕ್ಕೆ ಬತ್ತು, ಮತ್ತೆ ಪೌರೋಹಿತ್ಯವೂ ಇದ್ದು, ಇಲ್ಲಿ ಎನ್ನ ಸಂಬಳ ಹಾಂಗೇ ಉಳಿತ್ತು. ಅದರಲ್ಲಿ ನಿನಗಿಷ್ಟು ಖರ್ಚು ಮಾಡಿದರೆ ಎಂತದೊ ಆಗ.

ಆನೂ ರಜಾ ಜೆನ ಸೇವೆ ಮಾಡಿದ ಹಾಂಗೆ ಆತಿಲ್ಲೆಯೋ?

"ನಿಂಗೊ ಮಾಡುದು ಒಂದೇ ಜೆನದ ಸೇವೆ ಅಷ್ಟೇ" ಎನಗೊಬ್ಬಂಗೇ ಅದರಂದ ಸಹಾಯ ಅಪ್ಪದು ಅಷ್ಟೇ!"

"ಕಾವೇರಿ ಸರಿಯಾಗಿ ಆಲೋಚನೆ ಮಾಡು. ಆನು ನಿನಗೆ ಕಲಿವಲೆ ಸಹಾಯ ಮಾಡಿದರೆ ನೀನೊಂದು ಒಳ್ಳೆ ಡಾಕ್ಟ್ರಾಗಿ ಬಪ್ಪೆ; ಎಷ್ಟೋ ಬಡರೋಗಿಗಳ ಆರೈಕೆ ಮಾಡುವೆ, ಅವರ ಕಷ್ಟ ಸುಖವ ಪರಿಹಾರ ಮಾಡುವೆ-ಅಂಬಾಗ ಆನು ಮಾಡಿದ್ದೂ ಜೆನರ ಸೇವೆ ಆಗದೋ? ನೀನೇ ಹೇಳು. ಹಾಂಗಾಗಿ ಆನು ಹೇಳಿದ್ದು. ಜೆನ ಸೇವೆ ಆತಿಲ್ಲೆಯೋ? ಸಾಕಿನ್ನು ವಾದ ವಿವಾದ-ನೀನು ಮುಂದೆ ಕಲಿವದು ಡಾಕ್ಟ್ರ ಕೆಲಸ, ಮೊದಲು ಇಂಟರ್‌ಮೀಡಿಯೇಟು ಪರೀಕ್ಷೆಗೆ ಕಟ್ಟು? ಡಾಕ್ಟ್ರು ಮಾತುಮುಗಿಸಿ, ಎದ್ದು ಆಸ್ಪತ್ರೆಯ ಕಡೆಗೆ ಹೊರಟರು.

ಕಾವೇರಿ ಯೋಚನೆಯಲ್ಲಿ ಮುಳುಗಿದಳು. ತಾನು ನಡೆಯಲು ಬಂದ ದಾರಿ ಬೇರೆ. ಈಗಿನ ದಾರಿಯೇ ಬೇರೆ. ಎರಡರಲ್ಲಿಯೂ ಸಾಮ್ಯತೆ ಇದೆ. ಡಾ॥ಕೇಶವ ಹೇಳಿದ್ದು ನಿಜ. ನರ್ಸ್‌ಗಿಂತ ಡಾಕ್ಟ್ರ ಹುದ್ದೆ ಪ್ರತಿಷ್ಠಿತವಾದದ್ದು ಕಷ್ಟಪಟ್ಟು ಕಲಿತರೆ ತಾನು ವೈದ್ಯಳೂ ಆಗಬಹುದು ಅಲ್ಲಿ ಹಣ, ಗೌರವ ಎರಡು ಸಿದ್ದಿಸುತ್ತದೆ. ತನ್ನ ಸಾಧನೆ ಹತ್ತು ಮಂದಿಯ ಕಣ್ಣುಗೊ ಬೀಳುತ್ತದೆ. ಹೇಗಾದರೂ ಡಾಕ್ಟ್ರು ಸಹಾಯ

ಮಾಡುತ್ತೇನೆ ಅಂದಿದ್ದಾರೆ. ಮುಂದೆ ಅದನ್ನೇ ಕಲಿತರಾಯಿತು. ಕಲಿತ ಮೇಲೆ ಅವರಿಂದ ಪಡೆದ ಹಣವನ್ನು ಮರಳಿ ಕೊಟ್ಟರಾಯಿತು. ಸದ್ಯಕ್ಕಂತೂ ತನ್ನಲ್ಲಿ ಕಲಿಯುವ ಉತ್ಸಾಹ ಹಾಗೆಯೇ ಇದೆ. ಡಾಕ್ಟ್ರ ಹೇಳಿದಂತೆ ಕೇಳುವುದೇ ಸರಿ. ಅವರೆಂದೂ ತನ್ನನ್ನೂ ತಪ್ಪುದಾರಿಗೆ ಎಳೆದಿಲ್ಲವಲ್ಲಾ. ಉತ್ತಮ ದಾರಿಯನ್ನೇ ತೋರಿಸಿದ್ದಾರೆ. ಅದರಲ್ಲಿಯೇ ಮುಂದುವರಿಯುತ್ತೇನೆ" ಎಂದು ನಿಶ್ಚೈಸಿದಳು ಕಾವೇರಿ. ಡಾಕ್ಟ್ರ ಬಂದ ಕೂಡಲೇ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ನುಡಿದಳು.

"ಡಾಕ್ಟ್ರೆ, ಆನು ನಿಂಗೊ ಹೇಳಿದ ಹಾಂಗೆ ಕೇಳುತ್ತೆ, ಮುಂದೆ ಡಾಕ್ಟ್ರೇ ಆವುತ್ತೆ" ಅಂದಳು.

"ಹೂಂ ಹಾಂಗೆ ಬಾ ದಾರಿಗೆ–ಎನಗೆ ಸಂತೋಷ ಆತು" ಅಂದರು ಡಾಕ್ಟ್ರ.

"ಆದರೆ ಒಂದು ಶರ್ತ ಇದ್ದು. ಅದಕ್ಕೆ ನಿಂಗೊ ಒಪ್ಪೇಕು"

"ಎಂತಪ್ಪ, ಆ ಶರ್ತ"

"ಆನು ಕಲ್ತಿಕ್ಕಿ ಬಂದ ಮೇಲೆ ಎನ್ನ ಸಂಪಾದನೆ ಹೇಳಿ ಸುರುವಾದ ಮೇಲೆ ನಿಂಗೊ ಎನಗೆ ಹೇಳಿ ಕರ್ಚಿ ಮಾಡಿದ ಪೈಸೆಯ ವಾಪಾಸು ತೆಕ್ಕೊಳ್ಳೇಕು. ಅಷ್ಟರವರೆಗೆ ಎಲ್ಲಾ ಕರ್ಚಿಯ ವಿವರ ಒಂದು ಪುಸ್ತಕದಲ್ಲಿ ಬರದು ಮಡಿಕ್ಕೊಳ್ಳೇಕು"

"ಆತು, ಹಾಂಗೇ ಮಾಡುತ್ತೆ. ಹಾಂಗಾದರೂ ಒಂದಾರಿ ಕಲಿವಲೆ ಹೆರಡು; ದಿನ ದಿನ ಲೆಕ್ಕ ಬರದು ಅದಕ್ಕೆ ನಿನ್ನ ರುಜು ಹಾಕುಸೇಕೋ?" ಅಲ್ಲಾ ತಿಂಗಳಿಂಗೊಂದಾರಿ ತೋರ್ಸಿದರೆ ಸಾಕೋ" ಮುಗುಳು ನಗುತ್ತಾ ಕೇಳಿದರು ಡಾಕ್ಟ್ರ.

"ನಿಂಗೊ ಆನು ಹೇಳಿದ್ದರ ತಮಾಷೆ ಆಗಿ ತೆಕ್ಕೊಳ್ಳೇಡಿ. ಎನಗೆ ಬೇಜಾರಾವುತ್ತು".

"ಇಲ್ಲೆ ಮಹಾರಾಯ್ತಿ, ನೀನು ಹೇಳಿದ ಹಾಂಗೆ ಮಾಡುತ್ತೆ ಆತೋ ಒಟ್ಟಾರೆ ನೀನು ಸಮಾಧಾನಲ್ಲಿ ಇರೇಕು. ಓದು ಮುಂದುವರಿಶೇಕು. ಇದು ಎನ್ನ ಆಶೆ"

"ಖಂಡಿತಾ ಆನು ನಿಂಗಳ ನಿರಾಶೆ ಮಾಡುಸುತ್ತಿಲ್ಲೆ" ಕಾವೇರಿಯೂ ವಾಗ್ದಾನ ಕೊಟ್ಟಳು.

"ಡಾ॥ ಕೇಶವರೇನೋ ಕಾವೇರಿಯನ್ನು ಓದಲು ಪ್ರೋತ್ಸಾಹಿಸಿದಳು. ಆದರೆ ಅವರು ಮತ್ತೊಂದು ಸಮಸ್ಯೆಯನ್ನು ಎದುರಿಸಬೇಕಾಯಿತು. ಕಾವೇರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವಲ್ಲಿವರೆಗೆ, ಅವಳಿಗೆ ಅಲ್ಲಿಯೇ ವಾಸಿಸುವ ಸೌಲಭ್ಯವಿತ್ತು. ಅದಕ್ಕೆ ಯಾರೂ ಆಕ್ಷೇಪಣೆ ಎತ್ತಲಿಲ್ಲ. ಆದರೆ ಈಗವಳು ಆಸ್ಪತ್ರೆಯ ಸಿಬ್ಬಂದಿಯಲ್ಲ. ಹೊರಗಿನವಳು. ಅವಳಿಗೂ ಆಸ್ಪತ್ರೆಗೂ ಯಾವ ಸಂಬಂಧವೂ ಇಲ್ಲ. ಎಲ್ಲಾದರೂ ಹೊರಗೆ ಬಾಡಿಗೆ ಮನೆಯಲ್ಲಿ ಒಬ್ಬಂಟಿಯಾಗಿ ಇರುವ ವಯಸ್ಸೂ ಅಲ್ಲ. ಅಂತಹಾ ಸುಬಗರ ಊರೂ ಅಲ್ಲ. ಇದಕ್ಕೇನು ಪರಿಹಾರವೆಂದು ಡಾಕ್ಟ್ರು ಹಗಲೂ ರಾತ್ರಿ ಯೋಚಿಸಿದರು. ಎಷ್ಟು ಚಿಂತಿಸಿದರೂ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ಒಂದೆರಡು ದಿವನ ಮೌನಿಯಾದರು. ಕಾವೇರಿ ಜೊತೆಯಲ್ಲಿ ಹೆಚ್ಚಿನ ಮಾತುಕತೆ ಇಲ್ಲದೆ ದಿನ ದೂಡಿದರು. ಕಾವೇರಿಗೂ ಡಾಕ್ಟ್ರ ವರ್ತನೆ ವಿಚಿತ್ರವಾಗಿ ತೋರಿತು. ತಾನು ಅವರು ಹೇಳಿದಂತೆ ಕೇಳಿದ್ದೇನೆ. ಅವರಿಗೂ ಸಂತೋಷವಾಗುವ ಬದಲು ಖಿನ್ನರಾಗಿದ್ದಾರಲ್ಲಾ? ತನ್ನೊಡನೆ ನಗುತ್ತಾ ಮಾತನಾಡುವವರು. ಹೀಗೇಕೆ ಮೌನಿಯಾದರೋ ತನಗರ್ಥವಾಗಿಲ್ಲ ಬಹುಷ್ಟು ಇಷ್ಟು ದೊಡ್ಡ ಹೊರೆ ತನ್ನ ಮೇಲೆ ಬಿತ್ತಲ್ಲಾ ಎಂದು ಬೇಸರವಾಗಿರಬೇಕು. ಈವತ್ತು ಊಟಕ್ಕೆ ಬಂದಾಗ ತಾನೇ ವಿಚಾರಿಸುತ್ತೇನೆ. ಅವರಿಗೆ ಕಷ್ಟವಾಗುವುದುದಾದರೆ ತನಗೆ ವೈದ್ಯಳಾಗುವ ಹುಮ್ಮನಸ್ಸೂ ಇರುವುದಿಲ್ಲ. ಹೇಗೂ ನರ್ಸ್ ಕಲಿಯಬಹುದು. ಅಲ್ಲಿ ಕಲಿಯುವಾಗಲೇ ಆರ್ಥಿಕ ಸಹಾಯವೂ ಸಿಕ್ಕುತ್ತದೆ. ಯಾರ ಹಂಗೂ ಇರುವುದಿಲ್ಲ" ಎಂದು ಯೋಚಿಸಿದಳು.

ಎಂದಿನಂತೆ ಡಾಕ್ಟ್ರು ಕೈಕಾಲು ತೊಳೆದು ಊಟಕ್ಕೆ ಕುಳಿತರು, ಮೌನವಾಗಿಯೇ ತುತ್ತನೆತ್ತಿ ಬಾಯಿಗೆ ತುರುಕುತ್ತಿದ್ದರು. ಕಾವೇರಿ ಅವರ ಮುಂದು ಬಂದು ಕುಳಿತಳು. "ನಿಂಗೊ ಮನ್ನೆಂದ ಮತ್ತೆ ಎನ್ನ ಹತ್ರೆ ಮಾತಾಡುತ್ತಿಲ್ಲಿ! ನಿಂಗೊಗೆ ಎನ್ನ ಮೇಗೆ ಎಂತದೋ ಬೇಜಾರ ಆಯಿದು. ನಿಂಗೊಗೆ ಎನ್ನ ಮುಂದಕ್ಕೆ ಓದುಸಲೆ ಕಷ್ಟ ಆದರೆ ಚಿಂತೆ ಮಾಡೇಡಿ. ಆದರೆ ಹೀಂಗೆ ಬಾಯಿ ಮುಚ್ಚಿ ಕೂದು ಎನ್ನ ಹೊಟ್ಟೆ ಉರುಶೇಡಿ, ಎನಗೆ ತಡವಲಾವುತಿಲ್ಲೆ. ಎನಗಿಲ್ಲಿ ಎರಡು ಮಾತಾಡುವವು ಆರಿದ್ದವು" ಇಷ್ಟು ಹೇಳುವಾಗ ಕಾವೇರಿಗೆ ದುಃಖ ಉಮ್ಮಳಿಸಿ ಬಂತು, ಒಮ್ಮೆಲೇ ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ಕಾವೇರಿ ಎಂತಕಬ್ಬೊ ಹೀಂಗೆ ಕೂಗುತ್ತೆ? ನಿನ್ನ ಕಲುಶಲೆ ಎನಗೆ ಕಷ್ಟ ಆವುತ್ತು ಹೇಳಿ ಅಲ್ಲ ಆನು ಸುಮ್ಮನೆ ಇದ್ದದು. ಹೇಂಗೆ ಕಲುಶಲಕ್ಕು ಹೇಳಿ ಆಲೋಚನೆ ಮಾಡುತ್ತಾ ಇದ್ದೆ. ಹಾಂಗಾಗಿ ರಜಾ ಮಾತು ಕಮ್ಮಿಮಾಡಿದೆ ಅಷ್ಟೆ. ಅಷ್ಟಕ್ಕೆ ಇಷ್ಟು ದೊಡ್ಡರಾಗವೋ! ಹೋಗು ಕಣ್ಣೊರಸಿಗೊ. ಇಲ್ಲೇ ಎನ್ನೆದುರು ಬಂದ ಕೂದು ಉಣ್ಣು-ಒಟ್ಟಿಂಗೇ ಉಂಬೊ ಬಾ. ಎಂದು ಅವಳನ್ನು ಕೈ ಹಿಡಿದು ಎಬ್ಬಿಸಿದರು ಡಾಕ್ಟ್ರು; ಅವಳು ಬಚ್ಚಲ ಮನೆಗೆ ಹೋಗಿ ಮುಖ ತೊಳೆದುಕೊಂಡಳು.

ಡಾಕ್ಟ್ರು ಹೇಳಿದಂತೆ ಮೇಜಿನ ಮುಂದೆ ಕುರ್ಚಿಯಲ್ಲಿ ಕುಳಿತುಕೊಂಡಳು. ಡಾಕ್ಟ್ರೇ ಅವಳಿಗೆ ಅನ್ನ ಸಾರು ಬಳಸಿದರು. ಕಾವೇರಿ ಊಟ ಮಾಡಿ ಇಬ್ಬರ ತಟ್ಟೆಗಳನ್ನು ಎತ್ತಿ ತೊಳೆದಿಟ್ಟಳು. ಮೇಜು ಒರೆಸಿ ಸ್ವಚ್ಛ ಮಾಡಿದಳು; ಅವಳ ಮುಖದಲ್ಲಿ ಸಮಾಧಾನ ಭಾವ ಹೊಮ್ಮಿತು.

"ಈಗ ಸಮಾಧಾನ ಆತೋ" ಕೇಳಿದರು ಡಾಕ್ಟ್ರು.

"ಆತು"

"ಕಾವೇರಿ, ಎರಡು ದಿನಂದ ಆನು ನಿನ್ನ ವಿಷಯವನ್ನೇ ಆಲೋಚನೆ ಮಾಡಿ ಮಾಡಿ ತಲೆ ಕುಂಬು ಮಾಡಿದ್ದೆ. ಅದಕ್ಕೆ ಪರಿಹಾರ ಇನ್ನೂ ಸಿಕ್ಕಿದಿಲ್ಲೆ. ಸಿಕ್ಕಿದ ಪರಿಹಾರಕ್ಕೆ ನೀನು ಒಪ್ಪುತ್ತೀಯೋ ಇಲ್ಲೆಯೋ ಹೇಳುವ ಅನುಮಾನವೂ ಬಂತು"

"ಎಂತ ಪರಿಹಾರ ಹೇಳಿ ಎನಗೆ ಬಿಡಿಸಿ ಹೇಳಿ. ನಿಂಗೊ ಎಂತ ಮಾಡಿದರೂ ಎನ್ನ ಒಳ್ಳೆದಕ್ಕೆ ಹೇಳುದು ಎನಗೆಂದೋ ಅರ್ಥ ಆಯಿತು ಹೇಳಿ" ಒತ್ತಾಯಿಸಿದಳು ಕಾವೇರಿ. "ಕಾವೇರಿ ಇದಕ್ಕೆ ನೀನು ಸರಿಯಾಗಿ ಅರ್ಥ ಮಾಡ್ಯೋಳೇಕು. ಅಂದರೆ ಮಾಂತ್ರ ಆನು ಹೇಳುದು."

"ನಿಂಗೊ ಹೇಳಿ. ಆನು ಅರ್ಥಮಾಡ್ಲೆ ಪ್ರಯತ್ನ ಮಾಡುತ್ತೆ"

"ಕಾವೇರಿ, ನೀನು ಮುಂದಾಣ ಓದಿಂಗೆ ಕಾಲೇಜಿಂಗೆ ಹೋಯೇಕಾವುತ್ತು. ಆಸ್ಪತ್ರೆಗೂ ನಿನ್ನ ಓದಿಂಗೂ ಯಾವ ಸಂಬಂಧವೂ ಇರುತ್ತಿಲ್ಲೆ. ಹಾಂಗಾಗಿ, ನಿನಗೆ ಆಸ್ಪತ್ರೆಲೀ ಉಳುಕ್ಕೊಂಬ ಅನುಕೂಲ ಇರುತ್ತಿಲ್ಲೆ. ನೀನು ಬೇರೆ ಎಲ್ಲಾರು ಮನೆ ಮಾಡೇಕಾವುತ್ತು. ಆನು ಅದರ ಯೋಚಿಸುತ್ತಾ ಇದ್ದೆ".

"ಓ ಅದರ ನಾವು ಆಲೋಚನೆ ಮಾಡಿದ್ದೇ ಇಲ್ಲೆ. ಈಗೆಂತ ಮಾಡುದು?"

"ನೀನು ಹೆರ ಎಲ್ಲಾದರೂ ಬಿಡಾರ ಮಾಡೇಕಾವುತ್ತು."

"ಹೆಳ್ಳಿರೆ ಆನೊಬ್ಬನೇ ಅಲ್ಲಿ ಇರೇಕು"

"ಅಪ್ಪು ಕಾವೇರಿ"

"ಈ ಊರಲ್ಲಿ ಎನಗೆ ನಿಂಗಳ ಬಿಟ್ಟರೆ ಬೇರೆ ಆರ ಪರಿಚಯವೂ ಇಲ್ಲೆ. ನಂಬಿಕೆಯೂ ಇಲ್ಲೆ. ಎಂತ ಮಾಡುದು?

"ಅದಕ್ಕೆ ಆನೊಂದು ಉಪಾಯವ ಆಲೋಚನೆ ಮಾಡಿದ್ದೆ. ಹೇಳಿದರೆ ಸರಿಯಾಗಿ ಕೇಳುವೆಯೋ?"

"ಖಂಡಿತಾ ಕೇಳುವೆ ಡಾಕ್ಟ್ರೆ. ನಿಂಗೊ ಎಂತ ಹೇಳಿರೂ ಆನು ಕೇಳುವೆ ಹೇಳಿ" ಉತ್ಸುಕಳಾದಳು ಕಾವೇರಿ.

"ಎನಗೆ ಆಸ್ಪತ್ರೆಯ ಲೆಕ್ಕಲ್ಲಿ ಮನೆ ಇದ್ದು. ಅದರಲ್ಲಿ ಮೂರು ರೂಮು, ಒಂದು ಅಡಿಗೆಮನೆ, ಸ್ನಾನದ ಮನೆ, ಶೌಚಾಲಯ ಎಲ್ಲಾ ಇದ್ದು. ಇಪ್ಪತ್ತನಾಲ್ಕು ಗಂಟೆ ನೀರು, ವಿದ್ಯುತ್ ಸರಬರಾಜು ಇದ್ದು"

"ಮತ್ತೆ ಅದರ ಬಿಟ್ಟು ಈ ಆಸ್ಪತ್ರೇಲಿ ಎಂತಕೆ ಇದ್ದಿ?"

"ಅಷ್ಟು ದೊಡ್ಡ ಮನೆ ಎನಗೆಂತಕೆ ಬೇಕು ಹೇಳಿ ಅದಕ್ಕೆ ಬೀಗ ಹಾಕಿ, ಆನು ಇಲ್ಲಿದ್ದೆ".

"ಮತ್ತೆ ಅದರಲ್ಲಿ ಎನಗೊಬ್ಬಂಗೆ ಇಪ್ಪಲೆ ಎಡಿಗೋ"

"ಎಡಿಯಾ, ಹಾಂಗೇ ನಿನಗೊಬ್ಬಂಗೆ ಕೂಡ್ಲು ಕೊಡವು. ಇಬ್ರಿದ್ದರೆ ಕೊಡಗು"

"ಇಬ್ರು ಹೇಳಿರೆ"

"ಆನು ನೀನು"

"ಹಾಂಗೆ ಹೇಂಗಿಪ್ಪದು"

"ಆನೂ ನೀನೂ ಮದುವೆ ಆದರೆ ಆತು"

"ಎಂತ ಎನಗೂ ನಿಂಗೊಗೂ ಮದುವೆಯೋ"

"ಅಪ್ಪು ಕಾವೇರಿ, ನಾವು ಮದುವೆ ಏಕೆ ಅಪ್ಪಲಾಗ?"

"ನಿಂಗೊಗೆ ಎನಗೆ ಮದುವೆ ಆಯಿದು ಹೇಳುವ ಸಂಗತಿ ಗೊಂತಿರ."

"ಗೊಂತಿದ್ದು, ಅದರ ವಿವರ ಎಲ್ಲಾ ರಘುರಾಮ ಎನಗೆ ಹೇಳಿದ್ದ"

"ಗೊಂತಿದ್ದಂಡು ನಿಂಗೂ ಹೀಗೆ ಕೇಳುದೋ? ಆನು ಕನಸು ಮನಸ್ಸಿಲ್ಲೂ ನಿಂಗಳ ಆ ದೃಷ್ಟಿಲಿ ಎಂದೂ ನೋಡಿದ್ದಿಲ್ಲೆ"

"ಅದು ಎನಗೂ ಗೊಂತಿದ್ದು ಕಾವೇರಿ,-ಆದರೆ ಇನ್ನು ನೀನು ದೃಷ್ಟಿ ಬದಲಾಯಿಸಲಾಗ ಹೇಳಿ ಇಲ್ಲೆ, ಇದರಿಂದ ಸುಮಾರು ಸಮಸ್ಯೆಗೂ ಪರಿಹಾರ ಆವುತ್ತು."

"ಮತ್ತೆನ್ನ ಓದಿನ ಗತಿ"

"ಹೆದರೇಡ ಕಾವೇರಿ, ನಿನ್ನ ಓದು ಪೂರ್ತಿ ಮುಗಿವಲ್ಲಿವರೆಗೂ–ಎನ್ನ ನಿನ್ನ ಸಂಬಂಧ ಹೀಗೆ ಇಕ್ಕು – ಬೇರೆಯವರ ಕಣ್ಣಿಂಗೆ, ನಾವು ಗಂಡ ಹೆಂಡತಿ ಅಪ್ಪದು ಅಷ್ಟೆ.

"ಡಾಕ್ಟ್ರೇ – ಈ ವಿಷಯ ಆಲೋಚನೆ ಮಾಡ್ಳೆ ಎನಗೂ ಒಂದೆರಡು ದಿನ ಕಾಲಾವಕಾಶ ಕೊಡಿ"

"ಎರಡು ದಿನ ಎಂತಕೆ ಕಾವೇರಿ? ಹತ್ತು ದಿನವೇ ತೆಕ್ಕೊ ಅಮ್ಸರ ಇಲ್ಲೆ. ಸರಿಯಾಗಿ ಯೋಚಿಸಿ ಉತ್ತರ ಹೇಳು. ಒಟ್ಟಾರೆ ನೀನು ಕಲಿಯೇಕು, ಮುಂದೆ ಬರೇಕು, ನಿನ್ನ ಜೀವನ ಮುಂದೆ ಸುಖವಾಗಿರೇಕು ಹೇಳುದು ಎನ್ನ ಉದ್ದೇಶ ಹಾಂಗೇ. ನಿನ್ನ ಮದುವೆ ಆದರೆ ಆನು ಸುಖವಾಗಿಪ್ಪೆ ಹೇಳುವ ಧೈರ್ಯವೂ ಇದ್ದು. ಹಾಂಗಾಗಿ ಆನು ಈ ದಾರಿ ಹುಡುಕ್ಕಿದ್ದು; ಎನ್ನ ತಪ್ಪಾರ್ಥ ಮಾಡ್ಕೋಳೇಡ" ನೀನು ಮದುವೆ ಆವುತ್ತಿಲ್ಲೆ ಹೇಳಿದರೂ ಆನು ಬೇಜಾರ ಮಾಡೆ, ನಿನಗೆ ಮಾಡಬೇಕಾದ ಸಹಾಯವ ಮಾಡುವೆ ಆತೊ? ಡಾಕ್ಟ್ರ ಮಾತು ಮುಗಿಸಿದರು. ಎದ್ದು ಆಸ್ಪತ್ರೆ ಕಡೆಗೆ ನಡೆದರು.

ಕಾವೇರಿಯ ತಲೆ ಮೇಲೆ ಬಂಡೆಕಲ್ಲು ಬಿದ್ದಷ್ಟು ಭಾರವಾಯಿತು; ತಾನಿನ್ನು ವಿವಾಹವಾಗಿ ಜೀವನ ನಡೆಸಲಿಕ್ಕಿದೆ ಎಂಬ ಕಲ್ಪನೆಯೇ ಅವಳಿಗೆ ಇರಲಿಲ್ಲ. ಇದೊಂದು ಹೊಸ ಪ್ರಯೋಗ. ಇದರಲ್ಲಿ ತಾನು ಸೋಲುತ್ತೇನೋ ಗೆಲ್ಲುತ್ತೇನೋ ಗೊತ್ತಿಲ್ಲ. ಮುಂದೆ ತನ್ನ ದಾರಿ ಬದಲಾಗಲೂಬಹುದು; ಮದುವೆಯಾದ ಮೇಲೆ ಡಾಕ್ಟ್ರ ತನ್ನ ಓದಿಗೆ ಅಡ್ಡ ಬಂದರೂ ಬರಬಹುದು. ಓದಿ ಮುಂದೆ ಬರಬೇಕು ಎನ್ನುವ ಆಸೆಗೆ ತಿಲಾಂಜಲಿ ಬಟ್ಟಿ ಹಾಗೆ–ಆದರೆ ಅವರು ಹೇಳಿದಂತೆ ನನ್ನ ಓದನ್ನು ಯಾರ ಹಂಗೂ ಇಲ್ಲದೆ ಮುಂದುವರಿಸಬಹುದು. ಆಧಾರವೇ ಇಲ್ಲದ ತನ್ನ ಬದುಕಿಗೆ ಉರುಗೋಲು ದೊರೆತಂದಾದೀತು; ಎಷ್ಟಾದರೂ ಮರು ಮದುವೆಗೆ ಹಿಂದೇಟು ಹಾಕುವ ಸಮಾಜದಲ್ಲಿ ಡಾಕ್ಟ್ರೊಂದು ಅಪವಾದ ತಾನೇಕೆ ಅವರು ಹೇಳಿದ ದಾರಿಯಲ್ಲಿ ಹೋಗಬಾರದು? ಹೇಗೂ ಊರು ಬಿಟ್ಟಿದ್ದೇನೆ. ಇದೊಂದು ಸಾಧನೆಯೂ ಆಗಲಿ. ಅದಕ್ಕಿಂತ ಮೊದಲು ರಘುರಾಮ ಭಾವನಿಗೊಂದು ಪತ್ರ ಹಾಕಿ ಅವರ ಅಭಿಪ್ರಾಯವನ್ನೂ, ತಂದೆತಾಯಿಯ ಅಭಿಪ್ರಾಯವನ್ನೂ ತಿಳಿದುಕೊಂಡರಾಯಿತು. ಡಾಕ್ಟ್ರ ತನಗೆ ಬೇಕಾದಷ್ಟು ಸಮಯದ ಅವಧಿಯನ್ನು ನೀಡಿದ್ದಾರಲ್ಲಾ. ಈವತ್ತೇ ಈ ವಿಷಯಕ್ಕೆ ಪತ್ರ ಬರೆದು ಹಾಕಬೇಕು ಎಂದು ಯೋಚಿಸಿ, ರಘುರಾಮನಿಗೆ ತನ್ನ ಮುಂದಿನ ಯೋಚನೆಗಳ ಕುರಿತು ಪತ್ರ ಬರೆದು ಹಾಕಿದಳು.

ವಾರದೊಳಗೆ ರಘುರಾಮನಿಂದ ಮರು ಪತ್ರ ಬಂತು. ಕಾವೇರಿಯ ಪತ್ರ ನೋಡಿ, ಅವನಿಗೂ, ಶಾರದೆಗೂ ಸಂತೋಷವಾಯಿತೆಂದೂ, ಡಾಕ್ಟ್ರ ಕೇಶವನಂತಹವರು ಸಮಾಜದಲ್ಲಿ ದೊರಕುವುದು ಅಪರೂಪವೆಂದೂ, ಅವರು ಆದಷ್ಟು ಬೇಗ ವಿವಾಹ ಮುಗಿಸಲಿ ಎಂದೂ ತಿಳಿಸಿದ್ದರು. ಈ ವಿಷಯ ಸದ್ಯ ಅವಳ ತಂದೆ ತಾಯಿಗೆ ತಿಳುಸುವುದು ಬೇಡವೆಂದು, ಮದುವೆಯಾದ ಮೇಲೆ ತಿಳಿಸಿದರೆ ಸಾಕೆಂದು, ದೀರ್ಘ ಪತ್ರ ಬರೆದು ಬೇಕಾದರೆ ತಾನೂ ಶಾರದೆಯೂ ವಿವಾಹಕ್ಕೆ ಬರುವುದಾಗಿಯೂ-ಈ ವಿಷಯದಲ್ಲಿ ಹೆಚ್ಚಿನ ಯೋಚನೆ ಮಾಡುವ ಅವಶ್ಯಕತೆ ಇಲ್ಲವೆಂದೂ ಡಾಕ್ಟ್ರ ಅವಳಿಗೆ ಸರಿಯಾದ ಮಾರ್ಗದರ್ಶಕರೆಂದೂ ಹೊಗಳಿ ಬರೆದಿದ್ದ ರಘುರಾಮ.

ಪತ್ರವನ್ನು ಓದಿ ಕಾವೇರಿಗೆ ತನ್ನ ಸಮಸ್ಯೆಗಳಿಗೆ ಇದೇ ಸರಿಯಾದ ಪರಿಹಾರವೆಂದು ಖಚಿತವಾಯಿತು; ಅಂದೇ ಡಾಕ್ಟರಿಗೆ, ಆ ಪತ್ರವನ್ನು ತೋರಿಸಿದಳು. ಹಾಗೆಯೇ ತನ್ನ ಒಪ್ಪಿಗೆಯುನ್ನೂ ಕೊಟ್ಟಳು. ಡಾ॥ಕೇಶವನಿಗೆ ತುಂಬಾ ಸಂತೋಷವಾಯಿತು.

"ಕಾವೇರಿ, ನಿನ್ನ ರಘುರಾಮ ಭಾವ-ತಲೆ ಇದ್ದ ಮನುಷ್ಯ ಎಂದು ಅವಳ ಭಾವನನ್ನು ಹೊಗಳಿದರು.

"ಹಾಂಗೇ ಆನು ಒಂದು ಒಳ್ಳೆ ದಿನ ಮುಹೂರ್ತ ನೋಡಿ ಅವಕ್ಕೆ ತಿಳುಶುತ್ತೆ"

"ನಿಂಗಳ ಅಬ್ಬೆ ಅಪ್ಪಂಗೂ ತಿಳಿಶೇಡದೋ?"

"ತಿಳಿಶೇಕು ಕಾವೇರಿ. ಆದರೆ ರಜಾ ನಿಧಾನಲ್ಲಿ ತಿಳುಶವೋ. ಅಪ್ಪನ ಕೋಪ, ತಾಪ ತಣ್ಣಗಾಯಿದೋ ಇಲ್ಲೆಯೋ ಹೇಳಿ ಗೊಂತಿಲ್ಲನ್ನೆ. ಆನು ಊರಿಂಗೆ ಹೋಗದ್ದೆ, ಪತ್ರ ಬರೆಯದ್ದೆ ಹತ್ತು ವರ್ಷ ಮೇಲಾತು" ಹಾಂಗಾಗಿ

ಆದರೂ ಎನ್ನ ಅಬ್ಬೆ ಅಪ್ಪಂಗೆ, ನಿಂಗಳ ಅಬ್ಬೆ ಅಪ್ಪಂಗೆ, ತಿಳುಶದ್ದೆ ನಾವು ಮದುವೆ ಅಪ್ಪದು ಸರಿಯಲ್ಲ; ಬೈದರೆ ಬಯ್ಯತ್ತವು; ತಿಳುಶುದೇ ಒಳ್ಳೆದು ಹೇಳಿ ಎನಗೆ ಕಾಣುತ್ತು;

"ಆತು ಆನು ಇಂದೇ ಪತ್ರ ಬರೆದು 'ಮದುವೆ'ಯ ವಿಷಯವ ತಿಳುಶುತ್ತೆ. ನೀನು ನಿನ್ನ ಅಬ್ಬೆ ಅಪ್ಪಂಗೆ ಕಾಗದ ಬರೆ, ಎಂತಾವುತ್ತೋ ಆಗಲಿ"

ಅಂತೆಯೇ ಡಾಕ್ಟ್ರ ಅವರ ತಂದೆ ತಾಯಿಗೆ, ಕಾವೇರಿ ತನ್ನವರಿಗೆ ಪತ್ರ ಬರೆದು ಹಾಕಿದರು.

ಎಂಟು ದಿವಸಗಳಲ್ಲಿಯೇ ಅವರ ತಂದೆ ಶಂಕರ ಭಟ್ಟರಿಂದ ಉತ್ತರ ಬಂತು; ಪತ್ರದ ಸಾರಾಂಶ ಹೀಗಿತ್ತು.

ಅವರ ಮಗ ಹೋದ ಮೇಲೆ ಅವರಮ್ಮ ಪರಮೇಶ್ವರಮ್ಮ, ಅನ್ನ ನೀರು ಬಿಟ್ಟು ಅತಿಯಾಗಿ ದುಃಖಿಸಿದರು. "ಇದ್ದೊಬ್ಬ ಮಾಣಿಯ ಕಲಿವಲೆ ಬಿಟ್ಟಿದ್ದರೆ ನಿಂಗಳ ಗಂಟೆಂತ ಹೋವುತ್ತಿತ್ತು? ಈಗೆಷ್ಟೋ ಜನ ಭಟ್ಟಕ್ಕಳ ಮಕ್ಕೊ, ಮಾಷ್ಟ್ರಕ್ಕಳ ಮಕ್ಕೋ ಎಲ್ಲಾ ಡಾಕ್ಟ್ರ ಕಲಿವಲೆ ಹೋಯಿದವಿಲ್ಲೆಯೋ? ಅವೆಲ್ಲಾ ಜಾತಿಂದ ಹೆರಬಿದ್ದವೋ? ನಿಂಗಳ ತಮ್ಮ ಗಂಗಾಧರನ ಮಗವ ಕಾಲ್ತು ಕಲಿವಲೆ ಹೋಯಿದ; ಮಗಳು ಟೀಚರ ಕೆಲಸ ಕಲಿತ್ತಾ ಇದ್ದು, ಈಗಾಣ ಮಕ್ಕೊ ಅವಕ್ಕೆ ಇಷ್ಟ ಬಂದದರ ಕಲಿತ್ತವು. ಅದಕ್ಕೆಂತಗೆ ಅಡ್ಡಿ ಮಾಡುದು?

"ಅಲ್ಲಾ ಪರಮೇಶ್ವರಿ, ಅವ ಪುರೋಹಿತನ ಮಗ ಆಗಿ ಹೆಣ ಕೊಯ್ಯೇಡದೋ?"

"ಅವಂಗೆ ಇಷ್ಟ ಇದ್ದರೆ ಕೊಯ್ತ? ಅದು ಕಲಿವಲೆ ಬೇಕಾಗಿ ಅಲ್ಲದೋ? ಅವ ಮುಂದೆ ಹೆಣ ಹೊರ್ಲೆ ಹೋಪದು ಅಲ್ಲ. ನಾಲ್ಕು ಜೆನಕ್ಕೆ ಉಪಯೋಗ ಅಪ್ಪ ಹಾಂಗೆ ಡಾಕ್ಟ್ರ ಅಕ್ಕು. ನಿಂಗೊಗೆ ನಮ್ಮಂದ ಹೆಚ್ಚು ಮರ್ಯಾದೆಯೂ ಇರ್ತು. ನ ನಿಂಗೊಗೆ ಮಂತ್ರ ಹೇಳುವಾಗ ಮಾಂತ್ರ ಮರ್ಯಾದೆ, ಇಲ್ಲದಿದ್ದರೆ ದಾರಿಲಿ ಹೋಪಾಗ ಮೂಸುವವು ಆರೂ ಇಲ್ಲೆ. ಇದರೆಲ್ಲಾ ಆಲೋಚನೆ ಮಾಡಿಯೇ ಅವ್ವ ಡಾಕ್ಟ್ರ ಆವುತ್ತೇ ಹೇಳಿದ್ದು. ನಿಂಗಳ ಮುಂಗೋಪದಿಂದ ಇದ್ದೊಬ್ಬ ಮಾಣಿಯ ಕಳಕ್ಕೊಂಡ ಹಾಂಗಾತು. ಎನಗೆ ಮಗನ ಮೋರೆ ನೋಡದ್ದೆ ಬದಕ್ಕಲೆಡಿಯ. ಬೇಗ ಅವಂಗೊಂದು ಕಾಗದ ಬರದು ಹಾಕಿ" ಎಂದು ಒತ್ತಾಯಿಸಿದರು.

"ಆನೂ ರಜಾ ದುಡುಕ್ಕಿದ್ದೆ ಹೇಳಿ ಗೊಂತಾತು ಪರಮೇಶ್ವರಿ"

ಆದರೆ ಈಗ ಅವ ಎಲ್ಲಿದ್ದ ಹೇಳಿ ಕಾಗದ ಬರೆಯಲಿ?

"ಅವ ಕಾಶಿಗೆ ಹೋಯಿದ-ಹೋವುತ್ತೆ ಹೇಳಿದ ಹೇಳಿ ನಿಂಗಳೇ ಹೇಳಿದ್ದಿ, ಒಂದು ಕಾಗದ ಹಾಕಿ.

"ಪರಮೇಶ್ವರಿ, ಕಾಶಿ ಹೇಳಿರೆ ಸಣ್ಣ ಊರಲ್ಲ. ಅಲ್ಲಿ ಎಲ್ಲಿಗೆ ಹೇಳಿ ಕಾಗದ ಹಾಕೇಕು ಆನು. ಅಲ್ಲಿಗೆ ಹೋದೋರ ಹತ್ರೆ ಬಂದೋರ ಹತ್ರೆ ಎಲ್ಲ ವಿಚಾರ್ಸುತ್ತಲೇ ಇರುತ್ತೆ. ಆದರೆ ಆರೊಬ್ಬನೂ ಅವನ ಸುಳಿವು ಕೊಟ್ಟಿದ್ದವಿಲ್ಲೆ" ಹತಾಶರಾಗಿ ನುಡಿದರು ಶಂಕರಭಟ್ಟರು. ಪರಮೇಶ್ವರಿ ಅಮ್ಮನವರ ಕಣ್ಣಲ್ಲಿ ನೀರು ಸುರಿಯಿತು.

"ಇನ್ನು ಅವ ಬಕ್ಕು ಹೇಳುವ ಆಶೆ ಎನಗಿಲ್ಲೆ. ನಿಂಗೊ ಅವನ ಕೊಂದು ತಿಂದ ಹಾಂಗೆ-ಇನ್ನೆನಗೆ ಬದುಕ್ಕಲೂ ಎಡಿಯ. ಬದುಕ್ಕೇಕು ಹೇಳುವ ಆಶೆಯೂ ಇಲ್ಲೆ. ಇದ್ದ ಒಂದು ಪಿಂಡನ ಕಳಕ್ಕೊಂಡ ಮತ್ತೆ ಈ ಬದುಕ್ಕೆಂತಕೆ? ನಿಂಗೊ ಇರಿ".

ಪರಮೇಶ್ವರಿ ಅಮ್ಮನಿಗೆ ಊಟ ತಿಂಡಿ ಯಾವುದೂ ಸೇರಲಿಲ್ಲ. ಮಾನಸಿಕವಾಗಿ, ದೈಹಿಕವಾಗಿ ದಿನೇ ದಿನೇ ಕ್ಷೀಣವಾದರು; ಶಂಕರಭಟ್ಟರು. ಎಷ್ಟೇಷ್ಟೋ ಡಾಕ್ಟ್ರುಗಳಿಗೆ ತೋರಿಸಿದರು. ಅವರು ಬರಕೊಟ್ಟ ಎಲ್ಲಾ ಔಷಧಗಳನ್ನೂ ತಂದು, ಮನೆಯ ಕವಾಟಿನಲ್ಲಿ ತುಂಬಿಸಿದರು. ಆದರೆ ಪರಮೇಶ್ವರಮ್ಮ ಮಾತ್ರ ಅವುಗಳನ್ನು ಕಣ್ಣೆತ್ತಿ ನೋಡಲಿಲ್ಲ. ಈ ರೀತಿ ಒಂದೆರಡು ವರ್ಷ ಬದುಕಿ, ಕೊನೆಗೊಂದು ದಿವಸ ಇಹಲೋಕಯಾತ್ರೆಯನ್ನೂ ಮುಗಿಸಿದರು.

ತನ್ನ ದುಡುಕುತನಕ್ಕೆ ಪಶ್ಚಾತ್ತಾಪ ಪಟ್ಟರು ಶಂಕರ ಭಟ್ಟರು. ಮಗ ಎಲ್ಲಿದ್ದರೂ, ಏನಾದರೂ ಒಮ್ಮೆ ಕಣ್ಣಿಗೆ ಬಿದ್ದರೆ ಸಾಕು ಎಂದಾಗಿತ್ತು ಅವರ ಸ್ಥಿತಿ. ಒಬ್ಬಂಟಿಯಾಗಿಯೇ ಎಂಟು ವರ್ಷ ಬದುಕು ಸವೆಸಿದರು. ಪರಮೇಶ್ವರಮ್ಮ ಹೋದಮೇಲೆ ಬದುಕೇ ನಿಸ್ಸಾರವಾಯಿತು, ಪೌರೋಹಿತ್ಯಕ್ಕೆ ಹೋಗುವುದನ್ನು ಬಿಟ್ಟುಬಿಟ್ಟರು-ಮನೆಯಲ್ಲೊಮ್ಮೆ ಬೇಯಿಸಿ ತಿಂದರೆ ತಿಂದರು, ಇಲ್ಲದಿದ್ದರೆ ಇಲ್ಲ, ಬಾಳೆಹಣ್ಣು ತಿಂದು ನೀರು ಕುಡಿದ ದಿನಗಳು ಇದ್ದವು.

ಡಾ॥ ಕೇಶವನ ಪತ್ರ ಬಂದದ್ದು ನೋಡಿ, ಅತ್ಯಾನಂದವಾಯಿತು. ಲಘುಬಗೆಯಲ್ಲಿ ಲಕೋಟೆಯೊಡೆದು ನೋಡಿದರು. ಪತ್ರದಲ್ಲಿ ತಾನು ಕಾವೇರಿಯನ್ನು ಮದುವೆಯಾಗುವುದಾಗಿಯೂ ಅವಳು ಬಾಲವಿಧವೆಯೆಂದೂ, ಮೊದಲು ಕಳಿಂಗಳಕ್ಕೆ ಕೊಟ್ಟ ಹುಡುಗಿಯೆಂದೂ ಬರೆದಿದ್ದರು; ಕಳಿಂಗಳ ರಾಮಭಟ್ಟರ ಅನಿರೀಕ್ಷಿತ ಸಾವು, ಊರಿಗೇ ಜನಜನಿತವಾಗಿತ್ತು; ಅವರು ಮದುವೆಯಾದ ಹುಡಿಗಿ ಕಲಿಯಲೆಂದು ಕಾಶಿಗೆ ಹೋದ ಸಮಾಚಾರವೂ ಅವರಿಗೆ ತಿಳಿದಿತ್ತು.

"ಮಗ ಏನಾದರೂ ತಪ್ಪು ದಾರಿ ಹಿಡಿಯುವವನಲ್ಲ, ಚೆನ್ನಾಗಿ ಯೋಚಿಸಿಯೇ ಮಾಡುತ್ತಾನೆ; ಹುಡುಗಿ 'ದಿಂಡಿನಹೋಮ'ವಾಗುವ ಮೊದಲೇ ವಿಧವೆಯಾದವಳು. ಅವಳನ್ನು ವಿಧವೆ ಎಂದು ಪರಿಗಣಿಸುವುದೇ ತಪ್ಪು. ಹೇಗೋ ತಮ್ಮ ಮಗ ಬೇಡವೆಂದರೂ ಅವಳನ್ನು ವಿವಾಹವಾಗುತ್ತಾನೆ; ಇನ್ನೊಮ್ಮೆ ನಿಷ್ಟುರ ಕಟ್ಟುವುದಕ್ಕಿಂತ ತಾನೂ, ಅವನಿಗೆ ಆಶೀರ್ವಾದಗಳನ್ನು ಕಳುಹಿಸುವುದೇ ಸೂಕ್ತ. ಸಾಧ್ಯವಾದರೆ ಲಗ್ನಕ್ಕೆ ಕಾಶಿಗೆ ಹೋಗಿ ಧಾರೆ ಎರೆಸಿಕೊಂಡರೂ ಆಯಿತು; ತನಗಿನ್ನು ಯಾರ ಹಂಗೂ ಬೇಡ. ಶೇಷ ಬದುಕನ್ನು ಮಗನೊಂದಿಗಿದ್ದು ಕಳೆದರಾಯಿತು

ಎಂದೇ ಯೋಚಿಸಿದರು ಶಂಕರಭಟ್ಟರು. ಆದರೆ ತಾನು ಕಾಶಿಗೆ ತಲುಪುವುದಾದರೂ ಹೇಗೆ? ಎಂಬ ಚಿಂತೆ ಅವರನ್ನು ಕಾಡಿತು.

ಕಾಶಿಯಿಂದ ರಘುರಾಮನಿಗೆ ಮತ್ತೊಂದು ಪತ್ರ ಬಂತು. ಮುಂದಿನ ತಿಂಗಳು 20ನೇ ತಾರೀಖು ಮಂಗಳವಾರ ಶುಭ ಮಹೂರ್ತ ಇರುವುದೆಂದೂ, ಡಾಕ್ಟರರು ಬರೆದಿದ್ದರು. ಈ ವಿಷಯ ಸಂಬಂಧಪಟ್ಟವರಿಗೆಲ್ಲಾ ತಿಳಿಸಬೇಕೆಂದು, ಸಾಧ್ಯವಾದರೆ ತನ್ನ ತಂದೆಗೆ ಖುದ್ದು ತಿಳಿಸಬೇಕೆಂದೂ ಬರೆದಿದ್ದರು. ಈ ಪತ್ರವನ್ನು ಶಾರದೆಯೂ ಓದಿದಳು. "ಅಂಬಾಗ ನಿಂಗೊ ಒಂದು ಕೆಲಸ ಮಾಡಿ. ನಾಳಂಗೆ ಸಾಗರಕಡೆಂಗೆ ಹೋಗಿ, ಸರಸ್ವತಿ ಮನೆಗೂ, ದೇವಕ್ಕಿಯ ಮನಗೂ ತಿಳಿಶಿ" "ಹೋಪಲೆ ರೈಲಿಂಗೆ ಟಿಕೇಟು ಮಾಡ್ನೋಡದೋ!"

"ಅವು ಬತ್ತವೋ ಇಲ್ಲೆಯೋ!"

"ಬತ್ತವೋ ಇಲ್ಲೆಯೋ ಹೇಳಿ ಇಲ್ಲಿಂದಲೇ ಹೇಳಿದರೆ ಆಗ ನಿಂಗೊ ಖುದ್ದು ಹೋಗಿ ತಿಳಿಶಿಕ್ಕಿ ಬನ್ನಿ" ಶಾರದೆಯ ಹುಕುಂ ಆಯಿತು.

"ಆತು ಮಾರಾಯ್ತಿ. ನಾಳಂಗೆ ಹೆರಡುತ್ತೆ. ಹೇಳಿಕ್ಕಿ ಬತ್ತೆ ಮತ್ತೆ ಇನ್ನಾರಾರಿಂಗೆ ಹೇಳೇಕು ಅದನ್ನೂ ಮುಗುಶುತ್ತೆ"

"ಮತ್ತೊಂದಾರಿ ಸೇಡಿಗುಮ್ಮಗೂ ಹೋಗಿಬನ್ನಿ. ಡಾಕ್ಟ್ರ ಅಪ್ಪಂಗೂ ಭೇಟಿಯಾಗಿ ಬನ್ನಿ."

"ಇದು ಎನಗೆ ಕಠಿಣ ಸಜೆ ಶಾರದೆ. ಶಂಕರಭಟ್ಟು ಹೇಳಿರೆ ಮಹಾಮುಂಗೋಪಿ. ಬಾಯಿಗೆ ಬಂದ ಹಾಗೆ ಬೈವಲೂ ಸಾಕು, ಎನ್ನ ಮನಗೆ ಎಂತಕೆ ಬಂದದು ಹೇಳ್ಲೂ ಸಾಕು".

"ಎಂತ ಬೇಕಾದರೂ ಮಾಡ್ಲಿ. ಅವಕ್ಕೆ ಹೇಳದ್ದೆ ಇಪ್ಪಲಾಗ ಹೇಂಗಾರೂ ಬಡುದು ಗಿಡುದು ಮಾಡವನ್ನೆ. ನಿಂಗೊ ಹೇಳಿಕ್ಕೆ ಬನ್ನಿ."

"ಆತು ಶಾರದೆ. ಊರಿಂಗೆ ಬಂದ ಮತ್ತೆ ಅವಕ್ಕೂ ಹೇಳಿಕ್ಕಿ ಬತ್ತೆ."

"ಮತ್ತೆ ಅವ್ವೆಯ ಅಪ್ಪನ ಕರಕ್ಕೊಂಡೇ ಹೋಪದು. ಅಕ್ಕನ ಧಾರೆ ಎರುಶುದು ಅವರ ಕೈಲಿಯೇ" ನಿಶ್ಚಿತವಾಗಿ ಹೇಳಿದಳು ಶಾರದೆ.

"ಅವು ಒಪ್ಪೇಕಾನೆ?"

"ಅವರ ಒಪ್ಪುಸಲೆ ಗಿಪ್ಪುಸಲೆ ಇಲ್ಲೆ. ಮುದುಕಂಗೆ ಅಕ್ಕನ ಧಾರೆ ಎರದು ಕೊಡುವಾಗ ಅದರ ಕೇಳಿದ್ದವೋ? ಹಾಂಗೆ ಈ ಸರ್ತಿ ಇವರನ್ನೂ ಕೇಳ್ಳಿಲ್ಲೆ. ಒಂದಾರಿ ಮಾಡಿದ ತಪ್ಪಿನ ಅವರ ಕೈಲಿಯೇ ತಿದ್ದುಸೇಕು" ಶಾರದೆಗೆ ಅಕ್ಕನ ಹಿಂದಿನ ಮದುವೆಯ ಕಹಿ ನೆನಪಾಯಿತು. ಅಕ್ಕ ಬೇಡಬೇಡವೆಂದರೂ ಕೇಳದೆ, ಆ ಮುದುಕನ ಕೈಯ್ಯಲ್ಲಿ ತಾಲಿಕಟ್ಟಿಸಿದ್ದು, ಮುದುಕ ಎರಡೇ ದಿವಸಕ್ಕೆ ಇಹಲೋಕ ಯಾತ್ರೆ ಮುಗಿಸಿದ್ದು. ಅಕ್ಕ ವಿಧವೆ ಅನ್ನಿಸಿಕೊಂಡು ಪಡಬಾರದ ಬವಣೆ ಬಂದದ್ದು ಎಲ್ಲವೂ ನೆನಪಾಯಿತು. ಕಣ್ಣು ತೇವವಾಯಿತು. ತನ್ನ ಸೆರಗಿನಲ್ಲಿ ಕಣ್ಣೊರಸಿಕೊಂಡಳು.

"ಅದರೆಲ್ಲಾ ಜಾನ್ಸಿ. ಈಗ ದುಃಖಿಸೇಡ ಶಾರದೆ. ನಾವೆಲ್ಲಾ ಅದರ ಮರೇಕು. ನಿನ್ನ ಅಕ್ಕಂಗೀಗ ಹೊಸ ಬದುಕ್ಕು ಸಿಕ್ಕಿದ್ದು; ಅದರ ಜಾನ್ಸುವೇ ಬಹುಶ್ಯ. ಆ ಮದುವೆ ಸರಿಯಾಗಿರುತ್ತಿದ್ದರೆ ನಿನ್ನ ಅಕ್ಕ ಇಂದು ಒಂದೆರಡು ಮಕ್ಕಳ ಹೆತ್ತು ನಿನ್ನ ಹಾಂಗೆ ಸಂಸಾರ ಮಾಡುತ್ತಿತ್ತು. ಅಷ್ಟೇ ಅದರ ಹೇಳ ಹೆಸರು ಇಲ್ಲದ್ದ ಹಾಮ್ಗೆ ಆವುತ್ತಿತ್ತು. ಆದರೆ ಇಂದು ನಿನ್ನಕ್ಕ ಕಲ್ತುಬಂದು ಒಳ್ಳೆ ಡಾಕ್ಟ್ರ ಆವುತ್ತು ಒಬ್ಬ ಒಳ್ಳೆಯವನ ಕೈಹಿಡಿತ್ತು. ಎಲ್ಲೋರಿಂಗೂ ಬೇಕಾದ ವ್ಯಕ್ತಿತ ಆವುತ್ತು ಅದಕ್ಕೇ ಅದರ ಬದುಕ್ಕಿಲ್ಲಿ ಅದೊಂದು ನಾಟಕದ ಹಾಂಗೆ ನಡದತ್ತು. ಅದಕ್ಕೆ ದೇವರು ಮಾಡುದು ಎಲ್ಲಾ ಒಳ್ಳೇದಕ್ಕೆ ಹೇಳುದು ಹಿರಿಯೋರು".

"ಒಂದು ಲೆಕ್ಕಲ್ಲಿ ನಿಂಗೊ ಹೇಳುದು ಸರಿ ಹೇಳಿ ಕಾಣುತ್ತು. ಅದೆಂತಾರು ಆಗಲಪ್ಪ; ಕಾವೇರಿ ಅಕ್ಕನ ಬದುಕ್ಕಿಗೊಂದು ನೇರ ದಾರಿ ಆತನ್ನೆ. ಅದೇ ಎನಗೆ ಸಂತೋಷ"

"ಮತ್ತೆ ಕೇಶವಜ್ಜಂಗೂ, ಗೆಣಪ್ಪಜ್ಜಂಗೂ ಹೇಳೇಡದೋ" ರಘುರಾಮ ಶಾರದೆಯನ್ನು ಕೆಣಕಿದ.

"ಅವಕ್ಕೆ ಹೇಳದ್ದರೆ ಅಕ್ಕೊ. ಅವು ಕರ್ಚಿಗೆ ಕೊಟ್ಟರೆ ಕಾಶಿವರಗೂ ಕರಕ್ಕೊಂಡೇ ಹೋಪೊ."

ಅದಪ್ಪು ಶಾರದೆ. ಅವರ ಕೇಳಿ ನೋಡುತ್ತೆ"

ಹೇಳಿದ ಹಾಗೆ ರಘು ರಾಮ ಮರುದಿನವೇ ಸಾಗರದ ಕಡೆಗೆ ಹೋಗಿ ಸರಸ್ವತಿಯ ಮನೆ ಸೇರಿದ. ಸರಸ್ವತಿಗೆ ಭಾವ ಬಂದದ್ದು ತುಂಬಾ ಖುಷಿಯಾಯಿತು. "ಎಲ್ಲೋರು ಸೌಖ್ಯಾವೋ ಭಾವ? ಎಂತ ಇದ್ದಕ್ಕಿದ್ದ ಹಾಂಗೆ ಬಂದದು?" ಎಂದು ಕಾಲು ತೊಳೆಯಲು ನೀರು ಕೊಟ್ಟು, ಕುಡಿಯಲು ಬೆಲ್ಲನೀರು ಕೊಟ್ಟು ವಿಚಾರಿಸಿದಳು.

"ಎಲ್ಲೋರು ಸೌಖ್ಯಲ್ಲೇ ಇದ್ದವು ಒಂದಾರಿ ಅರ್ಜೆಂಟು ಇತ್ಲಾಗಿ ಬರೇಕಾತು. ಮನೇಲಿ ರಾಮಚಂದ್ರ, ಅತ್ತೆ ಮಾವ ಇದ್ದವೋ?"

"ಮಾವನೂದೆ, ಇವೂದೆ ಇದ್ದವು. ಅಕ್ಕೋರು ಅವರ ತಂಗೆ ಮನೆಗೆ ಹೇಳಿರೆ ದೇವಕ್ಕಿಯ ಮನೆಗೆ ಹೋಗಿ ಎರಡು ದಿನ ಆತು. ನಾಳಂಗೋ ನಾಡ್ದಿಂಗೋ ಬಕ್ಕು"

"ಅಂಬಾಗ ರಾಮಚಂದ್ರನನ್ನೂ, ನಿನ್ನ ಮಾವನೋರನ್ನೂ ರಜಾ ಇಲ್ಲಿಗೆ ದಿನಿಗೇಳು ಆತೋ. ಎನಗೆ ಅವರ ಹತ್ರೆ ಮಾತಾಡ್ಳಿದ್ದು."

"ಆತು ಭಾವ. ಈಗಳೇ ದಿನಿಗೇಳುತ್ತೆ" ಎಂದು ಒಳಗೆ ಹೋಗಿ ಗಂಡನನ್ನೂ, ಮಾವನನ್ನೂ ಹೊರಗೆ ಹಜಾರಕ್ಕೆ ಕರೆದುಕೊಂಡು ಬಂದಳು.

"ಎಂತ ರಘುರಾಮಣ್ಣ ಇಷ್ಟು ಅರ್ಜೆಂಟಾಗಿ ಬಂದುದು?" ವಿಚಾರಿಸಿದ ರಾಮಚಂದ್ರ

"ನಿಂಗಳ ಹತ್ರೆ ರಜಾ ಮತಾಡ್ಳಿತ್ತು ಅದಕ್ಕೆ ಬಂದದು."

"ಅಂಬಾಗ ನಿಂಗೊ ಮಾತಾಡ್ಕೊಂಡು ಕೂರಿ. ಆನು ಒಳ ಹೋಗಿ ರಜಾ ಅಡಿಗೆ ಮಾಡುತ್ತೆ" ಅಂದವಳು ಸರಸ್ವತಿ.

"ಎನಗೆ ಬೇಕಾಗಿ ಎಂತದೂ ಮಾಡೇಡ ಸರಸ್ವತಿ. ಇದ್ದದರ ಬಳಸು."

"ಇಂದು ಎಂತದೂ ಮಾಡಿದ್ದಲ್ಲೆ ಭಾವ. ಬರೇ ಅಶನ ಸೂಳೆ ಬೋಳು ಕೊದಿಲು ಮಾಂತ್ರ"

"ಸಾಕು ಅಷ್ಟೆ. ಎನಗೆ ಸೂಳೆ ಬೋಳು ಕೊದಿಲು ಹೇಳಿರೆ ಇಷ್ಟ. ಮತ್ತೆ ಮಜ್ಜಿಗೆಯೋ, ಉಪ್ಪೇಕಾಯಿಯೋ ಇರ್ತನ್ನೆ ಧಾರಾಳ ಸಾಕು. ಬಾ ಇಲ್ಲಿಯೇ ಕೂರು." ಸರಸ್ವತಿ ಅಲ್ಲಿಯೇ ಕುಳಿತಳು.

ರಘುರಾಮ ಕಾವೇರಿಯನ್ನು ಕಾಶಿಗೆ ಕರೆಕ್ಕೊಂಡೂ ಬಿಟ್ಟದ್ದು, ಅಲ್ಲಿ ಅವಳು ಟ್ರೈನಿಂಗು ಮಾಡಿದ್ದು, ಡಾಕ್ಟ್ರು ಕೇಶವನನ್ನು ಭೇಟಿಯಾದದ್ದು, ಅವರ ಸಹಾಯದಿಂದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದು, ಮುಂದೆ ಡಾಕ್ಟ್ರು ಕಲಿಯಲು ಹೊರಟಿದ್ದು ಎಲ್ಲವನ್ನೂ ಕೂಲಂಕುಶವಾಗಿ ವಿವರಿಸಿ, ಈಗ ಡಾಕ್ಟ್ರು ಕೇಶವನಿಗೂ, ಕಾವೇರಿಗೂ ಮುಂದಿನ ತಿಂಗಳ 20ನೇ ತಾರೀಕು ಲಗ್ನ ನಿಶ್ಚಯವಾಗಿದೆ ಎಂದೂ ಹೇಳಿ ಮುಗಿಸಿದ. ಇದಕ್ಕೆ ಮೊದಲು ಪ್ರತಿಕ್ರಯಿಸಿದವರು ರಾಮಚಂದ್ರನ ತಂದೆ.

ಒಳ್ಳೆದಾತು ರಘುರಾಮ. ಹೀಂಗಿಪ್ಪ ನಾಲ್ಕು ಮದುವೆ ನಮ್ಮ ಸಮಾಜಲ್ಲಿ ನಡೆದರೆ, ಮುಂದೆ ಹೀಂಗಿಪ್ಪ ಕೂಸುಗೋಕ್ಕೆ ಒಂದು ದಾರಿ ತೋರ್ಸಿಕೊಟ್ಟ ಹಾಂಗೆ ಆವುತ್ತು-ಒಂದೆರಡು ಮದುವೆ ಹೀಗೆ ನಡದ್ದು, ಎನ್ನ ಹೆಂಡತಿಯ ತಂಗೆಯನ್ನೇ ಮರುಮದುವೆ ಮಾಡಿ ಎಂಗೊ ಕೊಟ್ಟದ್ದೆಯೊ."

"ಎಂತಾತು ಅದರ ಗೆಂಡಂಗೆ?"

"ಅವ ಒಂದು ಜೀಪಿಂದ ಬಿದ್ದು ಸತ್ತು ಹೋದ. ಅವಕ್ಕೆ ಮದುವೆ ಆಗಿ ಎರಡು ತಿಂಗಳು ಕಳುದ್ದಷ್ಟೆ. ಎಂಗೊ ಎಲ್ಲಾ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದೆಯೋ. ಕೂಸಿಂಗೊ ಮರುಮದುವೆ ಮಾಡ್ಬೇಕು. ಅದಕ್ಕೆ ಅದರ ಗಂಡನ ಮನೆಯವೂ ಒಪ್ಪಿದವು".

"ಅದಕ್ಕೆ ಅಲ್ಲಿ ಇಲ್ಲಿ ಮಾಣಿಯ ಹುಡುಕ್ಕುದು ಎಂತಕೆ ಎಂಗಳ ಎರಡನೇ ಮಗ ಗೋವಿಂದಗೇ ಮಾಡಿಕೊಡಿ, ಹೇಳಿ ಅವನ ಅಬ್ಬೆ ಅಪ್ಪ ಇಬ್ರೂ ಹೇಳಿದವು. ಅದಕ್ಕೆ ಆ ಗೋವಿಂದನೂ ಒಪ್ಪಿದ. ಕಟ್ಟುಕಟ್ಳೆಲಿ ಮದುವೆ ಮಾಡಿ ಮುಗುಶಿದೆಯೊ. ಈಗ ಅವಕ್ಕೆ ಇಬ್ರು ಮಕ್ಕೊ ಇದ್ದವು. ಅವು ಮನ್ನೆ ರಾಮಚಂದ್ರನ ಮದುವೆಗೂ ಬಂದಿತ್ತಿದ್ದವು".

"ಆನಷ್ಟು ಗೋಷ್ಟಿ ಮಾಡಿದ್ದಿಲ್ಲೆ. ಅಪ್ಪಚ್ಚಿ-ಹಾಂಗಾರೆ ನಿಂಗಳಿಂದ ಎಂತದೂ ಅಭ್ಯಂತರ ಇಲ್ಲೆ ಹೇಳಿ ಆತು.

ರಘುರಾಮನಿಗೆ ಹೊರೆಯೊಂದು ತಲೆಯಿಂದ ಕೇಳಗಿಳಿದಂತಾಯಿತು.

"ಅಂಬಾಗ ಮದುವೆಗೆ ನಿಂಗಳಲ್ಲಿಂದ ಆರು ಬತ್ತಿ?"

"ಎನಗೂ ಸುಮಾರು ಸಮಯಂದ ಒಂದಾರಿ ಕಾಶಿಗೆ ಹೋಯೆಕು ಹೇಳಿ ಇತ್ತು. ಆನು ಹೋಪಾಗ ಎನ್ನ ಹೆಂಡತಿಯೂ ಬಕ್ಕು-ಮತ್ತೆ, ಸರಸ್ವತಿ, ರಾಮಚಂದ್ರನ ಬಿಟ್ಟಿಕ್ಕಿ ಹೋಪಲಿಲ್ಲೆ. ನಿಂಗೊ ಹೆರಡುವ ದಿನಕ್ಕೆ ಎಂಗೊ ಎಲ್ಲಿಗೆ ಬಂದು ಮುಟ್ಟುತ್ತೆಯೋ. ನೀನು ಎಂಗೊಗು ಟಿಕೇಟು ತೆಗೆದು ಮಡುಗಿಕ್ಕು" ಎಂದು ಹೆಗಡೆಯವರು ತನ್ನ ನಿರ್ಧಾರ ತಿಳಿಸಿದರು. ರಘುರಾಮನಿಗೆ ಬಂದ ಕಾರ್ಯ ಸುಲಭದಲ್ಲಿ ಆಯಿತು; ಶಾರದೆ ಹೇಳಿದ್ದು ಸರಿ. ತಾನು ಅಲ್ಲಿಯೇ ಗುಣಿಸಿ ಭಾಗಿಸಿದ್ದು ತಪ್ಪು. ಇವರು ಸಜ್ಜನರು, ಸುಸಂಸ್ಕೃತರು, ತಾನು ಕರೆಯದಿದ್ದರೆ ತಪ್ಪಾಗುತ್ತಿತ್ತು. ಇನ್ನು ದೇವಕಿಯ ಮನೆಯೊಂದು ಉಳಿಯಿತು.

ಈ ದಿನವೇ ಅಲ್ಲಿಗೂ ಹೋಗಿ ಮುಗಿಸಬೇಕು. ಸರಸ್ವತಿ ಮನೆಯಿಂದ ನಾಲ್ಕು ಮೈಲು ದಾರಿ ನಡೆದುಕೊಂಡು ಹೋಗಬಹುದು" ಎಂದು ಯೋಚಿಸಿದ ರಘುರಾಮ "ಸರಸ್ವತಿ, ನಿನಗೆ ಶುದ್ಧಿ ಎಲ್ಲಾ ಗೊಂತಾತನ್ನೆ! ಇನ್ನು ಅಡಿಗೆ ಮಾಡಿದ್ದರೆ ಎನಗೆ ಬೇಗ ಬಳುಸು. ಆನು ಉಂಡಿಕ್ಕಿ ದೇವಕ್ಕಿಯ ಮನೆಗೆ ಹೋಯ್ಕೊಂಡು ಅಲ್ಲಿಂದಲೇ ಊರಿಂಗೆ ಹೋವುತ್ತೆ. ಎನಗೆ ರಜಾ ಮೀವಲೆ ವ್ಯವಸ್ಥೆ ಮಾಡು ಆತೋ! "ಆತು ಭಾವ, ಕೊಟ್ಟಿಗೇಲಿ ಬೆಶಿ ನೀರು ಕಾದೊಂಡೇ ಇದ್ದು ನಿನಗೆ ನೀರಡೆ ತಂದು ಕೊಡುತ್ತೆ ಎಂದು ಒಳಗಿಂದ ಮೈ ಒರಸುವ ವಸ್ತ್ರ ತಂದುಕೊಟ್ಟಳು. ಮುಂಡು ಬೇಕೋ ಭಾವ" ಎಂದು ಕೇಳಿದಳು.

"ಬೇಡ, ಎನ್ನ ಚೀಲಲ್ಲಿ ಇದ್ದು" ಎಂದು ಸ್ನಾನಕ್ಕೆ ಹೊರಟು ಹೋದ.

"ಸರಸ್ವತಿ, ಭಾವ ಮಿಂದಿಕ್ಕಿ ಬಪ್ಪನ್ನ ಮದಲೆ ರಜಾ ಹಲಸಿನಕಾಯಿ ಹಪ್ಪಳ, ಹೊರುದು ಮಡುಗು, ಹಾಂಗೇ ರಜಾ ಹಾಲು ಪಾಯಸವೂ ಮಾಡು. ಆತೋ" ಎಂದರು ಹೆಗಡೆಯವರು.

"ರಘುರಾಮನ ಜೊತೆ, ರಾಮಚಂದ್ರ, ಕೇಶವ ಹೆಗಡೆಯವರೂ ಊಟಕ್ಕೆ ಕುಳಿತರು. ಸರಸ್ವತಿ ಎಲ್ಲರಿಗೂ ಬಳಸಿದಳು, ಅನ್ನಕ್ಕೆ ತುಪ್ಪ, ಉಪ್ಪಿನಕಾಯಿ, ಸೊಳೆ ಸಾರು, ಗಟ್ಟಿಮೊಸರು, ಹಪ್ಪಳ, ಪಾಯಸ ಕ್ರಮದಲ್ಲಿ ಬಳಸಿದಳು ಸರಸ್ವತಿ.

"ಊಟಕ್ಕೆ ಎಂತದೂ ಇಲ್ಲೆ ಹೇಳಿದೆ. ಎನಗೆ ಇಷ್ಟು ಉಂಬಾಗಳೇ ಸಾಕಾತು. ಊಟ ಭಾರೀ ಲಾಯಕ್ಕೈತು ಆತೋ" ಎಂದು ನಾದಿನಿಯನ್ನು ಹೊಗಳಿದ ರಘುರಾಮ.

"ಈಗ ಸರಸ್ವತಿಗೆ ಎಲ್ಲಾ ಮಾಡ್ಲೆ ಅರಡಿತ್ತು, ಮೇಲಾರ, ಕೊದಿಲು, ಮೆಣಸುಕಾಯಿ, ಎಲ್ಲಾ ಅದರ ಅತ್ಯೋರಿಂದಲೂ ಲ್ಯಾಕು ಮಾಡುತ್ತು" ಅದರ ಮಾವನವರು ಸರ್ಟಿಫಿಕೇಟು ಕೊಟ್ಟರು.

"ಸುಮ್ಮನೆ ಹೇಳೇಡಿ ಮಾವ, ಅತ್ಯೋರಷ್ಟು ಎನಗೆಲ್ಲಿ ಬತ್ತು. ರಜಾ ರಜಾ ಕಲಿತ್ತಾ ಇದ್ದೆ ಅಷ್ಟೆ. ಮದಲೆ ಎನಗೆ ಎಂತದೂ ಬಂದೊಂಡು ಇತ್ತಿಲ್ಲೆ. ಒಂದೊಂದು ಅತ್ಯೋರೇ ಹೇಳಿಕೊಟ್ಟದು ಎನಗೆ"

"ಹೇಳಿಕೊಟ್ಟರೂ ಕೆಲವು ಕೂಸುಗೋಕ್ಕೆ ಅರಡಿತ್ತಿಲ್ಲೆ. ಆದರೆ ನೀನು ಬೇಗ ಕಲ್ತೊಂಡೆ. ಅದಕ್ಕೆದ ನಿನ್ನ ಹೊಗಳುದು" ಎಂದರು ಮಾವ.

"ಹೇಂಗಾರೂ ನಿಂಗೊಗೆ ಬೇಶಿ ಹಾಕುತ್ತನ್ನೆ. ಸಾಕು ಅಲ್ಲದೋ" ಮಾತು ಮುಗಿಸಿದ ರಘುರಾಮ.

"ನಿನಗೆ ಎಲೆ ಅಡಕ್ಕೆ ಹಾಕುವ ಅಭ್ಯಾಸ ಇದ್ದೊ?"

"ಇಲ್ಲೆ ಅಪ್ಪಚ್ಚಿ"

"ರಜಾ ಅಡ್ಡಾವುತ್ತಿಯೋ? ಚಾವಡಿಲೇ ಹಾಸಿಕೊಡ್ಲೆ ಹೇಳೇಕೊ?

"ಬೇಡ ಆನು ಮನುಗುತ್ತಿಲ್ಲೆ. ಇಂದೇ ದೇವಕ್ಕಿಯ ಮನೆಗೆ ಹೋಗಿ, ಅಲ್ಲಿಂದ ನಾಳೆ ಉದಿಯಪ್ಪಾಣ ಬಸ್ಸಿಂಗೆ ಊರಿಂಗೆ ಹೋಯೇಕು ಇನ್ನು ಊರಿಲ್ಲಿ ಸುಮಾರು ಕಡೆ ಹೇಳ್ಳೆ ಇದ್ದು"

"ಅಂಬಾಗ ನೀನು ಜೀಪಿಲ್ಲಿ ಅಲ್ಲಿಗೆ ಹೋಗು. ರಾಮಚಂದ್ರ ನಿನ್ನ ಅಲ್ಲಿಗೆ ಬಿಡುಗು, ಅಲ್ಲಿಂದ ಶಿವಮೊಗ್ಗಕ್ಕೆ ಸುಬ್ಬಣ್ಣ ಬಿಡುಗು, ನಡಕ್ಕೊಂಡು ಹೋಪದು ಬೇಡ ಅತ್ತೆ" ಎಂದವರೇ ರಾಮಚಂದ್ರನನ್ನು ಕರೆದು ಜೀಪಿನ ವ್ಯವಸ್ಥೆ ಮಾಡಿಕೊಟ್ಟರು.

"ಸರಸ್ವತಿ ಬೇಕಾದರೆ ನಿನಗೂ ಅವನೊಟ್ಟಿಂಗೆ ಹೋಪಲಕ್ಕು ಒಂದಾರಿ ತಂಗೆಯ ಕಂಡು ಖುಷಿಲಿ ಮಾತಾಡ್ಸಿ ಬಪ್ಪಲಕ್ಕನ್ನೆ? ಹಾಂಗೇ ಅತ್ತೆಯನ್ನು ಕರೆದುಕೊಂಡು ಬನ್ನಿ"

"ಮತ್ತೆ ಮನೇಲಿ?" ಸರಸ್ವತಿಗೆ ಆಸೆ ಇದ್ದರೂ ಹತ್ತಿಕ್ಕಿ ಹೇಳಿದಳು.

"ಮನೆಲ್ಲಿ ಆನಿಲ್ಲೆಯೋ? ಇಂದೇ ಕಸ್ತಲಾಯೇಕಾರೆ ನಿಂಗೊ ಬತ್ತಿಲ್ಲಿರೋ? ಹೋವುತ್ತರೆ ಬೇಗ ಹೊರಡು. ಹೆಚ್ಚು ಹೊತ್ತು ಮಾಡೇಡ" ಮಾವ ಇಷ್ಟು ಹೇಳಿದ್ದೇ ತಡ. ಸರಸ್ವತಿ ಒಳಗೆ ಹೋಗಿ, ಕೈಗೆ ಸಿಕ್ಕಿದ ಸೀರೆಯನ್ನು ಉಟ್ಟುಕೊಂಡು ತಯಾರಾಗಿ ಬಂದಳು" ಮಾವನಿಗೆ ಸಂತೋಷವಾಯಿತು.

"ಕೂಸಿಂಗೆ ಮೂಗಿನ ಮೇಗೆ ಮಸ್ಸಿತ್ತಡದ" ಎಂದು ನಗುತ್ತಾ. "ಇತ್ತು ಮತ್ತೆ ನಿಂಗೊ ಎಂತ ಹೇಳುತಿತರೋ ಹೇಳಿ ಹೆದರಿಕೆ ಆತು" ಎಂದಳು ಸರಸ್ವತಿ.

"ನಿನಗೊಂದಾ ತಂದೆಯ ನೋಡಿಕ್ಕಿ, ಮಾತಾಡಿಕ್ಕಿ ಬಂದ ಹಾಂಗೆ ಆವುತ್ತು ಹೇಳಿ ಆನು ಹೇಳಿದ್ದು"

"ಒಳ್ಳೇದಾತು ಮಾವ; ತುಂಬಾ ಸಮಯ ಆತು ಅಲ್ಲಿಗೆ ಹೋಗದ್ದೆ, ಅವರೆಲ್ಲಾ ಕಾಣದ್ದೆ"

"ಆತೊ ನಿಂಗೊ ಇನ್ನು ಹೆರಡಿ, ಹೊತ್ತಾದರೆ ನಿಂಗೊಗೆ ಬಪ್ಪಲೆ ಕಸ್ತಲಕ್ಕು. ದಾರಿಯು ಒಳ್ಳೆದಿಲ್ಲೆ, ಹೋಗಿಬನ್ನಿ" ಎಂದು ಹೆಗಡೆಯವರು ಬೀಳ್ಕೊಟ್ಟರು. ಸರಸ್ವತಿ ಜೀಪಿನ ಹಿಂದಿನ ಸೀಟಿನಲ್ಲಿ ಕುಳಿತರು. ರಘುರಾಮ ಮುಂದಿನ ಸೀಟಿನಲ್ಲಿ

ರಾಮಚಂದ್ರನ ಪಕ್ಕ ಕುಳಿತಾಯಿತು. ಜೀಪು ಮುಂದಕ್ಕೆ ಚಲಿಸಿತು. ರಘುರಾಮನೂ, ರಾಮಚಂದ್ರನೂ ಅದು ಇದು ಮಾತಾಡಿಕೊಂಡರು. ಆ ವರ್ಷದ ಅಡಿಕೆ ಬೆಳೆ, ಬಾಳೆಗಿಡಕ್ಕೆ ತಗುಲಿದ ರೋಗ–ಅಡಿಕೆಗೆ ಇಳಿದ ಪೇಟೆ ಧಾರಣೆ–ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಆಳು ಸಿಕ್ಕದೆ ಆಗುವ ಬೆಳೆಹಾನಿ ಎಲ್ಲವನ್ನೂ ರಾಮಚಂದ್ರ ಒಂದರ ಮೇಲೊಂದರಂತೆ ಹೇಳುತ್ತಾ, ಜೀಪು ನಡೆಸುತ್ತಿದ್ದ, ರಘುರಾಮ ಹಾಂಗೋ? "ಅದೇಕೆ" ಎಂಬುದಷ್ಟೆ ಹೇಳುತ್ತಿದ್ದ, ಅವನಿಗೆ ಶಾಲೆಯ ವಿದ್ಯಾಭ್ಯಾಸ, ಚಟುವಟಿಕೆಗಲ ಕುರಿತಷ್ಟೇ ಮಾಹಿತಿ ಇತ್ತು. ತೋಟ ನೋಡುವ ಜವಾಬ್ದಾರಿ ತಂದೆಯದಾದ ಕಾರಣ, ಯಾವೊಂದು ವಿಷಯದ ಜ್ಞಾನವೂ ಇರಲಿಲ್ಲ. ಇನ್ನು ಮುಂದೆ ತಾನೂ ತಂದೆಯೊಡನೆ ತೋಟದ ಕೆಲಸಕ್ಕೆ ಹೋಗಿ ಸ್ವಲ್ಪವಾದರೂ ಕಲಿತುಕೊಳ್ಳಬೇಕು ಎಂದು ತೀರ್ಮಾನಿಸಿದ. ಅಷ್ಟರಲ್ಲಿ ಸರಸ್ವತಿ.

"ನಿಂಗೊ ಬರೀ ತೋಟ, ಅಡಕ್ಕೆ ಬಾಳೆ ಹೇಳಿ ಭಾವನ ಕೆಮಿ ತುಂಬಬೇಡಿ, ಬೇರೆಂತಾದರೂ ಶುದ್ಧಿಗೋ ಇದ್ದರೆ ಮಾತಾಡಿ, ಎನಗೂ ನಿಂಗಳ ಮಾತುಗಳ ಕೇಳಿ ಕೇಳಿ ಕೆಮಿ ಕಿವುಡಾತು. ಅಡಕ್ಕೆ ತೋಟ, ಬಾಳೆ, ತೆಂಗು ಕಬ್ಬು ಬಿಟ್ಟ ನಿಂಗಳ ಬಾಯಲಿ ಬೇರೊಂದು ವಿಷಯ ಇಲ್ಲೆ. ಭಾವಂಗೆ ಬೇಜಾರ ಆವುತ್ತಾಯಿಕ್ಕು" ಅಂದಳು.

"ಹಾಗೆಂತದೂ ಇಲ್ಲೆ ಸರಸ್ವತಿ–ಎನಗೆ ಆ ವಿಷಯಲ್ಲಿ ಎಂತದೂ ಗೊತ್ತಿಲ್ಲೆ. ಎಂತ ಹೇಳೇಕು ಹೇಳಿಯೇ ಅರಡಿತ್ತಿಲ್ಲೆ ಅಷ್ಟೆ! ಹಾಂಗೆ ಸುಮ್ಮನೆ ಕೇಳ್ಕೊಂಡು ಇತ್ತಿದ್ದೆ ಅಷ್ಟೆ ರಾಮಚಂದ್ರನಿಗೂ ಸ್ವಲ್ಪ ಅವಳ ಮಾತು ನಾಟಿತು "ಅಣ್ಣ ಆನು ಸರಸ್ವತಿ ಬರೇ ಪಾಪದ ಕೂಸು ಹೇಳಿ ಜಾನ್ಸಿದ್ದೆ. ಈಗ ನೋಡು ಎಷ್ಟು ಜೋರು ಇದ್ದು ಹೇಳಿ. ಹೇಂಗೆ ಎನಗೆ ಕಡಿವಾಣ ಹಾಕಿತ್ತು ಹೇಳ್" ಎಂದು ನಗಾಡಿದ.

"ಕೂಸುಗೊ ಹಾಂಗೆ ಮದುವೆಂದ ಮದಲ ಪಾಪವೇ ಇರುತ್ತವು, ಮದುವೆ ಆಗಿ ಒಂದೆರಡು ಮಕ್ಕೊ ಆದ ಮತ್ತೆ, ಅವು ಹೇಳಿದ ಹಾಂಗೆ ಕೇಳ್ಸುತ್ತವು. ಮನೇಲಿ ಶಾರದೆಯೂ ಎನ್ನ ಮೂಗುದಾರ ಹಿಡಿದು ಕೊಣುಸುತ್ತು"

"ನಿಂಗೊ ಹಾಂಗೆ ಹೇಳೇಡಿ ಭಾವ; ಶಾರದಕ್ಕನ ದೂರು ಹೇಳಿದರೆ ಆನು ಖಂಡಿತ ಅದರ ಹತ್ರೆ ಹೇಳುವೆ" "ಹಾಂಗೆ ಮಾಡೇಡ ಮಾರಾಯ್ತಿ. ಸುಮ್ಮನೆ ಖುಷಾಲಿಂಗೆ ಹೇಳಿದೆ ಅಷ್ಟೆ ಆತೊ"

"ಹಾಂಗಾರೆ ಈಗ ಅದಕ್ಕೆ ತೋಟದ ಶುದ್ಧಿ ಬಿಟ್ಟು ಕಾವೇರಕ್ಕನ ಶುದ್ದಿ ಹೇಳಿ, ಎನಗೆ ಅದರ ಕೇಳೇಕು ಹೇಳಿ ಕೆಮಿ ನೆಟ್ಟಗೆ ಮಾಡ್ಕೊಂಡು ಕೂಯಿದೆ"

ಅದರ ಶುದ್ದಿ ಹೇಳಿ ವಿಶೇಷ ಎಂತದೂ ಇಲ್ಲೆ ಸರಸ್ವತಿ, ಅದು ಜಾನ್ಸಿದ ಹಾಂಗೆ ಈಗ ಎಸ್.ಎಸ್.ಎಲ್.ಸಿ ಪರೀಕ್ಷೆ ಕಟ್ಟಿ ಪಾಸಾಯಿದು, ಮತ್ತೆ ಮುಂದಕ್ಕೆ ಇಂಟರ್ ಮೀಡಿಯೇಟು ಪರೀಕ್ಷೆ ಕಟ್ಟಿ ಕಾಲೇಜಿಂಗೆ ಹೋಗಿಯೇ ಕಲಿಯೇಕು. ಅಂಬಾಗ ಅದಕ್ಕೆ ಆಸ್ಪತ್ರೆಲಿ ಉಳಕ್ಕೊಂಬ ವ್ಯವಸ್ಥೆ ಸಿಕ್ಕ ಮತ್ತೆ ಸಂಬಳೂ ಬಾರ ಅದರೆಲ್ಲಾ ಆಲೋಚನೆ ಮಾಡಿ ಡಾಕ್ಟ್ರೇ ಅದಕ್ಕೆ ಅವನ ಮದುವೆ ಆವುತ್ತೆಯೋ ಹೇಳಿ ಕೇಳಿದಾಂಡ, ನಿನ್ನಕ್ಕ ಮದಲು ಒಪ್ಪಿದ್ದಿಲ್ಲೇಡ. ಮತ್ತೆಂತದೋ ಮದುವೆ ಅವುತ್ತೆ ಹೇಳಿತ್ತಾಡ. ಎನಗೆ ಗೊಂತಿಪ್ಪದು ಇಷ್ಟೇ ಸರಸ್ವತಿ"

ಮತ್ತೆ ಒಳ್ಳೆದೇ ಆತಲ್ಲದೊ ಭಾವ. ಅಕ್ಕಂಗೂ ಒಂದು ನೆಲೆ ಆತು, ಎನಗೆ ತುಂಬಾ ಖುಷಿ ಆತು"

ಎನಗೂ ಇಷ್ಟ ಆತು" ಹೇಳಿದವರ ರಾಮಚಂದ್ರ.

ಅಷ್ಟೆರಲ್ಲಿ ಜೀಪು ದೇವಕಿಯ ಮನೆಯ ಅಂಗಳಕ್ಕೆ ಬಂದು ಮುಟ್ಟಿತು. ಸರಸ್ವತಿ ಜೀಪಿನಿಂದ ಜಿಗಿದು, ದೇವಕಿಯ ಭೇಟಿಗೆ ಮನೆಯೊಳಗೆ ಓಡಿಯೂ ಆಯಿತು.

"ಎಂತ ಸರಸಕ್ಕ ಶುದ್ಧಿ ಇಲ್ಲದ್ದೆ ಬಂದದು?? ಇನ್ನಾರಾರು ಬಯಿಂದವು?"

"ರಘುರಾಮ ಭಾವನೂ ಇವೂ ಬಯಿಂದವು, ಅವು ಜೀಪಿಂದ ಇಳಿದ ಮದಲೆ ಆನು ನಿನ್ನ ಕಾಂಬಲೆ ಓಡ್ಕೊಂಡು ಬಂದೆ."

"ಹಾಂಗಾರೆ ಆನು ಅವರ ವಿಚಾರ್ಸಿಯೊಳ್ತೆ" ಎಂದು ಹೊರ ಚಾವಡಿಗೆ ಬಂದಳು. ಅಷ್ಟರಲ್ಲಿ ಅವರಿಬ್ಬರೂ ಹೊರಗಿದ್ದ ನೀರಿನಲ್ಲಿ ಕೈ ಕಾಲು ಮುಖ ತೊಳೆದುಕೊಂಡು ಚಾವಡಿಗೆ ಬಂದೂ ಆಗಿತ್ತು.

"ಎಂತ ಭಾವಂದ್ರು ಇಬ್ರೂ ಒಟ್ಟಿಂಗೆ ಬಂದದು?" ವಿಚಾರಿಸಿದಳು ದೇವಕ್ಕಿ.

"ಬಪ್ಪಲಾಗ ಹೇಳಿ ಇದ್ದೊ? ಇಬ್ರಿಂಗೂ ದೇವಕ್ಕಿಯ ನೋಡೇಕು ಹೇಳಿ ಆತು ಹಾಂಗಾಗಿ ಬಂದದು?" ಎಂದ ರಾಮಚಂದ್ರ "ಇಲ್ಲಿ ಹತ್ರಲ್ಲೇ ಇಪ್ಪಾಗ ನಿನಗೆ ದೇವಕ್ಕಿಯ ನೋಡೇಕು ಹೇಳಿ ಆಯಿದಿಲ್ಲೆ. ಈಗೆಂತ ಏಕಾಏಕಿ ದೇವಕ್ಕಿಯ ನೆಂಪಾದ್ದು ಅದು ರಘುರಾಮ ಭಾವ ಬಂದಿರೇಕಾರೆ ಎಂತದೋ ವಿಶೇಷ ಇದ್ದು ಹೇಳಿ ಲೆಕ್ಕ" ಹೇಳಿದವಳೇ ದೇವಕಿ ಒಳಗೆ ಹೋಗಿ ಒಂದು ಚೆಂಬು ನೀರು ಎರಡು ಲೋಟಗಳು, ತಟ್ಟೆಯಲ್ಲಿ ಬೆಲ್ಲದ ಚೂರುಗಳನ್ನು ಹಾಕಿ ಮುಂದಿರಿಸಿದಳೂ. ಇಬ್ಬರೂ ಬೆಲ್ಲ ತಿಂದು ನೀರು ಕುಡಿದರು.

"ನಿಂಗೊಗೆ ಕಾಫಿ ಅಕ್ಕೊ ಚಾಯೊವೋ" ಎಂದೂ ಕೇಳಿದಳು.

"ನೀನು ಎಂತ ಮಾಡಿಕೊಡುತ್ತಿಯೋ ಅದು"

"ಹಾಂಗಾರೆ ಚಾಯ ಮಾಡು ದೇವಕ್ಕಿ -ಅದರಟ್ಟಿಂಗೆ ಹೊರದು ಮಡಗಿದ ಹಲಸಿನ ಕಾಯಿ ಸೊಳೆಯನ್ನು ತಂದು ಕೊಡು" ಎಂದವನು ಸುಬ್ಬಣ್ಣ ಜೀಪು ಬಂದ ಸಪ್ಪಳ ಕೇಳಿ ಮಾಳಿಗೆಯಿಂದ ಆಗತಾನೇ ಕೆಳಗಿಳಿದು ಬಂದವನು

"ಎಂತ? ಇಬ್ರೂ ಅಣ್ಣಂದ್ರು ಅಪರೂಪಕ್ಕೆ ಇತ್ಲಾಗಿ ಬಂದದು" ವಿಚಾರ್ಸಿದ ಮನು ಸುಬ್ಬಣ್ಣ.

"ಹೀಂಗೇ ಒಂದಾರಿ ಇತ್ಲಾಗಿ ಬಂದು ಹೋಪ್ಲೆ ಹೇಳಿ ಕಂಡತ್ತು ಹೀಂಗೆ ಬಂದದು; ಮತ್ತೆ ಕಾಶಿಂದ ಕಾವೇರಿ ಅತ್ತಿಗೆಯಕಾಗದ ಬಂದಿತ್ತು"

"ಎಂತಡಾ ವಿಶೇಷ?"

"ವಿಶೇಷ ಇದ್ದು ಹೇಳಿಯೇ ಆನು ಅತ್ಲಾಗಿ ಹೆರಟದು ಅದಕ್ಕೆ ಎಸ್.ಎಸ್.ಎಲ್.ಸಿ.ವರೆಗೆ ಕಲ್ತಾತು"

"ಮತ್ತೆ ಮುಂದೆ ನರ್ಸಿಂಗ್ ಕಲಿತ್ತಾಡವೋ?"

"ಇಲ್ಲೇಡಾ ಅದು ಡಾಕ್ಟ್ರ ಕೆಲಸವನೇ ಕಲಿತ್ತಾಡ"

ಅದಕ್ಕೆ ಇನ್ನೂ ಐದಾರು ವರ್ಷ ಕಲಿಯೇಕನ್ನೆ"

"ಕಲಿತ್ತಾಡ ಅಲ್ಲಿ ಎಂಗಳ ಊರಿನೊಬ್ಬ ಡಾಕ್ಟ್ರ ಇದ್ದ.

"ನೀನು ನರ್ಸ್ ಕೆಲಸಕ್ಕೆ ಹೋಪದು ಬೇಡ. ಡಾಕ್ಟ್ರ ಕೆಲಸವನ್ನೇ ಕಲಿ ಹೇಳಿದಾಂಡ. ಹಾಂಗಾಗಿ ಡಾಕ್ಟ್ರಪ್ಪಲೆ ತಯಾರಾಯಿದು. "ಡಾಕ್ಟ್ರ ಆದರೆ ಒಳ್ಳೇದೇ. ನಮ್ಮಲ್ಲಿ ಹೆಮ್ಮಕ್ಕೋ ಡಾಕ್ಟ್ರ ಆದವು ಇಲ್ಲೇ ಇಲ್ಲೆ. ಹಾಂಗೇ ಹೆಮ್ಮಕ್ಕೊಗೆ ಕಾಯಿಲೆ ಕಸಾಲೆ ಬಂದರೆ ಅವು ಡಾಕ್ಟ್ರ ಹತ್ತರೆ ಹೋಪಲೂ ನಾಚುತ್ತವು ಕಲಿಯಲಿ"

"ಶುದ್ದಿ ಅಷ್ಟೇ ಅಲ್ಲ ಮುಂದಾಣ ತಿಂಗಳು ಇಪ್ಪತ್ತನೇ ತಾರೀಕಿಂಗೆ ಆ ಡಾಕ್ಟ್ರು ಕಾವೇರಿ ಅತ್ತಿಗೆಯ ಮದುವೆಯೂ ಆವುತ್ತಾಡ. ಅದರ ತಿಳುಶಲೇ ಆನು ನಿಂಗಳಲ್ಲಿಗೆ ಬಂದದು" ರಘುರಾಮ ಸಂಕ್ಷಿಪ್ತವಾಗಿ ತಿಳಿಸಿದ.

"ಅದೂ ಒಳ್ಳೆದಾತನ್ನೆ -ಇಬ್ರೂ ಡಾಕ್ಟ್ರುಗೊ ಒಂದೇ ಕಡೆ ಸಿಕ್ಕಿದ ಹಾಂಗೆ ಆವುತ್ತು" ಸುಬ್ಬಣ್ಣ ನುಡಿದ.

"ಹಾಂಗಾರೆ ಅತ್ತಿಗೆಗೆ ಮದಲೊಂದು ಮದುವೆ ಆದ ಸಂಗತಿ ಅವಂಗೆ ಗೊಂತಿದ್ದೊ?

"ಗೊಂತಿದ್ದಂಡೇ ಅವ ಮದುವೆಗೆ ತಯಾರಾದ್ದು"

"ಆರು ಹೇಳಿದ್ದು ಅವಂಗೆ"

"ಆನೇ ಅತ್ತಿಗೆಯ ಅಲ್ಲಿ ಬಿಟ್ಟಿಕ್ಕಿ ಬರೇಕಾರೆ, ಎಲ್ಲಾ ವಿಷಯ ಹೇಳಿಕ್ಕಿ ಬಯಿಂದೆ. ಹಾಂಗೇ ಕಾವೇರಿ ಅತ್ತಿಗೆಯೂ ಅವನ ಹತ್ರೆ ಹೇಳಿದ್ದಾಡ"

"ಅಷ್ಟು ಗೊಂತಿದ್ದೂ ಮದುವೆ ಆವುತ್ತ ಹೇಳಿರೆ ಅವ ಒಬ್ಬ ಪುಣ್ಯಾತ್ಮನೇ ಸರಿ. ಇದಕ್ಕೆ ಎನ್ನ ಬೆಂಬಲ ಇದ್ದು –

ಆನೆಂತಾರೂ ಸಹಾಯ ಮಾಡ್ಲೆ ಇದ್ದರೆ ಹೇಳು ಮಾಡುತ್ತೆ.

"ಸಹಾಯ ಹೇಳಿ ಎಂತದೂ ಬೇಡ ಸುಬ್ಬಣ್ಣ. ಮದುವೆ ಅಪ್ಪದು ಕಾಶಿಲಿ. ಅದಕ್ಕೆ ಎಂಗೊ ಎಲ್ಲೋರೂ ಹೋವುತ್ತಿಯೋ, ನಿಂಗಳಲ್ಲಿಂದ ಆರಾರು ಬತ್ತಿ ಹೇಳಿ ಕೇಳ್ಕೊಂಡು ಹೋಪೋ ಹೇಳಿ ಆನು ಬಂದದು.

"ಎಂಗಳಲ್ಲಿಂದ ಆನೂ ದೇವಕ್ಕಿಯೂ ಬಪ್ಪದು ಗೇರಂಟಿ. ಮತ್ತೆ ಅಪ್ಪ ಅಬ್ಬೆ ಪೈಕಿ ಆರಾರು ಒಬ್ಬ ಬಕ್ಕು. ಇವ್ರಿಂಗೂ ಮನೆ ಬಿಟ್ಟು ಹೆರಡ್ಲೆಡಿಯ. ಬೇಕಾರೆ ಈಗಳೇ ವಿಚಾರ್ಸುವೊ. ಅಬ್ಬೆಯೂ ದೊಡ್ಡಬ್ಬೆಯೂ ಒಳವೇ ಇದ್ದವು" ಎಂದವನೇ ಅಬ್ಬೇ ಅಬ್ಬೇ ಎಂದು ಎರಡು ಸಲ ಚಾವಡಿಯಿಂದಲೇ ಕರೆದ.

"ಎಂತಕೋ ಅಷ್ಟು ದೊಡ್ಡ ಬಾಂಕು ಎಳದ್ದು. ರಜಾ ಮೆಲ್ಲಂಗೆ ದಿನಿಗೇಳ್ಳೆ ಆವುತ್ತಿತ್ತಿಲ್ಲೆಯೋ?"

"ಮೆಲ್ಲಂಗೆ ದಿನಿಗೇಳಿರೆ ನಿಂಗೊಗೆ ಕೇಳೇಕನ್ನೆ – ಅದಕ್ಕಾದ ದೊಡ್ಡಾ ದನಿ ಮಾಡಿದ್ದು"

" ಕೇಳದ್ದೆಂತ! ಕೆಪ್ಪಿಯೋ ಆನು"

"ರಜಾ ಅಲ್ಲದೋ?" ತಮಾಷೆ ಮಾಡಿದ ಸುಬ್ಬಣ್ಣ

"ಆತು ಆನು ಕೆಪ್ಪಿ ಅದೇ ಹೀಂಗಿಪ್ಪ ನಿನ್ನ ಬಾಂಕು ಕೇಳಿ ಅದು ಸರಿ ಎಂತಕೆ ದಿನಿಗೇಳಿದ್ದು? ರಘುರಾಮ, ರಾಮಚಂದ್ರ ಎಲ್ಲಾ ಯಾವಾಗ ಬಂದದು?"

"ಅದಕ್ಕದ ಆನು ನಿಂಗಳ ಕೆಪ್ಪಿ ಹೇಳಿದ್ದು ಅವು ಬಂದು ಒಂದುಗಳಿಗೆ ಆತು, ಕಾಫಿ ಕುಡುದೂ ಆಯಿದು – ನಿನಗೆ ಯಾವದೂ ಕೇಳಿದ್ದಿಲ್ಲೆ"

"ಆತಪ್ಪ ಆನು ಕೆಪ್ಪಿ ಹೇಳಿ ಒಪ್ಪಿಗೊಳ್ಳುತ್ತೆ ಇನ್ನು ಚರ್ಚೆ ಬೇಡ. ಎಂತ ಸಮಾಚಾರ ತಿಳುಶು"

"ದೇವಕ್ಕಿಯ ಅಕ್ಕ ಕಾವೇರಿ ಹೇಳುದು ಕಾಶಿಲಿ ಕಲಿವಲೆ ಹೋದ್ದು ನಿನಗೆ ಗೊಂತಿಕ್ಕು"

"ಗೊಂತಿದ್ದು, ಪಾಪ –ಮದುವೆ ಆಗಿ ಎರಡೇ ದಿನಕ್ಕೆ ಗೆಂಡ ಸತ್ತ ಕೂಸೂ, ಕೇಳುವಾಗಲೇ ಹೊಟ್ಟೆ ಉರಿತ್ತು ಎಂತಾತು ಅದಕ್ಕೆ?"

"ಎಂತದೂ ಆಯಿದಿಲ್ಲೆ. ಮುಂದಾಣ ತಿಂಗಳು 20ನೇ ತಾರೀಕಿನಲ್ಲಿ ಅದಕ್ಕೆ ಮದುವೇಡ. ಅದು ಕಾಶಿಲಿ ಅಪ್ಪದು. ಅದಕ್ಕೆ ಎಂಗ್ ಇಬ್ರೂ ಹೋವುತ್ತೆಯೋ ನಿಂಗಳ ಪೈಕಿ ಆರುಬತ್ತಿ ಹೆಳಿ ವಿಚಾರ್ಸುಲೆ! ಬಂದದು ಆನು.

"ಎಂಗೊ ಇಬ್ರೂ ಮನೆಬಿಟ್ಟು ಹೆಂಡ್ಳೆಡಿಯ, ಅಕ್ಕ ಹೋವುತ್ತರೆ ಆನೂ ಹೋವುತ್ತೆ ಎನಗೊ ಒಂದಾರಿ ಕಾಶಿ ನೋಡಿದ ಹಾಂಗಾವುತ್ತು ಇವು ಒಂದೆರಡು, ಸರ್ತಿ ಹೋಗಿ ಬಯಿಂದವು"

ಅಪ್ಪರಲ್ಲಿ ರಾಮಚಂದ್ರನ ತಾಯಿ ಒಳಗಿಂದ ಹೊರಗೆ ಬಂದರು.

"ಓಹೋ, ಇದು ನಿಂಗಳೋ ಮಾತು ಕೇಳುತ್ತಾ ಇದ್ದು ಆನು ಆರೋ ಹೇಳಿ ಜಾನ್ಸಿದ್ದೆ" ರಜಾ ಕಣ್ಣಡ್ಡ ಆತು ಯಾವಾಗ ಬಂದದು ನಿಂಗೊ?"

ಹೆಚ್ಚು ಹೊತ್ತಾಯಿದಿಲ್ಲೆ ಅಬ್ಬೆ ಅರ್ಧ ಗಂಟೆ ಅಕ್ಕು ಈಗ ಆಸರಿಂಗೆ ‘ಕುಡುದ್ದಷ್ಟೆ"

"ಎಂತದೋ ಕಾಶಿ ಮದುವೆ ಹೇಳಿ ರಜಾ ರಜಾ ಕೆಮಿಗೆ ಬಿದ್ದೊಂಡಿತ್ತು"

"ಅಪ್ಪು ಕಾವೇರಿ ಅತ್ತಿಗೆಯ ಮದುವೆ ಕಾಶಿಲಿ ಆವುತ್ತು ಅದಕ್ಕೆ ಎಂಗೊ ಎಲಲ್ಲಾ ಹೆರಟಿಯೊ" ನೀನು ಬತ್ತಿಯೋ ರಾಮಚಂದ್ರ ತಾಯಿಯನ್ನು ಕೇಳಿದ.

"ಎಂತಕೂ ನಿನ್ನ ಅಪ್ಪನ ಹತ್ರೆ ಕೇಳೇಡದೊ?"

"ಹೇಳಿ ಕೇಳಿ ಎಲ್ಲಾ ಆಯಿದು, ಅಪ್ಪನೂ, ನೀನೂ ಬಪ್ಪದು ಹೇಳಿ ಆಯಿದು, ರೈಲು ಟಿಕೇಟಿಂಗೂ ಹೇಳಿದ್ದೆ" ಮತ್ತೆಂತಕ ಎನ್ನ ಕೆಣಕ್ಕುದು ನೀನು" – ಕಾಶಿಗೆ ಬಾರೆ ಹೇಳಿ ಆನು ಹೇಳ್ವನೋ"

"ಅಂಬಾಗ ಆನೂ ಬತ್ತೆ. ಸುಮಾರು ಸಮಯ ಆತು ಮನೆ ಹೆರಡದ್ದೆ ನಿನ್ನ ಅಪ್ಪ ಮನೆ ಕಾದೊಂಡು ಇರಳಿ"

"ಎಂತಕೆ ಅಪ್ಪನೂ ಬರಳಿ ಅಬ್ಬೆ"

ಹಾಂಗೆ ಎಲ್ಲೋರೂ ಮನೆ ಬಿಟ್ಟು ಹೋಪಲೆಡಿಯ ಇಲ್ಲಿ ಎಂಗೊಗೆ ಸರಿಗಟ್ಟಾದ ಆಳುಗಳೂ ಇಲ್ಲೆ. ಎಲ್ಲವೂ ಕಂಡುಗಳೇ ಸಿಕ್ಕಿದ್ದರ ದೋಚಿಕ್ಕಿ ಹೋಕು." ನಿಂಗಳ ಮನೇಲಿ ಆದರೆ ಹಾಂಗಿಲ್ಲ. ತಲೆತಲಾಂತರಂದ ಬಂದವು. ಮನೆ ಮಕ್ಕಳ ಹಾಂಗಿದ್ದವು. ಕೊಡದ್ದೆ ವಿನಹ ಬಿದ್ದ ಕಸವನ್ನೂ ಕೈಗೆತ್ತವು. ಅವೇ ಅಲ್ಲದೊ ನಿಂಗಳ ಮನೇಲಿ ಕೆಲಸ ಮಾಡುವವು."

"ಅಪ್ಪು ಕಿರಿಯಬ್ಬೆ – ಈಗಳೂ ಅವೇ ಇಪ್ಪದು" ಪುಣ್ಯ ಮಾಡೇಕು ಹಾಂಗಿಪ್ಪ ಕೆಲಸದವು ಸಿಕ್ಕೆಕಾರೆ. ಈ ಗಾಣ ಕಾಲಲ್ಲಿ ಹಾಂಗಿಪ್ಪವು ಸಿಕ್ಕುದೇ ಅಪರೂಪ. ಎಂಗಳ ಮನೇಲಿ ನೋಡು, ರಜಾ ಕಣ್ಣು ತಪ್ಪಿದರ ಆತು ಸಿಕ್ಕಿದರೆ ಎತ್ತೊಂಡು ಹೋಪವೆ ಇಪ್ಪದು. ಅವರ ಕಾದೊಂಡೇ ಇರೇಕು. "ಆತಬ್ಬೆ ಪುರಾಣ ಹೇಳ್ಯೊಂಡು ಕೂರೇಡ –ಅಣ್ಣಂಗೆ ಆದಷ್ಟು ಬೇಗ ಊರಿಂಗೆಹೋಯೇಕಾಡ. ಹಾಂಗಾರೆ ನೀನು ಬಪ್ಪದು ನಿಶ್ಚಯ ಅಲ್ಲದೋ? ಅಪ್ಪನ ಕೇಳ್ಯೋಳೇಡದೋ"

"ಅಪ್ಪನ ಎಂತದ ಕೇಳುದು, ಆನು ಹೋಪದು ಹೋಪದೇ ಮತ್ತಾರು ಎನ್ನ ಕಾಶಿವರೆಗೆ ಕರಕ್ಕೊಂಡು ಹೋವುತ್ತವು. ಅದೂ ಎಲ್ಲೋರು ಒಟ್ಟಿಂಗೆ ಹೋಪದು ಹೇಳಿರೆ ಇನ್ನು ಖುಷಿ ಅಲ್ಲದೋ?"

"ಅಂಬಾಗ ನೀ ಏ ಅಪ್ಪನ ಪರ್ಮಿಶನ್ ತೆಕ್ಕೊಂಬಲಿಲ್ಲೆ ಒಂದು ರೀತಿಯ ಸ್ವತಂತ್ರ ಹೋರಾಟಗಾರ್ತಿ ಅಲ್ಲದೋ?"

ಸುಬ್ಬಣ್ಣವನಿಗೆ ಸುಮ್ಮನ್ನಿರುವುದಾಗಲಿಲ್ಲ.

"ಹಾಗೆಂತದೂ ಅಲ್ಲ. ಅದಕ್ಕೆಲ್ಲಾ ದೊಡ್ಡ ದೊಡ್ಡ ಹೆಸರು ಮಾಡುಗೇಡ. ಅಪ್ಪ 'ಅಡ್ಡಿಬಾರವು ಹೇಳಿ ಎನಗೆ ಗೊಂತಿದ್ದು. ಅವರೊಟ್ಟಿಂಗೆ ಆನು ಇಪ್ಪತ್ತೈದು ವರ್ಷ ಬದುಕಿದ್ದಿಲ್ಲೆಯೋ? ಅವರ ಸ್ವಭಾವ ಎನಗೆ ಗೊಂತಿದ್ದು"

ಒಟ್ಟಿಲ್ಲಿ ಅನ್ಯೋನ್ಯ ದಾಂಪತ್ಯ ನಿಂಗಳದ್ದು. ಹಲಸಿನ ಕಾಯಿಯೂ ಮೇಣವೂ ಇದ್ದಹಾಂಗೆ ಅಲ್ಲದೋ"

"ಇದಾ ಸುಬ್ಬಣ್ಣ ಎನ್ನ ಹೆಚ್ಚು ಲೇವಡಿ ಮಾಡ್ಕೊಂಡು ಕೂರೇಡ. ಎನಗೂ ಕೊಪ್ಪಬಕ್ಕು"

"ಒಂದಾರಿ ನಿನ್ನ ಕೋಪ ನೋಡೇಕು ಹೇಳಿ ಆತು. ಈಗ ಸುಮಾರು ಸಮಯ ಆತು ಅದರ ನೋಡದ್ದೆ. ಅಸಕ್ಕ ಆವುತ್ತು" "ಇದಾ ಮಾಣಿ, ನೀನು ಬಾಯಿ ಮುಚ್ಚುತ್ತೆಯೋ ಇಲ್ಲೆಯೋ" ಆನು ಆರಿದ್ದವು ಆರಿಲ್ಲೆ ಹೆಳ್ಳಿ ನೋಡಿ, ತಲಗೆ ಹೆಟ್ಟುವೆ ನೋಡಿಗೋ"

"ಅದಾ ಈಗ ರಜಾ ಪಿಸುರು ಎಳತ್ತಿಗಿತ್ತಾದ ಅಬ್ಬಗೆ" ಸುಬ್ಬಣ ನಗಾಡಿದ, "ಅಬ್ಬೆಯ ಮೋರೆ ಕೆಂಪಾಗಿ ಒಳ್ಳೆ ಹಣ್ಣಾದ ಅಡಕ್ಕೆ ಹಾಂಗೆ ಕಾಣುತ್ತು"

"ಸಾಕು ಸುಬ್ಬಣ್ಣ, ಇನ್ನಾನು ಹೆರಡುತ್ತೆ" ರಘು ರಾಮ ಹೊರಟು ನಿಂತ.

"ಹಾಂಗಾರೆ ನಿಂಗಳಲ್ಲಿಂದ ಮೂರು ಜೆನ ಬತ್ತವು ಹೇಳಿ ಆತು ಅಲ್ಲದೋ"

"ಹೂಂ ಎಂಗೊ ಮೂರು ಜೆನವೂ ಬತ್ತಿಯೋ"

"ಅಬ್ಬೆ, ಅಂಬಾಗ ನೀನೂ ಹೆರಡು, - ಅಪ್ಪ ನಿನ್ನ ಕರಕ್ಕೊಂಡು ಬಾ ಹೇಳಿದ್ದ ಈಗ ಕಸ್ತಲೆ ಆಯಿದಿಲ್ಲೆ. ಇದೇ ಜೀಪಿಲ್ಲಿ ಅಣ್ಣನ ಶಿವಮೊಗ್ಗಕ್ಕೆ ಬಿಟ್ಟಿಕ್ಕಿ ನಾವು ಅತ್ಲಾಗಿ ಮನೆಗೆ ಹೋಪೊ" ಹೇಳಿದ ರಾಮಚಂದ್ರ

"ಎನಗೆ ಹೆರಡ್ಲೆ ಎಂತದೂ ಆಗೇಡ. ಎನ್ನ ಸೀರೆ ರವಕ್ಕೆ ತೆಕ್ಕೊಂಡರಾತು ಅಷ್ಟೆ" ಎಂದು ಒಳಗೆ ಹೋಗಿ ವಸ್ತ್ರಗಳಿದ್ದ ಚೀಲ ತೆಗೆದುಕೊಂಡು ಬಂದರು.

ಹೂಂ, ಇನ್ನು ನಿಂಗ್ ಜೀಪು ಹತ್ತಿ. ಎಲ್ಲಿದ್ದು ಸರಸ್ವತಿ? ಅದೂದೆ ದೇವಕ್ಕಿಯೂದೆ ಪಟ್ಟಾಂಗ ಹೊಡಕ್ಕೊಂಡು ಇದ್ದವಾದ" -ದಿನಿಗೇಳು, ಬಕ್ಕದ್ದು" ರಾಮಚಂದ್ರ ಸರಸ್ವತಿಯನ್ನು ಕರೆದ. ಅವಳು 'ಓ ಬಂದೆ' ಎಂದಳು - ಈಗ ಜೀಪು ಹೆರಡುತ್ತು. ತಯಾರಾಗು ಎಂದ ರಾಮಚಂದ್ರ. ದೇವಕ್ಕಿ ಓಡಿಕ್ಕೊಂಡು ಬಂದು ಸರಸ್ವತಿಯ ಕಿಗೊಂದು ಮಲ್ಲಿಗೆ ಮಾಲೆಯನ್ನು ಕೊಟ್ಟಳು. ಸರಸ್ವತಿ ಮುಡಿದು ಕೊಂಡಳು. ಜೀಪು ಚಲಿಸತೊಡಗಿತು.

"ಅಂಬಾಗ ಎಂಗೊ ಹೋಯ್ಕೆಂಡು ಬತ್ತೆಯೋ" ಎಂದು ಅತ್ತೆ ಸೊಸೆ ಇಬ್ಬರೂ ಮನೆಯವರಿಗೆಲ್ಲಾ ಕೈಬೀಸಿದಳು. ಜೀಪು ಮುಂದೆ ಸಾಗತೊಡಗಿತು; ಅರ್ಧಗಂಟೆಯಲ್ಲಿ ಶಿವಮೊಗ್ಗ ತಲುಪಿ, ರಘುರಾಮನನ್ನು ಬಸ್ಸಿಗೆ ಕಳುಹಿಸಿ, ಆರುಗಂಟೆಯೊಳಗೆ ಮನೆಸೇರಿಯೂ ಆಯಿತು.

"ನಿಂಗೊ ಬೇಗನೇ ಬಂದಿ. ರಘುರಾಮ ಅಲ್ಲಿಯೇ ಕೂದನೋ"

"ಇಲ್ಲೆ ಅವ ಅಲ್ಲಿಂದಲೇ ಊರಿಂಗೆ ಹೋದ" ಆನು ಇರುಳಾಯೇಕಾರೆ ಮನೆಗೆ ಎತ್ತಿದರೆ ನಾಳಂಗೆ ಶಾಲಿಗೆ ಹೋಪಲಕ್ಕು" ಹೇಳಿ ಊರಿಂಗೆ ಹೋದ. ಶಾಲೆ ಕೆಲಸ ಸುಮಾರು ಬಾಕಿ ಇದ್ದಾಡ" ಎಂದ ರಾಮಚಂದ್ರ.

"ಅವ ಇತ್ಲಾಗಿ ಬಪ್ಪದೇ ಅಪರೂಪ. ಒಳ್ಳೆ ಮಾಣಿ. ಹತ್ರೆ ಇದ್ದ ಕಾರಣ ನಿನ್ನ ಮಾವಂಗೆ ತುಂಬಾ ಸಹಾಯ ಆವುತ್ತು. ಮತ್ತೆ ನಿಂಗಳಿಬ್ಬರಿಂದ ಎಂತ ಉಪಯೋಗವೂ ಅವಕ್ಕೆ ಇಲ್ಲೆ' "ಹಾಂಗಾರೆ ಎಂಗಳೇ ನಿಜವಾದ ಅಳಿಯಂದ್ರು ಅಲ್ಲದೊ" ಅಬ್ಬೆ "ಅಪ್ಪಪ್ಪಾ, ನಿಂಗಳೇ ನಿಜವಾದ ಅಳಿಯಂದ್ರು ಕೆಲಸಕ್ಕೆ ಬಾರದ್ದವು.

"ಅಂಬಾಗ ಎಂಗೊ ಎಂತ ಮಾಡೇಕು ನೀನೇ ಹೇಳು. ಇಷ್ಟು ದೂರಲ್ಲಿ ಇದ್ದಂಡು ಎಂಗೊಗೆ ಎಂತ ಮಾಡ್ಲೆಡಿಗು"

"ರಜಾ ಪೈಸೆ ಆದರೂ ಸಹಾಯ ಮಾಡಿ, ಕಾಶಿಗೆ ಹೋಪದು ಹೇಳಿರೆ ಸುಲಭಲ್ಲ. ನಿಂಗೊ ಅಳಿಯಂದಿರು ಸೇರಿ ಆ ಖರ್ಚಿನ ಪಾಲು ಮೊಡ್ಯೋಳಿ. ಅಷ್ಟಾದರೂ ಸಹಾಯ ಆವುತ್ತನ್ನೆ"

"ಅದಪ್ಪು ಅಬ್ಬೆ, ಅದೆನ್ನ ತಲಗೆ ಹೊಳದ್ದೇ ಇಲ್ಲೆ. ಹಾಂಗೆ ಮಾಡ್ಳುಕ್ಕು. ಹೋಗಿ ಬಪ್ಪ ಕರ್ಚಿನ ಎಂಗಳೇ ಹಾಕುತ್ತೆಯೋ, ಹೇಳಿರೆ ಆನು ಸುಬ್ಬಣ್ಣನೂ ಹಾಕುವೆಯೋ ರಘುರಾಮಣ್ಣ ಅವಕ್ಕೆ ಮೊದಲಿಂದಲೇ ಸಹಾಯ ಮಾಡುತ್ತಾ ಇದ್ದ. ಅವನ ತಲಗೆ ಕರ್ಚಿ ಹಾಕುದ ಬೇಡ".

"ಆತು ನಿಂಗೊ ಇಬ್ರೂ ಹೋಗಿ ಬಪ್ಪ ಕರ್ಚು ನೋಡ್ಯೋಳಿ, ಮತ್ತೆ ಮದುವೆ ಕರ್ಚು ಹೇಳಿ ಇತ್ರು-ಮಂಗಳ ಜೌಳಿ, ಊಟದ ಖರ್ಚು, ಕೂಸಿನ ಚಿನ್ನ ಅದು ಇದು ಹೇಳಿ ಇತ್ರು ಅದಕ್ಕೂ ಒಂದಿಷ್ಟು ಪೈಸೆ ಕೊಡಿ".

"ಎಷ್ಟು ಕೊಡೇಕಬ್ಬೆ!"

"ಇಬ್ರೂ ಸೇರಿ ನಾಲ್ಕು ಸಾವಿರ ಆದರೂ ಕೊಡಿ".

"ನಾಲ್ಕು ಸಾವಿರ ರೂಪಾಯಿಯೇ?" ಕಣ್ಣರಳಿಸಿದ ರಾಮಚಂದ್ರ.

"ನಿಂಗೊಗೆ ಎಂತ ದರಿದ್ರ ಇದ್ದು. ದೇವರು ಬೇಕಾದಷ್ಟು ಕೊಟ್ಟಿದ. ನಿಂಗೊ ಕೊಡುದು ಬೇರೆಯವಕ್ಕೆ ಅಲ್ಲನ್ನೆ? ನಿಂಗೊಗೆ ಕೂಸುಕೊಟ್ಟ ಮಾವಂಗೆ ಅಲ್ಲದೊ? ಅವನೂ ನಿನ್ನ ಅಪ್ಪನ ಹಾಂಗೆ ಹೇಳಿ ಜಾನ್ಸಿ ಕೊಡು. ದೇವರು ನಿನಗೆಂತದೂ ಕಮ್ಮಿ ಮಾಡ"

“ಆತಬ್ಬೆ ಖಂಡಿತಾ ಕೊಡುತ್ತೆ. ಎನಗೆ ಆದೆಲ್ಲಾ ತಲಗೆ ಹೋಯಿದಿಲ್ಲೆ. ನೀನು ಹೇಳಿದ್ದು ಒಳ್ಳೆದಾತು. ಅದಕ್ಕಾದ ಮನೇಲಿ ಹಿರಿಯೋರು ಇರೇಕು ಹೇಳುದು”.

“ಕಿರಿಕಿರಿ ಮಾಡ್ಲೆ ಅಲ್ಲದೋ?”

“ಅಲ್ಲಬ್ಬೆ–ಎಂಗೊಗೆ ಸರಿಯಾದ ದಾರಿ ತೋರ್ಸುಲೆ–ನೀನೂ ಅಪ್ಪನೂ ಇದ್ದ ಕಾರಣ ಆನೂ ಸರಸ್ವತಿಯೂ ನಿಶ್ಚಿಂತೆಲಿ ಬದುಕುತ್ತಿಯೊ”

ತಾಯಿಗೆ ಸಂತೋಶವಾಯಿತು. ತಮ್ಮ ಅವಶ್ಯಕತೆ ಮಕ್ಕಳಿಗಿದೆ. ಅವರು ತಮ್ಮನ್ನು ಆದರಿಸುತ್ತಾರೆ ಎಂಬ ನೆಮ್ಮದಿಯೂ ಬಂತು. ರಘುರಾಮ ರಾತ್ರಿ ಹತ್ತು ಗಂಟೆಗೆ ಮನೆಗೆ ತಲುಪಿದನು, ಸ್ನಾನ ಮಾಡಿ ಊಟಮಾಡಿ ಚೆನ್ನಾಗಿ ನಿದ್ರೆ ಮಾಡಿದ.

“ಸಾಗರದ ಸುದ್ದಿ ಎಲ್ಲಾ ನಳಂಗೆ ಹೇಳುವೆ ಶಾರದೆ. ಎನಗೀಗ ಗಡದ್ದಿಲ್ಲಿ ಒಂದು ಒರಕ್ಕು ಒರಗೇಕು; ಅವೆಲ್ಲಾ ನಮ್ಮೊಟ್ಟಿಂಗೆ ಕಾಶಿಗೆ ಬತ್ತವು. ಎಲ್ಲೋರಿಂಗು ನಿನ್ನ ಅಕ್ಕಂಗೆ ಮದುವೆ ಹೇಳಿ ಸಂತೋಷ ಆಯಿದು.

“ಆತು ನಿಂಗೊ ಎಲ್ಲಾ ವರ್ತಮಾನ ನಾಳಂಗೆ ಹೇಳಿ ಅಮ್ಸರ ಇಲ್ಲೆ, ಎನಗೆ ಕೇಳೇಕಾದಷ್ಟು ತಿಳುದತ್ತು. ಇಷ್ಟರ ವರಗೂ ತಲೆ ಬೆಶಿ ಇತ್ತು. ಆನೂ ಸುಖಲ್ಲಿ ಒರಗುವೆ” ಎಂದಳು ಶಾರದೆ”. ಇಬ್ಬರೂ ನೆಮ್ಮದಿಯಲ್ಲಿಯೇ ನಿದ್ದೆ ಹೋದರು. ಏಳುವಾಗ ಬೆಳಗಾಗಿತ್ತು. ರಘುರಾಮ ಬೇಗ ಬೇಗನೇ ಪ್ರಾತಃ ವಿಧಿಗಳನ್ನು ಮುಗಿಸಿ, ಶಾಲೆಗೆ ಹೊರಡಲು ಸಿದ್ಧನಾಗಿ ನಿಂತ “ಶಾರದೆ, ಆನೊಂದಾರಿ ಶಾಲಗೆ ಹೋಗಿ ಬತ್ತೆ. ಹಾಂಗೇ ಇನ್ನೊಂದು ತಿಂಗಳ ರಜೆ ಹಾಕಿ ಬತ್ತೆ. ಇಂದು ಹೋತ್ತೋಪಕ ನಾವು ನಿನ್ನ ಅಪ್ಪನ ಮನೆಗೆ ಹೋಗಿ ಬಪ್ಪೊ ತಯಾರಾಗು. ಹಾಂಗೇ ಡಾಕ್ಟ್ರ ಅಪ್ಪನನ್ನು ಕಂಡಿಕ್ಕಿ ಮಾತಾಡ್ಸಿಕ್ಕಿ ಬರೇಕು ಆನು.

“ಅಲ್ಲಿಗೆ ನಿಂಗೊ ಮಾಂತ್ರ ಹೋಗಿ ಆನೆಂತಕೆ?”

“ಆತು, ನಿನಗೆ ಇಷ್ಟ ಇಲ್ಲದಿದ್ದರೆ ಬೇಡ”

“ಇಷ್ಟ ಇಲ್ಲೆ ಹೇಳಿ ಅಲ್ಲ. ಸುಮ್ಮನೇ ಆನೆಂತಕೆ ಹೇಳಿ. ಅಷ್ಟು ದೂರ ಮಾಣಿಯನ್ನು ಕಟ್ಕೊಂಡು ಹೋಗೇಡದೋ ಅದಕ್ಕೆ”

“ಸರಿ ಅಂಬಾಗ ಅಲ್ಲಿಗೆ ನಾಳಂಗೆ ಆನೊಬ್ಬನೇ ಹೋವುತ್ತೆ”

ರಘುರಾಮ ತನ್ನ ಮೋಟಾರ್ ಸೈಕಲನ್ನು ಚಲನೆಯಲ್ಲಿಟ್ಟ ಮಗ ಶಂಧು ಅಪ್ಪನಿಗೆ ಕೈ ತೋರಿಸಿ “ತಾತ ಹೊರಡುತ್ತೇನೆ” ಅಂದ.

"ನಾವು ಹೊತ್ತೋಪಾಗ ಹೋಪೋ ಮಗಾ ಈಗ ಅಪ್ಪಂಗೆ ಟಾಟಾ ಮಾಡು ಎಂದಳು ಶಾರದೆ. ಮಗು ಮನಸ್ಸಿಲ್ಲದ ಮನಸ್ಸಿನಿಂದ ಕೈ ಬೀಸಿತು ರಘುರಾಮ ಮುಂದಕ್ಕೆ ಹೊರಟ.

ರಘುರಾಮ ಶಾಲೆಗೆ ಹೋದವನು ಮುಖ್ಯ ಉಪಾಧ್ಯಾಯರನ್ನು ಭೇಟಿಯಾದ.

"ಹೋ ರಘುರಾಮ ಯಾವಾಗ ಬಂದಿರಿ? ಏನು ಸಮಾಚಾರ ನೀವಿಲ್ಲದೆ ನನ್ನ ಕೈ ಮುರಿದ ಹಾಗಾಗಿದೆ; ಎಲ್ಲಾ ಕೆಲಸ ನನ್ನ ತಲೆ ಮೇಲೆ ಬಿದ್ದಿದೆ. ಇನ್ನಾದರೂ ಬಿಡು ಮಾಡಿಕೊಂಡೀರೋ ಹೇಗೆ. ಒಂದು ಹೊರೆ ಕೆಲಸ ಬಾಕಿ ಉಳಿದಿದೆ". "ಇಲ್ಲ ಸಾರ್ ಇನ್ನೂ ಒಂದು ತಿಂಗಳು ನನಗೆ ಬಿಡುವು ದೊರಕುವ ಹಾಗೆ ಕಾಣುವುದಿಲ್ಲ. ಇಷ್ಟು ಹೇಳಲಿಕ್ಕೆ ನಾನಿಲ್ಲಿ ಬಂದಿದ್ದೇನೆ" ಎಂದ ರಘುರಾಮ ತಾನು ಕಾಶಿಗೆ ಕಾವೇರಿಯನ್ನು ಕರೆದುಕೊಂಡು ಹೋದದ್ದು, ಅಲ್ಲಿ ಡಾಕ್ಟರರನ್ನು ಭೇಟಿಯಾದದ್ದು; ಕಾವೇರಿ ಎಸ್.ಎಸ್.ಎಲ್.ಸಿ ಮುಗಿಸಿ ಮುಂದಕ್ಕೆ ವೈದ್ಯಳಾಗಬೇಕೆಂದಿರುವುದು. ಎಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸಿದ ರಘುರಾಮ; ಕಾವೇರಿ 'ವಿಧವೆ' ಎಂಬುದು ಎಲ್ಲರಿಗೂ ತಿಳಿದ ವಿಷಯವೆ ಆಗಿತ್ತು. ಇದನ್ನೆಲ್ಲಾ ಕೇಳಿದ ಮುಖ್ಯೋಪಾಧ್ಯಾಯರಿಗೆ ತುಂಬಾ ಸಂತೋಷವಾಯಿತು.

"ರಘುರಾಮ ಭಟ್ಟರೆ–ನೀವು ಒಳ್ಳೇ ಕೆಲಸವನ್ನೇ ಮಾಡಿದ್ದೀರಿ ನಿಮ್ಮ ವಿಷಯದಲ್ಲಿ ನಾನು ತುಂಬಾ ಹೆಮ್ಮೆ ಪಡುತ್ತೇನೆ. ನೀವೊಂದು ಆದರ್ಶ ಶಿಕ್ಷಕರು ಮಾತ್ರವಲ್ಲ. ಸಮಾಜದ ಬದಲಾವಣೆಗೆ ಹೋರಾಡುವವರು ಎಂಬುದು ನನಗರ್ಥವಾಯಿತು. ಆದರೂ.... "ಏನು ಸಾರ್"

"ಏನಿಲ್ಲ; ನೀವಿಲ್ಲದೆ ನಾನು ಎಲ್ಲವನ್ನೂ ಸುಧಾರಿಸುವುದು ಹೇಗೆ ಎಂಬುದೇ ನನ್ನ ಆತಂಕ"

"ನೀವು ಚಿಂತೆ ಮಾಡಬೇಡಿ ಸಾರ್. ನಾನು ರಜೆಯಲ್ಲಿದ್ದರೂ, ಆಗಾಗ ಶಾಲೆಗೆ ಬಂದು ನಿಮಗೊಂದಿಷ್ಟು ಸಹಾಯ ಮಾಡಿ ಹೋಗುತ್ತೇನೆ. ಹಾಜರಿ ಪಟ್ಟಿಯಲ್ಲಿ ಮಾತ್ರ ಸಹಿ ಹಾಕುವುದಿಲ್ಲ ಅಷ್ಟೆ–ಅದರಿಂದ ನಿಮಗೂ ತೊಂದರೆ . ನನಗೂ ತೊಂದರೆ ಹೇಗಿದ್ದರೂ ನನಗೆ ಸಾಕಷ್ಟು ರಜೆಗಳು ಜಮಾ ಉಳಿದಿವೆಯಲ್ಲಾ?"

"ಒಂದು ವರ್ಷ ಬೇಕಾದರೂ ನೀವು ರಜೆಯಲ್ಲಿ ಇರಬಹುದು ಅಷ್ಟಿದೆ. ನೀವೆಂದೂ ರಜೆ ಹಾಕೇ ಇಲ್ಲವಲ್ಲಾ"

"ಸರಿ ಸಾರ್, ನಾನಿನ್ನು ಬರುತ್ತೇನೆ. ನನ್ನ ರಜಾ ಅರ್ಜಿಯನ್ನು ಈಗ ಕೊಡುತ್ತೇನೆ" ಎಂದು ಅಲ್ಲಿಯೇ ಅರ್ಜಿಯನ್ನು ಬರೆದುಕೊಟ್ಟು ಮನೆಯ ಕಡೆಗೆ ಹೊರಟ; ಮನೆಗೆ ಬಂದು ಊಟ ಮಾಡಿ ಒಂದಿಷ್ಟು ಅಡ್ಡಾಗಿ ಮೂರು ಗಂಟೆ ಹೊತ್ತಿಗೆ ಶಾರದೆಯನ್ನು ಮಗನನ್ನೂ ಕರೆದುಕೊಂಡು ಅಪ್ಪಣ್ಣ ಭಟ್ಟರ ಮನೆ ಕಡೆಗೆ ಹೊರಟ. ಹೋಗುವ ದಾರಿಯಲ್ಲಿಯೇ ಕೇಶವ ಭಟ್ಟರೂ, ಗಣಪತಿಭಟ್ಟಾರೂ ಇದಿರಾದರು. ರಘುರಾಮ ಬೈಕನ್ನು ನಿಲ್ಲಿಸಿ ಕೆಳಗಿಳಿದ. ಶಾರದೆಯೂ ಕೆಳಗಿಳಿದಳು.

"ಎಂತ ಮಾವಂದ್ರು ಎಲ್ಲಿಗೆ ಹೆರಟದು" ಎಂದು ರಘುರಾಮನೇ ವಿಚಾರಿಸಿದ. ಇಬ್ಬರೂ ಕಕ್ಕಾಬಿಕ್ಕಿಯಾದರು. ಅದರ ಬಾಯಿಂದ ಮಾತೇ ಹೊರಡಲಿಲ್ಲ. ರಘುರಾಮನೇ ಮಾತಿಗಿಳಿದ.

"ನಿಂಗೊ ಸಿಕ್ಕಿದ್ದು ಒಳ್ಳೆದಾತು, ಇದೇ ತಿಂಗಳ ಇಪ್ಪತ್ತನೇ ತಾರೀಖಿಂಗೆ ಕಾವೇರಿ ಅತ್ತಿಗೆಯ ಮದುವೆ ಇದ್ದು. ಮದುವೆ ಅಪ್ಪದು ಕಾಶಿಲಿ?

"ಹಂ, ಅದು ಕಲಿಯೇಕು ಹೇಳಿ ಅಲ್ಲದೊ ಅಲ್ಲಿಗೆ ಹೋದ್ದು? ಮಾಣಿ ಆರು" ಉತ್ಸಾಹ ಬಂತು ಕೇಶವ ಭಟ್ಟರಿಗೆ.

"ಅದು ಅಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟಿ, ಒಳ್ಳೆ ಮಾರ್ಕು ತೆಕ್ಕೊಂಡು ಪಾಸಾಯಿತು; ಅದು ಕೆಲಸ ಮಾಡ್ಕೊಂಡಿದ್ದ ಆಸ್ಪತ್ರೆಲಿ ನಮ್ಮೂರಿನ ಕೇಶವ ಹೇಳುವ ಡಾಕ್ಟ್ರಿದ್ದ. ಅವನ ಮನೆ ಸೇಡಿಗೊಮ್ಮೆ. ಅಪ್ಪನ ಹೆಸರು ಶಂಕರಭಟ್ಟ ಹೇಳಿ. ಅದು ಮದುವೆ ಅಪ್ಪದು ಅವನ ಮಗನ. ಈ ಶುದ್ಧಿಯ ನಿಂಗೊಗೆ ಮೊದಲೇ ತಿಳುಶುದು ಒಳ್ಳೇದು ಹೇಳಿ ಇತ್ತು ಎನಗೆ. ಪುಣ್ಯಲ್ಲಿ ನಿಂಗಳೇ ಎದುರು ಸಿಕ್ಕಿದ್ದಿರನ್ನೆ ಒಳ್ಳೆದಾತು"

"ರಘುರಾಮ, ನಿನಗೆ ಇನ್ನೂ ಎಂಗಳಮೇಗೆ ಕೋಪ ಹೋಯಿದಿಲ್ಲೆ ಹೇಳಿ ಕಾಣುತ್ತು"

"ಕೋಪ ಎಂತದೂ ಇಲ್ಲೆ ನಿಂಗೊಗೆ ಗೊಂತಿದ್ದರೆ ಒಳ್ಳೆದು ಹೇಳಿ ಕಂಡತ್ತು. ಇಲ್ಲದಿದ್ದರೆ ಅದಕ್ಕೆ ಕೈಯ್ಯೋ ಕಾಲೋ ಸೇರ್ಲೆ. ಸುರುವಕ್ಕು ಅದಕ್ಕೆ"

"ರಘುರಾಮ, ಎಂತದೋ ಒಂದು ಕೆಟ್ಟ ಗಳಿಗೇಲಿ ಎಂಗೊ ಎಂತದೋ ಬೊಗಳಿದ್ದೆಯೋ, ಅದಕ್ಕೆ ಪಶ್ಚಾತ್ತಾಪವೂ ಪಡುತ್ತೆಯೊ–ಎಂಗೊ ಒಂದು ದಾರಿಲೇ ನಡೆದು ಅಭ್ಯಾಸ ಇದ್ದವು. ಇನ್ನೊಂದು ದಾರಿ ಇಕ್ಕು ಹೇಳುವ ಕಲ್ಪನೆಯೂ ಎಂಗಳ ತಲಗೋಕೆ ಗೊಂತಿಲ್ಲೆ. ನಿನ್ನ ಹಾಂಗಿಪ್ಪ ಹೊಸ ತಲಗೋಕ್ಕೆ ಹೊಸದಾರಿ ಹೊಳದ್ದು. ಒಂದು ಲೆಕ್ಕಲ್ಲಿ ಅದು ಸರಿಯಾದ ದಾರಿ ಹೇಳಿ ಎನಗೆ ಈಗ ಅರ್ಥವಾಯಿತು. ನೀನು ಆಂದ್ರಾಣದ್ದರ ಮನಸ್ಸಿನಲ್ಲಿ ಮಡುಗೇಡ ಆತೊ; ಅದಕ್ಕೆ ಒಳ್ಳೆದಾಗಲಿ. ಎಂಗೊಗೆ ಸಂತೋಷವೇ"

"ಹಾಗೆಂತ ಇಲ್ಲೆ ಮಾವ; ನಿಂಗಳೊದೆ ಕಾಶಿಗೆ ಬತ್ತರೆ ಬನ್ನಿ" ಒಟ್ಟಿಂಗೆ ಹೋಪಲಕ್ಕು.

"ಎಂತ ತಮಾಷೆ ಮಾಡುತ್ತಿಯೊ ಎಂಗಲ. ಎಂಗೊ ಕಾಶಿಗೆ ಬಪ್ಪದೊ; ಅದೂ ಕಾವೇರಿಯ ಮದುವೆಗೆ? ಅದು ಎಂಗಳ ಕಂಡ ಕೂಡ್ಲೆ, ತಲೆ ಬೋಳ್ಸಿ ಮೂರು ನಾಮ ಹಾಕಿ ಕಳ್ಸುಗು ಅಷ್ಟು ಕೋಪ ಇಕ್ಕು ಅದಕ್ಕೆ".

ಈಗ ಶಾರದೆ ಮಾತಿಗೆ ಶುರುಮಾಡಿದಳು.

"ಹಾಗೆಂತದೂ ಮಾಡದೂ ಮಾವ. ಅಕ್ಕಂಗೆ ಕಲಿಯೇಕು ಹೇಳಿತ್ತು. ಕಲ್ತಕ್ಕು ಮುಂದೆ ಡಾಕ್ಟ್ರಾಯೇಕು ಹೇಳಿದ್ದು ಅದೂ ಮಾಡುಗು ಅದಕ್ಕೆ ಛಲ ಇದ್ದು ಅಷ್ಟೆ. ನಿಂಗಳ ಮೇಲೆ ದ್ವೇಶ ಎಂತದೂ ಇರ. ಒಂದು ಲೆಕ್ಕಲ್ಲಿ ನಿಂಗೊ ಹೇಳಿದ್ದು, ಮಾಡಿದ್ದು ಅದಕ್ಕೆ ಎಲ್ಲಾ ಒಳ್ಳೆದೇ ಆಯಿತು. ಇಲ್ಲದಿದ್ದರೆ ಅದು ಅಷ್ಟು ಬೇಗ ಊರು ಬಿಟ್ಟು ಹೋವುತ್ತಿಲ್ಲೆ. ಕಲಿವ ಸಾಧನೆಯನ್ನು ಮಾಡುತಿತ್ತಿಲ್ಲೆ; ಹಾಂಗಾಗಿ ನಿಂಗೊ ಎಂಗಳ ಒಟ್ಟಿಂಗೆ ಬತ್ತರೆ ಬನ್ನಿ".

"ಅಂಬಾಗ ನಿನ್ನ ಅಕ್ಕಂಗೆ ಎಂಗಳ ಮೇಲೆ ಕೋಪ ಇಲ್ಲೆಯೋ?

"ಕಂಡಿತಾ ಇರ ಮಾವ; ಬೇಕಾದರೆ ನೋಡಿ–ನಿಂಗಳಂದಾಗಿಯೇ ಅಕ್ಕ ದಡ ಮುಟ್ಟಿದ್ದು".

"ಬೈದರೆ ಎರಡು ಬೈಯಲಿ–ಎರಿತರೋ ಬಡಿಯನೆ. ನೀನು ಹೋವುತ್ತರೆ ಆನೂ ಬತ್ತೆ. ಒಂದಾರಿ ಕಾಶಿ ನೋಡಿದ ಹಾಂಗಾತು".

"ನಿಂಗೊ ದಿನಿಗೇಳುದು ತಮಾಶೆಗೆ ಅಲ್ಲನ್ನೆ" ಕೇಶವ ಭಟ್ಟರಿಗೆ ಇನ್ನೂ ಅನುಮಾನ.

"ಅಲ್ಲ ಮಾವ ಬತ್ತರೆ ಬನ್ನಿ ನಿಂಗೊಗೂ ಎಂಗಳೊಟ್ಟಿಂಗೆ ಎರಡು ಟೀಕೇಟು ತೆಗೆದು ಮಡುಗುತ್ತೆ" ಅಂದ ರಘುರಾಮ. "ಅಕ್ಕಂರ್ಬ, ಎಂಗಳೂ ಬತ್ತೆಯೊ. ಟಿಕೇಟಿನ ಪೈಸೆ ಎಂಗೊ ಕೊಡುವೆಯೊ. ಎಂಗಳ ಕರಕ್ಕೊಂಡು ಹೋಗಿ ತಂದು ಬಿಡುವ ಜವಾಬ್ದಾರಿ ನಿಂಗಳದ್ದು. ಊರು ಬಿಟ್ಟು ಪರವೂರಿಗೆ ಕಾಲು ಮಡುಗಿ ಎಂಗೊಗೆ ಗೊತ್ತಿಲ್ಲೆ" ತಮ್ಮ ಅಸಹಾಯಕ ಸ್ಥಿತಿಯನ್ನು ಮುಗ್ಧರಂತೆ ನುಡಿದರು. ರಘುರಾಮನಿಗೂ ಹೌದೆನಿಸಿತು.

"ನಿಂಗೊ ಚಿಂತೆ ಮಾಡೇಡಿ. ಎಲ್ಲೋರನ್ನೂ ಕರಕ್ಕೊಂಡೂ ಹೋಪ ಜವಾಬ್ದಾರಿ ಎನ್ನದು. ಇನ್ನೇನು ಮುಂದೆ ಹೋವುತ್ತೆ.

"ಎಂಗೊ ಮಾವನಲ್ಲಿ ಹೆರಟವು"

"ಆತಂಬಾಗ, ಕಾಂಬೊ" ಎಂದವರು ಅವರು ಆ ಕಡೆಗೆ ರಘುರಾಮ, ಶಾರದೆ ಹೊರಟು ಹೋದರು.

ರಘುರಾಮ, ಶಾರದೆ, ಮಗು ಶಂಭು ಅಪ್ಪಣ್ಣ ಭಟ್ಟರಲ್ಲಿಗೆ ತಲುಪಿದರು.

"ಎಂತ ಹೇಳದ್ದೆ ಕೇಳದ್ದೆ ಬಂದುದು?" ಎಂದು ವಿಚಾರಿಸಿದರು. ಶಂಕರಮ್ಮ ಅಪ್ಪಣ್ಣ ಭಟ್ಟರು, ಮಗು ಆಗಲೇ ಅಜ್ಜಿಯ ಕಂಕುಳು ಸೇರಿದ್ದ.

"ಇಲ್ಲಿಗೆ ಬರೇಕಾರೆ ಹೇಳಿ ಕೇಳಿ ಮಾಡೇಕೊ? ಮನಸ್ಸಪ್ಪಾಗ ಎದ್ದಿಕ್ಕಿ ಬಪ್ಪದೇ ಅಲ್ಲದೋ?" ಎಂದು ರಘುರಾಮ ತನ್ನ ಬೈಕನ್ನು ಪಕ್ಕಕ್ಕೆ ಸರಿಸಿಟ್ಟು ಕೀಲಿ ಹಾಕಿ ಒಳ ನಡೆದ. ಶಾರದೆಯೂ ಅವನನ್ನು ಅನುಸರಿಸಿದಳು;

"ಅದಪ್ಪಪ್ಪಾ ಇದು ನಿಂಗಳದ್ದೇ ಮನೆ ಅಲ್ಲದೋ? ನಿಂಗೊಗೆ ಆಸರಿಂಗೆ ಎಂತಾರೂ ಇದ್ದೋ?"

"ಇದ್ದು ಶಾರದೆ; ಮಧ್ಯಾಹ್ನಕ್ಕೆ ಮಾಡಿದ ಪತ್ರೊಡೆ ಇದ್ದು ಬೇಕಾದರೆ ಒಗ್ಗರಿಸಿ ಕೊಡುವೆ.

"ಒಗ್ಗರುಸುದು ಬೇಡ ಅಬ್ಬೆ. ಎಂಗೊ ಹಾಂಗೇ ತಿಂಬೆಯೊ ಇವಕ್ಕೂದೆ ಪತ್ರಡೆಗೆ ತೆಂಗಿನೆಣ್ಣೆ, ಬೆಲ್ಲ ಹಾಕಿ ಚೂರು ಕೊಟ್ರೆ ಸಾಕು. ಹೊಟ್ಟೆ ತುಂಬಾ ತಿಂಗು. ಅವಕ್ಕೆ ಪತ್ರಡೆ ಹೇಳಿರೆ ಜೀವ.

"ಆತಂಬಾಗ ಹಾಂಗೇ ತಿನ್ನಿ"

ಶಾರದೆ ಒಳಗೆ ಹೋಗಿ ಕಾಫಿ ಮಾಡಿಕೊಂಡು ಬಂದಳು. ಎಲ್ಲರದ್ದೂ ಕಾಫಿ ತಿಂಡಿ ಜೋರಾಗಿ ಆಯಿತು. ರಘುರಾಮನಿಗೂ ಹಸಿಗೆ ಚೆನ್ನಾಗಿತ್ತು. ಒಂದರ ಮೇಲೆ ಒಂದರಂತೆ ಎರಡು ಪತ್ರಡೆ ತಿಂದು ಮುಗಿಸಿದ.

"ಲ್ಯಾಕಾಯಿಂದು ಪತ್ರಡೆ, ರಜವೂ ತೊರುಸಿದ್ದಿಲ್ಲೆ" ಎಂದು ಅತ್ತೆಗೆ ಸರ್ಟಿಫಿಕೇಟು ಕೊಟ್ಟ.

"ಕೆಸುವಿನ ಎಲೆಂದ ನಾರುಗಳ ತೆಗದರೆ ರಜವೂ ತೋರುಸ" ಅಂದರು ಶಂಕರಮ್ಮ.

"ಕೇಳ್ಸಿಗೂ ಶಾರದೆ ನೀನು ಮಾಡಿದರೆ ತೊರುಸುದು ಎಂತಕೆ ಹೇಳಿ".

"ಆತಪ್ಪ, ಇನ್ನು ಮುಂದೆ ನಾರು ತೆಗೆದೇ ಮಾಡುತ್ತೆ, ಎನಗೂ ಈಗಳೇ ಗೊಂತಾದ್ದು, ಹೇಂಗೆ ಮಾಡಿರೂ ರಜಾದ್ರೂ ತೋರುಸದ್ದೆ ಇತ್ತಿದ್ದಿಲ್ಲೆ" ಶಾರದೆ ಒಪ್ಪಿದಳು.

"ಶಂಕರಿ ಮಾಡಿರೆ ಸರಿಯಾಗಿ ಮಾಡಿತ್ತು. ಇಷ್ಟರವರೆಗೆ ಅದಕ್ಕೆ ಎಂತಾರೂ ಮಾಡೇಕಾರೆ ಮನೇಲಿ ಸರಿಗಟ್ಟಾದ ಸಾಮಾನಿಂಗೆ ದರಿದ್ರವೇ ಇತ್ತು. ಈಗಲ್ಲದೊ ಬೇಕಾದ ಸಾಮಾನುಗೊ ಬಪ್ಪಲೆ ಶುರುವಾದ್ದು. ಮಕ್ಕೊ ಸಣ್ಣದಿಪ್ಪಾಗ ಬರೇ ಹೆಜ್ಜೆಯೋ, ಕೊಡಿಲೋ ಮೇಲಾರವೋ ಅಷ್ಟರಲ್ಲೇ ವರ್ಷ ಪೂರ್ತಿ ಕಳುದ್ದು. ಒಂದಾರಿ ಆದರೂ ಅದಕ್ಕೆ ಹೊಟ್ಟೆ ತುಂಬಾ ಕೂಳು ಹಾಕಿದ್ದರು, ಮೈತುಂಬಾ ವಸ್ತ್ರ ಹಾಕಿದ್ದಿರ. ಈಗಳೇ ಅವು ಸುಖ ಹೇಳುದರ ಕಂಡದು; ಕಾವೇರಿಯ ಬಿಟ್ಟಾರೆ ಎಲ್ಲಾ ಕೂಸುಗಳು ಸುಖಲ್ಲಿ ಇದ್ದವು" ಅಪ್ಪಣ್ಣ ಭಟ್ಟರು ಗತ ಜೀವನದ ಸ್ಮರಣೆಯನ್ನು ಮಾಡಿ ಖಿನ್ನರಾಗಿ ಕುಳಿತರು. "ನಿಂಗೊಗೆ ಕಾವೇರಿ ಅತ್ತಿಗೆಯ ಶುದ್ದಿ ಹೇಳ್ಳೆ ಆನು ಬಂದದು. ಅದರ ಕಾಶಿಲಿ ಬಿಟ್ಟಿಕ್ಕಿ ಬಂದದು. ಅದು ಎಸ್‌ಎಸ್‌ಎಲ್‌ಸಿ ಪಾಸಾದು ಮುಂದೆ ಡಾಕ್ಟ್ರು ಕಲಿವಲೆ ಹೆರಟದು ಎಲ್ಲಾ ಸಮಾಚಾರಂಗಳ ಅಂಬಗಂಬಾಗ ನಿಂಗೊಗೆ ಹೇಳ್ಕೊಂಡು ಇತ್ತಿದ್ದೆನ್ನೆ. ಈಗ ಇನ್ನೊಂದು ವರ್ತಮಾನ ಇದ್ದು ಕಾವೇರಿ ಅತ್ತಿಗೆಯ ಅಲ್ಲಿಯ ಡಾಕ್ಟ್ರು ಕೇಶವ ಮದುವೆ ಆವುತ್ತೆ ಹೇಳಿದ್ದ ಇದೇ ತಿಂಗಳ 20ನೇ ತಾರೀಕಿಂಗೆ ಮೂರ್ತವೂ ಮಡುಗಿದ್ದು. ಅದಕ್ಕೆ ನಾವೆಲ್ಲಾ ಇಲ್ಲಿಂದ 17ನೇ ತಾರೀಕಿಂಗೇ ಹೆರಡೇಕು. ಅದರ ತಿಳುಶಲೇ ಎಂಗೊ ಇಲ್ಲಿಗೆ ಬಂದದು" ರಘುರಾಮ ಒಂದೇ ಉಸಿರಿಗೆ ಹೇಳಿ ಮುಗಿಸಿದ.

"ಅದೆಲ್ಲಾ ಅಪ್ಪು, ರಘುರಾಮ; ಹೇಂಗೆ ಅದರ ಮದುವೆ ಮಾಡಿಕೊಡುದು; ಒಂದಾರಿ ಧಾರೆ ಎರದು ಕೊಟ್ಟ ಕೂಸಲ್ಲದೋ? ಎನಗೆ ಹೆದರಿಕೆ ಆವುತ್ತು. ಇನ್ನೊಂದಾರಿ ಜೆನರ ಬಾಯಿಗೆ ಸಿಕ್ಕೆ ಕನ್ನೆ ಹೇಳಿ; ಮದಲಾಣದ್ದೇ ಮರದ್ದಿಲ್ಲೆ ಎನಗೆ –ಎಲ್ಲೋರು ಸೇರಿ ಮತ್ತೆನ್ನ ನೀರು ಕುಡುಶಗು" ಅಪ್ಪಣ್ಣ ಭಟ್ಟರು ತನ್ನ ಆತಂಕ ವ್ಯಕ್ತಪಡಿಸಿದರು.

"ಮಾವ, ನಿಂಗೊಗೆ ನೀರು ಕುಡಿಶಿದ್ದವೇ ಈ ಮದುವೆಗೆ ಬಪ್ಪಲೆ ತಯಾರಾಯಿದವು. ಕೇಶವ ಮಾವನೂ ಗೆಣಪ್ಪ ಮಾವನೂ ನಮ್ಮೊಟ್ಟಿಂಗೆ ಬತ್ತವು. ಅವಕ್ಕಲ್ಲದೊ ನಿಂಗೊ ಹೆದರಿದ್ದು. ಈಗ ಅವೂದೆ ನಮ್ಮ ಪಾರ್ಟಿಯೇ ಇಲ್ಲಿಗೆ ಬಪ್ಪಾಗ ದಾರೀಲಿಯೇ ಅವಿಬ್ರೂ ಸಿಕ್ಕಿ ವಿಷಯ ತಿಳಿಸಿದ್ದೆ ಒಂದಾರಿ ಕಕ್ಕಾಬಿಕ್ಕಿ ಅತಿ ಮತ್ತೆ ಸಮಾಧಾನದಲ್ಲಿ ಹೇಳಿದವು.

"ಒಳ್ಳೆದೇ ಆತು, ಎಂಗಳದ್ದು ತಪ್ಪಾಯಿದು, ಹೀಗೊಂದು ದಾರಿ ಇದ್ದು ಹೇಳಿ ಎಂಗೊಗೆ ಗೊಂತಿತ್ತಿಲ್ಲೆ. ನಿಂಗೊ ಮಾಡಿದ್ದೇ ಸರಿಯಾದ ದಾರಿ, ನಿಂಗೊ

ಕರಕ್ಕೊಂಡು ಹೋವುತ್ತರೆ ಎಂಗಳೂ ಬತ್ತಿಯೊ ಕಾಶಿಗೆ. ಕಾಶಿ ನೋಡಿದ ಹಾಂಗೂ ಆತು, -ಕೂಸಿಂಗೆ ಆಶೀರ್ವಾದ ಮಾಡಿದ ಹಾಂಗೂ ಆತು ಹೇಳಿ ಅವರ ಬಾಯಿಂದಲೇ ಬಯಿಂದು. ಇನ್ನೆಂತಕೆ ನಿಂಗಳ ಹೆದರಿಕೆ. ಹೆದರಿದಷ್ಟು ಜೆನ ಹೆದರ್ಸುದು ಹೆದರ್ಸಿದರೆ ಮಾಂತ್ರ ಜೆನ ಹೆದರುಗು"

"ನೀನು ಹೇಳುದು ಸರಿ ರಘುರಾಮ, ಕಾವೇರಿಯ ಬದುಕ್ಕು ಸರಿ ಆವುತ್ತರೆ ಆನೆಂತ ಬೇಕಾದರೂ ಮಾಡುವೆ. ಜೊತೇಲಿ ನೀನಿದ್ದರೆ ಸಾಕು."

"ಆನು ನಿಂಗಳ ಬಿಟ್ಟಿಂಗೇ ಇಲ್ಲೆಯೋ ಮಾವ. ನಿಂಗೊ ಎಂತದೂ ಮಾಡೇಡಿ, ಎಲ್ಲಾ ವ್ಯವಸ್ಥೆ ಆನೂ, ರಾಮಚಂದ್ರ, ಸುಬ್ಬಣ್ಣ ಸೇರಿ ಮಾಡುವೆಯೊ ನಿಂಗೊ ಕೂಸಿನ ಧಾರೆ ಎರದು ಕೊಟ್ಟರಾತು ಅಷ್ಟೆ"

"ಅಂಬಾಗ ಸಾಗರದಲ್ಲಿಪ್ಪವಕ್ಕೆಲ್ಲಾ ಸಮಾಚಾರ ಗೊಂತಾತೋ? ಎಂತ ಹೇಳಿದವು" ಅಪ್ಪಣ್ಣಭಟ್ಟರಿಗೆ ಕುತೂಹಲವಾಯಿತು. ಶಂಕರಮ್ಮನ ಕಿವಿಯೂ ಚುರುಕಾಯಿತು.

"ಆನೇ ಖುದ್ದು ಅಲ್ಲಿಗೆ ಹೋಗಿ ಎಲ್ಲೋರಿಂಗೂ ಹೇಳಿಕ್ಕಿ ಬಯಿಂದೆ; ಅವರ ಅಬ್ಬೆ ಅಪ್ಪಂದ್ರಿಗೂ ಹೇಳಿದ್ದೆ-ಎಲ್ಲೋರಿಂಗೂ ಖುಷಿ ಆಯಿದು; ದೇವಕ್ಕಿಯ ಮಾವ ಬಿಟ್ರ ಮತ್ತೆಲ್ಲೋರೂ ನಮ್ಮೊಟ್ಟಿಂಗೆ ಬತ್ತವು." ದೇವಕ್ಕಿಯ ಮಾವನೂ ಬತ್ತಿತ್ತ ಮನೇಲಿ ಆರೂ ಇಲ್ಲದ್ದಾವುತ್ತು. ಹಾಂಗೇ ತೋಟಕ್ಕೆ ಮದ್ದು ಬಿಡುಸೇಕು, ಅಡಕ್ಕೆ ಕೊಳದು ಬೀಳ್ಳೆ ಸುರುವಾಯಿದು ಹೇಳಿ ಹೇಳಿದ. ಅವ ಒಂದೆರಡು ಸರ್ತಿ ಕಾಶಿಗೆ ಹೋಗಿಯೂ ಬಯಿಂದಾಡ. ಅಷ್ಟೆ"

"ಇಷ್ಟೆಲ್ಲಾ ಕೆಲಸ ಮಾಡಿಕ್ಕಿ ಬಂದೆಯೋ ರಘುರಾಮ? ಇನ್ನು ಎಂಗೂಗೆ ಎಂತ ಆತಂಕವೂ ಇಲ್ಲೆ. ಎನಗೆ ಮಗ ಇಲ್ಲೆ ಹೇಳುದರ ನೀನು ತುಂಬುಸಿಕೊಟ್ಟೆ."

"ಅದೆಲ್ಲಾ ಮತ್ತೆ ಮಾತಾಡುವೋ ಮಾವ. ನಾವು ಇಲ್ಲಿಂದ 17ನೇ ತಾರೀಕಿಂಗೆ ಹೆರಡೇಕು, ತಯಾರಾಗಿ. ಇನ್ನು ನಾಳಂಗೆ ಮಾಣಿಯ ಅಪ್ಪನ್ನ ಭೇಟಿ ಆಯೇಕು ಅವು ಇಪ್ಪದು ಸೇಡಿಗುಮ್ಮೆಲಿ. ಶಂಕರಭಟ್ರು ಹೇಳಿ ಅವರ ಹೆಸರು – "ಅವು ಒಪ್ಪುತ್ತವೋ ಇಲ್ಲೆಯೋ?" ಆತಂಕ ಅಪ್ಪಣ್ಣ ಭಟ್ಟರಿಗೆ.

"ಅವು ಒಪ್ಪಿದರೂ ಈ ಮದುವೆ ನಡೆತ್ತು, ಒಪ್ಪದಿದ್ದರೂ ನಡೆತ್ತು. ಅವಕ್ಕೆ ಹೇಳಿಯೇ ಮಾಡುದು ನಮ್ಮ ಧರ್ಮ".

"ಒಪ್ಪದ್ದೆ ಎಂತ ಮಾಡುತ್ತವು ಅಪ್ಪ? ಹೇಂಗಾರೂ ಅವರ ಒಪ್ಸಿ ನಮ್ಮೊಟ್ಟಿಂಗೆ ಕರಕ್ಕೊಂಡು ಹೋಪದೇ. ಎಲ್ಲೋರೂ ಒಟ್ಟಾಗಿಯೇ ಈ ಮದುವೆಯ ಚೆಂದಕೆ ಮುಗುಶುವೊ" ಅಂದಳು ಶಾರದೆ.

"ನಿಂಗೊ ಹೇಳಿದ ಹಾಗೇ ಆಗಲಿ ಮಗಳೆ. ಕಾವೇರಿ ಸುಖಲ್ಲಿ ಇಪ್ಪದರ ಕಣ್ಣಾರೆ ಕಂಡರೆ ಸಾಕೆನಗೆ" ಅದೊಂದಕ್ಕಾಗಿ ಎಂಗೊ ಕೊರಗುತ್ತೆಯೊ ಇಲ್ಲೆ" ಎಂದರು ಶಂಕರಮ್ಮ.

"ಎಲ್ಲವೂ ಸರಿ ಅಕ್ಕು ಅಬ್ಬೆ. ಅಕ್ಕ ಎಂಗಳಂದಲೂ ಸುಖಲ್ಲಿ ಇಕ್ಕು. ಒಳ್ಳೆ ಡಾಕ್ಟ್ರಾಗಿ ನವಗೆ ಹೆಸರು ತಕ್ಕು ಅದರ ಮುಂದೆ ಎಂಗೊ ಎಂತದೂ ಅಲ್ಲ. ಚಿಂತೆ ಮಾಡೇಡ ದೇವರಿದ್ದ".

"ದೇವರಿದ್ದ ಎನಗೆ ಈಗ ಸ್ಪಷ್ಟ ಆತು. ಎನ್ನ ಕಾವೇರಿಗೆ ಒಂದು ದಾರಿ ತೋರ್ಸಿದ್ದು ಅವನೇ ಹೇಳುವ ನಂಬಿಕೆಯೂ ಬಂತು.

"ಆತಬ್ಬೆ, ಎಂಗೊ ಇನ್ನು ಹೆರಡುತ್ತಿಯೊ ಯಾವುದಕ್ಕೂ ಚಿಂತೆ ಮಾಡೇಡಿ ಆತೊ. ಎಂದು ಇಬ್ಬರೂ ಹೊರಟು ನಿಂತರು.

ಮರುದಿವಸ ರಘುರಾಮು ಬೆಳಿಗ್ಗೆ ಬೇಗನೇ ಎದ್ದು ಸೇಡಿಗುಮ್ಮೆ ಶಂಕರಭಟ್ಟರಲ್ಲಿಗೆ ಹೊರಟ; ದಾರಿಯಲ್ಲಿ ಶಂಕರಭಟ್ಟರೊಡನೆ ಏನು ಮಾತನಾಡಬೇಕು ಹೇಗೆ ಮಾತನಾಡಬೇಕು ಎಂಬುದನ್ನು ಆಲೋಚಿಸುತ್ತಾ ನಡೆದ. ಹೇಳಿ ಕೇಳಿ ಪುರೋಹಿತರು, ಆಚಾರ ವಿಚಾರ ತಿಳಿದವರು. ಈ ಮದುವೆಯ ವಿಷಯಕ್ಕೆ ಎಲ್ಲಾ ಆತಂಕ ಪಡಿಸುತ್ತಾರೋ ಎಂಬ ಭಯ; ಅವರಿಗೆ ಅರ್ಥವಾಗುವಂತೆ ವಿವರಣೆ ನೀಡಲು ತನ್ನ ಶಾಸ್ತ್ರಜ್ಞಾನ ಸರಿ ಹೋಗಲಿಕ್ಕಿಲ್ಲ ಎಂಬ ಅಳುಕು, ಏನಾದರೂ ಆಗಲಿ, ಅವರೊಡನೆ ನೇರ ಮಾತಾನಾಡುವುದೇ ಸರಿ ಎಂಬ ತೀರ್ಮಾನಕ್ಕೆ ಬಂದ ರಘುರಾಮ.

ಬೆಳಿಗ್ಗೆ ಹತ್ತುಗಂಟೆಯ ಸುಮಾರಿಗೆ ರಘುರಾಮ ಸೇಡಿಗುಮ್ಮೆ ಶಂಕರಭಟ್ಟಾರ ಮನೆಯನ್ನು ತಲುಪಿದ. ಶಂಕರ ಭಟ್ಟರು ಮನೆಯ ಹಜಾರದಲ್ಲಿ ಕುರ್ಚಿಯಲ್ಲಿ ಕುಳಿತು ದಿನಪತ್ರಿಕೆಯೊಂದರಲ್ಲಿ ಕಣ್ಣಾಡಿಸುತ್ತಿದ್ದರು; ಬೆಳಿಗ್ಗೆ ಸ್ನಾನ ಮುಗಿಸಿ, ಪ್ರಾತಃ ಜಪಗಳನ್ನು ಮಾಡಿದ ಹಾಗಿತ್ತು. ಹಣೆಗೆ ಲೇಪಿಸಿದ ವಿಭೂತಿಯ ಮೂರುಗೆರೆಗಳು ಸ್ಪಷ್ಟವಾಗಿ ಕಾಣುತ್ತಿತ್ತು. ರಟ್ಟೆಗಳಿಗೆ, ಎದೆಯ ಮೇಲೆ ಬಳಕೊಂಡ ಶ್ರೀಗಂಧ ನಾಮಗಳು ಹಾಗೇ ಇತ್ತು. ಕೆಂಪು ಮಡಿ ಬಟ್ಟೆಯನ್ನು ಕಚ್ಚೆ ಹಾಕಿ ಉಟ್ಟಿದ್ದರು. ಬಾಚಿ ಕಟ್ಟಿದ ಶಂಡಿಗೆ ಅವರಿಗೆ ಶೋಭಾಯಮಾನವಾಗಿ ಕಾಣುತ್ತಿತ್ತು. ಹತ್ತು ಮಂದಿಯಲ್ಲಿ

ಎದ್ದು ಕಾಣುವ ವ್ಯಕ್ತಿತ್ವ ಶಂಕರ ಭಟ್ಟರದ್ದು. ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿದವರು; ರಘುರಾಮ ಅಂಗಳದಲ್ಲಿ ತನ್ನ ಬೈಕನ್ನು ಬಿಟ್ಟು, ಅಲ್ಲೇ ಇದ್ದ ಅಬ್ಬಿಯಲ್ಲಿ ಕೈ ಕಾಲು ಮುಖ ತೊಳೆದು ಮನೆಯ ಮೆಟ್ಟಲೇರಿದ ಭಟ್ಟರ ಹತ್ತಿರ ಬಂದು ಪಾದ ಮುಟ್ಟಿ ನಮಸ್ಕರಿಸಿ ಬದಿಯಲ್ಲಿ ನಿಂತ, ಈಗಲೇ ಭಟ್ಟರಿಂಗೆ ರಘುರಾಮ ಬಂದನೆಂದು ಗೊತ್ತಾದದ್ದು, ಒಂದು ಕ್ಷಣ ರಘುರಾಮನ ಮುಖ ನೋಡಿ ಅವರೇ ಮಾತನಾಡಿಸಿದರು.

"ನೀನು ರಘುರಾಮ ಮಾಷ್ಟ್ರಲ್ಲದೋ?"

"ಅಪ್ಪು ಮಾವ, ನಿಂಗೊಗೆ ಎನ್ನ ಹೆಸರು ಹೇಂಗೆ ಗೊಂತಾತು?"

"ನೀನು ಕಲಿಶುವ ಶಾಲಗೆ ಈ ಊರಿಂದ ಸುಮಾರು ಜೆನ ಮಾಣ್ಯಂಗಳೂ, ಕೂಸುಗಳೂ ಹೋವುತ್ತವು. ಅವರ ಬಾಯಯಿಂದಲೂ ಕೇಳಿದ್ದೆ.

"ರಜಾ ಆಸರಿಂಗೆ ಬೇಕೋ?"

"ಬೇಕು ಮಾವ ಹೆರ ವಿಪರೀತ ಬೆಶಿಲು"

"ಶಂಕರ ಭಟ್ಟರು ಒಳಹೋಗಿ ಒಂದು ಚೆಂಬು ನೀರೂ, ಎರಡು ತುಂಡು ಬೆಲ್ಲವನ್ನೂ ಒಂದು ಲೋಟವನ್ನು ತಂದು ರಘುರಾಮನಿಗಿತ್ತರು. ರಘುರಾಮ ಚೆಂಬಿನಿಂದ ಲೋಟಕ್ಕೆ ನೀರು ಬಗ್ಗಿಸಿ, ಬೆಲ್ಲದ ಚೂರನ್ನು ಬಾಯಿಗೆ ಹಾಕಿ, ಎರಡು ಲೋಟ ನೀರು ಕುಡಿದ ಅವನ ಆಯಾಸ, ನೀರಡಿಕೆ ಪೂರ್ತಿ ಶಮನವಾಯಿತು".

ಇನ್ನು ಪುರೋಹಿತರೊಂದಿಗೆ ಮಾತುಕತೆಯಾಡಬೇಕು ಹೇಗಪ್ಪ ಎಂಬ ಅಳುಕಿನಿಂದಲೇ ಪ್ರಸ್ತಾಪಿಸಿದ.

"ಮಾವ, ಆನು ಕಾಶಿಗೆ ಹೋಗಿತ್ತಿದ್ದೆ ಅಲ್ಲಿ ನಿಂಗಳ ಮಗ ಡಾ॥ ಕೇಶವನ ಕಂಡಿದೆ."

"ಎನಗೆಲ್ಲಾ ಸಂಗತಿ ಗೊಂತಾಯಿದು. ಅಲ್ಲಿಂದ ಎನ್ನ ಮಗನ ಕಾಗದವೂ ಬಂದು; ವಿವರವೂ ಗೊಂತಾತು."

"ಇನ್ನೂ ನಿಂಗೊಗೆ ಆನು ಹೆಚ್ಚು ಹೇಳೇಕಾದ ಅವಶ್ಯಕ್ತೆ ಇಲ್ಲೆನ್ನೆ".

"ಇಲ್ಲೆ ಆನೂ ವಿಷಯವ ಹಗಲೂ ಇರುಳೂ ಆಲೋಚನೆ ಮಾಡಿದ್ದೆ. ಹಾಂಗೆ ನಿರ್ಧಾರಕ್ಕೂ ಬಂದೆ ಅಪ್ಪ, ನಿಂಗಳೇ ಧಾರೆ ಎರಶ್ಯೋಳೇಕು ಹೇಳಿ

ಬರದ್ದ. ಕೂಸಿನ ಸಂಗತಿಯ ಪೂರ್ತಿ ವಿವರ್ಸಿ ಬರದ್ದ. ಕಳಿಂಗಳದ ಮದುವೆಯ ವಿಚಾರ ಗೊಂತಿಲ್ಲದ್ದವು ಆರೂ ಇಲ್ಲೆ. ದಿಂಡಿನ ಹೋಮ ಕಳಿಯದ್ದೆ, ಅದರ ಗೆಂಡ ಸತ್ತದು ಹೇಳಿಯೂ ಎನಗೆ ಗೊಂತಿದ್ದು. ಹಾಂಗಾಗಿ ಧಾರೆ ಎರಶ್ಯೊಂಬಲೆ ಆನೂ ಬತ್ತೆ. ಅತ್ಲಾಗಿ ಹೋದವ ಮತ್ತೆ ಇತ್ಲಾಗಿ ಬತ್ತಿಲ್ಲೆ ಸಾವನ್ನಾರವೂ ಅಲ್ಲಿಯೇ ಮಗ ಸೊಸೆ ಒಟ್ಟಿಂಗೆ ಇರುತ್ತೆ."

"ರಘುರಾಮಂಗೆ ದೊಡ್ಡ ಹೊರೆ ತಲೆ ಮೇಲಿಂದ ಕಳುಚಿದಷ್ಟು ಹಗುರ ಆತು"

"ಸಂತೋಷ ಆತು ಮಾವ ನಿಂಗೊ ಬತ್ತಿ ಹೇಳಿ ಆದರೆ ಆನು ಎಲ್ಲಾ ಅನುಕೂಲವನ್ನು ಮಾಡಿಕೊಡುವೆ. ಅತ್ತಿಗೆ ಪುಣ್ಯ ಮಾಡಿದ್ದು" ಹೇಳಿದ.

"ಆನೂ ಪುಣ್ಯ ಮಾಡಿದ್ದೆ. ಸಾವನ್ನ ಮದಲಾದರೂ ಮಗನ ಮೋರೆ ಕಾಂಬಲೆ ಸಿಕ್ಕಿತ್ತು. ಅವನ ಅಬ್ಬೆ ಮಗ ಹೋದ ಕೊರಗಿಲ್ಲೆ ಅಶನ ನೀರು ಬಿಟ್ಟು ಪ್ರಾಣ ಬಿಟ್ಟಿತ್ತು. "ಒಂದಾರಿ ಎನ್ನ ಮಗನ ಮೋರೆ ಕಾಂಬ ಹಾಂಗೆ ಮಾಡಿ ಹೇಳಿ ಕೈ ಜೋಡಿಸಿತ್ತು. ಅವ ಕಾಶಿಲಿ ಇದ್ದ ಹೇಳಿ ಆರೋ ಊರಿಂದ ಹೋದವು ಅದಕ್ಕೆ ವರ್ತಮಾನ ಹೇಳುತ್ತಿದ್ದವು. "ಒಂದಾರಿ ಎನ್ನ ಹೋಗಿ ಕರಕ್ಕೊಂಡು ಬನ್ನಿ" ಹೇಳಿ ಎನ್ನ ಪೀಡ್ಸಿತ್ತು. 'ಕಾಶಿಲಿ ಎಲ್ಲಿ ಹೇಳಿ ಅವನ ಹುಡುಕ್ಕಲಿ' ಹೇಳಿ ಹೇಳಿದೆ ಹೋದವರ ಹತ್ರೆ ಬಂದವರ ಹತ್ರೆ ಮಗನ ಶುದ್ದಿಯೇ ಹೇಳುಗುಯ 'ಎನ್ನಂದಾಗಿ ಇದ್ದೊಬ್ಬ ಮಗನ ಕಳಕ್ಕೊಂಡದು ಹೇಳಿ ದಿನವೂ ಕಣ್ಣೀರು ಹಾಕುಗು. ಅದೇ ಕೊರಗಲ್ಲೇ ಅದು ಪ್ರಾಣ ಬಿಟ್ಟಿತ್ತು.

"ಅಂಬಾಗ ಈಗ ಅತ್ತೆ ಇಲ್ಲೆಯೋ?" ಕೇಳಿದ ರಘುರಾಮ

"ಅದು ತೀರಿ ಹೋಗಿ ಹತ್ತು ವರ್ಷ ಕಳುತ್ತು"

"ಈಗ ಇಲ್ಲಿ ನಿಂಗೊ ಮಾಂತ್ರ ಇಪ್ಪದೋ"

"ಅಪ್ಪು ಆನು ಮಾಂತ್ರ. ಸಾವನ್ನಾರ ಬದುಕ್ಕೇಕನ್ನೇ? ಈಗ ಆನೂ ಪೌರೋಹಿತ್ಯಕ್ಕೆಲ್ಲಾ ಹೋವುತ್ತಿಲ್ಲೆ. ಹೋಪಲೂ ಎನ್ನಂದ ಎಡಿತ್ತಿಲ್ಲೆ. ಎಲ್ಲಾ ಎನ್ನ ತಮ್ಮಂಗೂ ತಮ್ಮನ ಮಕ್ಕೊಗೂ ವಹಿಸಿಕೊಟ್ಟಿದೆ ಎನಗೂ ನೆಡವಲೆಡಿತ್ತಿಲ್ಲೆ. ಎರಡೂ ಮೊಳಪ್ಪು ಹಿಡುಕ್ಕೊಂಡ ಹಾಂಗಾಯಿದು. ಬಗ್ಗಲೆ ಎಡಿತ್ತಿಲ್ಲೆ?" ಎನಗೀಗ ಮಗನ ನೆಂಪು ಜೋರಾವುತ್ತು. ಆದರೆ ಅವನ ಮೋರೆ ನೋಡ್ಲೆ ಹೋಪದಾದರೂ ಹೇಂಗೆ?

"ನಿಂಗೊ ಬತ್ತಿ ಹೇಳಿರೆ ಆನು ನಿಂಗಳ ಕಾಶಿವರಗೂ ಮುಟ್ಟುಸುವೆ. ನಿಂಗೊ ಎಂಗಳೊಟ್ಟಿಂಗೆ ಬನ್ನಿ ಎಲ್ಲೋರಿಂಗೂ ಸಂತೋಷ ಅಕ್ಕು" ಆನು ನಿಂಗೊಗೂ

ಟಿಕೇಟು ಮಾಡ್ಸಿ ಮಡುಗುತ್ತೆ. ಇಲ್ಲಿಂದ ಕಣ್ವೈರವರೆಗೆ ಹೋದರೆ ಆತು. ಅಲ್ಲಿಂದ ರೈಲಲ್ಲಿ ಕೂದರೆ, ಇಳಿವದು ಕಾಶಿಲೇ ನವಗೆ ಬೇರೆ ಎಲ್ಲಿಯೂ ಹತ್ತಿ ಇಳುದು ಮಾಡೇಕಾಡ ಅಗತ್ಯ ಇಲ್ಲೆ. ನಿಂಗೊಗೆ ರಜಾವೂ ತೊಂದರೆ ಆಗದ್ದ ಹಾಂಗೆ ಆನು ನೋಡಿಗೊಂಬೆ" ಹೇಳಿದ ರಘುರಾಮ.

"ಇಲ್ಲಿಂದ ಕಣ್ವೈರವರಗಾದರೂ ನೆಡೇಕನ್ನೆ" ಎರಡು ಹೆಜ್ಜೆ ಮಡುಗಿರೆ ಜೀವ ಹೋದ ಹಾಂಗೆ ಆವುತ್ತು" ಶಂಕರ ಭಟ್ಟರು ತನ್ನ ಅಸಾಯಕ ಅವಸ್ಥೆಯನ್ನು ತಿಳಿಸಿದರು.

"ನಿಂಗೊ ಚಿಂತೆ ಮಾಡೇಡಿ ಮಾವ. ಆನು ನಿಂಗಳ ಎನ್ನ ಮೋಟ್ರು ಸೈಕಲ್ಲಿ ಕೂರ್ಸ್ಯೊಂಡು ಕರಕ್ಕೊಂಡು ಹೋಪೆ; ನಿಂಗಳ ರೈಲಿಂಗೂ ಹತ್ತುಸುವೆ ಆತೊ"

"ಈಗ ಎನಗೆ ನಿಶ್ಚಿಂತೆ ಆತು. ಆನಂಬಾಗ ಕಾಶಿಗೆ ಹೆರಡುವ ವ್ಯವಸ್ಥೆ ಮಾಡುತ್ತೆಈ ತೋಟ, ಮನೆಯ; ಎಲ್ಲಾ ನೋಡ್ಯಂಬಲೆ ಎನ್ನ ತಮ್ಮ ಪದ್ಮನಾಭಂಗೆ ಹೇಳುತ್ತೆ"

"ಅಕು ಮಾವ, ಆನು ಬಾಕಿದ್ದವಕ್ಕೆಲ್ಲಾ ಹೋಪ ವ್ಯವಸ್ಥೆ ಮಾಡಿ ನಿಂಗಳ ಆ ದಿನ ಉದಿಯಪ್ಪಾಗಳೇ ಬಂದು ಕರಕ್ಕೊಂಡು ಹೋವುತ್ತೆ ಆನಂಬಾಗ ಹೆರಡೇಕೋ"

"ಒಂದು ರಜಾ ಕಾಫಿ ನೀರಾದರೂ ಕುಡುದಿಕ್ಕಿ ಹೋಗು. ಒಳದಿಕ್ಕೆ ಆನು ಉದಿಯಪ್ಪಾಗ ತಿಂಬಲೆ ಮಾಡಿದ ಸಜ್ಜಿಗೆ ಇದ್ದು." ಬಾಳೆ ಹಣ್ಣು ಇದ್ದು ತಿಂದಿಕ್ಕಿ ಹೋಗು"

"ನಿಂಗೊ ಕಾಫಿ ಮಾಡ್ಯೊಂಡು ಕೂರೇಡಿ. ಆನೇ ಒಳ ಹೋಗಿ ಸಜ್ಜಿಗೆ ಬಾಣೆ ಹಣ್ಣು ತೆಕ್ಕೊಂಬೆ" ಹೇಳಿ ರಘುರಾಮ ಒಳಗೆ ಹೋಗಿ, ಸ್ವಲ್ಪ ಉಪ್ಪಿಟ್ಟನ್ನು ಬಾಳೆಹಣ್ಣನ್ನು ಹೊರಗೆ ತಂದು ಕೊಂಡ ಮೇಲೆ ಸ್ವಲ್ಪ ನೀರೂ ಕುಡುದ"

"ಈಗ ಹೊಟ್ಟೆ ತಣ್ಣಂಗಾತದ"

"ಸಜ್ಜಿಗೆ ಮೆಚ್ಚಿತೋ"

"ಫಸ್ಟ್ ಕ್ಲಾಸು ಆಯಿದು ಮಾವ, ಆನಂಬಾಗ ಹರಡೇಕೋ" ಹೇಳಿ ಮತ್ತೊಮ್ಮೆ ಪುರೋಹಿತರ ಪಾದ ಮುಟ್ಟಿ ನಮಸ್ಕರಿಸಿದ. ಶಂಕರಭಟ್ರು ಹೃದಯ ತುಂಬಿ ಆಶೀರ್ವಾದಿಸಿದರು.

"ಇದಕ್ಕೆಲ್ಲಾ ಬಡವ, ಶ್ರೀಮಂತ ಹೇಳಿ ಇಲ್ಲೆ ಭಾವಯ್ಯ ಮನಃಪೂರ್ತಿ ನಾಲ್ಕು ಜೆನಕ್ಕೆ ಅಶನ ಹಾಕಿ ಬಳಿಸಿದ್ದೀರನ್ನೆ. ಅದೇ ತೃಪ್ತಿ ಅಡಿಗೆ ಎಲ್ಲಾ ಲಾಕ್ಕಾದು." ಇನ್ನೊಂದಾರಿ ಎಲೆ ಅಡಕೆ ತಿಂದಿಕ್ಕಿ "ಮನುಗುವ ವ್ಯವಸ್ಥೆ ಮಾಡಿ. ನಾಳಂಗೆ ಉದಿಯಪ್ಪಾಗ ಎಂಟು ಗಂಟೆಗೆ ಹೆರಡೇಡದೊ. ಎಲ್ಲೋರ ಮೀಆಣ ತಿಂಡಿ ತೀರ್ಥ ಅಪ್ಪಾಗ ಅಕ್ಕೆದ ಹೊತ್ತು"

"ಆತು ಗೆಂಡು ಮಕ್ಕೊ ಎಲ್ಲಾ ಚಾವಡಿಲಿ ಮನುಗಿ, ಹೆಮ್ಮಕ್ಕೊ ಒಳಾಣ ಕೋಣೆಲಿ ಮನುಗುತ್ತವು" ಹೇಳಿದ ರಘುರಾಮ. ನಿಂಗೊಗೆ ಎಲ್ಲಿಂದ ಕಣ್ವ್ಯಾರವರೆಗೆ ಹೋಪಲೆ ಎರಡು ಎತ್ತಿನಗಾಡಿಗೊಕೆ ಹೇಳಿದ್ದೆ. ನೆಡಕ್ಕೊಂಡು ಹೋಪಲೆಡಿಯ ಮೂರು ಮೈಲಿ ಆವುತ್ತು. ಆನು ನಿಂಗಳ ಎಲ್ಲಿಂದ ಕಳುಶಿಕ್ಕಿ ಸೇಡಿಗುಮ್ಮೆಗೆ ಹೋಗಿ ಶಂಕರ ಮಾವನ ಕರಕ್ಕೊಂಡು ಸೀದಾ ರೈಲ್ವೆ ಸ್ಟೇಷನ್ನಿಂಗೇ ಬತ್ತೆ. ಅಲ್ಲಿ ಕೂಪಲೆ ಬೆಂಚಿ ಇರುತ್ತು ಎಲ್ಲೋರು ಅಲ್ಲಿಯೇ ಕೂದೋಳಿ" ಎಂದ ರಘುರಾಮ.

ರಾತ್ರೆ ಎಲ್ಲರೂ ನಿದ್ದೆ ಮಾಡಿ ಬೆಳಗಿನ ಜಾವ, ನಾಲ್ಕು ಗಂಟೆಯಿಂದ ಒಬ್ಬೊಬ್ಬರೇ ಸ್ನಾನ, ಪ್ರಾತಃರ್ವಂದನೆ, ಮುಗಿಸಿದರು. ಏಳುಗಂಟೆ ಹೊತ್ತಿಗೆ ಅವಲಕ್ಕಿ ಚಟ್ನಿ, ಸಜ್ಜಿಗೆ, ಬಾಳೆಹಣ್ಣು, ಕಾಫಿ ಕೊಟ್ಟರು, ಎಲ್ಲರೂ ಹೊಟ್ಟೆ ತುಂಬಿಸಿಕೊಂಡು ಹೊರಟು ತಯಾರಾದರು. ಮನೆಯ ಮುಂದೆ ಸಮಯಕ್ಕೆ ಸರಿಯಾಗಿ ದಾಸಪ್ಪನದ್ದೂ. ಕೆಂಚಪ್ಪನದ್ದೂ ಬಂಡಿ ಬಂದು ನಿಂತಿತ್ತು. ಈ ಬಂಡಿ ಕೆಳಗೆ ಬೈಹುಲ್ಲು ಹಾಸಿ ಅದ ಮೇಲೊಂದು ಕಂಬಳಿ ಹಾಸಿಟ್ಟಿದ್ದರು. ಎಲ್ಲರೂ ಬಂಡಿ ಏರಿ ಕುಳಿತರು. ತೆಗೆದುಕೊಂಡು ಹೋಗುವ ಸಾಮಾನುಗಳನ್ನು ಬಟ್ಟೆ ಬರೆ ಚೀಲಗಳನ್ನು ತಮ್ಮೊಡನೆ ಒಯ್ದಿದ್ದರು. ಬಂಡಿಗಳಿ, ಏಕಕಾಲಕ್ಕೆ ಹೊರಟಿತು. ಎತ್ತುಗಳ ಕೊರಳಿನಲ್ಲಿದ್ದ ಗೆಜ್ಜೆಗಳ 'ಗಲ ಗಲ' ಸದ್ದು, ಚಕ್ರಗಳು ಉರುಳುವಾಗ ಆಗುವ ಕಟಾಕಟಾ ಸಪ್ಪಳ, 'ಹೊಹೊ ಟ್ಟೆಟ್ಟೆ" ಎನ್ನುವ ದಾಸಪ್ಪ, ಕೆಂಚಪ್ಪರ ಮಾತೂ ನೋಡುವುದಕ್ಕೆ ಕೇಳುವುದಕ್ಕೆ ಅಪ್ಯಾಯಮಾನವಾಗಿತ್ತು" ಬಂಡಿ ಒಳಗೆ ಆಕಡೆ ಈಕಡೆ ಮಾಲಕೊಂಡು ಒಮ್ಮೊಮ್ಮೆ 'ನಗ್' ಎಂದಾಗ ಒಬ್ಬರಮೇಲೊಬ್ಬರು ಒರಗಿದಾಗ ಹೆಂಗಸರೆಲ್ಲಾ ಕಿಲಿಕಿಲಿ ನಗುತ್ತಿದ್ದರು. ಗಂಟೆಯೊಳಗೆ ಕುಂಬಳೆ ರೈಲ್ವೇ ಸ್ಟೇಷನ್ ತಲುಪಿ ಅಲ್ಲಿಯೇ ಬೆಂಚಿನ ಮೇಲೆ ಕಾದು ಕುಳಿತುಕೊಂಡರು.

ರಘುರಾಮ ತಿಳಿಸಿದಂತೆ ಶಂಕರಭಟ್ಟರನ್ನು ತನ್ನ ಬೈಕಿನಲ್ಲಿ ಕೂರಿಸಿಕೊಂಡು ಅಲ್ಲಿಗೆ ಬಂದು ಮುಟ್ಟಿದರು. ಅವರನ್ನು ನೋಡುತ್ತಲೇ, ಶಾರದೆ, ಸರಸ್ವತಿ, ದೇವಕ್ಕಿ ಪಾದಮುಟ್ಟಿ ನಮಸ್ಕರಿಸಿದರು; ಅವರನ್ನನು ಸರಿಸಿ, ರಾಮಚಂದ್ರ, ಸುಬ್ಬಣ್ಣರೂ ನಮಸ್ಕಾರ ಮಾಡಿದರು. ರಘುರಾಮ ಪ್ರತಿಯೊಬ್ಬರ ಪರಿಚಯವನ್ನೂ ಅವರಿಗೆ ಮಾಡಿಕೊಟ್ಟ,

"ಹಾಂಗಾರೆ ನಿಂಗೊ ಎಲ್ಲೋರೂ ಬಯಿಂದಿ ಹೇಳಿ ಆತು "ಸಂತೋಷ ಎಂದರು ಶಂಕರಭಟ್ಟರು.

"ಅಪ್ಪು ಮಾವ, ಎಂಗೊಗೆ ಎಲ್ಲೋರಿಂಗೂ ಖುಷಿ ಆಯಿದು. ನಿಂಗೊ ಬಂದದು ನೋಡಿ ಇನ್ನೂ ಸಂತೋಷ ಆತು" ಅಂದಳು ಶಾರದೆ.

"ಎಲ್ಲಾ ಋಣಾನುಬಂಧ ಅಲ್ಲದೋ ಅಂದರು ಭಟ್ಟರು. ಅಷ್ಟರಲ್ಲಿ ಸ್ಟೇಷನ್ನಿನಲ್ಲಿ ಮೊದಲ ಗಂಟೆ ಹೊಡೆದರು. ಪ್ರಯಾಣಿಕರೆಲ್ಲಾ ರೈಲ್ವೇ ಪ್ಲೇಟು ಫಾರ್ಮಿನ ಹತ್ತಿರಕ್ಕೆ ಧಾವಿಸತೊಡಗಿದರು.

"ನಿಂಗೊ ಅವ್ಸರ ಮಾಡೇಡಿ. ನಾವೆಲ್ಲಾ ಒಟ್ಟಿಂಗೆ ನಿಧಾನಕ್ಕೆ ಹೋಪೊನವಗೆಲ್ಲಾ ಕೂಪಲೆ ಒಂದೇ ಬೋಗಿ ಇದ್ದು. ನಾವೆಲ್ಲಾ ಹತಿತದ ಮತ್ತೆ ಬಂಡಿ ಹೆರಡುಗಷ್ಟೆ. ಸ್ಟೇಶನ್ ಮಾಸ್ಟ್ರ ಖುದ್ದು ಬಂದು ನೋಡುತ್ತೆ ಹೇಳಿದ್ದ" ಅಂದ ರಘುರಾಮ.

ಮತ್ತೊಂದು ಗಂಟೆ ಬಾರಿಸಿದಾಗ ರೈಲು ಹೊಗೆ ಉಗುಳುತ್ತಾ ದೂರದಲ್ಲಿ ಬರುವುದು ಕಾಣಿಸಿತು. ಸ್ವಲ್ಪ ಹೊತ್ತಿನಲ್ಲ ಹೊಗೆ ಉಗುಳಿ ಸದ್ದು ಮಾಡುತ್ತಾ ಸ್ಟೇಶನಿನಲ್ಲಿ ನಿಂತಿತು. ಎಲ್ಲರನ್ನೂ ವಾರಣಾಸಿ ಬೋಗಿಗೇ ಹತ್ತಿಸಿ, ಅವರ ಸಾಮಾನುಗಳನ್ನೂ ಅದರೊಳಗೆ ಹಾಕಿಸಿದರು;

"ಆಯಿತಲ್ಲಾ ಮಾಶ್ಟ್ರೇ ಎಲ್ಲಾ ಸರಿಯಾಗಿ ನೋಡಿಕೊಳ್ಳಿ. ಆಮೇಲೆ ಸೀಟಿ ಊದುತ್ತೇನೆ" ಅಂದರು ಮಾಸ್ಟ್ರು.

"ಸರಿಯಾಗಿದೆ ಸಾರ್" ಅಂದ ರಘುರಾಮ.

ರೈಲ್ವೆ ಮಾಸ್ಟ್ರು, ಜೋರಾಗಿ ಸೀಟಿ ಊದಿ, ಹಸಿರು ಬಾವುಟ ತೋರ್ಸಿದರು, ಬಂಡಿ ನಿಧಾನಗತಿಯಲ್ಲಿ ಸಾಗಿ ಮುಂದೆ ವೇಗ ಹೆಚ್ಚಿಸಿಕೊಂಡಿತು.

"ಆನು ಸರಸ್ವತಿ, ದೇವಕ್ಕಿ ಒಂದೇ ದಿಕ್ಕೆ ಕೂರುತ್ತೆಯೊ. ಅತ್ತೆಕ್ಕೊ ಅಬ್ಬೆ ಎಲ್ಲಾ ಒಂದು ದಿಕ್ಕಿಲ್ಲಿ ಆತೋ" ಅಂದಳು ಶಾರದೆ.

"ಅವಕ್ಕೆ ಹರಟ್ಟೆ ಇದ್ದಾಯಕ್ಕು ಅದಕ್ಕೆ ವ್ಯವಸ್ಥೆ ಮಾಡಿದ್ದು" ಹೇಳಿದರು ಶಂಕರಮ್ಮ.

"ಹರಟೆ ಹೊಡೆಯಲಿ, ಹೇಂಗೊ ಎರಡು ದಿನ ಇರೇಕನ್ನೆ ಇದರ ಒಳ ಪಾಪ, ಸುಮಾರು ಸಮಯ ಅತಿಲ್ಲೆಯೋಸ ಅಕ್ಕ ತಂಗೆಕ್ಕ ಒಟ್ಟಾಗದ್ದೆ" ಅಂದವರು ಸರಸ್ವತಿ ಅತ್ತೆ

"ನಾವೂ ಮಾತಾಡ್ಕೊಂಡೇ ಹೋಪೋ ಮತ್ತೆ ನಾವೆಲ್ಲಾ ಒಟ್ಟಿಪ್ಪದು ಯಾವಾಗಲೋ ಎಂತದೋ" ಎಂದವರು ದೇವಕ್ಕಿಯ ಅತ್ತೆ.

"ಅಪ್ಪಪ್ಪಾ ಮದುವೇಲಿ ಕಂಡ ಮತ್ತೆ ನಾಲು ಒಬ್ರಒಬ್ರ ಮೋರೆಯೇ ಕಂಡಿದಿಲ್ಲೆ. ಒಳ್ಳೆದಾತು ಒಟ್ಟಿಂಗೆ ಹೋಪದ್ದು" ಅಂದರು ಶಾರದೆಯ ಅತ್ತೆ

"ಆನು ಅಜ್ಜಿ ಒಟ್ಟಿಂಗೆ ಕೂರ್ತೆ, ಕಿಟಿಕಿ ಹತ್ರೆ' ಅಂದ ಶಂಭು"

"ಆತು ಮಗ ನೀನು ಎನ್ನ ಹತ್ರೇ ಕೂರು. ಅವಂಗೆ ಆನಿದ್ದರೆ ಸಾಕು. ಅಬ್ಬೆ ಅಪ್ಪ ಬೇಡ" ಎಂದು ಮೊಮ್ಮಗನನ್ನು ಮೊಟ್ಟೆಯಲ್ಲಿ ಕುಳ್ಳಿಸಿಕೊಂಡರು."

"ಅಜ್ಜಿ ಅದಾ ಮರಂಗೊ ಬಿಡುತ್ತವು ನೋಡಿ" ಎಂದು ಆಗಾಗ ಅಜ್ಜಿಗೆ ಹೇಳುತ್ತಿದ್ದ. "ಬಿಡುದು ಮರಂಗ್ ಅಲ್ಲ ನೀನು" ಅಂದರು ಅಜ್ಜಿ.

"ನಿಂಗೊ ಸರಿಯಾಗಿ ನೋಡಿ" ಅಂದ ಮೊಮ್ಮಗ

" ಅಪ್ಪು ಮಗ, ಮರಂಗಳೇ ಓಡುದು" ಅಂದರು ಅಜ್ಜಿ ಎಲ್ಲರೂ ಒಮ್ಮೆ ನಗಾಡಿದರು ಬಾಯಿತುಂಬಾ

"ಇರುಳಿನ ಹಗಲು, ಹಗಲಿನ ಇರುಳು ಹೇಳಿಯೇ ಹೇಳ್ಳುಗು ಇಂತಾ ಮಕ್ಕೊ"

"ಅಪ್ಪಪ್ಪಾ, ಅವು ಹೇಳಿದ್ದರನ್ನೇ ನಾವು ಸರಿ ಹೇಳೇಕಷ್ಟೆ" ಎಂದರು ಶಂಕರಮ್ಮ ರೈಲು ಓಡುತ್ತಿತ್ತು ಆಗಾಗ ನಿಲ್ಲುತ್ತಿತ್ತು ಎಲ್ಲರೂ ಅವರವರ ಮಾತಿನಲ್ಲಿ ತಲ್ಲೀನರಾಗಿದ್ದರು. ರಘುರಾಮ ಆಗಾಗ ಬೊಂಡ ಕೆತ್ತಿಕೊಡುವುದು. ಅದರೊಳಗೆ ಅವಲಕ್ಕಿ ಹಾಕಿ ಕೊಡುವುದು, ಲಿಂಬೆ ಹಣ್ಣು ಪಾನಕ ಮಾಡುವುದು ಹಿರಿಯರನ್ನೆಲ್ಲಾ ಕೈಹಿಡಿದು ಬಚ್ಚಲು ಮನೆಗೆ ಕರೆದುಕೊಂಡು ಹೋಗುವುದು ಬರುವುದು ಎಲ್ಲವನ್ನೂ ಮಾಡುತ್ತಿದ್ದ.

"ನಿಂಗಳೂ ರಜಾ ಸಹಾಯ ಮಾಡಿ ಮಕ್ಕಳೇ" ಅಂದ ಮೇಲೆ ರಾಮಚಂದ್ರನೂ ಸುಬ್ಬಣ್ಣನೂ ಕೈ ಜೋಡಿಸಿದರು.

ರಘುರಾಮನಿಗೆ ಟ್ರೈನಿನಲ್ಲಿ ರಾತ್ರಿ ಇಡಿ ನಿದ್ದೆ ಇರಲಿಲ್ಲ. ಮ್ಮೆ ಅಪ್ಪಣ್ಣ ಭಟ್ಟರನ್ನು ಬಚ್ಚಲು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಹೇಗೆ ಕುಳಿತುಕೊಳ್ಳುವುದು ಎಂದು ತೋರಿಸಿ ಹೊರಗೆ ಬರುವಾಗ" ರಘುರಾಮ ಇಲ್ಲಿ ನಳಲ್ಲಿ ನೀರೆ ಬತ್ತಿಲ್ಲೆ. ಆಗಿಂದ ತಿರುಗುಸುತ್ತಾ ಇದ್ದೆ" ಎಂದು ಕರೆ "ಅದರ ತಿರುಗುಸುಲೆ ಇಲ್ಲೆ ಮಾವ.

ಬುಡವ ಒತ್ತಿದರೆ ಆತು ತೋರುಸುತ್ತೆ" ಎಂದು ಅದನ್ನು ಒತ್ತಿ ತೋರಿಸಿದ ರಘುರಾಮ. ಕೈ ಬಿಟ್ಟಾಗ ನೀರೂ ಬಂದಾಗುತ್ತಿತ್ತು" ಬೆ, ಇಷ್ಟು ರಜಾ ನೀರಿಲ್ಲಿ ಕುಂಡೆ ತೊಳವದು ಹೇಂಗೆ ಎಂಬ ಇನ್ನೊಂದು ಸಮಸ್ಯೆ ಉದ್ಭವಿಸಿತು. ಹಳ್ಳಿಯಲ್ಲಿ ಧಾರಾಳ ನೀರು ಚೆಲ್ಲಿಯೇ ಗೊತ್ತು. ಅವರಿಗೆ ನಿಂಗೊ ಇರಿ ಆನೊಂದು ಚೆಂಬು ತಂದುಕೊಡುತ್ತೆ. ಅದರಲ್ಲಿ ನೀರು ತುಂಬಿಸಿಕ್ಕಿಯೇ ನಿಂಗೊ ಮುಂದಾಣ ಕೆಲಸ ಮಾಡಿ" ಎಂದು ವ್ಯವಸ್ಥೆ ಮಾಡಿಕೊಟ್ಟ, ಶಂಕರಭಟ್ಟರನ್ನು ಪ್ರತಿಸಲವೂ ಕೈಹಿಡಿದೇ ಕರೆದುಕೊಂಡು ಹೋಗಬೇಕಾಗಿತ್ತು. ಇದ್ದದ್ದರ ಸಾಗರದವರೇ ಉತ್ತ. ಒಮ್ಮೆ ತೋರಿಸಿದ ಮೇಲೆ ಅವರದ್ದು ಯಾವ ಕಿರಿಕಿರಿಯೂ ಇರಲಿಲ್ಲ. ಹೆಂಗಸರದೆಲ್ಲಾ "ಅಲ್ಲಿ ಉಚ್ಚೆ ವಾಸನೆ ಬತ್ತು ಕೊಳಕ್ಕಿದ್ದು, ಹೇಂಗಪ್ಪಾ ಹೋಪದು, ಕಾರುಬತ್ತು, ಹೊಟ್ಟೆ ತೊಳಶುತ್ತು" ಎನ್ನುವುದು ಮಾಮೂಲಾಯಿತು. ಕೆಲಸ ಸಲ ರಘುರಾಮ ಒಳಗೆ ಹೋಗಿ, ಸುತ್ತಲೂ ನೀರು ಹಾಕಿ ತೊಳೆದೂ ಬರುತ್ತಿದ. ಅಂತೂ ರಾತ್ರಿ ಇಡೀ ಹಿರಿಯರ ಸೇವೆಯಲ್ಲೇ ಕಳೆದು ಹಗಲು ಹೊತ್ತಿನಲ್ಲಿ ಸ್ವಲ್ಪ ನಿದ್ರೆ ಮಾಡಿಕೊಳ್ಳುತ್ತಿದ್ದ. ಸುಬ್ಬಣ್ಣನೂ, ರಾಮಚಂದ್ರನೂ ಗಡದ್ದು ನಿದ್ದೆ ಹೊಡೆಯುತ್ತಿದ್ದರು.

"ಇವಕ್ಕೆ ರಜಾ ಆದರೂ ಕಾಳಜಿ ಇದ್ದೊ ನೋಡಿ, ಒಳ್ಳೆ ಕುಂಭಕರ್ಣನ ಹಾಂಗೆ ಗೊರಕ್ಕೆ ಹೊಡೆತ್ತವು. ಇವರ ನಂಬಿ ನಾವು ಹೆರಡಿದರೆ ಗೋವಿಂದ; ರಘುರಾಮ ಇದ್ದ ಕಾರಣ ಬಚಾಚು" ಎನ್ನುತ್ತಿದ್ದರು ಅವರ ಅಮ್ಮ ಚಿಕ್ಕಮ್ಮಂದಿರು.

ಶಾರದೆ ಸರಸ್ವತಿ, ದೇವಕ್ಕಿಯರ ಪ್ರಪಂಚವೇ ಬೇರೆ ಮೂವರೂ ತಮ್ಮ ಕಷ್ಟ ಸುಖ ಹಂಚಿಕೊಂಡರು. ತಮ್ಮ ತಮ್ಮ ಮನೆಯ ಪದ್ಧತಿಗಳು, ಅತ್ತೆ ಮಾವಂದಿರ ಕ್ರಮಗಳ ನಿಯಮಗಳು, ಗಂಡಂದಿರ ಸ್ವಭಾವಗಳು ಎಲ್ಲವನ್ನೂ ಒಬ್ಬರಿಗೊಬ್ಬರು ಹೇಳಿಕೊಂಡರು. ಒಟ್ಟಿನಲ್ಲಿ ತಾವು ಮೂವರು ಸುಖವಾಗಿರುವುದನ್ನು ಒಪ್ಪಿಕೊಂಡರು. ಇದಕ್ಕೆಲ್ಲಾ ಕಾರಣ ತಮ್ಮ ಹಿರಿಯಕ್ಕ ಕಾವೇರಿ ಎಂಬುದನ್ನು ಜ್ಞಾಪಿಸಿಕೊಂಡರು.

"ಅಪ್ಪು ದೇವಕ್ಕಿ ನೀನು ಅಕ್ಕ-ಭಾವಂಗೆ ಉಡುಗೊರೆಗೆ ಹೇಳಿ ಎಂತಾರೂ ತೈಂದೆಯೊ?" ಕೇಳಿದಳು ಶಾರದೆ.

"ತಯಿಂದೆಯೊ, ಅಕ್ಕಗೊಂದು ಪಟ್ಟೆಸೀರೆ, ಭಾವಂಗೆ ಹೇಳಿ ಶರಟು ಪೀಸು ಪೇಂಟು ಪೀಸುದೇ ಮತ್ತೆ ಅತ್ತೆ ಬಪ್ಪಾಗ ಮನೇಲಿಪ್ಪ ಚಿನ್ನ ಎಲ್ಲಾ ಹಿಡಕ್ಕೊಂಡು ಬಯಿಂದವು, ಮಾದಿಮ್ಮಳಿಂಗೆ ಹಾಕಲಾಡ. ಅದೆಲ್ಲಾ ಹಾಕಿದರೆ ಮದಿಮ್ಮಾಳು ಚೆಂದ ಕಾಂಬದು ಹೇಳಿದವು. ಮತ್ತೆ ನಿಂಗೊ ಎಂತ ತಂದೆ?

"ಎಂಗಳೂದೆ ಒಂದು ಪಟ್ಟೆ ಸೀರೆ, ಮದಿಮ್ಮಾಯಿಂಗೆ ಪಟ್ಟೆ ಶಾಲು ತಯಿಂದೆಯೊ; ಮತ್ತೆ ಮದುವೆಗೆ ಬೇಕಕ್ಕು ಹೇಳಿ ಏಳೆಂಟು ಸಿಂಗಾರ ಕೊನೆಯನ್ನೂ

ತಯಿಂದೆಯೊ, ಮದಿಮ್ಮಾಳ ಬಾಸಿಂಗಕ್ಕೆ, ಸೂಡ್ಳೆ, ಮಾಲೆ ಹಾಕಲೆ, ಪೂಜಿಗೆ ಹೇಳಿ ನವಗೆ ಅದು ಅಗತ್ಯ ಅಲ್ಲದೊ. ಹಾಂಗಾಗಿ ಅತ್ತೆ ಮರಂದಲೇ ಕೊಯಿಸಿ ತಯಿಂದವು. ಚಿನ್ನ ಎಲ್ಲಾ ಸಣ್ಣತ್ತೆ ತತ್ತೆ ಹೇಳಿದ್ದವನ್ನೆ, ಅವರಲ್ಲಿ ಇಪ್ಪಷ್ಟು ಎಂಗಳಲ್ಲಿ ಇಲ್ಲೆ. ಹಾಂಗಾಗಿ ತಯಿಂದಿಲ್ಲೆ. ಮತ್ತೆ ಶಾರದಕ್ಕ ಎಂತ ತಯಿಂದೆ?"

"ಆನೆಂತದೂ ಹೆಚ್ಚು ತಯಿಂದಿಲ್ಲೆ, ಅಕ್ಕಂಗೆ ಒಂದು ನಿತ್ಯ ಸುತ್ತುವ ಹಾಗಿಪ್ಪ ಸೀರೆ, ಭಾವಂಗೊಂದು ಉಂಗುಲ ಅಷ್ಟೆ" ಶಾರದೆಗೆ ತಂಗಿಯರ ಮುಂದು ತಾನು ಚಿಕ್ಕವಳಾದೆ ಅನಿಸ್ಸಿತ್ತು"

"ಎಂತಕೆ ಶಾರದಕ್ಕ ಮೋರೆ ಸಣ್ಣದು ಮಾಡಿದ್ದು. ನಿಂಗೊ ಮಾಡಿದಷ್ಟು ಎಂಗೊ ಆರೂ ಮಾಡಿದ್ದಿಲ್ಲೆಯೋ? ಎಂಗೊಗೆ ಅಬ್ಬೆ ಅಪ್ಪಂಗೆ ರಜವೂ ಸಹಾಯ ಮಾಡ್ಳಾಯಿದಿಲ್ಲೆ, ಎಲ್ಲವೂ ನಿಂಗಳೇ ಮಾಡಿದ್ದು, ಭಾವಂತೂ ಅವರ ಸ್ವಂತ ಮಗನ ಹಾಗೇ ನೋಡಿದ್ದ; ಪ್ರತಿಯೊಂದಕ್ಕೂ ಓಡಾಡಿದ್ದು ಅವನೇ ಅಲ್ಲದೋ? "ಹಾಂಗೆ ಎನ್ನ ಮಾವನೋರುದೇ ಪ್ರತಿ ಸರ್ತಿ ಅಡಕ್ಕೆ ಕ್ಯೊವಾಗ, ತೆಂಗು, ಬಾಳೆಗೊನೆ ಕ್ಯೊವಾಗ• ಒಂದು ಚೀಲಲ್ಲಿ ಹತ್ತು ತೆಂಗಿನ ಕ್ಯಾ, ಒಂದು ಕೊನೆ ಬಾಳೆ ಕಾಯಿ ಕುಂಡೀಗೆ ದಂಡು, ಅಡಕ್ಕೆ ತೆಂಗು ಮಡುಗ್ಗು. "ಮಾಣಿ, ಇದರ ನಿನ್ನ ಮಾವಂಗೆ ತೆಕ್ಕೊಂಡು ಹೋಗಿ ಕೊಡು ಆತೊ. ಅವು ಹೀಂಗಿಪ್ಪದರ ಎಲ್ಲಾ ಪೈಸೆ ಕೊಟ್ಟು ತೆಕ್ಕೊಳ್ಳೇಂಬುದು ಬೇಡ ಹೇಳ್ಳಿಕ್ಕು" ಹೇಳುಗು-ಶಾರದೆ ಸ್ವಲ್ಪ ಗೆಲುವಾದಳು.

"ಎಂಗಳಲ್ಲಿ ಬಾಳೆಹಣ್ಣು, ಹಲಸಿನಹಣ್ಣು ಎಲ್ಲಾ ಕೊಳಕ್ಕೊಂಡು ಇರ್ತು, ತಿಂದು ತಿಂದು ದನಗೋಕ್ಕೂ ಬೊಡ್ಡು. ಆದರೆ ಎಂತ ಮಾಡುದು? ಅಪ್ಪಂಗೆ ಕಳ್ಸಲೆ ಆವುತ್ತೊ? ಹಾಂಗಾಗಿ ಎಂಗಳಂತ ಎಂತ ಉಪಯೋಗವೂ ಆಯಿದಿಲ್ಲೆ ಅಬ್ಬೆ ಅಪ್ಪಂಗೆ. ಅವು ನೆಮ್ಮದಿಲೆ ಇಪ್ಪದೇ ನಿಂಗಳಂದಾಗಿ ಅಲ್ಲದೋ? ಅಂದಳು ಸರಸ್ವತಿ.

"ವಾರಕ್ಕೊಂದಾರಿ ಎಂಗೊ ಅಬ್ಬೆ-ಅಪ್ಪನ ನೋಡ್ಳೆ ಹೋಗದ್ದರೆ ಮಾವನೂ ಅತ್ತೆಯೂ ಎಂಗಳ ಬೈವಲೆ ಸುರು ಮಾಡುಂಗು-ಒಂದಾರಿ ಅವರ ನೋಡಿಕ್ಕಿ ಬಂದರೆ ಎಂಗಾವುತ್ತು ನಿಂಗೊಗೆ? ಒಟ್ಟು ಒಂದು ಹರದಾರಿ ದೂರ ಇಪ್ಪದು, ಅಷ್ಟು ಆಗದೂ ನಿಂಗಳ ಕೈಲಿ "ಹೇಳುತ್ತವು" ಅಂದಳು ಶಾರದೆ.

"ನೀನು ಪುಣ್ಯ ಮಾಡಿದ್ದೆ ಶಾರದಕ್ಕ, ಒಳ್ಳೆ ಗಂಡ, ಅತ್ತೆ ಮಾವ ಸಿಕ್ಕಿದವು. ಅಬ್ಬೆ ಅಪ್ಪ ಹತ್ರಲ್ಲಿ ಇದ್ದವು. ಎಂಗೊ ನೋಡು, ಮದುವೆ ಆದ ಮೇಗೆ ಒಂದಾರಿ ಇತ್ಲಾಗಿ ಬಪ್ಪಲೇ ಆಯಿದಿಲ್ಲೆ; ಹುಗಿವಷ್ಟು ಇದ್ದರೂ ಎಂತ ಮಾಡ್ಲೂ ಆಯಿದಿಲ್ಲೆ,

ಎಂಗೊ ಲೆಕ್ಕಕ್ಕೆ ಮಾಂತ್ರ, ಅಬ್ಬೆ ಅಪ್ಪಂಗೆ ಉಪಕಾರಕ್ಕೆ ಬಂದವು ಕಾವೇರಿ ಅಕ್ಕನೂ, ನೀನೂ ಮಾಂತ್ರ" ಅಂದಳು ಸರಸ್ವತಿ.

"ಆಗಲಿ ನಿಂಗೊ ಆದ್ರೂ ಸೌಖ್ಯಲ್ಲಿ ಇದ್ದಿರನ್ನೆ. ಅಬ್ಬೆಪ್ಪಂಗೋಕ್ಕೆ ತಲೆ ಬೆಶಿ ಇಲ್ಲೆನ್ನೆ."

"ಎಂಗೊ ಸೌಖ್ಯಲ್ಲಿಯೇ ಇದ್ದೆಯೊ ಏವ ತೊಂದರೆಯೂ ಇಲ್ಲೆ. ಆ ಮಟ್ಟಂಗೆ ಪುಣ್ಯ ಮಾಡಿದ್ದೆಯೊ" ಎಂದು ಒಪ್ಪಿಕೊಂಡರು ಇಬ್ಬರು.

"ಕಾವೇರಕ್ಕನ ಕಾಣದ್ದೇ ಮೂರು ವರ್ಷ ಆತು; ಅದರ ನೋಡುತ್ತಲೇ ಹೇಳಿ ಸಂತೋಷ ಆವುತ್ತು. ಮತ್ತೆ ಅದಕ್ಕೆ ಮದುವೆಯ ಅಲಂಕಾರವ ನಾವೇ ಮಾಡುವೊ, ಚೆಂದಕೆ ಮಾಡೇಕು ಚೆಂದ ಕಾಂಗದು; ಅತ್ತೆ ಬಪ್ಪಾಗ ಮನೇಲಿಪ್ಪ 'ಸೇವಂತಿಗೆ ಹೂಗಳ. ಹಾಳೆ ಮೂಡೆಲಿ ಹಾಕಿ ತೆಕ್ಕೊಂಡಿದವು. ನಾವು ಅದರ ಮಾಲೆ ಕಟ್ಟಿ ಅಕ್ಕಂಗೆ ಸೂಡ್ವುವೊ "ಅದಪ್ಪು – ಅದರ ಶೃಂಗಾರವ ನಾವೇ ಮಾಡುದು"

ಹೆಂಗಸರು ತಮ್ಮ ಕಷ್ಟ ಸುಖ ಮಾತಾಡಿಕೊಂಡರು.

"ಸರಸ್ವತಿಯ ಮದುವೆ ಆಗಿ ಮೂರು ವರ್ಷ ಆತಿಲ್ಲೆಯೋ ಎಂತ 'ಶುದ್ದಿ' ಲೇ ಇಲ್ಲೆ.

"ಈಗ ಅದಕ್ಕೆ ಮೂರು ತಿಂಗಳು ಕಳ್ತಾದ. ಈಗ ಕಾರುದು ಎಲ್ಲಾ ಕಮ್ಮಿ ಆಯಿದು, ತಿಂಬಲೆ ಸರಿ ಸುರುಮಾಡಿದ್ದು. ಅಷ್ಟರವರೆಗೆ ದಿನಕ್ಕೆರಡು ಬೊಂಡ ಕುಡುಕ್ಕೊಂಡು ಇತ್ತು" ಅಂದರು ಅವಳ ಅತ್ತೆ.

"ಅಂಬಾಗ ಹೆರ್ಲೆ ಅಪ್ಪನ ಮನೆಗೆ ಬಕ್ಕೋ" ಕೇಳಿದರು ಶಂಕರಮ್ಮ.

"ಕೋಡಿ ಕಳುದ ಮತ್ತೆ ನೋಡುವೊ. ಒಂದಾರಿ ಡಾಕ್ಟ್ರ ಹತ್ರೆ ತೋರ್ಸಿಕ್ಕಿ, ಎಂತದೂ ತೊಂದರೆ ಇಲ್ಲೆ ಹೇಳಿ ಆದರೆ ಕರಕ್ಕೊಂಡು ಹೋಗಿ. ಇಲ್ಲದಿದ್ದರೆ, ಶಿವಮೊಗ್ಗಲ್ಲಿ ಒಳ್ಳೆ ಹೆರಿಗೆ ಆಸ್ಪತ್ರೆ ಇದ್ದು. ಅಲ್ಲಿಯ ಡಾಕ್ಟ್ರತ್ತಿಯೂ ಉಷಾರಿದ್ದು. ಅಲ್ಲಿಯೇ ಹೆರಿಗೆ ಮಾಡಿ, ಎರಡು ತಿಂಗಳ ಮತ್ತೆ ಕರಕ್ಕೊಂಡು ಹೋಗಿ ಆಗದೋ" ಎಂದರು ಸರಸ್ವತಿಯ ಅತ್ತೆ.

"ಅಕ್ಕು ಅಕ್ಕ, ಆಗದ್ದೆಂತದೂ ಇಲ್ಲೆ. ನವಗೆ ಕೂಸೂ ಬಾಣಂತಿಯೂ ಸೌಖ್ಯಲ್ಲಿ ಇದ್ದರಾತು. ನಿಂಗೊ ಹೇಂಗೆ ಹೇಳುತ್ತಿರೋ ಹಾಂಗೇ ಆಗಲಿ" ಹೇಳಿದರು ಶಂಕರಮ್ಮ.

"ಮತ್ತೆ ದೇವಕ್ಕಿದು ಎಂತ ಶುದ್ದಿ"

"ಅದು ನೆರದ್ದದ್ದೇ ತಡವಾಗಿ ಅಲ್ಲದೊ. ಒಂದುವರ್ಷ ಆವುತ್ತಷ್ಟೆ. ಇನ್ನೂ ರಜಾ ಮಕ್ಕಳಾಟಿಕೆ ಇದ್ದು. ಆಗಲಿ ಮಕ್ಕೊ ನಿಧಾನಲ್ಲಿ ಅಮ್ಸರ ಇಲ್ಲೆ ಹೆತ್ತ ಮತ್ತೆ ಮಕ್ಕಳ ಕೆಲಸ ಅದು ಇದು ಹೇಳಿ ಇರ್ತನ್ನೆ" ಅಂದರು ಅವಳ ಅತ್ತೆ.

"ತಿಂಗಳಿಗೆ ಒಂದಾರಿ ಆದರೂ ಅದಕ್ಕೆ ಸುಬ್ಬಣ್ಣನ ಒಟ್ಟಿಂಗೆ ಶಿವಮೊಗ್ಗಕ್ಕೆ ಹೋಯೇಕು, ಅಲ್ಲಿ ಹೋಟ್ಳಲ್ಲಿ ಕಾಫಿ, ಮಸಾಲೆದೋಸೆ, ತಿಂದಿಕ್ಕಿ ಬರೇಕು, ಒಂದೆರಡಾದರೂ ವಾಯಿಲ್ ಸೀರೆ ತೆಕ್ಕಳೇಕು. ಸುಬ್ಬಣ್ಣ ಹೋವುತ್ತರೆ ಎಂಗಳೇ ದಿನಿಗೇಳಿ ಹೇಳುತ್ತೆಯೊ. ದೇವಕ್ಕಿಯನ್ನು ಕರಕೊಂಡು ಹೋಪಲೆ ಅಬ್ಬೆ ಅಪ್ಪನ ಬಿಟ್ಟು ಬಂದ ಕೂಸಲ್ಲದೋ? ಅಸಕ್ಕ ಆಗದ್ದಿಕೋ"

"ನಿಂಗಳ ಹಾಂಗಿಪ್ಪ ನೆಂಟ್ರು ಸಿಕ್ಕಿದ್ದು ಎಂಗಳ ಪುಣ್ಯ. ಎನ್ನ ಕೂಸುಗೊ ಎಲ್ಲಾ ಸೌಖ್ಯಲ್ಲಿ ಇದ್ದವು. ಇಂದಿಂಗೆ ಎಂಗೊಗೆ ಕಾವೇರಿಯ ಚಿಂತೆಯೂ ತೊಲಗಿತ್ತು" ಅಂದರು ಶಂಕರಮ್ಮ

"ಎಲ್ಲಾ ದೈವೇಚ್ಛೆ ಅಲ್ಲದೊ. ಒಂದಕ್ಕೆ ರಜಾ ಬೇನೆ ಇದ್ದರೂ ಅಬ್ಬೆ ಅಪ್ಪಂಗೆ ನಿತ್ಯ ದುಃಖವೇ ಅಲ್ಲದೋ"

"ಹೆತ್ತು ಹೊತ್ತು ಸಾಂಕಿದವಕ್ಕೆ ದುಃಖ ಇಲ್ಲದ್ದಿಕ್ಕೊ" ಎಂದು ಒತ್ತುಕೊಟ್ಟರು ದೇವಕಿಯ ಅತ್ತೆ.

ಹೀಗೆ ಅದೂ ಇದು ಮಾತನಾಡಿಕೊಂಡು, ಹಸಿವೆಯಾದಾಗ ಬೊಂಡ, ಅವಲಕ್ಕಿ ಪಾನಕ, ಬಾಳೆಹಣ್ಣು ತಿಂದುಕೊಂಡು ಬಂದ ಕಾರಣ ಪ್ರಯಾಣದಲ್ಲಿ ಆಯಾಸ ಯಾರಿಗೂ ಆಗಲಿಲ್ಲ. ಈಗ ರಾಮಚಂದ್ರ, ಸುಬ್ಬಣ್ಣ ಇಬ್ಬರೂ ರಘುರಾಮನ ಕೆಲಸಕ್ಕೆ ಕೈ ಜೋಡಿಸಿದರು – ಬೋಂಡ ಕೆತ್ತಿ ಅದರೊಳಗೆ ಅವಲಕ್ಕಿ ಸಕ್ಕರೆ ಹಾಕಿಕೊಡುವುದು, ಬಾಳೆಹಣ್ಣು ಹಂಚುವುದು, ಪಾನಕ ಮಾಡುವುದು, ಕೊಡುವುದು –ಎಲ್ಲವನ್ನೂ ಮಾಡತೊಡಗಿದರು.

"ಅಣ್ಣನ ಒಟ್ಟಿಂಗೆ ನಾಲ್ಕು ಸರ್ತಿ ಅತ್ತಿತ್ತೆ ಹೋದರೆ ಎಂಗೊಗೂ ಅರಡಿಗು" ಇಷ್ಟರವರೆಗೆ ಎಂಗೊ ಆರೊಟ್ಟಿಂಗೆ ಎಲ್ಲಿಗೂ ದೂರಕ್ಕೆ ಹೋಯಿದಿಲ್ಲೆದ" ಎಂದು ಸಮರ್ಥಿಸಿಕೊಂಡರು.

"ದೂರಕ್ಕೆ ಹೋಯೇಕು ಹೇಳಿ ಇಲ್ಲೆ. ಒಬ್ಬಂದೊಬ್ಬನ ನೋಡಿ ಕಲಿಯೇಕು. ತನ್ನಂದ ಎಡಿಗಾದ ಸಹಾಯ ಬೇರೆಯವಕ್ಕೆ ಮಾಡೇಕು. ರಜಾ ಹರದಾಡಿರೆ ಎಂತಾವುತ್ತು ಮುತ್ತು ಉದುರುತ್ತೋ?" ಎಂದರು ದೇವಕಿಯ ಅತ್ತೆ.

"ಇಲ್ಲೆ ಅಬ್ಬೆ, ಇನ್ನು ಮುಂದೆ ಎಂಗಳೂ ಓಡಾಡ್ತಿಯೊನೋಡ್ಯೊಳಿ. ಮರಬಿಟ್ಟ ಮಂಗನ ಹಾಂಗೆ ಕೂರ್ತಿಲ್ಲಿಯೋ?" ಅಂದರು ಇಬ್ಬರೂ.

"ಕಡೆಂಗೂ ಒಳ್ಳೆ ಬುದ್ಧಿ ಕೊಟ್ಟನ್ನೆ ದೇವರು"

"ಎಂಗಳ ಬುದ್ಧಿ ಒಳ್ಳೆದೇ ಇದ್ದು ದೊಡ್ಡಬ್ಬೆ. ರಜಾ ಸಾಣೆ ಹಿಡಿಸೇಕಾತು ಅಷ್ಟೆ. ನಿಂಗೊ ಎರಡು ಬೈದ ಮೇಲೆ ನೆಟ್ಟಗಾತದ. ಹೀಂಗ ಅಂಬಾಗಂಬಾಗ ಬೈಯ್ಯೊಂಡು ಇರಿ ಆತೋ" ಎಂದು ಸುಬ್ಬಣ್ಣ ನಗಾಡಿದ.

"ಮಕ್ಕೊಗೆ ಸಲಿಗೆ ಹೆಚ್ಚಾತು"

"ಎಂತಕೆ ಸಲಿಗೇಲಿ ಕೊಂಡಾಟಲ್ಲಿ ಬೆಳಶಿದ್ದು. ಸಣ್ಣ ಇಪ್ಪಾಗಳೇ ರಜಾ ರಜಾ ಮೈ ಬಗ್ಸೆಕಾತು. ಅಂಬಾಗ ಎಂಗಳೂ ರಘುರಾಮಣ್ಣನ ಹಾಂಗೆ ಆವುತ್ತಿತ್ತೆಯೋ" ಅಂದ ಸುಬ್ಬಣ್ಣ. "ಅದಪ್ಪು, ಒಬ್ಬನೇ ಮಾಣಿ ಹೇಳಿ, ಹೊತ್ತುಗೊಂಡು ತಿರುಗಿದವು" ದನಿಗೂಡಿಸಿದ ರಾಮಚಂದ್ರ.

"ಅಪಪ್ಪಾ ಎಂಗಳದೇ ತಪ್ಪು. ನಿಂಗಳ ಬಾಯಿಗೆ ಕೋಲು ಹಾಕಿದ್ದೇ ತಪ್ಪು" ಸ್ವಲ್ಪ ಮುನಿಸಿನಿಂದ ಹೇಳಿದವರು ದೇವಕಿಯ ಅತ್ತೆ.

"ಕೋಪುಸೇಡ ಅಬ್ಬೆ. ಇದೆಲ್ಲಾ ತಮಾಷೆ ಅಲ್ಲದೊ. ಇನ್ನು ಮುಂದೆ ಎಂಗಳೂ ಉಷಾರಿ ಆವುತ್ತೆಯೊ ಆತೊ" ಎಂದು ಅಮ್ಮನನ್ನು ರಮಿಸಿದ ಸುಬ್ಬಣ್ಣ.

ಗಂಡಸರೆಲ್ಲಾ ಅದು ಇದು, ವ್ಯವಹಾರ, ಅಡಕ್ಕೆ ಧಾರಣೆ, ಅನುಪತ್ಯಗಳ ಕುರಿತು ಮಾತಾಡಿಕೊಳ್ಳುತ್ತಿದ್ದರು. ಶಂಕರಭಟ್ಟರಿಗೆ, ಪ್ರತ್ಯೇಕ ಮಲಗಿಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟಿದ್ದ ರಘುರಾಮ.

"ಮಾವ ನಿಂಗೊಗೆ ಇತ್ಲಾಗಿ ಹೋಯೇಕಾರೆ ಎನ್ನ ದಿನಿಗೇಳಿ. ರೈಲು ಹೋಪಾಗ ನಡವಾಗ ಶರೀರ ಮಾಲಗು, ಆನು ಕೈ ಹಿಡುಕ್ಕೊಂಡು ಕರಕ್ಕೊಂಡು ಹೋಫೆ, ದಾಕ್ಷಿಣ್ಯ ಮಾಡೇಡಿ" ಎಂದ ರಘುರಾಮ.

"ಆತು ಮಗಾ, ಎನಗೆ ಆರದ್ದಾದರೂ ಆಧಾರ ಇಲ್ಲದ್ದೆ ನೆಡವಲೆಡಿಯ ಮೊಳಪ್ಪು ಬೇನೆ ರಜಾ ಹೆಚ್ಚೇ ಇದ್ದು"

"ಈಗ ಹೋಪದು ಡಾಕ್ಟ್ರ ಹತ್ರೆ ಅಲ್ಲದೊ? ನಿಂಗಳ ಮಗ ಮದ್ದು ಕೊಟ್ಟು ಠಮ್ಮನೆ ಕಮ್ಮಿ ಮಾಡುಗು"

"ಎಂತ ಮಾಡುತ್ತನ್" ಅಂದರು ಶಂಕರ ಭಟ್ಟರು.

ಇಷ್ಟೆಲ್ಲಾ ಆಗುವಾಗ ಕಾಶಿ ಸಮಿಪಿಸಿತ್ತು.

"ಹೆಮ್ಮಕ್ಕೊ ಎಲ್ಲಾ ರೆಡಿ ಆಗಿ, ಕಾಶಿ ಎತ್ತಿತ್ತದಾ, ಸಾಮಾನೂಗಳ ಎಲ್ಲಾ ಒಂದೇ ಕಡೆ ಮಡುಗಿ" ಎಂದ ರಘುರಾಮ.

"ಎಲ್ಲರೂ ಗಡಿಬಿಡಿಯಲ್ಲಿ ಎದ್ದು ನಿಂತರು. ಸಾಮಾನುಗಳನ್ನು ಒಂದೆಡೆ ಜೋಡಿಸಿದರು. ಬಚ್ಚಲು ಮನೆಗೆ ಹೋಗುವವರಮ್ಮೆ ಹೋಗಿ ಬಂದರು. ರೈಲು ನಿಲ್ದಾಣಕ್ಕೆ ಬಂದು ನಿಂತಿತು. ಜನರೆಲ್ಲಾ ಒಬ್ಬೊಬ್ಬರೇ ಇಳಿಯತೊಡಗಿದರು.

"ನಿಂಗೊ ಅಮ್ಸರ ಮಾಡೇಡಿ –ರೈಲಿ ಇಲ್ಲಿಯೇ ನಿಂಬದು. ನಾಳಂಗೆ ಇಲ್ಲಿಂದಲೇ ಉದಿಯಪ್ಪಾಗ ಹತ್ತು ಗಂಟೆಗೆ ಹೆರಡುದು. ಹಾಂಗಾಗಿ ನಿಧಾನಲ್ಲಿ ಇಳುದರೆ ಸಾಕು, ಬಾಕಿದ್ದೊವು ಎಲ್ಲಾ ಹೋದ ಮೇಗೆ ನಾವು ಇಳಿವೊ. ಎಲ್ಲೋರೊ ಒಟ್ಟಿಂಗೆ ಹೋದರಾತು" ಎಂದು ರಘುರಾಮ ಹೇಳಿದ ಮೇಲೆ ಅಲ್ಲಲ್ಲಿಯೇ ಕುಳಿತುಕೊಂಡರು.

ರೈಲ್ವೆ ಸ್ಟೇಶನಿಗೆ ಡಾಕ್ಟ್ರು ಕೇಶವ ಮತ್ತು ಕಾವೇರಿ ಬಂದಿದ್ದರು–ಇವರಿದ್ದ ಬೋಗಿ ಸಮೀಪಕ್ಕೆ ಬಂದೊಡನೆ ದೇವಕ್ಕಿಗೆ ಅಕ್ಕನ ಮುಖ ಕಂಡಿತು.

"ಅದಾ ಅಲ್ಲಿ ಅಕ್ಕ" ಎಂದು ಒಮ್ಮೆಗೇ ಬೊಬ್ಬಿಟ್ಟಳು. ಅವಳ ಬೆನ್ನ ಹಿಂದೆ ಶಾರದೆ, ಸರಸ್ವತಿಯರೂ

"ಅಕ್ಕಾ ಎಂಗೊ ಇಲ್ಲಿದ್ದೆಯೊ" ಎಂದು ಕೈ ಬೀಸಿದರು. ಎಲ್ಲರಿಗಿಂತಲೂ ಮೊದಲು ಮೂವರು ರೈಲಿನಿಂದ ಇಳಿದು, ಕಾವೇರಿಯನ್ನು ತಬ್ಬಿಕೊಂಡರು.

"ಎನ್ನ ರಜಾ ಬಿಡಿ ಕೂಸುಗಳೇ, ಅಬ್ಬೆ ಅಪ್ಪ, ನಿಂಗಳ ಅತ್ತೆ ಮಾವಂದರ ಎಲ್ಲಾ ಇಳುಶಲೆ ಸಹಾಯ ಮಾಡುವೊ" ಹೇಳಿದಳು ಕಾವೇರಿ.

"ಅವರೆಲ್ಲಾ ಭಾವನೊದೆ, ಎಂಗಳ ಮನೆಯೊರುದೆ ಇಳುಶುಗು" ಹೇಳಿದಳು ದೇವಕ್ಕಿ, ದಮ್ಮಯ್ಯ ಎಂದರೂ ಅಕ್ಕನ ಕೈ ಬಿಡಲಿಲ್ಲ ಮೂವರು.

ಡಾಕ್ಟರು ಕೇಶವ ಬಂದವನ್ನು, ತಂದೆಯನ್ನು ಪಾದಮುಟ್ಟಿ ನಮಸ್ಕರಿಸಿದರು. ಭಟ್ಟರ ಬಲಗೈಯನ್ನು ಮಗನ ತಲೆಯಮೇಲಿಟ್ಟರು. 'ಏಳುಮಗಾ' ಎಂದರು. ಕೃಶದೇಹಿಯಾಗಿ, ನಡೆಯಲೂ ಆಗದ ತಂದೆಯನ್ನೂ ನೋಡಿ ಡಾ।ಕೇಶವನಿಗೆ ಕಣ್ಣು ಹನಿಗೂಡಿತು. ದಿನಕ್ಕೆ ಹತ್ತಾರು ಮೈಲು ನಡೆದುಕೊಂಡು ಹೋಗಿ ಬರುತ್ತಿದ್ದ ತಂದೆ ದೃಢ ದೇಹಿಯಾಗಿದ್ದರು–ಈಗ ನಡೆಯಲೂ ಬಾರದೆ, ಕುಂಬುತ್ತಾ ಹೆಜ್ಜೆ ಹಾಕುವ ತಂದೆಯನ್ನು ನೋಡಿ ಮರುಕ ಬಂತು.

"ನಿಧಾನ ನೆಡೆಯ ಅಪ್ಪಾ, ಆನು ಕೈ ಹಿಡುಕ್ಕೊಳ್ತೆ" ಎಂದರು ಡಾಕ್ಟ್ರು

"ಇದಾ ಮಗಾ, ಈ ಕೈ ಚೀಲತೆಕ್ಕೊ, ಆನು ನಿಧಾನಲ್ಲಿ ಕೋಲು ಊರ್ಕೊಂಡು ಬಪ್ಪೆ."

"ಆನೂ ಒಂದು ಕೈ ಹಿಡುಕ್ಕೊಳ್ತೇ" ಎಂದು ತಂದೆಯನ್ನು ಕೈ ಹಿಡಿದು ನಡೆಸಿದರು ಡಾಕ್ಟ್ರ"

"ಎಲ್ಲೋರೂ ಒಟ್ಟಿಂಗೆ ಸ್ಟೇಶನ್ನಿಂದ ಹೆರಹೋಪೊ. ಎಲ್ಲಾ ಟಿಕೇಟುಗಳ ಗೇಟಲ್ಲಿ ಇಪ್ಪ ಮನುಷ್ಯಂಗೆ ಕೊಡೇಕು. ಹೇಳಿದ ರಘುರಾಮ. ಎಲ್ಲರೂ ರೈಲ್ವೆ ಸ್ಟೇಷನಿನಿಂದ ಹೊರಗೆ ಬಂದು ಒಂದು ಕಡೆ ನಿಂತರು.

"ದಾರಿಲಿ ಎಂತಾ ತೊಂದರೆ ಆಯಿದಿಲ್ಲೆನ್ನೆ ನಿಂಗೊಗೆ" ಎಂದು ವಿಚಾರಿಸಿದರು ಡಾಕ್ಟ್ರು.

"ಎಂತ ತೊಂದರೆ ಆಯಿದಿಲ್ಲೆ. ಎಲ್ಲೋರು ಅದು ಇದು ಹೇಳಿ ಹರಟೆ ಕೊಚ್ಚಂಡು ಬಯಿಂದೆಯೊ, ಎರಡು ದಿನ ಕಳದ್ದೇ ಗೊಂತಾಯಿದಿಲ್ಲೆ" ಎಂದ ರಘುರಾಮ.

"ಇವು ಎನ್ನ ಅಪ್ಪ, ಇವು ತಂಗೆಕ್ಕೊ, ಇವು ಅವರ ಗೆಂಡಂದ್ರು, ರಾಮಚಂದ್ರ, ಸುಬ್ಬಣ್ಣ ಹೇಳಿ, ಇದು ಎನ್ನ ಅಬ್ಬೆ, ಇವು ತಂಗೆಕ್ಕಳ ಅತ್ತ್ಯೋರಕ್ಕೊ" ಎಂದು ಎಲ್ಲರನ್ನೂ ಪರಿಚಯಿಸಿದಳು ಕಾವೇರಿ, ಡಾಕ್ಟ್ರು ಎಲ್ಲರಿಗೂ ನಮಸ್ಕಾರ ಮಾಡಿದರು. 'ಮತ್ತೆ ಎಂಗಳ ಪರಿಚಯ ಮಾಡ್ಸಿದ್ದೇ ಇಲ್ಲೆ' ಎಂದು ಮುಂದೆ ಬಂದರು ಕೇಶವ ಭಟ್ಟರು, ಗಣಪತಿ ಭಟ್ಟರು.

"ಎಂತ ಕಾವೇರಿ ಎಂಗಳ ಮೇಗೆ ಕೋಪ ಇನ್ನೂ ಹೋಯಿದಿಲ್ಲೆಯೋ ಎಂದು ಕೇಳಿದರು ಕೇಶವ ಭಟ್ಟರು.

"ಹಾಗೆಂತದೂ ಇಲ್ಲೆ ಅಜ್ಜ. ಎನಗೆ ನಿಂಗಳ ಮೇಗೆ ಎಂತ ಕೋಪವೂ ಇಲ್ಲೆ. ನಿಂಗಳಂದಾಗಿ ಅಲ್ಲದೊ ಆನು ಇಲ್ಲಿಗೆ ಎತ್ತದ್ದು. ಇಲ್ಲದಿದ್ದರೆ ಆನೆಲ್ಲಿ ಹೆರಟಿಕ್ಕಿ ಬತ್ತಿತ್ತೆ"

"ಎಂಗೊಗೆ ಗೊಂತಿಪ್ಪದು ಅಷ್ಟೇ ಅಲ್ಲದೊ? ಬೇರೆ ದಾರಿ ಇದ್ದು ಹೇಳಿ ತೋರ್ಸಿದೋಳು ನೀನಲ್ಲದೊ? ಇನ್ನು ನಿನ್ನ ದಾರಿಲೇ ಹೋಪಹಾಂಗೆ ಎಂಗಳೂ ಹೇಳುವೊ. ಎಂಗೊ ಮಾಡಿದ್ದು ತಪ್ಪಾಯಿದು. ಮನಸ್ಸಿಲ್ಲಿ ಮಡುಗೇಡ ಕಾವೇರಿ"

"ಇಲ್ಲೆ ಅಜ್ಜ, ಎನಗೆ ನಿಂಗಳ ಮೇಗೆ ರಜವೂ ಕೋಪ ಇಲ್ಲೆ ಬನ್ನಿ ಎಲ್ಲೋರು ಒಟ್ಟಿಂಗೆ ಮನಗೆ ಹೋಪೊ ಅಂಥಳು ಕಾವೇರಿ ಭಟ್ಟರಿಬ್ಬರಿಗೂ ಸಮಾಧಾನವಾಯಿತು.

"ಅಷ್ಟರಲ್ಲಿ ಡಾಕ್ಟ್ರು ಕಾರು ತೆಗೆದುಕೊಂಡು ಬಂದರು.

"ಅಪ್ಪಾ ನಿಂಗಳೂ, ಮಾವನೂ ಎದುರು ಸೀಟಿಲ್ಲಿ ಕೂರಿ, ಎಂದು ಅವರಿಬ್ಬರನ್ನೂ ಕಾರಿಗೆ ಹತ್ತಿಸಿಕೊಂಡರು.

"ಕಾವೇರಿ ನೀನೂ ಇದೇ ಕಾರಿಲ್ಲಿ ಬಾ" ಎಂದು ಕರೆದರು ಡಾಕ್ಟ್ರ.

"ಎಂಗಳೂ ಅಕ್ಕನೊಟ್ಟಿಂಗೆ ಹೋವುತ್ತೆಯೊ" ಅಂದು ಮೂವರೂ ತಂಗಿಯರೂ ಕಾರಿನಲ್ಲಿ ಹತ್ತಿ 'ಕುಳಿತರು.

"ಅವಿನ್ನು ಅಕ್ಕನ ಬಿಟ್ಟಿಕ್ಕಿ ಎಲ್ಲಿಗೂ ಹೋಗವು" ಅಂದರು ಶಂಕರಮ್ಮ.

"ಅಸಕ್ಕ ಆಯಿದು ಅವಕ್ಕೆ, ಒಟ್ಟಿಂಗೇ ಬೆಳದವು ಅಲ್ಲದೋ" ಎಂದರು ಶಾರದೆಯ ಅತ್ತೆ.

"ನಿಂಗೊ ಇಲ್ಲಿಯೇ ನಿಲ್ಲಿ, ಆನು ಅವರ ಬಿಟ್ಟಿಕ್ಕಿ ವಾಪಾಸು ಬತ್ತೆ, ಎಲ್ಲೋರನ್ನೂ ಕರಕ್ಕೊಂಡು ಹೋವುತ್ತೆ" ಎಂದು ಡಾಕ್ಟ್ರ ಕಾರಿಗೆ ಚಾಲನೆ ನೀಡಿದರು. ಅವರನ್ನೆಲ್ಲಾ ಮನೆಯಲ್ಲಿ ಇಳಿಸಿ.

"ಕಾವೇರಿ, ಅಪ್ಪನ ಬೇಕಾದರೆ ರಜಾ ಮನಿಕ್ಕೊಂಬಲೆ ಹೇಳು, ಕರಕ್ಕೊಂಡು ಹೋಗಿ ಹಾಸಿಗೇಲಿ ಮನುಶು ಆತೊ" ಎಂದು ಪುನಃ ಸ್ಟೇಶನ್ ಕಡೆಗೆ ಹೊರಟರು; ಉಳಿದವರನ್ನೂ ಕರೆದುಕೊಂಡು ಬಂದರು. ಕಾವೇರಿ ಶಂಕರ ಭಟ್ಟರ ಕೈಯ್ಯನ್ನು ಭುಜದ ಮೇಲೆ ಏರ್ಸಿಕೊಂಡು ನಿಧಾನವಾಗಿ ನಡೆಸಿ, ಅವರಿಗಾಗಿ ಸಿದ್ಧಪಡಿಸಿದ ಹಾಸಿಗೆಯಲ್ಲಿ ಮಲಗಿಸಿದ್ದಳು.

"ಅಪ್ಪಾ, ನಿಂಗೊ ಎಲ್ಲಾ ಸಾಮಾನುಗಳ ಪಡಸಾಲೆಲಿ ಮಡುಗಿ, ಕೈಕಾಲು ಮೋರೆ ತೊಳಕ್ಕೇಳಿ. ಬೆಶಿನೀರ ಕೊಟ್ಟಗೇಲಿ ನೀರು ಕಾದಂಡಿದ್ದು, ಅಲ್ಲೆ ಚೆಂಡಿ ಹರ್ಕು, ಸಾಬೂನು, ಇದ್ದು ಆತೊ" ಎಂದು ವ್ಯವಸ್ಥೆ ಮಾಡಿದಳು.

"ಅಬ್ಬೆ ನಿಂಗೊ ಎಲ್ಲಾ ಒಳಾಣ ಕೋಣಗೆ ಹೋಗಿ, ಅಲ್ಲಿಯೂ ಒಂದು ಬೆಶಿನೀರ ಕೊಟ್ಟಗೆ, ಪಾಯಖಾನೆ ಇದ್ದು" ಅಂದಳು ಕಾವೇರಿ.

ಎಲ್ಲರೂ ಪ್ರಾತಃರ್ವಿಧಿಗಳನ್ನು ಮುಗಿಸಿದರು. ಅಷ್ಟರಲ್ಲಿ ಬಿಸಿ ಬಿಸಿ ಉಪ್ಪಿಟ್ಟು, ಕಾಫಿ, ಬಾಳೆಹಣ್ಣು ಹೋಳಿಗೆ, ತಯಾರಾಗಿ ಬಂದಿತ್ತು. ಇವರಿಗೆಲ್ಲಾ ಹಂತಿಯಲ್ಲಿ ಬಾಳೆಲೆ ಹಾಕಿ ಬಳಸಲು ಇಬ್ಬರು ಹುಡುಗರು ಸಿದ್ದವಾಗಿ ನಿಂತಿದ್ದರು; ಎಲ್ಲರಿಗೂ ಹಸಿವೆ ಚೆನ್ನಾದ್ದಿದ್ದು ಸರಿಯಾಗಿಯೇ ತಿಂದು ಹೊಟ್ಟೆ ತುಂಬಿಸಿಕೊಂಡರು.

ಎಲ್ಲರಿಗೂ ಮನೆ ನೋಡಿ ಸಂತೋಷವಾಯಿತು. ಸುಣ್ಣ ಬಣ್ಣ ಬಳಿದು ಥಳ ಥಳಿಸುತ್ತಿತ್ತು. ಒಳಗೆ ಮೂರು ದೊಡ್ಡ ಕೋಣೆಗಳು, ಒಂದು ಅಡಿಗೆ ಮನೆ, ಎರಡು ಬಚ್ಚಲು ಮನೆ. ಬಿಸಿನೀರು ಕಾಯಿಸಲು ದೊಡ್ಡ ದೊಡ್ಡ ತಾಮ್ರದ ಹಂಡೆಗಳಿದ್ದವು. ಅದಕ್ಕೆ ನೀರು ಬಿಡಲು ನಳಗಳನ್ನು ಜೋಡಿಸಿದ್ದರು, ಒಲೆಗೆ ಬೆಂಕಿ ಹಚ್ಚಲು ಹೊರಗಿನಿಂದ ವ್ಯವಸ್ಥೆ ಇತ್ತು. ಹಾಗಾಗಿ ಮನೆಯಲ್ಲಿ ಎಲ್ಲಿಯೂ ಹೊಗೆ ಬರುತ್ತಿರಲಿಲ್ಲ. ಎದುರುಗಡೆ ದೊಡ್ಡದಾದ ಪಡಸಾಲೆ ಇತ್ತು. ಬಟ್ಟೆ ಒಗೆದು ಹಾಕಿ ಒಣಗಿಸಲು ಮನೆಯ ಹಿಂದುಕಡೆ ಪ್ರತ್ಯೇಕ ವ್ಯವಸ್ಥೆ ಇತ್ತು, ಮೂರು ಕೋಣೆಗಳಿಗೂ ಪ್ರತ್ಯೇಕ ಪ್ರತ್ಯೇಕ ಮಂಚ ಹಾಸಿಗೆ, ಮೇಜು ಕುರ್ಚಿಗಳಿದ್ದವು, ಪುಸ್ತಕ ಬಟ್ಟೆ, ಜೋಡಿಸಿಡಲು ಪ್ರತ್ಯೇಕ ಕಪಾಟುಗಳು ಇದ್ದವು. ಎಲ್ಲಾ ಕೋಣೆಗಳಿಗೂ ಕಿಟಿಕಿ ಪರದೆ ಹಾಕಿತ್ತು. ಗಾಳಿಗಾಗಿ ವಿದ್ಯುತ್ ಪಂಕಗಳೂ ಬೆಳಕಿಗಾಗಿ ದೀಪಗಳೂ ಇದ್ದವು. ಮನೆಯ ಮುಂದಿನ ಜಾಲಿಗೆ ಚಪ್ಪರ ಹಾಕಲಾಗಿತ್ತು.

“ಕಾವೇರಿಯ ಮನೆಲ್ಯಾಕಿದ್ದು, ಒಂದು ಗುಂಡಿ ಒತ್ತಿದರೆ ದೀಪವೂ, ಗಾಳಿಯೂ ಬತ್ತು. ಹೀಂಗಿಪ್ಪದು ನಮ್ಮೂರಿಂಗೆಲ್ಲಾ ಯಾವಾಗ ಬಪ್ಪದೋ ಏನೋ ನೀರೆಳೆದು ಸಾಕಾವುತ್ತು ಹೊಗೆ ಕಣ್ಣಿಂಗೆ ಬಡುದು ಕೆಂಪಾವುತ್ತು. ನಿಂಗೊ ಅಡಿಗೆ ಮನೆ ನೋಡಿದ್ದೀರೊ, ಅಲ್ಲಿ ದೊಡ್ಡ ದೊಡ್ಡ 2 ಚಿಮಣಿ ಎಣ್ಣೆ ಸ್ಟೌ, 2 ಸಣ್ಣ ಸ್ಟೌಗೊ, ಮತ್ತೆ ಕೈತೊಳವಲೆ ಪಾತ್ರ ತೊಳೆವಲೆ ಎಲ್ಲಾ ಅಲ್ಲಿಯೇ ವ್ಯವಸ್ಥೆ ಇದ್ದು.” ಎಂದಳು ಶಾರದೆ.

“ನಮ್ಮ ಕಡಗೂ ಬಕ್ಕು ಹೀಂಗಿಪ್ಪ ವ್ಯವಸ್ಥೆಗೂ, ಇನ್ನೂ ರಜ ಸಮಯಕ್ಕು ಅಷ್ಟೆ.

ಒಟ್ಟಿನಲ್ಲಿ ಎಲ್ಲರಿಗೂ ಮನೆ ವಠಾರ ನೋಡಿ ಸಂತೋಷವಾಯಿತು.

“ಇನ್ನು ನಿಂಗೊ ಮಿಂದುಗಿಂದು ಮಾಡಿ ರಜಾ ಮನುಗುತ್ತರೆ ಮನುಗಿ, ಹೊತ್ತೋಪಾಗ ಒಂದಾರಿ ಆಸ್ಪತ್ರೆ ಕಡೆಂಗೆ ಹೋಪಲಕ್ಕು” ಹೇಳಿದಳು ಕಾವೇರಿ.

“ಅದಕ್ಕು ಮಧ್ಯಾಹ್ನ ಉಂಡಿಕ್ಕಿ ಆಸ್ಪತ್ರೆಯ ನೋಡ್ಲೆ ಹೋಪೊ ನಾಳಂಗೆ ಪುರುಸೊತ್ತು ಆಗ” ಎಂದರು ಸರಸ್ವತಿಯ ಅತ್ತೆ.

"ಹಾಂಗೆ ವಿಶ್ವೇಶ್ವರ ದೇವಸ್ಥಾನವನ್ನು ನೋಡಿಕ್ಕಿ ಬಪ್ಪೊ. ಆನು ಕಾರಿನ ವ್ಯವಸ್ಥೆ ಮಾಡುತ್ತೆ' ಹೇಳಿದ ಡಾ। ಕೇಶವ.

ಹಾಗೆ ಸಾಯಂಕಾಲ ಮೂರು ಗಂಟೆಗೆ ಎಲ್ಲರೂ ತಯಾರಾಗಿ ಆಸ್ಪತ್ರೆ ನೋಡುವುದಕ್ಕೆ ಹೋದರು. ಕಾವೇರಿಯೂ, ಡಾಕ್ಟ್ರೂ ಎಲ್ಲಾ ವಾರ್ಡಿಂಗೂ ಕರಕ್ಕೊಂಡು ಹೋದರು. ಕಾವೇರಿಯೂ, ಡಾಕ್ಟ್ರೂ ಎಲ್ಲಾ ವಾರ್ಡಿಂಗೂ ಕರಕ್ಕೊಂಡು ಹೋದರು. ವಾರ್ಡಿನಲ್ಲಿರುವ ರೋಗಿಗಳು, ನರ್ಸ್‌ಗಳು, ಆಯಾಗಳೂ ಎಲ್ಲರೂ 'ನಮಸ್ತೆ ದೀದಿ, ನಮಸ್ತೆ ಸಾಬ್' ಎಂದು ಕೈಮುಗಿದರು. 'ಅಬ್ ಕೈಸಾಹೈ ಆಪ್' ಅಂತ ವಿಚಾರಿಸಿದರು ಡಾಕ್ಟ್ರು. "ಯೇ ಮೇರಿ ಮಾ, ಯೇ ಮೇರಾ ಬಾಪ್, ಬಹೆನ್ ಲೋಗೋ, ಎಂದು ಒಬ್ಬೊಬ್ಬರನ್ನೇ ಪರಿಚಯಿದಳು ಕಾವೇರಿ, ಮುಂದೆ ಆಪರೇಶನ್ ಮಾಡುವ ಕೋಣೆ, ಹೆರಿಗೆ ಮಾಡಿಸುವ ಜಾಗ, 'ಎಕ್ಸ್'ರೇ ಕೋಣೆ, ಎಲ್ಲವನ್ನೂ ಸುತ್ತುಸಿಯಾಯಿತು. ಹೆಚ್ಚು ಕಡಿಮೆ ನೂರಾರು ಹಾಸಿಗೆಗಳ ಆಸ್ಪತ್ರೆ ಒಮ್ಮೆ ಸುತ್ತುವಾಗಲೇ ಸಾಕಾಯಿತು; ಅಲ್ಲದೆ ಡೆಟ್ಟಾಲ್ ಫಿನೈಲ್ ಘಾಟು ವಾಸನೆ ತಡಿಯಲಿಕ್ಕೇ ಆಗಲಿಲ್ಲ. ಹಾಂ ಹೂಂ ಅಂತ ನರಳುವ ರೋಗಿಗಳು.

"ನಾವಿನ್ನು ಇಲ್ಲಿಂದ ಬೇಗ ಹೋಪೊ. ಈ ಘಾಟುವಾಸನೆಗೆ ಕಾರು ಬಪ್ಪ ಹಾಂಗಾವುತ್ತು, ಹೊಟ್ಟೆ ತೊಳಸುತ್ತು' ಇದೆಲ್ಲಾ ಅಕ್ಕಂಗೆ ಸರಿ ನವಗೆಡಿಯಪ್ಪಾ' ಎಂದು ಹುಡುಗಿಯರು ಮೂವರೂ ಯಾರಿಗೂ ಕಾಯದೆ ಹೊರ ನಡೆದರು, ಎಲ್ಲರೂ ಅವರನ್ನು ಅನುಸರಿಸಿದರು. ಶಂಕರಭಟ್ಟರಿಗೆ ಮೊಣಕಾಲು ನೋವು ಸ್ವಲ್ಪ ಕಡಿಮೆ ಇದ್ದರೂ ಎಲ್ಲಿಗೂ ಹೊರಡಲಿಲ್ಲ.

ಡಾಕ್ಟ್ರು ಕಾರು ತೆಕ್ಕೊಂಡು ಬಂದರು, ಮೊದಲನೇ ಸಲ ಗಂಡಸರನ್ನೆಲ್ಲಾ ಕರೆದುಕೊಂಡು ಹೋಗಿ ದೇವಸ್ಥಾನಕ್ಕೆ ಬಿಟ್ಟು ಬಂದು, ಹೆಂಗಸರನ್ನೆಲ್ಲಾ ಮತ್ತೊಮ್ಮೆ ಕರೆದುಕೊಂಡು ಹೋದರು. ಎಲ್ಲರಿಗೂ ವಿಶ್ವೇಶ್ವರನ ದರ್ಶನವಾಯಿತು. ಪ್ರಸಾದವೂ ದೊರೆಯಿತು. ಮನೆಗೊಂದರಂತೆ 'ಗಂಗಾ ಜಲವಿರುವ ತಾಮ್ರದ ತಂಬಿಗೆಗಳ ಖರೀದಿಯೂ ಆಯಿತು. ಎಲ್ಲರನ್ನು ಮನೆಗೆ ಕರೆದುಕೊಂಡು ಬಿಟ್ಟರು; ವಿಶ್ವೇಶ್ವರನ ದರ್ಶನವಾದದ್ದು ಎಲ್ಲರ ಮನಸ್ಸಿಗೂ ತೃಪ್ತಿಯನ್ನೂ ಕೊಟ್ಟಿತು.

'ನಾಳೇಣ ಕಾರ್ಯಕ್ರಮ ಹೇಂಗೆ" ಎಂದು ಕೇಳಿದರು ಅಪ್ಪಣ್ಣಭಟ್ಟರು.

"ಲಗ್ನ ಮೂರ್ತ ಇಪ್ಪದು ಮಧ್ಯಾಹ್ನ 12-50ಕ್ಕೆ, ಮನೇಲಿಯೇ ಎಲ್ಲಾ ವ್ಯವಸ್ಥೆ ಮಾಡಿದ್ದು. ಇಲ್ಲಿ ವೇದಪಾಠ ಶಾಲೆ ಕಲಿಶುವ ಉಪಾಧ್ಯಾಯ ಹೇಳುವ ಭಟ್ಟ ಹತ್ತು ಗಂಟೆಗೆ ಬಕ್ಕು ಅವ ಹೋಮಕ್ಕೆ ಬೇಕಾದ ಸಾಮಾನು ಎಲ್ಲಾ ತಕ್ಕು ಅಡಿಗೆ ಊಟಕ್ಕೆ, ಇಲ್ಲೇ ನಮ್ಮೂರಿನ ಶಿವಳ್ಳಿ ಬ್ರಾಹ್ಮರಿಂಗೆ ಹೇಳಿದ್ದೆ. ಅವೆಲ್ಲಾ

ವ್ಯವಸ್ಥೆ ಮಾಡುಗು, ಉದಿಯಪ್ಪಾಗಳೇ ಮಲ್ಲಿಗೆ ಹೂಗೂದೆ, ಹಬ್ಬಲಿಗೆ ಹೂಗೂದೆ ಒಂದು ಹೆಣ್ಣು ತಂದು ಕೊಡುಗು, ಇನ್ನೆಂತಾದರೂ ವ್ಯವಸ್ಥೆ ಆಯೇಕಾರೆ ಹೇಳಿ" ಎಂದರು ಡಾಕ್ಟ್ರು.

"ಸಾಕಪ್ಪಾ, ಇದರಿಂದ ಹೆಚ್ಚು ವ್ಯವಸ್ಥೆ ಎಂತದು.

"ಬ್ರಾಹ್ಮಣರ ಊಟಕ್ಕೆ ಇಲ್ಲಿಯೇ ವ್ಯವಸ್ಥೆ ಮಾಡಿದ್ದೆ. ಹೆರಾಣವಕ್ಕೆ, ಹೇಳಿರೆ ಎನ್ನ ಆಸ್ಪತ್ರೆ ಸಿಬ್ಬಂದಿಗೋಗೆ, ಉಳುದ ಡಾಕ್ಟ್ರಕ್ಕೊಗೆ ಎಲ್ಲಾ, ಇಲ್ಲೊಂದು ದೊಡ್ಡ ಹೋಟ್ಳದ್ದು ಅಲ್ಲಿ ವ್ಯವಸ್ಥೆ ಮಾಡಿದ್ದೆ".

"ಹಾಂಗಾರೆ ನಾವು ಉದಿಯಪ್ಪಾಗ ಬೇಗ ಮಿಂದೊಂಡು ಅಕ್ಕಂಗೆ 'ಅಲಂಕಾರ' ಮಾಡೇಕು ಎಂದಳು ಶಾರದೆ.

"ಆನು ಬಪಾಗ 'ಸಿಂಗಾರ' ತೆಕ್ಕೊಂಡು ಬಯಿಂದೆ, ಮದಿಮ್ಮಾಯಿಂಗೆ ಬಾಸಿಂಗಕ್ಕೆ, ಮದಿಮ್ಮಾಳ ಮುಂದಳೆಗೆ–ಮತ್ತೆ ಇಬ್ರಂಗೂ ಹಾಕಲೆ ಮಾಲೆ ಅಪ್ಪು ಆನು ಕಟ್ಟಿಕೊಡುವೆ" ಎಂದರು ದೇವಕಿಯ ಅತ್ತೆ.

"ಅಂಬಗ ಎಂಗೊ ಮೂರು ಜೆನ ಸೇರ್ಯೊಂಡು ಸೇವಂತಿಗೆ ಮಾಲೆ ಕಟ್ಟುತ್ತೆಯೊ, ಅಕ್ಕಂಗೆ ಸೂಡ್ಲುಲೆ, ಜೆಡಗೆ ನೈಯವಲೆ ಎಲ್ಲಾ ಆಯೇಕು, ಉದ್ದುದ್ದ ಮಾಲೆ ಕಟ್ಟುವೊ–ಬಾಳೆ ಬಳ್ಳಿ ಇದ್ದೊ" ಕೇಳಿದಳು ಸರಸ್ವತಿ.

"ಆ ಹೂಗಿನ ಒಟ್ಟಿಂಗೇ ಮಡುಗಿದ್ದೆದ. ಒಂದು ಚೆಂಡು. ಹಾಂಗೇ ಸಣ್ಣ ಸಣ್ಣದು ಆರೇಳು ಮಾಲೆಯೂ ಕಟ್ಟಿ, ರಜಾ ಬಿಡು ಹೂಗೂ ಇರಳಿ; ಮಾಲಗೊ ನವಗೆ ಸೂಡ್ಲಾತು. ಬಂದವಕ್ಕೆ ಒಂದೊಂದು ಹೂಗಾದರೂ ಕೊಡೇಕು" ಹೇಳಿದರು ದೇವಕಿಯ ಅತ್ತೆ.

"ಬೇರೆ ಆರು ಬತ್ತವು?"

"ಇಲ್ಲೇ ಶಿವಳ್ಳಿಯವರ ಎರಡು ಮೂರು ಮನೆ ಇದ್ದಾಡ ಅವು ಉಡುಪಿಯ ಹತ್ರಾಣ ಅಂಬಲಪ್ಪಾಡಿಂದ ಬಂದವಾಡ ಕಾಶಿಗೆ ಹೇಳಿ ಬಂದವು ಇಲ್ಲೇ ಹೋಟ್ಲು ನೆಡಶೇಂಡು ಇದ್ದವಾಡ. ಅವೂದೆ ಮದುವೆಗೆ ಬಕ್ಕು, ಊಟ ತಿಂಡಿ ವ್ಯವಸ್ಥೆ ಎಲ್ಲಾ ಅವರದ್ದೇ ಅಲ್ಲದೋ?

"ಅದಕ್ಕೆ ಎಲ್ಲಾ ಲ್ಯಾಕಾಯಿದು. ಅವರ ಅಡಿಗೆ ಊಟ ನಮ್ಮದರಂದಲೂ ರುಚಿ; ನಮ್ಮಲ್ಲಿಯೂ ದೊಡ್ಡ ಅನುಪತ್ಯಕ್ಕೆಲ್ಲಾ ಅಡಿಗ್ಗೇ ಅವಕ್ಕೇ ಹೇಳುದು, ಅವು

ಸಿಕ್ಕದಿದ್ದರೆ ಕೋಟದವರ ಹೇಳುದು; ನಮ್ಮವರ ಅಡಿಗೆ ಸುಮಾರೇ ಬರೇ ತೆಂಗಿನಕಾಯಿ ಕಡದು ಬಜ ಬಜ ಹಾಕುಗು, ರುಚಿ ಇರ್ತಿಲ್ಲೆ.

"ಅದಪ್ಪು ಶಿವಳ್ಳಿಯವರ ಅಡಿಗೆ ಊಟ ರುಚಿ ಇದ್ದು. ಅದಕ್ಕಲ್ಲದೋ 'ಉಡುಪಿ ಹೋಟೇಲು' ಹೇಳಿ ಬೋರ್ಡು ಕಂಡ್ರೆ ಸಾಕು, ಎಲ್ಲೋರು ಅದರ ಒಳ ನುಗ್ಗುದು. ಎಲ್ಲಾ ಕಡೇಲಿಯೂ ಅವರದ್ದೇ ಹೋಟ್ಳು ರೈಸುದು' ಹೇಳಿದವರು ಶಂಕರಮ್ಮ. ಎಲ್ಲಿಗೆ ಹೋದರೂ ಅವರ ಹೋಟ್ಳು ಇದ್ದೇ ಇರ್ತು" ಅಂದರು ಶಾರದೆಯ ಅತ್ತೆ.

ಹಾಗೆಯೇ ಮರುದಿನ ಬೆಳಿಗ್ಗೆ ಜಾವದಲ್ಲಿ ಬೇಗಬೇ ' ಎದ್ದು, ಹೆಂಗಸರೂ, ಗಂಡಸರೂ, ಸ್ನಾನ ಮುಗಿಸಿದರು, ಬೆಳಗ್ಗಿನ ಉಪಾಹಾರಕ್ಕೆ ಬಿಸಿ ಬಿಸಿ ಇಡ್ಲಿ ಚಟ್ನಿ ಮಾಡಿದ್ದರು. ಬೇಕಾದಷ್ಟು ಇಡ್ಲಿ ಚಟ್ನಿ ಕಾಫಿ, ಸರಬರಾಜಾಯಿತು. ಹೊಟ್ಟೆ ತುಂಬಾ ತಿಂದುಕೊಂಡರು.

ಹೆಂಗಸರೆಲ್ಲಾ ಕಾವೇರಿಯನ್ನು ಹಿಡಿದು ಒಂದು ಮಣೆ ಮೇಲೆ ಕೂರಿಸಿ, ಅವಳ ಶೃಂಗಾರಕ್ಕೆ ತೊಡಗಿದರು.

"ಎನ್ನ ಜೆಡ ತುಂಬಾ ಉದ್ದ ಇದ್ದು, ಕೊಡಿಂದ ರಜಾ ಮಡ್ಚಿ ಕಟ್ಟು ಅಕ್ಕ, ಎನ್ನ ಹತ್ರೆ ಜೆಡಗೆ ಹಾಕಲೆ 7 ಬಂಗಾರದ ಗುಲಾಬಿ ಹೂಗು ಇಪ್ಪದು, ಉದ್ದ ಜೆಡಗಾದರೆ ಸಾಲ" ಹೇಳಿದರು ದೇವಕ್ಕಿಯ ಅತ್ತೆ.

"ಆತಂಬಾಗ ಕೊಡಿ ಮಡ್ಚಿಯೇ ಕಟ್ಟುತ್ತೆ, ಕೊಡೀಂಗೆ ಜೆಡ ಗೊಂಡೆ ಹಾಕಿದರಾತು" ಅಂದು ತಲೆಬಾಚುವ ಕೆಲಸ ಮುಗಿಸಿದರು ಶಾರದೆಯ ಅತ್ತೆ.

ದೇವಕ್ಕಿಯ ಅತ್ತೆ ತನ್ನ ಬಳಿ ಇದ್ದ ಕರಡಿಗೆಯ ಮುಚ್ಚಳ ತೆಗೆದು, ಒಂದೊಂದೇ ನಗವನ್ನು ಹೊರತೆಗೆದು ಮದುಮಗಳ ಕುತ್ತಿಗೆಗೆ ತೊಡಿಸಿದರು, ಗಚ್ಚೆ ಟಿಕ್ಕಿ, ಪವನ ಸರ, ಅಡ್ಡಿಗೆ ಸರ, ಅವಲಕ್ಕಿ ಸರ–ಎಲ್ಲಾ ತೆಗೆದು ಕಾವೇರಿಯ ಕುತ್ತಿಗೆಗೆ ಹಾಕಿದರು.

"ಅಬ್ಬೆ, ಇದರ ಹೊಪ್ಪಂಡು ಹೇಂಗೆ ನಡವದು ಮಣಭಾರ' ಅಂದಳು ಕಾವೇರಿ.

"ಇದೊಂದು ದಿನ ಎಂತತೂ ಹೇಳ್ಳೆ ಇಲ್ಲೆ ಕೂಸೆ. ಎಂಗೊ ಹೇಳಿದ ಹಾಂಗೆ ಕೇಳೇಕು ಆತೊ" ಅಂದರು ದೇವಕ್ಕಿಯ ಅತ್ತೆ. "ಕೈಗಳಿಗೆ ಆರಾರು ಹಸುರು ಬಳೆಗಳನ್ನು ಏರಿಸಿ, ಎರಡು ಕೊನೆಗೋ ತಿರುಗಣಿ ಬಳೆಗಳನ್ನು ಹಾಕಿದರು. ಬೆರಳಿಗೆ ಒಂಕಿ ಉಂಗುರ, ಕಲ್ಲಿನ ಉಂಗುರವನ್ನೂ ಹಾಕಿದರು.

"ಇನ್ನು ಬನ್ನಿ ಕೂಸುಗಳೇ ನಿಂಗೊಕಟ್ಟಿದ ಸೇವಂತಿಗೆ ಮಾಲೆ ಸೂಡ್ಸಿದ ಮೇಲೆ, ತಲೆಗ ಹಾಕುವ ಚಿನ್ನದ ಹಾಕುಮೊ" ಎಂದರು. ಮೂವರು ತಂಗಿಯರು ಉದ್ದುದ್ದ ಸೇವಂತಿಗೆ ಮಾಲೆ, ಬೆಳಗ್ಗೆ ತಂದಿತ್ತ ಕಾಕಡಾ ಮಲ್ಲಿಗೆ, ಹಬ್ಬಲಿಗೆ ಹೂವಿನ ಹಾರಗಳನ್ನು ತಂದಿತ್ತರು.

"ಹೂಗು ಎಂಗೊ ಸೂಡ್ಸುತ್ತಿಯೊ" ಅಂದಳು ಶಾರದೆ.

"ಆತು ಹೇಂಗೆ ಸೂಡುಸುತ್ತಿರೋ ಸೂಡ್ಸಿ, ಮತ್ತೆ ಬಂಗಾರ ಹಾಕಿದರಾತು" ಅಂದರು ಹಿಂದಕ್ಕೆ ಸರಿದರು ದೇವಕಿಯ ಅತ್ತೆ.

ಸೇವಂತಿಗೆ ಮಾಲೆಗಳನ್ನು ಉರುಟಾಗಿ ಸುತ್ತಿ ಜಡೆಯ ಬುಡಕ್ಕೆ ಇಟ್ಟರು. ಬಿಗುವಾಗಲಿಕ್ಕೆ ಅಲ್ಲಲ್ಲಿ ಪಿನ್ನುಗಳನ್ನು ಚುಚ್ಚಿದರು. ಸುತ್ತಲೂ ಮಲ್ಲಿಗೆ ಹೂವನ್ನು ಎರಡೆಳೆ ಇಟ್ಟು, ಒಂದೆಳೆ ಹಬ್ಬಲಿಗೆ ಮುಡಿಸಿದರು. ಜಡೆಗೆ ಉದ್ದಕ್ಕೂ ಸೇವಂತಿಗೆ ಮಾಲೆಕಟ್ಟಿ, ಮಲ್ಲಿಗೆ ಮತ್ತು ಹಬ್ಬಲಿಗೆಯ ಮಾಲೆಗಳನ್ನು ಸುರುಳಿ ಸುತ್ತಿದರು. ಕೊನೆಗೆ ಜಡೆಗೊಂಡೆ ಹಾಕಿದರು.

"ಅಬ್ಬೆ ಸಿಕ್ಕಾಪಟ್ಟೆ ಭಾರ ಆವುತ್ತು ಎನಗೆ" ಅಂದಳು ಕಾವೇರಿ 'ಭಾರವೂ ಇಲ್ಲೆ ಏನೂ ಇಲ್ಲೆ. ಇದೊಂದು ದಿನ ಎಂಗೊ ಹೇಳಿದ ಹಾಂಗೆ ಕೇಳೇಕು ನೀನು" ಎಂದು ಶಾರದೆ ಅಕ್ಕನ ಬಾಯಿಗೆ ಬೀಗ ಹಾಕಿದಳು.

"ಆತಪ್ಪಾ ಎಂತೆಲ್ಲಾ ಮಾಡುತ್ತಿರೋ ಮಾಡಿ" ಎಂದು ಸುಮ್ಮನಾದಳು ಕಾವೇರಿ.

"ಎಂಗಳ ಕೆಲಸ ಆತು ಅತ್ತೆ ಇನ್ನು ನಿಂಗೊ ಸುರುಮಾಡಿ" ಎಂವಳು ಶಾರದೆ

"ದೇವಕಿಯ ಅತ್ತೆ ಮುಂದೆ ಬಂದು ಕಾವೇರಿಯ ಜಡೆಗೆ ಒಂದೊಂದೇ ಬಂಗಾರದ ಗುಲಾಬಿ ಹೂವುಗಳನ್ನು ಚುಚ್ಚಿ, ಬಾಳೆ ನಾರಿನಿಂದ ಬಿಗಿದರು. ಜಡೆಯ ಮೇಲುಭಾಗಕ್ಕೆ ದೊಡ್ಡ ಹೂವುಗಳನ್ನು ಕೆಳಭಾಗಕ್ಕೆ ಚಿಕ್ಕ ಹೂವುಗಳನ್ನು ಪೋಣಿಸುತ್ತಾ ಬಂದರು ಸೇವಂತಿಗೆ ಚೆಂಡಿನ ಮಧ್ಯೆ ದೊಡ್ಡದಾದ 'ತಿರುಪ್ಪು ಹೂಗ'ನ್ನು ಸಿಕ್ಕಿಸಿದರು; ಹಣೆಯ ಮುಂಭಾಗಕ್ಕೆ ಬಂಗಾರದ 'ಮುಂದಳೆ' ಸರವನ್ನು ಹಾಕಿ ಜಡೆಯ ಹಿಂದಕ್ಕೆ ಬಾಳೆನಾರಿನಿಂದ ಬಿಗಿದರು.

"ಈಗ ನೋಡಿ, ಅಕ್ಕನ ಮೋರೆಗೆ ಸರಿಯಾಗಿ ಮುಂದೆಳೆ ಕೂಯಿದೋ ಇಲ್ಲೆಯೋ ಹೇಳಿ" ಎಂದು ಸೊಸೆಯಂದಿರನ್ನು ಕೇಳಿದರು.

"ಸರಿಯಾಗಿ ಕೂಯಿದು ಅತ್ತೆ. ಚೆಂದಕಾಣುತ್ತು' ಎಂದಳು ಸರಸ್ವತಿ "ಇನ್ನು ಮದಿಮ್ಮಳ ಬಗತ್ತಲಗೆ ಮೂರೆಳೆ ಸಿಂಗಾರ ಕಟ್ಟೇಕಾದ. ಅದರ ಕೊಡಿ ಎದುರಾಗಿ ಕಟ್ಟೇಕು. ನವಗೆ ಅದೇ ಬಾಸಿಂಗ ಅಲ್ಲದೋ? ಇದಾ ಮಕ್ಕಳೆ, ಅಲ್ಲಿಪ್ಪ ಎಳತ್ತು ಸಿಂಗಾರದ ಮೂರು ಕದುರು ತೆಕ್ಕೊಂಡು ಬನ್ನಿ. ಅದರನ್ನೂ ಕಟ್ಟಿಕ್ಕಿಯೇ ಆನು ಮೇಲೇಳುತ್ತೆ" ಎಂದರು ದೇವಕ್ಕಿ ಓಡಿ ಹೋಗಿ ಇಡೀ ಸಿಂಗಾರವನ್ನೇ ತೆಕ್ಕೊಂಡು ಬಂದಳು.

"ಇದಾ ಅತ್ತೆ ನಿಂಗೊಗೆ ಎಷ್ಟು ಎಬೇಕೋ ಅಷ್ಟು ತೆಕ್ಕೊಳ್ಳಿ" ಅಂದಳು.

"ಇದು ಹನುಮಂತ ಸಂಜೀವಿನಿ ಗೆಡು ತಾ ಹೇಳಿರೆ, ಅದಿಪ್ಪ ಬೆಟ್ಟವನ್ನೇ ತಂದ ಹಾಂಗಾತು ನಿನ್ನ ಕತೆ."

"ಇಲ್ಲದಿದ್ದರೆ ನಿಂಗೊ ಇದು ಸರಿ ಇಲ್ಲೆ ಅದು ಸರಿ ಇಲ್ಲೆ ಹೇಳಿದರೆ ಆನು ಮತ್ತೊಂದಾರಿ ಓಡೇಡದೋ" ಅಂದಳು ದೇವಕ್ಕಿ.

"ಓಡೇಕು, ನೀನೆಂತ ಬಸುರಿಯೋ? ಸರಸ್ವತಿಗಾದರೆ ಕಷ್ಟ ಅಕ್ಕು ಅಂದರು ಅವಳತ್ತೆ.

"ಎನಗೆ ಹಾಂಗೆಂತದೂ ಆವುತ್ತಿಲ್ಲೆ" ನಾಚಿದಳು ಸರಸ್ವತಿ. ಎಲ್ಲರಿಗೂ ಗುಟ್ಟು ಗೊತ್ತಾಯಿತಲ್ಲಾ ಎಂದ ಅದರಲ್ಲಿ ನಾಚಿಕೊಂಬಲೆ ಎಂತ ಇದ್ದು ಕೂಸೆ, ಎಲ್ಲೋರಿಂಗೂ ಬಸುರು, ಬಾಣಂತನ ಹೇಳಿ ಇಲ್ಲೆಯೋ? ಎಂಗೊ ಎಲ್ಲಾ ಮಕ್ಕಳ ಹೆತ್ತವೇ ಅಲ್ಲದೋ?" ಸಮಾಧಾನ ಮಾಡಿದರು ಅತ್ತೆ.

"ಅದಕ್ಕೆ ಎನಗೆ ಗೊಂತಪ್ಪಲಾಗ ಹೇಳಿ–ಎನಗೆ ಆಗಳೇ ಗೊಂತಾಯಿದು, ಹೊಟ್ಟೆ ರಜಾ ಉಬ್ಬೊಂಡು ಕಾಂಬಾಗ. ಕೇಳೇಕು ಹೇಳಿ ಮಾಡಿದೆ. ನೋಡುವೋ ಅದಾಗಿ ಬಾಯಿ ಬಿಡುತ್ತೋ ಹೇಳಿ ಕಾದುಕೂದ್ದು" ಎಂದಳು ಶಾರದೆ.

"ಈಗ ಗೊಂತಾತನ್ನೆ" ಎಂದಳು ಸರಸ್ವತಿ.

"ನಿಂಗೊ ಹೀಂಗೇ ವಾದ ಮಾಡ್ಕೊಂಡು ಕೂರ್ತಿರೇ ಹೇಂಗೆ. ಹೊತ್ತು ಸುಮಾರಾತು. ಮದಿಮ್ಮಾಳು ಆಯತ ಆದ ಮೇಗೆ ನಾವೆಲ್ಲಾ ತಯಾರಾಯೇಕಾದ" ಎಂದರು ಅತ್ತೆ.

"ಇನ್ನು ಮಾದಿಮ್ಮಾಳಿಂಗೆ ಸೀರೆ ಸುತ್ತಿಸಿ ಉತ್ತರಿಗೆ ಹಾಕಿದಎ ಆತನ್ನೆ ಎಲ್ಲಿದ್ದು ಸೀರೆ?

"ಶಾರದೆ, ಎನ್ನ ರೂಮಿಲಿಟ್ಟ ಟ್ರಂಕಲ್ಲಿ ಇದ್ದು, ಅದನ್ನೇ ತೆಕ್ಕೋಂಡು ಇಲ್ಲಿಗೆ ಬಾ" ಅಂದಳು ಕಾವೇರಿ. ಶಾರದೆ ಟ್ರಂಕು ಹೊತ್ತುಕೊಂಡು ಬಂದಳು ಅದರಲ್ಲಿ ಬದನೆ ಬಣ್ಣದ ಕಾಶಿ ಪೀತಾಂಬರ ತೆಗೆದು ತಾನಿಟ್ಟುಕೊಂಡು, ಮತ್ತೆ ಮೂರು ಪೀತಾಂಬರ ಸೀರೆಗಲನ್ನು ತಂಗಿಯರಿಗೆ ಕೊಟ್ಟಳು, ನೀಲಿ, ಹಸುರು, ಕೆಂಪು ಎಲ್ಲದಕ್ಕೂ ರವಕೆ ಹೊಲಿಸಿಟಿದ್ದಳು ಕಾವೇರಿ. "ಇದಾ ಇದೆಲ್ಲಾ ನಿಂಗೊಗೆ ನಿಂಗಳ ಭಾವನ ಬಾಬ್ತು. ಹಾಂಗೇ ಇವು ನಾಲ್ಕು ಸೀರೆಗೊ ಅತೆಕ್ಕೊಗೂ, ಅಬ್ಬೆಗೂ ಎಂದು ಜರಿ ಅಂಚಿನ ಮಗ್ಗದ ಸೀರೆಗಳನ್ನು ಅವರಿಗೆ ಕೊಟ್ಟಳು ಕಾವೇರಿ. ಎಲ್ಲದಕ್ಕೂ ರವಕೆ ಸಿದ್ದವಾಗಿತ್ತು.

"ನಿಂಗೊ ಬಂದ ಮತ್ತೆ ಹೊಲುಶಲೆ ಪುರುಸೊತ್ತು ಆಗ ಹೇಳಿ ರವಕ್ಕೆಗಳ ಹೊಲಿಶಿಯೇ ಮಡುಗಿದ್ದೆ. ರಜಾ ದೊಡ್ಡಕ್ಕಿದ್ದು ಅದರ ಬೇಕಾದರೆ ಹಿಡುಶುಲೆ ಅಕ್ಕು."

"ರಜಾ ದೊಡ್ಡಕ್ಕಿದ್ದರೆ ಎಂಗೊಗೆ ಎಂತಾವುತ್ತು, ಕೂಸುಗಳ ಹಾಂಗೆ ಮೈಗೊತ್ತಿ ಹಾಕಿದರೆ ಎಂಗೊಗೆ ಸೆಖೆ ತಡೆಯ ಉಸುರು ಹಿಡುದಂಗಾಗುವುದು ಎಂದರು ಸರಸ್ವತಿಯ ಅತ್ತೆ. ಎಂಗೊಗೆಲ್ಲಾ ಎಂತಕೆ ತೆಗೆಕಾತು. ಮದಿಮ್ಮಾಳಿಂಗೆ "ಅಕತೆಗೆದಿದ್ದರೆ ಸಾಕಿತ್ತು" ಎಂದೂ ಸೇರಿಸಿದರು.

"ತೆಗೆತ್ತರೆ ಎಲ್ಲೋರಿಂಗೂ ತೆಗೆ ಹೇಳಿ ಅವೇ ಹೇಳಿದವು. ಗೆಂಡು ಮೊಕ್ಕೋಗೆಲ್ಲಾ ಪಟ್ಟೆ ಶಾಲೂದೆ, ಧೋತಿಯದೆ ತೆಗದ್ದವು" ಎಂದಳು ಕಾವೇರಿ. ಎಲ್ಲೋರಿಗೂ ಸೀರೆ, ರವಕೆಗಳು ಇಷ್ಟವಾಯಿತು. ತಂಗಿಯರಂತೂ ಕಾಶಿ ಪೀತಾಂಬರ ನೋಡಿ ಮುಖ ಅರಳಿಸಿಕೊಂಡರು.

"ನಾವು ಅಕ್ಕಂಗೆ ಸೀರೆ ಸುತ್ತಿ ಸಿಕ್ಕಿ, ಸೀರೆ ಸುತ್ತುವೊ. ಎಂದು ಮೊದಲು ಕಾವೇರಿಗೆ ಸೀರೆ ಉಡಿಸಿದರು. ಮೇಲೆ ಉತ್ತರಿಗೆಯನು ಹಾಕಿ ಅದು ಜಾರದಂತೆ ಎರಡು ಕಡೆಗೂ ಸೇಫ್ಟಿ ಪಿನ್ನು ಹಾಕಿದರು. ಇನ್ನು ಎಂಗೊ ಹೋಯೇಕೋ? ಎಂದು ಹೊರಟರು.

"ಈಗ ಮರದ್ದೆಂತ ಅಕ್ಕಂಗೆ ಮೋರಗೆ ಅಡ್ಡ ಬೊಟ್ಟು ಹಾಕಲೆ" ನೆನಪಿಸಿದಳು ದೇವಕ್ಕಿ.

"ದೇವಕ್ಕಿ ನೀನು ಓಡ್ಯೊಂಡು ಹೋಗಿ ಒಂದು ಸಣ್ಣ ಬಾಳೆ ಕೀತು ಕುಂಕುಮ ಭರಣಿ, ಜೇನು ಮೇಣವೂ ತೆಕ್ಕೊಂಡು ಬಾ, ನಾವು ಬೊಟ್ಟು ಹಾಕಿಕ್ಕಿಯೇ ಹೋಪೊ.

"ಹಾಂ, ಇನ್ನು ಅಡ್ಡ ಬೊಟ್ಟು ಹಾಕೇಕೊ" ಕಾವೇರಿಯ ಪ್ರಶ್ನೆ

"ಇಂದು ಹಾಕಲೇ ಬೇಕು. ಇಲ್ಲದಿದ್ದರೆ ಮದಿಮ್ಮಾಳ ಕಳೆಯೇ ಬಾರ" ಎಂದಳು ಸರಸ್ವತಿ.

"ನಿಂಗೊಗೆ ಎಂತೆಲ್ಲಾ ಮಾಡೇಕು ಹೇಳಿ ಇದ್ದೊ ಎಲ್ಲಾ ಮುಗುಶಿ ಮಕ್ಕಳೆ ಆನು ನಿಂಗೊ ಹೇಳಿದ ಹಾಂಗೆ ಕೇಳುತ್ತೆ ಆತೋ ಅಂದಳು ಕಾವೇರಿ.

ದೇವಕ್ಕಿ ತಂದ ಬಾಳೆ ಎಲೆಯ ತುಂಡಿನ ಮಧ್ಯದಲ್ಲಿ ಉಗುರಿನಿಂದ ಕತ್ತರಿಸಿ ತೆಳ್ಳಗಿನ ಗೆರೆ ಬರುವ ಹಾಗೆ ತೂತು ಮಾಡಿದರು. ಇಬ್ಬರು ತಂಗಿಯರು ಅದನ್ನು ಅಕ್ಕನ ಹಣೆಗಿಟ್ಟು, ಎರಡೂ ಕಡೆ ಒತ್ತಿ ಹಿಡಿದುಕೊಂಡರು. ಒಬ್ಬಳು ಅಕ್ಕನ ಮುಂದೆ ಕುಳಿತು, ತೂತಿನ ಮಧ್ಯಕ್ಕೆ ಜೇನು ಮೇಣ ಸವರಿ ಮೇಲೆ ಕುಂಕುಮ ಒರಸಿದಳು. ಬಾಳೆ ಚೂರನ್ನು ಎತ್ತಿದರು. ಕೆಂಪಾದ ಅಡ್ಡಗೀಯೊಂದು ಕಾವೇರಿಯ ಹಣೆಯ ಮೇಲೆ ಸುಂದರವಾಗಿ ಮೂಡಿತ್ತು.

"ಹಾಂ ಅದಾ ಅಕ್ಕನ ಮೋರೆಗೆ ಮದಿಮ್ಮಾಳ ಕಳೆ ಬಂತದ. ಅಕ್ಕ ಈಗ ನೋಡ್ಳೆ ಸಾಕ್ಷಾತ್ 'ಸರಸ್ವತಿಯ ದೇವಿಯ ಹಾಂಗೆ ಹಾಣತ್ತು – ಕಿರೀಟ ಮಾಂತ್ರ ಇಲ್ಲೆ ಅಷ್ಟೆ! ಹೇಳಿತ್ತು ಶಾರದೆ.

"ಕಿರೀಟವೂ ಮಡಗೇಕಾತು. ಆದರೆಂತಕೆ ಬಿಟ್ಟೆ" ಎಂದುನಕ್ಕಳು ಕಾವೇರಿ.

"ಅದಿತ್ತಿಲ್ಲೆನ್ನೆ ಇಲ್ಲದಿದ್ದರೆ ಅದನ್ನೂ ಮಡುಗುತಿತ್ತಿಯೋ" ಎಂದಳು ದೇವಕ್ಕಿ

"ಅದರೆಲ್ಲಾ ಸರಸ್ವತಿಯ ಕೋಡಿಗಪ್ಪಗ ಹಾಕುವೋ" ಎಂದಳು ಶಾರದೆ"

"ನಿಂಗೊಗೆ ಅತಿನ್ನು ಎನ್ನ ಕೆಣಕ್ಕಲೆ' ಅಂದಳು ಸರಸ್ವತಿ.

"ಅತಿನ್ನು ನಾವು ಹೋಗಿ ಸೀರೆ ಮಾಡಿಕ್ಕಿ ಬಪ್ಪೊ. ಅಕ್ಕನ ಒಳಕರಕ್ಕೊಂಡು ಹೋಗಿ ದೇವರ ಮುಂದೆ ಕೂಸ ಕೂರುಸಿದರಾತು ಇನ್ನು ಧಾರಕಪ್ಪಗಳೇ ಅದು ಹೆರ ಬಪ್ಪದು" ಎಂದು ಶಾರದೆ ಅಕ್ಕನ ಕೈ ಹಿಡಿದು ಎಬ್ಬಿಸಿದಳು.

"ಇದಾ, ಎನ್ನ ಮರವಿಂಗಿಷ್ಟು ಮಣ್ಣು ಹಾಕಲೆ, ಅದರ ಕೆಮಿಗೆ 'ಜುಮ್ಯಾವ ಹಾಕಿದ್ದೇ ಇಲ್ಲೆ" ಎಂದು ದೇವಕ್ಕಿಯ ಅತ್ತೆ ಕಾವೇರಿಯನ್ನು ಪುನಃ ಕೂರಿಸಿ ಕಿವಿಗೆ ಜುಮ್ಕಾ ಹಾಕಿದರು. "ಆತೊ ಇನ್ನೆಂತಾದರೂ ಬಾಕಿ ಇದ್ದೊ" ಕೇಳಿದಳು ಶಾರದೆ.

"ಇರು ಸೊಂಟಕ್ಕೆ ಎನ್ನ ಪಟ್ಟೆಯೇ ಹಾಕುತ್ತೆ" ಎಂದು ತನ್ನ ಸೊಂಟದಿಂದ ಡಾಬು ಕಳಚಿ ಮದಿಮ್ಮಾಳಿಗೆ ಹಾಕಿದರು.

"ಆತು ಇನ್ನು ಕರಕ್ಕೊಂಡು ಹೋಗಿ" ಎಂದು ಅಪ್ಪಣೆಕೊಟ್ಟರು ಕಾವೇರಿ ಒಳಗೆ ಹೋದಳು; ಅಲ್ಲಿಯೇ ಮೂರು ತಂಗಿಯರೂ ಅಕ್ಕ ಕೊಟ್ಟ ಸೀರೆ ರವಕೆಗಳನ್ನು ತೊಟ್ಟರು. ದೇವಕ್ಕಿಗೆ ಮಾತ್ರ ರವಕೆ ಸ್ವಲ್ಪ ಬಿಗುವಾಗಿತ್ತು. ಉಳಿದವರದ್ದೆಲ್ಲಾ ಸರಿಯಾಗಿತ್ತು "ಇಂದು ಹೇಂಗಾದರೂ ಸುದಾರ್ಸು ದೇವಕ್ಕಿ, ಮತ್ತೆ ಅದರ ಕರೇಣ ಒಂದು ಹೊಲಿಗೆ ಬಿಚ್ಚಿ ಕೊಡುವೆ ಸರಿಯಕ್ಕು" ಎಂದಳು ಕಾವೇರಿ.

"ಮತ್ತೆಂತಗೆ ಠೊಣ್ಣಪ್ಪನ ಹಾಂಗೆ ತೋರ ಆದ್ದು. ಎಂಗೊಗೆ ಸರಿಯಾಯಿದಿದ' ಎಂದಳು ಸರಸ್ವತಿ

"ಮನ್ಯೇಲಿ ಸರೀ ಎಮ್ಮೆ ಮಸರು, ಹಲಸಿನಹಣ್ಣು ಅದು ಇದು ತಿಂದತ್ತಾಯಿಕು, ಅದರ ಅತ್ತೆ ಮಾವನೂ ಅದರ ಕೂರ್ಸಿಯೇ ತಿನ್ಸಿದವು. ಅದಕ್ಕದ ದೇವಕ್ಕಿ ಉಬ್ಬಿದ್ದು" ಎಂದಳು ಶಾರದೆ.

"ನಿಂಗೊ ಹೀಂಗೆ ತಮಾಷೆ ಮಾಡುತ್ತರೆ ಆನು ಹೆರ ಬತ್ತೇ ಇಲ್ಲ" ಅಲ್ಲೇ ಕುಳಿತಳು ದೇವಕ್ಕಿ.

"ಅದೆಲ್ಲಾ ಸುಮ್ಮನೆ ಹೇಳುದಲ್ಲದೋ ನೀನು ಅಷ್ಟೇನೂ ತೋರ ಇಲ್ಲೆ. ಚೆಂದ ಕಾಣುತ್ತೆ ಆತ್, ಕೊರಳಿಂಗೆ ಚಕ್ರಸರವೂ ಕೈಗೆ ಎರಡೆರಡು ಬಳೆಯೂ ಹಾಕಿಗೊ ಎಂದು ಅತ್ತೆ ಸಮಾಧಾನ ಮಾಡಿದರು. ದೇವಕ್ಕಿ ಎದ್ದು ತಯಾರಾದಳು

"ಅದಕ್ಕೆ ತಮಾಷೆ ಎಲ್ಲಾ ಬೇಗಕ್ಕೆ ಅರ್ಥ ಆಗ. ಅದರ ಕೆಣಕ್ಕೇಡಿ ಆತೊ" ಎಂದರು ಅವಳ ಅತ್ತೆ.

"ಅತ್ತಗೆ ಸೊಸೆ ಮೇಗೆ ಎಷ್ಟು ಜೀವ ಇದ್ದು ನೋಡಿ" ಅಂದಳು ಸರಸ್ವತಿ "ಇಲ್ಲದ್ದೆ ಇಕ್ಕ, ಎನಗಿಪ್ಪದು ಒಂದೇ ಸೊಸೆ ಮುದ್ದಿನ ಕೊಂಬಿನ ಹಾಂಗೆ ಅಲ್ಲದೊ" ಎಂದು ಎತ್ತೆಯೂ ದನಿಗೂಡಿಸಿದರು.

"ಸಾಕಿನ್ನು ಬೇಗ ಬೇಗ ಹೆರಟು ತಯಾರಾಗಿ, ಎಂಗಳೂ ವಸ್ತ್ರ ಸುತ್ತುತ್ತಿಯೊ" ಎಂದು ಅತ್ತೆಯಂದಿರೂ ಸೀರೆ, ರವಕ್ಕೆ ಹಾಕಲು ತೊಡಗಿದರು.

"ಸೀರೆಗೆ ಲ್ಯಾಕಿದ್ದು ಹಗೂರು ಇದ್ದು. ನವಗೆ ಹೀಂಗಿಪ್ಪದೇ ಒಳ್ಳೆದು. ಆ ದಪ್ಪ ದಪ್ಪ ಜರಿ ಇಪ್ಪದರ ಹೊತ್ತೊಂಡು ತಿರಬೇಕನ್ನೆ ಅದೆಲ್ಲಾ ಕೂಸು ಗೋಕ್ಕೆ ಸರಿ"

"ಹಾಂಗಾಗಿಯೇ ನಿಂಗೊಗೆಲ್ಲಾ ಮಗ್ಗದ್ದು ಅಕ್ಕು ಹೇಳಿದ್ದು ಆನು ಪಟ್ಟೆ ಬೇಡ ಅವು ಸುತ್ತವು. ಮಗ್ಗದ್ದಾದರೆ ಸುತ್ತುಗು ಹೇಳಿದೆ"

"ಒಳ್ಳೆ ಕೆಲಸ ಮಾಡಿದೆ ಕಾವೇರಿ. ಸೀರೆಗೂ ಲ್ಯಾಕಿದ್ದು-ರವಕ್ಕೆಯೂ ಸರಿ ಆಯಿದು ಎಂಗೊಗೆ" ಎಂದು ಎಲ್ಲರೂ ತೃಪ್ತಿಯಿಂದ ನುಡಿದರು.

ಎಂತ ಬರೀ ಮದಿಮ್ಮಾಳ ಶೃಂಗಾರವೇ ಕಾಣತ್ತಷ್ಟೆ ಮದಿಮ್ಮಾಯನ ತಯಾರು ಮಾಡಿದ್ದಿಲ್ಲೆ. ಅವಂಗೂ ಬೇಗ ಬೇಗ ಆಯುತ ಮಾಡಿ ಹೊತ್ತು ಏರುತ್ತಾ ಇದ್ದು" ಎಂದವನು ರಘುರಾಮ.

"ಅಂಬಾಗ ನಾವು ಅವನ ಅಲಂಕಾರ ಮಾಡುವೊ. ಅವಂಗೆ ಕಟ್ಟೆ ಹಾಕಿ ಧೋತಿ ಸುತ್ತುಸುದು ಆರು?"

"ಆ ಕೆಲಸವ ಎಂಗೊ ಮಾಡುವೆಯೊ ಎಲ್ಲಿದ್ದು ಧೋತಿ ಹೇಳಿ ಕೇಶವ ಭಟ್ರೂ ಗಣಪತಿ ಭಟ್ಟರೂ ತಯಾರಾಗಿ ನಿಂತರು.

"ಅಕ್ಕು ಅದಕ್ಕೆ ನಿಂಗಳೇ ಸರಿ ಮಾವ. ಇದಾ ಪಂಚೆ ತಲಗೆ ಸುತ್ತಲೆ ಮುಂಡಾಸು, ಉತ್ತರಿಗೆ ವಸ್ತ್ರ" ಎಂದು ರಘುರಾಮ ತಂದು ಅವರಿಗೆ ಕೊಟ್ಟ.

ಡಾಕ್ಟ್ರ ಕೇಶವನನ್ನು ಕರೆದುಕೊಂಡು ಬಂದು ಅವರ ಮುಂದು ನಿಲ್ಲಿಸಿದರು.

"ಇದಾ ಮದಿಯಮ್ಮಾಯನ ಹಿಡುಕ್ಕೊಂಡು ಬಯಿಂದೆದ. ಬೇಗ ಅಲಂಕಾರ ಮಾಡಿ' ಎಂದ ರಾಮಚಂದ್ರ.

ಇಬ್ಬರು ಅಜ್ಜಂದಿರೂ ಸೇರಿ ಪಂಚೆಯಿಂದ ಸೊಗಸಾಗಿ ಕಚ್ಚೆ ಹಾಕಿ ಉಡಿಸಿದರು ಮೇಲೆ ಬಿಳಿ ಬುಜ್ಜ ಹಾಕಿ, ಅದಕ್ಕೆ ಉತ್ತರೀಯವನ್ನು ಬಿಗಿದು, ಹೆಣೆದು, ತುದಿಗಳೆರಡೂ ಭುಜದ ಮೇಲಕ್ಕೆ ಹಾಯಿಸಿ ಇಳಿಯ ಬಿಟ್ಟರು. ಜರಿ ಅಂಚಿನ ಧೋತಿಯನ್ನು ತನ್ನ ಮೊಣಕಾಲಿಗೆ ಸುತ್ತಿಸಿ, ಚಂದದ ಮುಂಡಾಸು ತಯಾರು ಮಾಡಿ ಮದುಮಗನ ತಲೆಗೆ ಏರಿಸಿದರು. ಮುಂಡಾಸಿನ ಎದುರಿಗೆ ಸಿಂಗಾರದ ಬಾಸಿಂಗವನ್ನು ಕಟ್ಟಿದರು.

ಅಷ್ಟರಲ್ಲಿ ಶಂಕರ ಭಟ್ಟರು ಬಂದರು.

"ಇದಾ ಮಗಾ. ಅಬ್ಬೆಯ ಐದಳೆ ಚಕ್ರಸರವ ನೀನು ಕೊರಳಿಂಗೆ ಹಾಕಿಗೊ, ಇದಾ ಕರುಣೆಯೂ, ಕೆಂಪು ಪಚ್ಚೆ ನೂಲಿಂಗೆ ಹಾಕಿದ ತಾಳಿಯೂ ಒಟ್ಟಿಂಗೇ ಕಟ್ಟಿ ಮಡುಗಿದ್ದೆ. ಅದರ ಕೂಸಿನ ಕೊರಳಿಂಗೆ ಒಟ್ಟಿಂಗೇ ಕಟ್ಟಿಕ್ಕು ಆತೊ" ಎಂದರು ಮಗನ ಶೃಂಗಾರ ನೋಡಿ

"ಲ್ಯಾಕಾಯಿದು, ಮದಿಮ್ಮಾಯಿನ ಅಲಂಕಾರ, ಮಾಣ್ಯಂಗೋಕ್ಕೆ ಇಷ್ಟೆ ಅಲ್ಲದೋ ಮಾಡುದು" ಎಂದು ತೃಪ್ತಿಯಿಂದ ನುಡಿದರು.

"ಮಾವ, ಇನ್ನು ನಿಂಗಳೂದೆ ಧೋತಿ ಸುತ್ತ್ಯೊಂಜು ತಲೆಗೆ ಮುಂಡಾಸು ಕಟ್ಟೋಳಿ, ಅಪ್ಪಣ್ಣ ಮಾವಂಗೂ ಹೇಳೇಕು" ಎಂದು ಅವರನ್ನು ಕರೆದು ತಯಾರು ಮಾಡಿದರು; ಎಲ್ಲರೂ ಸಮಯಕ್ಕೆ ಸರಿಯಾಗಿ ಚಪ್ಪರಕ್ಕೆ ಬಂದರು. ಚಪ್ಪರದ ಮಧ್ಯದಲ್ಲಿಯೇ ವಧೂವರರಿಗಾಗಿ ಚಿಕ್ಕ ಮಂಟಪ ತಯಾರು ಮಾಡಿದ್ದರು.

"ಎಲ್ಲ ಕೂಸಿನ ಕಡೆವು ಮಾಣಿಯ ಕಡೆವು ಎಲ್ಲಾ ಬಂದೂ ಕೂರಿ" ಎಂದರು ಪುರೋಹಿತ ಗೋವಿಂದ ಉಪಾಧ್ಯಾಯರು. ಅವರು ಕಾಶಿಗೆ ಬಂದು ವೇದಪಾಠಗಳನ್ನು ಕಲಿತು, ಅದೇ ವೇದಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿಕೊಂಡವರು. ಅವರು ವಿಟ್ಲ ಹತ್ತಿರದಲ್ಲಿರುವ ಜೆಡ್ಡು ಮನೆತನದವರು. ಕಾಶಿಗೆ ಬಂದು ನಲ್ವತ್ತು ವರ್ಷವಾಗಿತ್ತು. ಅಲ್ಲಿಯೇ ಸಂಸಾರ ಸಮೇತ ನೆಲೆಸಿದ್ದಾರೆ. ಎಂಬ ವಿವರನ್ನೂ ಶಂಕರ ಭಟ್ಟರಿಗೆ ಕೊಟ್ಟರು.

"ಆನು ಹೆಚ್ಚಾಗಿ ಪೌರೋಹಿತ್ಯಕ್ಕೆ ಹೇಳಿ ಹೋವುತ್ತಿಲ್ಲೆ. ಡಾಕ್ಟ್ರು ಹೇಳಿದ ಕಾರಣ ಒಪ್ಪದೆ ನಿರ್ವಾಹ ಇತ್ತಿಲ್ಲೆ. ಮತ್ತೆ ನಿಂಗಳೂ ಪುರೋಹಿತರು ಹೇಳಿ ಗೊಂತಾತು ಹಾಂಗಾಗಿ ಇಲ್ಲಿಗೆ ಬಂದೆ. ನಿಂಗಳ ಪರಿಚಯವೂ ಆದ ಹಾಂಗೆ ಆತು. ಮದುವೆಯನ್ನೂ ಮುಗುಶಿದ ಹಾಂಗಾತು" ಹೇಳಿ ಬಂದದು ಆನು" ಎಂದು ತನ್ನ ಸಂಕ್ಷಿಪ್ತ ಪರಿಚಯ ಮಾಡಿಕೊಂಡರು ಗೋವಿಂದ ಉಪಾಧ್ಯಾಯರು.

"ನಿಂಗಳ ನೋಡಿ ಎನಗೆ ತುಂಬಾ ಸಂತೋಷ ಆತು, ಆನೆಂತದೂ ಹೇಳೇಕಾದ ಅಗತ್ಯ ಇಲ್ಲೆನ್ನೆ. ಎಲ್ಲಿಯೂ ಕ್ರಿಯಾಲೋಪ ಆಗದ್ದ ಹಾಗೆ ನೋಡೋಳಿ. ಹೇಳಿರೆ ಧಾರೆ ಮಾಂಗಲ್ಯಧಾರಣೆ-ಕನ್ಯಾದಾನ-ಲಾಜ ಹೋಮ-ಹೊಸ್ತಿಲು ಪೂಜೆ ಇಷ್ಟರ ನಡೆಶಿಕೊಡಿ ಸಾಕು" ಅಂದರು ಶಂಕರಭಟ್ಟರು.

"ಡಾಕ್ಟ್ರು ಅದನ್ನೇ ಹೇಳಿದ್ದು ಹೆಚ್ಚು ಹೊತ್ತಾಗ, ಒಂದು ಒಂದೂವರೆ ಗಂಟೆಯೊಳಗೆ ಊಟಕ್ಕೆ ಹಂತಿ ಹಾಕಲಕ್ಕು.

"ಅಂಬಾಗ ಆನು ಸುರುಮಾಡೇಕೋ' ಕೇಳಿದರು ಉಪಾಧ್ಯಾಯರು

"ಮಾಡಿ" ಅಂದರು ಶಂಕರಭಟ್ಟರು.

"ಮಾಣಿಯ ಕಡೆವು ಅವರ ಹಿಂದೆ ಕೂಸಿನ ಕಡೆವು ಅದರ ಹಿಂದೆ ಕೂದೋಳಿ" ಅಂದರು ಅಲ್ಲಿ ನೆರೆದವರನ್ನು ಉದ್ದೇಶಿಸಿ ಒಬ್ಬರಿಗೊಬ್ಬರು ಮುಖ ನೋಡಿಕೊಂಡರು.

"ಇದಾ ರಾಮಚಂದ್ರ ಸುಬ್ಬಣ್ಣ, ದೇವಕ್ಕಿ ಸರಸ್ವತಿ ಮಾಣಿ ಕಡೇಂದ ನಿಲ್ಲಿ, ಹಾಂಗೇ ಇಲ್ಯಾಣಂದ ಬಂದ ಶಿವಳ್ಳಿ ಹೆಮ್ಮಕ್ಕಳೂ ಕೂರ್ಲಿ"

"ಆನು ಶಾರದೆ ಅತ್ತೆಕ್ಕೋ ಎಲ್ಲಾ ಕೂಸಿನ ಕಡೇಂಗೆ ನಿಂಬೊ" ಎಂದ ರಘುರಾಮ. ಹಾಂಗೆ ಇಲ್ಯಾಣ ಬ್ರಾಹ್ಮಣರೂ ನಮ್ಮೊಟ್ಟಿಂಗೆ ಕೂರ್ಲಿ" ಹೇಳಿದ ರಘುರಾಮ. ಹಾಗೆಯೇ ಎಲ್ಲರೂ ಕುಳಿತುಕೊಂಡರು.

"ಮದಿಮ್ಮಾಳ ಅಪ್ಪ ಎಲ್ಲರೂ ಬಂದರೋ ಹೇಳಿ ವಿಚಾರ್ಸಲಿ' ಎಂದರು ಹಾಗೇ ಉಪಚರಿಸಿದರು.

ಮದುಮಕ್ಕಳನ್ನು ಧಾರೆಗೆ ಕರೆತಂದರು. ಅಂತರ್ ಪರದೆಯನ್ನು ಕಟ್ಟಿದರು. ಪುರೋಹಿತರು ಮಂತ್ರಘೋಷ ಮಾಡಿದರು ಪರದೆಯನ್ನು ಸರಿಸಿದಾಗ

'ಮದಲು ಮದಿಮ್ಮಾಳು ಕೊರಳಿಂಗೆ ಮಾಲೆ ಹಾಕಲಿ, ಮತ್ತೆ ಮದಿಮ್ಮಾಯಿ ಅದಕ್ಕೆ ಹಾಕಲಿ" ಎಂದಾಗ ಇಬ್ಬರೂ ಹಾರ ಹಾಕಿದರು, ಹುಡುಗಿಯನ್ನು ಅಪ್ಪಣ್ಣ ಭಟ್ಟರೂ ಶಂಕರಮ್ಮನೂ ಧಾರೆ ಎರೆದು ಕೊಟ್ಟರು.

ಶಂಕರಭಟ್ಟರು ಧಾರೆ ಎರೆಸಿಕೊಂಡರು ಎಲ್ಲರೂ ಮಂತ್ರಾಕ್ಷತೆ ತಲೆ ಮೇಲೆ ಚೆಲ್ಲಿದರು. ಅನಂತರ ಕಾವೇರಿಯನ್ನು ಮದುಮಗನ ಬಲಬದಿಯಲ್ಲಿ ಕೂರಿಸಿ, ಮಾಂಗಲ್ಯ ಧಾರಣೆಯೂ ಆಯಿತು, ಕೇಶವ ಮತ್ತು ಕಾವೇರಿ ಅಂದಿಗೆ ಸತಿಪತಿಗಳಾದರು-ಮುಂದೆ ಲಾಜ ಹೋಮವೂ ಆಯಿತು. ಹುಡುಗಿಯ ಅಣ್ಣನಾಗಿ ರಘುರಾಮ ನಿಂತು ಕಾವೇರಿ ಕೈಯಿಂದ ಅರಳನ್ನು ಹೂಮಕ್ಕೆ ಹಾಕ್ಸಿಯೂ ಆಯಿತು. ರಘುರಾಮನಿಗೆ ಒಂದು ಬಂಗಾರದ ಉಂಗುರವನ್ನು ಬಹುಮಾನವಾಗಿ ಕೊಟ್ಟು ನಮಸ್ಕರಿಸಿದರು. ಆಮೇಲೆ ಹೊಸ್ತಿಲು ಪೂಜೆ ಕಾರ್ಯಕ್ರಮವೂ ನಡೆಯಿತು, ಸರಸ್ವತಿ ದೇವಕ್ಕಿಯೂ ಬಾಗಿಲು ತಡೆದರು. "ಕೇಶವನಿಗೆ ಹೆಂಡತಿ ಹೆಸರು ಹೇಳಬೇಕೆಂದೂ ಕಾವೇರಿಗೆ ಗಂಡನ ಹೆಸರು ಹೇಳಬೇಕೆಂದೂ ಹಠ ಹಿಡಿದರು. ಕೇಶವ 'ಕಾವೇರಿ' ಎಂದು ಸಹಜವಾಗಿ ಹೇಳಿದರೂ, 'ಕೇಶವ' ಎನ್ನುವಾಗ ಕಾವೇರಿ ನಾಚಿ ನೀರಾದಳು. ವಧೂವರರಿಬ್ಬರೂ, ದೇವರ ಮನೆಗೆ ಹೋಗಿ ನಮಸ್ಕಾರ ಮಾಡಿ ಬಂದು, ಹಿರಿಯರಿಗೆಲ್ಲಾ ನಮಸ್ಕರಿಸಿದರು. ಎಲ್ಲರೂ ಮನಃಪೂರ್ವಕವಾಗಿ ಆಶೀರ್ವಾದ ಮಾಡದರು.

"ಇಲ್ಲಿಗೆ ಈಗಾಣ ಕಾರ್ಯಕ್ರಮ ಮುಗುದತ್ತು. ಇನ್ನು ಊಟ ಆದ ಮೇಲೆ 'ಕನ್ಯಾದಾನ' ಹೇಳುವ ಕಾರ್ಯಕ್ರಮ ಮಡುಗವೊ ಈಗ ಗಂಟೆ ಒಂದೂವರೆ ಆತು. ಊಟಕ್ಕೆ ಹಂತಿ ಹಾಕಲಕ್ಕು" ಎಂದಳು ಪುರೋಹಿತರು.

"ಎಲ್ಲರೂ ಎದ್ದ ಮೇಲೆ ರಘುರಾಮ, ರಾಮಚಂದ್ರ, ಸುಬ್ಬಣ್ಣ ಊಟಕ್ಕೆ ಸಿದ್ದತೆ ನಡೆಸಿದರು.

ಕಸ ಗುಡಿಸುವುದು, ಬಾಳೆಲೆ ಹಾಕುವುದು, ಕುಳಿತುಕೊಳ್ಳಲು ಉದ್ದಕ್ಕೆ ಜಮಖಾನ ಹಾಕುವುದು, ಪ್ರತಿಯೊಂದು ಎಲೆಗೂ ನೀರಿನ ಗ್ಲಾಸು ಇಡುವುದು ಎಲ್ಲವನ್ನೂ, ಮೂರುಜೆನ ಅಳಿಯಂದಿರೇ ಮಾಡಿದರು, ಮದುಮಕ್ಕಳಿಗೆ ಮೇಲ್ವಾಸನ ಹಾಕಿ ಒಟ್ಟಿಗೆ ಕೂರಿಸಿದರು. ಉಳಿದವರೆಲ್ಲಾ ಹಂತಿಗೆ ಬಂದರು. 'ಅಡಿಗೆ' ಶಿವಳ್ಳಿ ಬ್ರಾಹ್ಮಣರದ್ದೇ ಆದ ಕಾರಣ, ತಕಾರಾರಿಲ್ಲದೆ ಅವರೂ ಊಟಕ್ಕೆ ಹಂತಿಯಲ್ಲಿ ಕುಳಿತರು. ಒಂದೇ ಹಂತಿಗೆ ಎಲ್ಲರ ಊಟವೂ ಮುಗಿಯಿತು. ಅನ್ನ, ಚಿತ್ರಾನ್ನ, ಮೂರುಬಗೆ ಪಲ್ಯ, ಕೋಸಂಬರಿ, ಚಟ್ನಿ ಮೆಣಸುಕಾಯಿ, ಸಾರು, ಕೊದಿಲು, ಮೇಲಾರ, ಹಪ್ಪಳ ಹೆಸರುಬೇಳೆ ಪಾಯಸ, ಹೋಳಿಗೆ, ತುಪ್ಪ, ಎಲ್ಲವನ್ನೂ 'ಬೆಲ್ಲಕ್ಕಿ' ಕೇಳಿದರು. ಪಾಯಸ ಉಣ್ಣುವಾಗ ಕೇಶವ ಭಟ್ಟರಿಗೆ 'ಚೂರ್ಣಿಕೆ' ನೆನಪಾಗಿ ಒಂದು ಹೇಳಿಯೇ ಬಿಟ್ಟರು. "ಹರಿ ಭೋಜನ ಕಾಲೇ ನಮಃ ಪಾರ್ವತೀ ಪತೇ ಹರಹರ ಮಹದೇವಾ' ಎಂದು ಉಳಿದವರು ದನಿಗೂಡಿಸಿದರು. ಶಿವಳ್ಳಿ ಬ್ರಾಹ್ಮಣರಲ್ಲಿ ಒಂದಿಬ್ಬರು 'ಚೂರ್ಣಿಕ' ಬಿಗಿದರು. 'ರಘುರಾಮ ಶಾಸ್ತ್ರಿಯ ಸಂಗೀತದಲ್ಲಿ ಒಂದು ಹಾಡು ಹೇಳಿದರು. ಎಲ್ಲರಿಗೂ ಖುಷಿ ಆಯಿತು. ಜೋರಾಗಿ ಭೋಜನ ಕಾಲೇ... ಹಾಕಿದರು. ಎಲ್ಲರೂ ಊಟ ಮುಗಿಸಿದರು. ಎಲ್ಲರ ಕೈಗೂ ಕೈನೀರು ಕೊಟ್ಟರು. ಒಬ್ಬೊಬ್ಬರೇ ಎದ್ದು ತುಂಬಿಸಿಟ್ಟ ನೀರಿನಲ್ಲಿ ಕೈತೊಳೆದುಕೊಂಡರು. ಒಂದೇ ಹಂತಿಯಲ್ಲಿ ಎಲ್ಲರದ್ದೂ ಊಟವಾಯಿತು. ಸಮಯಕ್ಕೆ ಸರಿಯಾಗಿ ಹಂದರ ಚಪ್ಪರ ಗುಡಿಸಿ ಸ್ವಚ್ಛ ಮಾಡಿ ಮದುಮಕ್ಕಳಿಗಾಗಿ ಮೇಲ್ವಾವಸನ ಮಣೆಗಳನ್ನು ತಯಾರು ಮಾಡಿ ಇಟ್ಟರು. ಅವರಿಬ್ಬರನ್ನೂ ಅಲ್ಲಿ ತೂರಿಸಿದರು. ಗೋವಿಂದ ಉಪಾಧ್ಯಾಯರು ಮಂತ್ರ ಪಠಣಕ್ಕೆ ಸುರು ಮಾಡಿದರು. ಮೊದಲು ವರನ ಗುಣಗಾನ ಮಾಡಿ, ಆಮೇಲೆ ವಧುವಿನ ಗುಣಗಾನವನ್ನೂ ಮಾಡಿದರು.

ಅಪ್ಪಣ್ಣ ಭಟ್ಟರಿಗೆ ಮಗಳು ಕಾವೇರಿಯನ್ನು ತೊಡೆಯ ಮೇಲೆ ಕೂರಿಸಲು ಹೇಳಿದರು ಅವಳ ಬಲಗೈಯನ್ನು ವರನ ಬಲಗೈ ಮೇಲಿರಿಸಿ

ವರನಿಗೆ 'ದರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಾಮಿ ಎಂದೂ ಹೇಳಿಸಿದರು.

ವಧುವಿಗೆ ಕಾರ್ಯೇಶು ಮಂತ್ರಿ, ಕರುಣೇಶು ದಾಸಿ, ಮಮತೇಶು ಮಾತಾ, ಕ್ಷಮಯೇತು ಧರಿತ್ರಿ ಎಂದು ಉದ್ಗರಿಸಲು ಹೇಳಿದರು.

ಹಾಂಗೇ "ಕೂಸಿನ ಕೈಯ್ಯ ಹಿಡಕ್ಕೊಂಡು, ಕೂಸಿನ ಅಪ್ಪ, ಮಾಣಿಯ ಅಪ್ಪ, ಅವರ ಕರಕ್ಕೊಂಡು ಹೋಗಿ, ಸಭಿಕರಿಗೆಲ್ಲಾ ಕೈ ಮುಟ್ಟಿಸಿ, ಅಖೇರಿಗೆ ಭೂಮಿಗೆ ಕೈ ತಾಗಿಸಿ, ಬಿಟ್ಟಕ್ಕಿ" ಎಂದರು ಉಪಾಧ್ಯಾಯರು ಅಲ್ಲಿಗೆ ವಧುವನ್ನು ಸಂಪೂರ್ಣವಾಗಿ ವರನಿಗೆ ಒಪ್ಪಿಸಿದಂತಾಯಿತು. ಎಷ್ಟಾದರೂ ಹೆತ್ತ ಕರುಳಿಗೆ

ಕಣ್ಣಲ್ಲಿ ನೀರಾಡಿತು, ಅಪ್ಪಣ್ಣ ಭಟ್ಟರೂ ಕಣ್ಣು ಹನಿ ಒರೆಸಿಕೊಂಡರು. "ಇಲ್ಲಿಗೆ ಮದುವೆ ಶಾಸ್ತ್ರ ಪೂರ್ತಿ ಆದ ಹಾಂಗೆ ಆತು. ಆನಿನ್ನು ಪಾಠಶಾಲೆ ಕಡೆ ಹೋವುತ್ತೆ ಎನಗೆ ಇಂದು ಎರಡು ಕ್ಲಾಸು ತೆಕ್ಕೊಳೇಕು" ಎಂದರು ಉಪಾಧ್ಯಾಯರು. 'ಒಸಗೆ' ನಿಂಗಳೇ ಮಾಡ್ಯೊಳ್ಳಿ ಎಂದರು.

ಅಷ್ಟರಲ್ಲಿ ಕೇಶವ ತಂದೆಯ ಕೈಗೆ ಒಂದು ಪಟ್ಟೆ ಶಾಲು, ಧೋತಿ, 500 ರೂಪಾಯಿ ನಗದು ಹಣ, ತೆಂಗು, ಎಲೆಅಡಕೆ ಕೊಟ್ಟು' ಅಪ್ಪ ಇದರ ಉಪಾಧ್ಯಾಯಿರಿಂಗೆ ಕೊಟ್ಟಕ್ಕಿ ಎಂದರು.

ಉಪಾಧ್ಯಾಯರನ್ನು ಮಣೆ ಹಾಕಿ ಕೂರಿಸಿ, ಶಂಕರಭಟ್ಟರು ಅವರಿಗೆ ಶಾಲು ಹೊದಿಸಿ, ಕೈಯಲ್ಲಿ ಎಲೆಅಡಿಕೆ ತೆಂಗು ಕೊಟ್ಟು ನಮಸ್ಕರಿಸಿದರು. ಮದು ಮಕ್ಕಳೂ ನಮಸ್ಕರಿಸಿದರು. ಉಪಾಧ್ಯಾಯರು ಮದುಮಕ್ಕಳನ್ನು ಮನಃ ಪೂರ್ವಕ ಆಶೀರ್ವದಿಸಿ, ಮಂತ್ರಾಕ್ಷತೆಯನ್ನು ಹಾಕಿ ಬೈಕಲ್ಲಿ ಅಲ್ಲಿಂದ ಹೊರಟು ಹೋದರು.

ಮದುಮಕ್ಕಳಿಗೆ 'ಒಸಗೆ'ಗೆ ತಯಾರು ಮಾಡಿದರು. ಇಬ್ಬರೂ ಮಣೆ ಮೇಲೆ ಕೂತರು. ಮೊದಲು ಅಪ್ಪಣ್ಣಭಟ್ಟರು ಕಾವೇರಿಗೊಂದು ಪಟ್ಟೆ ಸೀರೆ, ಕೇಶವನಿಗೆ ಶಾಲು ಹೊದಿಸಿ ಆಶೀರ್ವದಿಸಿದರು. ಆಮೇಲೆ ಸೋದರಮಾವನ ಉಡುಗೊರೆ ಎಂದು ರಘುರಾಮ ತಾನು ತಂದ ಸೀರೆ, ಕಾವೇರಿಗೆ ಕೊಟ್ಟು ಉಂಗುರವನ್ನು ಮದುಮಗನ ಬೆರಳಿಗೆ ತೊಡಿಸಿದ. ಆಮೇಲೆ ಸರಸ್ವತಿ, ದೇವಕಿಯರು ಅಕ್ಕನಿಗೂ ರಾಮಚಂದ್ರ ಸುಬ್ಬಣ್ಣ ಕೇಶವನಿಗೂ ಕೊಟ್ಟು ನಮಸ್ಕಾರ ಮಾಡಿದರು. ಶಾರದೆ ಮಂಟಪದಲ್ಲಿದ್ದ ತಾಯಿ ತಂದೆಯರಿಗೂ ಉಡುಗೊರೆ ಕೊಟ್ಟು ನಮಸ್ಕರಿಸಿದಳು. ಆಮೇಲೆ ಬಂದವರೆಲ್ಲಾ 5ರೂ ಹತ್ತು ರೂಪಾಯಿಗಳ ಹಾಗೆ ತಟ್ಟೆಗೆ ಹಾಕಿದರು. ಉಡುಪಿಯ ಹೋಟೇಲು ಮಾಲಿಕರು ಬೆಳ್ಳಿಯ ಹರಿವಾಣವನ್ನು, ಕುಂಕುಮ ಕರಂಡವನ್ನು ಉಡುಗೊರೆಯಾಗಿ ಕೊಟ್ಟರು.

ಮದುಮಕ್ಕಳಿಗೆ ಶಾರದೆ, ದೇವಕ್ಕಿ ಆರತಿ ಎತ್ತಿ ಕೈಗೆ ಎಲೆ ಅಡಿಕೆ ಕೊಟ್ಟು ನಮಸ್ಕರಿಸಿದರು. ಮದುಮಕ್ಕಳು ಒಳಗೆ ದೇವರ ಮನೆಗೆ ಹೋಗಿ ದೇವರಿಗೆ ನಮಸ್ಕರಿಸಿದರು. ಇಲ್ಲಿಗೆ ಮದುವೆ ಕ್ರಿಯೆಗಳೆಲ್ಲಾ ಸಂಪೂರ್ಣವಾದಂತೆ, "ಇಂದು ಕಸ್ತಲಪ್ಪಾಗ 6 ಗಂಟೆಗೆ ಎಂಗಳ ಆಸ್ಪತ್ರೆಯ ಸಿಬ್ಬಂದಿಯೋಕ್ಕೆ, ಡಾಕ್ಟ್ರಕ್ಕೊಗೆ ಹೋಟ್ಳಲ್ಲಿ ಒಂದು ಪಾರ್ಟಿ ಇದ್ದು ನಿಂಗೊ ಇಷ್ಟ ಇದ್ದರೆ ಬನ್ನಿ" ಹೇಳಿದರು ಡಾ॥ ಕೇಶವ.

"ಎಂಗೊ ಮೂರು ಜೆನವೂ ಬತ್ತೆಯೊ" ಅಂದಳು ಮೂವರು ತಂಗಿಯರು.

"ಎಂಗಳು ಬತ್ತೆಯೊ" ಅಂದರು ರಘುರಾಮ, ರಾಮಚಂದ್ರ ಸುಬ್ಬಣ್ಣ

"ಎಂಗೊ ಆರು ಬತ್ತಿಲ್ಲೆಯೊ. ಎಂಗೊ ಇನ್ನೊಂದಾರಿ ದೇವಸ್ಥಾನಕ್ಕೆ ಹೋಗಿ, ವಿಶ್ವೇಶ್ವರಂಗೆ ಕೈ ಮುಗುದು ಬತ್ತೆಯೊ. ಎಲ್ಲಾ ಅವನ ದಯೆ, ಜೆಂಬಾರ ಎಲ್ಲಾ ಚೆಂದಕ್ಕೆ ನಡತ್ತು. ಕಾವೇರಿ ಒಂದು ದಡ ಸೇರಿತ್ತು" ಅಂದರು ಶಂಕರಮ್ಮ.

"ನಿಂಗಳ ಹಾಂಗಾರೆ ಆನು ದೇವಸ್ಥಾನಕ್ಕೆ ಬಿಟ್ಟಿಕ್ಕಿ ಬಂದು ಹೋಟೆಲಿಂಗೆ ಹೋವುತ್ತೆ" ನಿಂಗಳ ಪೂಜೆ ಗೀಜೆ ಎಲ್ಲಾ ಆದ ಮೇಗೆ ಅಲ್ಲಿಯೇ ಒಂದು ಕಡೆ ಕೂರಿ, ಆನು ಪಾರ್ಟಿ ಮುಗುಶಿ ಬಂದು ಕರಕ್ಕೊಂಡು ಹೋಪೆ ಆತೊ" ಹೇಳಿದ ಡಾ॥ ಕೇಶವ. "ಎಂಗೊ ನಡಕ್ಕೊಂಡೇ ಹೋಪೆಯೊ ಇಲ್ಲಿಂದ ಎರಡು ಮೈಲೂ ಆವುತ್ತಿಲ್ಲೆ" ಹೇಳಿದರು ಅಪ್ಪಣ್ಣ ಭಟ್ಟರು.

"ಎಂತಕೆ, ಮಾವ ನಿಂಗೊಗೆ ನೆಡಕ್ಕೊಂಡು ಹೋಯೇಕು ಹೇಳಿಯೇ ಇದ್ದೊ?"

"ಹಾಗೆಂತದೂ ಇಲ್ಲೆ. ರಜಾ ನಡೆದರೆ ತಿಂದದೆಲ್ಲಾ ಕರಗ್ಗು ಹೇಳಿ ಅಷ್ಟೆ"

"ಅದಪ್ಪು ಅಪ್ಪಣ್ಣ, ನೆಡಕ್ಕೊಂಡೇ ಹೋಪೊ, ರಜಾ ಕಾಲು ಆಡ್ಸಿದ ಹಾಂಗೆ ಆವುತ್ತು, ತಿಂದದು ಕರಗಿದ ಹಾಂಗೂ ಆವುತ್ತು ಎಂದರು ಕೇಶವ ಭಟ್ಟರು, ಗಣಪತಿ ಭಟ್ಟರು.

"ಎಂಗಳೂ ನಡಕ್ಕೊಂಡೇ ಬತ್ತೆಯೊ ರಜಾ ನಿಧಾನಕ್ಕೆ ನಡೆಯಿ ಅಷ್ಟೇ' ಅಂದರು ಹೆಂಗಸರು.

"ಹಾಂಗಾರೆ ನಿಂಗೊ ನೆಡಕ್ಕೊಂಡೇ ಹೋಗಿ, ಬಪ್ಪಾಗ ಬೇಕಾದರೆ ಆನು ಕರಕ್ಕೊಂಡೂ ಬಪ್ಪೆ" ಎಂದರು ಡಾ। ಕೇಶವ.

"ಬಪ್ಪಾಗಳೂ ನೆಡಕ್ಕೊಂಡೇ ಬತ್ತೆಯೊ ನಿಂಗೊ ನಿಂಗಳಷ್ಟಕ್ಕೆ ಹೊಗಿ, ಇಲ್ಲಿ ದಾರಿ ತಪ್ಪಲೆ ಹೇಳಿ ಇಲ್ಲೆನ್ನೆ, ಒಂದೇ ದಾರಿ ಅಲ್ಲದೋ? ಸೀದಾ ಹೋಗಿ ಸೀದಾ ಬತ್ತಿಯೊ" ಅಂದರು ಎಲ್ಲರು.

"ಆತಂಬಾಗ, ಎಂಗೊ ಹೋಟೆಲಿಂಗೆ ಹೋವುತ್ತೆಯೊ" ಎಂದರು ಡಾಕ್ಟ್ರು.

ಡಾಕ್ಟ್ರು ಕರಿಪೇಂಟು, ಬಿಳಿ ಶರ್ಟ್ ತೊಟ್ಟು, ಕಪ್ಪು ಮತ್ತು ಬಿಳಿ ಪಟ್ಟೆಗಳಿದ್ದ ಟೈ ಹಾಕಿಕೊಂಡರು. ಕಾವೇರಿ ದೇವಕ್ಕಿ ಕೊಟ್ಟ ರೇಶ್ಮೆ ಸೀರೆ ಉಟ್ಟುಕೊಂಡು, ಅತ್ತೆಯ ಚಕ್ರಸರವೊಂದನ್ನು ಹಾಕಿಕೊಂಡಳು, ಜಡೆ ಬಿಚ್ಚಿ, ಸಾದಾ ಜಡೆ ಹಾಕಿಕೊಂಡು ಸ್ವಲ್ಪ ಹಬ್ಬಲಿಗೆ ಮತ್ತು ಮಲ್ಲಿಗೆ ಹೂವನ್ನು ಮುಡಿಗೆ ಮುಡಿದುಕೊಂಡಳು. ಡಾಕ್ಟ್ರು ಅವಳಿಗೆಂದು ತಂದ ರಿಸ್ಟ್ ವಾಚನ್ನು ಎಡಗೈಗೆ

ಕಟ್ಟಿಕೊಂಡಳು. ಅಡ್ಡ ಬೊಟ್ಟು ತೆಗೆದು, ಉರುಟು ಬೊಟ್ಟು ಹಾಕಿದ್ದಳು. ಶಾರದೆ, ಸರಸ್ವತಿ, ದೇವಕ್ಕಿ ತಾವು ತಂದಿದ್ದ ರೇಷ್ಮೆ ಸೀರೆಗಳನ್ನು ಉಟ್ಟುಕೊಂಡರು. ಆಸ್ಪತ್ರೆ ಸಿಬ್ಬಂದಿಯವರೆಲ್ಲಾ ಇವರಿಗಾಗಿ ಕಾದು ಕುಳಿತಿದ್ದರು. ಬಂದಕೂಡಲೇ ಎಲ್ಲರೂ ಎದ್ದು ನಿಂತರು.

"ಇದು ಆಸ್ಪತ್ರೆಯಲ್ಲ ಹೋಟೇಲು" ಎಂದು ನಕ್ಕರು ಡಾ। ಕೇಶವ ಕುಳಿತು ಕೊಳ್ಳಿ ಎಂದಾಗ ಎಲ್ಲರೂ ಕುಳಿತುಕೊಂಡರು.

ಎಲ್ಲರಿಗೂ ಮಸಾಲೆ ದೋಸೆ, ಲಾಡು, ಆಲೂ ಚಿಪ್ಸ್, ಬಾಳೆ ಹಣ್ಣು, ಪ್ಲೇಟುಗಳಲ್ಲಿ ಹಾಕಿ ತಂದುಕೊಟ್ಟರು. ಅವರೊಂದಿಗೆ ಡಾ॥ ರು ಸುಬ್ಬಣ್ಣ, ರಾಮಚಂದ್ರ, ರಘುರಾಮ, ಶಾರದೆ, ದೇವಕ್ಕಿ, ಸೇರಿಕೊಂಡರು ಸರಸ್ವತಿ 'ಎನಗೆ ಹೊಟ್ಟೆ ತೊಳಸುವ ಹಾಂಗೆ ಆವುತ್ತು ಎನಗೆ ಬೇಡ' ಎಂದು ಒಂದು ಬಾಳೆಹಣ್ಣು ಮಾತ್ರ ತೆಗೆದುಕೊಂಡಳು. ಯಾರೂ ಅವಳನ್ನು ಒತ್ತಾಯಿಸಲಿಲ್ಲ; ಪಾರ್ಟಿ ಮುಗಿದು ಸಿಬ್ಬಂದಿಯವರೆಲ್ಲಾ ಒಬ್ಬೊಬ್ಬರೇ ಬಂದು ಡಾಕ್ಟರಿಗೂ ಕಾವೇರಿಗೂ ನಮಸ್ಕರಿಸಿ, ಒಂದೊಂದು ಉಡುಗೊರೆ ಕೊಟ್ಟರು. ಸಹ ಉದ್ಯೋಗಿ ಡಾಕ್ಟರುಗಳೆಲ್ಲಾ ಬಂದು ಕೈ ಕುಲುಕಿದರು; ಇಷ್ಟೆಲ್ಲಾ ಮುಗಿಯುವಾಗ 8ಗಂಟೆ ಸಾಯಂಕಾಲವಾಗಿತ್ತು. ಎಲ್ಲರೂ ಮನೆಗೆ ಹಿಂತಿರುಗಿ, ರಾತ್ರೆ ಊಟಕ್ಕೆ ತಯಾರಾದರು. ಅಷ್ಟರಲ್ಲಿ ವಿಶ್ವೇಶ್ವರನ ದರ್ಶನಕ್ಕೆ ಹೋದವರು ಮರಳಿ ಬಂದಿದ್ದರು. ಎಲ್ಲರೂ ಒಂದಿಷ್ಟು ಕಾಶಿದಾರವನ್ನೂ ಖರೀದಿಸಿದ್ದರು.

"ಇಂದು ಇರುಳಿಂಗೆ ಬರೇ ಹೆಚ್ಚೆಯೂದೆ ಅವಿಲು ಬೆಂದಿಯೂ ಸಾಕು ಹೇಳಿದ್ದೆ ಆನು ಅಡಿಯವಕ್ಕೆ ಅವು ಅದರ ಮಾಡಿಕಾದು ಕೂಯಿದವು. ಇನ್ನು ಎಲ್ಲೋರು ಬೇಗ ಬೇಗ ಊಟಕ್ಕೆ ಏಳಿ. ನಾಳಂಗೆ ಬೇಗ ಎದ್ದು ಹೋಪಲೆ ತಯಾರಾಗೇಡಮೊ. ನಿಂಗೊಗೆ ರೈಲು ಉದಿಯಪ್ಪಾಗ 10ಗಂಟೆಗಲ್ಲದೋ. ಇಲ್ಲಿಂದ ಎಂಟಕ್ಕೆ ಹೆರಡೇಡದೋ" ಎಂದರು ಶಂಕರಭಟ್ಟರು. ಅವರು ಮನೆಬಿಟ್ಟು ಎಲ್ಲಿಗೂ ಹೊರಡಲಿಲ್ಲ.

"ಅಂತ ಅಂಬಾಗ ಹೇಳಿದ್ದ ಹಾಂಗೆ ನಿಂಗೊ ಬತ್ತಿಲ್ಲಿರೋ ಎಂಗಳೊಟ್ಟಿಂಗೆ" ಕೇಳಿದವ ರಘುರಾಮ.

"ಆನು ವಾಪಸ್ಸು ಊರಿಂಗೆ ಹೋಪಲಿಲ್ಲೆ ಹೇಳಿಯೇ ಅಲ್ಲಿಂದ ಹೆರಟದು. ಹಾಂಗಾಗಿ ಎಲ್ಲಾ ವ್ಯವಸ್ಥೆ ಮಾಡಿ ಮನೆಗೆ ಬೀಗ ಹಾಕಿ, ತೋಟವ ನೋಡ್ಳೆ ಎನ್ನ ತಮ್ಮಂಗೆ ಹೇಳಿಕ್ಕಿಯೇ ಬಯಿಂದೆ. ಬೀಗದ ಕೈಯನ್ನು ಅವರ ಪತ್ರವೇ ಕೊಟ್ಟಿದೆ. ಕೇಶವನೂ ಕಾವೇರಿಗೂ ತೊಂದರೆ ಆಗದಿದ್ದರೆ ಎನ್ನ ಒಳುದ ಜೀವಮಾನದ

ಅವರೊಟ್ಟಿಂಗೆ ಕಳುದು, ಇಲ್ಲೇ ಪ್ರಾಣ ಬಿಟ್ಟು, ಗಂಗೆಲಿ ಐಕ್ಯ ಆಯೇಕು ಹೇಳಿ ಸಂಕಲ್ಪ ಮಾಡಿದ್ದೆ" ಎಂದು ತನ್ನ ನಿರ್ಧಾರವನ್ನು ತಿಳಿಸಿದರು. ಒಮ್ಮೆ ಕಾವೇರಿ ಕೇಶವ ಮುಖ ನೋಡಿದರು.

"ಅಪ್ಪ, ನಿಂಗೊ ಇಲ್ಲಿ ಇದ್ದರೆ ಎಂಗೊಗೆ ತುಂಬಾ ಸಂತೋಷ ಈ ವಿಷಯಲ್ಲಿ ಕಾವೇರಿಯೂ ಅಡ್ಡಿ ಬಾರ"

"ಮಾವ ನಿಂಗೊ ಇಲ್ಲಿದ್ದರೆ ಎನಗೂ [illegible] ಎನ್ನ ಅಪ್ಪನ ಹಾಂಗೆ ನಿಂಗಳ ಚಾಕ್ರಿ ಮಾಡುವೆ" ಎಂದಳು ಕಾವೇರಿ.

"ಒಳ್ಳೆದಾತು ಮಾವ ನಿಂಗೊ ಇವರೊಟ್ಟಿಂಗೆ ಇರಿ. ಎಂಗೊಗೆ ಸಮಾಧಾನ ಆತು" ಎಂದರು ಅಪ್ಪಣ್ಣ ಭಟ್ಟರು, ಶಂಕರಮ್ಮ ಎಲ್ಲೋರಿಂಗೂ ಸಮಾಧಾನವೂ ಸಂತೋಷವೂ ಆಯಿತು.

ರಾತ್ರಿ ಎಲ್ಲರೂ ಹಸಿವೆ ಇದ್ದಷ್ಟು ಊಟ ಮಾಡಿಸ ಮಲಗುವ ತಯಾರಿ ನಡೆಸಿದರು; ಗಂಡಸರೆಲ್ಲಾ ಪಡಸಾಲೆಯಲ್ಲಿ ಹೆಂಗಸರೆಲ್ಲಾ ಕಾವೇರಿಯ ರೂಮಿನಲ್ಲಿ ಮಲಗುವ ವ್ಯವಸ್ಥೆಯನ್ನು ಮಾಡಿದ್ದರು. ಡಾ॥ಕೇಶವ ಆಗಲೇ ತನ್ನ ರೂಮು ಸೇರಿಕೊಂಡಿದ್ದರು. ತಂಗಿಯರ ಜೊತೆಯಲ್ಲಿ ಮಲಗಲು ಕಾವೇರಿಯೂ ಸಿದ್ಧಳಾದಳು.

"ಹೂಂ, ಅಕ್ಕ ಎಲ್ಲಿ ಇಲ್ಲಿ ಮುರುಟುದು? ಭಾವ ಅಲ್ಲಿ ಕಾದೊಂಡು ಕೂದಿಕ್ಕು, ನೀನು ಅಲ್ಲಿ ಮನುಗೇಕು, ಇಲ್ಲಲ್ಲ" ಎಂದಳು ಶಾರದೆ.

"ಆನು ಇಂದು ನಿಂಗಳೊಟ್ಟಿಂಗೆ ಇಲ್ಲಿಯೇ ಮನುಗುತ್ತೆ" ಎಂದಳು ಕಾವೇರಿ.

"ಏನೂ ಬೇಡ. ಇಂದೇ ನೀನು ಭಾವನೊಟ್ಟಿಂಗೆ ಮನುಗೇಕು" ಬನ್ನಿ ದೇವಕ್ಕಿ, ಸರಸ್ವತಿ, ಅಕ್ಕನ ಅಲ್ಲಿವರೆಗೆ ಬಿಟ್ಟಿಕ್ಕಿ ಬಪ್ಪೊ" ಎಂದು ಕಾವೇರಿಯನ್ನು ಮೂರು ಜನ ತಂಗಿಯರು ಎಳೆದುಕೊಂಡು ಡಾಕ್ಟ್ರ ರೂಮಿನೊಳಗೆ ದಬ್ಬಿ ಹೊರಗಿನಿಂದ ಬಾಗಿಲು ಎಳೆದಳು.

ಕಾವೇರಿ ಬೆವತು ನೀರಾಗಿದ್ದಳು; ಡಾಕ್ಟ್ರು ಅವಳನ್ನೊಮ್ಮೆ ಬಿಗಿದಪ್ಪಿ ಬಿಟ್ಟುಬಿಟ್ಟರು.

"ಹೆದರೇಡ ಕಾವೇರಿ ಈ ರೂಮಿಲ್ಲಿ ಆನು ನೀನು ಮಾಂತ್ರ ಇಪ್ಪದು. ಆನೆಂತದೂ ಮಾಡುತ್ತಿಲ್ಲೆ ನಿನಗೆ, ಆನು "ನಾತಿಚರಾಮಿ" ಹೇಳಿ ವಾಗ್ದಾನ ಮಾಡಿದ್ದಿಲ್ಲೆಯೋ? ನೀನು ಎಡ ಮಗ್ಗುಲಿಂಗೆ ತಿರುಗು, ಆನು ಬಲಮಗ್ಗುಲಿಂಗೆ ತಿರುಗಿ ಮನಗುತ್ತೆ ಆತೊ. ಬೇಕಾದರೆ ಒಂದೆರಡು ತಲೆದಿಂಬು ಅಡ್ಡ ಮಡುದುವ್ರೊ

ಆತೊ" ಎಂದು ಭರವಸೆ ಕೊಟ್ಟರು ಡಾಕ್ಟ್ರು ಕಾವೇರಿಗೆ ಸಮಾಧಾನವಾಯಿತು. ಇಬ್ಬರೂ ಸುಖವಾಗಿ ನಿದ್ರೆ ಹೋದರು.

ಕಾವೇರಿ ಬೆಳಿಗ್ಗೆ ಬೇಗನೇ ಎದ್ದು ಮುಖ ತೊಳೆದುಕೊಂಡಳು. ಹೊಸ ಜೀವನ ಅವಳ ಮುಖಕ್ಕೆ ಕಳೆ ತಂದಿತ್ತು. ಸಮಾಧಾನ, ತೃಪ್ತಿ ಜೀವನಕ್ಕೆ ಹೊಕ್ಕಾಗಿತ್ತು. ತಂಗಿಯರೂ ಮೂವರೂ ಆಗಲೇ ಎದ್ದು ಹೊರಡುವ ಸನ್ನಾಹ ನಡೆಸಿದ್ದರು. ತಮ್ಮ ತಮ್ಮ ಬಟ್ಟೆ ಬರೆಗಳನ್ನೂ ಜೋಡಿಸುವುದು. ತಲೆ ಬಾಚುವುದು, ಸೀರೆ ಬದಲಾಯಿಸುವುದರಲ್ಲಿ ಮಗ್ನರಾಗಿದ್ದರು. ಕಾವೇರಿಯ ಗೆಲು ಮುಖ ನೋಡಿ ಮೂವರೂ ಹತ್ತಿರ ಬಂದರು.

"ಅದಾ ಈಗ ಅಕ್ಕನ ಮೋರೆ ಚೆಂದ ಕಾಣುತ್ತದ. ಅದಕ್ಕೇ ಎಂಗೊ ಇರುಳು ಭಾವನ ಹತ್ರಂಗೆಂ ದಬ್ಬಿದ್ದು" ಎಂದು ಮುಸಿ ಮುಸಿ ನಕ್ಕರು.

"ಒಳ್ಳೆ ಕೆಲಸ ಮಾಡಿದಿ ನಿಂಗೊ ಆತೊ ಇನ್ನು ಕಾಫಿ ತಿಂಡಿ ಮಾಡಿ ಹೋಪಲೆ ತಯಾರು ಮಾಡಿ. ಹೊತ್ತಾವುತ್ತಾ ಇದ್ದು ಇಲ್ಲಿಂದ ಎಂಟೂವರೆ ಗಂಟೆಗೆ ನಿಂಗೊ ಹೆರಡೇಕು ಆತೋ?"

"ಆತಪ್ಪಾ ಎಂಗೊ ಬೇಗ ಹೋವುತ್ತಿಯೋ. ನಿನಗೂ ಭಾವಂಗೂ ಉಪದ್ರ ಕೊಡುತ್ತಿಲ್ಲೆಯೋ" ಅಂದಳು ಶಾರದೆ.

"ಇದಾ ಶಾರದೆ, ಹೆಚ್ಚು ಕೆಣಕ್ಕೊಂಡು ಕೂರೇಡ. ಎನಗೆ ಕೋಪ ಬಂದರೆ ನಿನ್ನ ಕೆಮಿ ಹಿಡುದು ತಿರುಪ್ಪುವೆ" ಅಂದಳು ಕಾವೇರಿ.

"ಅದಕ್ಕೆ ಬೇಕಾಗಿಯೇ ನಿನ್ನ ಕೆಣಕ್ಕುದು; ನೀನು ಕೆಮಿ ಹಿಡಿದು ತಿರುಪ್ಪಿದರೆ ತುಂಬಾ ದಿನ ನೆಂಪಕ್ಕು ನಿನ್ನ. ಹಾಂಗಾರಿ ಮೂವರನ್ನೂ ಒಂದೊಂದಾರಿ ಕೆಮಿ ತಿರುಪ್ಪಕ್ಕು"

"ಇಲ್ಲದಿದ್ದರೆ ಅಕ್ಕನ ನೆಂಪೇ ಆಗದೋ"

"ಆವುತ್ತು ಅಕ್ಕ ನಿನ್ನ ಮರವಲೆ ಎಂಗಳಂದ ಸಾಧ್ಯ ಇಲ್ಲೆ" ಅಂದಳು ಸರಸ್ವತಿ.

"ನಿನ್ನ ಬಿಟ್ಟಿಕ್ಕಿ ಹೋಪಲೇ ಬೇಜಾರ ಆವುತ್ತಕ್ಕಾ" ಎಂದು ದೇವಕ್ಕಿ ಕಣ್ಣುಗಡ್ಡೆ ಕೈ ಒಡ್ಡಿ ಬಿಕ್ಕಿ ಬಿಕ್ಕಿ ಅತ್ತಳು. ಕಾವೇರಿಗೂ ದುಃಖವಾಯಿತು. ಕಣ್ಣು ನೀರಾಡಿತು. ಮೂವರನ್ನೂ ತಬ್ಬಿಕೊಂಡಳು.

"ಎನಗೂ ನಿಂಗಳ ಬಿಟ್ಟಿಪ್ಪದು ಕಷ್ಟ ಆವುತ್ತು" ದೇವಕ್ಕಿ ಕಣ್ಣಿಂದ ಕೈ ತೆಗಬ್ಬೊ, ಒರಸಿಗೋ ಎನಗೆ ಇನ್ನು ಮುಂದೆ ವರ್ಷಕ್ಕೆ ಒಂದಾರಿ ತಿಂಗಳು ಗಟ್ಲೆ ರಜೆ ಸಿಕ್ಕಿತ್ತು. ಅಂಬಾಗ ಊರಿಂಗೆ ಬಪ್ಪೆ ಆತೊ ಅಂದಳು ಕಾವೇರಿ.

"ನೀನು ಬಂದರೂ ಶಾರದಕ್ಕನ ಭೇಟಿ ಆವುತ್ತೆ. ಎಂಗೊ ಇಬ್ರಿಂಗೂ ಕಾಂಬಲೆ ಸಿಕ್ಕೆ" ಎಂದಳು ಸರಸ್ವತಿ.

"ಆನು ನಿಂಗಳ ಮೂರು ಜೆನರ ಮನಗೂ ಬತ್ತೆ ಆತೊ"

"ಖಂಡಿತಾ ಬರೇಕು ಅಕ್ಕಾ. ಎಂಗಳ ಮರವಲಾಗ ನೀನು" ಎಂದಳು ದೇವಕ್ಕಿ.

"ಖಂಡಿತಾ ಬತ್ತೆ ಆತನ್ನೆ. ಇನ್ನು ಬೇಗ ಹೆರಡಿ" ಕಾವೇರಿ ಅವರಿಗೆಲ್ಲಾ ಬೆಳಗ್ಗಿನ ಉಪಹಾರದ ವ್ಯವಸ್ಥೆ ನೋಡಿಕೊಂಡಳು. ಡಾ। ಕೇಶವ. ಅವರ ಪ್ರಯಾಣಕ್ಕಾಗಿ ವಿಶೇಷವಾಗಿ ಲಾಡು, ಹೋಳಿಗೆ, ಅವಲಕ್ಕಿ, ಕಿತ್ತಳೆ ಹಣ್ಣು, ಲಿಂಬೆಹಣ್ಣು, ಸಕ್ಕರೆ ಚಪಾತಿ, ಪಲ್ಯ, ಕಟ್ಟಿಸಿದ್ದರು. ಸಮಯಕ್ಕೆ ಸರಿಯಾಗಿ ಎಲ್ಲರೂ ರೈಲ್ವೆ ನಿಲ್ದಾಣ ತಲುಪಿದರು. ಆಗಲೇ ಬಂದು ನಿಂತ ರೈಲಿನಲ್ಲಿ ಕಾದಿರಿಸಿದ ಬೋಗಿಗೆ ಎಲ್ಲರೂ ಹತ್ತಿಕೊಂಡರು. ಅವರ ಸಾಮಾನುಗಳೂ ಬಂದವು. ಅವರನ್ನು ಬೀಳ್ಕೊಡಲು ಡಾಕ್ಟ್ರು, ಕಾವೇರಿ ಇಬ್ಬರು ಬಂದಿದ್ದರು. ಕಾವೇರಿ, ಶಾರದೆ ಕೊಟ್ಟ ನಸು ನೀಲಿ ಬಣ್ಣದ ವಾಯಿಲ್ ಸೀರೆ ಉತ್ತು ಉದ್ದ ಜಡೆ ಬಿಟ್ಟು ಹಣೆಗೆ ಕುಂಕುಮವಿಟ್ಟುಕೊಂಡು. ಕುತ್ತಿಗೆಗೆ ಎರಡೆಳೆ ಕರಿಮಣಿ ಸರ ಹಾಕಿಕೊಂಡಿದ್ದಳು. "ಅಕ್ಕಂಗೆ ಪಟ್ಟೆ ಸೀರೆಂದಲೂ ಈ ವಾಯಿಲ್ ಸೀರೆ ಲ್ಯಾಕು ಕಾಣುತ್ತು" ಎಂದಳು ಸರಸ್ವತಿ.

"ಎನಗೆ ನಿಜವಾಗಿ ಇಷ್ಟವೂ. ಉಪಯೋಗವೂ ಹೀಂಗಿಪ್ಪ ಸೀರೆಗಳೇ ಅಪ್ಪದು" ಪಟ್ಟೆ ಸೀರೆಗೂ ಎಲ್ಲಾ ಪೆಟ್ಟಿಗೇಲಿ ಮಡುಗುಲೆ ಲ್ಯಾಯಕು" ಎಂದಳು ಕಾವೇರಿ.

"ಅದಕ್ಕದ ಎಂಗೊ ಹೇಳುದು ನಿನಗೆ ಶಾರದೆ ಅಕ್ಕನಮೇಗೆ ಇದ್ದ ಪ್ರೀತಿ ಎಂಗಳ ಮೇಗೆ ಇಲ್ಲೆ ಹೇಳಿ. ಎಂಗೊ ಇನ್ನು ನಿನ್ನ ಪೆಟ್ಟಿಗೇಲಿಯೇ ಇರೇಕಷ್ಟೆ. ಶಾರದಕ್ಕ ದಿನವೂ ನಿನ್ನ ಒಟ್ಟಿಂಗೇ ಇರ್ತು ಅಲ್ಲದೋ?" ಅಂದಳು ದೇವಕ್ಕಿ.

"ಸಾಕು ನಿಂಗೊ ಅಕ್ಕನ ಕೆಣಕ್ಕಿದ್ದು. ರೈಲು ಬಿಡ್ತಾತದ ಎಲ್ಲೋರು ಜಾಗೇಲಿ ಕೂದೋಳಿ" ಎಂದಳು ಶಾರದೆಯ ಅತ್ತೆ ಆಮೇಲೆ ಕಾವೇರಿ ಕೇಶವರ ಕಡೆಗೆ ತಿರುಗಿ 'ಎಂಗೊಂಬಗ ಬತ್ತೆಯೊ ಕಾವೇರಿ ಕೇಶವ ರಜೇಲಿ ಊರಿಂಗೆ ಬನ್ನಿ ಆತೊ" ಅಂದರು.

"ಬಂದಿಪ್ಪಾಗ ಎಂಗಳನ್ನೂ ಮರೇಡಿ ಆತೋ" ಎಂದರು ಸರಸ್ವತಿ, ದೇವಕ್ಕಿಯ ಅತ್ತೆ ಮಾವಂದಿರು.

"ಖಂಡಿತಾ ಬತ್ತೆಯೊ" ಎಂದು ಅವರ ಕೈ ಮುಟ್ಟಿ ಹೇಳಿದರು ದಂಪತಿಗಳು.

"ಅತ್ತಿಗೆ ಇಂದಿಂಗೆ ಎನ್ನ ಜವಾಬ್ದಾರಿ ಮುಗುದತ್ತು. ಇನ್ನೆಲ್ಲಾ ಜವಾಬ್ದಾರಿ ಕೇಶವನದ್ದು ಎಂತ ಕೇಶವ" ಎಂದು ಕೇಶವನ ಕೈ ಕುಲುಕಿದರು ರಘುರಾಮ.

"ನಿನ್ನ ಜವಾಬ್ದಾರಿ ಮುಗುದಿಲ್ಲೆ ಅಣ್ಣ. ಇನ್ನು ಇದ್ದು ಮಾವ ಅತ್ತೆಯ ನೋಡುದಲ್ಲದೆ ಎನ್ನ ಮನೆಯನ್ನು ನೋಡೇಕಷ್ಟೆ" ಎಂದರು ಕೇಶವ.

"ಭಾವ, ಹಾಂಗೆ ಕಳಿಂಗಳಕ್ಕೆ ಹೋಗಿ ಇಲ್ಲಿಯ ಸಮಾಚಾರ ಎಲ್ಲಾ ಹೇಳಿ, ಇನ್ನು ಮುಂದೆ ಎನಗೆ ಜೀವನಾಂಶ ಕುಳುಶುದು ಬೇಡ ಹೇಳಿಕ್ಕು. ಹಾಂಗೇ ಬೇಂಕಿಲ್ಲಿಪ್ಪ ಪೈಸೇಂದ ರಜಾ ತೆಗೆದು ಅಪ್ಪನ ಮನೆಗೆ ಹಂಚು ಹಾಕುವ ವ್ಯವಸ್ಥೆ ಮಾಡು ಆತೊ" ಕಾವೇರಿ ನುಡಿದಳು.

"ಆತು ಅತ್ತಿಗೆ ನಿಂಗೊ ಇಬ್ರು ಹೇಳಿದ ಕೆಲಸವ ಭಕ್ತೀಲಿ ಮಾಡುತ್ತೆ" ಎಂದು ನಗಾಡಿದ ರಘುರಾಮ. ಅಷ್ಟರಲ್ಲಿ ರೈಲಿನ ಸೀಟಿ ಕೇಳಿಸಿತು, ಸಿಳ್ಳೆ ಹೊಡೆದು ನಿಧಾನವಾಗಿ ಚಲಿಸಲು ಪ್ರಾರಂಭಿಸಿತು.

"ಕಾವೇರಿ, ಕೇಶವ ಬತ್ತೆಯೊ ಎಂದು ಎಲ್ಲರೂ ಕೈಬೀಸಿದರು.

"ಅಂಬಾಗಂಬಾಗ ಕಾಗದ ಹಾಕು ಕಾವೇರಿ" ಎಂದು ಶಂಕರಮ್ಮ ಕಣ್ಣೊರೆಸಿಕೊಂಡರು.

"ಬತ್ತೆ ಮಗಳೇ" ಎಂದು ಕೈಹಿಡಿದು ಬೀಳ್ಕೊಟ್ಟರು ಅಪ್ಪಣ್ಣ. ರೈಲು ತನ್ನ ವೇಗ ಹೆಚ್ಚಿಸಿಕೊಂಡಿತು.. ಕಾವೇರಿ ಕೇಶವ ಮನೆ ಕಡೆಗೆ ಮುಖ ಮಾಡಿದರು. ಮುಂದೇನು ಮಾಡಬೇಕು ಎಂಬುದರ ಕುರಿತು ಮಾತನಾಡಿಕೊಂಡರು.

ನಿಶ್ಚಿತ ಸಮಯದಲ್ಲಿ ಅವಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಂತು ಉತ್ತಮ ಅಂಕಗಳು ಬಂದ ಕಾರಣ ಇಂಟರ್ ಮೀಡಿಯೇಟು ವಿಜ್ಞಾನ ವಿಭಾಗಕ್ಕೆ ಸೇರಲು ಕಷ್ಟವಾಗಲಿಲ್ಲ. ಹಗಲೂ, ಇರುಳೂ ತನ್ನ ಓದಿನಲ್ಲಿಯೇ ತಲ್ಲೀನಳಾದ ಕಾರಣ ದಿನ ಸರಿದದ್ದೇ ಗೊತ್ತಾಗಲಿಲ್ಲ. ಎರಡು ವರ್ಷ ಪರೀಕ್ಷೆ ಕಟ್ಟಿ ಪಾಸಾದಳು. ಮುಂದೆ ವೈದ್ಯಕೀಯ ಶಿಕ್ಷಣಕ್ಕೆ ಅರ್ಜಿ ಹಾಕಿದಳು. ಅಲ್ಲಿಯೂ ಸೇರಲು ಕಷ್ಟವಾಗಲಿಲ್ಲ. ಮಹಿಳೆಯರ ಸಂಖ್ಯೆ ಅತ್ಯಲ್ಪ ಇದ್ದ ಕಾರಣ ಆತಂಕವಾಗಲಿಲ್ಲ. ಕಾವೇರಿ ಜೊತೆಯಲ್ಲಿ ಅಮೃತಾ ಕೌರ್ ಅನ್ನುವ ಇನ್ನೊಬ್ಬಳು ಹುಡುಗಿಯೂ ಸೇರಿದ್ದಳು. ಇಬ್ಬರೂ

ಜೊತೆಯಲ್ಲಿ ಹೋಗಿ ಜೊತೆಯಲ್ಲಿಯೇ ಬರುತ್ತಿದ್ದರು. ನಾಲ್ಕು ವರ್ಷದ ವಿದ್ಯಾಭ್ಯಾಸವನ್ನು ಮುಗಿಸಿ ಹೌಸ್ ಸರ್ಜನ್ ಕೋರ್ಸನ್ನು ಮುಗಿಸಿದರು. ಕಾವೇರಿಯ ಹೆಸರಿಗೆ ಡಾ। ಕಾವೇರಿ ಎಮ್.ಬಿ.ಬಿ.ಎಸ್ ಎಂಬ ಬಿರುದು ಸೇರಿಕೊಂಡಿತು.

"ಕಾವೇರಿ, ಇನ್ನೊಂದು ಮೂರು ತಿಂಗಳು ಕಲ್ತರೆ ನಿನಗೆ ಹೆರಿಗೆ ಮತ್ತು ಸ್ತ್ರೀರೋಗ ತಜ್ಞೆ ಹೇಳಿ ಬಿರುದೂ ಸಿಕ್ಕುತ್ತು ಕಲಿ ಆತೋ" ಎಂದರು ಡಾ। ಕೇಶವ.

"ನಿಂಗೊಗೆ ಇಷ್ಟ ಆದರೆ ಆನು ಕಲಿವೆ. ಎನ್ನೊಟ್ಟಿಂಗೆ ಅಮೃತಾನೂ ಕಲಿತ್ತಾಡ"

"ಒಳ್ಳೇದಾತು, ಅದನ್ನೂ ಮುಗುಶಿಕ್ಕು ಆತೋ" ಎಂದರು ಡಾ। ಕೇಶವ

"ಖಂಡಿತಾ ಮಾಡುತ್ತೆ"

ಎಂದವಳೇ ಕಾವೇರಿ, ಮೂರು ತಿಂಗಳಿನ ಆ ಕೋರ್ಸನ್ನು ಮುಗಿಸಿದಳು. ಅವಳ ವಿದ್ಯಾಭ್ಯಾಸದ ಸಮಯದಲ್ಲಿ ಪೂರ್ತಿ ಡಾಕ್ಟ್ರು ಕೇಶವ ಬೆನ್ನೆಲುಬಾಗಿ ನಿಂತರು.

"ಕಾವೇರಿ, ನೀನು ಮನೆಕೆಲಸ ಮಾಡ್ಲೆ ಹೋಗೇಡ. ಆನು ಆಸ್ಪತ್ರೆಯ ದಾದಿ ಒಂದಕ್ಕೆ ಹೇಳಿ ಎಲ್ಲಾ ಕೆಲಸ ಮಾಡ್ಸುವೆ. ಬರೇ ಬೇಯಿಸಿ ಇಳುಶುವ ಕೆಲಸ ಮಾಡಿಗೋ. ಅದೂ ಪರೀಕ್ಷೆ ಸಮಯದಲ್ಲಿ ಹೋಟ್ಲಿನವಂಗೆ ಹೇಳಿ ಕಳುಸಿಕೊಡುಗು ಆತೊ"

"ಅದು, ಬೇಶಿ ಇಳುಶುದು ಎನಗೆ ಕಷ್ಟ ಆವುತ್ತಿಲ್ಲೆ. ಓದಿ ಓದಿ ತಲೆ ಚಿಟ್ಟು ಹಿಡುದಿಪ್ಪಾಗ. ರಜಾ ಹಗುರ ಅಪ್ಪಲೆ ಲ್ಯಾಕಾವುತ್ತು. ಮಾವನ ಚಾಕ್ರಿಯು ಮಾಂತ್ರ ಆನೇ ಮಾಡುತ್ತೆ. ಅವಕ್ಕೆ ರಜವೂ ತೊಂದರೆ ಅಪ್ಪಲೆ ಎಡಿಯ" ಎಂದಳು ಕಾವೇರಿ. ಹಾಗೆಯೇ ಮಾವನಿಗೆ ಸ್ನಾನಕ್ಕೆ ಬಿಸಿ ನೀರು ತೋಡಿ ಕೊಡುವುದು. ಬಚ್ಚಲು ಮನೆಗೆ ಕರೆದುಕೊಂಡು ಹೋಗುವುದು. ಸ್ನಾನ ಮಾಡಿ ಬಂದಾಗ ಅರಿಗ್ಗೆ ಜೆಪಕ್ಕೆ ತಯಾರು ಮಾಡುವುದು. ಹಾಸಿಗೆ ಬಟ್ಟೆ ಬದಲಾಯಿಸಿ, ಬೇರೆ ಹಾಸುವುದು ಕುಡಿಯಲ್ಲಿಕ್ಕೆಂದು ತಂಬಿಗೆ ನೀರು ಪಕ್ಕದಲ್ಲಿಡುವುದು. ಇತ್ಯಾದಿ ಎಲ್ಲಾ ಚಾಕರಿಗಳನ್ನು ತಾನೇ ಮಾಡುತ್ತಿದ್ದಳು ಕಾವೇರಿ.

"ಪರೀಕ್ಷೆ ಇಪ್ಪಾಗ ಅದರೆಲ್ಲಾ ಆನು ಮಾಡುವೆ ಕಾವೇರಿ" ಇಲ್ಲದಿದ್ದರೆ ದಾಯಂಗೆ ಹೇಳಿದರಾತು" ಎಂದರು ಡಾಕ್ಟ್ರು ಒಮ್ಮೆ.

"ದಾಯಿ ಹತ್ತರೆ ಹೇಳೇಡಿ. ಅವು ಮಡಿ ಆಚಾರ ವಿಚಾರಲ್ಲಿ ಬೆಳೆದವು ಅವರ ಮನಸ್ಸಿಗೆ ಬೇನೆ ಅಪ್ಪ ಹಾಂಗೆ ಎಂತದೂ ಮಾಡೇಡಿ. ನಾಲ್ಕು ದಿನ ಸಂತೋಷದಲ್ಲಿ ಸುಖಲ್ಲಿ ಇರಳಿ ನಮ್ಮೊಟಿಂಗೆ" ಎಂದಳು ಕಾವೇರಿ.

"ಆತಪ್ಪ ನೀನು ಹೇಳಿದ ಹಾಂಗೇ ಆಗಲಿ" ಅಂದರು ಡಾಕ್ಟ್ರು"

ಮೂರು ತಿಂಗಳು ಎನ್ನುವುದು ಮೂರು ದಿವಸದಂತೆ ಕಳೆಯಿತು. ಕಾವೇರಿಗೆ ಅವಳ ಹೆಸರಿಗೆ ಡಿ.ಜಿ.ವೊ ಸೇರಿಕೊಂಡಿತು ಅವಳೆಲ್ಲಿ ದಾಯಿಯಾಗಿ ಸೇರಿದ್ದಳೋ ಅದೇ ಆಸ್ಪತ್ರೆಯಲ್ಲಿ ಸ್ತ್ರಿ ರೋ ತಜ್ಞೆಯಾಗಿ ಒಂದು ವರ್ಷ ದುಡಿದಳು. ಶಂಕರಭಟ್ಟರು ಮಗ, ಸೊಸೆಯೊಂದಿಗೆ ಚೆನ್ನಾಗಿ ಹೊಂದಿಕೊಂಡರು ಆಗಾಗ ವಿಶ್ವೇಶ್ವರನ ದರ್ಶನ ಮಾಡಿಕೊಂಡು ಬರುತ್ತಿದ್ದರು. ಕುಂದುತ್ತಿರುವ ದೇಹ, ಚಿತ್ತದಲ್ಲಿ ಲವಲವಿಕೆ. ಮತ್ತೆ ಮೂಡಿ ಬಂತು, ಅವರ ಆರೋಗ್ಯವೂ ಸುಧಾರಿಸಿ, ಮೊಣಕಾಲೂ ನೋವೂ ಹಗುರವಾಗಿ ಹೋಯಿತು; ಕಾವೇರಿಯನ್ನು ಸ್ವಂತ ಮಗಳೆಂದೇ ಭಾವಿಸಿದ್ದರು.

"ಕಾವೇರಿ ಇಂದು ಅವಿಲು ಮಾಡು ಆತೋ" – ಅನ್ನುತ್ತಿದ್ದರು ಒಮ್ಮೊಮ್ಮೆ "ಇಂದ್ರಾಣ ಮೇಲಾರಕ್ಕೆ ಬಾಳೆಕಾಯಿ ಹಾಕು ಆತೋ" ಅನ್ನುತ್ತಿದ್ದರು. ಅವರು ಹೇಳಿದ್ದನ್ನು ಕೇಳಿದ್ದನ್ನು ಮಾಡುತ್ತಿದ್ದಳು ಕಾವೇರಿ.

"ಇನ್ನೆಂತಾರೂ ಮಾಡೇಕಾರೆ ಹೇಳಿ ಮಾವ ದಾಕ್ಷಿಣ್ಯ ಮಾಡೇಡಿ ನಿಂಗೊ ಅನ್ನುತ್ತಿದ್ದಳು ಕಾವೇರಿ"

"ಎನಗೆಂತಬ್ಬೊ ದಾಕ್ಷಿಣ್ಯ, ಮಗನ ಹತ್ರಾದ್ರ್ಯೂ ರಜಾ ದಾಕ್ಷಿಣ್ಯ ಆವುತ್ತು ಎನ್ನ ಹೊಟ್ಟೇಲಿ ಹುಟ್ಟಿದ ಮಗಳ ಹಾಂಗಿದ್ದ ನಿನ್ನ ಹತ್ರೆ ಹೇಳ್ಳೆ ಎನಗೆಂತದೂ ದಾಕ್ಷಿಣ್ಯ ಆವುತ್ತಿಲ್ಲೆ. ನೀನು ಹೇಂಗಿದ್ದಿಯೋ, ಹೆಂಗಾವುತ್ತೋ ಹೇಳಿ ಅನುಮಾನಲ್ಲೇ ಆನು ಬಂದದು. ಆದರೆ ಈಗ ನಿನ್ನ ಬಿಟ್ಟಿಕ್ಕಿ ಹೋಪಲೇ ಮನಸ್ಸು ಬಾರದ್ದ ಹಾಂಗೆ ಆಯಿದು" ಎಂದರು ಮನಃ ಪೂರ್ವಕವಾಗಿ ಶಂಕರಭಟ್ಟರು

"ಎನಗೂ ಸಂತೋಷ ಆಯಿದು ಮಾವ. ನಿಂಗೊ ಬಂದರೆ ಎನ್ನ ಎಲ್ಲಿ ಸಂಸಾರ ಮಾಡುತ್ತಿರೋ ಹೇಳಿ ಒಳದಿಕೇ ಹೆದರಿಕೆ ಇತ್ತು ನಿಂಗೊ ಪೌರೋಹಿತ್ಯ ಮಾಡಿದವು. ಆಚಾರ ವಿಚಾರ ಗೊಂತಿದ್ದವು. ಎಷ್ಟಾದರೂ ಆನು ಒಂದಾರಿ ದಾರೆ ನೀರು ಕೈಗೆ ಬಿದ್ದೋಳು, ವಿಧವೆ ಪಟ್ಟಕಟ್ಟದೋಳು ಎಲ್ಲಿ ನಿಂಗೊಗೆ ಬೇಜಾರ ಆವುತ್ತೋ ಹೇಳಿ ಗ್ರಹಿಸಿಕೊಂಡಿದ್ದೆ"

"ಮಗಳೇ, ನಿನ್ನ ಕೈಗೆ ದಾರೆ ನೀರು ಬಿದ್ದದೂ ಎನಗೆ ಗೊಂತಿದ್ದು, ನಿನ್ನ ಕೈ ಹಿಡುದವ ಸತ್ತದೂ ಎನಗೆ ಗೊಂತಿತ್ತು. ಆದರೆ ಬರೇಧಾರೆ ನೀರು ಕೈಮೇಲೆ

ಸುರುದರೆ ಆರೂ ಒಬ್ಬನ ಹೆಂಡತಿ ಆವುತ್ತಿಲ್ಲೆ. ಗೆಂಡನ ಒಟ್ಟಿಂಗೆ ಸಂಸಾರ ಮಾಡಿದ್ದರೆ ಮಾಂತ್ರ 'ಹೆಂಡತಿ' ಹೇಳಿ ಆವುತ್ತು ಅದಕ್ಕೆ ದಿಂಡಿನ ಹೋಮ ಹೇಳಿ ಊರಿಂಗೇ ಗೊಂತಿದ್ದು. ಹಾಂಗಾಗಿ ನೀನು ಅವನ ಹೆಂಡತಿ ಅಲ್ಲ. ಆ ಅಳುಕು ನಿನ್ನ ಮನಸ್ಸಿಲ್ಲೂ ಇಪ್ಪಲೆಡಿಯ; ಅದರ ಮರೇಕು ನೀನು ಎನ್ನ ಸೊಸೆ, ಎನ್ನ ಮಗನ ಹೆಂಡತಿ ಹೇಳಿಯೇ ಆನು ಸ್ವೀಕಾರ ಮಾಡಿದ್ದೆ. ನಿಂಗೊ ಇಬ್ರೂ ಅನ್ಯೋನ್ಯವಾಗಿದ್ದದು ನೋಡಿ ಎನಗೆ ತುಂಬಾ ಖುಷಿ ಆಯಿದು. ನೀನೆನ್ನ ಸೊಸೆಯಾಗಿ ಬಂದದಕ್ಕೆ ಆನು ಸಂತೋಷವೂ ಹೆಮ್ಮೆಯೂ ಪಡುತ್ತೆ" ಎಂದು ದೀರ್ಘವಾಗಿಯೇ ತನ್ನ ಅಂತರಾಳವನ್ನು ಬಿಚ್ಚಿದರು ಶಂಕರಭಟ್ಟರು. ಕಾವೇರಿಯ ಮನಸ್ಸಿನಲ್ಲಿದ ಆತಂಕವೆಲ್ಲಾ ಮಾಯವಾಯಿತು. ತಾನು ಇಂತಹ ವಿಶಾಲ ಮನೋಭಾವ ಮಾವನವರನ್ನು ಪಡೆಯಲು ಪುಣ್ಯ ಮಾಡಿದ್ದೇನೆ ಅನಿಸಿತು. ಅವರಿಗೆ ಇನ್ನೂ ಹೆಚ್ಚಿನ ಆರೈಕೆಯನ್ನು ಮಾಡತೊಡಗಿದಳು. ದಿನದಿಂದ ದಿನಕ್ಕೆ ಮಾವ ಸೊಸೆಯರ ಆತ್ಮೀಯತೆ ಹೆಚ್ಚುತ್ತಾ ಹೋಯಿತು. ತನ್ನ ಬೇಕು ಬೇಡಗಳನ್ನೆಲ್ಲಾ ಸೊಸೆಯ ಮುಂದೆ ಹೇಳುತ್ತಿದ್ದರು. ಸೊಸೆ ಮೂಲಕವೇ ಮಗನಿಗೆ ಸಂದೇಶ ಮುಟ್ಟಿಸುತ್ತಿದ್ದರು. ಇದನ್ನು ತಿಳಿದ ಡಾ। ಕೇಶವ ತಂದೆಯವನ್ನೊಮ್ಮೆ ತರಾಟೆಗೆ ತೆಗೆದುಕೊಂಡರು.

"ಅಪ್ಪಂಗೆ ಎಂತ ಮಗ ಒಬ್ಬ ಇದ್ದ ಹೇಳುದು ಮರದೇ ಹೋಯಿದೋ ಹೇಂಗೆ? ಎಲ್ಲಾ ಸೊಸೆಯ ಹತ್ತರವೇ ಹೇಳುತ್ತಿ?"

"ಎಂತಕೆ ಹಾಂಗೇ ಕೇಳುತ್ತೆ? ಅದುಬಂದು ಬಂದು ಎನ್ನ ಹತ್ತರೆ ದಿನವೂ ಕೇಳುತ್ತು ನೀನೆಂತಾದರೂ, ಎಂದಾದರೂ ಕೇಳಿದ್ದಿಯೋ?" ಸವಾಲೆಸೆದರು ಶಂಕರಭಟ್ಟರು. "ಎನಗೆ ಕೇಳ್ಳೆಲ್ಲಿ ಬಿಡುತ್ತಿ ನಿಂಗೊ, ಮಾವ-ಸೊಸೆ-ಆನು ಮನೆಗೆ ಬರೇಕಾರೆ ನಿಂಗಳ ಸಂವಾದ ಮುಗುದಿರುತ್ತು, ಮತ್ತೆ ಆನೆಂತರ ಕೇಳುದು? ಕಡೇಂಗೆ ಮದ್ದಾದರೂ ಎನ್ನ ಹತ್ರೆ ಕೇಳ್ಳಾಗದೋ?"

"ನಿನ್ನ ಮದ್ದು ಎನಗೆ ಹಿಡಿತ್ತಿಲ್ಲೆ ಮಾಣಿ – ಕಾವೇರಿ ಮದ್ದು ಕೊಟ್ಟರೆ ಎಂತಾದರೂ 'ಟಂ' ಹೇಳಿ ನಿಲ್ಲುತ್ತು. ಅದರ ಕೈಗುಣ ತುಂಬಾ ಒಳ್ಳೇದಿದ್ದು"

"ಅಪ್ಪಪ್ಪಾ,-ಅದು ಎನ್ನಂದ ಹೆಚ್ಚು ಕಲ್ತಿದು, ಹೆಚ್ಚು ಅನುಭವ ಇದ್ದದು".

"ಹಾಂಗೆಲ್ಲಾ ಹೇಳೇಡ ಮಾಣಿ ಕಲ್ತದಕ್ಕೂ ಕೈಗುಣಕ್ಕೂ ತುಂಬಾ ವ್ಯತ್ಯಾಸ ಇದ್ದು. ಅದು ಮದ್ದು ಕೊಡುವ ರೀತಿ ಮಾಡುವ ಉಪಚಾರಂದ ಎನಗೆ ಅರ್ಧ ಕಾಯಿಲೆ ಕಮ್ಮಿ ಆವುತ್ತು. ನೀನು ಎನಗೆ ಬರೇ ಮಾತ್ರೆಯೋ ಮದ್ದೊ ಕೊಟ್ಟಿಕ್ಕಿ ಹೋವುತ್ತೆ. ನಿನ್ನ ಕೈಯ್ಯಾರೆ ಎನಗೆ ಕೊಡಿಶಿಕ್ಕಿ ಹೋವುತ್ತೆಯೊ?"

"ಹೋ, ಅದೋ ಸಂಗತಿ? ನಾಳೆಂದ ಆನೇ ನಿಂಗೊಗೆ ಮದ್ದು, ಮಾತ್ರೆ ಕೊಟ್ಟಿಕ್ಕಿ, ಕುಡುಶಿಕ್ಕಿ ಹೋವುತ್ತೆ ಆತೋ?"

"ಏನು ಬೇಡ ಎಲ್ಲಾ ಕಾವೇರಿಯೇ ಮಾಡುತ್ತು" ಮಾತನ್ನು ಮುಗಿಸಿಯೇ ಬಿಟ್ಟರು ಶಂಕರಭಟ್ಟರು.

ಡಾ। ಕೇಶವನಿಗೆ ತಂದೆಯ ಮಾತು ಕೇಳಿ ತುಂಬಾ ಖುಷಿಯಾಗಿತ್ತು. ಎಲ್ಲೂ ಹೊಂದಾಣಿಕೆಯಾಗದ ತನ್ನ ತಂದೆ, ಕಾವೇರಿಯನ್ನು ಇಷ್ಟೊಂದು ಹಚ್ಚಿಕೊಳ್ಳಬಹುದು ಎಂದು ಅವರು ಊಹಿಸಿರಲಿಲ್ಲ. ಏನಾದರಾಗಲಿ ಅಪ್ಪ ತಮ್ಮೊಂದಿಗೆ ಸುಖವಾಗಿ ಇದ್ದಾರಲ್ಲಾ ಇಷ್ಟೇ ಸಾಕು ಅನ್ನಿಸಿತು ಅವರಿಗೆ

ಒಂದು ದಿವಸ ಸೊಸೆಯೊಡನೆ ತನ್ನ ಮನದಾಳದ ಬಯಕೆಯನ್ನು ತಿಳಿಸಬೇಕು ಅನ್ನಿಸಿತ್ತು ಶಂಕರಭಟ್ಟರಿಗೆ

"ಕಾವೇರಿ ನಿಂಗಳ ಮದುವೆ ಆಗಿ ಏಳು ವರ್ಷ ಕಳುದತ್ತಿಲ್ಲೆಯೋ" ಪ್ರಶ್ನಿಸಿದರು ಶಂಕರಭಟ್ಟರು.

"ಕಳತ್ತು ಮಾವ ಎಂತಕೆ?"

"ಇಲ್ಲೆ ಹೀಂಗೆ ಕೇಳಿದ್ದು ಆನು" ಎಂದು ಸುಮ್ಮನಾದರು.

"ನಿಂಗೊ ಸುಮ್ಮನೆ ಕೂದ್ದು ಎಂತಕೆ ಹೇಳಿ ಎನಗೆ ಗೊಂತಾಯದು ಮಾವ. ಎನಗೀಗ ಮೂರು ತಿಂಗಳು ಆಯಿದು ಮಾವ ಹೇಂಗೆ ಹೇಳೇಕು ಹೇಳಿ ಅರಡಿಯಿದ್ದೆ ಸುಮ್ಮನೆ ಕೂಯಿದೆ ಅಷ್ಟೆ"

"ಅದಾ ಎನ್ನ ಮನಸ್ಸಿಲ್ಲಿದ್ದದು ಎಂತ ಹೇಳಿ ನಿನಗೆ ಅರ್ಥ ಆತ ಅದಾ ಸುಮಾರು ದಿನಂದ ನಿನ್ನ ಕೇಳೇಕು ಹೇಳಿ ಮಾಡಿತ್ತಿದ್ದೆ.

"ನಿಂಗೊ ಕೇಳೇಕು ಹೇಳಿ ಗ್ರಹಿಸಿದ್ದು ಎಂತದು ಹೇಳಿ ಎನಗೆ ಗೊಂತಾತು ಮಾವ ಅದಕ್ಕೆ ಆನು ಮದಲೇ ನಿಂಗಳ ಹತ್ರೆ ಹೇಳಿದ್ದು"

"ನೀನು ಬರೇ ಡಾಕ್ಟ್ರ ಮಾಂತ್ರಲ್ಲ. ಅದರೊಟ್ಟಿಂಗೆ ಜ್ಯೋತಿಶ್ಯವೂ ಗೊಂತಿದ್ದು ಹೇಳಿ ಆತದ. ಈ ವರ್ತಮನ ಕೇಳಿ ಎನಗೆ ತುಂಬಾ ಕುಶಿ ಆತು ಕಾವೇರಿ. ಎಲ್ಲಿ ನಮ್ಮ ವಂಶ ಬುಡ ಚಿಗುರದ್ದೆ ಮುರುಟಿತ್ತೋ ಹೇಳಿ ಚಿಂತೆ ಆಗ್ಯೊಂಡು ಇತ್ತು ಎನಗೆ.

"ಅದು ಎನಗೂ ಗೊಂತಿತ್ತು ಮಾವ. ಆದರೆ ಕಲಿವಾಗ ಅದೆಲ್ಲಾ ತೊಂದರೆ ಅಕ್ಕು ಹೇಳಿ ಇಷ್ಟು ದಿನ ಕಾದ್ದು"

"ಎಷ್ಟಾದರೂ ನಿಂಗೊ ಬುದ್ಧಿವಂತರು, ಎಂಗಳಕಾಲಕ್ಕೆ ಅದೆಲ್ಲಾ ಇತ್ತೋ? ಬೇಕಾದಪ್ಪಾಗ ಬೇಕಾದಷ್ಟು ಮಕ್ಕಳ ಪಡವ ಅನುಕೂಲ ಇತ್ತಿದ್ದರೆಲ್ಲೆನ್ನೆ. ಹುಟ್ಟುವಷ್ಟು ಹುಟ್ಟ್ಯೊಂಡು ಇತ್ತಿದ್ದವು. ಮಧ್ಯ ಎಷ್ಟು ಮಕ್ಕೆ ಸತ್ತೊಂಡು ಇತ್ತಿದ್ದವು. ಇಪ್ಪ ಮಕ್ಕಳ ನೋಡ್ಯಂಬಾಗ, ಸತ್ತ ಮಕ್ಕಳ ನೆಂಪಾಗ್ಯೊಂಡು ಅಬ್ಬೆ ಅಪ್ಪ ಕೊರಗ್ಯೊಂಡೂ ಇತ್ತಿದ್ದವು" ಶಂಕರಭಟ್ಟರ ಧ್ವನಿ ಗದ್ಗದವಾಯಿತೊಮ್ಮೆ.

"ಎಂತಕೆ ಮಾವ, ನಿಂಗೊಗೆ ಬೇರೆ ಮಕ್ಕೊ ಇತ್ತಿದ್ದವೋ?

"ಕಾವೇರಿ, ಎಂಗೊಗೆ ಕೇಶವ ಕೂಡಿ ಹತ್ತು ಮಕ್ಕೋ ಆಯಿದವು. ಅದರಲ್ಲಿ ಇಬ್ರೂ ಹುಟ್ಟಿ ಐದಾರು ತಿಂಗಳಿಗೆ ಕಣ್ಣು ಮುಚ್ಚಿದ್ದವು. ಒಂದು ಕೂಸು 8 ವರ್ಷ ಬದುಕ್ಕಿ ಸತ್ತತ್ತು ಮೂರು ನಾಲ್ಕು ಗರ್ಭ ಹೋಯಿದು. ಇನ್ನೊಬ್ಬ ಮಾಣಿ 3 ವರ್ಷ ಇದ್ದು, ಇದ್ದಕ್ಕಿದ್ದಂತೆ ಮನೆ ಮುಂದೆ ಹರವ ಹಾವಿಗೆ ಹಿಡಿವಲೆ ಹೋಗಿ ಅದು ಕಚ್ಚಿ, ಅಂದೇ ಸತ್ತು ಹೋದ. ಅವನ ಆಟ, ಮಾತು ನೆಂಪಾದರೆ ಅಶನ ಗಂಟ್ಲಲ್ಲಿ ಇಳಿಕ್ಕೊಂಡು ಇತ್ತಿಲ್ಲೆ"

"ಅದಕ್ಕೆ ಮಾವ ಈಗಾಣವು ಒಂದೋ ಎರಡೋ ಹೆರದು, ಅವರ ಜಾಗ್ರತೆಲಿ ನೋಡಿಗೊಂಬದು"

"ನೀನು ಹೇಳುದು ಸರಿ ಕಾವೇರಿ ಆ ವಿಷಯದಲ್ಲಿ ಈಗಾಣವರ ತಲೆ ಮತಲಾವಣಕ್ಕೆ ಇತ್ತಿಲ್ಲೆ. ಮಕ್ಕೊ ಹುಟ್ಟಿದ ಮೇಲೆ ಅವರ ನೋಡಿ ಕೊಳ್ಳೇಕು ಹೇಳುವ ಜವಾಬ್ದಾರಿ, ಅವಕ್ಕೆ ಉತ್ತಮ ಭವಿಷ್ಯ ಕಲ್ಪಿಸೇಕು ಹೇಳುವ ಆಸೆ ಯಾವುದೂ ಇರ್ತಿಲ್ಲೆ. ಅವು ಅವರಷ್ಟಕ್ಕೆ ಕಲ್ಲೋಳೇಕು, ತಮ್ಮ ಭವಿಷ್ಯವ ತಾನೇ ರೂಪುಸೊಳ್ಳೇಕು ಅಷ್ಟೆ. ಅದೆಲ್ಲಾ ಅವರ ಹಣೇಲಿ ಬರದ ಹಾಂಗೆ ಹೇಳಿ ಹೇಳ್ಕೊಂಡು ಇಕ್ಕು ಅಷ್ಟೆ! ಈಗಾಣವು ಹಣೆಲಿ ಬರದ್ದಾರ ಅಳಿಸಿ ಹೊಸತ್ತಾಗಿ ಬರದು ಹಾಕುತ್ತವು.

"ಅಪ್ಪು ಮಾವ, ಮಕ್ಕಳ ಹೆರುವನ್ನ ಮದಲೇ ಆಲೋಚನೆ ಮಾಡುತ್ತವು. ಕಾಲ ಬದಲಾದ ಹಾಂಗೆ ಕೋಲ ಅಲ್ಲದೋ?"

"ಕಾವೇರಿ, ಇನ್ನು ನೀನು ಹೆಚ್ಚಿಗೆ ಆಸ್ಪತ್ರೆ ಕೆಲಸ, ಮನೆ ಕೆಲಸ ಹೇಳಿ ಕಷ್ಟ ಪಡೇಡ. ನಿನಗೆ ಆಯಾಸ ಅಕ್ಕು."

"ಈಗ ಏನೂ ತೊಂದರೆ ಇಲ್ಲೆ ಮಾವ. ಆಸ್ಪತ್ರೇಲಿ ಎನಗೆ ಹೆಚ್ಚಿನ ಕೆಲಸ ಎಂತದೂ ಇಲ್ಲೆ. ಎಲ್ಲಾ ಮಾಡ್ಳೆ ಬೇರೆ ಜೆನಂಗಳೂ ಇದ್ದವು. ಮನೇ ಕೆಲಸ ಹೇಳಿಯೂ ಹೆಚ್ಚೇನೂ ಇಲ್ಲೆ."

"ಈಗ ಅಲ್ಲದಿದ್ದರೂ ನಿನಗೆ ದಿನ ಹೋದ ಹಾಂಗೆ ಕಷ್ಟ ಅಕ್ಕು ಅದಕ್ಕೆ ಈಗಳೇ ರಜಾ ಜಾಗ್ರತೆ ಮಾಡೇಕು ಹೇಳಿದ್ದು ಆನು."

"ಸುಮಾರು 7 ತಿಂಗಳು ಕಳುದು ಮತ್ತೆ, ಅಬ್ಬೆಯ ಇತ್ಲಾಗಿ ಕರಕ್ಕೊಂಡು ಬಾ ಹೇಳಿ ರಘುರಾಮ ಭಾವಂಗೆ ಕಾಗದ ಹಾಕಿದ್ದೆ. ಅವಕ್ಕೂ ವಿಷಯ ತಿಳುಶಿದ್ದೆ. ಅವ ಕರಕ್ಕೊಂಡು ಬಕ್ಕು."

"ಒಳ್ಳೆ ಕೆಲಸ ಮಾಡಿದ್ದೆ. ಆರಾದ್ರೂ ಹೆಮ್ಮಕ್ಕೊ ಮನೇಲಿ ಇದ್ದರೆ ಒಳ್ಳೇದು. ಎಂಗೊಗೆ ಎಂತ ಅರಡಿದ್ದು ಅದೆಲ್ಲಾ. ನಿನ್ನ ಅತ್ತ್ಯೇರು ಇದ್ದಿದ್ದರೆ ಕೋಣಿಕ್ಕೊಂಡು ಬತ್ತಿದು ಈಗ" ಮಡದಿಯ ನೆನಪಾಯಿತೊಮ್ಮೆ.

"ಎನಗೆ ಅವರ ನೋಡುವ ಖುಶಿ ಇಲ್ಲೆ ಮಾವ" ತಾನೂ ದರಿ ಸೇರಿದಳು ಕಾವೇರಿ.

ನಿತ್ಯದ ಕೆಲಸ ಕಾರ್ಯಗಳೊಂದಿಗೆ ಕಾವೇರಿ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಶಿಶುವ ಆರೈಕೆಯನ್ನು ಚೆನ್ನಾಗಿ ನೋಡಿಕೊಂಡಳು. ಹೊತ್ತಿಗೆ ಸರಿಯಾದ ಊಟ ನಿದ್ದೆ, ಆಹಾರ, ಹಣ್ಣು ಹಂಪಲು, ಹಾಲು ಎಲ್ಲವನ್ನೂ ಕ್ರಮಬದ್ಧವಾಗಿ ಸೇವಿಸತೊಡಗಿದಳು. ಡಾ। ಕೇಶವ ಅವಳಿಗೆ ಹೆಚ್ಚಿನ ಆಯಾಸವಾಗದಂತೆ ನೋಡಿಕೊಳ್ಳುತ್ತಿದ್ದರು. ಕಾವೇರಿಗೆ 7 ತಿಂಗಳು ನಡೆಯುತ್ತಿರುವಾಗ ರಘುರಾಮನಿಂದ ಪತ್ರ ಬಂತು. ಆ ವಾರದಲ್ಲಿ ಊರಿನಿಂದ ಅವನೂ ಶಾರದೆಯೂ ಬರುತ್ತೇವೆ" ಎಂದಿತ್ತು.

"ಅಯ್ಯೋ ಅಮ್ಮನನ್ನು ಬಿಟ್ಟು ಶಾರದೆಯನ್ನು ಯಾಕೆ ಕರೆದುಕೊಂಡು ಬರುತ್ತಾನೋ ಈ ಭಾವ. ಅಲ್ಲಿ ಅವರ ಮನೆಯ ಪರಿಸ್ಥಿತಿ ಏನಾಗಿದೆಯೋ? ಮಗನ ಶಾಲೆಯ ಗತಿ" ಎಂದೆಲ್ಲಾ ಚಿಂತಿಸಿದಳು ಕಾವೇರಿ. "ನೀನೆಂತಕೆ ಚಿಂತೆ ಮಾಡುತ್ತೆ ಕಾವೇರಿ; ಅವು ಇಲ್ಲಿಗೆ ಬರಲಿ ಮತ್ತೆಲ್ಲಾ ವಿಚಾರಿಸಿದರಾತು. ಈಗಳೇ ತಲೆಬೆಳಿ ಮಾಡ್ಯೋಳೇಡ" ಎಂದು ಕೇಶವ ಸಮಾಧಾನ ಮಾಡತೊಡಗಿದ.

ಮರುದಿವಸದ ರೈಲಿನಲ್ಲಿ ರಘುರಾಮನೂ ಶಾರದೆಯೂ ಬಂದು ಮುಟ್ಟಿದ್ದರು. 7ವರ್ಷಗಳಿಂದ ತಂಗಿಯನ್ನು, ಭಾವನನ್ನು ನೋಡದೆ ಕಾವೇರಿಗೆ ತುಂಬಾ ಸಂತೋಷವಾಯಿತು. ಇಬ್ಬರೂ ಮೈಯಲ್ಲಿ ಉಬ್ಬಿಕೊಂಡಿದ್ದರು. ಮುಖ

ಚರ್ಯೆಯೂ ಬದಲಾಗಿತ್ತು. ರಘುರಾಮ ಮೊದಲಿನಷ್ಟೆ ಲವಲವಿಕೆಯಲ್ಲಿದ್ದರೂ, ಶಾರದೆ ಮಾದಲಿಗಿಂತಲೂ ಗಂಭೀರಳಾಗಿದ್ದಾಳೆ ಎಂದು ತೋರಿತು ಕಾವೇರಿಗೆ; ಬೆಳಗ್ಗಿನ ಉಪಹಾರಕ್ಕೆ ತಯಾರು ಮಾಡಿಕೊಟ್ಟಳು ಕಾವೇರಿ.

"ಎಂತ ಅಬ್ಬೆ ಬಾರದ್ದೆ ಆನು ಬಂದದು ಹೇಳಿ ಆಶ್ಚರ್ಯವೋ ಅಕ್ಕಂಗೆ ಎಂದು ಶಾರದೆಯೇ ಮಾತು ಮೊದಲು ಮಾಡಿದಳು.

"ಅಪ್ಪು ಶಾರದೆ. ಅಬ್ಬೆ ಏಕೆ ಬಯಿಂದಿಲ್ಲೆ?"

"ಅಬ್ಬೆ ಬಂದರೆ ಅಲ್ಲಿ ಅಪ್ಪಂಗೆ ಬೆಶಿ ಹಾಕಲೆ ಆರಿದ್ದವು! ಅಬ್ಬಗೂ ಈಗ ಮೊಳಪ್ಪು ಬೇನೆ ಕೈಕಾಲು ಸೆಳೆತ ಎಲ್ಲಾ ಸುರು ಆಯಿದು. ಅದು ಬಂದರೂ ನಿನಗೆ ಹೆಚ್ಚಿನ ಉಪಯೋಗ ಆಗ 'ಹೆರುಸಲೆ ಬಂದ ಅಜ್ಜಿ ಹೆತ್ತಿಕ್ಕಿ ಹೋತಾಡ ಹೇಳುವ ಹಾಂಗೆ ಅಕ್ಕು. ಅದರ ಚಾಕರಿಯೇ ನೀನು ಮಾಡೇಕು. ಅದಕ್ಕೆ ಎನ್ನ ಅತ್ತ್ಯೋರು ಹೇಳಿದವು. 'ಸದ್ಯಕ್ಕೆ ಎಂಗೊ ಇಬ್ರೂ ಗಟ್ಟಿಮುಟ್ಟೇ ಇದ್ದೆಯೋ ನೀನೇ ಹೋಗು ಶಾರದೆ. ಅವಕ್ಕೆ ಸಹಾಯ ಅಕ್ಕು ಹೇಳಿ.

"ಅಲ್ಲಾ ನಿನ್ನ ಮಗನೋ?"

"ಅವನ ಹೆತ್ತದು ಮಾಂತ್ರ ಆನಷ್ಟೆ. ಅವ ಅಜ್ಜಿ ಅಜ್ಜನ ಬಿಟ್ಟು ಎಲ್ಲಿಗೂ ಬಾರ. ಅವಕ್ಕೂ ಅವನ ಬಿಟ್ಟು ಇಪ್ಪಲೆಡಿಯ"

"ಮತ್ತೆ ನಿಂಗೊ ಹೆರಡುವಾಗ ಗಲಾಟೆ ಮಾಡಿದ್ದಾ ಇಲ್ಲೆಯೋ?"

"ಏನು ಇಲ್ಲೆ. ನೀನು ಬತ್ತಿಯೊ ಕೇಳಿರೆ ಬತ್ತಿಲ್ಲೆ ಹೇಳಿದ್ದ. ಅವನ ಅಜ್ಜಿ ಬಂದರೆ ಮಾಂತ್ರ ಬತ್ತಾಡ. ಎಂಗಳೂ ಒತ್ತಾಯ ಮಾಡಿದ್ದಿಲ್ಲೆಯೊ. ಈಗ ಶಾಲಗೆ ಹೋವುತ್ತ. 3ನೇ ಕ್ಲಾಸಿಲ್ಲಿ ಕಲಿತ್ತ. ಇವೂದೆ ಬೇಡ ಹೇಳಿದವು"

"ಶಾರದೆ ಇದ್ದರೆ ನಿನಗೆ ಅನುಕೂಲ ಹೇಳಿ ಕರಕ್ಕೊಂಡು ಬಂದೆ ಅತ್ತಿಗೆ ನಿಂಗೊಗೆ ಎಷ್ಟು ದಿನ ಬೇಕೋ ಅಷ್ಟು ದಿನ ಅದು ಇಲ್ಲಿರಲಿ. ಆನು ನಾಳಂಗೆ ಊರಿಂಗೆ ಹೋವುತ್ತೆ. ಮತ್ತೆ ಶಾರದೆಯೂ ಕರಕ್ಕೊಂಡು ಹೋಪತಿ ಬಪ್ಪೆ".

"ಶಾರದೆ ಬಂದುದು ಎನಗೆ ಒಳ್ಳೇದಾತು ಭಾವ. ಆದರೆ ಎನ್ನಂದಾಗಿ ನಿಂಗೊಗೆ ತೊಂದರೆ ಅಪ್ಪಲಾಗ ಹೇಳಿ ಅಷ್ಟೆ.

"ಎಂತ ತೊಂದರೆಯೂಇಲ್ಲೆ. ಈಗ ಮನೇಲಿ ಅಬ್ಬೆಯೂ ಗಟ್ಟಿ ಇದ್ದು; ಹೇಂಗಾರೂ ಸುದಾರ್ಸುಗು ಅತ್ಲಾಗಿ ಇತ್ಲಾಗಿ ಓಡಾಡ್ಲೆ ಎಲ್ಲಾ ಶಾರದೆಯೇ ಗುಣ ಹೇಳಿ ಕರಕ್ಕೊಂಡು ಬಂದದು"

"ಅಲ್ಲದ್ದೆ ಈಗ ಅಪ್ಪಂಗೂ ಇರುಳು ಸರೀ ಕಣ್ಣು ಕಾಣುತ್ತಿಲ್ಲೆ. ಮನ್ನೆ ಕೊಡೆಯಾಲಕ್ಕೆ ಕರಕ್ಕೊಂಡು ಹೋಗಿ ಕಣ್ಣು ಪರೀಕ್ಷೆ ಮಾಡ್ಸಿದವು. ಕನ್ನಡಕ ಹಾಕುತ್ತವು. ಹಾಂಗೇ ಎಂತದೋ ಗುಳಿಗೆಯನ್ನು ಬರದುಕೊಟ್ಟಿದ್ದವು. ಈಗ ರಜಾ ಗುಣ ಆಯಿದು" ಅಂದಲು ಶಾರದೆ.

"ನೀನು ಬಂದದೇ ಒಳ್ಳೆದಾತು ಶಾರದೆ; ಇನ್ನು ಅಪ್ಪನ ಬಿಟ್ಟಿಕ್ಕಿ ಅಬ್ಬಗೆ ಎಲ್ಲಿಗೂ ಹೋಪಲೆಡಿಯ. ಅಪ್ಪಂಗೂ ವರುಷ ಎಪ್ಪತ್ತಾರು ಕಳುತ್ತಿಲ್ಲೆಯೋ?"

"ಅಪ್ಪಂಗೆ ಬೇರೆಂತದೂ ತೊಂದರೆ ಇಲ್ಲೆ. ಉಷಾರಿಲೇ ಇದ್ದವು. ಕನ್ನಡಕ ಮಡಿಕ್ಕೊಂಡು ಹೆರಕಟ್ಟೆ ಕೂದುಕೊಂಡಿದ್ದರೆ ಒಳ್ಳೆ 'ಸೇಟು ಕಂಡ' ಹಾಗೆ ಕಾಣುತ್ತವು. ಅಪ್ಪನ ಈಗ ಅಪ್ಪಣ್ಣ ಹೇಳಿ ಆರೂ ದಿನಿಗೇಳುತ್ತಾ ಎಲ್ಲೆ ಅಕ್ಕ. ಎಲ್ಲೋರು ಅಪ್ಪಣ್ಣಮಾವ, ಅಪ್ಪಚ್ಚಿ, ಭಾವ, ಹೇಳಿಯೇ ದಿನಿಗೇಳುದು ಎಂತಕೆ ಗೊಂತಿದ್ದೊ.

"ಎಂತಕೆ ಶಾರದೆ"

"ಮನಗೆ ಹಂಚು ಹಾಕುಸಿದ್ದು. ನಿನ್ನ ಮದುವೆ ಕಳುದು ಹೋದ ಕೂಡ್ಳೆ ಇವು ಮಾಡಿದ ಮದಲಾಣ ಕೆಲಸ ಹೇಳಿರೆ ಮನಗೆ ಹೆಂಚ್ಚು ಹಾಕ್ಸಿದ್ದು. ಕೊಬಳಂದ ರಜಾ ಇಳಿಸಿ ಕಟ್ಟಿ, ಹೆರ ಚಾವಡಿಯನ್ನೂ ಮಾಡ್ಸಿ, ಎರಡು ಕಟ್ಟೆಯನ್ನು ಮಾಡ್ಸಿದವು. ಅಂದಿಂದ ಹೊಸಮನೆ ಅಪ್ಪಣ್ಣ ಭಾವ" ಆಯಿದವು ಅಪ್ಪ.

"ಅದಪ್ಪು ಶಾರದೆ. ನೀನು ಹೇಳುದು ಸರಿ. ಪೈಸೆ ಇದ್ದರೆ ಎಲ್ಲೋರಿಂಗೂ ಬೇಕಾದವು ಆವುತ್ತವು ಇಲ್ಲದಿದ್ದರೆ ಅಪ್ಪಣ್ಣ ನೀನು ಹೇಳುವ ಜನವೇ ಇದ್ದದ್ದು ನಮ್ಮೂರಿಲ್ಲಿ."

"ಅಪ್ಪು ನಾಲ್ಕು ಕೂಸುಗಳ ಅಪ್ಪ, ಮನೇಲಿ ಕಿತ್ತು ತಿಂಬ ಬಡತನ ಇಪ್ಪಾಗ ಆರೂ ಕೇಳಿದೋರು ಇಲ್ಲೆ. ಈಗ ಅಪ್ಪ ಎಲ್ಲೋರಿಂಗೂ ಬೇಕು. ಎಲ್ಲಿ ಮದುವೆ ಅನುಪತ್ಯ ಆವುತ್ತರೂ, ಅಪ್ಪನ ಕರಕ್ಕೊಂಡು ಹೋವುತ್ತವು. "ಎನಗೆ ನೆಡವಲೆ ಎಡಿತ್ತಿಲ್ಲೆ" ಹೇಳಿದರೂ ಕಾರು ಮಾಡಿ ಕರಕ್ಕೊಂಡೂ ಹೋವುತ್ತವು.

ಇಷ್ಟು ಜೆನಕ್ಕೆ ಅಡಿಗ್ಗೆ ಸಾಮಾನು ಎಷ್ಟೆಷ್ಟು ಬೇಕಾವುತ್ತು ಹೇಳಿ ಕೇಳ್ಳೆ ಅಪ್ಪಣ್ಣ ಭಾವರಿಗೆ ಒಳ್ಳೆ ಮಾಹಿತಿ ಇದ್ದು. ಅವ ಹೇಳಿದ್ದ ಹೇಳಿರೆ ಒಂದು ಚೂರೂ ಹೆಚ್ಚು ಕಮ್ಮಿ ಆಗ ಹೇಳುವ ಸರ್ಟಿಫಿಕೇಟು ಬೇರೆ; ಅಪ್ಪಂಗೆ ಕೂಪಲೆ ಉಪಚಾರ, ಉಂಬಲೆ ಉಪಚಾರ, ನಿಂಬಲೆ ಉಪಚಾರ... ಮದಲಾದರೆ ಅಪ್ಪಣ್ಣನ ಕೇಳುವವು ಸಾಕಾಗ್ಯೊಂಡು ಇತ್ತಿಲ್ಲೆ. ಸಂಬಳ ಅಲ್ಲದ್ದೆ ಮನೆಗೆರಡು ಹೋಳಿಗೆ ಕೇಳಿರೆ ಕೊಟ್ಟುಗೊಂಡು ಇತ್ತಿದ್ದವಿಲ್ಲೆ ಪುಣ್ಯಾದಿಗುರು"

"ಅದರೆಲ್ಲಾ ಈಗ ಜಾನ್ಸಿ ವ್ಯಥೆ ಪಡುದು ಬೇಡ ಶಾರದೆ, - ಅದು ಮನುಷ್ಯನ ಗುಣ, ತಿಂದವಕ್ಕೆ ಒಂದು ತುತ್ತು ಹೆಚ್ಚು ತಿನ್ಸುದು, ಹಶುದವರ ಬಡಿದೋಡಿಸುದು –ಇದು ಎಲ್ಲಾ ಕಡೆ ಇಪ್ಪದೆ, ಪೈಸೆ ಇದ್ದರೆ ಮಾಂತ್ರ ಗುಣ ನಡತೆಯ ನೋಡುದು ಜೆನಂಗೊ. ಇಲ್ಲದವರ ಶುದ್ಧಿಗೇ ಹೋವುತ್ತವಿಲ್ಲೆ. ಈಗ ಅದೆಲ್ಲಾ ಹೇಳಿ ಅತ್ತಿಗೆಯ ಕೆಮಿ ತುಂಬುಸೇಡ. ಅದಕ್ಕೆ ಮಾವಂಗೆ ಹೇಂಗೆ ಬೇಕೋ ಹಾಂಗೆ ಮಾಡ್ಯೊಂಡು ಇರು. ಒಟ್ಟಾರೆ ಅವು ಸಂತೋಷಲ್ಲಿ ಇಪ್ಪ ಹಾಂಗೆ ನೋಡಿಗೊ ಆತೋ" ಹೇಳಿದ ರಘುರಾಮ.

"ಎನಗೆಂತದೂ ಬೇಜಾರ ಆವುತ್ತಿಲ್ಲೆ ಭಾವ, ಎನಗೆ ಅದೆಲ್ಲಾ ಗೊಂತಿಲ್ಲದ ವಿಷಯ ಅಲ್ಲನ್ನೆ, ಆನೂ ಅದರೊಟ್ಟಿಂಗೆ ಎಲ್ಲಾ ಅನುಭವಿಸಿ ಬಂದೋಳು ಅಲ್ಲದೋ.

"ಶಾರದೆ ಅದೂ ಇದೂ ಹೇಳಿ ನಿನ್ನ ಕೆಮಿ ತಂಬಸದಿದ್ದರೆ ಅತ್ತಿಗೆ, ಅದರ ಹತ್ತರೆ ಏಳು ವರ್ಷದ ಸ್ಟಾಕು ಇದ್ದು" ನಗಾಡಿದ ರಘುರಾಮ.

"ಎನಗೂ ಮಾತಾಡ್ಲೆ ಒಳ್ಳೆದಾತು ಭಾವ. ಹೊತ್ತು ಹೋವುತ್ತು"

"ಆನಂಬಾಗ ನಾಳಂಗೆ ಉದಿಯಪ್ಪಾಗ ಹೆರಡುತ್ತೆ ಬೇರಂತಾರೂ ಮಾಡೇಕಾರೆ ಹೇಳಿ" ಶಾರದೆ ನಿನಗೆಂತಾದರೂ ಬೇಕಾದರೆ ಹೇಳು ತಂದು ಕೊಟ್ಟಿಕ್ಕಿ ಹೋವುತ್ತೆ"

"ಎನಗೆ ನಿತ್ಯ ಸುತ್ತಲೆ ಎರಡು ವಾಯಿಲ್ ಸೀರೆ ತಂದುಕೊಡಿ, - ಎನ್ನ ಹತ್ತರೆ ಇಪ್ಪದು ಎಲ್ಲಾ ಕಂರಣಿ ಕಂಪಣಿ ಆಯಿದು"

"ಎಂತದೂ ಬೇಡ ಭಾವ. ಇಲ್ಲಿ ಎನ್ನ ಹತ್ತರೆ ಬೇಕಾದಷ್ಟಿದ್ದು ಆನೇ ಕೊಡುತ್ತೆ ಅದಕ್ಕೆ"

"ಎಂತ ಶಾರದೆ ತರೇಕೋ?

"ಅಕ್ಕ ಬೇಡ ಹೇಳುತ್ತನ್ನೆ, –ಬೇಡ ಅಂಬಾಗ. ಅದರ ಸೀರೆ ಎನಗಕ್ಕು"
ಟ

"ಆನಂಬಾಗ ಒಂದಾರಿ ದೇವಸ್ಥಾನಕ್ಕೆ ಹೋಗಿ ಬತ್ತೆ ಹಾಂಗೇ ಒಂದೆರಡು ಗಂಗಾ ತೀರ್ಥವನ್ನೂ ತೆಕ್ಕೊಂಡು ಹೋಯೇಕು. ಅವು ಪೈಸೆ ಕೊಟ್ಟಿದ್ದವು."

ಆತು ಭಾವ ಎನಗಿಂದು ರಜೆ ಇದ್ದು. ಆನೂ ಶಾರದೆಯೂ ಎಂತಾರೂ ಅದು ಇದು ಮಾತಾಡ್ಯೊಂಡು, ಅಡಿಗೆ ಮುಗುಶಿತ್ತಿಯೋ'

ಹೇಳಿದ ಹಾಗೆ ರಘುರಾಮ ದೇವಸ್ಥಾನದ ಕಡೆಗೆ ನಡೆದ. ಅಕ್ಕ ತಂಗಿಯರು ಹರಟೆಯಲ್ಲಿ ತಲ್ಲೀನರಾದರು. ಅವರಲ್ಲಿ ಆರೇಳು ವರ್ಷಗಳ ಸಮಾಚಾರಗಳು ಸಂಗ್ರಹವಿತ್ತು.

"ಅಪ್ಪು ಅಕ್ಕಾ, ನೀನಂದು ವರ್ಷಕ್ಕೊಂದಾರಿ ಊರಿಂಗೆ ಬತ್ತೆ ಹೇಳಿದ್ದೆ. ಎಂಗೊ ಎಲ್ಲಾ ಕಾದು ಕೂದ್ದೇ ಕೂದ್ದು"

"ಎನಗೆ ಬರೇಕು ಹೇಳಿ ಇತ್ತು ಶಾರದೆ. ಆದರೆ ಮಾವನ ಬಿಟ್ಟಿಕ್ಕಿ ಹೇಂಗೆ ಹೋಪದು?"

"ಅವರನ್ನೂ ಕರಕ್ಕೊಂಡು ಬರೇಕಾತು"

"ಅವು ಎಂತಾದರೂ ಆ ಮಣ್ಣು ತೊಳಿಯೆ. ಆನು ಸತ್ತರೆ ಇಲ್ಲಿಯೇ ಮಣ್ಣು ಮಾಡಿ ಎನ್ನ ಆಸ್ತಿಯ ಗಂಗಾನದಿಗೆ ಬಿಡಿ" ಹೇಳಿದವು. ಹಾಂಗಾಗಿ ಎಂಗಳೂ ಹೆರಟಿದಿಲ್ಲೆಯೊ' ಮಾವನ ಹಠ ಇನಗೆ ಗೊಂತಿಲ್ಲದ್ದ ಅಲ್ಲನ್ನೆ?

'ಅದೆಲ್ಲಾ ಅಪ್ಪು ಶಾರದೆ, ನಿಂಗೊ ಮದುವೆ ಮುಗುಶಿ ವಾಪಾಸು ಹೋಪಾಗ ಕೇಶಾವಜ್ಜಂದೂ, ಗೇಣಪಜ್ಜಂದೂ ಯಾವ ಆಕ್ಷೇಪಣೆಯೂ ಇತ್ತಿಲ್ಲೆಯೊ'

"ಎಂತ ಇತಿಲ್ಲೆಕ್ಕ. ಆವಿಬ್ರೂ ಬಾಯಿಗೆ ಬೀಘ ಹಾಕಿ ಕೂದವು. ಆನೇ ಅವರ ರಜಾ ಕೆಣಕ್ಕಿದೆ"

"ಎಂತ ಹೇಳಿ?

"ಎಂತ ಕೇಶವಜ್ಜ ಗೇಣಪಜ್ಜ ಸುಮ್ಮನೇ ಕೂದದು ಹೇಳಿ ಕೇಳಿದೆ

"ಅದಕ್ಕೆ ಅವೆಂತ ಹೇಳಿದವು

'ಎಂಗಳ ಬಾಯಿಗೆ ನಿಂಗೊ ಅಲ್ಲದೊ ಬೀಗ ಹಾಕಿದ್ದು. ಎಂತರ ಮಾತಾಡ್ಳಿದ್ದು ಎಂಗೂ" ಹೇಳಿದವು.

"ಮತ್ತೆ ಮದುವೆ ವಿಷಯದಲ್ಲಿ ಎಂತ ಮಾತಾಡ್ಲು ಇಲ್ಲೆಯೋ? ಒಂದೇ ದಿನಲ್ಲಿ ಮದುವೆ, ಚತುರ್ಥಿ, ದಿಂಡು ಸಟ್ಟು ಮುಡಿ ಎಲ್ಲಾ ಮುಗುಶಿದವಿಲ್ಲೆಯೋ?"

"ಅದು ಒಳ್ಳೆದೇ ಆತು; ಅದೂ ಒಂದು ಹೊಸ ಕ್ರಮವೇ. ಸುಮ್ಮನೆ ಕಣ್ವೈರ ಆಯನದ ಹಾಂಗೆ 5-6 ದಿನ ದುಂದು ವೆಚ್ಚ ಮಾಡುದರಿಂದ, ಒಂದೇ ದಿನಲ್ಲಿ ಆವುತ್ತು ಹೇಳಿ ತೋರ್ಸಿದ ಹಾಂಗೆ ಆತು. ಆಯೇಕಾದ ಎಲ್ಲಾ ಕ್ರಿಯೆಗಳನ್ನು ಮಾಡಿ ಮುಗುಶಿದವು. ಯಾವ ಕೊರತ್ತೆಯೂ ಆಯಿದಿಲ್ಲೆ" ಹೇಳಿದವು.

"ಮತ್ತೆ ಊರಿಂಗೆ ಹೋಗಿ ಎಂತದೂ 'ಟಂಟಂ' ಹೇಳಿದ್ದ ಎಲ್ಲೆನ್ನೆ?"

"ಎಂತದೂ ಇಲ್ಲೆ ಎಲ್ಲೋರ ಹತ್ರೂ ಹೇಳಿ ಹೊಗಳಿದ್ದೇ ಹೊಗಳಿದ್ದು;

"ಎಂತ ಹೇಳಿ ಹೊಗಳಿದವು?"

"ಇದೊಂದು ಹೊಸದಾರಿ ಹುಡುಕ್ಕಿ ಕೊಟ್ಟವು. ಒಂದು ದಾರಿ ಆಯೇಕಾರೆ ಮದಾಲು ಒಬ್ಬ ನಡೇಕು, ಮತ್ತೆ ಅದೇ ದಾರೀಲಿ ನಾಲ್ಕು ಜೆನ ನಡೆದರೇ ದಾರಿ ಅಕ್ಕು, ಮತ್ತೆ ಸರಾಗ ಎಲ್ಲೋರೂ ಹೋಪಲಕ್ಕು. ಆ ದಾರಿಯ ಕಾವೇರಿಯೂ ಕೇಶವನೂ ಮಾಡಿಕೊಟ್ಟವು" ಹೇಳಿ ಎಲ್ಲೋರ ಹತ್ರೂ ಹೇಳ್ಕೊಂಡು ಬಂದವು.

"ಹಾಂಗಾರೆ ಮದಲಾಣ ಹಾಂಗೆ ಕೊಂಕು ಮಾತಾಡಿದ್ದವಿಲ್ಲೆ"

"ಇಲ್ಲೆ ಅಕ್ಕಾ, ಪೂರ್ತಿ ಬದಲಾಯಿದವು"

"ಸರಿ ಹಾಂಗಾರೆ ಎಲ್ಲಿ ಊರಿಂಗೆ ಹೋಗಿ ಮದಲಾಣ ಚಾಳಿ ಹಿಡಿತ್ತವೋ ಹೇಳಿ ಕೇಳಿದ್ದು ಆನು"

"ಈಗ ಎಲ್ಲಾ ಬಿಟ್ಟಿದ್ದವು-ಅಪ್ಪಣ್ಣ ಭಾವನ ಕಡೆಗೆ ಮಾಲಿದ್ದವು" ನಕ್ಕಳು ಶಾರದೆ ಕಾವೇರಿಗೂ ನಗು ಬಾರದಿರಲಿಲ್ಲ.

"ಅದೆಲ್ಲಾ ಅಪ್ಪು ಶಾರದೆ, ಮದುವೆ ದಿನ ನಾವು ದೇವಸ್ಥಾನಕ್ಕೆ ಹೋಗಿ ಗಂಗಾನದಿಯ ನೋಡಿಕ್ಕಿ ತಿರುಗುವಾಗ ನೀನೆಂತದೋ ಒಂದು ಕಟ್ಟಿನ ಹೊಳಗೆ ಇಡಿಕ್ಕಿದೆ. ಎಂತದದು?

"ಅದೋ, ಅದು ಕಳಿಂಗಳಲ್ಲಿ ನಿನಗೆ ಸುತ್ತಿಸಿದ ಮಂಗಲ ಸೀರೆ, ಉತ್ತರಿಗೆ, ರವಿಕ್ಕೆ" ಅದರ ನೆಂಪೂ ಇಪ್ಪಲಾಗ ಹೇಳಿ ಹೊಳಗೆ ಇಡ್ಕಿದೆ" ಅದು ಆರ ಕಣ್ಣಿಂಗೆ ಬೀಳೂದೂ ಬೇಡ, ಆರು ಸುತ್ತುದೂ ಬೇಡ ಹೇಳಿ ಕಂಡತ್ತು"

"ಒಳ್ಳೆ ಕೆಲಸ ಮಾಡಿದ್ದೆ ಶಾರದೆ, ಹಾಂಗೆ ಭಾವ ಕಳಿಂಗಳಕ್ಕೆ ಹೋಗಿ ಬಯಿಂದನೋ?"

"ಹೋಗಿ ಬಯಿಂದವು, ಅವಕ್ಕೆ ಎಲ್ಲಾ ಸಮಾಚಾರವನ್ನೂ ಹೇಳಿದ್ದವು"

"ಎಂತಾ ಹೇಳಿದವಡಾ?"

"ಮನೇಲಿ ದೊಡ್ಡ ಮಗ ಗೋಪಾಲ ಇತ್ತಿದ್ದಾಡ. ಅವ ನಿಂಗಳ ಮದುವೆಯ ವಿಷಯವ ಕೇಳಿ ಒಳ್ಳೆದಾತು. ಎನಗೆ ಹೇಳಿದ್ದರೆ ಮದುವೆಗೆ ಆನೂ ಬತ್ತಿತ್ತೆ;

ಅಪ್ಪಂಗೆ ಮುದಿ ಭ್ರಾಂತು, ಬೇಡ ಹೇಳಿದ್ದಕ್ಕೆ ಎನ್ನ ಬೈದು ಕೂರ್ಸಿದ, ಒಂದು ಕೂಸಿನ ಜೀವಮಾನ ಹಾಳು ಮಾಡ್ಲೆ ನೋಡಿದ್ದ. ಅದು ಈಗಾದರೂ ಸುಖಲ್ಲಿ ಇದ್ದರೆ ಸಾಕು ಹೇಳಿದ"

ಇವರ ಸಂಭಾಷಣೆ ಮುಗಿಯುವ ಹೊತ್ತಿಗೆ ಅಡಿಗೆಯೂ ತಯಾರಾಗಿತ್ತು. ವಿಶ್ವೇಶ್ವರ ದರ್ಶನಕ್ಕೆ ಹೋದ ರಘುರಮ ಮರಳಿ ಮನೆಗೆ ಬಂದೂ ಆಗಿತ್ತು. ಎಲ್ಲರೂ ಒಟ್ಟಿಗೆ ಕೂತು ಊಟ ಮುಗುಶಿದರು. ಆ ದಿನದ ಅಡಿಗೆ ಶಾರದೆದು. ಬಾಳೆಕಾಯಿ ಕೊದಿಲು, ಅಲಸಂಡೆ ತಾಳು, ಕಡ್ಲೇ ಬೇಳೆ ಪಾಯಸ ಮಾಡಿದ್ದಳು.

"ಇಂದು ಪಾಯಸ ಎಂತಕೆ ಮಾಡಿದ್ದು?"

"ಅಕ್ಕಂಗೆ ಕಡ್ಲೆ ಬೇಳೆ ಪಾಯಸ ಹೇಳಿರೆ ಪ್ರೀತಿ ಅಲ್ಲದೋ? ಇಂದಿಂದಲೇ ಅದರ ಬಯಕೆಗಳ ತೀರ್ಸಲೆ ಸುರು ಮಾಡುತ್ತೇ ಹೇಳಿ."

"ಒಳ್ಳೆ ಕೆಲಸ ಮಾಡಿದೆ ಶಾರದೆ. ಎನಗೂ ಪಾಯಸ ಹೇಳಿರೆ ಪ್ರೀತಿಯೆ. ನಿನ್ನ ಅಕ್ಕನೊಟ್ಟಿಂಗೆ ಎನ್ನ ಬಯಕೆಗಳೂ ತೀರಿದ ಹಾಂಗೆ ಆವುತ್ತು" ಹೇಳಿದರು ಶಂಕರಭಟ್ಟರು.

"ಆತು ಮಾವ ನಿಂಗೊಗೆ ಎಂತೆಲ್ಲಾ ತಿನ್ನೇಕು ಹೇಳಿ ಇದ್ದೊ ಅದನ್ನು ಹೇಳಿ; ಅಕ್ಕನದ್ದರೊಟ್ಟಿಂಗೆ ಅದನ್ನೂ ಮಾಡಿ ಹಾಕುವೆ. ಎನಗಿಲ್ಲಿ ಬೇರೆ ಎಂತ ಕೆಲಸ ಇದ್ದು?"

"ಶಾರದೆಗೆ ಊಕು ಬಂದರೆ ಒಂದೇ ಸರ್ತಿಂಗೆ ಹತ್ತು ಬಗೆಯೂ ಮಾಡಿ ಹಾಕುಗು. ಅದಕ್ಕೆ ಸಾಮಾನು ತರ್ಸಿಕೊಟ್ಟು ಪೂರೈಸ ನಿಂಗೊಗೆ" ರಘುರಾಮ ಒಗ್ಗರಣೆ ಕೊಟ್ಟ.

"ಇವಕ್ಕೆ ಎನ್ನ ಲೇವಡಿ ಮಾಡಿದಷ್ಟೂ ಸಾಲ. ಯಾವಾಗ ಆನು ಹತ್ತು ಬಗೆ ಮಾಡಿದ್ದೆ?" ಸ್ವಲ್ಪ ಮುನಿಸು ತೋರಿದಳು ಶಾರದೆ.

"ಕೋಪುಸೇಡ ಮಾರಾಯ್ತಿ. ಆನು ನಾಳಂಗೆ ಉದಿಯಪ್ಪಾಗ ಹೋವುತ್ತಿಲ್ಲೆಯೋ? ರಜಾ ನಿನ್ನ ಕೆಂಪು ಮೋರೆ ನೋಡಿಕ್ಕಿಯೇ ಹೋವುತ್ತೆ ಹೇಳಿ ತಮಾಷೆ ಮಾಡಿದ್ದು. ಇನ್ನು ಆರು ತಿಂಗಳಾದರೂ ನಿನ್ನ ಬಿಟ್ಟು ಇರೇಕಾನ್ನೆ?" ರಘುರಾಮ ಸಾಂತ್ವನ ಮಾಡಿದ ಶಾರದೆ ಮುಗುಳು ನಕ್ಕಳು.

"ಆತಾ ಭಾವಂಗೆ ಈಗಳೇ 'ಎರಡ ವೇದನೆ" ಸುರು ಆತದ" ಅಂದಳು ಕಾವೇರಿ.

“ಹಾಗೆಂತ ಇಲ್ಲೆ ಅಕ್ಕ. ಊರಿಂಗೆ ಹೋದರೆ ಅವಕ್ಕೆನ್ನ ನೆಂಪೂ ಬಾರ. ಇಡೀ ದಿನ ಶಾಲೆ ಕೆಲಸ–ತೋಟದ ಕೆಲಸಲ್ಲಿ ಇಕ್ಕು. ರಜಾ ಖುಷಿಯೂ ಅಕ್ಕು. ಶಾರದೆಯ ಕಿರಿಕಿರಿ ಇಲ್ಲೆನ್ನೆ ಹೇಳಿ”.

“ಎನ್ನ ಅಣ್ಣನ ಹಾಂಗೆಲ್ಲಾ ಹೇಳೇಡ ಶಾಅದೆ ಆಕೋ?” ಹೇಳಿದವರು ಡಾ॥ ಕೇಶವ.

“ನಿಂಗೊ ಹಿಂಗೆ ಹರಟೆ ಕೊಚ್ಚಿಕೊಂಡು ಇರುತ್ತಿರೋ ಎದ್ದು ಕೈ ತೊಳೆತ್ತಿರೋ? ಎನಗೆ ಉಂಡು ಕೂದಲ್ಲಿಂದ ಏಳದಷ್ಟು ಹೊಟ್ಟೆ ಬಿರುದ್ದು. ಅಡಿಗೆ ಲಾಯಕಾಯಿದು ಹೇಳಿ ಒಂದು ತುತ್ತು ಹೆಚ್ಚು ತಿಂದೆ. ಪಾಯಸವನ್ನೂ ಸರಿಯಾಗಿ ಸುರುದ್ದೆ” ಹೇಳಿದರು ಶಂಕರಭಟ್ಟರು.”

“ಅಪ್ಪಚ್ಚಿಗೆ ಅಂಬಾಗ ಶಾರದೆಯ ಅಡಿಗೆ ಹಿಡುತ್ತು. ನಿಂಗೊಗೆ ಬೇಕಾದ ಹಾಂಗೆ ಹೇಳಿ ಮಾಡ್ಲೋಳಿ ಆತೋ” ಎಳ್ಳೆ ಕೈ ಹಿಡಿಯೇಕೋ?”

“ಹಾಗೆಂತದೂ ಬೇಡದೊ. ಸುಮ್ಮನೆ ತಮಾಷೆ ಮಾಡಿದ್ದು ಆನು” ಅಂದರು ಶಂಕರಭಟ್ಟರು. ಎಲ್ಲರಿಗೂ ಸಂತೋಷವಾಯಿತು.

ಹೇಳಿದ ಹಾಂಗೆ ರಘುರಾಮ ಮರುದಿವಸ ಊರಿನ ಕಡೆಗೆ ಹೊರಟ. “ಎಂತಾರೂ ಅರ್ಜೆಂಟಿದ್ದರೆ ‘ಟೆಲಿಗ್ರಾಮ’ ಮಾಡಿ ಬಪ್ಪೆ ಆತೊ” ಹೇಳಲು ಮರೆಯಲಿಲ್ಲ.

ಕಾವೇರಿ, ಆಸ್ಪತ್ರೆ ಕೆಲಸವನ್ನು ಮುಗಿಸಿಕೊಂಡು ಮನೆಯ ಕಡೆಗೆ ಬೇಗನೇ ಬರುತ್ತಿದ್ದಳು. ಅಕ್ಕನಿಗಾಗಿ ತಂಗಿ ತಿಂಡಿ ಕಾಫಿ ತಯಾರು ಮಾಡಿ ಇಡುತ್ತಿದ್ದಳು. ಎಲ್ಲರಿಗಿಂತಲೂ ಮೊದಲು, ಶಂಕರಭಟ್ಟರಿಗೆ ಕೊಡುತ್ತಿದ್ದಳು. ಕಾವೇರಿಗಿಂತಲೂ ಹೆಚ್ಚಿನ ಆಸಕ್ತಿಯಿಂದ ಅವರ ಚಾಕರಿಯನ್ನು ಮಾಡುತ್ತಿದ್ದಳು. ಯಾವ ಕೆಲಸದಲ್ಲಿಯೂ ಕುಂದು ಕೊರತೆಗಳಿರುತ್ತಿರಲಿಲ್ಲ; ತಿಂಡಿ ಕಾಫಿ ಆದ ಮೇಲೆ, ಅಕ್ಕ ತಂಗಿಯರಿಬ್ಬರೂ ಸಣ್ಣ ವಾಯು ಸಂಚಾರ ಮುಗಿಸುತ್ತಿದ್ದರು. ಅದೂ ಇದೂ ಮಾತನಾಡುವುದರಲ್ಲಿಯೇ ದಿನ ಕಳೆಯುತ್ತಿತ್ತು. ಕಾವೇರಿ ಒಂಭತ್ತನೇ ತಿಂಗಳಿಗೆ ಕಾಲಿರಿಸಿದಳು.

“ಕಾವೇರಿ, ಇನ್ನು ಬೇಕಾದರೆ ನೀನು ರಜೆ ತೆಕ್ಕೊ. ಹೆಚ್ಚು ಹೊತ್ತು ಕೂದೊಂಡು ಇಪ್ಪಲೆ ಕಷ್ಟ ಅಕ್ಕು, ಒಳ್ಳೆದೂ ಅಲ್ಲ. ಆದಷ್ಟೂ ಓಡಾಡ್ಕೊಂಡು ಇದ್ದರೆ ಒಳ್ಳೆದು ಅಲ್ಲದೋ? ಡಾ॥ಕೇಶವ ನುಡಿದರು. “ಆನು ಅದನ್ನೇ ಆಲೋಚನೆ ಮಾಡುತ್ತೆ, ಈಗ ರಜಾ ಕಷ್ಟವೂ ಆವುತ್ತು. ಬಹುಷ್ಷ ‘ಹೆಡ್ ಫಿಕ್ಸ್’ ಆವುತ್ತು ಹೇಳಿ ಕಾಣುತ್ತು”

“ಅಕ್ಕ ರಜವೂ ಪಥ್ಯ ಮಾಡುತ್ತಿಲ್ಲೆ ಭಾವ. ಎಲ್ಲವೂ ತಿಂತು”. ಭಾವನಿಗೆ ಶಾರದೆ ಅಕ್ಕನ ಮೇಲೆ ದೂರು ಹೇಳಿದಳು.

“ತಿನ್ನೇಕು ಶಾರದೆ ಬಸರಿಯಕ್ಕೆ ತಿಂಬಲಾಗ ಹೇಳಿ ಯಾವುದೂ ಇಲ್ಲೆ ತಿಂದಷ್ಟು ಒಳ್ಳೆದು. ಹುಟ್ಟುವ ಶಿಶು ಗಟ್ಟಿ ಮುಟ್ಟಾಗಿರ್ತು. ಅದೆಲ್ಲಾ ನಿನ್ನ ಅಕ್ಕಂಗೆ ಗೊಂತಿದ್ದು”.

“ಹಾಂಗಾರೆ ಎಂಗೊಗೆಲ್ಲಾ ಪಥ್ಯ ಹೇಳಿದ್ದೇ ಹೇಳಿದವು. ಅದು ತಿಂಬಲಾಗ ಇದು ತಿಂಬಲಾಗ ಹೇಳಿ, ಹೆತ್ತ ಮತ್ತು ಪಥ್ಯಂಗಳೇ. ಹಾಂಗಾಗಿ ಎದ್ದು ನಡೆವಲೂ ಆಗದಷ್ಟು ನಿತ್ರಾಣ ಆಯ್ಕೊಂಡೂ ಇತ್ತು”.

ಅದೆಲ್ಲಾ ತಪ್ಪು ಶಾರದೆ ಬಸರಿಯಕ್ಕೊ, ಬಾಣಂತಿಗೋ ಸರಿ ತಿಂದರೇ ಮೈಗೆ ಒಳ್ಳೆದು. ಮಗುವಿಂಗೆ ಮಲೆ ಹಾಲು ಬೇಕಾದಷ್ಟು ಆವುತ್ತು. “ಸಿಕ್ಕಿದ್ದೆಲ್ಲಾ ತಿಂದರೆ ಮಗುವಿನ ಕೆಮಿ ಸೋರುಗು, ಶೀತ ನೆಗಡಿ ಅಕ್ಕು ಹೇಳಿ ಕಡು ಪಥ್ಯಲ್ಲಿ ಮಡುಗುತ್ತವು?”

“ಹಾಂಗಾಗಿಯೇ ಅದಾ ಹೆತ್ತು ಮೂರು ತಿಂಗಳಾದರು ಬಾಣಂತಿಗೆ ನೆಡವಲೆ ಎಡಿಯದ್ದಪ್ಪದು. ಮಗು ಎಂಗೆ ‘ಕ್ರಾಣಿ ರೋಗ ಬಪ್ಪದು.” “ಸರಿಯಾಗಿ ತಿಂದು ಮಾಡಿದರೆ ಹತ್ತೇ ದಿನಲ್ಲಿ ಬಾಣಂತಿ ಎದ್ದು ಓಡಾಡ್ಳಕ್ಕು”

“ಅದು ಹೇಂಗೆ ಭಾವ’

“ಬಾಣಂತನ ಹೇಳಿದು ಕಾಯಿಲೆ ಅಲ್ಲನ್ನೆ. ಅದು ಸ್ವಾಭಾವಿಕ ಕ್ರಿಯೆ. ಈಗ ದನಂಗೊಕ್ಕೆ ಎಲ್ಲ ಆರು ಆರೈಕೆ ಮಾಡುತ್ತವು. ಕಂಜಿ ಹಾಕಿದ ದಿನವೇ ಗುಡ್ಡಗೆ ಮೇವಲೆ ಹೋವುತ್ತ ಎಲ್ಲೆಯೋ? ಹಾಂಗೆ ಮನುಷ್ಯರಿಂಗೂ”

“ಅಬ್ಬಾ ಎನಗೆ ಹೆತ್ತಾಪ್ಪಾಗ ಪಥ್ಯ ಮಾಡಿ ಮಾಡಿ ಸಾಕಾಯಿದು-ಮಗಂಗೆ ಒಂದು ವರ್ಷ ಅಪ್ಪನ್ನಾರವೂ ಎನಗೆ ಪಥ್ಯವೇ? ನೆನಪಿಸಿಕೊಂಡಳು ಶಾರದೆ.

“ಮದಲೆಲ್ಲಾ ಇತ್ತು ಹಾಂಗೆ, ಅವರ ಅಜ್ಞಾನದಿಂದ ಸುಮಾರು ಬಸರಿಯಕ್ಕೊ, ಬಾಣಂತಿಗೊ, ಮಕ್ಕೊ ಸತ್ತಿದವು.”

“ಅದಪ್ಪು ಭಾವ ಎನಗೂ ಈ ವಿಷಯಲ್ಲಿ ಎಂತದೂ ಗೊಂತಿತ್ತಿಲ್ಲೆ ಇಲ್ಲಿಗೆ ಬಂದ ಮೇಗೆ ರಜಾ ರಜಾ ಗೊಂತಾತು ಅಷ್ಟೆ!”

“ನಿನಗೆ ಎಂತಾರೂ ಕೇಳೇಕಾರೆ ಕೇಳಿಗೋ ಶಾರದೆ ದಾಕ್ಷಿಣ್ಯ ಮಾಡೇಡ ಆತೊ” ಎಂದರು ಡಾ॥ ಕೇಶವ.

ಶಾರದೆಗೆ ಕೇಳಲ್ಲಿಕ್ಕು ಉತ್ಸಾಹವಿತ್ತು ಡಾ॥ಕೇಶವರಿಗೆ ಹೇಳಲಿಕ್ಕು ಉಮೇದಿತ್ತು. ಹಾಗಾಗಿ ಶಾರದೆ ದಿನವೂ ಭಾವನೊಡನೆ, ಅಕ್ಕನೊಡನೆ ಆರೋಗ್ಯದ ವಿಷಯ ಕುರಿತು ಚರ್ಚಿಸುತ್ತಿದ್ದಳು.

ಕಾವೇರಿಗೆ ದಿನತುಂಬಿ ಬಂತು, ನಡೆಯಲು ಕಷ್ಟವಾಗತೊಡಗಿತು.

'ಎನಗೆ ಈಗ ನೆಡವಲೂ ಕಷ್ಟ ಆವುತ್ತು. ಬಹುಶ್ಯಾ 'ತಲೆ ನಿಲ್ಲುತ್ತಾ ಇದ್ದು ಹೇಳಿ ಕಾಣುತ್ತು' ಗಂಡನಿಗೆ ತಿಳಿಸಿದಳು ಕಾವೇರಿ.

"ಒಂದಾರಿ ಡಾ॥ ಅಮೃತ ಕೌರಿಂಗೆ ತೋರ್ಸಿಗೋ ಕಾವೇರಿ 'ಹೆಡ್ ಫಿಕ್ಸ್' ಆದರೆ ಹೆರಿಗೆಗೆ ಹೆಚ್ಚು ದಿನ ಹೆರಿಗೆಗೆ ಹಿಡಿಯನ್ನೆ".

"ಅಪ್ಪು ನಾಳಂಗೆ ಆನೂ ಆಸ್ಪತ್ರೆಗೆ ಬತ್ತೆ ಅಮೃತಂಗೆ ಹೇಳಿಕ್ಕಿ ಒಂದಾರಿ ಬಿ.ಪಿ. ನೆತ್ತರು, ಪರೀಕ್ಷೆಯೂ ಮಾಡ್ಸಿದರೆ ಒಳ್ಳೆದಲ್ಲದೋ?

"ಒಳ್ಳೆದೆ ಅದಕ್ಕೆ ಹೇಳಿ ಮಡುಗುತ್ತೆ. ನೀನೂ ಶಾರದೆಯೂ ಸುಮಾರು ಹತ್ತುಗಂಟೆ ಹೊತ್ತಿಂಗೆ ಬನ್ನಿ ಆತೋ" ಅಂದರು ಡಾ॥ ರು.

"ಆತು ಬತ್ತೆಯೋ" ಅಂದಳು ಕಾವೇರಿ.

"ಹೇಳಿದ ಹಾಗೆ ಮರುದಿವಸ ಕಾವೇರಿಯೂ ಶಾರದೆಯೂ ಆಸ್ಪತ್ರೆಗೆ ಹೋದರು. ಡಾ। ಅಮೃತ ಕೌರ್ ಇವರ ಸಲುವಾಗಿ ಕಾಯುತ್ತಿದ್ದಳು. ಬಂದಕೂಡಲೇ "How are you Kaveri?" ಎಷ್ಟು ದಿವಸವಾಯಿತು ನಿನ್ನನ್ನು ನೋಡದೆ ಎಂದು ಬಿಗಿದಪ್ಪಿದಳು. ಹಾಗೇ ಬಾ ನಿನ್ನನ್ನು ಮೊದಲು ಪರೀಕ್ಷಿಸಿಯೇ ಬೇರೆ ರೋಗಿಗಳನ್ನು ನೋಡುತ್ತೇನೆ ಎಂದು ಪರೀಕ್ಷಾ ಕೋಣೆಗೆ ಕರೆದುಕೊಂಡು ಹೋದಳು.

ಹೊಟ್ಟೆ ಪರೀಕ್ಷೆ, ರಕ್ತ ಪರೀಕ್ಷೆ, ರಕ್ತದ ಓಟದ ಪರೀಕ್ಷೆ ಎಲ್ಲಾ ಮುಗಿಸಿದಳು.

"ಕಾವೇರಿ 'ಹೆಡ್ ಫಿಕ್ಸ್' ಆಗಿದೆ. ಅಂದರೆ ಹೆಚ್ಚು ಕಮ್ಮಿ ಹೆರಿಗೆ ನಾಲ್ಕೈದು ದಿನದಲ್ಲಿ ಆಗಬಹುದು. ಹಿಮೋಗ್ಲೋಬಿನ್ 10 ಗ್ರಾಮ್ ಇದೆ. ಪರವಾಗಿಲ್ಲ. ಬಿಪಿಯೂ ನಾರ್ಮಲ್ ಇದೆ. ನಾಳೆಯೋ ನಾಡ್ತೊ ಒಮ್ಮೆ ಬ್ಲಡ್ ಗ್ರೂಪಿಂಗ್ ಮಾಡ್ಸುವ. ಆಗದೇ' ಅಂದಳು ಅಮೃತಾಕೌರ್.

"ಬ್ಲಡ್ ಗ್ರೂಪಿಂಗ್ ಮಾಡಿ ಆಗಿದೆ ಅಮೃತಾ. ನನ್ನದು ಎಬಿ ಗ್ರೂಪ್, ಡಾಕ್ಟ್ರದ್ದೂ ಎಬಿ ಗ್ರೂಪ್.

"ಪರವಾಗಿಲ್ಲವೇ ಹುಡುಗಿ, ಆಗಲೇ ಮುಗಿಸಿದ್ದಿಯಾ ಎಲ್ಲಾ ಇನ್ನೇನು ಕಂದನನ್ನು ಎತ್ತಿಕೊಳ್ಳುವುದೊಂದು ಬಾಕಿ ಅಲ್ಲವೇ"

"ಹೌದು ಅಮೃತಾ ಚೊಚ್ಚಲ ಹೆರಿಗೆ ಅಲ್ಲವೇ ನನ್ನದು; ಹಾಗೂ ವಯಸ್ಸೂ ಹೆಚ್ಚಾಯಿತಲ್ಲವೇ. ಹೆರಿಗೆ ಸ್ವಲ್ಪ ಕಷ್ಟವೇ ಆಗಬಹುದು ಎಂಬ ಹೆದರಿಕೆ ಅಷ್ಟೇ!

"ಕಾವೇರಿ, ನೀನೂ ಹೆದರುತ್ತೀಯಾ? ನಾವೆಲ್ಲಾ ಇಲ್ಲವೇ. ನನ್ನ ಅಂದಾಜು ಪ್ರಕಾರ ನಿನಗೆ ಮಾಮೂಲು ಹೆರಿಗೆಯೇ ಆಗುತ್ತದೆ. ಬಹಳ ಅಂದರೆ 'ಫಾರ್ ನೆಪ್ಸ್' ಆಗಬಹುದು ಅಷ್ಟೆ."

"ಏನಾದರಾಗಲೀ, ಒಮ್ಮೆ ಹೆರಿಗೆ ಆದರೆ ಸಾಕು ಅಂತಿದ್ದೇನೆ. ಕೂರಲು ನಿಲ್ಲಲೂ ಅಷ್ಟು ಆಯಾಸವಾಗುತ್ತದೆ."

"ಕಷ್ಟ ಪಡಬೇಕು ಹುಡುಗಿ, ಆಮೇಲೆ ಮಗನ ಮುಖವನ್ನು ನೋಡಿದ ಮೇಲೆ ಎಲ್ಲವನ್ನೂ ಮರೆಯುತ್ತೀಯಾ ಅದು ಪ್ರಕೃತಿ ನಿಯಮ ತಾನೆ!

ಕರಾರುವಕ್ಕಾಗಿ ಕಾವೇರಿಗೆ ಪರೀಕ್ಷೆ ನಡೆದ ನಾಲ್ಕನೇ ದಿನಕ್ಕೆ ಹೆರಿಗೆ ನೋವು ಕಾಣಿಸಿತು. ಡಾಕ್ಟ್ರು ಆಸ್ಪತ್ರೆಗೆ ಫೋನು ಮಾಡಿ ಡಾ॥ ಅಮೃತಾರನ್ನು ಅಲ್ಲಿಯೇ ಇರುವಂತೆ ಹೇಳಿದರು. ನೋವು ಕಾಣಿಸಿದ್ದು ಮಧ್ಯಾಹ್ನ 2 ಗಂಟೆಗಾದ ಕಾರಣ ಅಮೃತಾ ಮನೆಗೆ ಹೋಗುವ ಹೊತ್ತೆಂದು ಅವರಿಗೆ ಗೊತ್ತಿತ್ತು. ಕಾವೇರಿಯನ್ನೂ, ಶಾರದೆಯನ್ನೂ ಕಾರಿನಲ್ಲಿ ಕೂರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ದಾರಿಯಲ್ಲೇ ಕಾವೇರಿಗೆ ಒಂದೆರಡು ನೋವು ಕಾಣಿಸಿತು. ಕಷ್ಟದಲ್ಲಿ ಸಹಿಸಿಕೊಂಡರು.

ಡಾ॥ ಅಮೃತಾ ಎಲ್ಲಾ ಸಿದ್ಧತೆಗಳನ್ನು ಮಾಡಿ, ಗೆಳತಿಯ ಬರುವಿಗಾಗಿ ಕಾದುಕೊಂಡಿದ್ದಳು. ಕಾವೇರಿ ಬಂದೊಡನೆ ಹೆರಿಗೆ ಕೋಣೆಗೆ ಕರೆದುಕೊಂಡು ಹೋಗಿ ಒಳ ಪರೀಕ್ಷೆ ಮಾಡಿದಳು.

"ಇನ್ನೂ dilatation 2 fingers ನಲ್ಲಿದೆ ಅಷ್ಟೆ. ಈ ದಿನ ರಾತ್ರಿ ಅಥವಾ ನಾಳೆ ಮುಂಜಾನೆ ಹೆರಿಗೆ ಆಗಬಹುದು" ಅಂದಳು ಅಮೃತಾ" "ಅಷ್ಟು ಹೊತ್ತೇ? ಈ ನೋವನ್ನು ಸಹಿಸಿಕೊಳ್ಳಬೇಕೇ? ಒಂದೊಂದೆ ನೋವು ನನ್ನ ಪ್ರಾಣ ಹಿಂಡುವ ಹಾಗೆ ಬರುತ್ತಾ ಇದೆ. ಸಹಿಸಲಿಕ್ಕೇ ಆಗುವುದಿಲ್ಲ". ಕಣ್ಣಿನಲ್ಲಿ ನೀರು ತುಂಬಿತ್ತು ಕಾವೇರಿಗೆ. "ಹೌದು ಮತ್ತೆ ಮಗನನ್ನು ಪಡೆಯಬೇಕಾದರೆ ಸಾಕಷ್ಟು ನೋವು ಅನುಭವಿಸಬೇಕು. ನೀನೂ ಪ್ರಸೂತಿ ತಜ್ಞೆಯಲ್ಲವೇ ಗೊತ್ತಿಲ್ಲವೇ? "ಗೊತ್ತಿದೆ ಅಮೃತ, ಹೇಳಿ ಕೇಳಿ ಗೊತ್ತಿದೆಯಲ್ಲವೇ, ಅನುಭವಿಸಿ ಗೊತ್ತಿಲ್ಲವಲ್ಲಾ?" ಅಷ್ಟರಲ್ಲಿ ಮತ್ತೆರಡು

ನೋವು ಬಂತು ಕಾವೇರಿ" ಅಯ್ಯೋ ಎಂದು ಚೀರಿದಳು. ಮಗುವನ್ನು ನೋಡಿದೊಡನೆ ಎಲ್ಲವನ್ನೂ ಮರೆಯುತ್ತೀಯಾ. ಈಗ-ಸ್ವಲ್ಪ ಅನುಭವಿಸು" ಕಾವೇರಿ" ಅಂದಳು ಡಾ। ಅಮೃತಾ.

"ನಿನಗೆ ಹೇಳುವುದಕ್ಕೆ ಸುಲಭ ಅಮೃತಾ" ಈ ನೋವು ನೀನು ಅನುಭವಿಸಬೇಕಿತ್ತು ಆಗ ತಿಳಿಯುತ್ತದೆ ನಿನಗೆ"

"ನನಗೆ ಆ ಪುಣ್ಯ ಇಲ್ಲ ಕಾವೇರಿ"

"ನಾನೂ ನಿನ್ನಂತೆ ಬಾಲ ವಿಧವೆಯಾಗಿದ್ದೆ ಆದರೆ ಡಾಕ್ಟ್ರ ಕೇಶವನಂತೆ ನನ್ನನ್ನು ವರಿಸಲೂ ಯಾರೂ ಸಿದ್ಧರಿರಲಿಲ್ಲ. "ನೀನು ಪುಣ್ಯವಂತೆ ಕಾವೇರಿ"

ನನಗೀ ಸಂಗತಿ ಗೊತ್ತಿರಲಿಲ್ಲ ಅಮೃತಾ,...

ನೀನ್ಯಾಕೆ ಮೊದಲೇ ಹೇಳಲಿಲ ನನಗೆ?"

"ನೀನು ಕೇಳಲಿಲ್ಲ ನಾನು ಹೇಳಲಿಲ್ಲ ಅಷ್ಟೆ, ನನ್ನ ಮದುವೆಗೆ ಸಾಕಷ್ಟು ವರದಕ್ಷಿಣೆ ಸುರಿದು ನಮ್ಮ ಅಪ್ಪ ಅಮ್ಮ ಕೊಟ್ಟಿದ್ದರು. ಇದ್ದ ಆಸ್ತಿಯನ್ನೆಲ್ಲಾ ಮಾರಿದ್ದರು. ಎರಡೇ ವರ್ಷದಲ್ಲಿ ನನ್ನ ಗಂಡನಾದವನು ಅಪಘಾತದಲ್ಲಿ ತೀರಿಕೊಂಡ. ನನಗೆ ವಿಧವಾ ಪಟ್ಟ ಬಂತು. ಅಪ್ಪ ಅಮ್ಮನಿಗೆ ನಾನೊಬ್ಬಳೇ ಮಗಳು. ಹಾಗಾಗಿ ನನ್ನನ್ನು ಮುಂದಕ್ಕೆ ಓದಿಸಲು ಪಣತೊಟ್ಟರು. ನಾನಿಂದು ಡಾಕ್ಟ್ರಾಗಿ ಬಂದೆ" ಡಾ। ಅಮೃತಾ ಒಂದೆರಡು ನಿಮಿಷ ಮೌನಳಾದಳು.

"ಸಾರಿ ಅಮೃತಾ ನಿನ್ನನ್ನು ನಾನು ಕೆಣಕಿದೆ. ಬೇಜಾರ ಮಾಡಿಕೊಳ್ಳಬೇಡ"

"ಇಲ್ಲ ಕಾವೇರಿ, ನೀನು ಕೇಳಿದ್ದು ಒಳ್ಳೆದೇ ಆಯಿತು. ನನ್ನ ಮನಸ್ಸೂ ಹಗುರವಾಯಿತು"

" ಮುಂದೆ ಮದುವೆಯಾಗುತ್ತೀಯೋ?"

"ಇಲ್ಲ ಕಾವೇರಿ ನನ್ನ ಮನಸ್ಸು ಆಗಲೇ ಮುದುಡಿ ಹೋಗಿದೆ. ಏನಿದ್ದರೂ ನಾನು ರೋಗಿಗಳ ಸೇವೆಯಲ್ಲಿ ಜೀವನ ಸವೆಸುತ್ತೇನೆ.

ಕಾವೇರಿಗೆ ನೋವು ತಿಂದು ತಿಂದು ಸಾಕಾಯಿತು. ಆಗಾಗ ಅಮೃತಾಳನ್ನು ಕರೆದು ಈಗೊಮ್ಮೆ ನೋಡುಬಾ ಎಂದು ಪೀಡಿಸತೊಡಾಗಿದಳು. ಅಮೃತಾ ಆಗಾಗ ನೋಡುತ್ತಿದ್ದಳು. ಇನ್ನು ನಾಲ್ಕಾರು ತಾಸು ಬೇಕೆಂದೇ ಅವಳ ಉತ್ತರ.

" ಅಯ್ಯೋ ನನ್ನಿಂದ ತಡೆಯಲಿಕ್ಕಾಗುತ್ತಿಲ್ಲ ಅಮೃತಾ ಬೇಕಿದ್ದರೆ ಸಿಸೇರಿಯನ್ ಮಾಡು. ಒಮ್ಮೆ ಮುಗಿಯಲಿ ಈ ಕಾಟ" ಎಂದಳು ಒಮ್ಮೆ ಕಾವೇರಿ, ನೀನು ಡಾಕ್ಟ್ರಾಗಿ ಹೀಗೆ ಗೋಳಾಡಿಸುತ್ತಿಯಾ? ನಿನಗೆ ನಾರ್ಮಲ್ ಡೆಲವರಿಯೇ ಆಗುವುದು ಸ್ವಲ್ಪ ಸಹಿಸಿಕೋ. ಏನೂ ಆಗುವುದಿಲ್ಲ." ಎಂದು ನಿಷ್ಟುರವಾಗಿಯೇ ಹೇಳಿದಳು ಅಮೃತಾ

'ಅಕ್ಕ' ನೋವು ತಿನ್ನುವುದನ್ನು ನೋಡಿ ಶಾರದೆ ಕಂಗಾಲಾಗಿದ್ದಳು.

"ಡಾಕ್ಟ್ರೇ ಅಕ್ಕನಿಗೇನೂ ಆಗುವುದಿಲ್ಲ ಅಲ್ಲವೇ?"

"ಏನೂ ಆಗುವುದಿಲ್ಲ ಶಾರದೆ. ಮಾಮೂಲ ಹೆರಿಗೆನೇ ಆಗುತ್ತದೆ. ಚೊಚ್ಚಲು ಹೆರಿಗೆ ಸ್ವಲ್ಪ ಸಮಯ ಹೆಚ್ಚು ತೆಗೆದುಕೊಳ್ಳುತ್ತದೆ ಅಷ್ಟೆ. ಅದು ಅವಳಿಗೂ ಗೊತ್ತಿದೆ. ಸುಮ್ಮಗೇ ಕಿರುಚುತ್ತಾಳೆ ಕಿರುಚಲಿ. ನೀನು ಚಿಂತೆ ಮಾಡಬೇಡ"

"ಆಯಿತು ಡಾಕ್ಟ್ರೆ ನನಗೆ ನಿಮ್ಮ ಮೇಲೆ ಭರವಸೆ ಇದೆ" ಎಂದಳು ಶಾರದೆ. ಡಾ। ಕೇಶವ ಆಗಾಗ ಬಂದು ಮಡದಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಡಾ। ಅಮೃತಾಳೊಡನೆ ಚರ್ಚಿಸುತ್ತಿದ್ದರು. ಕಾವೇರಿಗೆ ಧೈರ್ಯ ಹೇಳಿ ಸಮಾಧಾನ ಮಾಡುತ್ತಿದ್ದರು.

ಅಂತೂ ಅದೇ ದಿನ ರಾತ್ರಿ 12-30 ಗಂಟೆಗೆ ಕಾವೇರಿ ಹೆರಿಗೆಯಾಯಿತು. ಗಂಡು ಮಗುವಿನ ತಾಯಿಯಾದಳು. ಹೆಚ್ಚಿನ ಯಾವ ತೊಂದರೆಯೂ ಆಗಲಿಲ. ಸ್ವಲ್ಪ ರಕ್ತ ಸ್ರಾವ ಹೆಚ್ಚಾಯಿತೆಂದು ಒಂದು ಬಾಟ್ಲಿ ರಕ್ತ ಕೊಡಬೇಕಾಯಿತು ಅಷ್ಟೆ.

ಡಾ। ಕೇಶವಗೆ ಸಂತೋಷವಾಯಿತು. ಶಾರದೆಯ ಮುಖದಲ್ಲಿ ಸಮಾಧಾನ ಕಾಣಿಸಿತು. ಇಡೀ ಆಸ್ಪತ್ರೆಯ ಸಿಬ್ಬಂದಿ ವರ್ಗ ಡಾ। ಕೇಶವರನ್ನು ಅಭಿನಂದಿಸಿತು.

ನರ್ಸೊಬ್ಬಳು ಮಗುವಿಗೆ ಸ್ನಾನ ಮಾಡಿಸಿ, ಬಿಳಿ ಬಟ್ಟೆಯಲ್ಲಿ ಸುತ್ತಿಟ್ಟು ಕಾವೇರಿಯ ಮಗ್ಗುಲಲ್ಲಿ ಮಲಗಿಸಿದಳು. ತನ್ನ ಪಕ್ಕದಲ್ಲಿದ್ದ ಮಾಂಸ ಮುದ್ದೆಯೊಂದು ಕೈಕಾಲು ಅಲ್ಲಾಡಿಸಿ, ತನ್ನ ಮೈಗೆ ಸೋಕುತ್ತಿರುವುದು ಅವಳಿಗೆ ಅಪ್ಯಾಯ ಆನಂದವನ್ನು ಕೊಟ್ಟಿತು, ಹೆರಿಗೆ ನೋವು, ಪೂರ್ತಿ ಮರೆತೇಹೋಯಿತು, ತನ್ನ ಕೈಯಲ್ಲಿ ಕೈ ಹಿಡಿದು ಮಗುವಿನ " ಇ ಬೆರಳುಗೋಳೊಡನೆ ಆಡತೊಡಗಿದಳು; ಕ್ಷಣಗಣನೆ ಮಾಡುತ್ತಿದ್ದ ಡಾ। ಕೇಶವ ಕಾವೇರಿ ಬಳಿಗೆ ಬಂದರು. ಅವಳ ಹಣೆಯ ಮೇಲೆ ಹಾರಾಡುತ್ತಿರುವ ಕೂದಲುಗಳನ್ನು ಹಿಂದಕ್ಕೆ ಸರಿಸಿದರು. ಹಣೆಯನ್ನೊಮ್ಮೆ ನೇವರಿಸಿದರು."

"ತುಂಬಾ ಕಷ್ಟ ಆತೋ ಕಾವೇರಿ?" ಪ್ರೀತಿಯಿಂದ ಕೇಳಿದರು.

"ಇಲ್ಲೆ ಹೆಚ್ಚು ಕಷ್ಟ ಆಯಿದಿಲ್ಲೆ. ಎಲ್ಲ ಸಿಸೇರಿಯನ್ನೋ ಫಾರಸೆವ್ರೋ ಆವುತ್ತೊ ಹೇಳಿ ಹೆದರಿದೆ ಅಷ್ಟೆ.

"ನೀನು ಮಗನ ನೋಡಿದ್ದೆಯೋ ಕಾವೇರಿ? ಒಳ್ಳೆ ಸಾಂಡೋ ಇದ್ದ ಹಾಂಗಿದ್ದ. ಈಗಳೇ 6 ಪೌಂಡು ಇದ್ದ. ತುಂಬಾ ಆರೋಗ್ಯವಂತ ಶಿಶು. ನವಗೆ ಒಬ್ಬನೇ ಮಗ ಸಾಕು ಆತೋ" ಸಮಾಧಾನ ಮಾಡಿದರು ಡಾ॥ ರು.

"ಮಾವಂಗೆ ಸಮಾಚಾರ ತಿಳುಶಿದ್ದಿರೋ? ಎಂತ ಹೇಳಿದವು?"

"ಮೊದಲು ಕಾವೇರಿ ಹೇಂಗಿದ್ದು ಹೇಳು ಹೇಳಿದವು ಅಪ್ಪ. 'ಮಾಣಿ'ಯ ಮತ್ತೆ ವಿಚಾರಿಸಿದವು. ಮಾಣಿ ಹುಟ್ಟಿದ ಗಳಿಗೆ. ನಕ್ಷತ್ರ ದಿನ ಎಲ್ಲಾ ಬರಕ್ಕೊಂಡಿದ್ದವು. ನಕ್ಷತ್ರ ಭರಣಿ ಅಡ. ಧರಣಿ ಆಳುಗಡ. ಹುಟ್ಟಿದ ಗಳಿಗೆ ಅಬ್ಬೆ ಅಪ್ಪಂಗೆ ಭಾರೀ ಒಳ್ಳೆದಡಾ. ಎಲ್ಲಾ ಗುಣಿಸಿ ಎಣಿಸಿ ಆಯಿದು ಅಪ್ಪಂಗೆ ಪುಳ್ಳಿ ಹುಟ್ಟಿದ ಸಂತೋಷದಲ್ಲಿ ಕುಣಿವದೊಂದು ಬಾಕಿ ಅಪ್ಪ. ಅಷ್ಟು ಕುಷಿಲಿ ಇದ್ದವು. ಪುಳ್ಳಿಯ ನೋಡ್ಳೆ ಉದಿಯಪ್ಪಾಗ ಬಕ್ಕು ಇತ್ಲಾಗಿ ಆತೋ ಆನಿನ್ನು ಮನೆಗೆ ಹೋವುತ್ತೆ ರಜಾ ವಿಶ್ರಾಂತಿ ತೆಕ್ಕೊಳ್ಳೆ ಶಾರದೆಯ ಕೈಲಿ ನಿನಗೆ ಕಾಫಿ ತಿಂಡಿ ಕಳುಸುತ್ತೆ"

"ಆತು ನಿಂಗೊ ಹೋಗಿ, ಎನಗಿಲ್ಲಿ ಯಾವ ತೊಂದರೆಯೂ ಇಲ್ಲೆ. ಸ್ಟಾಫ್‌ಗೊ ಆಗಾಗೆ ವಿಚಾರ್ಸೆಂಡು ಹೋವುತ್ತವು.

"ಹೇಳಿದಂತೆ ಶಾರದೆ ಮನೆಗೆ ಹೋಗಿ ಅಕ್ಕನಿಗೆ ಕಾಫಿ, ಬ್ರೆಡ್ ತೆಗೆದುಕೊಂಡು ಬಂದಳು. ಅಕ್ಕನಿಗೆ ಉಡಲು ಸೀರೆ, ಮಗುವಿಗೆ ಬೇಕಾದ ಬಟ್ಟೆ ಬರೆ ಇತ್ಯಾದಿಗಳನ್ನೆಲ್ಲಾ ತಂದಿದ್ದಳು.

"ಅಕ್ಕನಿಗೆ ಕಾಫಿ ಬ್ರೆಡ್ ಕೊಟ್ಟಳು ಶಾರದೆ. ಮಗುವನ್ನೆತ್ತಿ ತನ್ನ ತೊಡೆಯ ಮೇಲೆ ಹಾಕಿಕೊಂಡಳು, ಹಣೆಯನ್ನೊಮ್ಮೆ ನೇವರಿಸಿದಳು.

"ನಿನ್ನ ಮಗ ಥೇಟು "ಅಜ್ಜನ ಪಡಿಯಚ್ಚು ನೋಡಕ್ಕಾ" ಅಂದಳು ಶಾರದೆ.

"ಅಷ್ಟೆ. ಒಳ್ಳೆದಾತು. ಮಾವಂಗೂ ಖುಷಿ ಅಕ್ಕು"

"ನಿನ್ನ ಮಾವನೋರು ನೀನು ಆಸ್ಪತ್ರೆಗೆ ಬಂದಕೂಡ್ಳೆ, ಈಡುಕಾಯಿ, ದೇವರ ದೀಪ ಹಚ್ಚಿ ಮಡುಗಿದ್ದವು. ಮುಡಿಪ್ಪಿಂಗೆ ಪೈಸವೂ ಹಾಕಿದ್ದವು. ಅವಕ್ಕೆ ನೀನು ಹೇಳಿರೆ ಎಷ್ಟು ಜೀವ ಹೇಳಿ ಅದರಲ್ಲೇ ಗೊಂತಾವುತ್ತು.

"ಅಪ್ಪು ಶಾರದೆ, ಅವಕ್ಕೆ ಎನ್ನ ಮೇಗೆ ತುಂಬಾ ಪ್ರೀತಿ ಇದ್ದು. ಸ್ವಂತ ಮಗಳ ಹಾಂಗೆ ನೋಡುತ್ತವು; ಅವರ ಹಾಂಗಿದ್ದ ಮಾವ ಸಿಕ್ಕಿದ್ದು ಎನ್ನ ಪುಣ್ಯ.

"ಅಕ್ಕಾ ಮಾಣಿಗೆ ಹೊಟ್ಟೆಗೆ ಎಂತರ ಕೊಡುದು. ಹಶು ಆವುತ್ತು ಹೇಳಿ ಕಾಣುತ್ತು ಒಂದೇ ಸಮನೆ 'ಉಂಗ್ಗೀ' ಹೇಳಿ ಕಿರುಚ್ಚು ನೋಡು"

"ಎಂತದೂ ಬೇಡ ಶಾರದೆ; ಒಂದು ರಜಾ ಬೆಶಿನೀರು ತಣ್ಣಂಗೆ ಮಾಡಿ ಚಮಚಲ್ಲಿ ಕುಡಿಸು ಸಾಕು.

"ಜೇನೋ, ಹರಳೆಣ್ಣೆಯನ್ನೋ ನಕ್ಸೇಡದೋ ಅಕ್ಕಾ"

"ಏನೂ ಬೇಡ ಶಾರದೆ, ಇನ್ನೆರಡು ಗಂಟೆ ಆದರೆ ಆನು ಎದ್ದು ಕೂದುಮಲೆ ಚೀಪಲೆ ಬಿಡುವೆ"

"ಹೆತ್ತ ಕೂಡ್ಲೆ ಅಬ್ಬೆಯ ಹಾಲು ಮಗುವಿಂಗೆ ಕೊಡ್ಳಕ್ಕೊ. ಅದರ ಹಿಂಡಿ ಇಡಿಕ್ಕೇಡದೊ. ಅದು ಅಂಟು ಅಂಟು ಇರದೋ"

"ಆ ಅಂಟು ಹಾಲು ಇಡುಕ್ಕೆಲಾಗ ಶಾರದೆ. ಅದು ಮಕ್ಕೊಗೆ ಅಮೃತ ಇದ್ದ ಹಾಂಗೆ. ಅದರ ಕುಡಿಶಿರೆ ಮಕ್ಕೊಗೆ ತುಂಬಾ ಒಳ್ಳೆದು. ಯಾವ ಕಾಯಿಲೆಯೂ ಬಾರದ್ದ ಹಾಂಗೆ ಆವುತ್ತು".

"ಅಪ್ಪೊ ಇದೆಲ್ಲಾ ಎನಗೆ ರಜವೂ ಗೊಂತಿತ್ತಿಲ್ಲೆ ಅಕ್ಕಾ. ಆನು ಹಿರಿಯೋರು ಹೇಳಿದ ಹಾಂಗೆ ಮಾಡಿದ್ದೆ ಅಷ್ಟೆ. ಎರಡು ದಿನ ಮಾಣಿಗೆ ಮಲೆ ಚೀಪಲೇ ಬಿಟ್ಟಿದ್ದವಿಲ್ಲೆ. ಮೈಯ್ಯಿಂದ ಎನಗೆ ನೆತ್ತರು ಹೋಪಾಗ ಏಳ್ಸಿ ನಿಲ್ಲಿಸಿದ್ದವು. ನೆತ್ತರು 'ದಳಾನೆ' ಕಾಲಿಂಗೆಲ್ಲಾ ಅರುದತ್ತು. ಎನಗೆ ಕಣ್ಣುಕಸ್ತಲೆ ಬಂದು ಬಿದ್ದೆ. ಮೈಂದ ನೆತ್ತರು ಹೋದಷ್ಟು ಒಳ್ಳೆದು ಶರೀರದ ನಂಜೆಲ್ಲಾ ಹೋವುತ್ತು ಹೇಳಿದ್ದವು" ಜ್ಞಾಪಿಸಿಕೊಂಡಳು ಶಾರದೆ.

"ತಲೆ ಬುರುಡೆ ಹೀಂಗೇ ಹೇಳಿ ಹೇಳಿ ಸುಮಾರು ಬಾಣಂತಿಗಳ, ಮಕ್ಕಳ ಕೊಂದು ತಿಂದಿದವು ನಮ್ಮ ಹಿರಿಯೋರು"

"ಅದು ಹೇಂಗಕ್ಕಾ"

"ಬಾಣಂತಿಯ ಮೈಂದ ರಜಾ ನೆತ್ತರು ಹೋದರೆ ತೊಂದರೆ ಇಲ್ಲೆ. ತುಂಬಾ ಹೋದರೆ ಶರೀರಲ್ಲಿ ನೆತ್ತರು ಕಮ್ಮಿ ಆಗಿ, ಮೈಎಲ್ಲಾ ಬೆಳ್ಚಿ, 'ಬೆಳಿಕಾಮಾಲೆ' ರೋಗಲ್ಲಿ ಎಷ್ಟೋ ಜನ ಸಾಯುತ್ತವು ಶಾರದೆ.

"ಅಪ್ಪೊ, ಅದಕ್ಕೆ ಎಂತ ಮಾಡೇಕು?"

"ಈಗ ಎನಗೆ ಮಾಡಿದ್ದವಿಲ್ಲೆಯೋ ಹಾಂಗೆ ಮಾಡೇಕು. ನೆತ್ತರು ಹೋಪದು ರಜಾ ಹೆಚ್ಚು ಹೇಳಿ ಕಂಡ ಕೂಡ್ಲೆ, ಬಾಣಂತಿಯ ಒಂದು ಕಾಲಿನ ನೆಗ್ಗಿ ಇನ್ನೊಂದು ಕಾಲಿನ ಮೇಗೆ ಹಾಕೇಕು, ಹಾಂಗೇ ಅದರ ಮನುಗುಲೆ ಬಿಡೇಕು. ನೆತ್ತರು ಕಟ್ಟೆ ಹೇಳಿ ಇಂಜೆಕ್ಷನ್ ಕೊಡಬೇಕು. ಅಗತ್ಯ ಬಿದ್ದರೆ ಬಾಟ್ಲಿಂದ ನೆತ್ತರನ್ನೂ ಕೊಡೆಕಾವುತ್ತು" ಹಾಂಗದ ಎನಗೆ ಒಂದು ಬಾಟ್ಲಿ ನೆತ್ತರು ಕೊಟ್ಟು ಮನಶಿದ್ದು.

"ನಿನಗೆ ಮೀಯಾಣ?"

"ನಾಳಂಗೆ ಆತಷ್ಟೆ. ಈಗ ಒಂದಾರಿ ಎಲ್ಲಾ ವಸ್ತ್ರಲ್ಲಿ ಒರೆಸಿ ಸ್ವಚ್ಛ ಮಾಡಿದ್ದವದಾ ನಾಳಂಗೆ ಎದ್ದು ಮೀಯೇಕಷ್ಟೆ"

"ಮನೇಲಿ ಆಗಿದ್ದರೆ ನಿನ್ನ ಎಳಕ್ಕೊಂಡು ಹೋಗಿ ಒಂದು ಹಂಡೆ ಬೆಶಿನೀರು ಕುದುಶಿ, ಬೆಶಿ ಬೆಶಿಯೇ ನಿನ್ನ ಮೀಗೆ ಹಾಕುತ್ತಿತ್ತವು. ಮನೆ ಒಳ ಕಸ್ತಲಕೋಣೆಲಿ ಕಂಬಳಿ ಹೊದಿಸಿ ಮನುಗುಸುತ್ತಿತ್ತವು. ಮೈ ಒಳ್ಳೆತ ಬೆಗರೇಕಾಡ"

"ಹಾಂಗೇಂತದೂ ಇಲ್ಲೆ ಶಾರದೆ; ಒಳ್ಳೆ ಗಾಳಿ ಬೆಳಕು ಇಪ್ಪ ಜಾಗೇಲಿ, ಮನುಶೇಕು, ಬಾಣಂತಿಗೆ ಒಳ್ಳೆ ಆಹಾರ ಕೊಡೆ ಕು-ಹಾಂಗೀದ್ದರೆ ಶಿಶುವಿಂಗೆ ಕುಡಿವಲೆ ಮಲೆಹಾಲು ಬೇಕಾದಷ್ಟು ಆವುತ್ತು. ಬಾಣಂತಿ ಹತ್ತು ದಿನಂದೊಳ ಎದ್ದು ನಡವಲಾವುತ್ತು".

"ಈಗ ನಿನ್ನ ಬಾಣಂತನ ಹೇಳಿರೆ ಅಷ್ಟೆಯೋ ಅಕ್ಕಾ"

"ಅಷ್ಟೆ ಮತ್ತೆ. ನೀನೇ ನೋಡೂ ಆನು ಹೇಂಗೆ ಎದ್ದು ಓಡಾಡುತ್ತೆ ಹೇಳಿ"

"ಒಳ್ಳೆ ತರಕಾರಿ, ಹಣ್ಣು ಹಾಲು ಕೊಡು"

"ಅಂಬಾಗ ಯಾವ ಯಾವ ನೆಟ್ಟಿಕಾಯಿ ಅಕ್ಕು ಇಂದಿಂದಲೇ ಬೇಶಿ ಕೊಡು. ಉಂಬಲೆ ಸುರುಮಾಡುತ್ತೆ"

ಶಾರದೆಗೆ ಎಲ್ಲವೂ ಹೊಸ ಸಂಗತಿಗಳೇ ಮಗುವಿಗೆ 'ಮರಿ'ಗೆಯಲ್ಲಿ ಮಲಗಿಸಿ ಸ್ನಾನವಿಲ್ಲ. ಕಾವೇರಿ ತಾನೇ ಮಿಂದು ಬರುತ್ತಿದ್ದಳು, ಮಗುವಿಗೆ ಒಂದೆರಡು ತಂಬಿಗೆ ಉಗುರು ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ಪೌಡರ್ ಹಾಕಿ ಹೊಟ್ಟೆ ತುಂಬಾ ಎದೆಹಾಲು ಕೊಟ್ಟು, ಬೆಚ್ಚಗಿನ ಬಟ್ಟೆಯೊಳಗೆ ಸುತ್ತಿ ಮಲಗಿಸುತ್ತಿದ್ದಳು.

ತಾನು ದಿನ ಸ್ನಾನ ಮಾಡಿಕೊಂಡು ಸ್ವಚ್ಛ ಬಟ್ಟೆಗಳನ್ನು ಧರಿಸುತ್ತಿದ್ದಳು. ಹೊಟ್ಟೆ ತುಂಬಾ ಊಟ ಮಾಡಿ ಮೇಲಿಷ್ಟು ಹಾಲು ಹಣ್ಣು ಸೇವಿಸುತ್ತಿದ್ದಳು. ಅಕ್ಕನಿಗೆ ಸ್ವಲ್ಪವೂ ಆಯಾಸವೆಂಬುದಿರಲಿಲ್ಲ. ಮಗು 3–4 ತಾಸು ಬೆಚ್ಚಗೆ ಹಾಯಾಗಿ ನಿದ್ರಿಸುತ್ತಿತ್ತು. ಅಕ್ಕ ಬಾಣಂತಿ ಅಂತಲೇ ಅನಿಸುತ್ತಿರಲಿಲ್ಲ. ಅವಳ ಬಳಿಗೆ ಹೋದಾಗ ಹಾಣಂತಿ ಗಬ್ಬು ವಾಸನೆಯೂ ಬಡಿಯುತ್ತಿರಲಿಲ್ಲ.

ಶಂಕರಭಟ್ಟರಿಗೆ ಮೊಮ್ಮಗನನ್ನು ನೋಡಿ ಪರಮಾನಂದವಾಯಿತು.

"ಹನ್ನೊಂದನೇ ದಿನಕ್ಕೆ 'ಶುದ್ಧ' ಆಗಲಿ ಆನು ಅವನ ಎನ್ನ ಹತ್ರವೇ ಮನುಷ್ಯೊಂಬೆ ಅಂದರು ಉತ್ಸಾಹದಲ್ಲಿ"

"ಅಂಬಾಗ ಅವಂಗೆ ಹಾಲು ಕುಡಿವಲೆ ಎಂತ ಮಾಡುದು?" ಶಾರದೆಯ ಪ್ರಶ್ನೆ.

"ನೀನು ಕಿಲಾಡಿ ಶಾರದೆ; ಹಾಲು ಕುಡುಶುದು ಅವನ ಅಬ್ಬೆ; ಕುಡಿವಲಪ್ಪಾಗ ಗಲಾಟೆ ಸುರು ಮಾಡುಗು; ಅಂಬಾಗ ಅವನ ಅಬ್ಬೆ ಕೈಲಿ ಕೊಟ್ಟರಾತು. ಅಲ್ಲದೋ ಕಾವೇರಿ.

"ಅಪ್ಪು ಮಾವ. ಶಾರದೆಗೆ ಬೇರೆ ಕೆಲಸ ಇಲ್ಲೆ. ನಿಂಗಳ ಬೇಕು ಹೇಳಿ ಕೆಣಕ್ಕಿದ್ದು"

"ಎನಗೆ ಗೊಂತಿದ್ದು. ರಜಾ ತಮಾಷೆ ಸ್ವಭಾವದ್ದು ಹೇಳಿ. ಆದರೂ ರಜವದೂ ಕೊರತ್ತೆ ಆಗದ್ದ ಹಾಂಗೆ ಎನ್ನ ನೋಡ್ಕಂಡಿದು; ನಿನ್ನಂದಲೂ ಒಂದು ಕೈ ಬಲವೇ ಅದು ಒಳ್ಳೆ ಕೂಸು"

"ಹಾಂಗಾರೆ ನಿಂಗೊಗೆಂಗದೂ ತೊಂದರೆ ಆಯಿದಿಲ್ಲೆನ್ನೆ?"

"ಇಲ್ಲೆಪ್ಪ ಸುಮ್ಮನೆ ಹೇಳಿರೆ ಬಾಯಲಿ ಹುಳು ಬೀಳುಗು"

"ಎನಗೂ ಸಂತೋಷ ಆತು ಮಾವ. ಅದರ ಹಾಂಗೆ ಸುಧಾರ್ಸಲೆ ಎನ್ನ ಅಬ್ಬೆ ಬಂದಿದ್ರೂ ಆವುತ್ತಿಲ್ಲೆ"

"ಅಂತೂ ಮಾವನ ಸರ್ಟಿಫಿಕೇಟು ಒಳ್ಳೆದು ಸಿಕ್ಕಿದ್ದು ಎನಗೆ. ನಿಂಗೊ ಅದರ ಎನಗೆ ಬರದು ಕೊಡಿ. ಆನು ಊರಿಂಗೆ ಹೋಪಾಗ ತೆಕ್ಕೊಂಡು ಹೋಗಿ ಕನ್ನಟಿ ಹಾಕ್ಸಿ ಗೋಡೆಗೆ ನೇಲ್ಸುತ್ತೆ" ನಗುತ್ತಾ ಅಂದಳು ಶಾರದೆ.

"ಅದಾ ಮತ್ತೆ ಕೆಣಕ್ಕಲೆ ಸುರು ಮಾಡಿತ್ತದಾ" ನಗುತ್ತಾ ಕೈ ಎತ್ತಿದ್ದರು ಶಂಕರಭಟ್ಟರು.

"ಮತ್ತೆ ಎನಗಿನ್ನು ವಿದ್ಯೆ ಕಲ್ತು ಅಕ್ಕನ ಹಾಂಗೆ ಡಿಗ್ರಿಗಳ ಹಾಕಲಿದ್ದೊ" ಕಡೇಂಗೆ ಇದಾದರೂ ಒಂದು ಸರ್ಟಿಫಿಕೇಟು ಸಿಕ್ಕಿತ್ತನ್ನೇ ಹೇಳಿ ಖುಷಿಲಿ ಹೇಳಿದ್ದು ಆನು"

"ಇಲ್ಲೆ ಶಾರದೆ, ನಿನಗೊಂದು ಮಡುಗದ್ದೆ ಆಗ"

"ಗುದ್ದಿ ಬೆನ್ನಿಗೊಂದು; ಇಲ್ಲಿ ಎನಗೆ ಹೇಳುವವು ಕೇಳುವವು ಆರಿದ್ದವೋ"

"ನಿನ್ನ ಹತ್ರೆ ಮಾತಾಡಿ ಪೂರೈಸ" ಆನಿನ್ನು ಮನೆಗೆ ಹೋವುತ್ತೆ" ಎಂದು ಮನೆ ಕಡೆಗೆ ನಡೆದರು ಶಂಕರಭಟ್ಟರು.

"ಮಾವಂಗೆ ತುಂಬಾ ಖುಷಿ ಆಯಿದು ಅಕ್ಕ. ಅವಕ್ಕೆ ಕೆಣಕಿದಷ್ಟು ಸಂತೋಷ ಆವುತ್ತು. ಮನೇಲಿಯೂ ಅದು ಇದು ಹೇಳಿ ಮಾತಾಡ್ಕೊಂಡೇ ಇರುತ್ತವು.

"ಅಪ್ಪು ಶಾರದೆ. ಅವಕ್ಕೂ ಹೊತ್ತು ಹೋಯೇಕನ್ನೆ. ಅವರೊಟ್ಟಿಂಗೆ ಮಾತಾಡ್ಲೆ ಬೇರೆ ಆರಿದ್ದವು. ಹೆರಾಣ ಭಾಷೆ 'ಹಿಂದಿ' ಅವಕ್ಕೆ ಬತ್ತಿಲ್ಲೆನ್ನೆ.

"ಎನಗೂ ಒಳ್ಳೆದಾವುತ್ತು ಅಕ್ಕಾ" ಹೊತ್ತು ಲಾಯಕ್ಕಿಲ್ಲಿ ಹೋವುತ್ತು"

ಊರಿಗೆ ರಘುರಾಮನ ಹೆಸರಿಗೆ 'ಟೆಲಿಗ್ರಾಂ' ಕಳುಹಿಸಿದ್ದರು. ಡಾ। ಕೇಶವ "ಕಾವೇರಿಯ ಹೆರಿಗೆ ಆಗಿದೆ ಗಂಡುಮಗು" ಎಂದು ರಘುರಾಮ, ತನ್ನ ತಂದೆಗೂ ತಾಯಿಗೂ ಮೊದಲು ತಿಳಿಸಿಯಾಯ್ತು. ಆನಂತರ ಮಗ ಶಂಭುಗೂ ತಿಳಿಸಿದ 'ಕಾಶಿಯಲ್ಲಿ ನಿನಗೊಬ್ಬ ತಮ್ಮ ಹುಟ್ಟಿದ್ದ" ಎಂದು ರಘುರಾಮನ ತಂದೆ ಕೂಡಲೇ ಒಂದು ತೆಂಗು ಸುಲಿದು ಒಡೆದು ಹೋಳು ತೆಗೆದರು ಸಕ್ಕರೆಯೊಡನೆ ಮನೆ ಮಂದಿಗೆಲ್ಲಾ ಹಂಚಿದರು.

"ಮಾಣಿ, ನಾಳಂಗೆ ಉದಿಯಪ್ಪಾಗಿ ಅತ್ತೆ ಮಾವನಲ್ಲಿಗೆ ಹೋಗಿ ಸಕ್ಕರೆ ಕಾಯಿ ಕೊಟ್ಟಿಕ್ಕಿ ಬಾ ಆತೋ" ಎಂದರು.

'ಆತಪ್ಪ' ಬೇಕಾದರೆ ಇಂದೇ ಹೋಗಿ ಹೇಳಿಕ್ಕಿ ಬಪ್ಪೆ"

"ಅಮ್ಸರ ಮಾಡೇಡ. ನಾಳಂಗೆ ಹೇಳಿದರೆ ಸಾಕು. ಹಾಗೇ ಸಾಗರದ ನೆಂಟ್ರಿಂಗೂ ಸಮಾಚಾರ ತಿಳುಶಿಕ್ಕು-ಕಾರ್ಡು ಬರದು ಹಾಕು 'ಮನಿಯಾ' ಎಂದರು.

"ರಘುರಾಮ ಮರುದಿವಸ ಬೆಳಿಗ್ಗೆ ಅತ್ತೆ ಮಾವನಿಗೆ ಸಮಾಚಾರ ತಿಳಿಸಿ ಸಕ್ಕರೆ ಕಾಯಿ ಕೊಟ್ಟರು. ಇಬ್ಬರ ಮುಖದಲ್ಲಿಯೂ ಗೆಲುವು ಕಂಡಿತು.

"ಇಲ್ಲಿಂದ ಶುದ್ಧಕ್ಕೆ ಹೋಪಲೆಡಿಯನ್ನೆ" ವಿಚಾರಿಸಿದರು ರಘುರಾಮನನ್ನು "ಬೇಡ ಮಾವ ಅಲಿ ಹೇಂಗೂ ಕೇಶವನ ಅಪ್ಪ ಇದ್ದವನ್ನೆ. ಆರಾದರೂ ಪುರೋಗಿತರ ದಿನಿದೇಳಿ 'ಪುಣ್ಯಾಯ ಮಾಡುಗು' ನಾವು ಮತ್ತೆ ಯಾವಾಗಾದರೂ ಹೋಪೋ. ಎನಗೆ ಈಗ ರಜೆಯೂ ಸಿಕ್ಕ. ಶಾಲೆ ಮಕ್ಕಳಿಗೆಲ್ಲಾ ಪರೀಕ್ಷೆ ಸಮಯ. ರಜಾ ಹೆಚ್ಚು ಹೇಳಿ ಕೊಡೇಕಾವುತ್ತು. ರಜೆ ಸಿಕ್ಕಲಿ ಅಂಬಾಗ ಆನು ನಿಂಗಳ ಅಲ್ಲಿಗೆ ಕರೆಕ್ಕೊಂಡು ಹೋಪೆ. ಹೇಂಗೂ 'ಬಾರ್ಸ್' ಮಾಡದ್ದಿರವು" ಹೇಳಿದ ರಘುರಾಮ.

"ಆತಂಬಾಗ ಹಾಂಗೇ ಮಾಡುವೊ ಎಂಗೊಗೆ ಎಲ್ಲೊರಿಂಗೂ ಸಂತೋಷ ಆಯಿದು ಹೇಳಿ ಟಪ್ಪಾಲಿಂಗೆ ಒಂದು ಕಾಗದ ಬರದು ಹಾಕು"

"ಆತು ಮಾವ ಆನಂಬಾಗ ಬೇಗ ಹೋವುತ್ತೆ. ಎನಗೆ ಮನೇಲಿಯೂ ರಜಾ ಕೆಲಸ ಇದ್ದು. ಶಾಲೆಲಿಯೂ ಬೇಕಾದಷ್ಟಿದ್ದು" ಅಂದವನೇ ಬೇಗ ಅಲ್ಲಿಂದ ಮನೆಕಡೆ ಹೊರಟುಹೋದ.

ಕಾವೇರಿ ಹೇಳಿದ ಹಾಗೆ ಶಾರದೆ ಅಡಿಗೆ ತಯಾರು ಮಾಡುತ್ತಿದ್ದಳು. ಸೊಪ್ಪಿನ ಪಲ್ಯ, ತೊಗರಿಬೇಳೆ, ತರಕಾರಿ ಹಾಕಿ ಸಾಂಬಾರು ನಂಜಿಕೊಳ್ಳುವುದಕ್ಕೆ ಎಂದು ಶುಂಠಿಗೊಜ್ಜಿಯೋ, ಬೆಳ್ಳುಳ್ಳಿ ಚಟ್ನಿಯೋ ಇರುತ್ತಿತ್ತು. ದಿನವೂ ಗಟ್ಟಿ ಮೊಸರು, ತುಪ್ಪ, ಇದ್ದೇ ಇರುತ್ತಿತ್ತು. ಇದರಿಂದ ಕಾವೇರಿಯ ಆರೋಗ್ಯ ಬಲು ಬೇಗನೇ ಸುಧಾರಿಸಿತು. ಮಗುವೂ ಸಾಕಷ್ಟು ತಾಯಿಯ ಹಾಲು ಕುಡಿಯುತ್ತಿತ್ತು. ತಿಂಗಳೊಳಗೆ ಬೆಳವಣಿಗೆ ಚೆನ್ನಾಗಿ ಪಡೆಯುತ್ತಿತ್ತು. ಅಜ್ಜನೊಡನೆ ಮೊಮ್ಮಗ ಮಲಗಿಕೊಳ್ಳುತ್ತಿದ್ದ ಒಮ್ಮೆ ಸ್ನಾನ ಮಾಡ್ಸಿ ಹೊಟ್ಟೆಗೆ ಹಾಲು ಕುಡಿಸಿ, ಬೆಚ್ಚಗೆ ಉಣ್ಣೆ ಶಾಲಿನಲ್ಲಿ ಸುತ್ತಿ ಮಲಗಿಸಿತ್ತೆಂದರೆ ನಾಲ್ಕು ತಾಸು ಹಾಗೇ ಮಲಗುತ್ತಿದ್ದ.

"ಏಕಕ್ಕಾ ಅವ 'ಚರೇ ಚರೇ' ಹೇಳದ್ದೇ ಹಾಂಗೇ ಮನುಗುದು ಅವಂಗೆ ಹಶುವಾಗದೋ" ಕೇಳಿದಳು ಶಾರದೆ.

"ಒಂದಾರಿ ಹೊಟ್ಟೆ ತುಂಬಾ ಹಾಲು ಕುಡುಶಿ, ಬೆಚ್ಚಂಗೆ ಹೊದಶಿ ಮಲಶಿದರೆ ಮಕ್ಕೊ ಒಳ್ಳೆತ ಒರಗುತ್ತವು. ಈಗ ಅವಕ್ಕೆ ದಿನಕ್ಕೆ 18 ಗಂಟೆಯೂ ಒರಕ್ಕು ಬೇಕು. ಬೆಳಕ್ಕೊಂಡು ಹೋದ ಹಾಂಗೆ ಒರಕ್ಕು ಕಮ್ಮಿ ಅಪ್ಪಲೆ ಸುರುವಾವುತ್ತು." ಅವಂಗೆ ಹಶು ಇದ್ದರೆ ಕೂಗುತ್ತಿತ್ತಾ ಇಲ್ಲೆಯೋ?"

ಅದಪ್ಪಕ್ಕ; ಅಜ್ಜನೂ ಪುಳ್ಳಿಯೂ ಮಿಂದು, ತಿಂದು ಒಂದಾರಿ ಮನುಗಿದರೆ ಮಧ್ಯಾಹ್ನ ಒಂದು ಗಂಟೆಯವರೆಗೂ ಗೊರಕ್ಕೆ ಹೊಡೆತ್ತವು. ಮನೇಲಿ ಒಂದು ಮಗು ಇದ್ದು ಹೇಳಿ ಆರಿಂಗೊ ಗೊಂತಾಗ"

"ಮಗುವಿಗೆ ಸರಿಯಾಗಿ ಮೀಯಾಣ, ಆಹಾರ ಸಿಕ್ಕದಿದ್ದರೆ ಅವು ಅಂಬಾಗಂಬಾಗ ಎದ್ದು ಕಿರಿ ಕಿರಿ ಮಾಡುದು.

"ಮನೇಲೆಲ್ಲಾ ಮೀಶುದು ಹೇಳಿರೆ ಒಂದು ಗಂಟೆ ಕೆಲಸ. ಮರದ ಮರಿಗೇಲಿ ಬೆಶಿ ನೀರು ಹಾಕಿ, ಕೂಸಿಂಗೆ ಎಣ್ಣೆ ಹೆಚ್ಚಿ ತಿಕ್ಕಿ, ಮರಿಗೇಲಿ ಮನುಶಿಯೋಕಾಲಿಲ್ಲಿ ಮನುಶಿಯೋ ಒಂದು ಕೊಡಪ್ಪಾನ ನೀರಲ್ಲಿ ಮಿಶುತ್ತವು. ಒಂದು ಸಣ್ಣ ಅಂಗಿಯನ್ನೋ ತುಂಡು ವಸ್ತ್ರವನ್ನೋ ಮೈಗೆ ಹಾಕಿ ಅದರ ಅಬ್ಬೆ ಹತ್ರ ಮನುಶುತ್ತವು. ಅದು ಗಳಿಗೆಗೊಮ್ಮೆ ಎದ್ದು 'ಉಣಂಗೇ, ಉಂಗೇ ಹೇಳ್ಯೊಂಡು ಬೆಟ್ಟು ಚೀಪಲೆ ಸುರು ಮಾಡುತ್ತು ಬಾಳಂತಿಗೆ ಕೂಸಿಂಗೆ ಇಡೀ ದಿನ ಕೂಸಿಂಗೆ ಮಲೆ ಕೊಡುದೆ ಕೆಲಸ ಆವುತ್ತು"

ಈ ಕಡು ಷಡ್ಯಂಗಳ ಎಡೇಲಿ, ಅದರ ಮಲೇಲಿ ಬೇಕಾದಷ್ಟು ಹಾಲು ಆಯೇಕನ್ನೆ? ಆ ತುಂಡು ಒಸ್ತ್ರಂಗಳಲ್ಲಿ ಅದಕ್ಕೆ ಚಳಿ ತಡೇಕನ್ನೆ?"

"ಬೇಸಗೇಲಿಯೂ ಶಾಲು ಹೊದಶೇಕೋ"

"ಹೊದಶೇಕು ಶಾರದೆ; ಮಕ್ಕ್ ಅಬ್ಬೆಯ ಹೊಟ್ಟೇಲಿ ಬೆಚ್ಚಂಗೆ ಇರುತ್ತವನ್ನೇ ಅವು ನಿಧಾನ ಹೆರಾಣ ವಾತಾವರಣಕ್ಕೆ ಹೊಂದಿಗೊಳ್ಳೇಕು. ಹೆಚ್ಚು ಕಮ್ಮಿ ಮೂರು ತಿಂಗಳಾದರೂ ಬೆಚ್ಚಂಗೆ ಮನುಶೇಕು."

"ಇದೆಲ್ಲಾ ಅರಿಂಗೆ ಗೊಂತಿತ್ತು ಒಬ್ಬೊಬ್ಬ ಹೇಳಿದ ಹಾಂಗೆ ಮಾಡ್ಯೊಂಡು ಹೋಯ್ಕೊಂಡು ಇದ್ದದು. ಹೇಳ್ಳೆ ಎಷ್ಟು ಜೆನವೂ ಇದ್ದವು ನಮ್ಮರಿಲ್ಲಿ"

"ಇನ್ನು ಆರ ಮಾತು ಕೇಳೇಡ ಆತೊ"

"ಇಲ್ಲೆ ಅಕ್ಕ. ಆನಿನ್ನು ಕೇಳ್ಳೆ ಇಲ್ಲೆ. ಇಲ್ಲಿ ನಡದ್ದರೆಲ್ಲಾ ಬಸರಿಯಕ್ಕೊಗೆ ಬಾಣಂತಿಯಕೊಕ್ಕಗೆ ಹೇಳುದು ಅಷ್ಟೆ""

"ಅದು ಒಳ್ಳೆ ಕೆಲಸ ಶಾರದೆ. ಸುಮಾರು ಬಸರಿಯಕ್ಕಳೊ, ಬಾಣಂತಿಗಳೂ ಕೂಸುಗಳೂ ಬದುಕ್ಕುಗು. ಅವರ ಮೂಢನಂಬಿಕೆಗೂ ಎಲ್ಲಾ ದೂರ ಹೋಕು"

"ಅದಪ್ಪು ನಿನಗೆ ಮಗನ ನೆಂಪಾವುತ್ತಿಲ್ಲೆಯೋ ಶಾರದೆ"

"ನೆಂಪಾವುತ್ತಕ್ಕಾ ಒಂದಾರಿ ಊರಿಂಗೆ ಹೋಗಿ ಬರೇಕು ಹೇಳಿ ಆವುತ್ತು"

"ಎನಗೆ ಎರಡು ತಿಂಗಳು ಆಗಲಿ ಶಾರದೆ ಮತ್ತೆ ರಘುರಾಮಂಗೆ ಅಬ್ಬೆಯ ಕರಕ್ಕೊಂಡು ಬಾ ಹೇಳುತ್ತೆ ನಿನಗೆ ಅವನೊಟ್ಟಿಂಗೆ ಊರಿಂಗೆ ಹೋಪಲಕ್ಕು ಆತೊ?

"ತೊಂದರೆ ಇಲ್ಲೆ ಅಕ್ಕಾ ಅವ ಅಲ್ಲಿ ಅಜ್ಜಿ ಅಜ್ಜನೊಟ್ಟಿಂಗೆ ಸೌಖ್ಯಲ್ಲಿ ಇಕ್ಕು"

"ಅವಂಗೆ ನಿನ್ನ ನೆಂಪಾಗದಿದ್ದರೆ ನೀನು ಹೆತ್ತ ಅಬ್ಬೆ ಅಲ್ಲದೋ ನಿನಗೆ ಮಗನ ನೋಡೇಕು ಹೇಳಿ ಆಗದೋ?"

"ಆವುತ್ತಕ್ಕಾ" ಅಂದಳು ಶಾರದೆ. ಆಮೇಲೆ ಹೆಚ್ಚಿನ ಮಾತುಕತೆಗೆ ಇಳಿಯಲಿಲ್ಲ. ಕಾವೇರಿಯೂ ಅವಳನ್ನು ಕೆಣಕಲು ಹೋಗಲಿಲ್ಲ.

ಕಾವೇರಿಗೆ ಮನೆಯಲ್ಲಿ ಇದ್ದು ಬೇಸರವಾಗಿ ಹೋಗಿತ್ತು. ಹೊತ್ತೇ ಹೋಗುತ್ತಿರಲಿಲ್ಲ. ಒಂದು ದಿವಸ ಡಾ। ಕೇಶವನಿಗೆ ಹೇಳಿಯೇ ಬಿಟ್ಟಳು.

"ಎನಗೆ ಮನೇಲಿ ಇದ್ದು ಇದ್ದು ಬೇಜಾರು ಆತು; ಆಸ್ಪತ್ರೆಗೆ ಹೋಪಲೆ ಸುರು ಮಾಡೋಕೆ ಹೇಳಿ ನೋಡುತ್ತೆ"

"ನೀನು ಹೋದರೆ ಮಗುವಿಂಗೆ ತೊಂದರೆ ಆಗದೋ ಕಾವೇರಿ?"

"ಅವ ಉದಿಯಪ್ಪಾಗ 8 ಗಂಟೆಗೆ ಹಾಲು ಕುಡುದು ಮನುಗಿದ ಹೇಳಿ ಆದರೆ ಏಳುದು ಮಧ್ಯಾಹ್ನ ಒಂದು ಗಂಟೆಗೆ; ಮನೆ ಕೆಲಸ ಎಲ್ಲಾ ಶಾರದೆಯೇ ನೋಡ್ಯೋಳ್ತಾ ಎನ್ನ ಡ್ಯೂಟಿ ಇಪ್ಪದು ಉದಿಯಪ್ಪಾಗ ಒಂಭತ್ತು ಗಂಟೆಂದ ಮಧ್ಯಾಹ್ನ 12-30ವರೇಗೆ ಮಾಂತ್ರ"

"ನಿನ್ನ ಆರೋಗ್ಯ ಹೇಂಗಿದ್ದು ಕಾವೇರಿ"

"ಎನಗೆಂತ ತೊಂದರೆಯೂ ಇಲ್ಲೆ. ಆಯಾಸವೂ ಇಲ್ಲೆ

"ಈಗ ಹೆತ್ತು ಒಂದೂವರೆ ತಿಂಗಳಾತನ್ನೆ. ನಿನಗೆ ಇಷ್ಟ ಇದ್ದರೆ ಆಸ್ಪತ್ರೆಲಿ ಕೆಲಸ ಮಾಡ್ಳಕ್ಕು ತೊಂದರೆ ಇಲ್ಲಎ"

"ನಿಂಗೊ ಇಷ್ಟು ಹೇಳಿರೆ ಸಾಕು.. ಆನು ನಾಳಂಗೆ ಆಸ್ಪತ್ರೆ ಕೆಲಸಕ್ಕೆ ಬತ್ತೆ"

"ಆತು ಕಾವೇರಿ ಶಾರೀರಕ್ಕೆ ಮನಸ್ಸಿಂಗೆ ರಜಾ ವ್ಯಾಯಾಮ ಇದ್ದರೂ ಒಳ್ಳೆದಲ್ಲದೋ?

"ಅಪ್ಪು ಅದಕ್ಕೆ ಆನು ಹೇಳಿದ್ದು" ಅಂದಳು ಕಾವೇರಿ.

ಮರುದಿನ ಬೆಳಿಗ್ಗೆ ಕಾವೇರಿ ಮಗುವಿನ ಚಾಕರಿ ಮುಗಿಸಿ, ಮಲಗಿಸಿ ಆಸ್ಪತ್ರೆಗೆಂದು ಉತ್ಸಾಹದಲ್ಲಿ ಹೊರಟಳು ಆಸ್ಪತ್ರೆ ತಲುಪಿದೊಡನೆ ಡಾ। ಅಮೃತಾಳನ್ನು ಭೇಟಿಯಾದಳೂ.

“ಕಾವೇರಿ ಈಗಲೇ ಡ್ಯೂಗೆ ಬಂದು ಬಿಟ್ಟಿಯೊ? ಇನ್ನೊಂದೆರಡು ತಿಂಗಳು ವಿಶ್ರಾಂತಿ ತೆಗೆದುಕೊಳ್ಳಬಹುದಿತ್ತು.

“ಮನೆಯಲ್ಲಿ ಇದ್ದು ಬೇಜಾರ ಆಗಿದೆ ಅಮೃತಾ ನನಗೆ ಕೆಲಸ ಮಾಡುವಾಗಲೇ ನೆಮ್ಮದಿ ಸಿಕ್ಕುತ್ತದೆ. ಅದಕ್ಕೆ ಡಾ। ಕೇಶವರನ್ನು ಕೇಳಿ ಆಸ್ಪತ್ರೆಗೆ ಬಂದೆ”

“ಒಳ್ಳೆದಾಯಿತು ಕಾವೇರಿ ನನಗೂ ಕಂಪನಿ ಇಲ್ಲದೆ ಬೇಜಾರ ಆಗಿತ್ತು. ನಿನಗೇನಾದರೂ ಸಹಾಯ ಬೇಕಿದ್ದರೆ ಹೇಳು ಸಂಕೋಚ ಮಾಡಿಕೊಳ್ಳಬೇಡ”

“ಖಂಡಿತಾ ನಿನ್ನ ಸಹಾಯ ನನಗೆ ಬೇಕೇ ಬೇಕು” ಅಂದಳು ಕಾವೇರಿ.

ಕಾವೇರಿ ಹೊರ ರೋಗಿಗಳನ್ನು ಒಳರೋಗಿಗಳನ್ನೂ ಎಂದಿನಂತೆ ಪರೀಕ್ಷಿಸಿ ಔಷಧ ಬರೆದುಕೊಡುತ್ತಿದ್ದಳು; ಸಲಹೆ ನೀಡುತ್ತಿದ್ದಳು. ಇದರಿಂದ ಅವಳಿಗೆ ಸ್ವಲ್ಪವೂ ಆಯಾಸವಾಗುತ್ತಿರಲಿಲ್ಲ. ಉಳಿದ ಸಿಬ್ಬಂದಿ ವರ್ಗದವರು ಮೂಗಿನ ಮೇಲೆ ಬೆರಳಿಟ್ಟುಕೊಂಡರು

“ಹಡೆದು ಎರಡು ತಿಂಗಳೂ ಪೂರ್ತಿಯಾಗಲಿಲ್ಲ. ಈರೀತಿ ಕೆಲಸಕ್ಕೆ ಸೇರಿ ಕೊಳ್ಳುವುದೇ ಎಂದು ಆಶ್ಚರ್ಯ ಪಟ್ಟರು.

“ದೀದೀ, ನಿವ್ಯಾಕೆ ಇಷ್ಟು ಬೇಗ ಡ್ಯೂಟಿಗೆ ಬಂದಿರಿ? ನಿಮಗೆ ಆಯಾಸವಾಗುವುದಿಲ್ಲವೆ?”

“ಏನೂ ಇಲ್ಲ ನಾನು ಚೆನ್ನಗಿಂಯೇ ಇದ್ದೇನಲ್ಲಾ. ಸುಮ್ಮಗೇ ಮನೆಯಲ್ಲಿರುವುದೇ ನನಗೆ ಆಯಾಸವೂ ಬೇಜಾರವೂ ಆಗುತ್ತದೆ” ಅಂದಳು ಕಾವೇರಿ.

“ಹೌದು ದೀದಿಗೆ ಕೆಲಸವಿಲ್ಲದಿದ್ದರೆ ಹೊತ್ತೇ ಹೋಗಲಿಕ್ಕಿಲ್ಲ. ಅವರಷ್ಟು ದುಡಿವವರು ಈ ಆಸ್ಪತ್ರೆಯಲ್ಲಿ ಯಾರೂ ಇಲ್ಲ” ಎಂದಳು ಹಿರಿಯ ದಾಯಿಯೊಬ್ಬಳು.

ಹೀಗೇ ದಿನ ಉರುಳುತಿತ್ತು; ಹಡೆದು ಮೂರು ತಿಂಗಳೂ ಮುಗಿದು ಹೋಗಿತ್ತು ಮಗು ಮುಖ ನೋಡಿ ನಗಲು

ತೊಡಗಿತ್ತು. ಒಮ್ಮೆ ತಾಯಿ ತೊಡೆಯ ಮೇಲೆ, ಇನ್ನೊಮ್ಮೆ ತಂದೆಯ ತೊಡೆಯ ಮೇಲೆ ಮಲಗುತ್ತಿತ್ತು; ಶಂಕರ ಭಟ್ಟರಿಗಂತೂ ಮೊಮ್ಮಗ ಪಕ್ಕದಲ್ಲಿಯೇ ಇರಬೇಕು ಅವನನ್ನು ಆಡಿಸುತ್ತಲೇ ಇರಬೇಕು.

"ಮಾವ ಇಪ್ಪತ್ನಾಕು ಗಂಟೆಯೂ ಅವನ ಹಿಡುಕ್ಕೊಂಡು ಎಂತ ಮಾಡುತ್ತಿರಜಾದ್ರೂ ಕೆಳ ಬಿಡ್ಸಾಗದೋ" ಅಂದಳು ಶಾರದೆ ಒಮ್ಮೆ.

"ಎನ್ನ ಮಾಣಿಂದ ಮತ್ತೆ ತೊಡೇ ಏರಿದ್ದು ಇವ ಮಾಂತ್ರ. ಹೇಳಿರೆ ಈಗ ಮಾಣಿಗೆ ಮೂವತ್ತೊಂಬತ್ತು ವರ್ಷ. ಆನು ಇನ್ನು ವಂಶದ ಕೊಡಿ ಕಾಂಬಲಿಲ. ಹೇಳಿ ಗ್ರಹಿಸಿದ್ದೆ ಶಾರದೆ. ದೇವರು ಕೊಟ್ಟ ಅದಾ ಅದಕ್ಕೆ ಅಷ್ಟು ಜೀವ ಮಾಡುದು ಆನು"

"ನಿಂಗೊಗೆ ಆಯಾಸ ಅಪ್ಪಲೆ ಆಗನ್ನೆ ಹೇಳಿ ಆನು ಹೇಳಿದ್ದು"

"ಎನಗೆಂತದೂ ತೊಂದರೆ ಇಲ್ಲೆ ಶಾರದೆ – ನಿನ್ನೆಂದ ಎನಗೆ ರಜಾ ರಜಾ ಗಂಟ್ಳು ಬೇನೆ ಸುರುವಾಯಿತು. ಶೀತಂದ ಆಗಿಕ್ಕು. ಆಶನ ನುಂಗಲೆ ರಜಾ ಕಷ್ಟ ಆವುತ್ತು. ಒಂದಿಷ್ಟು ಕಾಳು ಮೆಣಸು, ಶುಂಠಿ ಹಾಕಿ ಕಷಾಯ ಮಾಡಿಕೊಡು. ಹೋಕದು."

"ಆತು ಮಾವ ಮಾಡಿಕೊಡುತ್ತೆ ನಿಂಗೊ ನಿನ್ನೆ ಹೇಳಿದ್ದರೆ ನಿನ್ನೆಯೇ ಮಾಡಿಕೊಡುತ್ತಿತ್ತೆ ಏಕೆ ಹೇಳಿದ್ದಿಲ್ಲ?" ಮಾಡಿಕೊಡುತ್ತೆ ನಿಂಗೊ ನಿನ್ನೆ ಹೇಳಿದ್ದರೆ ನಿನ್ನೆಯೇ ಮಾಡಿಕೊಡುತ್ತಿತ್ತೆ. ಏಕೆ ಹೇಳಿದ್ದಿಲ್ಲ?

"ಹಾಂಗೆ ರಜಾ ರಜಾ ಸುರುವಾಗಿ 8–10 ದಿನ ಆತು. ಬೆಶಿ ನೀರಿಂಗೆ ಉಪ್ಪು ಹಾಕಿ ಬಾಯಿ ಮುಕ್ಕಳಿಸಿದ್ದೆ, ಮದಲೆಲ್ಲಾ ಅದರಲ್ಲಿ ಕಮ್ಮಿ ಆಯ್ಕೊಂಡು ಇತ್ತು. ಈ ಸರ್ತಿ ಆಯಿದಿಲ್ಲೆ. ನಿನ್ನೆಂದ ರಜಾ ಜೋರೇ ಆಯಿದು"

"ಮನೇಲಿ ಎರಡು ಡಾಕ್ಟ್ರುಗಳ ಮಡಿಕ್ಕೊಂಡು ಎಂತಕೆ ಹೇಳಿದ್ದಿಲ್ಲೆ. ಆನಿಂದು ಭಾವನ ಹತ್ರೆಯೂ ಅಕ್ಕನ ಹತ್ರೆಯೂ ಹೇಳುತ್ತೆ"

"ಸುಮ್ಮನೆ ಅವರ ತಲೆಬೆಶಿ ಮಾಡ್ಸೇಡ ನೀನು"

"ಆನು ಹೇಳುದು ಹೇಳುದೆ"

"ನಿನ್ನೆದುರು ಆನು ಸುಮ್ಮನೇ ಹೇಳಿದೆ ಅದಾ ಇನ್ನು ಎಲ್ಲೋರ ತಲೆಯನ್ನೂ ಬೆಶಿ ಮಾಡುವೆ ನೀನು"

"ಇದಲ್ಲಿ ತಲೆಬೆಶಿ ಅಪ್ಪಲೆ ಎಂತ ಇದ್ದು. ಅವು ಮದ್ದು ಕೊಟ್ಟು ಕಮ್ಮಿ ಮಾಡುಗು. ಎಂತಕೆ ನಿಂಗೊ ಬೇನೆ ತಿಂಬದು"

"ನಿನ್ನ ತಲೆಗೆ ಹೊಕ್ಕರೆ ನೀನು ಬಿಡೆ ಅಷ್ಟೆ ಚಂಡಿ ನೀನು" ಎಂದೊಮ್ಮೆ ಬೈದರು.

ಶಾರದೆ, ಅಕ್ಕ ಭಾವ ಬಂದಾಗ ನೆನಪಿನಲ್ಲಿ ಶಂಕರಭಟ್ಟರ ಗಂಟಲು ನೋವಿನ ವಿಷಯ ಹೇಳಿಯೇ ಬಿಟ್ಟಳು. ಡಾ॥ ಕೇಶವ ತಂದೆಯನ್ನು ವಿಚಾರಿಸಿ ಬಾಯಿ ತೆರೆಸಿ, ಗಂಟಲಿಗೆ ಟಾರ್ಚು ಬೆಳಕು ಬಿಟ್ಟು ಪರೀಕ್ಷಿಸಿದರು; ಕಾವೇರಿಯನ್ನು ಕರೆದು ತೋರಿಸಿದರು. ಇಬ್ಬರ ಮುಖವೂ ಗಂಭೀರವಾಯಿತು.

"ಈ ಗಂಟ್ಲು ಬೇನೆ ಎಷ್ಟು ದಿನಂದ ಇತು ಅಪ್ಪಾ, ಏಕೆ ಹೇಳಿದ್ದಿಲ್ಲಿ ಆಕ್ಷೇಪಿಸಿದರು ಡಾ॥ ಕೇಶವ.

ಹಾಂಗೆ ರಜಾ ರಜಾ ಬಂದುಗೊಂಡು ಹೋಯ್ಕಂಡು ಇದ್ದು ಸುಮಾರು ಆರು ತಿಂಗಳಾತು. ಈಗ ಎರಡು ದಿನಲ್ಲಿ ರಜಾ ಜೋರಾಗಿ ಅಗಳು ನುಂಗದ್ದ ಹಾಗೆ ಆಯಿದು ಅಷ್ಟೆ!

"ನಾಳಂಗೆ ಆನು ನಿಂಗಳ ಆಸ್ಪತ್ರೆಗೆ ಹೋಪಾಗ ಕರಕ್ಕೊಂಡು ಹೋವುತ್ತೆ ಅಲ್ಲಿ ಗಂಟ್ಲು ಪರೀಕ್ಷೆ ಮಾಡುವ ತಜ್ಞ ಡಾಕ್ಟ್ರದ್ದ. ಅವಂಗೆ ತೋರುಸುವೊ.

"ಅಷ್ಟೆಲ್ಲಾ ಗಾಬ್ರಿ ಎಂತರೆ ಮಾಣಿ; ಅದು ಕಮ್ಮಿ ಅಕ್ಕು"

"ಒಂದಾರಿ ತೋರ್ಸಿಕ್ಕಿ ಬಂದರೆ ಎಂತಾವುತ್ತು ನಿಂಗೊಗೆ; ಉದಿಯಪ್ಪಾಗ ತಯಾರಾಗಿ. ನಿಂಗಳ ಕರಕ್ಕೊಂಡು ಹೋಗಿ ತೋರ್ಸಿಕ್ಕಿ ತಂದು ಬಿಡುತ್ತೆ"

"ಆತು ಬತ್ತೆ ಅಂಬಾಗ"

ಮರುದಿನವೇ ಶಂಕರಭಟ್ಟರನ್ನು ಪರೀಕ್ಷಿಸಿದರು ಗಂಟಲು ರೋಗ ತಜ್ಞ ಡಾ। ಶಿವ ಮೂರ್ತಿ. ಹಾಗೇ ಅವರ ರಕ್ತವನ್ನೂ ತೆಗೆದು ಪರೀಕ್ಷೆಗೆ ಕಳುಹಿಸಿದರು.

"ಇದು ಕೊನೆಯ ಹಂತದಲ್ಲಿದೆ ಡಾ। ಕೇಶವ ಇನ್ನಾರು ತಿಂಗಳು ಮುಂದುವರಿಯಬಹುದು ಅಷ್ಟೆ; ದೇಹದಲ್ಲೆಲ್ಲಾ ಹಬಿದೆ –ನಿಮಗೆ ಗೊತ್ತಾಗಲಿಲ್ಲವೇ ಎಂದು ಕೇಳಿದರು ಡಾ। ಶಿವಮೂರ್ತಿ.

"ಇಲ್ಲ ಡಾಕ್ಟರ್; ಅವರು ನಿನ್ನೆಯಷ್ಟೇ ಗಂಟಲು ನೋವು ಅಂದದ್ದು. ಈವತ್ತೇ ನಿಮ್ಮ ಬಳಿಗೆ ಕರೆದುಕೊಂಡು ಬಂದೆ. ನನಗೂ ಅನುಮಾನ ಬಂತು"

"ಇದರಲ್ಲಿ ಅನುಮಾನವೇ ಇಲ್ಲ ಡಾಕ್ಟರ್ ಅವರಿಗೆ ತಿಳಿಸಬೇಡಿ ಗಾಬ್ರಿಯಾದರು. ಆದಷ್ಟು ದ್ರವ ಆಹಾರ ಕೊಡುತ್ತಾ ಬನ್ನಿ; ಅದೂ ಗಂಟಲಲ್ಲಿ ಇಳಿಯದಿದ್ದಾಗ 'ಡ್ರಿಪ್' ಕೊಡಬೇಕಾಗಬಹುದು"

"ಎಲ್ಲಿಯಾದರೂ ಕರೆದುಕೊಂಡು ಹೋಗಿ, ಕಿಮೋತೆರಪಿಯೋ ಲೇಸಾರ್ ಟ್ರೀಟ್‌ಮೆಂಟೋ ಕೊಡಿಸಬೇಕೆ?"

"ಹೆಚ್ಚಿನ ಉಪಯೋಗವಾಗಲಿಕ್ಕಿಲ್ಲ ಡಾಕ್ಟ್ರೆ. ಅವರನ್ನು ಅವರಷ್ಟಕ್ಕೆ ಬಿಟ್ಟು ಬಿಡಿ; ಅವರಿಗೀಗ ಎಂಭತ್ತು ವರ್ಷವಾಗಬಹುದಲ್ಲವೆ"

"ಆಯಿತು ಡಾಕ್ಟ್ರೆ ಅವರಿಗೆ ಎಂಭತ್ತೆರಡು ವರ್ಷ"

"ಅವರನ್ನು ಉಳಿಸಬೇಕು ಅಂತ ನಮಗನ್ನಿಸುತ್ತದೆ; ಆದರೆ ಸಾಧ್ಯವಿಲ್ಲ ಮನುಷ್ಯನಿಗೆ ಹುಟ್ಟುವುದಕ್ಕೆ ಒಂದು ಕಾರಣವಿದ್ದರೆ, ಸಾಯಲಿಕ್ಕೂ ಒಂದು ಕಾರನ ಬೇಕಲ್ಲವೇ? ಅದೇ ಇದು, ನಿಷ್ಠುರವಾಗಿ ಮಾತಾಡಿದೆನೆಂದು ಬೇಜಾರು ಮಾಡಿಕೊಳ್ಳಬೇಡಿ ಡಾ। ಕೇಶವ.

"ಇಲ್ಲ ಡಾಕ್ಟ್ರೆ. ನೀವು ನಿಜವನ್ನೇ ಹೇಳಿದ್ದೀರಿ. ಡಾಕ್ಟ್ರಾಗಿಯೂ ಅದನ್ನು ಅರಗಿಸಿಕೊಳ್ಳಲು ನಾನು ಕಷ್ಟ ಪಡುತ್ತಿದ್ದೇನೆ. ಅದಕ್ಕೆ ದುಃಖವಾಗುತ್ತಿದೆ ಅಷ್ಟೆ" ಡಾ। ಕೇಶವನ ಧ್ವನಿ ನಡುಗುತ್ತಿತ್ತು. ಮುಖದಲ್ಲಿ ಬೆವರ ಹನಿ ಕಾಣುತ್ತಿತ್ತು.

"ಸಮಾಧಾನ ಮಾಡಿಕೊಳ್ಳಿ ಡಾ। ಕೇಶವ. ನಿಮ್ಮ ನೋವನ್ನು ಅವರೆದುರು ತೋರಿಸಿಕೊಳ್ಳಬೇಡಿ. ಇದ್ದಷ್ಟು ದಿನವೂ ಸಂತೋಷವಾಗಿ ಇರುವಂತೆ ನೋಡಿಕೊಳ್ಳಿ ನಿಮ್ಮ ನೋವಿನಲ್ಲಿ ನಾನು ಭಾಗಿ ಎಂಬುದನ್ನು ಮರೆಯಬೇಡಿ"

"ನಾನು ಡಾಕ್ಟ್ರಾದರೂ ನನ್ನ ತಂದೆಯನ್ನು ಉಳಿಸಿಕೊಳ್ಳಲಾಗುತ್ತಿಲ್ಲವಲ್ಲಾ ಎಂದು ದುಃಖವಾಗುತ್ತಿದೆ ನನಗೆ" ಡಾ॥ ಕೇಶವನ ಕಣ್ಣಾಲಿಗಳು ತುಂಬಿ ಬಂತು.

"ಹೌದು ಡಾಕ್ಟ್ರೆ. ನಾವು ವೈಜ್ಞಾನಿಕವಾಗಿ ಎಷ್ಟು ಮುಂದುವರಿದಿದ್ದರೂ ಸಾವನ್ನೂ ಜಯಿಸುವುದು ನಮ್ಮಿಂದ ಸಾಧ್ಯವಾಗುತ್ತಿಲ್ಲವಲ್ಲಾ ಎಂಬ ನೋವು ನನಗೂ ಇದೆ." ಡಾ। ಶಿವಮೂರ್ತಿಯ ನುಡಿಯಲ್ಲಿ ಸತ್ಯವಿದೆ ಅನ್ನಿಸಿತು ಡಾ। ಕೇಶವನಿಗೆ.

"ಆಯಿತು ಡಾಕ್ಟ್ರೆ ನಾನು ತಂದೆಯವರನ್ನು ಮನೆಗೆ ಬಿಟ್ಟು ಬರುತ್ತೇನೆ"

"ಏನಾದರೂ ನೋವು ಶಮನ ಮಾತ್ರೆಗಳನ್ನು ಕೊಡಿರಿ"

"ಆಗಲಿ" ಎಂದು ಡಾಕ್ಟ್ರು ಕೇಶವ ಅಲ್ಲಿಂದ ತಂದೆಯನ್ನು ಕರೆದುಕೊಂಡು ಮನೆಯ ಕಡೆಗೆ ನಡೆದರು.

ಅದೆಂತದು ಅಷ್ಟು ಹೊತ್ತು ಹರಟ್ಟಿದ್ದು ಆ ಡಾಕ್ಟ್ರು ಎನಗೆ ಹೆರ ಕೂದು ಕೂದು ಸೊಂಟ ಬೇನೆ ಆತು"

"ಎಂತದೂ ಇಲ್ಲೆ ಅಪ್ಪ. ಅದೂ ಇದೂ ಮಾತಾಡ್ಯೊಂಡು ಇತ್ತಿದ್ದೆ. ಮಾತಾಡುವಾಗ ಕೂಡ್ಳೆ ಎದ್ದಿಕ್ಕಿ ಇತ್ಲಾಗಿ ಬಪ್ಪಲಾ.ಪ್ರುತ್ತೊ"

"ಅದಪ್ಪಪ್ಪಾ' ಅಂದರು ಶಂಕರಭಟ್ಟರು.

"ಅವ ಗಂಟ್ಳು ಪರೀಕ್ಷೆ ಮಾಡಿದ್ದಲ್ಲಿ ಎನ್ನ ಗಂಟ್ಳು ಸಿಗುದತ್ತೋ ಹೇಳಿ ಕಂಡತ್ತು ಪರೀಕ್ಷೆ ಮುಗುದಪ್ಪಾಗ ಗಂಟ್ಳಿಂದ ರಜಾ ನೆತ್ತರೂ ಬಂತಾದ"

"ಅಪ್ಪೊ" ಎಂದಷ್ಟೇ ನುಡಿದರು ಡಾ। ಕೇಶವ

"ಇಬ್ಬರೂ ಮನೆಗೆ ಬಂದರು; ಶಂಕರಭಟ್ಟರು ಕೈಕಾಲು ತೊಳೆದುಕೊಂಡು ಬಂದರು.

"ಎನಗೆ ಹಶುವಾವುತ್ತು ಶಾರದೆ. ರಜಾ ಅಶನ ಮೆಸ್ತಂಗೆ ಮಾಡಿ, ಪುರುಂಚಿ ಕೊಡು. ಹಾಂಗೇ ಕುಡಿತ್ತೆ"

"ಎಂತಕೆ ಮಾವ?"

"ಎನಗೆ ನುಂಗಲೆ ಎಡಿಯದಷ್ಟು ಗಂಟ್ಳು ಬೇನೆ ಆಯಿದು. ಈ ಡಾಕ್ಟ್ರು ಪರೀಕ್ಷೆ ಮಾಡಿದ್ದಲ್ಲಿ" ಇದ್ದದ್ದೂ ಹೋಯಿತು ಮದ್ದಿನ ಗುಣಂಗ ಹೇಳುವ ಹಾಂಗೆ ಆತು. ಈ ಡಾಕ್ಟ್ರಕ್ಕಳ ಪರೀಕ್ಷೆಯೂ ಸಾಕು, ಮದ್ದು ಸಾಕು"

"ಗೆಂಟ್ಳಂಗೆ ಅದೆಂತರಿಂದಲೋ ಒತ್ತಿ ಪರೀಕ್ಷೆ ಮಾಡುತ್ತವನ್ನೆ. ಅದರಿಂದಾಯಿಕ್ಕು, ನಿಂಗೊಗೆ ಗಂಟ್ಳು ಬೇನೆ ಜೋರಾದ್ದು, ನಿಂಗೊಗೆ ತೆಳ್ಳಂಗೆ ಮಾಡಿ ಅಶನ ಮಜ್ಜಿಗೆ ಉಪ್ಪು ಹಾಕಿ ಕೊಡುತ್ತೆ ಕುಡಿರಿ. ನಾಳಂಗಪ್ಪಾಗ ಕಮ್ಮಿ ಅಕ್ಕು" ಎಂದವಳೇ ಶಾರದೆ ಅವರಿಗೆ ಎರಡು ಲೋಟ ಗಂಜಿ ನೀರು ಮಾಡಿ ಕೊಟ್ಟಳು. ಶಂಕರ ಭಟ್ಟರು ಕಷ್ಟದಲ್ಲಿ ಅದನ್ನು ಕುಡಿದರು.

"ಶಾರದೆ ಆನು ರಜಾ ಮನುಗುತ್ತೆ. ರಜಾ ಆಯಾಸ ಆಯಿದು ಎಂದು ಮಂಚದ ಮೇಲೆ ಮಲಗಿಕೊಂಡರು, ಮೊಮ್ಮಗ ಆಗಲೇ ಎದ್ದು ಕಣ್ಣು ತೆರೆದಿದ್ದ.

"ಭಾವ, ನಿನಗೂ ಉಂಬಲಕ್ಕು ಅಡಿಗೆ ಆಯಿದು" ಎಂದಳು ಶಾರದೆ.

"ಎನಗೆ ಹಶುವಿಲ್ಲೆ ಶಾರದೆ. ನೀನು- ಉಣ್ಣು ಆತೋ" ಎಂದರು ಡಾ॥ ಕೇಶವ ಭಾವನ ಮುಖದಲ್ಲಿ ಎಂದಿನ ಲವಲವಿಕೆ ಇರಲಿಲ್ಲ. ಎಂದೂ ಮಧ್ಯಾಹ್ನ ಮಲಗದವರು ಹಾಸಿಗೆಯಲ್ಲಿ ಅಡ್ಡಾಗಿದ್ದರು. ಅಷ್ಟು ಹೊತ್ತಿಗೆ ಕಾವೇರಿಯೂ ಆಸ್ಪತ್ರೆಯಿಂದ ಮನೆಗೆ ಬಂದಳು.

"ಭಾವಂಗೆ ಉಂಡಾತೊ ಶಾರದೆ, ಮಾವ ಉಂಡವೋ? ಎಷ್ಟು ಹೊತ್ತಿಂಗೆ ಆಸ್ಪತ್ರೆಯಿಂದ ಬಂದವು?"

"ಬಂದು ಸುಮಾರು ಒಂದು ಗಂಟೆ ಅಕ್ಕು, ಮಾವಂಗೆ ಪರೀಕ್ಷೆ ಮಾಡಿದ್ದಲ್ಲಿ ಗೆಂಟ್ಳು ಬೇನೆ ಜೋರಾಯಿದಾಡ. ಅಶನ ಪುರುಂಚಿ, ನೀರು ಮಾಡಿ ರಜಾ ಮಜ್ಜಿಗೆ ಉಪ್ಪು ಹಾಕಿ ಕುಡುದು ಮನುಗಿದವು. ಭಾವ ಊಟಬೇಡ ಹೇಳಿ ಹಾಂಗೇ ಮನುಗಿದ. ಎಂತದೋ ಬೇಜಾರಲ್ಲಿ ಇದ್ದ ಹಾಂಗೇ ಕಂಡತ್ತು"

"ಆನು ಹೋಗಿ ವಿಚಾರುಸ್ತೆ. ಎನಗೆ ಅವು ಆಸ್ಪತ್ರೇಲಿ ಕಾಂಬಲೆ ಸಿಕ್ಕಿದ್ದವಿಲ್ಲೆ" ಎಂದವಳೇ ಬಟ್ಟೆಯೂ ಬದಲಾಯಿಸಿದ್ದೆ ಕಾವೇರಿ ಗಂಡನನ್ನು ವಿಚಾರಿಸಲು ಹೋದಳು; ಡಾ। ಕೇಶವರಿಗೆ ಎಚ್ಚರವಿತ್ತು. ಅಂಗಾತ ಮಲಗಿಕೊಂಡಿದ್ದರು.

"ಎಂತ ಉಣ್ಣದೇ ಮನುಗಿದ್ದೀರಡಾ. ಮಾವನ ಪರೀಕ್ಷೆಯ ಫಲಿತಾಂಶ ಎಂತಾತು"

"ಅಪ್ಪಂಗೆ ಕಾರ್ಸಿನೋಮ' ಹೇಳಿ ಗೊಂತಾತು. ಈಗ ಉಲ್ಬಣಾವಸ್ಥೆಲಿ ಇದ್ದು. ಬಹಳ ಹೇಳಿರೆ ಇನ್ನಾರು ತಿಂಗಳು ಹೋಕಷ್ಟೆ ಹೇಳಿದ ಡಾ। ಶಿವಮೂರ್ತಿ.

"ಅಯ್ಯೋ ದೇವರೆ ಈಗೆಂತ ಮಾಡುದು? ಬೇರೆಲ್ಲಿಗಾಂದರೂ ಕರಕ್ಕೊಂಡು ಹೋದರೆ ಗುಣ ಆಗದೋ" ಕಾವೇರಿಗೂ ಗಾಬರಿ ಆಯಿತು.

"ಇನ್ನೆಲ್ಲಿಗೂ ಕರಕ್ಕೊಂಡು ಹೋಗೇಡಿ, ಗುಣ ಆಗ ಹೇಳಿ ಸ್ಪಷ್ಟ ಹೇಳಿದ್ದು ಡಾಕ್ಟ್ರು ಶಿವಮೂರ್ತಿ; ಇಷ್ಟು ಹೇಳುವಾಗಲೇ ಡಾ। ಕೇಶವನ ಕಣ್ಣಿನಲ್ಲಿ ನೀರಾಡಿತು.

"ಸಮಾಧಾನ ಮಾಡ್ಯೋಳ್ಳಿ ಎದ್ದು ರಜಾ ಉಣ್ಣಿ"

"ಬೇಡ ಕಾವೇರಿ ಎನ್ನ ಒತ್ತಾಯ ಮಾಡೇಡ. ಎನ್ನ ಹಾಂಗೇ ಬಿಡು. "ಅಪ್ಪನ ಇಷ್ಟು ಬೇಗ ಕಳಕ್ಕೊಂಬನೆ ಆನು ಸಿದ್ದ ಇತ್ತಿಲ್ಲೆ, ಅದಕ್ಕೆ ಮನಸ್ಸಿಂಗೆ ತುಂಬಾ ಬೇನೆ ಆಯಿದು. ರಜಾ ಎನ್ನಷ್ಟಕ್ಕೆ ಇಪ್ಪಲೆ ಬಿಡು" ಕಣ್ಣುಗಳ ಮೇಲೆ ಕೈ ಇಟ್ಟುಕೊಂಡು ಮಲಗಿಯೇ ಬಿಟ್ಟರು ಡಾಕ್ಟ್ರು.

ಕಾವೇರಿಗೆ ಅವರ ನೋವು ಅರ್ಥವಾಯಿತು. ಹೆಚ್ಚು ಒತ್ತಾಯ ಮಾಡದೆ, ಮಗುವನ್ನೆತ್ತಿ ಹಾಲೂಡಿಸಿ, ಶಾರದೆಯ ಕೈಯ್ಯಲ್ಲಿ ಕೊಟ್ಟಳು. ತಾನು ಊಟ ಮಾಡಿದ ಶಾಸ್ತ್ರ ಮುಗಿಸಿದಳು. ಮಾವನನ್ನು ಕಳೆದುಕೊಳ್ಳಲು ಅವಳೂ ಸಿದ್ಧಳಾಗಿರಲಿಲ್ಲ. ತನ್ನ ತಂದೆಗಿಂತಲೂ ಪ್ರೀತಿ ವಾತ್ಸಲ್ಯವನ್ನು ತೋರಿದ ಮಾವನನ್ನು ಕಳೆದ ಮೇಲೆ ಜೀವನ ಹೇಗಿರಬಹುದು ಎಂದು ಅವಳಿಗೆ ಊಹಿಸಲೂ ಸಾಧ್ಯವಾಗಲಿಲ್ಲ; ಎಂದು ನಗುತ್ತಾ ಮಾತನಾಡುವ ಅಕ್ಕ ಮೌನವಾಗಿದ್ದದ್ದು ನೋಡಿ ಶಾರದೆಗೆ ಸಹಿಸಲಾಗಲಿಲ್ಲ.

"ಎಂತಕ್ಕಾ, ನೀನೂ ಇಂದು ಚಪ್ಪೆ ಆಯಿದೆ? ಎಂತಾರೂ ಎನಗೂ ಹೇಳು. ಆನೂ ನಿನ್ನ ಒಡಹುಟ್ಟೇ ಅಲ್ಲದೋ?"

"ಶಾರದೆ, ಮಾವನ ಕಾಯಿಲೆಂದ ಅವು ಮೇಲೆ ಬೀಳುದು ಕಷ್ಟ ಇದ್ದು ಹೆಚ್ಚಾದರೆ ಇನ್ನಾರು ತಿಂಗಳು ಹೇಳಿದ್ದಡ ಡಾಕ್ಟ್ರ."

"ಅಷ್ಟೋ? ಹಾಗೆಂತ ಆಯಿದ್ದು ಮಾವಂಗೆ?"

"ಅವಕ್ಕೆ ಗೆಂಟ್ಲನ ಕೇಂನ್ಸರು ಆಯಿದು"

"ಅದಕ್ಕೆ ಮದ್ದು ಕೊಟ್ಟು ಗುಣ ಮಾಡ್ಲಾಗದೋ? ಎಷ್ಟು ಕರ್ಚಾದರೂ ತೊಂದರೆ ಇಲ್ಲೆ. ಗುಣ ಮಾಡಿ ಅಕ್ಕಾ. ನಿಂಗೊ ಇಬ್ರೂ ಡಾಕ್ಟ್ರಲ್ಲದೋ?"

"ಅದಕ್ಕೆ ಇಷ್ಟರವರೆಗೆ ಮದ್ದು ಕಂಡು ಹಿಡುದ್ದವಿಲ್ಲೆ ಶಾರದೆ. ಮದ್ದಿದ್ದರೆ ಎಂಗೊ ಮಾಡ್ಸುವೆಯೋ; ಅದೇ ಚಿಂತೆ ಈಗ; ನಿನ್ನ ಭಾವನ ಕಣ್ಣಲ್ಲಿ ನೀರು ಕಂಡದು ಆನು ಇಂದೇ. ಅವು ಎಲ್ಲೋರಿಂಗೂ ಧೈರ್ಯ ಹೇಳುವವು" ಕಾವೇರಿಗೂ ದುಃಖ ಉಮ್ಮಳಿಸಿತು.

"ಸ್ವಂತ ಅಪ್ಪಂಗೇ ಕೊಡ್ಲೆ ಮದ್ದಿಲ್ಲೆನ್ನೆ ಹೇಳಿ ಭಾವಂಗೆ ಬೇಜಾರ ಆದಿಕ್ಕು"

"ಅಪ್ಪು ಶಾರದೆ, ಎಷ್ಟಾದರೂ ಹೊತ್ತು ಸಾಂಕಿದ ಅಪ್ಪದ್ ಅಲ್ಲದೋ? ಅವರ ಅಬ್ಬೆ ಮದಲೇ ಹೋಯಿದವು. ಅಪ್ಪ ತನ್ನೊಟ್ಟಿಂಗೆ ಇದ್ದವನ್ನೆ ಹೇಳಿ ಅವಕ್ಕೆ ಸಮಾಧಾನವೂ, ಸಂತೋಷವೂ ಆಗಿತ್ತು.

"ಎನ್ನಂದ ಎಡಿಗಾದಷ್ಟು ಆನು ಮಾವನ ಸೇವೆ ಮಾಡುವೆ ಅಕ್ಕಾ. ಆದಷ್ಟು ದಿನ ಅವರ ಉಳುಶ್ಯೊಂಬೊ. ಎನಗೆ ತುಂಬಾ ಸಂಕಟ ಆವುತ್ತು" ಅಂದಳು ಶಾರದೆ.

ಮುಂದೆ ಹೆಚ್ಚಿನ ದಿನಗಳು ಮೌನದಲ್ಲಿಯೇ ಕಳೆಯಿತು; ಶಂಕರಭಟ್ಟರಿಗೆ ದಿನವೂ ನೀರುಗಂಜಿ ಮಾಡಿ ಕುಡಿಸುತ್ತಿದ್ದಳು ಶಾರದೆ; ತಿಂಗಳೊಳಗೆ ಅವರಿಗೆ ಹಾಸಿಗೆಯಿಂದ ಎದ್ದು ಓಡಾಡಲೂ ಆಗುತ್ತಿರಲಿಲ್ಲ. ಕೈ ಹಿಡಿದು ನಡೆಸುತ್ತಿದ್ದಳು; ದಿನದಿಂದ ದಿನಕ್ಕೆ ಅವರಿಗೆ ನಿತ್ರಾಣ ಜಾಸ್ತಿಯಾಗುತ್ತಿತ್ತು. ಗಂಟಲಿನಲ್ಲಿ ಗಂಜಿಯೂ ಇಳಿಯದ ಹಾಗಾಯಿತು.

"ಅಪ್ಪಂಗೆ ದಿನಕ್ಕೆ ಒಂದೋ ಎರಡೋ ಗ್ಲೂಕೋಸ್ ಡ್ರಿಪ್ ಹಾಕುವೊ ಕಾವೇರಿ ನಿತ್ರಾಣ ತುಂಬಾ ಇದ್ದು" ಎಂದರು ಡಾಕ್ಟ್ರು.

"ಆತು, ಉದಿಯಪ್ಪಾಗ ಒಂದು, ಕಸ್ತಲಪ್ಪಾಗ ಒಂದು ಹಾಕುವೊ ಎಂದಳು ಕಾವೇರಿ.

"ನಾವು ಕೊಟ್ಟಿಕ್ಕಿ ಹೋದರೆ, ಅದು ಮುಗುದ ಕೂಡ್ಲೆ ಶಾರದೆ ಅದರ ತೆಗೆಗು ಅದಕ್ಕೊಂದಾರಿ ಹೇಳಿಕೊಟ್ಟರೆ ಸಾಕು"

"ಹಾಂಗೇ ಮಾಡುವೊ" ಎಂದು ದಿನವೂ ಇವರಲ್ಲೊಬ್ಬರು ಗ್ಲೂಕೋಸ್ ಕೊಡುತ್ತಿದ್ದರು. ಶಾರದೆ ಅದನ್ನು ತೆಗೆಯುತ್ತಿದ್ದಳು. ಹೀಗೆ ಒಂದೆರಡು ತಿಂಗಳು ಕಳೆಯಿತು. ಆಮೇಲೆ ಶಂಕರಭಟ್ಟರಿಗೆ ಕಾಲಿನಲ್ಲಿ ಬಾವು ಕಾಣಿಸಿತು. ಮುಖ ಉಬ್ಬಲು ತೊಡಗಿತು; ಮಲಮೂತ್ರ ಹಾಸಿಗೆಯಲ್ಲಿಯೇ ಮಾಡುವಂತಾಯಿತು. ಶಾರದೆ ಸ್ವಲ್ಪವೂ ಹೇಸಿಕೊಳ್ಳದೆ, ಎಲ್ಲವನ್ನೂ ಸ್ವಚ್ಛ ಮಾಡುತ್ತಿದ್ದಳು. ಯಾವಾಗಲೂ ಅವರ ಸಮೀಪದಲ್ಲಿಯೇ ಇದ್ದು ಹಣ್ಣಿನ ರಸವನ್ನೋ ತೆಳ್ಳಗಿನ ಹಾಲನ್ನೋ ಗಂಟಲಿನ ಚಮಚದಿಂದ ಕೊಡುತ್ತಿದ್ದಳು.

"ಕಾವೇರಿ ನೀನು ಒಂದು ತಿಂಗಳು ರಜೆ ಹಾಕೊ. ಪಾಪ ಶಾರದೆ ಕೈಲಿ ಎಷ್ಟು ಹೇಳಿ ಕೆಲಸ ಮಾಡ್ಲುತ್ತೆ" ಎಂದರು ಡಾ॥ ಕೇಶವ.

ಎನಗೆಂತದೂ ತೊಂದರೆ ಆವುತ್ತಿಲ್ಲೆ ಭಾವ. ಹಿರಿಯರ ಚಾಕ್ರಿ ಮಾಡಿದರೆ ಪುಣ್ಯ ಅಲ್ಲದೋ? ಅಬ್ಬೆ, ಅಪ್ಪನ ಚಾಕ್ರಿ, ಅತ್ತೆ ಮಾವಂದ್ರ ಚಾಕ್ರಿ ಮಾಡೇಡದೋ?

"ಅವರ ಚಾಕ್ರಿ ನೀನು ಮಾಡೆಕಾದ್ದು ಅಪ್ಪು. ಆದರೆ ಇಲ್ಲಿ ಇಪ್ಪದು ಎನ್ನ ಅಪ್ಪ ನಿನ್ನ ಅಕ್ಕನ ಮಾವನೋರು ಅಲ್ಲದೋ?"

"ಆನು ಹಾಂಗೆ ಜಾನ್ಸಿದ್ದೇ ಇಲ್ಲೆ ಭಾವ. ಅವರ ಎನ್ನ ಸ್ವಂತ ಅಪ್ಪ ಹೇಳಿಯೇ ಗ್ರಹಿಶಿದ್ದೆ. ಅವರ ಚಾಕ್ರಿ ಮಾಡ್ಲೆ ಎನಗೆ ರಜವೂ ತೊಂದರೆ ಆವುತ್ತಿಲ್ಲೆ. ಅವು ಇಪ್ಪನ್ನಾರ ಚಾಕ್ರಿ ಆನೇ ಮಾಡುತ್ತೆ" ಎಂದಳು ಶಾರದೆ.

ಶಾರದೆಯ ಗುಣ ಮೆಚ್ಚಿಗೆಯಾಯಿತು ಡಾಕ್ಟ್ರಗೆ; ಆದರೂ ಕಾವೇರಿಯೂ ತಂದೆಯೊಡನೆ ಸ್ವಲ್ಪ ಸಮಯ ಇರಲಿ ಅನ್ನಿಸಿತು ಅವರಿಗೆ.

"ಕಾವೇರಿ, ನೀನೂ ಅಪ್ಪನೊಟ್ಟಂಗೆ ರಜಾ ದಿನ ಇದ್ದು. ಅಪ್ಪ ಇನ್ನು ಹೆಚ್ಚು ದಿನ ಇಪ್ಪ ಹಾಂಗೆ ಕಾಣುತ್ತಿಲ್ಲೆ. ಈಗಳೇ ಅವಕ್ಕೆ ಸರಿಯಾಗಿ ಮಾತಾಡ್ಲೆ ಎಡಿತ್ತಿಲ್ಲೆ.

'ಆತು ಆನೂ ಒಂದು ತಿಂಗಳು ರಜೆ ಹಾಕುತ್ತೆ ನಾಳೆಂದಲೇ ರಜೆ ಹಾಕಿ ಮನೇಲಿಯೇ ಇರುತ್ತೆ" ಮನಃ ಪೂರ್ವಕವಾಗಿ ಅಂದಳು ಕಾವೇರಿ.

"ಇನ್ನೊಂದು ವಿಷಯ ನಿಂಗಳ ಹತ್ರೆ ಹೇಳೇಕು ಜಾನ್ಸಿದ್ದೆ"

"ಎಂತ ಕಾವೇರಿ?"

"ನಮ್ಮ ಮಗನ ನಾಮಕರಣವನ್ನೂ, ಅನ್ನ ಪ್ರಾಸನವನ್ನೂ ಆದಷ್ಟು ಬೇಗ ಮಾಡಿ ಮುಗುಶುವನೋ ಹೇಳಿ. ಮಾವನ ಕೈಲಿಯೇ ಅವಂಗ ಅನ್ನ ಪ್ರಾಸನ ಮಾಡ್ಸೇಕು ಹೇಳಿ ಇದ್ದು ಎನಗೆ"

"ಅಕ್ಕು ಕಾವೇರಿ. ಎನಗದು ತಲೆಗೆ ಹೋಯಿದೇ ಇಲ್ಲೆ. ಇನ್ನೆರಡು ದಿನಲ್ಲಿ ಅದಕ್ಕೆ ತಯಾರು ಮಾಡುವೋ. ಭಟ್ಟಂಗೆ ಪುರುಸೊತ್ತು ಯಾವಾಗ ಇದ್ದು ಹೇಳಿ ಇಂದೇ ವಿಚಾರ್ಸುತ್ತೆ! ಆದರೆ ಗೌಜಿಲಿ ಮಾಡ್ಲೆ ಎಡಿಯ. ಊರಿಂದ ಆರಿಂಗೂ ಬಪ್ಪಲೆಡಿಯ"

"ಗೌಜಿ ಗದ್ದಲ ಒಂದೂ ಬೇಡ. ಎನಗೆ ಅವರ ಕೈಂದಲೇ ಅನ್ನಪ್ರಾಶನ ಮಾಡ್ಸು ಹೇಳಿ" ಶಾರದೆಯೂ ದನಿಗೂಡಿಸಿದಳು.

"ಡಾಕ್ಟ್ರು ಕೇಶವ ಅಂದೇ ಪುರೋಹಿತರಾದ ಉಪಾಧ್ಯಾಯರನ್ನು ಭೇಟಿ ಮಾಡಿದರು. ಪರಿಸ್ಥಿತಿಯನ್ನು ವಿವರಿಸಿದರು. ಅನ್ನ ಪ್ರಾಶನಕ್ಕೆ ಒಳ್ಳೆ ಮುಹೂರ್ತ ನೋಡಿದರು. ಮಂಗಳವಾರ ಅಂದರೆ ಈವತ್ತಿಗೆ ಮೂರನೇ ದಿನದಲ್ಲಿ ಬೆಳಿಗ್ಗೆ 10 ಗಂಟೆಗೆ ಒಳ್ಳೆ ಮುಹೂರ್ತವಿದೆ ಎಂದು ತಿಳಿಸಿದರು. ಅನ್ನಪ್ರಾಶನಕ್ಕಾಗಿ ಒಂದು ಬಂಗಾರದ ಉಂಗುರವನ್ನು ಸಿದ್ಧಪಡಿಸಬೇಕೆಂದು ಅಕ್ಕಿ, ಹಾಲು ಸಕ್ಕರೆ ಪಾಯಸ ಮಾಡಬೇಕೆಂದೂ ತಿಳಿಸಿದರು. ಆ ದಿನದ ಊಟಕ್ಕೆ ಉಪಾಧ್ಯಾಯರ ಮನೆಯವರನ್ನು, ಉಡುಪಿ ಹೋಟೆಲಿನವರನ್ನು ಕರೆದೇ ಬಂದರು ಡಾಕ್ಟ್ರು.

ಮಂಗಳವಾರ ಬೆಳಿಗ್ಗೆಯೇ ಮಗುವಿಗೆ ಸ್ನಾನ ಮಾಡ್ಸಿ ಹೊಸ ಬಟ್ಟೆ ತೊಡಿಸಿದರು. ಡಾ। ಕೇಶವ, ಕಾವೇರಿ ಶಾರದೆಯೂ ತಯಾರಾದರು. ಆ ದಿನದ

ಅಡಿಗೆಯನ್ನು ಉಡುಪಿಯವರಿಗೇ ವಹಿಸಿಕೊಟ್ಟರು. ಸಮಯಕ್ಕೆ ಸರಿಯಾಗಿ ಉಪಾಧ್ಯಾಯರು ಬಂದು ಪೂಜೆ ಮಂತ್ರಾದಿಗಳನ್ನು ಮುಗಿಸಿದರು. ಹತ್ತು ಗಂಟೆಗೆ ಸರಿಯಾಗಿ ಬೆಳ್ಳಿ ಬಟ್ಟಲಿನಲ್ಲಿ ಅಕ್ಕಿ ಪಾಯಸ ಸಿದ್ಧವಾಗಿ ಬಂತು. ಮಗುವಿನ ತಂದೆ ತಾಯಿಯರನ್ನು ಅಕ್ಕ ಪಕ್ಕದಲ್ಲಿ ಕುಳ್ಳಿರಿಸಿದರು. ಶಂಕರಭಟ್ಟರನ್ನು ಅವರ ಪಕ್ಕಕ್ಕೆ ಎತ್ತಿಕೊಂಡು ಬಂದು ಆರಾಮ ಕುರ್ಚಿಯಲ್ಲಿ ಕುಳ್ಳಿರಿಸಿದರು; ಮಗುವಿಗೆ ಹೆಸರೇನೆಂದು ಇಡುತ್ತೀರಿ ಎಂದು ಕೇಳಿದರು ಭಟ್ಟರು. "ಶಂಕರ ಪ್ರಸಾದ" ಎಂದರು ಡಾಕ್ಟ್ರು "ಶಂಕರ ಪ್ರಸಾದ" ಎಂಬ ಹೆಸರು ಉಪಾಧ್ಯಾಯರ ಮಂತ್ರದಲ್ಲಿ ಸೇರಿಕೊಂಡಿತು.

"ಇನ್ನು ಅನ್ನ ಪ್ರಾಶನ ಮಾಡಬಹುದು. ಮೊದಲ ತುತ್ತು 'ಅಪ್ಪ' ಕೊಡಲಿ, ಆಮೇಲೆ ಅಮ್ಮ, ನಂತರ ಉಳಿದವರು" ಎಂದರು ಭಟ್ಟಾರು.

"ಮೊದಲ ತುತ್ತು ನನ್ನ ಮಾವನವರು ಕೊಡುತ್ತಾರೆ. ಆಮೇಲೆ ನಾವು ಕೊಡುತ್ತೇವೆ" ಅಂದಳು ಕಾವೇರಿ.

'ಆಗಬಹುದು" ಎಂದರು ಭಟ್ಟರು

ಮಗನನ್ನು ಎತ್ತಿಕೊಂಡು ಶಂಕರಭಟ್ಟರು ಕೂತಲ್ಲಿಗೆ ಹೋದರು. ಗಂಡ ಹೆಂಡತಿ ಇಬ್ಬರೂ ಅವರ ಪಾದ ಮುಟ್ಟಿ ನಮಸ್ಕರಿಸಿದರು. ತಟ್ಟೆಯಲ್ಲಿದ್ದ ಪಾಯಸದಲ್ಲಿ ಬಂಗಾರದ ಉಂಗುರ ಮುಳುಗಿಸಿ ತಂದೆಯ ಕೈಯಲ್ಲಿ ಕೊಟ್ಟರು ಡಾ॥ಕೇಶವ. ಮಗುವನ್ನೆತ್ತಿ ಅವರ ಸಮೀಪಕ್ಕೆ ತಂದಳು ಕಾವೇರಿ. ನಡುಗುವ ಕೈಯಿಂದ ಮಗುವಿನ ಬಾಯಿಗೆ ಅನ್ನ ಪ್ರಾಶನ ಮಾಡಿದರು. ಅಲ್ಲೇ ಮಂತ್ರಾಕ್ಷತೆ ಹಿಡಿದು ಸಿದ್ಧವಾಗಿ ನಿಂತ ಶಾರದೆಯ ಕೈಯಿಂದ ಮಂತ್ರಾಕ್ಷತೆಯನ್ನು ಕೂಸಿನ ತಲೆ ಮೇಲೆ ಚೆಲ್ಲಿ ಮಗುವಿನ ತಲೆಮೇಲೆ ಕೈ ಇಟ್ಟು ಹರಸಿದರು. ಆಮೇಲೆ ಬಂದ ಮುತ್ತೈದೆಯರೆಲ್ಲಾ ಮಗುವಿನ ಅನ್ನಪ್ರಾಶನ ಮಾಡಿ, ಮಂತ್ರಾಕ್ಷತೆ ಹಾಕಿ ಮಗುವನ್ನು ಹರಸಿದರು. ಮಗುವಿನ ಕೈಯಲ್ಲಿ ಒಸಗೆಯನ್ನು ಕೊಟ್ಟು, ಊಟ ಮಾಡಿ ಹೋದರು.

ಕಾವೇರಿಗೆ ತೃಪ್ತಿಯಾಯಿತು. ಶಾರದೆಗೂ ಸಮಾಧಾನವಾಯಿತು. ಅಂದಿನಿಂದ ಕಾವೇಗಿ ಆಸ್ಪತ್ರೆಗೆ ಹೋಗಲಿಲ್ಲ. ಮಾವನ ಬಳಿಯಲ್ಲಿಯೇ ಹೆಚ್ಚಿನ ಶ್ರದ್ಧೆಯಿಂದಲೇ ಅವರ ಚಾಕ್ರಿ ಮಾಡುತ್ತಿದ್ದಳು. ಆದರೂ 'ಕಾಲನ ಕರೆ'ಗೆ ಓಗೂಡಲೇ ಬೇಕಲ್ಲ! ಶಂಕರಭಟ್ಟರ ದನಿ ಪೂರಾ ಕುಗ್ಗಿತು. ಯಾರನ್ನೂ ಗುರುತಿಸದ ಸ್ಥಿತಿ ಅವರದಾಯಿತು. ಕಾಲಿನ ಬಾಮ ಏರುತ್ತಿತ್ತೇ ವಿನಹ ಇಳಿಯುತ್ತಿರಲಿಲ್ಲ. ಸ್ವಲ್ಪ ಸಮಯದಲ್ಲಿ ಹೊಟ್ಟೆಯೂ ಉಬ್ಬಿ ಮಿಂಚತೊಡಗಿತು. ಮತ್ತೊಂದು ಎಂಟು ದಿವಸ ಉಸಿರೆಳೆದಾಡಿ, ಒಂಭತ್ತನೇ ದಿವಸ ಮುಂಜಾನೆ 5 ಗಂಟೆಗೆ ಇಹಲೋಕ

ಯಾತ್ರೆಯನ್ನು ಮುಗಿಸಿದರು. ಮಗ ಕೇಶವ, ಸೊಸೆ ಕಾವೇರಿ, ಮೊಮ್ಮಗ ಶಂಕರ ಪ್ರಸಾದ, ಶಾರದೆ ಎಲ್ಲರ ಕೈಯಿಂದಲೂ ತುಳಸಿ ತೀರ್ಥ ಕುಡಿದು, ತನ್ನೆರಡುಕೈಗಳನ್ನು ಎದೆಯ ಮೇಲಕ್ಕ ತಂದು 'ಕೈ ಮುಗಿದು' ನಾರಾಯಣ ಎಂಬ ಉಸಿರೊಡನೆ ಪ್ರಾಣಪಕ್ಷಿ ಹಾರಿಹೋಯಿತು. ಡಾ॥ ಕೇಶವ, ಕಾವೇರಿ, ಶಾರದೆ ಬಿಕ್ಕಿ ಬಿಕ್ಕಿ ಅತ್ತರು. ಇವರೊಡನೆ ಶಂಕರಪ್ರಸಾದನೂ ದನಿಗೂಡಿಸಿದ. ಅತ್ತು ಸ್ವಲ್ಪ ಎದೆ ಹಗುರವಾದೊಡನೆ.

"ಕಾವೇರಿ ಆನು ಮುಂದಿನ ವ್ಯವಸ್ಥೆ ಮಾಡುತ್ತೆ, ಪುರೋಹಿತರ ಹತ್ರೆ ಹೋವುತ್ತೆ" ಎಂದು ಹೊರನಡೆದರು. ಪಕ್ಕದಲ್ಲಿದ್ದ ಉಡುಪಿ ಹೋಟಲಿನವರಿಗೆ ಸಮಾಚಾರ ತಿಳಿದು ಓಡಿಕೊಂಡು ಬಂದರು. ಹಾಗೇ ಉಪಾಧ್ಯಾಯರೂ ಬಂದರು.

"ನೀವು ಚಿಂತೆ ಮಾಡಬೇಡಿ ಡಾಕ್ಟ್ರೆ. ನಾವು ವ್ಯವಸ್ಥೆ ಮಾಡಿಕೊಡುತ್ತೇವೆ" ಎಂದರು ಇಬ್ಬರೂ. "ನಿಮಗೆ ಕುಡಿಯಲಿಕ್ಕೆ ತಿನ್ನಲಿಕ್ಕೆ ಏನಾದರೂ ಕಳುಹಿಸಲೇ?" ಎಂದೂ ಕೇಳಿದರು.

"ಶವ ಸಂಸ್ಕಾರ ಆದ ಮೇಲೇಯೇ ಸಾಕು. ಈಗ ಏನೂ ಬೇಡ" ಅಂದರು ಡಾಕ್ಟ್ರು.

"ನಮ್ಮ ತಂದೆಯ ಇಚ್ಛೆಯಂತೆ ಗಂಗಾನದಿಯ ದಡದಲ್ಲಿಯೇ ಶವ ದಹನವಾಗಬೇಕು. ಅವರ ಅಸ್ತಿ, ಭಸ್ಮವನ್ನು ಗಂಗೆಗೇ ಸಮರ್ಪಿಸಬೇಕು" ಅಂದರು ಡಾಕ್ಟ್ರು.

"ಆಯಿತು ಹಾಗೆಯೇ ಮಾಡುಲ. ಅಲ್ಲಿ ನನಗೆ ಪರಿಚಯದ ಪುರೋಹಿತರು ಇದ್ದಾರೆ. ಅವರ ಪೈಕಿಯವರೇ ಇಲ್ಲಿಗೆ ಬಂದು ಶವವನ್ನು ತೆಗೆದುಕೊಂಡು ಹೋಗುತ್ತಾರೆ. ನಾನು ಈಗಲೇ ಅಲ್ಲಿಗೆ ಹೋಗುತ್ತೇನೆ. ಅಲ್ಲಿ ಹರಿಶ್ಚಂದ್ರ ಘಾಟಿನಲ್ಲಿ ನನಗೆ ಪರಿಚಯದ 'ಘಾಂಡಾ'ಗಳು ಇದ್ದಾರೆ. ಶವಸಂಸ್ಕಾರಕ್ಕೆ ಬೇಕಾಗುವ ಕಟ್ಟಿಗೆಯಿಂದ ಹಿಡಿದು ಪುರೋಹಿತರ ವ್ಯವಸ್ಥೆಯವರೆಗೆ ಅವರೇ ಮಾಡುತ್ತಾರೆ. ಶವ ಸಂಸ್ಕಾರಕ್ಕಿಷ್ಟು ಹಣ ಎಂದು ನಿಗದಿ ಇದೆ. ಅಷ್ಟುಕೊಟ್ಟರಾಯಿತು. ಎಲ್ಲವನ್ನೂ ಮಾಡಿ ಅಸ್ತಿಭಸ್ಮವನ್ನು ಗಂಗೆಗೆ ಅರ್ಪಿಸುತ್ತಾರೆ".

"ಹಾಗೆಯೇ ಮಾಡಿ, ಬರುವಾಗ ನಮ್ಮ ಊರಿಗೊಂದು ಟೆಲಿಗ್ರಾಮ್ ಕಳುಹಿಸಿ. ತಂದೆಗೆ ಕಠಿಣ ಕಾಯಿಲೆ, ಕೂಡಲೇ ಹೊರಟು ಬನ್ನಿ ಎಂದು"

"ರಘುರಾಮ ಅಂದಎ ನಿಮ್ಮ ತಂಗಿ ಗಂಡ ಅಲ್ಲವೆ" ಆವತ್ತು ಮದುವೆಯಲ್ಲಿ ಓಡಾಡುತ್ತಿದ್ದರಲ್ಲ?"

"ಹೌದು ಅವರೇ. ನಮ್ಮ ಕಷ್ಟ ಕಾಲದಲ್ಲಿ ಒದಗಿಬರುವವರು ಅವರೊಬ್ಬರೇ. ಮತ್ತಿರುವವರು ಕಾವೇರಿಯ ಅಪ್ಪ. ಅಮ್ಮ, ಅವರು ಅಸಾಯಕರು"

"ಆಗಲಿ ಡಾಕ್ಟ್ರೆ. ಚಿಂತೆ ಮಾಡಬೇಡಿ. ನಾವೆಲ್ಲಾ ಇದ್ದೇವಲ್ಲಾ ಸುಧಾರಿಸಿಕೊಡುತ್ತೇವೆ. ಚಿಂತೆ ಮಾಡಬೇಡಿ, ಧೈರ್ಯವಾಗಿರಿ" ಎಂದು ಸಾಂತ್ವನ ಮಾಡಿದರು ಉಡುಪಿ ಭಟ್ಟರು.

ಅವರು ಸೀದಾ ಹರಿಶ್ಚಂದ್ರ ಘಾಟಿಗೆ ಹೋಗಿ, 'ಫಂಡಾ'ವರೊಡನೆ ಮಾತುಕತೆ ಮುಗಿಸಿ, ಡಾಕ್ಟ್ರ ಮನೆಗೆ ಪರಿಚಯ ಕೊಟ್ಟು ಸೀದಾ ಅಲ್ಲಿಗೆ ಹೋಗಲು ಹೇಳಿದರು. ತಾವು ಟಪ್ಪಾಲು ಆಫೀಸಿಗೆ ಹೋಗಿ ರಘುರಾಮನಿಗೆ ಟೆಲಿಗ್ರಾಮ್ ಕೊಟ್ಟು ವಾಪಾಸು ಬಂದರು. ಅವರು ಮನೆ ಬಿಟ್ಟು ಮುಟ್ಟುವುದರೊಳಗೆ ಚಟ್ಟದೊಂದಿಗೆ ಮನೆಯ ಮುಂದೆ ಹಾಜರಾದರು. ಆಗಲೇ ನೆಲದ ಮೇಲೆ ದರ್ಭೆ ಹುಲ್ಲನ್ನು ಹಾಸಿ ಮಲಗಿಸಿದ ಶಂಕರಭಟ್ಟರ ಪಾರ್ಥಿವ ಶರೀರವನ್ನೆತ್ತಿ ಚಟ್ಟದಲ್ಲಿಟ್ಟು ನಾಲ್ವರು ಹೊತ್ತುಕೊಂಡರು. ಇಬ್ಬರು ಭಜನೆಯ ಹಾಡುಗಳನ್ನು ಹಾಡುತ್ತಾ ಸಾಗಿದರು. ಡಾ॥ಕೇಶವ, ಕಾವೇರಿ, ಶಾರದೆ, ಶಂಕರ, ಎಲ್ಲರೂ ಕಾರಿನಲ್ಲಿ ಘಾಟನ್ನು ತಲುಪಿದರು. ಅಲ್ಲಿಯೇ ಧೋತಿ ಉಟ್ಟು ಗಂಗೆಯಲ್ಲಿ ಮುಳುಗಿ ಸ್ನಾನ ಮಾಡಿ, ತಂದೆಯ ಉತ್ತರಕ್ರಿಯಾದಿ ಕರ್ಮವನ್ನು ಮುಗಿಸಿದರು. ಆಗಲೇ ಕಟ್ಟಿಗೆ ರಾಶಿಮಾಡಿ, ಮಧ್ಯದಲ್ಲಿ ಮೃತ ಶರೀರವನ್ನು ಇಟ್ಟರು. ಡಾ। ಕೇಶವ ತಂದೆಯ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಗಂಟೆಯೊಳಗೆ ಶರೀರ ಹೊತ್ತಿ ಉರಿಯಿತು. ಆಗ 'ಪಟ್ ಪಟ್' ಎನ್ನುವ ಶಬ್ದಗಳು, ಕೇಶವನ ಎದೆಯೊಳಗೆ ಏನೋ ಯಾತನೆಯನ್ನು ಕೊಡುತ್ತಿತ್ತು. ಶವ ಪೂರ್ತಿ ಹೊತ್ತಿ ಉರಿದು ಭಸ್ಮವಾದ ಮೇಲೆ ಹೊಸ ಮಡಿಕೆಯಲ್ಲಿ ಅಸ್ತಿ ಭಸ್ಮವನ್ನು ತುಂಬಿ, ಗಂಗಾ ಮಾತೆಗೆ ಅರ್ಪಿಸಿ ತರ್ಪಣ ಬಿಟ್ಟರು ಡಾ। ಕೇಶವ ಮತ್ತೊಮ್ಮೆ ಗಂಗೆಯಲ್ಲಿ ಸ್ನಾನ ಮಾಡಿದರು. ಅವರ ಹಿಂದೆ, ಕಾವೇರಿ, ಶಾರದೆ, ಶಂಕರಪ್ರಸಾದರಿಗೂ ಸ್ನಾನವಾಯಿತು. ಮರಳಿ ಮನೆಗೆ ಬಂದರು. ಒಬ್ಬರಿಗೂ ಮಾತನಾಡುವ ಉತ್ಸಾಹವೇ ಇರಲಿಲ್ಲ.

ಮನೆ ತಲುಪುವಾಗ ಉಡುಪಿ ಭಟ್ಟರು ಬಿಸಿಬಿಸಿ ಅನ್ನ ಸಾರು, ಮೊಸರು ಕಳುಹಿಸಿಕೊಟ್ಟು, ಮನೆಯಿಂದ ಹೆಂಗಸರೊಬ್ಬರನ್ನು ಕಳುಹಿಸಿ, ಅವರಿಗೆ ಬಳುಸುವ ವ್ಯವಸ್ಥೆ ಮಾಡಿದ್ದರು. ತಾವು ಸ್ವತಃ ಅವರಿಗೆ ಬಡಿಸಲು ನಿಂತರು.

"ಡಾಕ್ಟ್ರೆ, ನೀವು ಗಂಟೆವರೆಗೆ ಅಲ್ಲಿ ಕಾದು ನಿಂತದ್ದು ಒಳ್ಳೆದೇ ಆಯಿತು. ಇಲ್ಲವಾದರೆ ಕಥೆ ಬೇರೆಯಾಗುತ್ತಿತ್ತು.

"ಏನಾಗುತ್ತಿತ್ತು ಭಟ್ಟರೇ"

"ಆ ಫಂಡಾಗಳೋ ಮಹಾ ಘಾಟಿಗಳು, ಶವ ಹೊತ್ತುತ್ತಾ ಇರಬೇಕಾದರೆ ನೀರೆರೆದು ಆರಿಸಿಬಿಡುತ್ತಿದ್ದರು. ಅರೆಬೆಂದ ಶವವನ್ನು ಗಂಗೆಗೆ ದೂಡಿ ಆ ಕಟ್ಟಿಗೆಗಳನ್ನು ಇನ್ನೊಂದು ಶವ ಸುಡಲು ಉಪಯೋಗಿಸುತ್ತಿದ್ದರು. ಅವರಿಗೆ ಅಯ ದಾಕ್ಷಿಣ್ಯ ಒಂದೂ ಇಲ್ಲ. ಹೆಣದ ಮೇಲೆ ಕಾಸು ಮಾಡುವ ಪಿಶಾಚಿಗಳು ಅವು"

"ಇದು ನನಗೆ ಗೊತ್ತಿರಲಿಲ್ಲ ಭಟ್ಟರೇ"

"ಹಣಕ್ಕಾಗಿ ಮನುಷ್ಯ ಎಂತಹ ಹೀನ ಕೆಲಸವನ್ನೂ ಮಾಡುತ್ತಾನೆ ಎಂಬುದಕ್ಕೆ ಇದೇ ಸಾಕ್ಷಿ.

"ಹೌದು, ಆದರೆ ನನ್ನ ತಂದೆಯವರ ಸಂಪೂರ್ಣ ಅಗ್ನಿಗೆ ಆಹುತಿ ಆಯಿತು. ಅದೇ ಸಮಾಧಾನ ನನಗೆ.

"ಅದಕ್ಕೆ ನಿಮಗೆ ಎರಡುಪಟ್ಟು ಹಣ ತೆರಬೇಕಾಯಿತು".

"ಆಗಲಿ, ತಂದೆಯ ಇಚ್ಛೆ ಪೂರೈಸಿದೆನಲ್ಲಾ ಅಷ್ಟೇ ಸಾಕು" ಮುಂದೆ ತಂದೆಯವರ ಉತ್ತರ ಕ್ರಿಯಾದಿಗಳು ಏನೇನು ಮಾಡಬೇಕೋ ಅದನ್ನು ಮಾಡಿಸುವ ವ್ಯವಸ್ಥೆ ಮಾಡಿ ಭಟ್ಟರೆ, ಹಾಗೆಯೇ ಉಪಾಧ್ಯಾಯರಿಗೂ ಒಮ್ಮೆ ಈ ಕಡೆ ಬರಹೇಳಿ ಆಗದೇ?"

"ಆಯಿತು ಡಾಕ್ಟ್ರೆ. ನೀವು ಯಾವುದಕ್ಕೂ ಚಿಂತೆ ಮಾಡಬೇಡಿ. ನಾನೀಗ ಮನೆಕಡೆ ಹೋಗಿ ಬರುತ್ತೇನೆ"

"ನನ್ನಿಂದಾಗಿ ನಿಮ್ಮ ಹೋಟಲು ವ್ಯವಹಾರಕ್ಕೆ ತೊಂದರೆ ಆಯಿತೋ ಏನೋ?"

"ಏನಿಲ್ಲಾ. ಕೌಂಟರಿನಲ್ಲಿ ನನ್ನ ಮಗ ರಾಘು ಕುಳಿತು ಸುಧಾರಿಸುತ್ತಾನೆ. ಹೇಳಿ ಬಂದಿದ್ದೇನೆ"

"ತುಂಬಾ ಧನ್ಯವಾದಗಳು ಭಟ್ಟರೆ. ನನಗಿಲ್ಲಿ ನನ್ನವರು ಎನ್ನುವವರು ಯಾರೂ ಇರಲಿಲ್ಲ. ಆಸ್ಪತ್ರೆಯ ಕೆಲಸಗಳನ್ನು ಬಿಟ್ಟರೆ ನನಗೆ ಯಾವುದರ ಅನುಭವವೂ ಇಲ್ಲ"

"ಒಬ್ಬೊಬ್ಬರಿಗೆ ಒಂದೊಂದು ಅನುಭವ ಡಾಕ್ಟ್ರೆ. ನಿಮ್ಮ ಆಸ್ಪತ್ರೆಯ ಕೆಲಸ ನನಗೆ ಏನಾದರೂ ಬರುತ್ತದೆಯೇ? ನಮಗೇನಾದರೂ ಆದರೆ ನಿಮ್ಮ ಬಳಿಗೆ ಓಡಿಬರಬೇಕಲ್ಲವೇ? ಹಾಗೆ ಒಬ್ಬರಿಗೊಬ್ಬರು ಹೊಂದಿಕೊಂಡು ಹೋದರೆ ಎಲ್ಲವೂ ಅನುಕೂಲವಾಗುತ್ತದೆ".

"ಅದು ಹೌದು. ನೀವು ಹೇಳಿದ್ದು ಸರಿ" ಎಂದರು ಡಾಕ್ಟ್ರು.

ಟೆಲಿಗ್ರಾಮ್ ಅದೇ ದಿವಸ ಸಾಯಂಕಾಲ ರಘುರಾಮನಿಗೆ ತಲುಪಿತು. ಅದನ್ನು ಹಿಡಿದುಕೊಂಡೇ ತಂದೆ ಬಳಿಗೆ ನಡೆದ.

"ಅಪ್ಪಾ, ಇದಾ ಕಾಶಿಂದ ತಂತೆ ಬಯಿಂದು. ಡಾ। ಕೇಶವನ ಅಪ್ಪಂಗೆ ಸಕ್ಕತ್ತು ಕಾಯಿಲೆಡ. ಕೂಡ್ಳೆ ಹೆರಟುಬಾ ಹೇಳಿ ಇದ್ದು" ಎಂದು ಟೆಲಿಗ್ರಾಮನ್ನು ತಂದೆಯ ಕೈಯಲ್ಲಿ ಕೊಟ್ಟ ರಘುರಾಮ. ಅವರು ಅದನ್ನು ನೋಡಿದರು.

"ಅಲ್ಲಾ ಕಾಯಿಲೆ ಅದರೆ ಅವಂಗೆ ಮದ್ದು ಕೊಡುದರ ಬಿಟ್ಟು ನಿನ್ನ ಎಂತಕೆ ಅರ್ಜೆಂಟು ಬಾ ಹೇಳಿ ತಂತಿ ಕಳುಸಿದವು? ಅವು ಇಬ್ರೂ ಡಾಕ್ಟ್ರುಗೊ ಅಲ್ಲದೋ? ನೀನೆಂತ ಮದ್ದುಕೊಡುತ್ತಿಯೊ?

"ಅದು ಹಾಂಗಲ್ಲಪ್ಪ, ಬಹುಷ್ಯ ಅತ್ತಗೆಯ ಮಾವ ತೀರಿಹೋಗಿರಬೇಕು. ಅದಕ್ಕೆ ತಂತಿ ಕೊಟ್ಟದು"

"ಮತ್ತೆ ಹಾಂಗೇ ಕೊಡ್ಳಾವುತ್ತಿತ್ತಿಲ್ಲೆಯೋ"

"ಹಾಂಗೆ ಕೊಡುವ ಕ್ರಮ ಇಲ್ಲೆ ಅಪ್ಪ. ಟೆಲಿಗ್ರಾಮ ಕೊಡುವಾಗ ಸಕತ್ ಕಾಯಿಲೆ ಹೇಳಿಯೇ ಕೊಡುವ ಕ್ರಮ"

ರಘುರಾಮನ ತಂದೆಗೆ ಅರ್ಥವಾಯಿತು.

"ಹಾಂಗಾರೆ ನೀನು ನಾಳಂಗೆ ಉದಿಯಪ್ಪಾಗಳೇ ಹೋಗು ಮಗಾ. ಅವಕ್ಕಲ್ಲಿ ಬಂಧುಗೋ ಹೇಳಿ ಆರಿದ್ದವು?"

"ಆತಪ್ಪಾ, ಇದಾ ಆನೊಂದು ಶಾಲೆಗೆ ರಜೆ ಅರ್ಜಿ ಬರೆದುಕೊಡುತ್ತೆ. ಅದರ ಮುಟ್ಟುಸುವ ವ್ಯವಸ್ಥೆ ಮಾಡಿ"

"ಆನೇ ಖುದ್ದಾಗಿ ಹೋಗಿ ಹೆಡ್ಮಸ್ಟ್ರಂಗೆ ಕೊಡುತ್ತೆ ಆತೊ. ಜಾಗ್ರತೆಲಿ ಹೋಗು. ಗಡಿಬಿಡಿ ಮಾಡ್ಕೊಳೇಡ" ಅಪ್ಪ ಸಮಾಧಾನ ಮಾಡಿದರು.

ರಘುರಾಮ ಮರುದಿನ ಬೆಳಿಗ್ಗಿನ ರೈಲಿಗೆ ಹೊರಟು ಮೂರನೇ ದಿನ ಬೆಳಿಗ್ಗೆ ಕಾಶಿಗೆ ತಲುಪಿದ. ಸೀದಾ ಮನೆಗೆ ನಡೆದಾಗ, ಶಾರದೆ ಕಾವೇರಿ ಚಾವಡಿಯಲ್ಲಿ ಅವನ ಬರುವಿಕೆಗಾಗಿ ಕಾದು ಕುಳಿತಂತಿತ್ತು. ಡಾ। ಕೇಶವ ಮನೆಯಲ್ಲಿರಲಿಲ್ಲ.

'ಬಾ ಭಾವ" ಎಂದಳು ಕಾವೇರಿ. ರಘುರಾಮ ಸೀದಾ ಶಂಕರಭಟ್ರು ಮಲಗುತ್ತಿದ್ದ ಕೋಣೆಗೊಮ್ಮೆ ಕಣ್ಣಾಡಿಸಿದ ಪರಿಸ್ಥಿತಿ ಅರ್ಥವಾಯಿತು.

"ಮಾವ ಹೋಗಿ ಎಷ್ಟು ದಿನ ಆತು ಅತ್ತಿಗೆ"

"ಇಂದಿಂಗೆ ನಾಲ್ಕು ದಿನ ಆತು" ಅಂದಳು ಕಾವೇರಿ.

"ಎಂತಾದ್ದು?"

"ಗೆಂಟ್ಲ ಕೇಂನ್ಸರು ಆದ್ದು; ಐದಾರು ತಿಂಗಳಿಂದ ಅದಕ್ಕೆ ರಜಾ ರಜಾ ಇತ್ತಡ ಹೇಳಿದ್ದವೇ ಇಲ್ಲೆ. ಜೋರಾಗಿ ನುಂಗಲೆ ಎಡಿಯಿದ್ದ ಮತ್ತೆ ಹೇಳಿದವು"

"ಮದ್ದು ಮಾಡಿದ್ದಿಲ್ಲಿಯೋ? ಬೇರೆ ಡಾಕ್ಟ್ರಕ್ಕೊಗೆ ತೋರ್ಸಿದ್ದಿಲ್ಲೆಯೋ?"

"ಎಲ್ಲಾ ತೋರ್ಸಿ ಆಯಿದು ಭಾವ, ಗೆಂಟ್ಲು ತಜ್ಞಂಗೂ ತೋರ್ಸಿದೆಯೊ, ಇದು ಒಳದಿಕೆ ಬೆಳದಲ್ಲಿ ಎಂತ ಮಾಡ್ಲೂ ಸಾಧ್ಯ ಇಲ್ಲೆ. ದಿನಲೆಕ್ಕ ಅಷ್ಟೆ. ಹೆಚ್ಚು ಹೇಳಿರೆ ಇನ್ನೆರಡು ತಿಂಗಳು ಬದುಕ್ಕುಗು ಹೇಳಿದ. ಅವ ಹೇಳಿದ ಹಾಂಗೇ ಆತು ಆನು ಬದುಕ್ಕಿದು ಎರಡೇ ತಿಂಗಳು" ಕಾವೇರಿಗೆ ಹೇಳುವಾಗ ದುಃಖ ಉಕ್ಕಿ ಬಂತು.

"ಮತ್ತೆ ಶವ ಸುಡ್ಳೆ ವ್ಯವಸ್ಥೆ ಹೇಂಗೆ ಮಾಡಿದ್ದಿ?"

"ಇಲ್ಲಾಣ ಉಡುಪಿ ಹೋಟ್ಳು ಭಟ್ಟ ಎಲ್ಲಾ ವ್ಯವಸ್ಥೆ ಮಾಡಿದ. ಮಾವನೋರ ಆಶೆ ಹಾಂಗೆ ಅವರ ಎಲುಬು ಬೂದಿಯ ಗಂಗೆಯ ಬಿಟ್ಟು ಆಯಿದು" ಇನ್ನು ಬೊಜ್ಜ ಶಪುಂಡಿಯ ವ್ಯವಸ್ಥೆ ಆಗಬೇಕು?"

"ಅದರೆಲ್ಲಾ ವ್ಯವಸ್ಥೆ ಮಾಡುವೊ ಅತ್ತಿಗೆ ಆದರೆ ಮುಂದಿನ ವ್ಯವಸ್ಥೆ ಹೇಂಗೆ ಆಲೋಚನೆ ಮಾಡಿದ್ದೀರೋ?"

"ಮುಂದಂದು ಎಂತದೂ ಆಲೋಚನೆ ಮಾಡಿದ್ದಿಲ್ಲೆ ಭಾವ. ಇಷ್ಟರವರೆಗೆ ಮನೆಗೆ ಮಾವ ಇತ್ತಿದ್ದವು. ಶಾರದೆ ಇತ್ತು. ಮುಂದಕ್ಕೆ ಮನಗೊಂದು ವ್ಯವಸ್ಥೆ ಆಯೇಕನ್ನೆ? ಮಾಣಿಯ ನೋಡ್ಳಾಯೇಕನ್ನೆ?"

"ಮನಗೆ ಆರನ್ನಾದರೂ ಮಾಡೇಕು. ಇಲ್ಯಾಣವು ಸರಿಗಟ್ಟಿನ ಜೆನ್ನಂಗೊ ಅಲ್ಲ. ಅವಂಗೆ ಊಟ ತಿಂಡಿ, ಹಾಲಿನ ವ್ಯವಸ್ಥೆ ನೋಡ್ಳೆ ಒಂದು ಜೆನ ಬೇಕೆ ಬೇಕು" ಆರಾಹ ಊರಿಂದ ಬಪ್ಪವು ಇದ್ದರೆ ನೋಡಿ ಭಾವ"

"ಊರಿಂದ ಇಷ್ಟು ದೂರ ಬಪ್ಪವು ಆರಿರುತ್ತವು ಅತ್ತಿಗೆ? ಅದೂ ಕೂಸುಗಳ ಹೆಮ್ಮಕ್ಕಳ ಕಳುಸಲೆ ಆರೂ ತಯಾರಿರುತ್ತವಿಲ್ಲೆ"

"ಹಾಂಗಾರೆ ಎಂಥ ಮಾಡುದು ಭಾವ? ಎನಗೆ ತಲೆಯೇ ಓಡುತ್ತಿಲ್ಲೆ?"

"ಆನು ಇದನ್ನೇ ರೈಲಲ್ಲಿ ಬಪ್ಪಾಗ ಆಲೋಚನೆ ಮಾಡಿಗೊಂಡು ಬಂದದು"

"ಎಂತದು ಹೇಳು ಭಾವ"

"ಈ ಸಮಸ್ಯೆಗೆ ಒಳ್ಳೆ ಪರಿಹಾರ ಕಂಡು ಹಿಡುದ್ದೆ" ನಿಂಗೊಗೆ ಒಪ್ಪಿಗೆ ಆವುತ್ತೋ ಇಲ್ಲೆಯೋ?"

"ನೀನು ಎಂತ ಹೇಳಿದರೂ ಎಂಗಳ ಒಳ್ಳೇದಕ್ಕೆ ಹೇಳುವ ನಂಬಿಕೆ ಎನಗಿದ್ದು ಹೇಳು" ಒತ್ತಾಯಿಸಿದಳು ಕಾವೇರಿ.

"ಅತ್ತಿಗೆ, ಇದು ನಿಂಗಳ ಊರಲ್ಲ, ಇಲ್ಲಿಯ ಜೆನಂಗೊ ನಮ್ಮೊವಲ್ಲ. ನಿಂಗೂ ಇಬ್ರೂ ಡಾಕ್ಟ್ರಕ್ಕೊ, ಆರಾರದ್ದೋ ಚಾಕ್ರಿ ಮಾಡಿ ಮದ್ದು ಕೊಟ್ಟು ಗುಣ ಮಾಡುತ್ತಿ. ಇದನ್ನೇ ನಿಂಗೊಗೆ ನಮ್ಮೂರಿಂಗೆ ಬಂದು ಮಾಡ್ಳಾಗದೋ?"

"ಅದು ಹೇಂಗೆ ಭಾವ?"

"ಹೇಂಗೆ ಹೇಳಿರೆ, ಇಬ್ರೂ ಊರಿಂಗೆ ಬನ್ನಿ. ಅಲ್ಲಿ ಕಣ್ಯಾರಲ್ಲಿ ಒಂದು ಆಸ್ಪತ್ರೆ ಕಟ್ಟುಸಿ, ಅಲ್ಲಿ ಈಗ ಕಾಯಿಲೆ ಬಂದರೆ ಕೊಡೆಯಾಲಕ್ಕೆ ಹೋಯೇಕಷ್ಟೆ. ಅದೂ ಸರಕಾರಿ ವೆನ್‌ಲಾಕ್ ಆಸ್ಪತ್ರೆ. ಕಣ್ಯಾರಲ್ಲಿ ಒಬ್ಬನೂ ಒಳ್ಳೆ ಡಾಕ್ಟ್ರಿಲ್ಲೆ. ಒಂದಿಬ್ರು ಇದ್ದವು. ಬರೇ ಪೈಸೆ ತಿಂದಿಕ್ಕಿ ಮುಂದಕ್ಕೆ ಹೋಗಿ ಹೇಳುತ್ತವು. ಯಾವ ಕಾಯಿಲೆಯೂ ಗುಣ ಮಾಡ್ಳೆ ಅವರಂದ ಎಡಿತ್ತಿಲ್ಲೆ. ಎಲ್ಲೊರಿಂಗೂ ಕೊಡೆಯಾಲಕ್ಕೆ ಹೋಪ ತ್ರಾಣವೂ ಇರುತ್ತಿಲ್ಲೆ. ಹಾಂಗೇ ನರಳಿ ಸಾಯಿತ್ತವು. ನಿಂಗೊ ಅಲ್ಲಿಗೆ ಬಂದರೆ ಬಡರೋಗಿಗೊಕ್ಕೆ ದೇವರು ಬಂದ ಹಾಂಗೆ ಅಕ್ಕು. ನಿಂಗಳ ಕಷ್ಟವೂ ಪರಿಹಾರ ಅಕ್ಕು. ಅಲ್ಲಿ ಹತ್ರೆ ನಿನ್ನ ಅಬ್ಬೆ ಅಪ್ಪ ಇರುತ್ತವು. ಅದು ಬಿಟ್ಟು ಈ ಊರಲ್ಲದ ಊರಿಲ್ಲಿ ಇದ್ದು ಎಂತ ಮಾಡುತ್ತಿ?"

"ಈ ವಿಷಯ ಅವರ ಹತ್ರೆ ಮಾತಾಡಿ ನಿರ್ಧಾರಕ್ಕೆ ಬರೇಕಷ್ಟೆ ಭಾವ"

"ಅವಕ್ಕೂ ಹೇಳಿನೋಡು"

"ಆತು ಹೇಳುತ್ತೆ. ನಿಂಗೊಗೆ ಒಪ್ಪಿಗೆ ಆದರೆ ನೋಡಿ. ಮುಂದಿನ ವ್ಯವಸ್ಥೆಯ ಆನು ನೋಡ್ಯೊಂಬೆ"

ರಘುರಾಮ ಡಾ॥ ಕೇಶವ ಬರುವುದನ್ನೇ ಕಾಯುತ್ತಿದ್ದ. ಶಾರದೆ ಮನೆಯೊಳಗೆ ಅಡಿಗೆ ತಯಾರಿಯಲ್ಲಿದ್ದಳು.

ಹೊತ್ತಿಗಿಂತ ಸ್ವಲ್ಪ ವಿಳಂಬವಾಗಿ ಡಾ॥ ಕೇಶವ ಬಂದರು. ಅವರನ್ನು ಕಾದು ಬೇಸತ್ತ ರಘುರಾಮ ಸ್ವಲ್ಪ ವಿಶ್ರಾಂತಿಗೆಂದು ಮಲಗಿದವನಿಗೆ ಹಾಗೇ ನಿದ್ದೆ ಬಂದುಬಿಟ್ಟಿತ್ತು. ಡಾಕ್ಟ್ರ ಬಂದ ಕೂಡಲೇ ಶಾರದೆ ಲಗುಬಗೆಯಿಂದ ಎದ್ದು ಅವರಿಗೆ ಊಟಕ್ಕೆ ತಯಾರು ಮಾಡಿಟ್ಟು ಕರೆದಳು.

"ಉಂಬಲೆ ಮಡುಗಿದ್ದೆ ಬನ್ನಿ ಭಾವ" ಎಂದಳು.

"ಆತು ಬತ್ತೆ. ಎಂತ ರಘುರಾಮ ಬಯಿಂದಾ ಇಲ್ಲೆಯೋ ಶಾರದೆ?"

"ಬಯಿಂದವು ಭಾವ. ಉದಿಯಪ್ಪಾಗಳೇ. ಇಷ್ಟು ಹೊತ್ತು ನಿಂಗಳ ಕಾದು ಈಗ ರಜಾ ಒರಗಿದವು. ಏಳ್ಸೇಕೋ?"

"ಬೇಡ ಶಾರದೆ. ಮನಿಕ್ಕೊಳ್ಳಿ. ಎಷ್ಟಾದರೂ ರೈಲಿನಲ್ಲಿ ಒರಕ್ಕು ಸರಿಯಾಗಿರ? ಅವಂಗೆ ವರ್ತಮಾನ ಎಲ್ಲಾ ಗೊಂತಾದಿಕ್ಕು"

"ಗೊಂತಾಯಿದು ಭಾವ?"

"ಎಂತ ನಿನ್ನ ಕರಕ್ಕೊಂಡು ಹೋವುತ್ತನಾಡವೋ"

"ಬತ್ತರೆ ಕರಕ್ಕೊಂಡು ಹೋವುತ್ತೆ. ಮೇಲೆ ಮೇಲೆ ಬಪ್ಪಲೆ ಎಡಿತ್ತಿಲ್ಲೆ ಹೇಳಿದವು"

"ಅದಕ್ಕೆ ನೀನೆಂತ ಹೇಳಿದೆ ಶಾರದೆ?"

"ಅಕ್ಕ, ಭಾವನ ಕೇಳಿ ನೋಡುತ್ತೆ ಹೇಳಿದೆ" ಎಂದಳು ಶಾರದೆ.

ಡಾಕ್ಟ್ರ ಮೌನವಾಗಿ ಊಟ ಮುಗಿಸಿದರು

"ಅವರ ಏಳ್ಸೋಕೋ ಭಾವ?"

"ಬೇಡ ಶಾರದೆ ರಜಾ ಮನಿಕ್ಕೊಳ್ಳಿ. ಆನಿಂದು ಮಧ್ಯಾಹ್ನದ ಮೇಲೆ ಆಸ್ಪತ್ರೆಗೆ ಹೋವುತ್ತಿಲ್ಲೆ. ಅದಕ್ಕೆ ಬಪ್ಪಲೆ ರಜಾ ತಡವಾತು. ಆನೂ ರಜಾ ಅಡ್ಡ ಆವುತ್ತೆ. ಹೇಳಿದವರೇ ವಿಶ್ರಾಂತಿಗಾಗಿ ತಮ್ಮ ಕೋಣೆಯನ್ನು ಸೇರಿದರು.

ಸಾಯಂಕಾಲ ನಾಲ್ಕು ಗಂಟೆಗೆ ಇಬ್ಬರೂ ಎದ್ದು ಬಂದರು.

"ಯಾವಾಗ ಬಂದೆ ಕೇಶವ. ಆನು ನಿನ್ನ ಕಾದು ಕಾದು ಹಾಂಗೇ ಒರಗಿದೆ. ಏಳ್ಸೇದಾತು"

“ಆನೇ ಬೇಡ ಹೇಳಿದ ಶಾರದೆಗೆ. ಆನಿಂದು ಮಧ್ಯಾಹ್ನ ಮೇಲೆ ಆಸ್ಪತ್ರೆಗೆ ಹೋಪುತ್ತಿಲ್ಲೆ. ನಿನಗೆ ಶುದ್ಧಿ ಗೊಂತಾಯಿಕ್ಕು ಅಲ್ಲದೋ?”

“ಗೊಂತಾಯಿದು ಕೇಶವ. ಆದರೆ ಅವು ಇಷ್ಟು ಬೇಗ ಹೋಕು ಹೇಳಿ ಆನು ಕನಸಿಲ್ಲು ಜಾನ್ಸಿದ್ದಿಲ್ಲೆ”

“ಆನೂ ಜಾನ್ಸಿದ್ದಿಲ್ಲೆ. ಎಂಗಳ ವಿದ್ಯೆಗೆ ಅವರ ಉಳುಶುವ ಸಾಮರ್ಥ್ಯಗೆ ಇಲ್ಲದ್ದಾತು” ವಿಷಾದದಿಂದ ನುಡಿದರು ಡಾಕ್ಟ್ರು.

“ಹುಟ್ಟು ಸಾವು ಎರಡೂ ಮನುಷ್ಯರ ಕೈಲಿಲ್ಲೆ ಅಲ್ಲದೋ?”

“ಈಗ ಮುಂದೆ ಹೇಂಗೆ ಮಾಡುದು ಹೇಳಿಯೇ ಎನಗೆ ಆಲೋಚನೆ. ಇಷ್ಟು ದಿನ ಅಪ್ಪ, ಶಾರದೆ ಮನೇಲಿ ಇದ್ದವು. ಎಂಗೊ ನಿಶ್ಚಿಂತೆಲಿ ಇತ್ತಿದ್ದೆಯೋ. ಈಗ ಅಪ್ಪ ಹೋದವು. ಶಾರದೆಯ ನೀನು ಕರಕ್ಕೊಂಡು ಹೋಪೆ. ಇನ್ನೂ ಇರು ಹೇಳುದು ತಪ್ಪಾವುತ್ತು; ಈಗಳೇ ಅದಿಲ್ಲಿಗೆ ಬಂದು ಏಳೆಂಟು ತಿಂಗಳಾತು. ಅದಕ್ಕೂ ಒಬ್ಬ ಮಗ ಇದ್ದ. ಅತ್ತೆ ಮಾವ ಇದ್ದವು. ಆದರೆ ಎಂಗಳ ಪರಿಸ್ಥಿತಿ ಬದಲಾಯಿದು. ಮಾಣಿಯ ಮನೇಲಿ ಬಿಟ್ಟಿಕ್ಕಿ ಹೋಯೇಕು ಅವಂಗೆ ಹೊತ್ತು ಹೊತ್ತಿಂಗೆ ತಿನ್ಸೇಕು. ಆಡ್ಸೇಕು. ಒರಗುಸೇಕು” ಎಂಗಳದ್ದು ಕೌಪೀನ ಸನ್ಯಾಸಿಯ ಕತೆ ಆಯಿದು.

“ಅದಕ್ಕೆ ಆನೊಂದು ಸಲಹೆ ಕೊಟ್ಟಿದೆ. ಅತ್ತಿಗೆಯ ಹತ್ರವೂ ಮಾತಾಡಿದ್ದೆ. ನೀನು ಬಂದ ಮೇಲೆ ಮಾತಾಡೇಕು ಹೇಳಿತ್ತು”

“ಯಾವ ಸಲಹೆ? ಎನಗೂ ಹೇಳು”

“ಇನ್ನು ನಿಂಗೊ ಇಲ್ಲಿ ಇಪ್ಪಲ್ಲಿ ಅರ್ಥ ಇಲ್ಲೆ. ಇದು ನಿಂಗಳ ಊರು ಅಲ್ಲೆ, ಜೆನವೂ ಅಲ್ಲ. ಅದಕ್ಕೆ ನಿಂಗೊ ಇಬ್ರೂ ಊರಿಂಗೆ ಬಂದು ಆಸ್ಪತ್ರೆ ನಡೆಶಿ.

“ಅಲ್ಲೆಲ್ಲಿದ್ದು ಆಸ್ಪತ್ರೆ!”

“ಎಲ್ಲಿಯೂ ಇಲ್ಲೆ. ನಿಂಗಳೇ “ಅಪ್ಪನ ಹೆಸರಿಂಗೆ ಒಂದು ಆಸ್ಪತ್ರೆಯ ಕಣ್ಯಾರಲ್ಲಿ ಕಟ್ಟಿ ಅಲ್ಲಿಯೇ ರೋಗಿಗಳ ಚಾಕ್ರಿ ಮಾಡಿ ಸರಿಯಾದ ಆಸ್ಪತ್ರೆ ಇಲ್ಲದ್ದೆ ಅಸಬಡಿತ್ತವು ಜೆನಂಗೊ?”

“ಹೇಂಗೆ ಮಾಡೇಕು ಅಣ್ಣ? ಅಲ್ಲಿ ಆಸ್ಪತ್ರೆ ಕಟ್ಟುದು ಹೇಂಗೆ? ಆರಿದ್ದವು ಸಹಾಯ ಮಾಡ್ಳೆ?

“ನಿಂಗೊ ಒಪ್ಪಿಗೆ ಕೊಡಿ; ಅಲ್ಲಿ ಜಮೀನು ನೋಡಿ ಕರೀದು ನೋಡಿ, ನಿಂಗೊಗೆ ಬೇಕಾದ ಹಾಂಗೆ ಆಸ್ಪತ್ರೆಯನ್ನೂ, ಮನೆಯನ್ನು ಕಟ್ಟಿಸಿಕೊಡೂವ ಜವಾಬ್ದಾರಿ ಎನ್ನದು. ಅಲ್ಲಿ ಬೇಕಾದರೆ ಶಾರದೆ ನಿಂಗಳ ಒಟ್ಟಿಗೆ ಇದ್ದರೂ ತೊಂದರೆ ಆಗ. ಹೆಂಗೂ ಮಾಣಿಗೆ ಕಲಿವಲೆ ಮಾದ್ರಿಗಳ ಶಾಲಗೆ ಕಳುಸಲಕ್ಕು; ಎಡನ್ನಾಡಿ ಇದ್ದರೆ ಅವಂಗೆ ಮುಂದೆ ಕಲಿವಲೆ ಎಡಿಯ ಲ್ಲಿಯ ನಾಯಿಕಾಪು ಶಾಲೆಲಿ ಒಂದು ದಿನ ಮಾಷ್ಟ್ರು ಬಂದರೆ ಮೂರು ದಿನ ಬಪ್ಪ ಕ್ರಮ ಇಲ್ಲೆ. ಆನು ಬಪ್ಪಾಗ ಇದರೆಲ್ಲಾ ಆಲೋಚನೆ ಮಾಡ್ಯೊಂಡೇ ಬಯಿಂದೆ.

ನಿನ್ನ ಸಲಹೆ ಒಳ್ಳೆದೇ ಅಣ್ಣ. ಆನು ಕಾವೇರಿಯ ಹತ್ರೆ ಮಾತಾಡಿಕ್ಕಿ ಹೇಳುತ್ತೆ. ಎನಗೂ ನಿನ್ನ ಸಲಹೆ ಸರಿ ಹೇಳಿ ಕಾಣುತ್ತು” ಆದರೆ ಕಾವೇರಿ ವಾಪಾಸು ಊರಿಂಗೆ ಬಪ್ಪಲೆ ಒಪ್ಪುತ್ತೋ ಇಲ್ಲೆಯೋ?

“ಒಪ್ಪದ್ದೆ ಎಂತಾಯಿದು ಅದಕ್ಕೆ? ಅದೆಂತ ಕದ್ದಿಕ್ಕಿ ಊರು ಬಿಟ್ಟು ಹೋಯಿದೋ? ನಿಜ ಹೇಳೇಕು ಎಲ್ಲೋರೂ ಈಗ ಕಾವೇರಿಯ ಹೊಗಳುತ್ತವು ಜೆನಂಗೊ. ಸುಮಾರು ಕೂಸುಗೋಕ್ಕೆ ‘ಕಾವೇರಿ’ ಹೇಳಿ ಹೆಸರು ಮಡಗಿದ್ದವು. ಈಗ ಊರು ಮದಲಾಣ ಹಾಂಗೆ ಇಲ್ಲೆ. ಕೂಸುಗಳನ್ನು ಕಲಿವಲೆ ಕಳಿಸುತ್ತವು. ಸುಮಾರು ಕೂಸುಗೊ, ಕಾನ, ಎಡನಾಡು, ಕೋಣಮ್ಮೆಂದ ಕಣ್ವೈರಕ್ಕೆ ಹೋಗಿ ಮಾದ್ರಿ ಶಾಲೇಲಿ ಕಲಿತ್ತವು. ಈಗ ಮೂರು ನಾಲ್ಕು ಬಸ್ಸುಗೋ ಅತ್ತಿಂದಿತ್ತ ಓಡುತ್ತು. ಕುಂಬ್ಳೆ ಬಸ್ಸು, ವೊಯ್ಯಕೆರೆ ಬಸ್ಸು, ಕಾಸರಗೋಡು ಬಸ್ಸು, ಹೇಳಿ ಅರ್ಧರ್ಧ ಗಂಟೆಗೆ ಬತ್ತು. ಕೂಸುಗೋಕ್ಕೆ ಹೋಗಿ ಬಪ್ಪಲೇ ಅನುಕೂಲ ಆವುತ್ತು.”

“ಆತಂಬಾಗ ಆನು ಕಾವೇರಿಯ ವಿಚಾರ್ಸಿ ಹೇಳುತ್ತೆ”

“ಆತು ಇಂದೇ ಮಾತಾಡುತ್ತೆ”

“ಆ ದಿನ ಗಂಡ ಹೆಂಡತಿ ಇಬ್ಬರೂ ಮಾತನಾಡಿಕೊಂಡರು. ರಘುರಾಮನ ಸಲಹೆ ಯೋಗ್ಯವಾದುದು ಅನ್ನಿಸಿತು ಇಬ್ಬರಿಗೂ.

“ಇನ್ನು ತಾವು ತಡವು ಮಾಡುದು ಬೇಡ ಮಾವನ ವರ್ಷಾಂತ್ಯಕ್ಕೆ ಆಸ್ಪತ್ರೆ ತಯಾರಪ್ಪ ಹಾಂಗೆ ಆಯೇಕು”

“ಪೈಸೆಯ ವ್ಯವಸ್ಥೆ ಆಗೇಡದೋ? ಹೆಚ್ಚು ಕಮ್ಮಿ 2 ಲಕ್ಷ ಆದರೂ ಬೇಕು. ಕನಿಷ್ಟ 20 ಹಾಸಿಗೆ ಅನುಕೂಲ ಇರೇಕು” ಅಂದಳು ಕಾವೇರಿ.

“ಪೈಸೆಗೆ ತೊಂದರೆ ಇಲ್ಲೆ. ಎನ್ನದೇ ಸುಮಾರು ಒಂದೂವರೆ ಲಕ್ಷದಷ್ಟಿದ್ದು ಒಳುದ್ದರ ಬೇಂಕಿಂದ ಸಾಲ ತೆಕ್ಕೊಂಬಲಕ್ಕು”

“ಹಾಂಗಾರೆ ಭಾವಂಗೆ ಹೇಳಿ” ನಿಶ್ಚೈಯವಾಗಿತ್ತು ಕಾವೇರಿ ಮಾತು.

“ನಿನಗೂ ಅದು ಸರಿ ಹೇಳಿ ಕಾಣುತ್ತೋ ಕಾವೇರಿ?’

“ಎನ್ನ ಮನಸ್ಸಿಂಗೂ ಸರಿ ಹೇಳಿ ಕಂಡತ್ತು. ನಾವು ಊರಿಂಗೆ ಹೋಗಿ ಅಲ್ಲಿ ಆಸ್ಪತ್ರೆ ತೆಗದರೆ ಎಷ್ಟೋ ಜನಂಗೋಕ್ಕೆ ಉಪಕಾರ ಅಕ್ಕು. ನಮ್ಮದೇ ಆಸ್ಪತ್ರೆ ಆದ ಕಾರಣ ಮೇಲಾಧಿಕಾರಿಗಳ ಕಿರುಕುಳ, ರಿಪೋರ್ಟುಗೊ, ಲೆಕ್ಕಪರಿಶೋಧನೆ, ಮೀಟಿಂಗುಗೊ ಎಲ್ಲಾ ತಪ್ಪತ್ತು. ರೋಗಿಗಳ ನೋಡ್ಲೆ ಬೇಕಾದಷ್ಟು ಸಮಯ ಸಿಕ್ಕುತ್ತು. ಅದೂ ಅಲ್ಲದ್ದೆ.”

“ಹೇಳು ಕಾವೇರಿ”

“ಎನ್ನ ಅಪ್ಪಂಗೆ ಈಗ ಕಣ್ಣು ಸರಿಯಾಗಿ ಕಾಣುತ್ತಿಲ್ಲೆಡ. ಅಬ್ಬೆಗೂ ಮೊಳಪ್ಪು ಬೇನೆ, ಕೈಕಾಲು ಸೆಳೆತ ಎಲ್ಲಾ ಸುರುವಾಯಿದಾಡ. ಅವಕ್ಕೆ ಇಪ್ಪದ್ದು ನಾಲ್ಕು ಕೂಸುಗೊ ಮಾಂತ್ರ; ಮನೇಲಿ ಆಧಾರ ಆರೂ ಇಲ್ಲೆ. ಅವರನ್ನೂ ಕರಕ್ಕೊಂಡು ಬಂದು ನಮ್ಮೊಟ್ಟಿಂಗೆ ಇಪ್ಪ ಹಾಂಗೆ ಮಾಡ್ಳಕ್ಕು. ಭಾವನೂ ಹೇಳಿರೆ ವಾರಕ್ಕೊಂದಾರಿ ಎರಡು ಸರ್ತಿ ಬಂದಿಕ್ಕಿ ಹೋಕು. ಶಾರದೆ, ಶಂಭು ನಮ್ಮೊಟ್ಟಿಂಗೆ ಇದ್ದರೆ ಪ್ರಸಾದನ ಚಿಂತೆ ನಮಗೆ ಇಲ್ಲದ್ದ ಹಾಂಗೆ ಆವುತ್ತು.

“ಅಲ್ಲಿ ಆಸ್ಪತ್ರೆ ಮಾಡಿದರೆ ಸರಿಯಾಗಿ ನಡಗೋ ಕಾವೇರಿ”

“ಖಂಡಿತಾ ನೆಡಗೂ ಸುತ್ತಮುತ್ತು ಆರೂ ಡಾಕ್ಟ್ರಕ್ಕೋ ಇಲ್ಲೆ. ಹತ್ತು ಹದಿನೈದು ಹಳ್ಳಿಂದ ರೋಗಿಗೆ ಬಕ್ಕು”

“ಹಾಂಗಾರೆ ಭಾವಂಗೆ ಊರಿಂಗೆ ಬತ್ತೆಯೋ ಹೇಳಿ ಹೇಳುವನೋ”

“ಹೇಳುವೋ”

ಇಬ್ಬರೂ ರಘುರಾಮನಿಗೆ ತಾವಿಬ್ಬರೂ ಊರಿಗೆ ಬಂದು ಆಸ್ಪತ್ರೆ ತೆರೆಯುವ ವಿಚಾರವನು ತಿಳಿಸಿದರು. ರಘುರಾಮನಿಗೆ ಸಂತೋಷವಾಯಿತು. ಇಬ್ಬರೂ ತನಗಿಂತ ಹೆಚ್ಚು ವಿದ್ಯೆ ಕಲಿತವರಾದರೂ ತನ್ನ ಮಾತಿಗೆ ಬೆಲೆಕೊಟ್ಟದ್ದು ಖುಷಿಯಾಯಿತು.

“ಹಾಂಗಾರೆ ಆನು ನಾಳೆಯೋ ನಾಡ್ತೋ ಊರಿಂಗೆ ಹೋಗಿ ಮುಂದಿನ ವ್ಯವಸ್ಥೆ ಮಾಡುತ್ತೆ. ನಿಂಗೊಗೆ ಸರಿಗಟ್ಟಾದ ಜಮೀನು ನೋಡ್ತ್ಯೋಳೇಡದೋ? ಸುಮಾರು ಎಷ್ಟು ಜಾಗೆ ಬೇಕಕ್ಕು?

"ಎರಡೆಕ್ರೆ ಆದರೂ ಬೇಕು. ಒಂದೆಕ್ರೆ ಆಸ್ಪತ್ರೆಯ ಲೆಕ್ಕಕ್ಕೆ- ಇನ್ನೊಂದೆಕ್ರೆ ಎಂಗೊಗೆ ಮನೆ ಕಟ್ಟೆ"

"ಅಂಬಾಗ್ ಆನು ಮೂರು ಎಕ್ರೆ ಜಾಗ ನೋಡುತ್ತೆ–ನಿಂಗಳ ಒತ್ತಕ್ಕೆ ಎನಗೂ ಒಂದೆಕ್ರೆ ತೆಕ್ಕೊಳ್ತೆ. ಮುಂದಕ್ಕೆ ಆನು ನಿಂಗಳ ಹತ್ರಂಗೇ ಬಪ್ಪ ಅಂದಾಜು"

"ಒಳ್ಳೆದಾತು; ಮೂರು ಎಕ್ರೆಯನ್ನು ಒಟ್ಟಿಂಗೇ ತೆಕ್ಕೊಂಡರಾತು.

"ಅಣ್ಣ, ನಿನಗೆ ಬೊಜ್ಜ ಕಳುದು ಹೋದರೆ ಸಾಲದೋ?"

"ಇಲ್ಲೆ ನಾಳಂಗೆ ಹೆರಡುತ್ತೆ, ಬೊಜ್ಜ ಶಪುಂಡಿಯ ನಿಂಗೊ ಸಣ್ಣ ಮಟ್ಟಿಂಗೆ ಸುಧಾರ್ಸಿ. ವರ್ಷಾಂತಿಕಪ್ಪಾಗ ಆಸ್ಪತ್ರೆ, ಮನೆ ತಯಾರು ಮಾಡಿ ಅಬ್ಬರಲ್ಲಿ ಮಾಡುವೊ ಆಗದೋ"

"ಅಕ್ಕು"

"ಆನು ಜಮೀನು ನೋಡಿ ಮಾತುಕತೆ ಎಲ್ಲಾ ಮುಗುಶಿ, ನಿನಗೆ ಪತ್ರ ಹಾಕುತ್ತೆ. ನೀನೊಂದಾರಿ ಊರಿಂಗೆ ಬಂದು ಜಾಗ ರಿಜಿಷ್ಟ್ರೇಷನು ಮುಗುಶಿ, ನಿನಗೆ ಪತ್ರ ಹಾಕುತ್ತೆ. ನೀನೊಂದಾರಿ ಊರಿಂಗೆ ಬಂದು ಜಾಗ ರಿಜಿಸ್ಟ್ರೇಷನು ಮಾಡ್ಸಿಕೊಂಡು ಬಾ. ಮತ್ತೆಲ್ಲಾ ಕೆಲಸ ಆನು ನೋಡ್ಯೊಂಬೆ.

"ಈಗ ನಿನ್ನ ಹೆಸರಿಂಗೆ ಮಾಡ್ಸಿ, ಮುಂದೆ ಎನ್ನ ಹೆಸರಿಂಗೆ ಮಾಡಿದರೆ ಆಗದೋ?

"ಆಗ, ಆ ಆಲೋಚನೆ ಎಲ್ಲಾ ಬೇಡ. ಎರಡು ಎಕ್ರೆ ನಿನ್ನ ಹೆಸರಿಂಗೆ ಒಂದು ಎಕ್ರೆ ನನ್ನ ಹೆಸರಿಂಗೆ ರಿಜಿಸ್ಟ್ರ ಮಾಡ್ಸುಮು. ಒಂದಾರಿ ಊರಿಂಗೆ ಬಂದು ಹೋದರೆ ಎಂತದೂ ಆಗ ನಿನಗೆ" ರಘುರಾಮ ಗಂಭೀರವಾಗಿ ಹೇಳಿದ.

"ಆತಪ್ಪ ಬತ್ತೆ. ನೀನು ಹೇಳಿದ ಹಾಂಗೆ ಕೇಳುತ್ತೆ" ಡಾ। ಕೇಶವ ತಣ್ಣಗಾದರು.

"ಆನು ಈಗ ಶಾರದೆಯ ಕರಕ್ಕೊಂಡು ಹೋವುತ್ತಿಲ್ಲೆ. ನೀನು ಬಪ್ಪಾಗ ಕರಕ್ಕೊಂಡು ಬಪ್ಪಲಕ್ಕು. ಇನ್ನು ಒಂದು ವರ್ಷ ಅದು ಇಲ್ಲಿಯೇ ಇರಳಿ. ನಿಂಗಳ ಮಗನ ನೊಡ್ಯೊಂಗು ಮಾಣಿಯ ಬೇರ ಆರ ಕೈಗೂ ಕೊಡೇಡಿ"

"ಇದಕ್ಕೆ ಶಾರದೆ ಒಪ್ಪೇಕನ್ನೆ! 'ಮಾಣಿಯ ನೆಂಪಾವುತ್ತು' ಹೇಳುತ್ತು"

"ಅದರ ಆನು ಒಪ್ಪುಸುವೆ. ಒಂದಾರಿ ಎಲ್ಲೋರೂ ದಡ ಮುಟ್ಟುವ್ರೋ ಆತೊ" ರಘುರಾಮ ಮಾತು ಮುಗಿಸಿದ.

"ಅಣ್ಣ, ನಿನಗೆ ಹೇಗೆ ಕೃತಜ್ಞತೆ ಹೇಳೇಕು ಹೇಳಿ ಎನಗೆ ಅರಡಿತ್ತಿಲ್ಲೆ. ಎಂಗೊಗೆ ಬೇಕಾಗಿ ನೀನೆಷ್ಟು ಆಲೋಚನೆ ಮಾಡಿದ್ದೆ, ಸಹಾಯ ಮಾಡಿದ್ದೆ, ತ್ಯಾಗ ಮಾಡುತ್ತೆ ಹೇಳಿದರ ಗ್ರಹಿಸಲೇ ಎನಗೆ ಎಡಿತ್ತಿಲ್ಲೆ. ಎನ್ನ ಒಡಹುಟ್ಟಿದ ಅಣ್ಣನೂ ಎನಗೆ ಈ ರೀತಿ ಸಹಾಯ ಮಾಡುತ್ತಿತ್ತಾ ಇಲ್ಲೆ" ಅಂತಃಕರಣ ಪೂರ್ವಕವಾಗಿ ನುಡಿದರು ಡಾ। ಕೇಶವ.

"ಅದೆಲ್ಲಾ ಮತ್ತೆ ಆಲೋಚನೆ ಮಾಡುವೊ; ನಿಂಗೊ ಎನ್ನ ಯೋಚನೆಯ ಒಪ್ಪಿದಿರೆನ್ನೆ ಅದೇ ಸಂತೋಷ ಎನಗೆ. ಇನ್ನೊಂದಾರಿ ಹೋಗಿ ಎನ್ನ ಶಾರದೆಯ ಭೇಟಿ ಆಗಿ ಪುಸಲಾಯಿಸುತ್ತೆ. ಅದೆನ್ನ ಮಾತಿನ ತೆಗೆದುಹಾಕ ಹೇಳುವ ಭರವಸೆ ಇದ್ದು ಎನದೆ" ಎಂದವನೇ ರಘುರಾಮ ಮಡದಿಯ ಭೇಟಿಗಾಗಿ ಒಳಗೆ ನಡೆದ.

"ಶಾರದೆ.... ಓ ಎನ್ನ ಶಾರದೆ ಎಲ್ಲಿದ್ದೆ?"

"ಅನಿಲ್ಲಿದ್ದೆ ಅಡಿಗೆ ಮನೇಲಿ, ಮಾಣಿಗೆ ರಜಾ ಮಣ್ಣಿ ಕಾಸುತ್ತಾ ಇದ್ದೆ" ಎಂತಾ ಅಪ್ಪು ಕೊಂಡಾಟಲ್ಲಿ ದಿನಿಗೇಳುತ್ತಿ? ಎನ್ನಂದ ಎಂತಾರೂ ಕೆಲಸ ಆಯೇಕೋ"

"ಎನ್ನ ಸ್ವಭಾವ ನಿನಗೆ ಸರಿಯಾಗಿ ಗೊಂತಿದ್ದು ಹೇಳಿ ಆತುದಾ" ನಗಾಡಿದ ರಘುರಾಮ. "ಎನ್ನ ದೇವರ ಸತ್ಯ ಎನಗೆ ಗೊಂತಿಲ್ಲೆಯೋ" ಶಾರದೆಯೂ ನಕ್ಕಳು.

"ಆತು ಪೀಠಿಕೆ ಸಾಕು. ಎಂತಾಯೇಕು ಹೇಳಿ"

"ಅತ್ತಿಗೆಯೂ ಅಣ್ಣನೂ ಊರಿಂಗೆ ಬತ್ತವುಡ. ಅಲ್ಲಿ ಒಂದು ಆಸ್ಪತ್ರೆ ಕಟ್ಟಿ ಅಲ್ಲಿಯೇ ಇರುತ್ತವು. ನಿನ್ನೆಂದ ಎಂಗಳ ಮಧ್ಯೆ ಅದೇ ಮಾತುಕತೆ ನೆಡದ್ದು.

"ಅವು ಅದಕ್ಕೆ ಒಪ್ಪಿದವೋ"

"ಒಪ್ಪಿದವು ಶಾರದೆ. ಇನ್ನೂ ಅವು ಬರೇಕಾರೆ ಒಂದು ವರ್ಷ ಅಕ್ಕು ಜಾಗೆ ತೆಕ್ಕೊಳೇಕು, ಆಸ್ಪತ್ರೆ ಮನೆ ಕಟ್ಟೋಳೇಕು ಸುಮಾರು ಕೆಲಸ ಬಾಕಿ ಇದ್ದು"

"ಎಲ್ಲಿ ಆಸ್ಪತ್ರೆ ತೆಗೆತ್ತವು"

"ಕಣ್ಯಾದಲ್ಲಿ, ಅಲ್ಲಿ ಹತ್ರೆ ಎಲ್ಲಿಯೂ ಆಸ್ಪತ್ರೆ ಇಲ್ಲೆನ್ನೆ"

"ಅಲ್ಲಿ ತೆಗೆದರೆ ಒಳ್ಳೇದಕ್ಕು"

"ಅವಕ್ಕೆ ಎರಡು ಎಕ್ರೆ ಜಮೀನು ಬೇಕಡಾ. ಅದರ ಒಟ್ಟಿಂಗೆ ಆನೂ ಒಂದೆಕ್ರೆ ತೆಕ್ಕೊಳ್ತೆ ನವಗೂ ಮುಂದಕ್ಕೆ ಮನೆ ಕಟ್ಟಿ ಕೂಪಲಕ್ಕು"

"ಹಾಂಗಾರೆ ಹೇಂಗೆ ಮಾಡುದು?"

"ಆನು ಈ ಸರ್ತಿ ಹೋಪಾದ ನಿನ್ನ ಕರಕ್ಕೊಂಡು ಹೋವುತ್ತಿಲ್ಲೆ. ನೀನು ಹೋದರೆ ಅತ್ತಿಗೆ ಅಣ್ಣಂಗೂ ಕಷ್ಟ ಅಕ್ಕು. ಪ್ರಸಾದನ ಸುಧಾರ್ಸಲೆ ಅವರಂದ ಎಡಿಯ. ಅವ ಹೆಚ್ಚು ನಿನ್ನ ಒಟ್ಟಿಂಗೇ ಇದ್ದವ ಅಲ್ಲದೋ?

"ಅದಪ್ಪು ಅವ ಎನ್ನ ಕೈಂದ ಅಕ್ಕನ ಹತ್ರಂಗೂ ಹೋವುತ್ತಾ ಇಲ್ಲೆ. ಇರುಳು ಮನುಗುವಾಗಲೂ, ಅಕ್ಕನ ಹತ್ರೆ ಮನುಶಲೆ ಕೇಳುತ್ತಾ ಇಲ್ಲೆ. "ಅವ ನಿನ್ನ ಒಟ್ಟಿಂಗೇ ಇದ್ದವಲ್ಲದೋ. ನೀನು ಬಿಟ್ಟಿಕ್ಕಿ ಹೋದರೆ ಕಂಗಾಲಕ್ಕು. ಅಪರೂಪಕ್ಕೆ ಹುಟ್ಟಿದ ಮಾಣಿ. ಸರಿಯಾಗಿ ನೋಡಿಗೋಳ್ಳೇಡದೋ. ಬೇರೆ ಆರು ನಿನ್ನಷ್ಟು ಲ್ಯಾಕಿಲ್ಲಿ ನೋಡಿಗೊಂಗು?" "ಎಂತ ಮಾಡುದು? ಎನಗೊಂದಾರಿ ಮಗನ ಮೋರೆ ನೋಡೇಕು ಹೇಳಿ ಆಯಿದು. ಅಂಬಾಗಂಬಾಗ ಕನಸು ಕಟ್ಟುತ್ತು"

"ನಿನ್ನ ಸಂಕಟ ಎನಗೆ ಅರ್ಥ ಆವುತ್ತು ಶಾರದೆ; ಹಾಂಗೇ ಎನಗೆ ನಿನ್ನ ನೆಂಪು ಎಷ್ಟಾವುತ್ತು ಹೇಳಿ ನಿನಗೆ ಗೊಂತಿದ್ದೊ" ಆದರೂ ನಾವೀಗ ರಜಾ ತಡಕ್ಕೊಳೇಕು. ಇನ್ನೊಂದು ವರ್ಷ ರಜಾ ಕಷ್ಟ ತಿಂದರೆ ಮುಂದಕ್ಕೆ ಎಲ್ಲೋರು ಸುಖಲ್ಲಿ ಇಪ್ಪಲಕ್ಕು"

"ಇಲ್ಲಿ ಎನಗೆಂತ ಕಷ್ಟವೂ ಇಲ್ಲೆ. ಅಕ್ಕ ಭಾವ ಎನ್ನ ಪ್ರೀತಿಲಿ ನೋಡ್ಕೊಳ್ತವು. ರಜವೂ ಬೇಜಾರ ಆಗದ್ದ ಹಾಂಗೆ ನೋಡುತ್ತವು. ಎನಗೆ ಮಗನ ಮೋರೆ ನೋಡೇಕು ಹೇಳುವ ಆಶೆ ಮಾಂತ್ರ ಆವುತ್ತು"

"ನೀನು ಚಿಂತೆ ಮಾಡೇಡ ಶಾರದೆ. ಅದಕ್ಕೆ ಆನು ಒಂದು ವ್ಯವಸ್ಥೆ ಮಾಡಿದ್ದೆ. ಹೇಂಗೂ ಜಮೀನು ರಿಜಿಸ್ಟ್ರಿ ಆಯೇಕಾರೆ ಭಾವ ಅತ್ಲಾಗಿ ಬರಲೇ ಬೇಕು. ಅವನೊಟ್ಟಿಂಗೆ ನೀನೂ ಬಾ, ಹೇಂಗಾದರೂ ಎಂಟು ದಿನ ಇಪ್ಪಲಕ್ಕು. ಶಂಭು ಮೊಟ್ಟಿಂಗೆ ಇಪ್ಪಲಕ್ಕು. ಹಾಂಗೆ ಹೇಳಿದ್ದೆ ಅದಕ್ಕೆ"

"ಆದರೆ ಪ್ರಸಾದ ಕೇಳುಗೊ"

"ನಿನ್ನ ಅಕ್ಕ ಭಾವ ಒಪ್ಪಿದರೆ ಅವನನ್ನು ಅತ್ಲಾಗಿ ಕರಕ್ಕೊಂಡು ಬನ್ನಿ ಕೇಳಿ ನೋಡುವೊ"

"ಅಂಬಾಗ ಇನ್ನು ಒಂದು ವರ್ಷ ನೀನು ಇಲ್ಲಿಯೇ ಇಪ್ಪೆಯೋ"

"ಇರುತ್ತೆ; ನಿಂಗೂ ಹೇಳಿದ್ದಕ್ಕೆ ಏನೆಂದಾದರೂ ಅಡ್ಡಿ ಹೇಳಿದ್ದನೋ?

"ಇಲ್ಲೆಪ್ಪ ಎನ್ನ ಶಾರದೆ ಬಂಗಾರದ ಗಟ್ಟಿ" ಎಂದು ಅವಳ ಕೆನ್ನೆಯನ್ನೊಮ್ಮೆ ಹಿಂಡಿದ ರಘುರಾಮ.

"ಎನ್ನ ಹೊಗಳಿ ಹೊಗಳಿಯೇ ನಿಂಗಳ ಕೆಲಸ ಸಾಧಿಸುತ್ತಿ. ಅದಕ್ಕೆ ಉಷಾರು ನಿಂಗೊ" ಎಂದು ಕೆನ್ನೆ ಸವರಿಕೊಂಡಳು ಶಾರದೆ.

ರಘುರಾಮ ಕಾವೇರಿ ಕೇಶವರಿಗೆ ಶಾರದೆ ಅಲ್ಲಿಯೇ ಇರುವುದಕ್ಕೆ ಸಮ್ಮತಿಸಿದ್ದಾಳೆಂದೂ; ತಾನು ಮರುದಿನದ ರೈಲಿಗೆ ವಾಪಾಸು ಹೋಗುವುದಾಗಿಯೂ ತಿಳಿಸಿದ.

ಮರುದಿನ ಬೆಳಿಗ್ಗೆನೇ ರಘುರಾಮ ಫಲಾಹಾರ ಮುಗಿಸಿ 10 ಗಂಟೆಯ ರೈಲಿಗೆ ಊರಿಗೆ ಪ್ರಯಾಣ ಮಾಡಿದ. ಊರಿನಲ್ಲಿ ತಂದೆ ತಾಯಿಗೆ ಅತ್ತೆ ಮಾವನಿಗೆ ಕಾಶಿಯ ಸಮಾಚಾರಗಳನ್ನೆಲ್ಲಾ ತಿಳಿಸಿದ. ಕಾವೇರಿ ಕೇಶವ ಊರಿಗೆ ಮರಳುತ್ತಾರೆ ಎಂಬ ಸುದ್ಧಿ ಸಂತೋಷಕರವಾಗಿದ್ದರೂ, ಶಂಕರ ಭಟ್ಟರು ಪರಲೋಕವಾಸಿಯಾದದ್ದು ಕೇಳಿ ದುಃಖವೂ ಆಯಿತು.

"ಇಷ್ಟು ಬೇಗ ಅವಂಗೆ ಸಾವು ಬಪ್ಪಲಾವುತ್ತಿಲ್ಲೆ" ಎಂಬುದೇ ಅವರೆಲ್ಲರ ಉದ್ಗಾರ.

ರಘುರಾಮ ಪ್ರತಿದಿನ ಶಾಲೆ ಬಿಟ್ಟೊಡನೆ ಕಣ್ವಾರಕ್ಕೆ ಹೋಗಿ ಬಂದು ಅವರಿವರಲ್ಲಿ ಜಮೀನು ಕುರಿತು ವಿಚಾರಿಸುತ್ತಿದ್ದ. ಕೊನೆಗೆ ಹಿಡ್ಲಮನೆ ಗೋಪಾಲಕೃಷ್ಣ ಸಿಕ್ಕಿದವನು ಕುಂಬ್ಳೆ ಹತ್ತಿರ ಶಾಂತಿಪಳ್ಳ ಎಂಬಲ್ಲಿ ಮೂರು ಎಕ್ರೆ ಜಮೀನು ದೊರಕುತ್ತದೆಂದೂ ಅದು ವರಕ್ಕೆ ಸಮೀಪವಾಗಿದ್ದು ಸಮತಟ್ಟಾದ ಜಾಗವೆಂದೂ ತಿಳಿಸಿದ. ರಘುರಾಮ ತಡಮಾಡದೆ ಆ ಜಮೀನನ್ನು ನೋಡಿಕೊಂಡು ಬಂದ. ಅವನಿಗೆ ಜಾಗ ಇಷ್ಟವಾಯಿತು. ಅದು ಯಾರದ್ದು ಏನು ಎಂದು ವಿಚಾರ್ಸಿಕೊಂಡ. ಅದು ಅಲ್ಲಿಯೇ ಹತ್ತಿರದಲ್ಲಿದ್ದು ರಂಗಾಚಾರಿದೆಂದೂ, ಎಕ್ರೆಗೆ 10 ಸಾವಿರದಂತೆ ಕೊಟ್ಟರೆ ವಿಕ್ರಯಿಸುವುದಾಗಿಯೂ ತಿಳಿಸಿದ. ಹತು ದಿನದೊಳಗೆ ತನಗೆ ಕ್ರಯಪತ್ರ ಮಾಡಿಕೊಡಬೇಕೆಂದೂ, ಪೂರ್ಣ ಹಣ ಸಲ್ಲಿಸಿದ ಮೇಲೆ ರಿಜಿಸ್ಟ್ರಿ ಮಾಡಿಸುವುದೆಂದು ನಿಶ್ಚೈಸಿದರು. ರಘುರಾಮ ಮುಂಗಡವಾಗಿ ಒಂದು ಸಾವಿರ ರೂಪಾಯಿ ಆಚಾರಿಯ ಕೈಯಲ್ಲಿ ಕೊಟ್ಟು ರಶೀದಿ ಪಡಕೊಂಡ ಮರುದಿನವೇ ಡಾ। ಕೇಶವನಿಗೆ ವಿವರ ತಿಳಿಸಿ ಆದಷ್ಟು ಬೇಗನೆ ಬಂದು ಹೋಗಬೇಕೆಂದು ಪತ್ರ ಬರೆದು ಹಾಕಿದ.

ಅವನ ಪತ್ರ ಬಂದೊಡನೆ ಡಾ। ಕೇಶವ ಮತ್ತು ಶಾರದೆ ಹೊರಟು ಸಿದ್ಧರಾದರು. ಮಗು ಪ್ರಸಾದನನ್ನೂ ಕರೆದುಕೊಂಡು ಹೋಗಲು ಕಾವೇರಿ ಸಮ್ಮತ್ತಿಸಿದ್ದರಿಂದ ಅವನನ್ನೂ ತನ್ನೊಂದಿಗೆ ಕರಕೊಂಡರು. ಮರುದಿನದ ರೈಲಿನಲ್ಲಿ ಹೊರಟು ಮಾರನೇ ದಿನಕ್ಕೆ ರಘುರಾಮನ ಮನೆಯನ್ನು ಸೇರಿದರು.

ಡಾ। ಕೇಶವ ಶಾರದೆ ಪ್ರಸಾದರನ್ನು ನೋ/ಡಿ ಅವನ ತಂದೆ ತಾಯಿಗೆ ತುಂಬಾ ಸಂತೋಷವಾಯಿತು. ಮಗು ಪ್ರಸಾದವನನ್ನು ಎತ್ತಿಕೊಳ್ಳಲು ಕೈಚಾಚಿದ ಶಾಂಕರಮ್ಮನ ಕೈಯನ್ನು ಹಿಂದಕ್ಕೆ ದಬ್ಬಿ, ಶಾರದೆಯನ್ನು ಗಟ್ಟಿಯಾಗಿ ಹಿಡಿದುಕೊಂಡ ಪ್ರಸಾದ.

"ಮಾಣಿ ನಿನ್ನೊಂಟ್ಟಂಗೇ ಇದ್ದದಾಯಿಕ್ಕು ಅಲ್ಲದೋ ಶಾರದೆ?"

"ಅಪ್ಪತ್ತೆ, ಅಕ್ಕ ಭಾವ ಇಬ್ರೂ ಆಸ್ಪತ್ರೆಗೆ ಹೋದಿಪ್ಪಾಗ ಆನೊಬ್ಬನೇ ಮನೇಲಿ ಇದ್ದದಲ್ಲದೊ. ಹಾಂಗಾಗಿ ಅವ ರೊಟ್ಟಿಂಗೂ ಹೋವುತ್ತಾ ಇಲ್ಲೆ ಬಿಟ್ಟಿಕ್ಕಿ ಬಂದರೆ ಅಕ್ಕಂಗೆ ಕಷ್ಟ ಅಕ್ಕು ಹೇಳಿ ಕರಕ್ಕೊಂಡು ಬಂದೆ"

"ಒಳ್ಳೆ ಕೆಲಸ ಮಾಡಿದೆ. ಮನೇಲಿಯೂ ಅವನ ನೋಡ್ಯಂಬಲೆ ಹೇಳಿ ಬೇರೆ ಆರೂ ಇಲ್ಲೆನ್ನೆ"

"ಆರೂ ಇಲ್ಲೆತ್ತೆ" ಮಾವ ಹೋದವನ್ನೆ" ಖಿನ್ನಳಾಗಿ ನುಡಿದಳು ಶಾರದೆ. ಅಷ್ಟರಲ್ಲೆ ರಘುರಾಮ ಅವರಿಗೆ ಕಾಶಿಯ ಸಮಾಚಾರಗಳನ್ನೆಲ್ಲಾ ತಿಳಿಸಿಯಾಗಿತ್ತು. ಮುಂದಿನ ಯೋಜನೆಯನ್ನು ವಿವರಿಸಿಯಾಗಿತ್ತು.

"ಒಳ್ಳೆದೇ ಆತು; ಎಲ್ಲೋರೂ ಒಂದೇ ದಿಕ್ಕೆ ಇದ್ದ ಹಾಮ್ಗೆ ಆವುತ್ತು. ಇಲ್ಲಿ ಕಣ್ಣೆತ್ತದ್ದ ರಾಜ್ಯಲ್ಲಿ ಇದ್ದರೆ ಕಷ್ಟ ಸುಖವ ನೋಡುವವು ಆರಿದ್ದವು? ಇಲ್ಯಾದರೆ ಒಬ್ಬಕ್ಕೊಬ್ಬ ಆಸರೆ ಆಗಿ ಇಪ್ಪಲಕ್ಕು. ಆ ಕಾಶಿ ವಿಶ್ವೇಶ್ವರನೇ ಅವಕ್ಕೆ ಒಳ್ಳೆ ಬುದ್ಧಿ ಕೊಟ್ಟದು" ಎಂದರು ರಘುರಾಮನ ತಾಯಿ.

"ಆನೂ ರಜಾ ವಿಶ್ವೇಶ್ವರಂಗೆ ಹೇಳಿಕ್ಕಿ ಬಯಿಂದೆ" ಎಂದ ರಘುರಾಮ.

"ಇಲ್ಲಿಯೂ ನೀನು ತಮಾಶೆ ಬಿಡೇಡ ಮಗನೆ" ಎಂದರು ಅವನ ತಾಯಿ.

"ಅಣ್ಣ ಇಲ್ಲಿ ಐದಾರು ದಿನ ಇಕ್ಕು. ಅವಂಗೆ ಸರಿಯಾಗಿ ಬೇಯಿಸಿ ಹಾಕಿ; ಹಾಂಗೆ ಅತ್ತೆ ಮಾವ ಇದ್ದಲಿಂಗೂ ಕರಕ್ಕೊಂಡು ಹೋವುತ್ತೆ ಒಂದಾರಿ ಆಸ್ತಿ ರಿಜಿಸ್ಟ್ರೇಶನ್ ಆದ ಮತ್ತೆ ಅವನೂ, ಶಾರದೆಯೂ ವಾಪಸು ಹೋಕು"

"ಅಂಬಾಗ ಶಾರದೆ ಇಲ್ಲಿ ಇರದೋ?"

"ಇರ ಅಬ್ಬೆ; ಅಲ್ಲಿ ಮಾಣಿಯ ನೋಡ್ಯಂಬಲೆ ಆರೂ ಇಲ್ಲೆ. ಅವಿಬ್ರೂ ಕೆಲಸಕ್ಕೆ ಹೋವುತ್ತವನ್ನೆ . ಮತ್ತೆ ಆಲ್ಯಾಣವು ಮಕ್ಕಳ ಸರಿಯಾಗಿ ನೋಡ್ಯೊಂಗು ಹೇಳುವ ಭರವಸೆ ಇಲ್ಲೆ. ಹಾಂಗೆ ಶಾರದೆ ಅವು ಇತ್ಲಾಗಿ ಬಪ್ಪನ್ನಾರವೂ ಅವರೊಟ್ಟಿಂಗೇ ಇರಳಿ ಹೇಳಿ ಆನು ಹೇಳಿದ್ದೆ ಇಲ್ಲಿ ನಿನಗೆ ತೊಂದರೆ ಆವುತ್ತೋ?

"ಇಲ್ಲಿ ತೊಂದರೆ ಹೇಳಿ ಎಂತದೂ ಇಲ್ಲೆ. ಶಂಭು ಉದಿಯಪ್ಪಾಗ ಶಾಲೆಗೆ ಹೋದರೆ ಬಪ್ಪದು ಕಸ್ತಲಪ್ಪಾಗ ನಾಲ್ಕು ಗಂಟೆಗೆ ಬಂದ ಮತ್ತೆ ರಜಾ ಅಶನ ತುಪ್ಪ, ಮಸರು ಬಳುಸಿ ಕೈ ತೊಳಶಿರೆ ಆತು. ಅವನದ್ದೆಂತದೂ ರಗಳೆ ಇಲ್ಲೆ; ಇರಳು ಮನುಗುದು ಎನ್ನೊಟ್ಟಿಂಗೆ,ಅಜ್ಜನೊಟ್ಟಿಂಗೆ ತೋಟಕ್ಕೆ. ಹಾಂಗೇ ಅದು ಇದು ಹೇಳಿ ಮಾತಾಡಿಗೊಂಡಿರುತ್ತ. ಅವಂಗೂ ಹೊತ್ತು ಹೋವುತ್ತು. ಎಂಗೊಗೂ ಹೊತ್ತು ಹೋವುತ್ತು"

ಶಂಭು ದಷ್ಟಪುಷ್ಟವಾಗಿ ಬೆಳೆದಿದ್ದ. ಕ್ರಮಬದ್ಧ ಜೀವನ ಅವನದ್ದು. ಬೆಳಿಗ್ಗೆ ಎದ್ದೊಡನೆ ದೇವರಿಗೆ ವಂದಿಸುತ್ತಾನೆ; ಮುಂದೆ ಅಜ್ಜಿ ಮಾಡಿಟ್ಟ ಹಾಲು ಕಷಾಯವನ್ನು ಕುಡಿದು, ಓದಲು ಬರೆಯಲು ಕೂರುತ್ತಾನೆ. ಸಮಯಕ್ಕೆ ಸರಿಯಾಗಿ ಸ್ನಾನ, ಬಟ್ಟೆ ಹಾಕಿಕೊಂಡು ಶಾಲೆಗೆ ಹೋಗುತ್ತಾನೆ. ಈಗವನು ನಾಲ್ಕನೇ ತರಗತಿ. ಶಾರದೆಗೆ ಮಗನನ್ನು ನೋಡಿ ಹೃದಯ ತುಂಬಿತು; ಆದರೆ ಶಂಭುಗೆ ಮಟ್ರ ಅಮ್ಮನನ್ನು ನೋಡಿ ಹೆಚ್ಚಿನ ಸಂತೋಷವೇನೂ ಆಗಲಿಲ್ಲ. ಅವನು ಅಜ್ಜಿ–ಅಜ್ಜ, ಅಪ್ಪನ ಜೊತೆಯಲ್ಲಿ ಅಷ್ಟು ಹೊಂದಾಣಿಕೆಯಾಗಿದ್ದ. 'ಅಮ್ಮನ'ನ ಇವರನ್ನೇ ಮರೆತಿದ್ದ. 'ಅಮ್ಮ' ಮಾತನಾಡಿದರೆ ಮಾತ್ರ ಉತ್ತರ ಕೊಡುತ್ತಿದ್ದ.

ತಾಯಿಯೊಂದಿಗೆ ಬಂದಿದ್ದ ಪುಟ್ಟ ಮಗು ಶಂಕರ ಪ್ರಸಾದನನ್ನು ಮಾತ್ರ ಚೆನ್ನಾಗಿ ಆಡಿಸುತ್ತಿದ್ದ. ಅವನ ಕೈಗೆ ಚೆಂಡು ಕೊಟ್ಟು ಬಿಸಾಡಲು ಹೇಳಿ ಮರಳಿ ತಂದುಕೊಟ್ಟು ಎಸೆಯಲು ಹೇಳುತ್ತಿದ್ದ. ಕೈ ಹಿಡಿದು ತಾನೇ ತಾನೆ' ಎಂದು ಮೆಲ್ಲ ನಡೆಸಿಕೊಂಡು ಹೋಗುತ್ತಿದ್ದ.

"ಅಮ್ಮ ಇವ ಎನಗೆ ಎಂತಾಯೇಕು?" ಕೇಳಿದ ಒಮ್ಮೆ

"ಅವ ನಿನಗೆ ತಮ್ಮ ಆಯೇಕು ಮಗಾ, ನಿನ್ನ ಕಾವೇರಿ ದೊಡ್ಡಬ್ಬೆಯ ಮಗ" ಅಂದಳು ಶಾರದೆ.

"ಅಂಬಾಗ ದೊಡ್ಡಬ್ಬೆ ಏಕೆ ಬಯಿಂದಿಲ್ಲೆ?"

"ಅದು ದೊಡ್ಡ ಡಾಕ್ಟ್ರು ಮಗಾ. ರಜೆ ಸಿಕ್ಕೇಕನ್ನೆ?

"ಹಾಂಗಾದರೆ ಪ್ರಸಾದ ಇಲ್ಲಿಯೇ ಇರಳಿ ಆನು ನೋಡಿಗೊಂಬೆ" ಎಂದ.

"ಇನ್ನೊಂದು ವರ್ಷಕ್ಕೆ ದೊಡ್ಡಾಬ್ಬೆ, ದೊಡ್ಡಪ್ಪ, ಪ್ರಸಾದ ಎಲ್ಲೋರೂ ನಮ್ಮೊಟ್ಟಿಂಗೆ ಇರುತ್ತವು. ಇತ್ಲಾಗಿ ಬತ್ತವು.

"ನೀನೂ ಬತ್ತಿಯೋ?

"ಆನಲ್ಲಿದ್ದು ಎಂತ ಮಾಡ್ಳಿ? ಆನೂ ಇಲ್ಲಿಯೇ ಇರುತ್ತೆ ಅಕ್ಕು

"ಅಕ್ಕು"

"ನಿನಗೆ ಆನಿಲ್ಲದ್ದೆ ಅಸಕ್ಕ ಆಯಿದಿಲ್ಲೆಯೋ ಮಗಾ"

"ಒಂದೆರಡು ದಿನ ಅಸಕ್ಕ ಆಯಿದು. ಅಂಬಾಗ ಅಜ್ಜಿ ಅಜ್ಜ ಎನ್ನ ಕೋಂಡಾಟಾ ಮಾಡಿದವು. ಈಗ ರಜವೂ ಅಸಕ್ಕ ಆವುತ್ತಿಲ್ಲೆ. ನಿನ್ನ ನೆಂಪೂ ಆವುತ್ತಿಲ್ಲೆ" ಇದ್ದದ್ದನ್ನು ಇದ್ದಂತೆ ಹೇಳಿದ ಶಂಭು.

ಶಾರದೆಯ ಮನಸ್ಸಿಗೆ ಏನೋ ಚುಚ್ಚಿದ ಅನುಭವ ಆಯಿತು. ತನ್ನ ಮಗ ತನ್ನನ್ನು ಇಷ್ಟು ಬೇಗನೇ ಮರೆತನೇ ಅನ್ನಿಸಿತು. ಆದರೆ ಪ್ರಸಾದನೂ ಹಾಗೇ ಅಲ್ಲವೇ? ಅವನಿಗೂ ಅಮ್ಮನಿಗಿಂತ ಚಿಕ್ಕಮ್ಮನೇ ಮೇಲಲ್ಲವೇ? ಮಕ್ಕಳು ಬಲುಬೇಗನೇ ಪರಿಸ್ಥಿತಿಗೆ ಹೊಂದಿಕೊಳ್ಳುತ್ತವೆ. ಅವರಿಗೆ, ಪ್ರೀತಿ ಆರೈಕೆ ಯಾರು ಮಾಡುತ್ತಾರೋ ಅವರನ್ನೆ ನೆಚ್ಚಿಕೊಳ್ಳುತ್ತಾರೆ. ಈಗ ಅಕ್ಕನ ಮಗು ತನ್ನ ಮಗುವಾಗಲಿಲ್ಲವೇ? ಹಾಗೆ ಶಂಭು ಕೂಡಾ ಅಂದು ಸಮಾಧಾನ ತಂದುಕೊಂಡಳು ಶಾರದೆ.

ಮನೆಯಲ್ಲಿ ಇರುವಷ್ಟು ದಿನವೂ ಶಾರದೆ ಅತ್ತೆಗೆ ಕೆಲಸದಲ್ಲಿ ಸಹಾಯ ಮಾಡಿದಳು. ಮಕ್ಕಳಿಬ್ಬರ ಚಾಕ್ರಿಯನ್ನೂ ಮಾಡಿದಳು. ರಘುರಾಮನೂ, ಡಾ। ಕೇಶವನೂ ಜಮೀನು ರಿಜಿಸ್ಟ್ರೇಶನ್ ಕೆಲಸ ಪೂರೈಸಿದರು – ರಘುರಾಮನಿಗೆ ಹೇಳಬೇಕಾದುದನ್ನೆಲ್ಲಾ ಹೇಳಿ, ಆಸ್ಪತ್ರೆ ಮನೆಯ ನಕ್ಷೆಯನ್ನು ಕೊಟ್ಟು ಒಂದು ಲಕ್ಷ ನಗದಿ ಹಣವನ್ನೂ ಕೊಟ್ಟು, ಕೆಲಸ ಮುಂದುವರಿಸಲು ಹೇಳಿಯಾಯಿತು. ಮರುದಿವಸ ಡಾ। ಕೇಶವ ಶಾರದೆ; ಪ್ರಸಾದ, ಕಾಶಿಗೆ ಹೊರಟು ನಿಂತರು.

"ಶಾರದೆಯ ಕರಕ್ಕೊಂಡು ಹೋದರೆ ನಿಂಗೊಗೆ ತೊಂದರೆ ಆಗದೋ ಅತ್ತೆ" ವಿಚಾರಿಸಿದರು ಡಾ। ಕೇಶವ.

"ಹಾಂಗೆ ತೊಂದರೆ ಎಂತದೂ ಇಲ್ಲೆ ಕೇಶವ ಇಲ್ಯಾಣದ್ದರ ಎಂಗೊ ಸುಧಾರ್ಸುವೆಯೊ. ಇನ್ನೊಂದು ವರ್ಷ ಅಲ್ಲದೋ? ಇರಲಿ ನಿಂಗಳೊಟ್ಟಿಂಗೆ ಅಂದರು ಶಂಕರಮ್ಮ. ಅವರ ವಿಶಾಲ ಮನೋಭಾವಕ್ಕೆ ತಲೆದೂಗಿದರು ಡಾ। ಕೇಶವ.

ರಘುರಾಮ ತೋಟದಿಂದ ಒಂದು ಗೊನೆ ಬಾಳೆಕಾಯಿ, ಒಂದು ಹಲಸಿನಕಾಯಿ ಕೊದು ತೆಗೆದುಕೊಂಡು ಬಂದ. ಅವರ ಅಪ್ಪ, ಅದನ್ನು ಗೋಣಿ ಚೀಲದಲ್ಲಿ ತುಂಬಿಸಿ ಕೊಟ್ಟಿಕೊಟ್ಟರು.

"ನಿಂಗೊ ಕಾಶಿಗೆ ಮುಟ್ಟುವಾಗ ಇದೆಲ್ಲಾ ಹಣ್ಣಕ್ಕು. ಒಂದುವಾರ ತಿನ್ನಿ. ಶಾರದೆಗೆ ಹಲಸಿನ ಹಣ್ಣಿನ ಪಾಯಸ, ಕೊಟ್ಟಿಗೆ, ಗೆಣಸಲೆ ಸುಟ್ಟವು ಎಲ್ಲಾ ಮಾಡ್ಲೆ ಅರಡಿತ್ತು" ಮಾಡ್ಲೆ ಹೇಳು ಮತ್ತೆ ಕದಳಿ ಬಾಳೆ ಹಣ್ಣಾಗಿ ಎಂಟು ಹತ್ತು ದಿಅನ್ ಉಳುಗು. ಹೋದ ಕೂಡ್ಲೆ ಒಂದು ಬಳ್ಳಿ ಕಟ್ಟಿ ನೇಲಿ ಮಡುಗಿ. ಹಾಳಾಗ" ಅಂದರು ರಘುರಮನ ತಂದೆ.

"ಎಂತಕೆ ಇಷ್ಟೇಲ್ಲಾ ಇದರೆಲ್ಲಾ ಹೊತ್ತುಗೊಂಡು ಹೋಯೇಕನ್ನೆ"

"ಎಂತ ತಲೇಲಿ ಹೊತ್ತೋಳ್ತಿರೋ. ರೈಲಿಂಗೆ ಹಾಕಿದರೆ ಕಾಶಿಗೆ ಎತ್ತುಗು ಶಾರದೆಗೆ ಹಲ್ಸನ ಹಣ್ಣು ಹೇಳಿರೆ ಜೀವ."

"ಹಾಂಗಾರೆ ನಿಂಗೊ ಕಟ್ಟಿಕೊಟ್ಟದು ಶಾರದಗೋ" ಪ್ರಶ್ನಿಸಿದ ರಘುರಾಮ.

"ಅದಕ್ಕೆ ಹೇಳಿ ಅಲ್ಲ. ಎಲ್ಲೋರಿಂಗೂ ಆತು ಹೇಳಿ. ನಮ್ಮೂರವಕ್ಕೆ ಹಲಸಿನ ಹಣ್ಣು ವಿಶೇಷ ಅಲ್ಲದೋ?"

"ಆತಂಬಾಗ ಹೆರಡಿ. ಆನು ನಿಂಗಳ ರೈಲ್ಲಿ ಕೂರ್ಸಿಕ್ಕಿ ಬತ್ತೆ" ಎಂದು ರಘುರಾಮ, ಎತ್ತಿನ ಬಂಡಿಯಲ್ಲಿ ಅವರನ್ನು ಕೂರಿಸಿ, ರೈಲ್ವೆ ಸ್ಟೇಷನಿಗೆ ಹೋಗಿ ಅವರನ್ನು ರೈಲಿನಲ್ಲಿ ಕೂರಿಸಿದ.

"ರಾಮಣ್ಣ ಪೈಸೆ ಮುಗುದರೆ ಎನಗೆ ಕೂಡ್ಲೆ ತಿಳುಶಿ ಆನು ಕಳುಸುವ ವ್ಯವಸ್ಥೆ ಮಾಡುವೆ ಆತು.

"ನೀನೆಂತದೂ ಚಿಂತೆ ಮಾಡೇಡ ಅಣ್ಣ. ಸಮಯಕ್ಕೆ ಸರಿಯಾಗಿ ಎರಾಡು ಕಟ್ಟೋಣಿಗಳ ಕೆಲಸ ಮುಗುಶಿ ನಿಂಗಳ ಕೈಗೊಪ್ಪಸಂದು ಎನ್ನ ಜವಬ್ದಾರಿ ಆತೋ ಚಿಂತೆ ಇಲ್ಲದ್ದೆ ಹೋಗಿ"

"ಆತಂಬಾಗ ಎಂಗೊ ಬತ್ತೆಯೋ" ಎಂದ ಕೇಶವ ರಘುರಾಮನ ಕೈ ಕುಲುಕಿದ.

"ಶಾರದೆ ಮೌನವಾಗಿ ಕೈ ಬೀಸಿದಳು. ರೈಲು ತನ್ನ ವೇಗ ಪಡೆಯಿತು.

ರಘುರಾಮ ಅಂದೇ ಇದಿನಬ್ಬ ಬ್ಯಾರಿಯನ್ನು ಭೇಟಿಯಾದ ಅವನು ಅನೇಕ ಸಣ್ಣಪುಟ್ಟ ಗುತ್ತಿಗೆ ಕೆಲಸ ಮಾಡಿ ಹೆಸರುವಾಸಿಯಗಿದ್ದ ಸಮಯಕ್ಕೆ ಸರಿಯಾಗಿ ಹೇಳಿದ ಕೆಲಸ ಮುಗಿಸುತ್ತಿದ್ದ; ಕುಂಬ್ಳೆಯಲ್ಲಿಯೇ ಮೊಕ್ಕಾಂ ಹೂಡಿದ್ದ. ಅವನ ಊರು ಮೊಗ್ರಾಲು. ಅಲ್ಲಿಂದ ಹೋಗಿ ಬರುವುದು ಕಷ್ಟವೆಂದು ಕುಂಬ್ಳೆಯಲ್ಲಿಯೇ ಒಂದು ಚಿಕ್ಕ ಮನೆ ಮಾಡಿಕೊಂಡಿದ್ದ. ಹೆಂಡತಿ ಮಕ್ಕಳು ಮೊಗ್ರಾಲಿನಲ್ಲಿಯೇ ತಂದೆ, ತಾಯಿಯೊಂದಿಗಿದ್ದರು. ಆದಾಗ ಹೋಗಿ ಬರುತ್ತಿದ್ದ.

"ಇದಿನಬ್ಬಾ, ನಾನು ನಿನ್ನನ್ನೇ ಹುಡುಕಿಕೊಂಡು ಬಂದದ್ದು" ರಘುರಾಮನ ಪೀಠಿಕೆ ಹಾಕಿದ.

"ಯಾಕೆ ಮಾಷ್ಟ್ರೇ ಎಂತಾರೂ ವಿಶೇಷವುಂಟೋ"

"ನೀನೀಗ ಏನು ಮಾಡುತ್ತಿ?"

"ಸದ್ಯ ಎಂತದ್ದೂ ಇಲ್ಲ. ಎಲ್ಯಾದರೂ ಗುತ್ತಿಗೆ ಕೆಲಸ ಸಿಕ್ಕುತ್ತದೊ ಎಂದು ಹುಡುಕುತ್ತಾ ಇದ್ದೇನೆ. ಯಾವುದೂ ಸರಿಗಟ್ಟುಸಿಕ್ಕಲಿಲ್ಲ."

"ಒಳ್ಳೇದೇ ಆಯಿತು; ನಿನಗೆ ನಾನೊಂದು ಕೆಲಸ ಒಪ್ಪಿಸುತ್ತೇನೆ. ಬರೀ ಸಣ್ಣ ಕೆಲಸ ಅಲ್ಲ. ಒಂದು ಆಸ್ಪತ್ರೆಯೂ, ಮನೆಯೂ ಕಟ್ಟಬೇಕು."

"ಯಾರಿಗೆ ಮೇಷ್ಟ್ರೇ, ಎಲ್ಲಿ ಆಗಬೇಕು?"

"ಇಲ್ಲೇ ಶಾಂತಿ ಪಳ್ಳದ ಹತ್ರೆ – ಅಲ್ಲಿ ನಮ್ಮೂರಿನ ಡಾಕ್ಟ್ರುಗಳು ಇಬ್ಬರು ಬಂದು ಆಸ್ಪತ್ರೆ ತೆರೆಯುತ್ತಾರೆ.

"ಯಾರು?"

"ಒಬ್ಬರು ನನ್ನ ಹೆಂಡತಿಯ ಅಕ್ಕ. ಡಾ। ಕಾವೇರಿ ಅಂತ. ಅವರು ಹೆಂಗುಸರ ಕಾಯಿಲೆ, ಹೆರಿಗೆ ಎಲ್ಲಾ ಮಾಡುತ್ತಾರೆ. ಇನ್ನೊಬ್ಬರು ಅವರ ಗಂಡ ಡಾ। ಕೇಶವ ಅಂತ ಅವರು ಎಲ್ಲಾ ರೋಗಗಳ ತಜ್ಞರು.

"ಒಳ್ಳೆದೇ ಆಯಿತಲ್ಲವೋ ಮೇಶ್ಟ್ರೇ" ಒಬ್ಬರು ಹೆಂಗಸರು ಡಾಕ್ಟ್ರದ್ರೆ ನಮ್ಮ ಜನಕ್ಕೆ ತುಂಬಾ ಅನುಕೂಲವಾದೀತು; ನಮ್ಮ ಮೊಗ್ರಾಲು ಕಡೆಂದ ಹೆಂಗಸರೆಲ್ಲಾ ಬಂದು ಆಸ್ಪತ್ರೆಗೆ ತುಂಬುತ್ತಾರೆ ನೋಡಿ"

"ಇದಿನಬ್ಬ ಎಲಾಲ ಕೆಲಸ ಒಂದು ವರ್ಷದೊಳಗೆ ಮುಗಿಸಬೇಕು"

"ಆಯಿತು, ನೀವು ಹಣದ ವ್ಯವಸ್ಥೆ ಮಡಿ, ಆಳುಗಳನ್ನು ನಾನು ಕರೆದುಕೊಂಡು ಬರುತ್ತೇನೆ; ಹೆಚ್ಚು ಜನವನ್ನು ತೆಗೆದುಕೊಂಡರ, ಕೆಲಸ ಬೇಗ ಮುಗಿಯುತ್ತದೆ" ಎಷ್ಟಕ್ಕೆ ಗುತ್ತಿಗೆ ಕೊಡುತ್ತೀರಿ?"

"ಇದಿನಬ್ಬ ನಾನು ನಿನಗೆ ಗುತ್ತಿಗ್ಗೆ ಕೆಲಸ ಕೊಡುವುದಿಲ್ಲ. ತಿಂಗಳಿಗೆ ಇಂತಿಷ್ಟು ಅಂತ ಸಂಬಳ ಕೊಡುತ್ತೇನೆ. ಎಲ್ಲಾ ಜವಾಬ್ದಾರಿಯೂ ನಿನ್ನದು"

"ಆಯಿತು ಅದೂ ನನಗೆ ಅನುಕೂಲವೇ. ಎಷ್ಟೋ ಸಲ ಗುತ್ತಿಗೆ ತೆಗೆದುಕೊಂಡು ಲುಕ್ಸಾನು ಆಗಿ, ಮಕ್ಕಳಿಗೆ ಗಂಜಿ ನೀರಿಗೆ ಗತಿ ಇಲ್ಲದ್ದ ಹಾಗೆ ಆಗಿದೆ.

"ಇದು ವರ್ಷ ಪೂರ್ತಿ ನಡೆಯುವ ಕೆಲಸ. ನಿನಗೆ ತಿಂಗಳಿಗೆ ಎರಾಡು ಸಾವಿರ ರೂಪಾಯಿ ಸಂಬಳ ಕೊಡುತ್ತೇನೆ. ಸ್ವಲ್ಪವೂ ಕೆಲಸದಲ್ಲಿ ಹೆಚ್ಚು ಕಮ್ಮಿಯಾಗಬಾರದು"

"ಆಯಿತು ಮೇಷ್ಟ್ರೇ, ನಿಮ್ಮ ಕೆಲಸ ಸರಿಯಾಗಿ ಆಗುವ ಹಾಗೆ ನೋಡಿಕೊಳ್ಳುತ್ತೇನೆ. ನಾನೆಲ್ಲಿಯಾದರೂ ದಗಲ್ಬಾಜಿ ಮಾಡಿದ್ದೇನೆಯೋ ಎಂದು ವಿಚಾರಿಸಿ ಕೊಳ್ಳಿ, ಆಮೇಲೆ ಕೆಲಸ ಕೊಡಿ"

"ಅದು ಗೊತ್ತಿದ್ದೇ ನಾನು ನಿನ್ನನ್ನು ಹುಡುಕಿಕೊಂಡು ಬಂದದ್ದು ಇದರ ಮದ್ಯೆ ಬೇರೆ ಯಾವ ಕೆಲಸವನ್ನು ವಹಿಸಿಕೊಳ್ಳಬೇಡ ಮತ್ತೆ" ಕಡ್ಡಿಯದೂ ಇಲ್ಲ ಪಿಗಿಚ್ಚದೂ ಇಲ್ಲ ಅಂತ ಆದೀತು"

"ಇಲ್ಲ ಮೇಶ್ಟ್ರೇ ಹಾಗೆಲ್ಲಾ ಮಾಡಿದರೆ 'ಅಲ್ಲಾಹ' ಮೆಚ್ಚಲಿಕ್ಕಿಲ್ಲ. ನಾನೂ ನಿಯತ್ತಿನ ಮನುಷ್ಯ. ಕೆಲಸ ಯಾವಾಗ ಸುರುವಾಗುತ್ತದೆ ಹೇಳಿ"

"ಒಂದು ವಾರದೊಳಗೆ ಒಳ್ಳೆ ದಿನ ನೋಡಿ ಗುದ್ದಲಿ ಪೂಜೆ ಮಾಡುವೆ. ಹೇಳಿ ಕಳಸುತ್ತೇನೆ ಊರು ಬಿಟ್ಟು ಎಲ್ಲಿಗೂ ಹೋಗಬೇಡ."

"ಆಯಿತು ನೀವವ ಹೇಳಿದ ಮೇಲೆ ಎಲ್ಲಿಗೂ ಹೋಗುವುದಿಲ್ಲ"

ಇದಿನಬ್ಬಾನೂ ವಾಗ್ದಾನ ಕೊಟ್ಟ.

ಹೇಳಿದ ಹಾಗೆ ಒಳ್ಳೆ ಮುಹೂರ್ತದಲ್ಲಿ ಗುದ್ದಲಿ ಪೂಜೆ ನಡೆಯಿತು ಅಡಿಪಾಯಕ್ಕೆ ಕಲ್ಲೊಂದನ್ನು ಹಾಕಿಯೂ ಆಯಿತು.

"ಇದಿನಬ್ಬ ಇವತ್ತಿನಿಂದ ಮಣ್ಣಿನ ಕೆಲಸ ಸುರುಮಾಡು. ಕೈಗೆ ಕೆಳಗೆ ಎಷ್ಟು ಜನ ಎಂಬೇಕೋ ಅಷ್ಟು ಜನರನ್ನು ತೆಕ್ಕೊ. ದಿನವೂ ಬಂದು ನಾನು ಕೂಲಿ ಬಟವಾಡೆ ಮಾಡುತ್ತೇನೆ" ಆಯಿತೋ ಕೆಲಸ ಬೇಗ ಬೇಗ ಆಗಬೇಕು"

"ಆಯಿತು ಮೇಶ್ರೇ" ಅಂದವನೇ ಇದಿನಬ್ಬ ತನ್ನೂರಿಗೆ ಹೋಗಿ ಸ್ವಜನರನ್ನು ಕರೆದುಕೊಂಡು ಬಂದ ಉಳಿದವರನ್ನು ಸುತ್ತಮುತ್ತಲಿನಿಂದ ಕಲೆಹಾಕಿ ಒಟ್ಟು 40 ಜನರು ಮಣ್ಣಿನ ಕೆಲಸಕ್ಕೆ ಇಳಿದರು. ಒಂದು ವಾರದಲ್ಲಿ ಅಡಿಪಾಯ ತೋಡುವ ಕೆಲಸ ಮುಗಿಯಿತು; ಕಲ್ಪಡಿ ಕಲ್ಲುಗಳನ್ನು ತರಿಸಿ ಅಡಿಪಾಯದ ಕೆಲಸವೂ ಮುಗಿಯಿತು; ಅಲ್ಲೇ ಸಮೀಪದ ಕಲ್ಪಣೆಯಲ್ಲಿ ಕಲ್ಲು ಸಿದ್ದಮಾಡುವ ಕೆಲಸವನ್ನು ನಾಲ್ಕು ಮಂದಿ ಕಲ್ಲು ಕುಟಿಗರು ವಹಿಸಿಕೊಂಡರು. ಕುಂಬಳೆಯಲ್ಲಿದ್ದ ರಾಮಚಂದ್ರ ಬಡಗಿ, ಕಿಟಕಿ, ಬಾಗಿಲುಗಳ ಜವಾಬ್ದಾರಿ ಹೊತ್ತುಕೊಂಡ. ಸಿಮೆಂಟು ಮರಳು, ಕಲ್ಲುಗಳನ್ನು ಪ್ರಮಾಣ ಬದ್ಧವಾಗಿ ಕಲುಸಲು ಮೂವರು ಗುತ್ತಿಗೆ ದಾರರನ್ನು ನೇಮಿಸಿಯೂ ಆಯಿತು. ನುರಿತ ಇಂಜಿನಿಯರೊಬ್ಬರನ್ನು ತಾರಸಿ ಕೆಲಸಕ್ಕೆ ಕರೆಸಿಕೊಂಡ ರಘುರಾಮ ಎಲ್ಲರಿಗೂ ಸಂಬಳ ಕ್ರಮಬದ್ಧವಾಗಿ ಸಲ್ಲುತ್ತಿದ್ದುದರಿಂದ ಕೆಲಸ ಬಿರುಸಿನಿಂದ ಸಾಗಿತು; ಬೇಕಾದಷ್ಟು ಹಣವನ್ನು ಒದಗಿಸಿಕೊಡುವ ಜವಾಬ್ದಾರಿಯನ್ನು ಡಾ। ಕೇಶವ ವಹಿಸಿಕೊಂಡರು. ಆಯವ್ಯಯದ ವಿವರವನ್ನು ರಘುರಾಮ ದಿನಕ್ಕೆ ದಿನ ಬರೆದಿಟ್ಟು ಕೊಳ್ಳುತ್ತಿದ್ದ ಶಾಲೆ ಕೆಲಸ ಮುಗಿದೊಡನೆ ಸೀದಾ ಕಣ್ವ್ಯರಕ್ಕೆ ಬಂದು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ. ಇದಿನಬ್ಬ ಖಾಯಂ ಅಲ್ಲಿಯೇ ಇರುವ ಕಾರಣ ಕೆಲಸ ಬೇಗಬೇಗನೆ ಮುಗಿಯುತ್ತಿತ್ತು. ಹತ್ತು ತಿಂಗಳೊಳಗೆ ಮನೆ, ಆಸ್ಪತ್ರೆಯ ಕೆಲಸ ಪೂರೈಸಿಯಾಯಿತು, ಹೊರಗೆ ಸುಣ್ಣಬಣ್ಣ ಬಳಿದೂ ಆಯಿತು.

ಡಾ। ಕೇಶವ, ಕಾವೇರಿ ಶಾರದೆ ಪ್ರಸಾದ ಊರಿಗೆ ಬಂದಿಳಿದರು. ಅಲ್ಲಿಯ ಆಸ್ಪತ್ರೆಯ ಸಿಬಂಧಿಯವರೆಲ್ಲಾ ರೈಲ್ವೆ ನಿಲ್ದಾಣಕ್ಕೆ ಬಂದು ಆಶ್ರುಪೂರ್ವಕ ವಿದಾಯ ಹೇಳಿದ್ದರು. ಡಾ। ಕೇಶವಗೂ ಕಾವೇರಿಗೂ ಕಣ್ಣಾಲಿಗಳು ತುಂಬಿ ಬಂದಿತ್ತು

ಡಾ। ಕೇಶವ ಕಾವೇರಿ ಆಸ್ಪತ್ರೆ ಮನೆಯನ್ನು ವೀಕ್ಷಿಸಿದರು. ತಮ್ಮೆಣಿಕೆಯಂತೆಯೇ ಎಲ್ಲವೂ ನಡೆದುದನ್ನು ನೋಡಿ ಸಂತೋಷಪಟ್ಟರು.

"ಅಣ್ಣ ಎಲ್ಲಾ ಕೆಲಸವೂ ಸರಿಯಾಯಿದು. ಇನ್ನು ಇದಕ್ಕೆ ಬೇಕಾದ ಆಸ್ಪತ್ರೆಯ ಸಾಮಾನುಗಳ ತರೇಕು. ಕನಿಷ್ಟ ಒಂದು ಲಕ್ಷ ರೂಪಾಯಿ ಆದರೂ ಬೇಕು ಎಂಗಳ ಹತ್ರೆ ಇದ್ದ ಪೈಸೆ ಮುಗುದ್ದು. ಇನ್ನು ಇಲ್ಲೇ ಹತ್ರಾಣ ಬೇಂಕಿದ ಸಾಲ ತೆಕ್ಕೋಳೇಕಷ್ಟೆ" ಅಂದರು ಡಾ। ಕೇಶವ.

"ಕೇಶವ, ನಿಂಗೋ ಸಾಲ ತೆಕ್ಕೊಂಬದು ಬೇಡ; ಅದರ ಅಸಲು ಬಡ್ಡಿ ಕಟ್ಟುದೇ ಕಿರಿ ಕಿರಿ ತಲೆ ಬೆಶಿ. ಅದರಂದ ನಿನ್ನ ಅಪ್ಪನ ಆಸ್ತಿ ಮಾರಿದರೆ ನಿಂಗೊಗೆ ಬೇಕಾದಷ್ಟು ಪೈಸೆ ಬಕ್ಕು"

"ಅದರ ತೆಕ್ಕೊಂಬವು ಆರಾರು ಸಿಕ್ಕೇಕನ್ನೆ"

"ನಿನ್ನ ಅಪ್ಪಬ್ಬೆಯೇ ಎರಡು ಮೂರು ಸರ್ತಿ ವಿಚಾರ್ಸಿದ. ಆನೆಂತದೂ ಹೇಳಿದ್ದಿಲ್ಲೆ. 'ಅವ ಬಂದ ಮೇಲೆ ವಿಚಾರ್ಸಿ' ಹೇಳಿದೆ.

"ಆ ಆಸ್ತಿಗೆ ಬತ್ತ ಇಪ್ಪದು ಎನ್ನ ಆಸ್ತಿ' ಹೇಂಗೂ ಹೆರಿಯೋರ ಮಾಣಿ ಬೇರವಕ್ಕೆ ಹೋಪದು ಬೇಡ. ಊರಿಲ್ಲಿ ಎಂತ ಧಾರಣೆ ಇದ್ದೋ ಅಷ್ಟು ಬೇರೆವಕ್ಕೆ ಹೋಪದು ಬೇಡ. ಊರಿಲ್ಲಿ ಎಂತ ಧಾರಣೆ ಇದ್ದೊ ಅಪ್ಪು ಆನು ಕೊಡುವೆ" ಹೇಳಿ ಹೇಳಿ ಕಳುಸಿದ್ದ.

"ಒಂದೂವರೆ ಲಕ್ಷಕ್ಕದರೆ ಆನು ತೆಕ್ಕೊಂಬೆ" ಹೇಳಿಯೂ ಹೇಳಿದ್ದ

"ಅಂಬಾಗ ಅದರ ಮಾರುವೇ ಒಳ್ಳೆದಲ್ಲದೋ. ಆರು ಹೋಗಿ ತೋಟ, ಮನೆ, ನೋಡ್ಕಳ್ತವು"

"ಹಾಂಗಾರೆ ಅವಂಗೆ ಹೇಳಿ ಕಳುಸುತ್ತೆ' ನಿಂಗೊ ನಿಂಗೊ ಮಾತಾಡ್ಯೋಳಿ" ಎಂದ ರಘುರಾಮ.

ಮರುದಿನವೇ ಡಾ। ಕೇಶವನ ಚಿಕ್ಕಪ್ಪ ಬಂದರು, ಮಾತುಕತೆಯಾಯಿತು.

ಎಂಟು ದಿನದೊಳಗೆ ಹಣ ನಗದಿ ಕೊಡುವುದಾಗಿಯೂ ತಿಳಿಸಿದರು.

"ಹಾಂಗೇ ಎನ್ನ ಮಾಣಿ ಸುಬ್ರಹ್ಮಣ್ಯ ಬಿ.ಕಾಂ. ಮಾಡಿ ಮನೇಲಿಯೇ ಇದ್ದ. ಅವಂಗೂ ಎಂತಾರೂ ಕೆಲಸ ಕೊಡು ಕೇಶವ" ಎಂದು ಬೇಡಿಕೆಯನ್ನೂ ಮುಂದಿಟ್ಟರು ಚಿಕ್ಕಪ್ಪ

"ಆಗಲಿ, ಆಸ್ಪತ್ರೆ ಸುರುವಾದ ಮತ್ತೆ ನೋಡುವೊ. ಅವ ಒಂದಾರಿ ಇತ್ಲಾಗಿ ಬಂದು ಹೋಗಲಿ" ಎಂದರು ಡಾ। ಕೇಶವ.

ಚಿಕ್ಕಪ್ಪ ಎಂಟು ದಿನಕ್ಕೆ ಹಣದ ವ್ಯವಸ್ಥೆ ಮಾಡಿ ಆಸ್ತಿ ಬರೆಸಿ ರಿಜಿಸ್ಟ್ರ ಮಾಡಿಸಿಕೊಂಡರು. ಸುಬ್ರಾಯನೂ ಬಂದು ಭೇಟಿಯಾಗಿ ಹೋದ ಆಸ್ಪತ್ರೆಗೆ ಬೇಕಾದ ಸಾಮಾನುಗಳನ್ನು ಮಂಗಳೂರು, ಮದ್ರಾಸು, ಬೊಂಬಾಯಿಯಿಂದ ಖರೀದಿ ಮಾಡಿದರು. ವಿಶೇಷವಾಗಿ... ಮೆಶಿನ್, ಮಲಮೂತ್ರ ರಕ್ತ ಪರೀಕ್ಷಾ

ಸಂರಾಜಾಮುಗಳು, ಹೆರಿಗೆಗೆ ಅವಶ್ಯವಿರುವ ಶಸ್ತ್ರಗಳು 25 ಮಂಚ ಹಾಸಿಗೆಗಳೆಲ್ಲಾ ಖರೀದಿಯಾಯಿತು; ಅವಶ್ಯವುಳ್ಳ ಔಷಧಿಗಳೂ ಬಂದು ಬಿದ್ದವು.

ಶಂಕರಭಟ್ಟರ ವಾರ್ಷಾಂತಿಕದ ದಿನಕ್ಕೆ ಸರಿಯಾಗಿ ಆಸ್ಪತ್ರೆಯ ಪ್ರಾರಂಭೋತ್ಸವವನ್ನೂ ನೆರವೇರಿಸಿದರು. ಆಸ್ಪತ್ರೆಗೆ

ಶಂಕರಭಟ್ಟ ಮೆಮೋರಿಯಲ್ ಹಾಸ್ಪಿಟಲ್ ಎಂಬ ನಾಮಫಲಕವನ್ನು ತಗಲಿಸಿಯಾಯಿತು. ಸಾಮಾನ್ಯವಾಗಿ ಜನರ ಬಾಯಿಯಲ್ಲಿ 'ಯಸ್ ಬಿಯಮ್' ಆಸ್ಪತ್ರೆಯೆಂದೇ ಪ್ರಸಿದ್ಧಿ ಪಡೆಯಿತು.

ವೆನ್ ಲಾಕ್ ಆಸ್ಪತ್ರೆಯ ಡಿ.ಎಮ್.ಓ ಆಗಿದ್ದ ಡಾ। ತಿಮ್ಮಪ್ಪಯ್ಯ ಆಸ್ಪತ್ರೆಯ ಉದ್ಘಾಟನೆ ಮಾಡಿದ್ದರು. ಅವರು ತಮ್ಮ ಭಾಷಣದಲ್ಲಿ ಡಾ। ಕಾವೇರಿಯ ಹಂತ ಹಂತವಾಗಿ ಮೇಲೇರಿದ ಸಾಹಸಗಾಥೆಯನ್ನು ಜನರಿಗೆ ಮನದಟ್ಟಾಗುವಂತೆ ಹೊಗಳಿದರು. ಹಾಗೆಯೇ ಡಾ। ಕೇಶವನ ಬೆಂಬಲವನ್ನು ವಿವರಿಸಿದರು. ಡಾ। ದಂಪತಿಗಳು ಆದರ್ಶಪ್ರಾಯರೆಂಬುದನ್ನು ಹೇಳಲು ಮರೆಯಲಿಲ್ಲ. ಊರಿಗೇ ದೊಡ್ಡದಾದ ಆಸ್ಪತ್ರೆಯ ಉಪಯೋಗಗವನ್ನು ಬಡವರು, ಶ್ರಿಮಂತರೆನ್ನದೆ ಎಲ್ಲಾ ರೋಗಿಗಳು ಪಡೆಯುವಂತಾಗಲಿ ಎಂದು ಹಾರೈಸಿದರು.

ಆಸ್ಪತ್ರೆ ತೆರೆದ ದಿನದಿಂದಲೇ ರೋಗಿಗಳು ಬರತೊಡಗಿದರು. ದಿನೇ ದಿನೇ ರೋಗಿಗಳ ಸಂಖ್ಯೆ ಹೆಚ್ಚ ತೊಡಗಿತು. ಮಹಿಳೆಯರಿಗೆ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿದ್ದುದರಿಂದ ಹೆರಿಗೆಗಾಗಿ ಬರುವವರ ಸಂಖ್ಯೆ ಹೆಚ್ಚ ತೊಡಗಿತು. ಹೆಂಗುಸರ ಗುಪ್ತ ಕಾಯಿಲೆಗಳಿಗೂ ಸೂಕ್ತ ಪರಿಹಾರ ದೊರಕುತ್ತಿದ್ದುದರಿಂದ, ಅವರ ಸಂಖ್ಯೆಯೂ ವೃದ್ಧಿಸಿತು. ಡಾ। ಕಾವೇರಿ ಜೊತೆಗೆ ದುಡಿಯಲು ಇನ್ನಿಬ್ಬರು ಸ್ತ್ರೀರೋಗ ತಜ್ಞರು ಬರತೊಡಗಿದರು. ಡಾ। ಕೇಶವ ಇನ್ನಿಬ್ಬರು ತಜ್ಞರನ್ನು ಮಂಗಳೂರಿನಿಂದ ಕರೆಸಿಕೊಂಡರು. ಕೈಕೆಳಗೆ ರೋಗಿಗಳ ಸೇವೆಗೆ ನರ್ಸ್‌ಗಳು 10 ದಾಯಿಗಳು ದುಡಿಯತೊಡಗಿದರು; ಕಾಸರಗೋಡು, ಕಾಞಂಗಾಡು ಮಂಗಲ್ಪಾಡಿ, ಮಂಜೇಶ್ವರ, ಉಳ್ಳಾಲಗಳಿಂದ ಬರುತ್ತಿದ್ದ ರೋಗಿಗಳಿಗೆ ಲೆಕ್ಕವಿರಲಿಲ್ಲ. ಅವರಿಗೆ ಉಳಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಲಾಗಿತ್ತು. ಒಟ್ಟಿನಲ್ಲಿ ಆಸ್ಪತ್ರೆ ಬಹುಬೇಗನೇ ಪ್ರಸಿದ್ಧಿಗೆ ಬಂತು.

ಬಡವರಿಗೆ ಬಿಲ್ಲು ಭಾರವಾಗದಂತೆ, ಶ್ರೀಮಂತರಿಗೆ ಕಡಿಮೆ ಅನಿಸದಂತೆ ಹಣ ಪಡೆಯುವ ವ್ಯವಸ್ಥೆಯಾಗಿತ್ತು. ಬಂದ ಹಣದಲ್ಲಿ ಅರ್ಧಭಾಗ ಆಸ್ಪತ್ರೆಯ ಉದ್ಧಾರಕ್ಕಾಗಿ ಮರು ಬಳಕೆಯಾಗುತ್ತಿತ್ತು.

ಮನೆಯಲ್ಲಿ ಶಾರದೆ, ಶಂಭು, ಶಂಕರ ಪ್ರಸಾದರಿಗೆ ಒಂದು ಕೋಣೆಯಾದರೆ, ಅಪ್ಪಣ್ಣ ಭಟ್ಟರು ಶಂಕರಮ್ಮನಿಗೆ ಮತ್ತೊಂದು ಕೋಣೆ ಇದ್ದು. ಕಾವೇರಿ, ಡಾಕ್ಟ್ರ ಕೇಶವರಿಗೆ ಪ್ರತ್ಯೇಕ ವ್ಯವಸ್ಥೆ ಇತ್ತು. ರಘುರಾಮ ವಾರಕ್ಕೆರಡು ಬಾರಿ ಬಂದು ಹೋಗುತ್ತಿದ್ದ. ಶಂಭುವನ್ನು ನೋಡಲು ಅಜ್ಜ ಅಜ್ಜಿ ವಾರಕ್ಕೊಮ್ಮೆಯಾದರೂ ಬಂದು ಹೋಗುತ್ತಿದ್ದರು. ಬರುವಾಗಲೆಲ್ಲಾ ಮಕ್ಕಳಿಗಾಗಿ ಮಾವಿನ ಹಣ್ಣು, ಹಲಸಿನ ಹಣ್ಣು ಬಾಳೆ ಗೊನೆ ತೆಗೆದುಕೊಂಡೇ ಬರುತ್ತಿದ್ದರು. ಸಾಗರದಿಂದ ಸರಸ್ವತಿ, ದೇವಕಿಯರು ವರ್ಷಕ್ಕೊಮ್ಮೆ ಬಂದು ಹದಿನೈದೋ, ಇಪ್ಪತ್ತೋ ದಿನ ಇದ್ದು ಹೋಗುತ್ತಿದ್ದರು.

ಶಂಭು, ಮಾದ್ರಿಗಳ ಶಾಲೆಗೆ ಹೋಗತೊಡಗಿದ; ಅವನಿಗೆ ಮೊದಲ ಮೊದಲು ಅಜ್ಜಿ ಅಜ್ಜನನ್ನು ಬಿಟ್ಟಿರುವುದು ಕಷ್ಟವಾಗಿ ತೋರಿದರೂ, ಮನೆಯಲ್ಲಿ ಅಮ್ಮ, ತಮ್ಮನೊಡನೆ ಕಾಲ ಕಳೆಯುವುದು ಇಷ್ಟವಾಗಿ ಕಂಡಿತು. ಓದಿನಲ್ಲೂ ಹೆಚ್ಚಿನ ಆಸಕ್ತಿ ತೋರಿಸಿದ, ಸರಸ್ವತಿ ಇಬ್ಬರ ಮಕ್ಕಳ ತಾಯಿಯಾಗಿದ್ದಳು. ದೇವಕಿ ತನ್ನ ಮಗಳಿಗೆ ಕಾವೇರಿ ಎಂದೇ ನಾಮಕರಣ ಮಾಡಿದ್ದಳು. ಒಟ್ಟಿನಲ್ಲಿ ಕಾವೇರಿಯ ಬದುಕು ನೆಮ್ಮದಿಯಾಗಿ ಸಂಭ್ರಮಗಳ ತಾಣವಾಯಿತು.

ಕಾವೇರಿ ತಂಗಿ ಶಾರದೆಯನ್ನು ಕರೆದು ಹೇಳಿದಳು

"ಶಾರದೆ, ನೀನು ಎನಗೆ ಊರುಗೋಲಾಗಿ ಹಗಲು ಇರುಳು ದುಡುದ್ದೆ ಇನ್ನು ನೀನೂ ರಜಾ ವಿಶ್ರಾಂತಿ ತೆಕ್ಕೊ. ಮನೆ ಕೆಲಸಕ್ಕೆ ಹೇಳಿ ಜೆನ ಮಾಡುತ್ತೆ. ನೀನು ಮಕ್ಕಳ, ಅಬ್ಬೆ ಅಪ್ಪನ ನೋಡಿಗೋ ಸಾಕು"

"ಹಾಗೆಂತದೂ ಎನಗೆ ಕಷ್ಟ ಆಯಿದಿಲ್ಲೆ ಅಕ್ಕಾ, ಹೆರಣ ಕೆಲಸಬೇಕಾದರೆ ಬೇರಾವು ಮಾಡ್ಲಿ, ಅಡಿಗೆ ಕೆಲಸ ಆನೇ ಮಾಡುತ್ತೆ, ಬೇಡ ಹೇಳೇಡ. ಇಲ್ಲದಿದ್ದರೆ ಎನಗೆ ಹೊತ್ತೇ ಹೋಗ"

"ಆತು ಬೇಶಿ ಇಳುಶುದು ನೀನೇ ಮಾಡು, ಬೇರೆಂತದೂ ಮಾಡ್ಲೆ ಹೋಗೇಡ ಆತೋ" ಅಂದಳು ಕಾವೇರಿ.

"ಅದಪ್ಪು ಶಾರದೆ ಭಾವ, ಯಾವಾಗ ಇಲ್ಲ ಮನೆಕಟ್ಟುತ್ತಾಡ. ಶುದ್ದಿಲಿಲ್ಲೆ?"

"ಅವು ಸದ್ಯ ಮನೆಕಟ್ಟುತ್ತ ಎಲ್ಲೆಡ ಅಕ್ಕ ಅಲ್ಲಿ ಅಬ್ಬೆ ಅಪ್ಪನೊಟ್ಟಿಂಗೇ ಇರುತ್ತವಾಡ. ಮಾವಂಗೆ ತೋಟ ಬಿಟ್ಟು ಇಪ್ಪಲೆ ಮನೆಸ್ಸಿಲ್ಲೆಡ ಆವಿಪ್ಪನ್ನಾರ ಆನು ಅಲ್ಲಿಯೇ ಇರುತ್ತೆ ಹೇಳಿದ್ದವು. ಅವು ಇಲ್ಲಿ ನಮ್ಮೊಟ್ಟಿಂಗೆ ಬಂದು ಇರವು" ಅಂದಳು ಶಾರದೆ. ಅದೂ ಸರಿ ಅನ್ನಿಸಿತು ಕಾವೇರಿಗೆ.

ಡಾ॥ ಕೇಶವನ ಚಿಕ್ಕಪ್ಪನ ಮಗ ತಮ್ಮ ಸುಬ್ರಮಣ್ಯ ಬಂದು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡ. ಆಸ್ಪತ್ರೆಯ ಬಿಲ್ಲುಗಳೆಲ್ಲಾ ಅವನ ಮೂಲಕ ಪಾವತಿಯಾಗುತ್ತಿತ್ತು. ದಿನದಿನದ ಲೆಕ್ಕ ಬರೆದಿಡುತ್ತಿದ್ದ. ರಘುರಾಮ ವಾರಕ್ಕೆರಡು ಬಾರಿ ಬಂದು ಆರ್ಥಿಕ ವ್ಯವಸ್ಥೆಯ ಮೇಲೆ ಕಣ್ಣಾಡಿಸಿ ಹೋಗುತ್ತಿದ್ದ.

ಡಾ॥ಕೇಶವ ಕಾವೇರಿಯರು ತುಂಬು ಜೀವನ ನಡೆಸಿದರು. ವಯಸ್ಸಾದ ಮೇಲೆ ಇಹಲೋಕ ತ್ಯಜಿಸಿದರು. ಬಡ ರೋಗಿಗಳ ಆಧಾರ ಸ್ತಂಭವಾದರು, ಜನ್ಮ ಪಡೆದ ಧನ್ವಂತರಿಯಾದರು. ಅವರ ಆನಂತರ ಅವರ ಮಗನಾದ ಶಂಕರ ಪ್ರಸಾದ, ಶಾರದೆ ರಘುರಾಮರ ಮಗನಾದ ಶಂಭು ತಜ್ಞ ವೈದ್ಯರಾಗಿ, ಇಬ್ಬರೂ ಮಹಿಳಾ ವೈದ್ಯರುಗಳನ್ನು ವಿವಾಹವಾಗಿ, ಆಸ್ಪತ್ರೆ ನಡೆಯಿಸಿದರು. ಡಾ॥ ಕಾವೇರಿಯ ಹೆಸರಿನಲ್ಲಿ ಪ್ರತ್ಯೇಕ ಹೆರಿಗೆ ಆಸ್ಪತ್ರೆಯನ್ನೂ ಡಾ॥ ಕೇಶವನ ಹೆಸರಿನಲ್ಲಿ ಕಣ್ಣು, ಕಿವಿ, ಮೂಗು ತಜ್ಞ ವಿಭಾಗವನ್ನೂ ತೆರೆದರು. ಹಿರಿಯರೆಲ್ಲಾ ಕಾಲವಶರಾದ ಮೇಲೆ, ರಘುರಾಮ ಪಿತ್ರಾರ್ಜಿತ ಆಸ್ತಿಯನ್ನು ಮಾರಿ, ಕುಂಬಳೆಯಲ್ಲಿಯೇ ಕಾವೇರಿ ಮನೆಯ ಒತ್ತಕ್ಕೆ ಮನೆ ಕಟ್ಟಿದರು. ರಘುರಾಮ, ಮಗ ಶಂಭು ಜೊತೆಗೂ, ಶಾರದೆ ಶಂಕರ ಪ್ರಸಾದನ ಜೊತೆಯಲ್ಲೂ ಬಾಳಿದರು. ಸರಸ್ವತಿ, ದೇವಕಿಯರು ಮಕ್ಕಳೊಂದಿಗೆ ಆಗಾಗ ಬಂದು ಹೋಗುತ್ತಿದ್ದರು. ಬಂದಾಗಲೆಲ್ಲಾ ಹಿರಿಯಕ್ಕ ಕಾವೇರಿಯ ಗುಣಗಾನ ಸಾಧನೆಗಳನ್ನು ನೆನಸುತ್ತಿದ್ದರು.

"ಅಕ್ಕ ಇಲ್ಲದಿದ್ದರೆ ನಾವೆಲ್ಲಾ ಎಲ್ಲಿ ಇರುತ್ತಿತ್ತು" ಎಂದು ಮರುಗಿದವಳು ದೇವಕ್ಕಿ"

"ಅಕ್ಕ ಪುಣ್ಯಾತಿಗಿತ್ತಿ. ಹಾಂಗಿಪ್ಪ ಅಕ್ಕನ ಪಡದ ನಾವೇ ಪುಣ್ಯವಂತರು" ಎಂದು ದನಿಗೂಡಿಸಿದಳು ಸರಸ್ವತಿ.



ಪ್ರಕಾಶಕರು
ವಾಸವಿ ಪಬ್ಲಿಕೇಷನ್
ಬೆಂಗಳೂರು